ಶಿವಯೋಗಮಂದಿರ : ಒಂದು ಅಧ್ಯಯನ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿರುವ ಮಹಾಪ್ರಬಂಧ)

ಸಂಶೋಧಕರು

ನವೀನ್‌ಕುಮಾರ್ ಎ.ಜಿ.

ಮಾರ್ಗದರ್ಶಕರು

ಡಾ. ಕೆ. ರವೀಂದ್ರನಾಥ

ಮುಖ್ಯಸ್ಥರು

ಹಸ್ತಪ್ರತಿಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

ಭಾಷಾ ನಿಕಾಯ

ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕೂಡಲಸಂಗಮ

೨೦೧೨-೧೩

484

ಶಿವಯೋಗಮಂದಿರ : ಒಂದು ಅಧ್ಯಯನ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿರುವ ಮಹಾಪ್ರಬಂಧ)

ಸಂಶೋಧಕರು

ನವೀನ್‌ಕುಮಾರ್ ಎ.ಜಿ.

ಮಾರ್ಗದರ್ಶಕರು

ಡಾ. ಕೆ. ರವೀಂದ್ರನಾಥ

ಮುಖ್ಯಸ್ಥರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಭಾಷಾ ನಿಕಾಯ
ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಕೂಡಲಸಂಗಮ
೨೦೧೨-೧೩

ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಡಾ. ಕೆ. ರವೀಂದ್ರನಾಥ
ಮುಖ್ಯಸ್ಥರು

ದಿನಾಂಕ: 19-9-2012

ದೃಢೀಕರಣ ಪತ್ರ

"ಶಿವಯೋಗಮಂದಿರ : ಒಂದು ಅಧ್ಯಯನ" ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. ಪದವಿಗಾಗಿ **ನವೀನ್‌ಕುಮಾರ್ ಎ.ಜಿ.** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಇವರ ಸ್ವತಂತ್ರ ಸಂಶೋಧನಾಧ್ಯಯನವಾಗಿದೆ. ಇದು ಯಾವುದೇ ವಿಶ್ವವಿದ್ಯಾಲಯದಲ್ಲಿ ಇಡಿಯಾಗಿ ಇಲ್ಲವೆ ಬಿಡಿಯಾಗಿ ಅಧ್ಯಯನ ನಡೆದಿರುವುದಿಲ್ಲ. ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸಲಾಗಿದೆ.

ಪ್ರಸ್ತುತ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲಾಗಿದೆ.

(ಡಾ. ಕೆ. ರವೀಂದ್ರನಾಥ)
ಮುಖ್ಯಸ್ಥರು ಹಾಗೂ ಮಾರ್ಗದರ್ಶಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ಪ್ರಮಾಣ ಪತ್ರ

"ಶಿವಯೋಗಮಂದಿರ : ಒಂದು ಅಧ್ಯಯನ" ಎಂಬ ಮಹಾಪ್ರಬಂಧವನ್ನು ಡಾ. ಕೆ. ರವೀಂದ್ರನಾಥ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್.ಡಿ. ಪದವಿಗಾಗಿ ಭಾಷಾ ನಿಕಾಯದ ಕೂಡಲಸಂಗಮದ ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಹಾಗೂ ಇದು ಬಿಡಿ ಇಲ್ಲವೇ ಇಡಿಯಾಗಿ ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ

ದಿನಾಂಕ: 19-09-2012

Naveen Kumar A.G.

(ನವೀನ್‌ಕುಮಾರ್ ಎ.ಜಿ.)
ಸಂಶೋಧಕರು
ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಕೂಡಲಸಂಗಮ

ಅರಿಕೆ

ಅಜ್ಞಾನ ದಾರಿದ್ರ್ಯಗಳಿಂದ ಬಳಲುತ್ತಿದ್ದ ವೀರಶೈವ ಸಮಾಜದ ಅಭಿವೃದ್ಧಿಗಾಗಿ ಲಿಂಗೈಕ್ಯ ಹಾನಗಲ್ಲ ಕುಮಾರಸ್ವಾಮಿಗಳು ೧೯೦೪ರಲ್ಲಿ ಅಖಿಲಭಾರತ ವೀರಶೈವ ಮಹಾಸಭೆ ಸ್ಥಾಪಿಸಿದರು. ಆ ಮಹಾಸಭೆಯ ನಿರ್ಣಯದಂತೆ ೧೯೦೯ರಲ್ಲಿ ಸ್ಥಾಪನೆಯಾದ ಶಿವಯೋಗಮಂದಿರ ವೀರಶೈವ ಸಾಹಿತ್ಯ ಸಂಸ್ಕೃತಿ ಅಧ್ಯಯನಕ್ಕಾಗಿ ರೂಪಗೊಂಡ ಆಧ್ಯಾತ್ಮ ಕೇಂದ್ರ. ಹಳ್ಳಿಹಳ್ಳಿಗಳಲ್ಲಿ ಅಸ್ತಿತ್ವದಲ್ಲಿದ್ದ ವೀರಶೈವ ಮಠಗಳಿಗೆ ನೇತಾರರನ್ನು ರೂಪಿಸುವ, ಸಮಾಜದಲ್ಲಿ ನೈತಿಕ ಶಿಕ್ಷಣವನ್ನು ರೂಪಿಸುವ ಉದ್ದೇಶವನ್ನಿಟ್ಟುಕೊಂಡು ಹಲವಾರು ರಚನಾತ್ಮಕ ಕಾರ್ಯಗಳನ್ನು ಶಿವಯೋಗಮಂದಿರ ಒಳಗೊಂಡಿದೆ. ಬಾಗಲಕೋಟೆ ಜಿಲ್ಲೆ ಎರಡು ಕಾರಣಗಳಿಂದ ಪ್ರಸಿದ್ಧಿಯಾಗಿದೆ. ಒಂದು ಬಸವಣ್ಣನವರ ಆಧ್ಯಾತ್ಮಿಕ ಕೇಂದ್ರ ಕೂಡಲಸಂಗಮ, ಇನ್ನೊಂದು ಬಸವಸಮಾಜವನ್ನು ರೂಪಿಸಿಕೊಂಡ ಶಿವಯೋಗಮಂದಿರ. ಈ ಎರಡು ಸಂಸ್ಥೆಗಳಿಗೆ ಕರುಳು ಬಳ್ಳಿಯ ಸಂಬಂಧವಿದೆ. ಹೀಗಾಗಿ, ಕೂಡಲಸಂಗಮದಲ್ಲಿ ಸ್ಥಾಪನೆಯಾಗಿರುವ ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರದ ಉದ್ದೇಶಕ್ಕನುಗುಣವಾಗಿ ಕೈಗೊಂಡ ಅಧ್ಯಯನವಾಗಿದೆ **'ಶಿವಯೋಗಮಂದಿರ:ಒಂದು ಅಧ್ಯಯನ'**

ನಾಲ್ಕಾರು ವಿಶ್ವವಿದ್ಯಾಲಯಗಳ ಮೆಟ್ಟಿಲೇರಿ ನಿರಾಸೆಯೊಂದಿಗೆ ಅವಕಾಶವಂಚಿತನಾಗಿ ಬಂದ ನನಗೆ ಕನ್ನಡ ವಿಶ್ವವಿದ್ಯಾಲಯ ಕೈಹಿಡಿದು, ಸಂಶೋಧನೆಯಲ್ಲಿ ತೊಡಗಿಕೊಳ್ಳಲು ಅನುವು ಮಾಡಿಕೊಟ್ಟಿತು. ಗ್ರಾಮೀಣ ಭಾಗದ ಪುಟ್ಟ ಗ್ರಾಮವೊಂದರಿಂದ ಬಂದ ವಿದ್ಯಾರ್ಥಿಗೆ ವಿಭಿನ್ನ ಆಲೋಚನೆಯ ಕ್ರಮವನ್ನು ಕಲಿಸಿದೆ. ಬರವಣಿಗೆಯ ಬಹುಶಿಸ್ತೀಯ ನೆಲೆಯ ಅರಿವು ಮೂಡಿಸಿದೆ. ಇದರಿಂದಾಗಿ ಶಿವಯೋಗಮಂದಿರ:ಒಂದು ಅಧ್ಯಯನ ಎಂಬ ಮಹಾಪ್ರಬಂಧ ರಚಿಸಲು ಸಾಧ್ಯವಾಯಿತು. ಆ ಕಾರಣಕ್ಕಾಗಿ ನಾನು ಕನ್ನಡ ವಿಶ್ವವಿದ್ಯಾಲಯಕ್ಕೆ ಚಿರಋಣಿಯಾಗಿರುವೆ.

ಪಿಎಚ್.ಡಿ. ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟ ಹಿಂದಿನ ಕುಲಪತಿಗಳಾದ ಡಾ. ಎ. ಮುರಿಗೆಪ್ಪ ಹಾಗೂ ಇಂದಿನ ಕುಲಪತಿಗಳಾದ ಡಾ. ಹಿ.ಚಿ. ಬೋರಲಿಂಗಯ್ಯನವರಿಗೂ, ಕುಲಸಚಿವರಾದ ಡಾ. ಮಂಜುನಾಥ ಬೇವಿನಕಟ್ಟಿ, ಅಧ್ಯಯನಾಂಗದ ನಿರ್ದೇಶಕರಾದ ಡಾ. ಎಫ್.ಟಿ. ಹಳ್ಳಿಕೇರಿ ಹಾಗೂ ಪ್ರಸಾರಾಂಗದ ನಿರ್ದೇಶಕರಾದ ಡಾ. ಎ. ಸುಬ್ಬಣ್ಣ ರೈ ಅವರಿಗೂ ಗೌರವಪೂರ್ವಕವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನನ್ನ ಸಂಶೋಧನಾ ಮಹಾಪ್ರಬಂಧಕ್ಕೆ ಮಾರ್ಗದರ್ಶಕರಾಗಿ ಡಾ. ಕೆ. ರವೀಂದ್ರನಾಥ ಅವರು ದೊರೆತದ್ದು ಪುಣ್ಯವಿಶೇಷ. ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರದ ಪ್ರಾರಂಭಿಕ ಮುಖ್ಯಸ್ಥರಾಗಿ ದುಡಿದ ಶ್ರೀಯುತರು ವಚನಸಾಹಿತ್ಯ ಕ್ಷೇತ್ರದಲ್ಲಿ ನಿರಂತರ ಅಧ್ಯಯನ ಮಾಡಿದ್ದಾರೆ. ಸದ್ಯ ಹಸ್ತಪ್ರತಿಶಾಸ್ತ್ರ ವಿಭಾಗದ ಮುಖ್ಯಸ್ಥರು, ಪ್ರಾಧ್ಯಾಪಕರು ಆಗಿ ಅವಿರತವಾದ ಕಾರ್ಯಗಳ ಒತ್ತಡದಲ್ಲೂ ನನ್ನ ಅಧ್ಯಯನವನ್ನು ಪ್ರತಿ ಹಂತದಲ್ಲೂ ಸಹೃದಯತೆಯಿಂದ ತಿದ್ದಿ-ತೀಡಿ ಮಾರ್ಗದರ್ಶನ ಮಾಡಿದ ಗುರುಗಳಾದ ಶ್ರೀಯುತರನ್ನು ಗೌರವ ಪೂರ್ವಕವಾಗಿ ನೆನೆಯುತ್ತೇನೆ. ವಿಭಾಗದ ಪ್ರಾಧ್ಯಾಪಕರಾದ ಡಾ. ವೀರೇಶ ಬಡಿಗೇರ, ಡಾ. ಎಸ್.ಎಸ್. ಅಂಗಡಿ, ಡಾ. ಎಸ್.ಆರ್. ಚನ್ನವೀರಪ್ಪ ಇವರ ಸಹಕಾರವನ್ನು ಪ್ರೀತಿಯಿಂದ ನೆನೆಯುತ್ತೇನೆ. ಜೊತೆಗೆ ನನ್ನ ಸಂಶೋಧನೆಗೆ ಸಹಕರಿಸಿದ ವಿಶ್ವವಿದ್ಯಾಲಯದ ಎಲ್ಲ ವಿಭಾಗದ ಮುಖ್ಯಸ್ಥರಿಗೂ, ಪ್ರಾಧ್ಯಾಪಕರಿಗೂ, ಗ್ರಂಥಪಾಲಕರಿಗೂ, ಬೋಧಕೇತರ ಸಿಬ್ಬಂದಿಗೆ ನಾನು ಉಪಕೃತನಾಗಿರುವೆ.

ಇನ್ನು ನನ್ನ ಅಧ್ಯಯನಾಸಕ್ತಿಯನ್ನು ಪ್ರೀತಿಸಿ ಸಹಕರಿಸಿದ ಈ ವಿಶ್ವವಿದ್ಯಾಲಯವನ್ನು ನನಗೆ ಪರಿಚಯಿಸಿದ ಮಾರ್ಗದರ್ಶಿ, ಸಲಹೆಗಾರರು, ಸೋದರ ಸಮಾನರಾದ ಶ್ರೀಯುತ ಬಂಗಾರಪ್ಪ ಮಾಲ್ವೆ ಅವರಿಗೆ ನಾನು ಅಜೀವ ಚಿರಋಣಿಯಾಗಿರುವೆ. ಇದರೊಂದಿಗೆ ನನ್ನ ಓದಿಗಾಗಿ ತಮ್ಮ ಬದುಕಿನ ಆಸೆ ಆಕಾಂಕ್ಷೆಯಳನ್ನೆಲ್ಲಾ ತ್ಯಾಗ ಮಾಡಿ ನನ್ನನ್ನು ಹೆತ್ತು-ಹೊತ್ತು-ಸಾಕಿಸಲಹಿ ಕೈಹಿಡಿದು ಮುನ್ನಡಿಸುತ್ತಿರುವ ನನ್ನ ತಂದೆ ಗಂಗಾಧರ, ತಾಯಿ ಕೊಲ್ಲಮ್ಮ (ಜಾನಕಿ), ನನ್ನ ಅನುಪಸ್ಥಿತಿಯಲ್ಲಿ ಸಂಸಾರದ ರಥವನ್ನು ನಡೆಸಿದ ಹೆಂಡತಿ ಪುಷ್ಪಾಂಜಲಿ, ಮಗ ಆದಿತ್ಯ, ತಮ್ಮನಾದ ನಿರಂಜನ, ತಂಗಿ ನಿವೇದಿತಾ ಇವರಿಗೂ ನಾನು ಕೃತಜ್ಞನಾಗಿರುವೆ. ಜೊತೆಗೆ ಅತ್ತೆ-ಮಾವ, ಅಕ್ಕ-ಭಾವಂದಿರು, ಅಣ್ಣ-ಅತ್ತಿಗೆ, ನಾದಿನಿ ಹಾಗೂ ಮಕ್ಕಳನ್ನು ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ.

ಈ ಅಧ್ಯಯನ ಕಾಲಕ್ಕೆ ಮಾಹಿತಿಯನ್ನು ಒದಗಿಸಿದ ಶಿವಯೋಗಮಂದಿರದ ಅಧ್ಯಕ್ಷರಾಗಿರುವ ಪೂಜ್ಯ ಶ್ರೀಸಂಗನಬಸವ ಮಹಾಸ್ವಾಮಿ ಹೊಸಪೇಟೆ, ಪೂಜ್ಯ ಜಗದ್ಗುರು ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು ಆನಂದಪುರಂ, ಪರಮಪೂಜ್ಯ ಶ್ರೀ ಸಿದ್ಧರಾಮ ಸ್ವಾಮಿಗಳು ರುದ್ರಾಕ್ಷಿಮಠ ಬೆಳಗಾವಿ, ಶ್ರೀ ಪ್ರಕಾಶ ಗಿರಿಮಲ್ಲಣ್ಣವರು, ಕುಮಾರ ಎಸ್. ಹಿರೇಮಠ, ಸಹಪಾಠಿಯಾದ ಶ್ರೀ ನಾಗರಾಜ ನಾಡಗೌಡ ಹಾಗೂ ಸಕಾಲಕ್ಕೆ ಅಗತ್ಯಕ್ಕಿಂತ ಹೆಚ್ಚು ರಜೆಗಳನ್ನಿತ್ತು ಸಹಕರಿಸಿದ ವಿಶ್ವದರ್ಶನ ವಿದ್ಯಾಸಂಸ್ಥೆಯ ಆಡಳಿತಮಂಡಳಿಗೂ, ಮುಖ್ಯೋಪಾಧ್ಯಾಯರು, ಸಹದ್ಯೋಗಿ ಮಿತ್ರರು, ವಿದ್ಯಾರ್ಥಿವೃಂದಕ್ಕೂ ಮತ್ತು ನನ್ನ ಅಧ್ಯಯನದ ಕರಡು ಪ್ರತಿ ತಿದ್ದುವಲ್ಲಿ ಸಹಕರಿಸಿದ ಅಣ್ಣಪ್ಪ ಎನ್. ಮಳಿಮಠ, ಸುರೇಶ ಜಾಲಹಳ್ಳಿ, ಸಂಧ್ಯಾ ಎಂ. ನಾಯಕ ಹಾಗೂ ಪ್ರತ್ಯೇಕ್ಷವಾಗಿ, ಪರೋಕ್ಷವಾಗಿ ನೆರವಾದ ಎಲ್ಲರಿಗೂ ಈ ಸಂದರ್ಭದಲ್ಲಿ ನೆನೆಯುತ್ತೇನೆ.

ನವೀನಕುಮಾರ್. ಎ.ಜಿ

ಪರಿವಿಡಿ

ಅಧ್ಯಾಯ – ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಕರ್ನಾಟಕದ ಸಾಮಾಜಿಕ ಹಾಗೂ ಧಾರ್ಮಿಕ ಕ್ಷೇತ್ರದಲ್ಲಿ ಒಂದು ಕಾಲಕ್ಕೆ ಚಾರಿತ್ರಿಕ ಸಂಗತಿಗಳು ಘಟಿಸಿದವು. ನೂರಿನ್ನೂರು ವರ್ಷಗಳ ಹಿಂದೆ ಬದುಕಿನ ಪರಿವರ್ತನೆಯ ಹೊಸಗಾಳಿ ಬೀಸಿತು. ಶಿಕ್ಷಣ, ಆಡಳಿತ, ಕ್ಷೇತ್ರಗಳಲ್ಲಿ ಬದಲಾವಣೆಗಳು ಉಂಟಾದವು. ಪರಕೀಯ ಆಡಳಿತ ವ್ಯವಸ್ಥೆಯ ನಡುವೆಯೇ ನಮ್ಮ ಸ್ಥಳೀಯ ಸಾಂಸ್ಕೃತಿಕ ಅನನ್ಯತೆಯನ್ನು ಗುರುತಿಸಿಕೊಳ್ಳುವ ಪ್ರಯತ್ನಗಳು ವಿದೇಶಿ ಮತ್ತು ದೇಶಿ ವಿದ್ವಾಂಸರಿಂದ ನಡೆದವು. ಹೀಗಾಗಿ ವಿದೇಶಿ ವಿದ್ವಾಂಸರ ಸೇವೆಗಳಲ್ಲಿ ಇಂಗ್ಲೀಷ್ ಅಧಿಕಾರಿಗಳ ಮತ್ತು ಕ್ರೈಸ್ತ ಮಿಷನರಿಗಳ ಕೊಡುಗೆ ಅಪೂರ್ವವಾದುದು. ಅದೇ ರೀತಿ ದೇಶಿ ವಿದ್ವಾಂಸರು ಶೈಕ್ಷಣಿಕ ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರದಲ್ಲಿ ಮಾಡಿದ ಕೆಲಸಗಳು ಕೂಡ ಅಭೂತಪೂರ್ವವಾದವುಗಳು. ಈ ಹೊತ್ತು ಅವರ ಸೇವೆಗಳನ್ನು ಸ್ಮರಿಸಿಕೊಳ್ಳುವ ಶತಮಾನೋತ್ಸವ, ದ್ವಿಶತಮಾನೋತ್ಸವಗಳನ್ನು ಆಚರಿಸುವುದರ ಮೂಲಕ ಅವರ ಕಾರ್ಯ ಯೋಜನೆಯ ರೂಪನಿಷ್ಠ ಶೋಧಗಳನ್ನು ಮಾಡಿದ್ದೇವೆ. ನಿದರ್ಶನಕ್ಕೆ ಕನ್ನಡದ ಪ್ರಥಮ ಗ್ರಂಥ ಸಂಪಾದಕ ಮೋಗ್ಲಿನ್ ಅವರ ದ್ವಿಶತಮಾನೋತ್ಸವ, ನಿಘಂಟುಕಾರರಾದ ಕಿಟಲ್ ದತ್ತಿನಿಧಿ ಉಪನ್ಯಾಸಗಳು, ಶಾಸನ ಪಿತಾಮಹ ಬಿ.ಎಲ್. ರೈಸ ಸಾಹೇಬರ ಸ್ಮರಣೆಗಳನ್ನು ನಾಡಿನ ವಿಶ್ವವಿದ್ಯಾಲಯಗಳು, ಶೈಕ್ಷಣಿಕ ಸಂಘ–ಸಂಸ್ಥೆಗಳು ನೆರವೇರಿಸಿಕೊಂಡು ಬಂದಿರುವುದನ್ನು ಗಮನಿಸಬಹುದಾಗಿದೆ,

ವಿದೇಶಿ ವಿದ್ವಾಂಸರ ಕಾರ್ಯಸ್ಮರಣೆಯಂತೆ ದೇಶಿ ವಿದ್ವಾಂಸರ ಸ್ಮರಣೆಗಳನ್ನೂ ಆಚರಿಸಿಕೊಂಡು ಬರಲಾಗುತ್ತಿದೆ. ಇವರಲ್ಲಿ ಧರ್ಮಗುರುಗಳು ಮಾಡಿದ ಕೆಲಸ ನಾಡಿನ ಇತಿಹಾಸದಲ್ಲಿ ದಾಖಲಿಸುವಂತದ್ದು. ಆಧುನಿಕ ಕರ್ನಾಟಕದಲ್ಲಿ ಎಲ್ಲೆಂದರಲ್ಲಿ ವೀರಶೈವ ಮಠಗಳು ತಲೆ ಎತ್ತಿ ನಿಂತಿವೆ. ಈ ಮಠಗಳಿಗೆ ಸೂಕ್ತ ಮಾರ್ಗದರ್ಶಕರಾಗಿರುವ ಸ್ವಾಮಿಗಳು, ಧರ್ಮಾಧಿಕಾರಿಗಳು ನಿಯೋಜನೆಗೊಂಡಿದ್ದಾರೆ. ಈ ಎಲ್ಲಾ ಮಠಗಳಿಗೆ ಮಹಾಮಠವೆಂಬಂತೆ ಸ್ಥಾಪನೆಯಾದ ಶಿವಯೋಗ ಮಂದಿರದ ಕಾರ್ಯ ಸಾಧನೆಯನ್ನು ದಾಖಲಿಸುವುದು ಈ

ಮಹಾಪ್ರಬಂಧದ ಉದ್ದೇಶವಾಗಿದೆ. ಕನ್ನಡದ ನೆಲದಲ್ಲಿ ಜರುಗಿದ ವೀರಶೈವ ಸಮಾಜದ ಎರಡು ಮಹತ್ವದ ಘಟನೆಗಳೆಂದರೆ ಶ್ರೀಮದ್ವೀರಶೈವ ಮಹಾಸಭೆ ಮತ್ತು ಶ್ರೀಮದ್ವೀರಶೈವ ಶಿವಯೋಗಮಂದಿರಗಳ ಸ್ಥಾಪನೆಯಾಗಿದೆ. ಆಗಿನ ಅಖಂಡ ಬಿಜಾಪುರ ಜಿಲ್ಲೆಗೆ ಹೊರಗಿನಿಂದ ಬಂದವರು ಮೂರು ಜನ. ಅವರಲ್ಲಿ ಶಿವಯೋಗ ಮಂದಿರದ ಸ್ಥಾಪಕ ಪೂಜ್ಯ ಶ್ರೀ ಹಾನಗಲ್ಲ ಕುಮಾರಸ್ವಾಮಿಗಳು, ಬಿ.ಎಲ್.ಡಿ ಸಂಸ್ಥೆಯ ಸ್ಥಾಪಕ ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಮತ್ತು ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪನವರು, ಈ ಮೂರು ಜನರ ಕಾರ್ಯಕ್ಷೇತ್ರಗಳು ಒಂದೊಂದು ಪ್ರಜ್ಞೆಯನಿಟ್ಟುಕೊಂಡು ರೂಪಗೊಂಡಂತವುಗಳು. ಶ್ರೀ ಹಾನಗಲ್ಲಕುಮಾರ ಸ್ವಾಮಿಗಳು ಧಾರ್ಮಿಕ ಪ್ರಜ್ಞೆಯನ್ನು, ಹಳಕಟ್ಟಿಯವರು ಸಾಮಾಜಿಕ ಪ್ರಜ್ಞೆಯನ್ನು ಮತ್ತು ಹರ್ಡೇಕರ ಮಂಜಪ್ಪನವರು ರಾಷ್ಟ್ರಪ್ರಜ್ಞೆಯನ್ನು ಜಾಗೃತಗೊಳಿಸಲು ದುಡಿದ ಮಹನೀಯರು. ರಾಷ್ಟ್ರಪ್ರಜ್ಞೆಯ ಹರ್ಡೇಕರ ಮಂಜಪ್ಪನವರ ಕಾರ್ಯವಿಧಾನ ಸ್ವಲ್ಪ ಭಿನ್ನವೆನಿಸಿದರೂ ವೀರಶೈವ ಸಮಾಜ, ಸಂಸ್ಕೃತಿ, ಶಿಕ್ಷಣಗಳಿಂದ ಹೊರತಾಗಿಲ್ಲ. ಆದರೆ ವೀರಶೈವ ಧರ್ಮದ ಸ್ವರೂಪ ಮಹತ್ವವನ್ನು ತಮ್ಮ ಧಾರ್ಮಿಕ ಪ್ರಜ್ಞೆಯಿಂದ ಜಾಗೃತಿಗೊಳಿಸಿದ ಹಾನಗಲ್ಲ ಸ್ವಾಮಿಗಳು ಧರ್ಮದಲ್ಲಿ ದೇವರನ್ನು ಕಂಡರೆ, ಸಮಾಜ ಪ್ರಜ್ಞೆಯ ಹಳಕಟ್ಟಿಯವರು ಸಮಾಜವೇ ದೇವರೆಂದು ಭಾವಿಸಿದರು. ಹೀಗಾಗಿ ಈ ಮೂವರ ಕ್ಷೇತ್ರ ಭಿನ್ನವೆನಿಸಿದರೂ ಮೂಲ ಉದ್ದೇಶ ಒಂದೇ ಆಗಿದೆ. ಆದು ವೀರಶೈವ ಧರ್ಮ ಸಾಹಿತ್ಯ ಸಂಸ್ಕೃತಿಗಳ ಆಳವಾದ ಅಭ್ಯಾಸ ಇದರಿಂದ ಸಮಾಜದ ಸರ್ವತೋಮುಖ ಏಳಿಗೆಯನ್ನು ಮಾಡಬಲ್ಲ ಅನೇಕ ಯೋಜನೆಗಳನ್ನು ಹಾಕಿಕೊಂಡು ಬಂದಿದೆ. ಈಗಾಗಲೇ ಹಳಕಟ್ಟಿಯವರನ್ನು, ಮಂಜಪ್ಪನವರನ್ನು ಮತ್ತು ಹಾನಗಲ್ಲ ಕುಮಾರಸ್ವಾಮಿಗಳ ಕುರಿತು ಅಧ್ಯಯನಗಳು ನಡೆದಿವೆ. ಆದರೆ ಅವರು ಸ್ಥಾಪಿಸಿದ ಸಂಸ್ಥೆಗಳನ್ನು ಕುರಿತು ಅಧ್ಯಯನ ಮಾಡಬೇಕಾಗಿರುವುದು ಪ್ರಸ್ತುತ ಶೈಕ್ಷಣಿಕ, ಧಾರ್ಮಿಕ, ಕ್ಷೇತ್ರದಲ್ಲಿ ತುಂಬಾ ಮಹತ್ವವೆನಿಸಿದೆ. ಅಂದರೆ ಶಿವಯೋಗ ಮಂದಿರದ ಸ್ಥಾಪನೆ ಅದರ ಮೂಲ ಉದ್ದೇಶ, ಸ್ವರೂಪ ಸಮಾಜಕ್ಕೆ ಅದರಿಂದ ಆಗಬಹುದಾದ ಕೊಡುಗೆಯನ್ನು ದಾಖಲಿಸುವುದು ಈ ನಮ್ಮ ಅಧ್ಯಯನದ ಇನ್ನೊಂದು ಉದ್ದೇಶವಾಗಿದೆ.

ಕರ್ನಾಟಕದಲ್ಲಿ ಮಿಥಿಕ್ ಸೊಸೈಟಿ, ಕರ್ನಾಟಕ ಇತಿಹಾಸ ಮಂಡಳಿ, ಪ್ರಾಚ್ಯ ಸಂಶೋಧನಾ ಇಲಾಖೆ, ಕನ್ನಡ ಸಂಶೋಧನಾ ಸಂಸ್ಥೆ ಮತ್ತು ಕರ್ನಾಟಕ ರಾಜ್ಯ ವಸ್ತು ಸಂಗ್ರಹಾಲಯಗಳನ್ನು ಸಂಶೋಧನಾ ಕ್ಷೇತ್ರದ ಆಕರಗಳ ಕೇಂದ್ರೀಯ ನೆಲೆಗಳೆಂದು ಅಧ್ಯಾಯ ಮಾಡುತ್ತಿದ್ದೇವೆ. ಅವುಗಳನ್ನು ಐತಿಹಾಸಿಕ ಸಂಸ್ಥೆಗಳೆಂದು ಮಾನ್ಯ ಮಾಡುತ್ತಾ ಬಂದಿದ್ದೇವೆ. ಸರ್ಕಾರದ ಅನುದಾನ, ಕಾರ್ಯಯೋಜನೆ, ಅಧಿಕಾರ ವರ್ಗದಿಂದ ಚಲಾವಣೆಯಲ್ಲಿರುವ ಈ ಸಂಸ್ಥೆಗಳು ಅಧ್ಯಯನ ಆಸಕ್ತರಿಗೆ ಎಷ್ಟು, ಎಂತಹ ಮಹತ್ವದ ಸಂಸ್ಥೆಗಳಾಗಿ ಮಾನ್ಯತೆ ಹೊಂದುತ್ತವೆಯೋ

ಅದೇ ರೀತಿ ಒಂದು ಧಾರ್ಮಿಕ ಕ್ಷೇತ್ರದಲ್ಲಿ ಶಿವಯೋಗ ಮಂದಿರದಂತಹ ಸಂಸ್ಥೆಗಳು ಅಧ್ಯಯನಾಸಕ್ತರ ಗೌರವಕ್ಕೆ ಪಾತ್ರವಾಗುತ್ತವೆ. ಹೀಗಾಗಿ ಒಂದುನೂರು ವರ್ಷಗಳ ಇತಿಹಾಸವಿರುವ ಶಿವಯೋಗ ಮಂದಿರವನ್ನು ಕುರಿತು ಅಧ್ಯಯನ ಮಾಡುವ ಮತ್ತೊಂದು ಮಹಾ ಉದ್ದೇಶವನ್ನು ಈ ಮಹಾಪ್ರಬಂಧ ಹೊಂದಿದೆ. ಮಲಪ್ರಭಾ ನದಿಯ ತಟಾಕದಲ್ಲಿ ಐತಿಹಾಸಿಕ ಪ್ರಸಿದ್ಧ ಪಟ್ಟದಕಲ್ಲು, ಐಹೊಳೆ, ಮಹಾಕೂಟ ಮತ್ತು ಬನಶಂಕರಿ ಪ್ರದೇಶದಲ್ಲಿ ಶಿವಯೋಗ ಮಂದಿರದ ಸ್ಥಾಪನೆಯಾಗಿವೆ. ಈ ಸಂಸ್ಥೆ ಸ್ವಾತಂತ್ರ್ಯ ಚಳುವಳಿ, ಕರ್ನಾಟಕ ಏಕೀಕರಣ ಹೋರಾಟಗಳ ಕಾಲಘಟ್ಟದಲ್ಲಿ ತನ್ನ ಕಾರ್ಯಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮಹತ್ವದ ಸಾಧನೆಗೈದಿರುವುದನ್ನು ಗಮನಿಸಬಹುದು. ಅಂದರೆ ಒಂದೆಡೆ ನಾಡಿನ ಭಾಷೆ, ಭೌಗೋಳಿಕ ಏಕೀಕರಣ ನಡೆಯುತ್ತಿದ್ದಂತೆ ಶಿವಯೋಗಮಂದಿರದಂತ ಒಂದು ಸಂಸ್ಥೆ ಧಾರ್ಮಿಕ ಏಕೀಕರಣವನ್ನು ಹುಟ್ಟು ಹಾಕಿದ್ದು ಅದರ ಇತಿಹಾಸದಲ್ಲಿಯೇ ಎತ್ತಿ ಹೇಳಬೇಕಾದ ಅಂಶವಾಗಿದೆ. ವೀರಶೈವ ಧರ್ಮದ ಸಾಹಿತ್ಯ, ಸಂಸ್ಕೃತಿ, ತತ್ವಗಳು ಆಳವಾಗಿದ್ದರೂ ಅವುಗಳ ಪರಿವೆಯೇ ಇಲ್ಲದಂತೆ ಆ ಸಮಾಜದ ಜನರು ಬದುಕುತ್ತಿದ್ದರು. ಅಜ್ಞಾನ ಬಡತನ, ಮೂಡನಂಬಿಕೆ ತಾಂಡವವಾಡುತ್ತಿದ್ದ ಸಮಾಜ, ಆರ್ಥಿಕವಾಗಿ ಅಧೋಗತಿಗೆ ಇಳಿದಿತ್ತು. ಈ ಆರ್ಥಿಕ ಅಧೂಗತಿಯಿಂದ ಸಾಮಾಜಿಕ ಸ್ಥಾನಮಾನಗಳು ತಪ್ಪಿಹೋಗಿದ್ದವು. ಇವ ನಮ್ಮವ ಎಂಬ ಭಾವನೆ ಬತ್ತಿ ಹೋಗಿ ವೀರಶೈವ ಸಮಾಜ ಒಡೆದ ಕನ್ನಡಿಯಂತಾಗಿತ್ತು, ಇದರ ಜೊತೆಗೆ ಶರಣ ಸಮಾಜ ಸಂಘಟನೆ, ಶರಣ ಸಮಾಜ ಸಂವರ್ಧನೆ, ನೈತಿಕ ಶಿಕ್ಷಣ, ವಟು ಸಾಧಕರಿಗೆ ತರಬೇತಿ, ವೀರಶೈವ ಸಾಹಿತ್ಯ ಸಂಗ್ರಹ, ಪ್ರಕಟಣೆ, ಮತ್ತು ಅಧ್ಯಯನ, ಕೃಷಿ ಉದ್ಯೋಗದಲ್ಲಿ ಆಸಕ್ತಿಯನ್ನು ತರುವ ಸಲುವಾಗಿ ಶಿವಯೋಗಮಂದಿರ ಒಂದು ಸಂವಿಧಾನವನ್ನೇ ರೂಪಿಸಿಕೊಂಡಿತ್ತು. ಹೀಗಾಗಿ ಇಂಥ ಸಮಾಜಪರ ಸಾಹಿತ್ಯಪರ ಸಂಸ್ಥೆಯೊಂದರ ಅಧ್ಯಯನವೆಂದರೆ ಕರ್ನಾಟಕದ ಧಾರ್ಮಿಕ ಸಂಸ್ಥೆಗಳ ಸಮಾಜೋಮುಖಿ ಅಧ್ಯಯನವನ್ನು ಮಾಡಿದಂಥ ಭಾವನೆಯಿಂದ ಈ ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಗಿದೆ.

ಶಿವಯೋಗಮಂದಿರದ ಸ್ಥಾಪನೆಯ ಉದ್ದೇಶಗಳಲ್ಲಿ ಸಮಕಾಲೀನ ಸಂದರ್ಭಗಳು ಧ್ಯೇಯೋದ್ದೇಶಗಳು ತುಂಬಾ ಮುಖ್ಯವಾಗಿವೆ. ವಿಶೇಷವಾಗಿ ಆಧುನಿಕ ಶಿಕ್ಷಣದ ಆರಂಭ ಕಾಲದಲ್ಲಿ ಸರಕಾರಿ ಶಾಲೆಗಳು ಅಲ್ಲೊಂದು ಇಲ್ಲೊಂದು ಆರಂಭಗೊಂಡಿದ್ದವು. ಕನ್ನಡ ಶಾಲೆಗಳಿಗಾಗಿ ಪ್ರತಿಯೊಂದು ಹಳ್ಳಿಗಳಲ್ಲಿ ಸಾಲಿಮಠ, ಓದಿಸುವ ಮಠ ಹೆಸರಿನಲ್ಲಿ ವೀರಶೈವ ಮಠಗಳು ತಕ್ಕಮಟ್ಟಿಗೆ ಅಕ್ಷರ ಸಂಸ್ಕೃತಿಯನ್ನು ಕನ್ನಡ ಭಾಷಾಭಿಮಾನವನ್ನು ಪೋಷಿಸಿಕೊಂಡು ಬಂದಿದ್ದವು. ಹೀಗಿರುವಾಗ ಬ್ರಿಟೀಷ್ ಸರ್ಕಾರದ ಅಗಮನ ಅದರ ಆಡಳಿತಾಂಗದಲ್ಲಿ ಒಂದೇ ವರ್ಗದವರ ಪ್ರವೇಶದಿಂದಾಗಿ ಬಹುಸಂಖ್ಯಾತ ವೀರಶೈವರು ಶಿಕ್ಷಣದಿಂದ ವಂಚಿತರಾಗಿದ್ದರಲ್ಲದೇ

ಧಾರ್ಮಿಕ ಶಿಕ್ಷಣ, ಸಾಮಾಜಿಕ ಶೋಷಣೆಗೆ ಒಳಗಾಗಿದ್ದರು. ಇಂಥ ಸಂದರ್ಭದಲ್ಲಿ ಡೆ. ಚೆನ್ನಬಸಪ್ಪನವರು, ಗಿಲಗಂಜಿ ಗುರುಸಿದ್ದಪ್ಪನವರು, ಅರಟಾಳು ರುದ್ರೇಗೌಡರಂಥ ದೂರದೃಷ್ಟಿ ವ್ಯಕ್ತಿಗಳ ಕಾರ್ಯ ಸ್ಮರಣೀಯವಾದುದು. ಇಂಥ ಪ್ರಾತಃಸ್ಮರಣೀಯರ ಸಾಲಿನಲ್ಲಿ ಬಂದು ನಿಲ್ಲುವ ಹಾನಗಲ್ಲ ಕುಮಾರ ಶಿವಯೋಗಿಗಳ ಸಂಕಲ್ಪದ ಕೂಸಾಗಿ ಶಿವಯೋಗಮಂದಿರ ಸ್ಥಾಪನೆಯಾಗುತ್ತದೆ. ಶಿವಯೋಗಮಂದಿರ ಒಂದು ಸಮಾಜದ ನೀತಿ ನಿಯಮವನ್ನು ರೂಪಿಸುವ ಆಡಳಿತ ಸಂಸ್ಥೆ, ಶಿಕ್ಷಣವನ್ನು ನೀಡುವ ವಿದ್ಯಾ ಸಂಸ್ಥೆ, ಧಾರ್ಮಿಕ ಪ್ರಜ್ಞೆಯನ್ನು ಬೆಳೆಸುವ ಆಧ್ಯಾತ್ಮ ಕೇಂದ್ರ, ಸಮಾಜಕ್ಕೆ ಬೇಕಾದ ಅಗತ್ಯ ಸಾಮಾಗ್ರಿಗಳನ್ನು ಉತ್ಪಾದಿಸುವ ವೃತ್ತಿಪರ ಗುಡಿಕೈಗಾರಿಕೆಯಾಗಿ, ಸಾಹಿತ್ಯ ಸಂಶೋಧನೆ ಚಟುವಟಿಕೆಗಳ ಕೇಂದ್ರವಾಗಿ ರೂಪಗೊಂಡಿದೆ. ಆದ್ದರಿಂದ ಅಲ್ಲಿಯ ವಟು–ಸಾಧಕರ ಪ್ರವೇಶಾರ್ಹತೆ, ಅವರ ಪಠ್ಯಕ್ರಮ, ಪಾಠಕ್ರಮ, ಪರೀಕ್ಷಾಕ್ರಮ, ಪಠ್ಯೇತರ ಚಟುವಟಿಕೆ ಮತ್ತು ಬೋಧಕ ವರ್ಗ ಕುರಿತು ಅಧ್ಯಯನ ಮಾಡುವ ಅಗತ್ಯವಿದೆ. ಅದೇ ರೀತಿ ಶಿವಯೋಗಮಂದಿರ ಸಾಹಿತ್ಯಸೃಷ್ಟಿ, ಹಸ್ತಪ್ರತಿ ಸಂಗ್ರಹ, ಪ್ರಕಟಣೆ ಅಲ್ಲಿನ ವ್ಯವಸ್ಥಿತ ಗ್ರಂಥಾಲಯ, ವಾಚನಾಲಯ ಇವುಗಳನ್ನು ಬಳಸಿಕೊಂಡು ನಾಡಿನ ಬೇರೆ ಬೇರೆ ಸಂಶೋಧಕರು ಮತ್ತು ವಿಧ್ವಾಂಸರನ್ನು ಕುರಿತು ಅಧ್ಯಯನ ಮಾಡುವ ಮಗದೊಂದು ಉದ್ದೇಶವನ್ನೂ ಇಟ್ಟುಕೊಂಡು ಈ ಮಹಾಪ್ರಬಂಧ ಸಿದ್ಧಗೊಂಡಿದೆ.

ವ್ಯಾಪ್ತಿ

ಶಿವಯೋಗಮಂದಿರ : ಒಂದು ಅಧ್ಯಯನ ಎಂಬ ಈ ಮಹಾ ಪ್ರಬಂಧ ಒಂಬತ್ತು ಅಧ್ಯಾಯಗಳಲ್ಲಿ ತನ್ನ ವಿನ್ಯಾಸವನ್ನು ಗುರುತಿಸಿಕೊಂಡಿದೆ. ಒಂದರ್ಥದಲ್ಲಿ ಇದು ಮಹಾಪ್ರಬಂಧ ವ್ಯಾಪ್ತಿ ಎನಿಸಿದೆ. ಒಂದು ಸಂಸ್ಥೆ ತನ್ನ ಸ್ಥಾಪನೆಯ ಹಿಂದೆ ಹಲವು ಉದ್ದೇಶಗಳನ್ನು ಇಟ್ಟುಕೊಂಡಿರುತ್ತದೆ.ಹೀಗಾಗಿ ಶಿವಯೋಗಮಂದಿರದ ಸ್ಥಾಪನೆಯ ಉದ್ದೇಶಗಳಲ್ಲಿ ಸಮಕಾಲೀನ ಸಂದರ್ಭಗಳನ್ನು ಚರ್ಚಿಸಲಾಗಿದೆ. ಇದೊಂದು ಧಾರ್ಮಿಕ ಸಂಸ್ಥೆ. ತನ್ನ ಕಾರ್ಯಗಳಿಂದ ಕಾವ್ಯದ ವಸ್ತುವಾಗಿ, ಜನಪದರ ನಂಬಿಕೆಯಾಗಿ ಬೆಳೆದು ನಿಂತಿರುತ್ತದೆ. ಅಂದರೆ ಅದರ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಅಸ್ತಿತ್ವವನ್ನು ವರ್ತಮಾನದ ಆಲೋಚನೆಯ ವಿನ್ಯಾಸಗಳ ಜೊತೆಗೆ ಶೋಧಿಸುವ, ಅರ್ಥೈಸುವ ವಿಧಾನವನ್ನು ಇಲ್ಲಿ ಅಳವಡಿಸಿಕೊಳ್ಳಲಾಗಿದೆ. ಶಿವಯೋಗಮಂದಿರದ ಶಿಕ್ಷಣ ಪದ್ಧತಿ ಕುರಿತಂತೆ ಚರ್ಚಿಸುವುದು ಈ ಮಹಾಪ್ರಬಂಧದ ಮುಖ್ಯ ಆಶಯವಾಗಿದೆ. ಆಧುನಿಕ ಶಿಕ್ಷಣ ಪದ್ಧತಿಯ ಜೊತೆಗೆ ಶಿವಯೋಗಮಂದಿರದ ವಟುಗಳ ಪ್ರವೇಶಕ್ರಮ, ಪಠ್ಯಕ್ರಮ, ಪಾಠಕ್ರಮ, ಪರೀಕ್ಷಾಕ್ರಮ, ಪಠ್ಯೇತರ ಚಟುವಟಿಕೆಯಲ್ಲಿ ಅದು ವಟುಗಳನ್ನು ತೊಡಗಿಸಿಕೊಳ್ಳುವ ಕ್ರಮವನ್ನು ಗಮನಿಸಿದರೆ ಹಾನಗಲ್ಲ ಕುಮಾರ ಶಿವಯೋಗಿಗಳ ದೂರದೃಷ್ಟಿ ಮನವರಿಕೆಯಾಗುತ್ತದೆ. ಅಂದರೆ ಒಂದು ಸಮಾಜ ನಾಗರೀಕವಾಗಿ ಬೆಳೆಯಬೇಕಾದರೆ

ಶಿಕ್ಷಣ ಮತ್ತು ಸಮಾಜ ಇವುಗಳ ಅಂತರ್‌ಸಂಬಂಧವನ್ನು ನಿರೂಪಿಸುವ ವೈಚಾರಿಕ ವಿಧಾನವನ್ನು ಈ ಅಧ್ಯಯನ ಒಳಗೊಂಡಿದೆ. ವೀರಶೈವರಲ್ಲಿ ಕಾಯಕ ದಾಸೋಹ ಎರಡು ಜೀವನ ಪದ್ಧತಿಗಳು. ಇವು ಶ್ರಮ ಸಂಸ್ಕೃತಿಯ ಪ್ರತೀಕಗಳು. ಈ ಶ್ರಮ ಸಂಸ್ಕೃತಿಯಲ್ಲಿ ವೃತ್ತಿ ನಿರತ ಗುಡಿಕೈಗಾರಿಕೆಯಾಗಿ ಶಿವಯೋಗಮಂದಿರ ರೂಪುಗೊಂಡ ಬಗೆಯನ್ನು ಕ್ಷೇತ್ರಕಾರ್ಯದ ಮೂಲಕ ಗುರುತಿಸಲಾಗಿದೆ. ಹಸ್ತಪ್ರತಿಗಳ ಸಂಗ್ರಹ ಸಂಪಾದನೆ, ವೀರಶೈವ ಕೃತಿಗಳ ಸಂಗ್ರಹ, ಅವುಗಳ ವಾಚನಾಲಯದಿಂದ ಶಿವಯೋಗಮಂದಿರ ಒಂದು ಜ್ಞಾನ ಸಾಮಾಗ್ರಿ ನೆಲೆಯಾಗಿ ಬೆಳವಣಿಗೆ ಹೊಂದಿತ್ತು. ನಾಡಿನ ಅನೇಕ ವಿದ್ವಾಂಸರು, ಸಂಶೋಧಕರು ಇಲ್ಲಿನ ಆಕರಗಳನ್ನು ಬಳಸಿಕೊಂಡು ಬೆಳೆಸಿದ್ದಾರೆ. ಚರಿತ್ರೆಯ ನಿರ್ಮಾಪಕರಾಗಿ ಹೆಸರು ಮಾಡಿದ್ದಾರೆ. ಹೀಗೆ ಗತಕಾಲದ ಆಧಾರಗಳಿಂದ ರೂಪುಗೊಂಡ ಈ ಅಧ್ಯಾಯನ ಭವಿಷ್ಯತ್ತಿನಲ್ಲಿ ಬೆಳವಣಿಗೆಯಾಗಬೇಕಾದ ಒತ್ತಾಸೆಯನ್ನು ಹೇಳಲು ಪ್ರಯತ್ನಿಸಿದೆ. ಈ ಹೊತ್ತು ನಾಗರಿಕ ಸಮಾಜ ಎಲ್ಲ ಸಮುದಾಯದಲ್ಲಿಯೂ ತಲೆ ಎತ್ತಿದೆ. ತಾಂತ್ರಿಕ ಮತ್ತು ವೈಜ್ಞಾನಿಕ ಅವಕಾಶಗಳಿಂದ ಜಗತ್ತಿನ ಎಲ್ಲ ಜ್ಞಾನ, ಶಿಸ್ತುಗಳು ನಮ್ಮ ಮನೆಯ ಬಾಗಿಲಿಗೆ ಬರುತ್ತಲಿವೆ. ಇಂಥ ಸಂದರ್ಭದಲ್ಲಿ ಶಿವಯೋಗಮಂದಿರ ಪಾರಂಪರಿಕ ಶಿಕ್ಷಣ ನೀತಿಯ ಜೊತೆಗೆ ಈ ಹೊತ್ತಿನ ಆಧುನಿಕ ಶಿಕ್ಷಣ ನೀತಿಯನ್ನು ಹೇಗೆ ಬಳಸಿಕೊಂಡು ಬೆಳವಣಿಗೆಯನ್ನು ಹೊಂದಬಹುದು ಎಂಬುದನ್ನು ಇಲ್ಲಿ ವಿಶ್ಲೇಶಿಸುವ ಪ್ರಯತ್ನವನ್ನು ಮಾಡಲಾಗಿದೆ. ಅಂದರೆ ಸ್ಥಾಪಿತ ಸಿದ್ಧಾಂತದಿಂದ ಹೊರ ಬಂದು ಭಿನ್ನ ನೆಲೆಯಲ್ಲಿ ಬೆಳೆಯುವ ಸಾಧ್ಯತೆಗಳ ಕಡೆಗೆ ತನ್ನ ಆಲೋಚನೆಯನ್ನು ವಿಸ್ತರಿಕೊಳ್ಳಬೇಕೆಂಬ ಆನ್ವಯಿಕ ವಿಧಾನವನ್ನು ಇಲ್ಲಿ ಬಳಸಿಕೊಳ್ಳಲಾಗಿದೆ.

ಒಟ್ಟಿನಲ್ಲಿ ಹತ್ತೊಂಬತ್ತನೇ ಶತಮಾನದ ಕೊನೆಯ ಭಾಗದಲ್ಲಿ ವೀರಶೈವ ಧರ್ಮದ ಸಾಹಿತ್ಯ, ಸಂಸ್ಕೃತಿಯ ಪುನರುಜ್ಜೀವನಕ್ಕೆ ಶ್ರಮಿಸಿದೆ. ಒಂದು ಸಾಂಸ್ಕೃತಿಕ ಸಂಸ್ಥೆ, ಸರ್ಕಾರ ಅರೆ ಸರ್ಕಾರ ಸಂಸ್ಥೆಯಂತೆ ಈ ಖಾಸಗಿ ಧಾರ್ಮಿಕ ಸಂಸ್ಥೆಗೂ ಒಂದು ಪರಂಪರೆ, ಇತಿಹಾಸವಿದೆ ಎಂಬ ಉದ್ದೇಶದಿಂದ ಸಿದ್ಧಗೊಂಡ ಮಹಾ ಪ್ರಬಂಧವೇ "ಶಿವಯೋಗ ಮಂದಿರ: ಒಂದು ಅಧ್ಯಯನ"


ಓಂ
ಓಂ
ಶಿವಯೋಗ ಮಂದಿರ

ಅಧ್ಯಾಯ – ಎರಡು

ಶಿವಯೋಗಮಂದಿರ : ಸ್ಥಾಪನೆಯ ಉದ್ದೇಶಗಳು

೧. ಸಮಕಾಲೀನ ಸಂದರ್ಭಗಳು
೨. ಧ್ಯೇಯೋದ್ದೇಶಗಳು
೩. ಆಡಳಿತ ಮಂಡಳಿ

ಅಧ್ಯಾಯ – ಎರಡು

ಶಿವಯೋಗಮಂದಿರ : ಸ್ಥಾಪನೆಯ ಉದ್ದೇಶಗಳು

ಆತ್ಮಬಲ, ಅಂತಃಸತ್ವ, ಆತ್ಮಾಭಿಮಾನದಿಂದ ರಚಿತವಾದ ಮಹಾಮಹೋನ್ನತ ಮಂದಿರವೇ ಶಿವಯೋಗ ಮಂದಿರ. ಸುಕುಮಾರನ ಅಭಿಮಾನದ, ಅಂತರಂಗದ ಮನದ ಮೆಚ್ಚುಗೆ ಗಳಿಸಿದ ಜ್ಞಾನದ ದ್ಯೋತಕವಾಗಿದೆ. ಶಿವ ಜ್ಞಾನದ ಆಚಾರ–ವಿಚಾರಗಳ ಅರಮನೆ, ಸಾಹಿತ್ಯ, ಸಂಗೀತ ಶರಣರ ಸಂದೇಶಗಳನ್ನು ಜ್ಞಾನದ ತಿಳಿಗೊಳದಲ್ಲಿ ತೇಲಿಸಿ ಮಹಾ ವ್ಯಕ್ತಿಯಾಗಿ, ಸಮಾಜದ ಶಕ್ತಿಯಾಗಿ ಪರಿವರ್ತಿಸುವ ಸುಂದರ ಮಂದಿರವಿದು. ಜ್ಞಾನ, ಆಚಾರ–ವಿಚಾರ, ಭಕ್ತಿ, ನಿಷ್ಠೆ, ನಿರ್ಮಲತೆಗಳ ಮಹಾಸಂಗಮವಿದು. ಶರಣರ ಸಂಗಮ ಸ್ಥಳ, ಜ್ಞಾನಿಗಳ ಜ್ಞಾನೋದಯದ ಮೂಲಮನೆ, ಕನ್ನಡ ನಾಡಿನ ಕೀರ್ತಿಯ ಮುಕುಟವಾಗಿ ಮೆರೆಯುತ್ತಿರುವ ಮಹಾ ಸಭೆಯಾಗಿದೆ. ಸಮಾಜದ ರನ್ನ ದರ್ಪಣವು ಹಾಗೂ ಅಭಿಮಾನದ ಕೇಂದ್ರ ಬಿಂದುವಾಗಿ ಕಂಗೊಳಿಸುತ್ತಿದೆ. ಸತ್ಯಂ, ಶಿವಂ, ಸುಂದರಂ ಎಂಬ ಸುವರ್ಣ ಸೂತ್ರವನ್ನು ಹೇಳುವ ಹಿರಿಯ ಸಂಸ್ಥೆಯಾಗಿದೆ.

ನಾಡಿನಲ್ಲಿ ವಿರಾಜಮಾನವಾಗಿ ಬೆಳೆಯುವಂತಹ ವಿದ್ಯಾವಂತ, ಸಾಹಿತಿ, ಸಂಗೀತಗಾರ, ಕೀರ್ತನಕಾರ, ಶರಣ ಹಾಗೂ ಸಮಾಜ ಸೇವಕರನ್ನು ಕನ್ನಡ ನಾಡಿಗೆ ದಯಪಾಲಿಸಿದ ಹೆಮ್ಮೆ ಶಿವಯೋಗ ಮಂದಿರಕ್ಕಿದೆ. ಶಿವಯೋಗ ಮಂದಿರ ಎಂಬುದು ಸುಂದರವಾದ ಸುಮಧುರ ಸವಿಜೇನಿನಂತಹ ಅರ್ಥಯುಕ್ತವಾದ ನಾಮವಿದು. ಶಿವಯೋಗಿಗಳ ಅಂತರಾಳ ಸ್ಫುರಣಗೊಂಡು ಅನುಭಾವದ ಪರಿಪಕ್ವವಾದ ಅನುಪಮವಾದ ಹೆಸರು. ಈ ಗುರುಕುಲವು ಶಿವಯೋಗಿಗಳ ವಿಚಾರವಾಹಿನಿಯಲ್ಲಿ ಮಿಂದು ಪುನೀತವಾಗಿ ಬಂದಂತಹ ತಾಣವಾಗಿದೆ. ಶಿವಯೋಗ ಮಂದಿರ ಶಾರದೆಯ ಗರ್ಭಗುಡಿ, ಸಂಸ್ಕೃತಿಯ ಸಿರಿಮುಡಿ, ಸಾಹಿತ್ಯ ಸಂಗೀತದ ಉಗಮದ ಮನೆಯಾಗಿದೆ.

ಇದರ ಸಿರಿ ಎಂದರೆ ಅನುಭಾವ, ದಯೆ, ವಾತ್ಸಲ್ಯ, ಜ್ಞಾನ, ಆಚಾರ, ವಿಚಾರ, ನಿಷ್ಠೆ ಎನ್ನಬಹುದಾಗಿದೆ. ಸಮಾಜದ ಪ್ರತಿಯೊಬ್ಬನು ಆದರ್ಶ ಜೀವಿಯಾಗಿ, ಸಮಾಜದ ಸೇವಕರಾಗಿ ಬಾಳಬೇಕೆಂಬ ಹಿರಿದಾದ ಹಂಬಲದಿಂದ ಶಿವಯೋಗ ಮಂದಿರವನ್ನು ಸ್ಥಾಪಿಸಿದರು. ಶಿವಯೋಗ ಮಂದಿರವೆಂಬ ಮಹಾಶಬ್ದದಲ್ಲಿ ಅತಿ ಹಿರಿದಾದ ಅರ್ಥವು ಅಡಗಿದೆ. "ಶಿವ" ಎಂದರೆ ಈಶ್ವರ, ಮಂಗಳ, ಶುಭ, ಕಲ್ಯಾಣ ಎಂದು ಅನ್ನಬಹುದು. ಯಾವನು ಅಂತರಂಗ ಬುದ್ಧಿಯಿಂದ ಪರರಿಗೆ ಮಂಗಳ ಮಾಡುವನೋ, ಯಾರಲ್ಲಿ ದಯೆ, ಪ್ರೀತಿ ಇರುವವೋ ಅಂತವನು ಶಿವ ಅಥವಾ ಮಂಗಳಕರನು. "ಯೋಗ" ಯೋಗವೆಂದರೆ ನಿರ್ಮಲತೆ ಎನ್ನಬಹುದು. ಮನಸ್ಸಿನ ಪ್ರಸನ್ನತೆಯೇ ಯೋಗವೆಂದು ಅನಿಸುವುದು. 'ಮಂದಿರ' ಮಂದಿರವೆಂದರೆ ಎಲ್ಲಿ ನಿರ್ಮಲ ಮನಸ್ಸಿನ ಮಹಾಜನರು ಇರುವರೋ ಅದಕ್ಕೆ ಮಂದಿರ ಎನ್ನಬಹುದಾಗಿದೆ. ಶಿವಾನುಭವಗಳು, ಧಾರ್ಮಿಕ ವಿಷಯಗಳು, ಶರಣಸಂದೇಶಗಳು, ಚರ್ಚಿಸಲ್ಪಡುವಂತಹ ಸಂಗಮ ಸ್ಥಳವೆ ದೇವಾಲಯವಾಗುವದು. ವಿಚಾರಗಳನ್ನು ಕೇಳಿ ತಿಳಿದುಕೊಂಡು ಶಿಷ್ಯರು ಎಲ್ಲಿ ವಾಸಿಸುವರೋ ಅಲ್ಲಿ ಬೋಧನೆ ಮಾಡಲು ಗುರುಗಳು ವಾಸಿಸುವರೊ ಇಂತಹುದಕ್ಕೆ ಶಿವಯೋಗ ಮಂದಿರ ಎಂದು ಕರೆಯಬಹುದು.

ಶಿವಯೋಗ ಮಂದಿರವು ಐತಿಹಾಸಿಕ ಬಾದಾಮಿ ನಗರದಿಂದ ೧೧ ಕಿ.ಮೀ. ದೂರದಲ್ಲಿದೆ. ಬಲಕ್ಕೆ ಬನಶಂಕರಿಯ ಕಾವಲುಂಟು, ಎಡಕ್ಕೆ ದಕ್ಷಿಣ ಕಾಶಿಯೆನಿಸಿದ ಮಹಾಕೂಟೇಶ್ವರನ ಕಾವಲುಂಟು. ಮುಂದೆ ಮಲಾಪಹಾರಿಯಾದ ಮಲಪ್ರಭೆಯ ಕಾವಲುಂಟು, ಹಿಂದೆ ನಾಗನಾಥೇಶ್ವರನ ಕಾವಲುಂಟು, ಹೀಗೆ ಶಿವಯೋಗ ಮಂದಿರಕ್ಕೆ ಕ್ಷೇತ್ರ ತೀರ್ಥಗಳ ರಕ್ಷಾ ಕವಚ ಉಂಟು. ಅಂದ ಮೇಲೆ ಮಹಾಶಿವಯೋಗಿಗಳಿಗೆ ಸಹಜವೇ ಆದ ಪ್ರದೇಶವಾಗಿ ನಿಸರ್ಗ ರಮಣೀಯ ಪ್ರದೇಶದಲ್ಲಿ ನೆಲೆಗೊಂಡಿದೆ. ಬಸವಾದಿ ಕಾರಣಿಕ ಪುರುಷ ಲಿಂಗೈಕ್ಯ ಹಾನಗಲ್ಲ ಕುಮಾರ ಶಿವಯೋಗಿಗಳವರಿಂದ ದಿನಾಂಕ: ೦೭.೦೨.೧೯೦೯ರಂದು ಸ್ಥಾಪನೆಗೊಂಡ ಈ ಸಂಸ್ಥೆಯು ಸ್ವಾಮಿಗಳ ತರಬೇತಿ ಕೇಂದ್ರ, ಹಾಗೆಯೇ ನಾಡಿನ ಪ್ರಸಿದ್ಧ ಯಾತ್ರಾ ಸ್ಥಳವೂ ಹೌದು.

ಆಧುನಿಕತೆಗೆ ತೆರೆದುಕೊಳ್ಳುತ್ತಿದ್ದ ಸಮಾಜಕ್ಕೆ ಆತ್ಮಸ್ಥೈರ್ಯ ನೀಡಲು ಸಮರ್ಥ ಧಾರ್ಮಿಕ ಮುಖಂಡರ ಅವಶ್ಯಕತೆಯಿರುವುದನ್ನು ಮನಗಂಡು ಪೂಜ್ಯ ಲಿಂ. ಹಾನಗಲ್ಲ ಕುಮಾರ ಶಿವಯೋಗಿಗಳು ಶಿವಯೋಗ ಮಂದಿರದ ಮೂಲಕ ಆ ಕೊರತೆಯನ್ನು ನೀಗಿಸಿದರು. ಅವರ ಕಾರ್ಯಕ್ಷೇತ್ರ ವಿಶಾಲವಾಗಿತ್ತು. ನಾಡಿನ ತುಂಬಾ ಸಂಚರಿಸಿ ಸಮಾಜದ ಸ್ಥಿತಿಗತಿಗಳನ್ನು ಅರಿತುಕೊಂಡಿದ್ದರು. ಸಮಾಜ ತನ್ನ ಜಡತನವನ್ನು ಕೊಡವಿಕೊಂಡು ಮೇಲೇಳಬೇಕು. ಸಮಕಾಲೀನ ಸವಾಲುಗಳನ್ನು ಎದುರಿಸಿ ಬಲಗೊಳ್ಳಬೇಕು. ಸಾಂಪ್ರದಾಯಿಕ ಸತ್ವದೊಂದಿಗೆ ಆಧುನಿಕತೆಯನ್ನು

ಮೈಗೂಡಿಸಿಕೊಳ್ಳಬೇಕು ಎಂಬುದು ಪೂಜ್ಯರ ಆಪೇಕ್ಷೆಯಾಗಿತ್ತು. ಅದಕ್ಕಾಗಿಯೇ ೧೯೧೦ಳರಲ್ಲಿ 'ಅಖಿಲ ಭಾರತ ವೀರಶೈವ ಮಹಾಸಭೆ'ಯನ್ನು ಸ್ಥಾಪಿಸಿದರು. ತಮ್ಮ ಅದ್ಭುತ ಸಂಘಟನಾ ಶಕ್ತಿಯಿಂದ, ಶ್ರದ್ಧಾಪೂರ್ವಕ ದುಡಿಮೆಯಿಂದ ಅದನ್ನು ಬೆಳೆಸಿದರು. ವಚನಸಾಹಿತ್ಯದ ಸಂಗ್ರಹ-ಸಂಪಾದನೆ ಪ್ರಕಟಣೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಫ.ಗು.ಹಳಕಟ್ಟಿಯವರಿಗೆ ಸಹಾಯ, ಸಹಕಾರ ನೀಡಿದರು. ಗಾನಯೋಗಿ ಪಂಚಾಕ್ಷರಿ ಗವಾಯಿಗಳವರಿಗೆ ಸಂಗೀತ ಶಿಕ್ಷಣ ವ್ಯವಸ್ಥೆ ಮಾಡಿದರು. ಸಂಗೀತ, ಸಾಹಿತ್ಯ, ಕಲೆಗಳನ್ನು ಪೋಷಿಸಿದರು. ಸಮಾಜದ ಬಡಮಕ್ಕಳ ವಿದ್ಯಾಭಿವೃದ್ಧಿಗಾಗಿ ತಮ್ಮ ಸರ್ವಸ್ವವನ್ನು ಧಾರೆಯೆರೆಯಲು ಶಿರಸಂಗಿ ಲಿಂಗರಾಜ ದೇಸಾಯಿಯವರನ್ನು ಪ್ರೇರೆಪಿಸಿದರು. ಅವರಿಗಿದ್ದ ಸಮಕಾಲೀನ ಬದುಕಿನ ಅಗತ್ಯಗಳ ಅರಿವು ಮತ್ತು ಮುಂದಾಲೋಚನೆಗಳ ಫಲವಾಗಿ ನಾಡಿನಾದ್ಯಂತ ಅನೇಕ ಶಿಕ್ಷಣ ಸಂಸ್ಥೆಗಳು ಜನ್ಮ ತಾಳಿದವು.

ಶಿವಯೋಗ ಮಂದಿರ ಒಂದು ವಿಶಿಷ್ಟ ಧಾರ್ಮಿಕ ಶಿಕ್ಷಣ ಸಂಸ್ಥೆ. ೧೨ ವರ್ಷಕ್ಕೆ ಮೇಲ್ಪಟ್ಟ ಲಿಂಗಾಯತ ಧರ್ಮದ ಯಾವುದೇ ಪಂಗಡ, ಉಪಪಂಗಡಗಳಿಗೆ ಸೇರಿದ ಮಕ್ಕಳಿಗೆ ಇಲ್ಲಿ ಪ್ರವೇಶ. ನುರಿತ ಅಧ್ಯಾಪಕರಿಂದ ಅವರಿಗೆ ಹತ್ತಾರು ವರ್ಷಗಳವರೆಗೆ ಕನ್ನಡ, ಹಿಂದಿ, ಸಂಸ್ಕೃತ, ಇಂಗ್ಲೀಷ್ ಭಾಷೆಗಳ ಮತ್ತು ಜಾಗತಿಕ ಧರ್ಮಗಳ ಪರಿಚಯ ಮಾಡಿಕೊಡಲಾಗುತ್ತದೆ. ಭಾರತೀಯ ಹಾಗೂ ಪಾಶ್ಚಾತ್ಯ ತತ್ವಜ್ಞಾನಿಗಳ ಜೊತೆಗೆ ಯೋಗ ಮತ್ತು ಶಿವಯೋಗ ಸಾಧನೆಯ ಮಾರ್ಗ ತಿಳಿಸಿಕೊಡಲಾಗುತ್ತದೆ. ಲಿಂಗಾಯತ ಧಾರ್ಮಿಕ ಆಚರಣೆಗಳನ್ನು ಕಲಿಸಲಾಗುತ್ತದೆ. ನೈತಿಕ ಶಿಕ್ಷಣದ ಅಡಿಪಾಯದ ಮೇಲೆ ಅದರ ಚಾರಿತ್ರ್ಯ ರೂಪಿಸಿ ಅವರು ಸದಾಚಾರ ಸಂಪನ್ನರಾಗುವಂತೆ ನೋಡಿಕೊಳ್ಳಲಾಗುತ್ತದೆ. ಪುರಾಣ-ಪ್ರವಚನ, ಸಾಹಿತ್ಯ-ಸಂಗೀತ, ಕಲೆ, ಆಡಳಿತ ನಿರ್ವಹಣೆಗಳಲ್ಲಿಯೂ ಅವರು ಪರಿಣಿತರಾಗುವ ಅವಕಾಶವಿದೆ. ಹೀಗೆ ವಿವಿಧ ರೀತಿಯಲ್ಲಿ ತರಬೇತು ಪಡೆದ ಸಾಧಕರು ಲಿಂಗಾಯತ ಧರ್ಮದ ಮಠಗಳಿಗೆ ಸ್ವಾಮಿಗಳಾಗಿ ಆಯ್ಕೆಯಾಗುತ್ತಾರೆ. ಇಂಥ ಸ್ವಾಮಿಗಳು ಮಠಗಳನ್ನು ಚೆನ್ನಾಗಿ ನಿರ್ವಹಿಸುವುದಲ್ಲದೇ ಭಕ್ತರಿಗೆ ಸರಿಯಾದ ಮಾರ್ಗದರ್ಶನ ಮಾಡುತ್ತಾರೆ. ಇದರಿಂದ ಸಮಾಜದಲ್ಲಿ ನೈತಿಕತೆ ಮತ್ತು ಧಾರ್ಮಿಕ ಶ್ರದ್ಧೆಗಳು ನೆಲೆಗೊಂಡು ಶರಣರು ಕಟ್ಟಬಯಿಸಿದ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ. ಹಾಗೆಯೇ ದೇಶದ ಭವಿತವ್ಯವೂ ಉಜ್ವಲಗೊಳ್ಳುತ್ತದೆ ಎಂಬುದು ಶಿವಯೋಗ ಮಂದಿರದ ಸ್ಥಾಪನೆಯ ಹಿಂದಿರುವ ದೃಢವಿಶ್ವಾಸ.

ಶಿವಯೋಗ ಮಂದಿರಲ್ಲಿ ಇಲ್ಲಿಯವರೆಗೆ ಸಾವಿರಾರು ಸಾಧಕರು ತರಬೇತಿ ಹೊಂದಿ ನಾಡಿನ ತುಂಬ ಹರಡಿರುವ ಮಠಗಳ ಸ್ವಾಮಿಗಳಾಗಿದ್ದಾರೆ. ಅವರೆಲ್ಲರ ಸಾಧನೆ ಅಪೂರ್ವವಾದುದು. ಧರ್ಮ, ಶಿಕ್ಷಣ, ಸಾಹಿತ್ಯ, ಸಂಸ್ಕೃತಿ ಕ್ಷೇತ್ರಗಳಿಗೆ ಅವರು ನೀಡಿರುವ ಕೊಡುಗೆಗಳೂ ಅಪಾರ.

ತಮ್ಮ ಜಾತ್ಯಾತೀತ ಮನೋಭಾವದಿಂದಾಗಿ ಅವರು ಇಡೀ ನಾಡಿನ ಹಿತಚಿಂತಕರೆನಿಸಿದ್ದಾರೆ. ಶಿವಯೋಗ ಮಂದಿರದಲ್ಲಿ ಅಪರೂಪದ ಗ್ರಂಥಾಲಯವಿದೆ. ಧರ್ಮ ಮತ್ತು ಸಾಹಿತ್ಯಗಳಿಗೆ ಸಂಬಂಧಿಸಿದ ಕನ್ನಡ, ಹಿಂದಿ, ಸಂಸ್ಕೃತ, ಇಂಗ್ಲೀಷ್, ಮರಾಠಿ, ತೆಲಗು ಭಾಷೆಗಳ ಹತ್ತಾರು ಸಾವಿರ ಗ್ರಂಥಗಳು ಇಲ್ಲಿವೆ. ಚರಿತ್ರೆಯ ನಾಯಕರು ಸಂಗ್ರಹಿಸಿದ ಸಾವಿರಾರು ತಾಡೋಲೆ ಹಾಗೂ ಕಾಗದದ ಹಸ್ತಪ್ರತಿಗಳು ಸಂಶೋಧಕರನ್ನು ಕೈ ಮಾಡಿ ಕರೆಯುತ್ತಿದೆ. ಸತ್ವ ಮತ್ತು ಗಾತ್ರಗಳೆರಡರಲ್ಲಿಯೂ ಈ ಗ್ರಂಥಾಲಯ ಶ್ರೀಮಂತವಾಗಿದೆ.

ಗೋಶಾಲೆಯು ಶಿವಯೋಗ ಮಂದಿರದ ಒಂದು ಮಹತ್ವದ ಅಂಗ. ಇನ್ನೂರಕ್ಕೂ ಹೆಚ್ಚಿನ ಸಂಖ್ಯೆಯ ಗೋವುಗಳಿವೆ. ಗೋವುಗಳ ಸಗಣಿಯಿಂದ ಶಾಸ್ತ್ರೋಕ್ತವಾಗಿ ವಿಭೂತಿ ತಯಾರಿಸುವ ಘಟಕವೂ ಇದೆ. ಶಿವಯೋಗ ಮಂದಿರದ ಆಡಳಿತವನ್ನು ನಿರ್ವಹಿಸಲು ಶಾಸನಬದ್ಧ ಸಮಿತಿ ಇದ್ದು ಪೂಜ್ಯ ಹಾನಗಲ್ಲ ಕುಮಾರ ಸ್ವಾಮಿಗಳವರ ನಂತರ ಹಾವೇರಿಯ ಹುಕ್ಕೇರಿ ಮಠದ ಶಿವಬಸವ ಸ್ವಾಮಿಗಳು, ನವಲಗುಂದ ಗವಿಮಠದ ಬಸವಲಿಂಗಸ್ವಾಮಿಗಳು, ಹಾಲಕೆರೆಯ ಅನ್ನದಾನ ಸ್ವಾಮಿಗಳು, ಬೆಳಗಾವಿ ನಾಗನೂರ ರುದ್ರಾಕ್ಷಿಮಠದ ಶಿವಬಸವ ಸ್ವಾಮಿಗಳು, ಡಾ. ಮೂಜಗಂ ಹೊಸಪೇಟೆ ಜಗದ್ಗುರು ಸಂಗನ ಬಸವ ಸ್ವಾಮಿಗಳು, ಮುಂಡರಗಿಯ ಜಗದ್ಗುರು ಅನ್ನದಾನ ಸ್ವಾಮಿಗಳು, ಹುಬ್ಬಳ್ಳಿ ಮೂರು ಸಾವಿರ ಮಠದ ಪೂಜ್ಯ ಶ್ರೀ ಜಗದ್ಗುರು ಗುರುಸಿದ್ಧ ರಾಜಯೋಗಿಂದ್ರ ಮಹಾಸ್ವಾಮಿಗಳು, ಹಾನಗಲ್ಲ ಮಠದ ಸದಾಶಿವ ಸ್ವಾಮಿಗಳು ಮುಂತಾದವರು ಶಿವಯೋಗ ಮಂದಿರದ ಅಭಿವೃದ್ಧಿಗಾಗಿ ಕಾರಣ ತಮ್ಮನ್ನೇ ತಾವು ಸಮರ್ಪಿಸಿಕೊಂಡಿರುವ ಸುಮಾರು ಒಂದುನೂರು ವರ್ಷಗಳಿಂದ ದಕ್ಷತೆಯಿಂದ ಕಾರ್ಯನಿರ್ವಹಿಸಿತು.

ಪ್ರತಿವರ್ಷ ಮಾಘ ಬಹುಳ ಸಪ್ತಮಿಯಂದು ಶ್ರೀಕುಮಾರ ಸ್ವಾಮಿಗಳ ಪುಣ್ಯಸ್ಮರಣೆ ಹಾಗೂ ಶಿವರಾತ್ರಿಯಂದು ಜಾತ್ರಾಮಹೋತ್ಸವ ಕಾರ್ಯಕ್ರಮಗಳು ಜರುಗುತ್ತವೆ. ಆಕರ್ಷಕ ಕಟ್ಟಡವಾಗಿರುವ ಕುಮಾರ ಶಿವಯೋಗಿಗಳ ಗದ್ದುಗೆ ಪವಿತ್ರ ಹಾಗೂ ಐತಿಹಾಸಿಕ ಸ್ಮಾರಕವೆನಿಸಿದೆ. ಇತ್ತೀಚೆಗೆ ಅದೊಂದು ಮಹತ್ವದ ಯಾತ್ರಾ ಸ್ಥಳವಾಗಿಯೂ ಪ್ರವಾಸಿಗರ ಕಣ್ಮನ ಸೆಳೆಯುತ್ತಿದೆ. ಹೆಚ್ಚುತ್ತಿರುವ ಪ್ರವಾಸಿಗರ ಅನುಕೂಲತೆಗಾಗಿ ಸುಸಜ್ಜಿತ ಯಾತ್ರ ನಿವಾಸ, ಅತ್ಯಾಧುನಿಕ ತಂತ್ರಜ್ಞಾನವನ್ನೊಳಗೊಂಡ ಗ್ರಂಥಾಲಯ ಹಾಗೂ ಸಂಶೋಧನಾ ಕೇಂದ್ರ, ವಸ್ತುಸಂಗ್ರಹಾಲಯ, ಆರ್ಟ್‌ಗ್ಯಾಲರಿ, ವಟು ಸಾಧಕರಿಗಾಗಿ ವಸತಿ ಮತ್ತು ನೂತನ ಪಾಠಶಾಲೆ ನಿರ್ಮಾಣ ಇತ್ಯಾದಿ ನಿಯೋಜಿತ ಯೋಜನೆಗಳನ್ನು ಕಾರ್ಯಗತಗೊಳಿಸಲು ಆಡಳಿತ ಮಂಡಳಿ ಶ್ರಮಿಸುತ್ತದೆ. ಒಟ್ಟಿನಲ್ಲಿ ಸಮಾಜ ಸೇವೆಗೆ ಶ್ರಮಿಸುತ್ತಿರುವ ವಿನೂತನ ಸಂಸ್ಥೆ ಇದಾಗಿದೆ.

೧. ಸಮಕಾಲೀನ ಸಂದರ್ಭಗಳು

ಒಂದು ಕಾಲಾವಧಿಯಲ್ಲಿ ಪೂರ್ಣಪ್ರಮಾಣದ ಪರಾಧೀನತೆಯನ್ನು ಅನುಭವಿಸಿ ಮತ್ತೊಂದು ಕಾಲಾವಧಿಗೆ ಪೂರ್ಣಪ್ರಮಾಣದ ಅತಂತ್ರವನ್ನೂ, ಅರಾಜಕತೆಯನ್ನು ಅನುಭವಿಸುತ್ತ ಆಡಳಿತಾತ್ಮಕವಾದ ಉದ್ವೇಗವನ್ನೂ ಹೊಂದಿದ್ದುದು ಚರಿತ್ರೆಯ ಸಾಕ್ಷ್ಯದಲ್ಲಿ ನಡೆದಿದೆ. ಈ ಹಿನ್ನೆಲೆಯಲ್ಲಿ ಆಡಳಿತಾತ್ಮಕ ಯೋಜನೆ, ಅಧಿಕಾರ ಹಸ್ತಾಂತರಗಳು, ಆಧುನಿಕತೆ, ಯಂತ್ರ ಸಂಸ್ಕೃತಿ, ದೇಶಿಯತೆಗೆ ವಿಲೋಮವಾಗುವಂತಿದ್ದ ಶೈಕ್ಷಣಿಕ ಪರಿಸರ, ಸಮಾಜವನ್ನು ನಿಯತ ಕಾಲದಲ್ಲಿ ಅರಾಜಕಗೊಳಿಸುತ್ತಿದ್ದ ದೇಶೀಯ ಸಂಸ್ಥಾನಗಳು, ವಿಶೇಷವಾಗಿ ವೀರಶೈವ ಧರ್ಮದ ಮತ್ತು ಸಮಾಜದ ಸ್ಪಷ್ಟವಾದ ಚಿತ್ರ ಕಾಣಲಾಗದ ಸ್ಥಿತಿಗೆ ಕಾರಣವಾಗಿವೆ. ಧಾರ್ಮಿಕ ಸಂದರ್ಭ, ಆಡಳಿತ, ಅಧಿಕಾರದಂತಹ ಪ್ರಬಲ ಸೌಲಭ್ಯಗಳಿದ್ದಾಗಿಯೂ ಇರುವ ಬಹುಮುಖ ಇಚ್ಚಾಶಕ್ತಿಯಲ್ಲಿನ ರಾಜಕೀಯ ಕೊರತೆಗಳ ಸಂದರ್ಭ. ವರ್ತಮಾನದ ಕ್ರಿಯಾಶೀಲತೆಯ ಸ್ಪಂದನದಲ್ಲಿ ಭವಿಷ್ಯದ ಅಸ್ಪಷ್ಟತೆಗಳ ಸೂಕ್ಷ್ಮ ಸಂವೇದನೆಗಳು ಸಮಾಜದಲ್ಲಿ ಸುಪ್ತವಾಗಿಸಿದ್ದ ತನ್ನ ಮೂಲ ನೆಲೆಯ ಆಧಾರವನ್ನೇ ಬದಲು ಮಾಡುತ್ತಿದ್ದ ಸಾಮಾಜಿಕ ಸಂದರ್ಭಗಳು. ಕ್ರಿ.ಶ. ೧೮೦೦ ಬ್ರಿಟಿಷ್ ಆದಿಪತ್ಯ, ಆಡಳಿತಾತ್ಮಕವಾದ ನಿರಾತಂಕವನ್ನು ಅನುಭವಿಸಿದ ಕಾಲಘಟ್ಟ, ಇಡೀ ಭಾರತೀಯ ಸಮಾಜ ಯಾವುದೇ ಕ್ರಮಬದ್ಧತೆಯನ್ನು ಪಡೆಯದೇ ಹೋದದ್ದು ಅಂದಿನ ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಶಿಥಿಲತೆಗೆ ಕಾರಣವಾಗುತ್ತದೆ.

ಸಾಮಾಜಿಕರನ್ನು ನಾಗರಿಕರನ್ನಾಗಿಯೂ, ನಾಗರೀಕರನ್ನು ಪ್ರಜ್ಞಾವಂತ ನಾಗರಿಕರನ್ನಾಗಿಯೂ, ಪ್ರಜ್ಞಾವಂತ ನಾಗರೀಕರನ್ನು ಯೋಜಕರನ್ನಾಗಿಯೂ, ಯೋಜಕರನ್ನು ಸ್ವಾಭಾವಿಕವಾದ ಸಾಮುದಾಯಿಕ ವ್ಯಕ್ತಿತ್ವದ ವ್ಯಕ್ತಿಗಳಾಗಿ ಪಡೆಯುವ ಅನಿವಾರ್ಯತೆ, ಅವಶ್ಯಕತೆ ಸಮಾಜಕ್ಕೂ, ವ್ಯಕ್ತಿಗಳಿಗೂ ಅವಶ್ಯವಾಗಿತ್ತು. ಇಂಥ ಸಂಧಿಕಾಲದಲ್ಲಿ ಸಮಾಜಮುಖಿ ಸೂಕ್ಷ್ಮ ಸಂವೇದಿ ಚಿಂತಕರು ಪರಿಸ್ಥಿತಿಗೆ ಸ್ಪಂದಿಸುತ್ತಾ ಬಹುಸಂಖ್ಯಾತ ಸಮಾಜಕ್ಕೆ ಅರಿವನ್ನುಂಟು ಮಾಡುವ ಹೊಣೆ ಹೊತ್ತರು. ಈ ದೇಶದ ಚರಿತ್ರೆಯನ್ನು ಗಮನಿಸಿದಾಗ ಕೆಲವು ನಿರ್ದಿಷ್ಟ ಕಾಲಘಟ್ಟದಲ್ಲಿ ಬಹುಸಂಖ್ಯಾತ ಸಮಾಜ ಮುಗ್ಧವಾಗಿಯೋ, ಮೌಢ್ಯತೆಯಿಂದಲೋ, ಅಜ್ಞಾನದಿಂದಲೋ, ಅಸಹಾಯಕಸ್ಥಿತಿಯ ಕಾರಣವಾಗಿಯೋ, ಇದೇ ಅಂತಿಮ ಸೂಕ್ತವೆಂಬ ಕಾರಣದಿಂದಲೋ, ಅನುಕರಣೆ, ಅನುಸರಣೆ ಮಾಡಿಕೊಂಡು ಬಂದಿದೆ. ಹಾಗೆಲ್ಲ ಬದಲಾವಣೆಯನ್ನು ತರಲು, ಜಾಗೃತಿ ಮೂಡಿಸಲು 'ಯುಗಪುರುಷ'ರನ್ನು ಈ ಸಮಾಜ ಹೆತ್ತು-ಹೊತ್ತು-ಸಾಕಿ-ಸಲಹಿ ಕಳಿಸಿದೆ.

ಇಂತಹ ಒತ್ತಡದ ಸ್ಥಿತಿಯಲ್ಲಿದ್ದ ಕನ್ನಡ ನಾಡಿನಲ್ಲಿ ಪುನರುದ್ಧಾರಗಳಂಥ ದೃಷ್ಟಿಕೋನದ ಜೊತೆ ಜೊತೆಯಲ್ಲಿ ಪುನಃಸೃಷ್ಟಿಯಂಥಹ ಕಾರ್ಯವು ನಡೆದಿದೆ. ಈ ಎಲ್ಲ ಅಂಶದ ಫಲವಾಗಿ

ಅಖಿಲ ಭಾರತ ವೀರಶೈವ ಮಹಾಸಭೆ, ಶಿವಯೋಗ ಮಂದಿರದಂತಹ ಸಂಸ್ಥೆಯ ಸ್ಥಾಪನೆ ಹಾನಗಲ್ಲ ಕುಮಾರಸ್ವಾಮಿಗಳಂಥ ಪುಣ್ಯಪುರುಷರಿಂದ ಆಗುತ್ತದೆ. ಇಂತಹದೊಂದು ಪುಣ್ಯ ಕಾರ್ಯಕ್ಕೆ ಕಾರಣವಾದ ಕಾಲಘಟ್ಟದ ಸಾಂದರ್ಭಿಕ ಸಂದರ್ಭಗಳಾದ ಸಾಮಾಜಿಕ, ಶೈಕ್ಷಣಿಕ ಹಾಗೂ ಧಾರ್ಮಿಕ ಸಂದರ್ಭಗಳು ಯಾವುವು ಎಂಬುದನ್ನು ಇಲ್ಲಿ ಅತ್ಯಂತ ಸಂಕ್ಷಿಪ್ತವಾಗಿ, ಸ್ಪಷ್ಟವಾಗಿ ತೆರೆದಿಡುವುದೇ ಇಲ್ಲಿನ ಉದ್ದೇಶವಾಗಿದೆ.

ಕ್ರಿ.ಶ. ೧೮೦೦ರಲ್ಲಿ ಭಾರತೀಯರ ಮೇಲೆ ಸಂಪೂರ್ಣ ಅಧಿಕಾರವನ್ನು ಆರಂಭಿಸಿದ ಬ್ರಿಟಿಷರು ಸರಿಸುಮಾರು ಐದು ದಶಕ ಮುಗಿಯುವುದರೊಳಗೆ ಸಂಪೂರ್ಣವಾದ ಸ್ವಾಮ್ಯವನ್ನು ಸಾಧಿಸಿತು. ೧೮೩೭ರಲ್ಲಿ ಇಂಗ್ಲೆಂಡಿನ ಸಿಂಹಾಸನವೇರಿದ ವಿಕ್ಟೋರಿಯಾ ಮಹಾರಾಣಿ ೧೮೭೭ರಲ್ಲಿ ಭಾರತದ ಚಕ್ರವರ್ತಿನಿ ಎನಿಸಿದರು. ೧೮೫೭ರಲ್ಲಿ ಆಡಳಿತಾತ್ಮಕ ಸುಧಾರಣೆಗಾಗಿ ಭಾರತದೆಡೆ ಒಲವು ಬೀರಿದಳು. ಇದಕ್ಕೆ ಭಾರತದಲ್ಲಿ ನಡೆದ ಸಿಪಾಯಿ ದಂಗೆ ಅಥವಾ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವೇ ಕಾರಣವಾಯಿತು. ಈ ಅಂಶದ ಬಗ್ಗೆ ತಿಳಿದ ರಾಣಿಯು ೧೮೫೮ರ ನವೆಂಬರ್ ೧ರಂದು ಪತ್ರಿಕೆಯ ಮೂಲಕ ಆದೇಶ ಪೂರ್ವಕವಾದ ಘೋಷಣೆ ಹೊರಡಿಸಿದಳು. ಅದರಲ್ಲಿ ಹಿಂದೂಸ್ಥಾನದ ಆಡಳಿತವನ್ನು ಕಂಪನಿಯಿಂದ ತಾನೆ ವಹಿಸಿಕೊಳ್ಳುವುದು, ಬಂಡಾಯಗಾರರಿಗೆ ಕ್ಷಮೆ ತೋರುವುದು, ಮಾಡಿಕೊಂಡ ಒಪ್ಪಂದವನ್ನು ಕಾಯ್ದುಕೊಳ್ಳುವುದು ಎಂದು ವಚನವಿತ್ತು, ಭಾರತೀಯರ ಕುರಿತು ಹೀಗೆ ಹೇಳಿದಳು. "ಜನರ ಧಾರ್ಮಿಕ ಭಾವನೆಗಳಿಗೆ ಯಾವ ತರಹದ ದಕ್ಕೆಯನ್ನುಂಟು ಮಾಡದೇ ರಾಜ್ಯವನ್ನು ಸಾಗಿಸುವೆನು. ಹಿಂದೂಸ್ಥಾನದ ಮತ, ಆಚಾರ, ಪದ್ಧತಿಗಳ ವಿಷಯದಲ್ಲಿ ಬ್ರಿಟಿಷ್ ಸರಕಾರ ಮಧ್ಯ ಪ್ರವೇಶಿಸುವುದಿಲ್ಲ. ಬ್ರಿಟಿಷ್ ಆಡಳಿತದ ನೇರವಾದ ಆಳ್ವಿಕೆಗೆ ಒಳಪಟ್ಟ ಪ್ರದೇಶವನ್ನು ವಿಸ್ತರಿಸುವುದಿಲ್ಲ. ಸಂಸ್ಥಾನಿಕರ ಅಸ್ತಿತ್ವಕ್ಕೆ ಭಂಗ ತರುವುದಿಲ್ಲ. ಜಾತಿ-ಮತಗಳ ಕಾರಣಗಳಿಂದಾಗಿ ಯಾರನ್ನೂ ಸರಕಾರದ ಹುದ್ದೆಗಳಿಗೆ ಅರ್ಹರೆಂದು ಪರಿಗಣಿಸುವುದಿಲ್ಲ"[೧] ಎಂಬ ಮಾತುಗಳನ್ನು ವಿಶ್ವಾಸಗೊಳಿಸಿದಳು. ಸಿಪಾಯಿದಂಗೆಯ ಪರಿಣಾಮ ಭಾರತ ಸ್ವಾತಂತ್ರ್ಯವನ್ನು ಬಯಸುತ್ತಲಿತ್ತು ಎಂಬುದು ಇಲ್ಲಿನ ಮಾತುಗಳಿಂದ ಅರಿವಾಗುತ್ತದೆ.

ಈ ಆದೇಶ ಭಾರತೀಯ ಸಮಾಜದಲ್ಲಿ ಆಧುನಿಕತೆಗೆ ಮಾರುಹೋಗುತಲಿದ್ದ ಸಮಾಜವನ್ನು ಪುನರುಜ್ಜೀವನಗೊಳಿಸುವ ಒಂದು ತಂಡವನ್ನು ಸೃಷ್ಟಿಸತೊಡಗಿತು. ಇಲ್ಲಿ ಆಧುನಿಕತೆಯ ಅನಿವಾರ್ಯತೆ ಒಂದೆಡೆಯಾದರೆ ದೇಶೀಯ ನೆಲೆಯ ಅವಶ್ಯಕತೆ ಕಟ್ಟಿಕೊಳ್ಳುವ ಅಗತ್ಯತೆ ಮತ್ತೊಂದೆಡೆ. ಈ ದ್ವಿಮುಖ ಒತ್ತಾಸೆಗಳನ್ನು ಪೂರೈಸುವ ಅವಶ್ಯಕತೆ, ಪ್ರಜ್ಞಾವಂತ ಸಮಾಜದ ವ್ಯಕ್ತಿಗಳ ಪಾಲಿಗೆ ಒದಗಿ ಬಂತು. ಇದು ಸಾಮಾಜಿಕ ಚಿಂತಕರಿಗಾದರೆ ಇನ್ನೂ ರಾಜಕೀಯವಾಗಿ ಸ್ವಾತಂತ್ರ್ಯ ಪಡೆಯಬೇಕೆಂಬುದು ಮತ್ತೊಂದು ವರ್ಗದವರ ಬಯಕೆ. ಹೀಗೆ ಭಾರತೀಯರಲ್ಲಿ ಕ್ರಿಯಾತ್ಮಕ ಚಟುವಟಿಕೆಗಳು ಈ ಮೂಲಕ ಆರಂಭಗೊಂಡವು. ಅವು ಸಂಘ-ಸಂಸ್ಥೆಯಾಗಿ,

ಸಂಪರ್ಕ ಮಾಧ್ಯಮ, ಜಾಗೃತ ದಳವಾಗಿ ಬೆಳೆದು, ಶಿಕ್ಷಣ ಸಂಸ್ಥೆಯ ರೂಪದಲ್ಲಿ ಬೆಳೆದು ಆಧುನಿಕತೆಯೊಂದಿಗೆ ದೇಶಿಯ ಸಾಮಾಜಿಕ ಮೌಲ್ಯವನ್ನು ತನ್ನೊಳಗೆ ಬೆಳೆಸಿಕೊಂಡವು. ಅವುಗಳೆಂದರೆ ೧೮೪೪ರಲ್ಲಿ ಆಂಧ್ರದಲ್ಲಿ ಪ್ರಾರಂಭವಾದ "ಕ್ರೆಸೆಂಟ್" ಎಂಬ ಆಂಗ್ಲ ಪತ್ರಿಕೆ, ೧೮೫೦ರಲ್ಲಿ ಸ್ಥಾಪನೆಯಾದ ಮದ್ರಾಸ್ ದೇಶಿಯ ಸಂಘ, ೧೮೮೪ರಲ್ಲಿ ಬಂದ ಮದ್ರಾಸ್ ಮಹಾಜನ ಸಭೆ, ೧೮೮೧ರಲ್ಲಿ ಮೈಸೂರಿನಲ್ಲಿ ಸ್ಥಾಪನೆಯಾದ ಮೈಸೂರು ಪ್ರಜಾಪ್ರತಿನಿಧಿ ಸಭೆ, ಈ ಸಂಸ್ಥೆಗಳ ಸ್ಥಾಪನೆಯ ಮೂಲಕ ಧಾರ್ಮಿಕ, ಶೈಕ್ಷಣಿಕ ಕ್ಷೇತ್ರದಲ್ಲಿ ಬದಲಾವಣೆಗಳು ಆರಂಭವಾದವು.

ಬ್ರಿಟೀಷರು ಜಾರಿಗೆ ತಂದ ಶಿಕ್ಷಣ ನೀತಿ ಇಡೀ ಸಮಾಜದಲ್ಲಿ ವಿಕೋಪ ಸ್ಥಿತಿಯನ್ನು ಉಂಟುಮಾಡಿತು. ಆಗ ವಿಕ್ಟೋರಿಯ ಮಹಾಮಣಿ ಹೊರಡಿಸಿದ ಆದೇಶ ಕೇವಲ ಸಿಪಾಯಿ ದಂಗೆಯಂತಹ ಹೋರಾಟದ ಧಮನಕ್ಕಾಗಿ ಎಂಬ ಅರಿವು ಲಾಲಾ ಲಜಪತರಾಯ, ರಾಜಾರಾಮ ಮೋಹನರಾಯ್‌ರಂಥ ಸಮಾಜ ಮುಖಂಡರಿಗೆ ತಿಳಿಯಿತು. ೧೮೫೭ರ ಬಂಡಾಯದ ನಂತರ ಆಡಳಿತವನ್ನು ಸ್ಥಿರಪಡಿಸುವ ಕಾರ್ಯದಲ್ಲಿ ಇಂಗ್ಲೀಷ್ ಕಲಿತ ಈ ಜನರ ಕರ್ತೃತ್ವ ಶಕ್ತಿಗೆ ಅವಕಾಶವುಂಟಾಗಿ ಇಂಗ್ಲೀಷ್ ಕಲಿತವರು, ಇಂಗ್ಲೀಷ್ ಕಲಿಯದೆ ಇದ್ದವರಿಗಿಂತ ಮುಂದೆ ಹೋದರು. ಇದರಿಂದ ಇಂಗ್ಲೀಷ್ ಕಲಿಯದೆ ಇದ್ದವರು ಅವರ ಅನುಕರಣೆಗೆ ಇಳಿದರು. ಇದು ಬಂಗಾಲಿ ಜನರ ಬದುಕಿನಲ್ಲಿ ಇಂಗ್ಲೀಷ್ ಮಾಯವಾಗಿಯೂ, ಸ್ವದೇಶಿಯರು ಸ್ವಧರ್ಮವನ್ನೇ ಹೀಗೆಳೆದರು. ತಮ್ಮ ಸಮಾಜವನ್ನು ತುಚ್ಚೀಕರಿಸಿದರು. ಪ್ರಾಚೀನ ಇತಿಹಾಸವನ್ನು ಮರೆತು ಆಧುನಿಕತೆಯೊಂದಿಗೆ ಬೆರೆತು ಹೊಸ ಯುಗಕ್ಕೆ ನಾಂದಿಕಾರರಾದರು. ಅನುಕರಣ ಪ್ರವೃತ್ತಿ, ಇಂಗ್ಲೀಷಿನ ಮೌಢ್ಯತೆಯಲ್ಲಿ ರಾಷ್ಟ್ರಭಾಷೆ ಹಿಂದಿ ಬೇಡವಾಯಿತು. 'ಹಿಂದು ಜನರೆಂದರೆ ಕಾಡುಜನರು, ಅವರ ಧರ್ಮವೆಂದರೆ ಒಂದು ಅಂದಶ್ರದ್ಧೆಯ ಮೊಟ್ಟೆ, ಹಿಂದಿ ಜನರೆಂದರೆ ಸಂಕುಚಿತ ದೃಷ್ಟಿಯ ಧರ್ಮಗೇಡಿಗಳು ಎಂದು "ಬಿಳಿ ನೆರಳು" ಬಡಿದವರ ಕಲ್ಪನೆಯಾಯಿತು. ಇದು ಒಂದು ದುರಂತವಾದರೆ ಹೊರದೇಶದ ಭಾಷೆ ಕಲಿತು ಇಷ್ಟೆಲ್ಲ ಅನುಕರಣೆ ಮಾಡಿದರು ಆಡಳಿತಾತ್ಮಕ ವಿಚಾರದಲ್ಲಿ ಬ್ರಿಟಿಷ್ ಅಧಿಕಾರಿಗಳು ಮಾತ್ರ ಇಂತವರನ್ನು ಕೀಳಾಗಿ ಕಾಣುತ್ತಿದ್ದಾರೆಂಬ ಅಂಶ ಇಂತಹ ಸ್ವಜನ, ಸ್ವಧರ್ಮ ನಿಂದಕರಿಗೆ ತಿಳಿಯದೆ ಹೋದದ್ದು ಎರಡನೇ ಅತಿದೊಡ್ಡ ದುರಂತವಾಗಿದೆ.

ಇದನ್ನೆಲ್ಲ ಪರಿಶೀಲಿಸುತ್ತಿದ್ದ ವಿದ್ಯಾವಂತ ಅಲ್ಪಸಂಖ್ಯಾವರ್ಗದ ದೇವೇಂದ್ರನಾಥ ಟಾಗೋರ, ರಾಜೇಂದ್ರ ರಾಲಮಿತ್ರ, ರಾನಡೆ, ವಿಷ್ಣುಪಂಡಿತಸ್ವಾಮಿ, ದಯಾನಂದ ಸರಸ್ವತಿ, ಸೈಯದ್ ಅಹಮ್ಮದ್, ಮೇಡಂ ಬ್ಲ್ಯಾವೆಟ್ಸ್ಕಿ, ಬ್ರಹ್ಮ ಸಮಾಜ ಸ್ಥಾಪಕ ರಾಜಾರಾಮ ಮೋಹನರಾಯ, ಥಿಯೋಸೋಫಿಕಲ್ ಸೊಸೈಟಿ, ಬಂಗಾಲ ಸಾಹಿತ್ಯ ಪರಿಷತ್ತು, ಮಹಾರಾಷ್ಟ್ರ ಸಭೆ, ಆರ್ಯ

ಸಮಾಜ, ಸನಾತನ ಸಭೆ–ಈ ತರದ ವ್ಯಕ್ತಿ ಹಾಗೂ ಸಂಸ್ಥೆಗಳು, ಸಂಘಗಳು ಆಧುನಿಕತೆಯ ಸೆಳೆತಕ್ಕೆ ಸಿಕ್ಕು ಕೃಶಗೊಳ್ಳುತ್ತಿದ್ದವು. ಪಾರಂಪರಿಕ ಸಂಸ್ಕೃತಿ ಹಾಗೂ ವಿಚಾರ–ಆಚಾರಗಳು ಉಳಿಸುವ, ಪ್ರಚಾರಗೊಳಿಸುವ ಜಾಗೃತ ಕಾರ್ಯ ಆರಂಭಿಸಿದವು. ಇದಕ್ಕೆ ಪರ್ಯಾಯವಾಗಿ ವಿರೋಧಿ ಸಂಘಟನೆಗಳು ಸಾರ್ವಜನಿಕರೊಳಗೆ ಒಡಮೂಡಿ ಬಂದವು. ಇದರ ಪರಿಣಾಮವಾಗಿ ತಾರತಮ್ಯತೆಯನ್ನು ನೋಡುವ ಸ್ಥಿತಿ ಎದುರಾಗಿ ಅದು ಶೈಕ್ಷಣಿಕ ರಂಗದೆಡೆ ಸಾಗಿತು. ಇದರಿಂದ ಸ್ವತಂತ್ರವಾದ ಶಿಕ್ಷಣ ಸಂಸ್ಥೆಗಳು "ದೇಶಿಯತೆ ಮತ್ತು ರಾಷ್ಟ್ರೀಯ" ಒಲವನ್ನು ಬಿತ್ತುವ ಅಂಗವಾಗಿ ಆರಂಭವಾದರೆ, ನಿಯತಕಾಲಿಕ ಪತ್ರಿಕೆಗಳು ಕೂಡ ಇದೇ ಚಟುವಟಿಕೆಯ ಅಂಗವಾಗಿ ಆರಂಭವಾದವು.

"ಕನ್ನಡ ನಾಡಿನಲ್ಲಿ ಇದು ತಡವಾಗಿ ಬೆಳಕಿಗೆ ಬರುತ್ತದೆ. ಕ್ರಿ.ಶ. ೧೮೬೫ರಲ್ಲಿ ಕರ್ನಾಟಕದ ಭಾಷೆಯು ಕನ್ನಡವೆಂದು ತಿಳಿಯಲು ಕನ್ನಡಿಗರಿಗೆ ಒಂಬತ್ತು ವರ್ಷಗಳೇ ಹಿಡಿದವು. ಅದಕ್ಕೆ ವಿದ್ಯಾಧಿಕಾರಿಯಾಗಿ ಬಂದ ರಸೆಲ್ಲರವರಿಂದಾಗಿ ಕನ್ನಡ ಪುಸ್ತಕ, ಪಠ್ಯಕ್ರಮ, ಶಿಕ್ಷಣದ ವ್ಯವಸ್ಥೆಗೆ ಒಂದು ಹೊಸತನ ತಂದರು. ಅದರಿಂದ ಕ್ರಿ.ಶ. ೧೮೬೯ರಲ್ಲಿ ಮುದ್ರಣಾಲಯವನ್ನು ವೆಂಕಟರಂಗೋಕಟ್ಟಿ ಮೊದಲಿಗೆ ಸ್ಥಾಪಿಸಿದ್ದಾರೆ".[೨]

ಹೀಗೆ ಬ್ರಿಟಿಷ್ ಆಧಿಪತ್ಯದಲ್ಲಿ ಸ್ಥಳೀಯ ಆಡಳಿತದ ದುರುಪಯೋಗ, ಸಂಸ್ಥಾನಿಕರ ದಬ್ಬಾಳಿಕೆ, ಸುಶಿಕ್ಷಿತರ ಕೈಗೆ ಸಿಕ್ಕ ಪರಿಣಾಮ ಅರಾಜಕತೆ ಎನ್ನುವುದು ಪ್ರಬಲವಾದಾಗ ಕನ್ನಡ ನಾಡಿನಲ್ಲಿ ಕನ್ನಡಕ್ಕೆ ಪರ್ಯಾಯ ಭಾಷೆಯಾಗಿದ್ದ ಮರಾಠಿ, ಉರ್ದು, ತೆಲಗು, ತಮಿಳು ಭಾಷೆಗಳ ಪ್ರಾಭಲ್ಯ ಹೆಚ್ಚಾಗಿ ಸ್ವಾಭಿಮಾನಿ ಚಿಂತಕರಿಗೆ ತೊಡಕುಗಳು ಎದುರಾದವು. ಹೀಗಾಗಿ ರಾಷ್ಟ್ರೀಯತೆ ಬಗ್ಗೆ ಯೋಚಿಸುತ್ತಿದ್ದವರಿಗೆ ಸ್ವ–ಧರ್ಮ, ಸ್ವದೇಶೀಯ ನೆಲೆಯಲ್ಲಿ ಗಟ್ಟಿಯಾಗಿ ನಿಲ್ಲಬೇಕೆಂಬ ಒಲವು ಮೂಡುತ್ತದೆ. ಇಂತಹ ಪೂರ್ಣ ಪ್ರೇರಣೆಯಿಂದಾಗಿ ೧೮೬೫ರಲ್ಲಿ ವಿದ್ಯಾಧಿಕಾರಿಯಾಗಿ ಕನ್ನಡ ನಾಡಿನ ಉತ್ತರ ಭಾಗಕ್ಕೆ ಆಗಮಿಸಿದ ರಸೆಲ್‌ರಿಗೆ ತಿಳಿದ ಶೈಕ್ಷಣಿಕ ವಿಧಾನವು ಉತ್ತರ ಕರ್ನಾಟಕದಲ್ಲಿ ಶಾಲೆಗಳನ್ನು ತೆರೆಯಲು ಅಲ್ಲಿ ಕನ್ನಡವನ್ನೇ ಕಲಿಸಲು ಕಾರಣವಾಯಿತು. ಅಲ್ಲಿಯವರೆಗೂ ಶಾಲೆಯಲ್ಲಿ ಮರಾಠಿ ಕಡ್ಡಾಯವಾಗಿತ್ತು. "೧೮೮೯ನೇ ಇಸವಿ ಸರ್ಕ್ಯೂಲರ್ ೧೧೧೭ರ ಮೇರೆಗೆ"[೩] ಮಹಾರಾಷ್ಟ್ರದಲ್ಲಿ ಮರಾಠಿ, ಕರ್ನಾಟಕದಲ್ಲಿ ಕನ್ನಡ (ಮೈಸೂರು)ವೇ ದೇಶಭಾಷೆಯೆಂದು ಸಾರಲ್ಪಟ್ಟಿದ್ದರೂ ಅದು ಜಾರಿಗೆ ಬಂದಿರಲಿಲ್ಲ. ಆದರೂ ಜನತೆ ಎರಡೂ ಭಾಷೆ ಕಲಿಯಬೇಕಾಗಿತ್ತು. ಇಂತಹ ಸಂಧಿಕಾಲದಲ್ಲಿ ಮಠಗಳು ಒಂದು ಪರಿಪೂರ್ಣ ಕನ್ನಡ ಶಾಲೆಗಳಿಗಾಗಿ ಕಾರ್ಯನಿರ್ವಹಿಸಿರಬೇಕೆಂಬುದು ಇದಕ್ಕೆ ಪೂರಕ ಅಂಶವಾಗಿ "೧೮೮೦ರ ವರೆಗೆ ಪ್ರತಿಯೊಂದು ಹಳ್ಳಿಯಲ್ಲೂ ವೀರಶೈವರದೊಂದು ಶಾಲೆಯು ಕಣ್ಣಿಗೆ ಬೀಳುತ್ತಿತ್ತೆಂದು"[೪] ಸರ್ ನಾರಾಯಣ ಚಂದಾವರಕರ ಮಾತು. ೧೮೩೦ರ ವರೆಗೆ

ಪ್ರತಿಯೊಂದು ವೀರಶೈವ ಮಠವೂ ಶಾಲೆಯೇ ಆಗಿರುತ್ತಿತ್ತು ಎಂಬ ಮಾತಿಗೆ ಪುಷ್ಟೀಕರಣ ನೀಡುತ್ತದೆ.

ಸ್ವವಾ.ಭುಜಂಗರಾವ್, ಹುಯಿಲಗೋಳ ನಾರಾಯಣರಾವ್, ಕೈ.ವಾ.ಚನ್ನಬಸಪ್ಪ ಧಾರವಾಡ, ಕೈ.ವಾ. ಗಂಗಾಧರ ಮಡಿವಾಳೇಶ್ವರ ತುರುಮರಿಯಂತಹ ಕನ್ನಡ ಭಾಷಾಭಿಮಾನಿಗಳ ವಿಶ್ವ ಪ್ರಯತ್ನದ ಫಲವಾಗಿ ಕನ್ನಡ ಶಾಲೆಗಳು ಉದಯವಾದವು. ಡೆಪ್ಯೂಟಿ ಚನ್ನಬಸಪ್ಪನವರಿಂದ ಬೋರ್ಡಿಂಗ್ ಹಾಗೂ ವಿದ್ಯಾನುಕೂಲಗಳೆರಡು ಏಕಕಾಲಕ್ಕೆ ಜಾರಿಗೆ ಬಂದವು. ಗಡಿನಾಡಿನ ಬೆಳಗಾವಿಯಲ್ಲಿ ೧೮೬೮ರಲ್ಲಿ ಲಿಂಗಾಯತ ಬೋರ್ಡಿಂಗ್ ಸ್ಥಾಪನೆಯಾಯಿತು. ಶಿಕ್ಷಣ ಪ್ರೇಮಿ ಚನ್ನಬಸಪ್ಪನವರು ಹಾಗೂ ಚಿತ್ರದುರ್ಗದ ಮಹಾಲಿಂಗರ ಸಹಯೋಗದಲ್ಲಿ ಈ ಕಾರ್ಯ ಮೊದಲುಗೊಂಡು ನಡೆದದ್ದು ಒಂದು ಸಾಧನೆಯಾಗಿ ಅದು ನೂರಾರು ವಿದ್ಯಾರ್ಥಿಗಳಿಗೆ ವಿದ್ಯೆಯನ್ನು, ವಸತಿಯನ್ನು ಒದಗಿಸಿತು.

ಈ ಕಾಲಾವಧಿಯಲ್ಲಿ ಧಾರ್ಮಿಕ ಸ್ವರೂಪಗಳು ಆಡಳಿತಾತ್ಮಕ ಚೌಕಟ್ಟಿಗೆ ಸ್ಪಂದಿಸಿದವು. 'ಆಧುನಿಕತೆ ಬಯಸುತ್ತಿದ್ದ ಸಮಾಜ' ಒಂದೆಡೆಯಾದರೆ ವ್ಯಾಮೋಹಕ್ಕೆ ಸಿಲುಕದೆ ಪಾರಂಪರಿಕ ಜ್ಞಾನಕ್ಕೆ ಸ್ಪಂದಿಸಬೇಕೆಂಬ ಚಿಂತಕರ ಮಾರ್ಗದರ್ಶನ ಮತ್ತೊಂದೆಡೆ ಇವು ಸಮಾಜವನ್ನು ರೂಪಿಸುತ್ತಿತ್ತು. ವಿಶೇಷವಾಗಿ ವೀರಶೈವ ಸಮಾಜದ ಸ್ಥಿತಿಯೂ ಈ ಕಾಲಾವಧಿಯಲ್ಲಿ ಅನೇಕ ಸವಾಲುಗಳನ್ನು ಎದುರಿಸಿದ ವಿಧಾನವೂ ಕೂಡ ಧರ್ಮದ ಅವಶ್ಯಕತೆಯನ್ನು ಬಯಸುತ್ತಿತ್ತು. ಅದಕ್ಕಾಗಿ 'ವೀರಶೈವರು ಶೂದ್ರರೆಂಬ' ಹೇಳಿಕೆ ವಿವಾದಕ್ಕೆ ತಿರುಗಿ ಅದು ಬ್ರಾಹ್ಮಣತ್ವದಷ್ಟೆ ಶ್ರೇಷ್ಠವೆಂದು ಪರಳಿಪ್ರಕರ್ಣವಾಗಿ ಹೊರಬರುತ್ತದೆ. "ಉತ್ತಂಗಿ ಚನ್ನಬಸಪ್ಪ ಗೌಡರಂತಹ ಲಿಂಗಾಯತ ಪಂಚಮಸಾಲಿಗಳು ಕ್ರೈಸ್ತರ ಬೈಬಲಿಗೆ ಮಾರು ಹೋಗಿ ಮತಾಂತರಗೊಳ್ಳುತ್ತಾರೆ."[೫] ಫ.ಗು.ಹಳಕಟ್ಟಿಯಂತವರು ವಿದ್ಯಾರ್ಥಿ ಜೀವನದಲ್ಲಿ ವೀರಶೈವ ಸಮಾಜದ ಮೇಲೆ ಆದ ಟೀಕೆಗಳಿಂದ ರೋಸಿ ಹೋಗುತ್ತಾರೆ. ಆಗ ಎದುರಾದ ವೀರಶೈವ ಲಿಂಗಾಯತ ಎಂಬ ಭಿನ್ನಾಭಿಪ್ರಾಯ ಜಾತಿ ಉಪಜಾತಿಗಳ ಗೊಂದಲದ ಬಗ್ಗೆ ಅನೇಕ ಸಂಶೋಧನೆಗಳು ನಡೆಯುತ್ತವೆ. ಡಾ.ನಂದಿಮಠ, ವೈ.ನಾಗೇಶಶಾಸ್ತ್ರಿಯವರು ಈ ಬಗ್ಗೆ ಅಧ್ಯಯನ ನಡೆಸುತ್ತಾರೆ. ಹೀಗೆ ವೀರಶೈವ ಸಮಾಜದಲ್ಲಿ ಆಚಾರ-ವಿಚಾರಗಳು ಪ್ರಬಲಗೊಳ್ಳುತ್ತಿದ್ದರೆ ಶುದ್ಧ ಸಂಪ್ರದಾಯದ ಅನುಭವ ಬೆಳಕಿಗೆ ತರಬೇಕಾಗಿತ್ತು. ಅದಕ್ಕಾಗಿ ಹೊಸ ರೂಪದ ವಿಚಾರ ಹುಟ್ಟಿದ್ದವು. ಮೂಲ ನೆಲೆ, ಲಿಂಗಧಾರಣೆ, ಸಂಸ್ಕಾರಗಳು ಇತ್ಯಾದಿ ಅಂಶದಲ್ಲಿ ತೋರಿದ ಸಮಸ್ಯೆಗಳು ನಾಲ್ಕು ದಶಕಗಳ ಕಾಲ ಕನ್ನಡ ನಾಡಿನಲ್ಲಿ ಹುಟ್ಟಿ ಉಲ್ಬಣಗೊಂಡು ಹುಣ್ಣಾಗಿಸಿದ್ದವು. ಇಂತಹ ಕಾಲಕ್ಕೆ ಹಾಲಯ್ಯನಂಥ ಹಾನಗಲ್ಲ ಕುಮಾರಸ್ವಾಮಿಗಳ ಜನನವಾಗಿ ಅಖಿಲ ಭಾರತ ವೀರಶೈವ ಮಹಾಸಭೆಯ ಸ್ಥಾಪನೆಯೊಂದಿಗೆ ವೀರಶೈವರ ಸಂಘಟನೆ ನಡೆದು ಅದು 'ಶಿವಯೋಗ

ಮಂದಿರ ಸಂಸ್ಥೆ'ಯ ಹುಟ್ಟಿಗೆ ಕಾರಣವಾಗುತ್ತದೆ. ಇಂತಹ ಸ್ಪಷ್ಟತೆಗಾಗಿ ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ವಾದ ಸಂಘರ್ಷವಾಗಿ, ಪ್ರತಿಷ್ಠೆ-ಶ್ರೇಷ್ಠತೆಗಳ ಸ್ಥಾಪನೆಗೆ ತೀವ್ರ ಪ್ರಯತ್ನಗಳು ಕಂಡುಬರುತ್ತವೆ. ಈ ಮೇಲಿನ ಎಲ್ಲ ಅಂಶಗಳು ಭಾರತೀಯ ಸಂಸ್ಕೃತಿಯಿಂದ ಹಿಡಿದು ಕರ್ನಾಟಕದ ನೆಲದಲ್ಲೂ ನಿಂತು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಚಿತ್ರವಾಗಿದೆ. ಹೀಗೆ ಆಧುನಿಕತೆ, ಆಡಳಿತ, ಪರಿವರ್ತನೆ, ಸುಧಾರಣೆಯಂತಹ ಸಾಮಾಜಿಕ, ಅನ್ವಯಿಕಗಳ ಸಂದರ್ಭದಲ್ಲಿ ದಕ್ಷಿಣ ಭಾರತದ ಬಾದಾಮಿಯಲ್ಲಿ ಮೊಟ್ಟಮೊದಲ ಧಾರ್ಮಿಕ ವಿದ್ಯಾಕೇಂದ್ರವೊಂದು 'ಶಿವಯೋಗ ಮಂದಿರ'ವೆಂಬ ನಾಮಾಂಕಿತದಲ್ಲಿ ಹಾನಗಲ್ಲ ಕುಮಾರಸ್ವಾಮಿಗಳಿಂದ ಸ್ಥಾಪಿಸಲ್ಪಡುತ್ತದೆ.

ಭಾರತೀಯ ಸಂಸ್ಕೃತಿಯ ತಾಯಿ ಬೇರುಗಳೆಂದರೆ ನಮ್ಮ ಪ್ರಾಚೀನ ಕಾಲದ ಆಶ್ರಮಗಳು. ಆಶ್ರಮಗಳು ವಿಶ್ವಶಾಂತಿಯ ಅಮರ ಸಂದೇಶವನ್ನು ಸಾರಿದ, ಅನಾದಿಕಾಲದಿಂದಲೂ ಬೀರುತ್ತಾ ಬಂದಿವೆ. ನದಿಯ ತೀರದ ಪರ್ಣಕುಟಿರಗಳಲ್ಲಿ ನೆಲೆಸುತ್ತಾ ನಮ್ಮ ಋಷಿಮುನಿಗಳು ತಮ್ಮ ಶಿಷ್ಯ ವರ್ಗಕ್ಕೆ ಆಧ್ಯಾತ್ಮದ ವಿದ್ಯೆ ಕಲಿಸಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಪ್ರೇರಣೆ ಪಡೆದು ಪ್ರಜಾಪಾಲನೆ ಸಮರ್ಥವಾಗಿ ಸಾಗಿ ಬಂದಿದೆ. ಆಧ್ಯಾತ್ಮ-ಭೌತಿಕ ಬಲಗಳೆರಡೂ ಮಾನವ ಕಲ್ಯಾಣಕ್ಕೆಂದು ಒಂದುಗೂಡಿದ ಕಾಲವದು. ಅರಮನೆ-ಗುರುಮನೆಯ ಈ ಸಂಬಂಧ ಭಾರತೀಯ ಸಂಸ್ಕೃತಿಯಲ್ಲಿ ಸಮನ್ವಯದ ಸಜೀವಕ್ಕೆ ಸಾಕ್ಷಿಯಾಗಿದೆ.

ಧರ್ಮ, ಸಂಸ್ಕೃತಿಗಳನ್ನು ಬೆಳಗಿದ ಈ ನೆಲದಲ್ಲಿ ತಲಾತಲಾಂತರದಿಂದ ಶಿವಯೋಗಿಗಳು ಶಿವಯೋಗವನ್ನು ಉಪದೇಶಿಸುತ್ತಾ ದಶದಿಕ್ಕಿನಲ್ಲಿ ಉದ್ಭವಿಸಿ ಆಗಿ ಹೋಗಿದ್ದಾರೆ. "ಹನ್ನೆರಡನೆ ಶತಮಾನದಲ್ಲಿ ಅಲ್ಲಮಪ್ರಭು, ಬಸವಣ್ಣ, ಚನ್ನಬಸವೇಶ್ವರ ಮೊದಲಾದ ಪ್ರಥಮರು ಅನುಭವ ಮಂಟಪವನ್ನು ಸ್ಥಾಪಿಸಿ ವೀರಶೈವ ಮತವನ್ನು ಉದ್ಧರಿಸಿದಂತೆ, ತತ್ವ ಪ್ರಸಾರ ಮಾಡಿದರು. ಅಲ್ಲಮಪ್ರಭುದೇವರು ಶೂನ್ಯ ಸಿಂಹಾಸನಾರೂಢನಾಗಿ ಶರಣರಿಗೆ ಶಿವಾನುಭವವನ್ನು ಬೋಧಿಸಿದರು."[೬] ಈ ಪ್ರಕಾರವಾಗಿ ಲೋಕಕಲ್ಯಾಣ ಭಾವನೆಯಿಂದ ಮತ ತತ್ವಗಳ ಪ್ರಸಾರ ಕಾರ್ಯ ಮೊದಲಿನಿಂದಲೂ ಈ ನೆಲದಲ್ಲಿ ನಡೆದು ಬಂದಿದೆ. ಇಂತಹ ಪವಿತ್ರ ಪರಂಪರೆಯಲ್ಲಿ ಶಿವಯೋಗ ಮಂದಿರ ಸಂಸ್ಥೆಯು ಒಂದು ಆದರ್ಶ ಆಶ್ರಮವಾಗಿದ್ದ ಸರ್ವಸಾಧನೆಯ ಮಂತ್ರಾದಿಯೋಗದ ಸಾಧನೆಯ ಆಶ್ರಮದ ಆಶ್ರಯವಾಗಿದೆ.

೧೨ನೇ ಶತಮಾನದಲ್ಲಿ ಆಗಿ ಹೋದ ಘಟ್ಟಿವಾಳಯ್ಯ ಎಂಬ ಶರಣ ಸಾರಿದ ಕಾಲಜ್ಞಾನ ನುಡಿಯೊಂದು ಶಿವಯೋಗ ಮಂದಿರ ಸ್ಥಾಪನೆಯ ಹಿನ್ನೆಲೆಗೊಂದು ಪುಷ್ಟಿದಾಯಕವಾದ ಅಂಶವಾಗಿದೆಂಬುದಾಗಿ ತಿಳಿದುಬರುತ್ತದೆ.[೭]

ಗಿಡಿಮಾಗಡಿಯೆಂಬ ಪುರದ ಜಂಗಮದೇವ ಮೃಡಕಣಾ
ಭಿಕ್ಷವ ಬೇಡ್ಯಾನು ! ಪೊಡವಿಯೇ ಬಾಗಿ ನೀಡಲು

ಆತನು ದೃಡ ನೀಡಿಸಿಕೊಂಡನಾ !
ಮಲಾಪಹಾರಿಯ ಹುಚ್ಚನೆನಿಸ್ಯಾನು
ಲೋಲಜನಗಳು ಹೆಸರನೆ ಇಟ್ಟಾರು
ಸ್ಥಳದೊಳು ಹೂಳಿಸಿಕೊಂಡಾನು

ಈ ಕಾಲಜ್ಞಾನ ಮಾತಿನಂತೆ ೨೦ನೇ ಶತಮಾನಕ್ಕೆ ಕುಮಾರ ಶಿವಯೋಗಿ ಬಂದು ಶಿವಯೋಗ ಸಂಸ್ಥೆಯ ತೆರದು ಆತ್ಮಬಲದ ಸಂಕಲ್ಪ ಸಿದ್ಧಿಯ ಸಮಷ್ಟಿಯ ಧರ್ಮವನ್ನು ಸ್ಥಾಪಿಸಿ ಆದರ್ಶದ ಅನನ್ಯತೆ ತೋರಿದ್ದಾರೆ. ಇಂತಹ ಶಿವಯೋಗ ಮಂದಿರ ಸ್ಥಾಪನೆಯಾಗುವುದೆಂದು ಸ್ಥಳ ಸೂಚನೆ ವಿರಕ್ತರೊಬ್ಬರಿಂದ ಸೂಚಿಸಲ್ಪಡುವುದೆಂದು, ಸ್ಥಾಪನಾ ಸ್ಥಳದಲ್ಲೆ ಸಮಾಧಿಗೊಳ್ಳುವುದೆಂಬ ಅಂಶಗಳು ಜನರ ಮುಗ್ದತೆಗೆ ಇಂಬು ನೀಡುತ್ತದೆ.

ಹಾನಗಲ್ಲ ಕುಮಾರಸ್ವಾಮಿಗಳ ಜನನ, ಅವರ ವೈರಾಗ್ಯದ ಮನಸ್ಸು, ವಿದ್ಯಾಗುರುಗಳು, ದೀಕ್ಷಾ ಗುರುಗಳಾದ ಎಳಂದೂರು ಶ್ರೀ ಬಸವಲಿಂಗರು, ಬಿದರಿ ಕುಮಾರೇಶ್ವರರು, ವೈರಾಗ್ಯ ಮಲ್ಲಣಾರ್ಯರು, ವಿಜಯ ಮಹಾಂತರು, ಬಸವಲಿಂಗ ಮಹಾಸ್ವಾಮಿಗಳು ಇಂತಹ ಪ್ರೇರಣ ಶಕ್ತಿಯಿಂದಾಗಿ ಶಿವಯೋಗದಂತಹ ಸಂಸ್ಥೆ ರೂಪಗೊಳ್ಳುತ್ತದೆ. ಅದು ಕೂಡ ಶಿವಯೋಗ ಮಂದಿರ ಸ್ಥಾಪನೆಯ ಹಿನ್ನೆಲೆಗೊಂದು ಸಾಕ್ಷಿ ಎಂದರೆ ತಪ್ಪಾಗಲಾರದು. ಎಳಂದೂರು ಶ್ರೀಗಳವರು ಹಾನಗಲ್ಲ ಶ್ರೀಗಳ ಯೋಗ್ಯತೆಯನ್ನು ಕಂಡು ಮೆಚ್ಚಿ ಅವರಿಗೆ ತಮ್ಮ ಯೋಗದಂಡವನ್ನು ಕೊಟ್ಟು ಆಶೀರ್ವದಿಸಿ ಲಿಂಗೈಕ್ಯರಾದರೆ, ಶಿವಯೋಗ ಶಿಕ್ಷಣವನ್ನು ಕೊಡುವ ಮಂದಿರದ ಸಂಕಲ್ಪ ಶ್ರೀಗಳಲ್ಲಿ ಅಂದೇ ಅಂಕುರವಾಯಿತು. ಬಿದರಿ ಕುಮಾರ ಶಿವಯೋಗಿಗಳ ಅನುಗ್ರಹದಿಂದ ಹಾನಗಲ್ಲ ಪೀಠವನ್ನು ಅಲಂಕರಿಸಿ, ಬಾಗಲಕೋಟೆಯ ವೈರಾಗ್ಯದ ಮಲ್ಲಣಾರ್ಯರು ಕೊಟ್ಟ ಸಮಾಜದ ಕತ್ತಲೆಯನ್ನು ಕಳೆಯುವ ಮಾರ್ಗದ ಸಲಹೆಯನ್ನು ಪರಸ್ಪರ ವಿಚಾರ ವಿನಿಮಯ ಮಾಡಿ ಜೋಳಿಗೆ ಹಿಡಿದಾಗ ಅದೇ ಸಮಯದಲ್ಲಿ ಮಲ್ಲಣಾರ್ಯರ ಸಾವು ಘಟಿಸುತ್ತದೆ. ಹತಾಶರಾಗದೆ ಮುನ್ನಡೆದ ಆತ್ಮಶಕ್ತಿ ಸಂಕಲ್ಪದ ಮನೋಬಲ ಗುರುಗಳ ಸಂಕಲ್ಪವನ್ನು, ಪ್ರತಿಜ್ಞೆಯನ್ನು ಕೈಗೂಡಿಸಲು ಮಾಡಿದ ದೃಢನಿಶ್ಚಯ ಮತ್ತು ಹಾನಗಲ್ಲ ಶ್ರೀಗಳ ಮನೋಸ್ಥೈರ್ಯ ನಮಗೆ ಮನಗಾಣುತ್ತದೆ. "ಅನಂತಪುರ–ಕೆಳದಿಯಲ್ಲಿ ನಡೆದ ಮಂಟಪ ಪೂಜಾ ಮಹೋತ್ಸವದಲ್ಲಿ ಹಾವೇರಿ ಶಿವಬಸವ ಮಹಾಸ್ವಾಮಿಗಳವರೊಡನೆ ವಿಚಾರಿಸಿ ಶಿವಯೋಗ ಮಂದಿರ ಸಂಸ್ಥೆಗೆ ಅದರ ಸ್ಥಾಪನೆಗೆ ಜೋಳಿಗೆ ಹಾಕುವ ದೃಢನಿರ್ಧಾರ ಮಾಡಿದರು."[೮] ಹಿಡಿದ ಕಾರ್ಯವನ್ನು ಛಲಬಿಡದೆ ಸಾಧಿಸುವಂತೆ ಅದಕ್ಕೆ ಪೂರಕವಾಗಿ ೧೯೦೦ರ ನಾಲ್ಕನೆ ಅಖಿಲಭಾರತ ವೀರಶೈವ ಮಹಾಸಭೆ ನಡೆದು ಅಲ್ಲಿ ಈ ಬಗ್ಗೆ ಸರ್ವಾನುಮತದ ಒಪ್ಪಿಗೆ ದೊರೆತದ್ದು ಮತ್ತೊಂದು ಕಾರಣವಾಗುತ್ತದೆ.

"ಶ್ರೀಮದ್ವೀರಶೈವ ಮಹಾಸಭೆಯ ನಾಲ್ಕನೇ ಅಧಿವೇಶನ ಕ್ರಿ.ಶ. ೧೯೦೯ರ ಡಿಸೆಂಬರ್ ೨೮,೨೯,೩೦ ಮೂರುದಿನಗಳ ಕಾಲ ಬಾಗಲಕೋಟೆಯಲ್ಲಿ ತೆಂಗಿನ (ಟೀಕಿನ) ಮಠದ ಬೈಲಿನಲ್ಲಿ ಶ್ರೀಮಂತ ಲಖಮನಗೌಡ ಬಸವಪ್ರಭು ಸರದೇಸಾಯಿ ಸಂಸ್ಥಾನ ಒಂಟಿಮುರಿ ಅವರ ಅಧ್ಯಕ್ಷತೆಯಲ್ಲಿ ಜರುಗಿತು."[೯] ಶಿವಯೋಗ ಮಂದಿರದಂತಹ ಒಂದು ಸಂಸ್ಥೆಯನ್ನು ಸ್ಥಾಪಿಸುವಲ್ಲಿ ಜನಾಭಿಪ್ರಾಯವನ್ನು ತಿಳಿಯುವ ಸಲುವಾಗಿ ಈ ಮಹಾಸಭೆಯನ್ನು ಬಾಗಲಕೋಟೆಯಲ್ಲಿ ಕರೆಯಲಾಗಿದ್ದು ಇದುವರೆಗೆ ನಡೆದ ಮಹಾಸಭೆಗಳಿಗಿಂತ ಈ ಅಧಿವೇಶನ ಹೆಚ್ಚು ಜನಮನ್ನಣೆಯನ್ನು ಹಾಗೂ ಭಿನ್ನವಾದ ಸೈದ್ಧಾಂತಿಕ ವಿಚಾರಗಳನ್ನೊಳಗೊಂಡು ಜರಗುತ್ತದೆ. ಇದಕ್ಕೆ ಹಾನಗಲ್ಲಿನ ಕುಮಾರಸ್ವಾಮಿಗಳ ಕರ್ತೃತ್ವ ಶಕ್ತಿ, ಸತ್ಯಸಂಕಲ್ಪವೇ ಪ್ರಮುಖ ಕಾರಣ.

ಶಿವಯೋಗ ಮಂದಿರ ಸ್ಥಾಪನೆಯ ವಿಚಾರ ಪ್ರಸ್ತಾಪವಾಗಿ ನಿರ್ಣಯಗಳು ಮಂಡಿತವಾಗುವ ಪೂರ್ವದಲ್ಲಿ ಅಂದರೆ ಬಾಗಲಕೋಟೆಯ ನಾಲ್ಕನೇ ಅಧಿವೇಶನಕ್ಕೂ ಪೂರ್ವದಲ್ಲಿ ಮೂರು ಮಹಾಸಭಾ ಅಧಿವೇಶನಗಳು, ಧಾರವಾಡದಲ್ಲಿ (೧೯೦೪), ಬೆಂಗಳೂರಿನಲ್ಲಿ (೧೯೦೫), ಸೊಲ್ಲಾಪುರದಲ್ಲಿ (೧೯೦೭) ನಡೆದಿದೆ. ಇಲ್ಲಿ ಕೇವಲ 'ಶಿಕ್ಷಣ ಮತ್ತು ಧಾರ್ಮಿಕ ಶಿಕ್ಷಣ ಸಂಬಂಧಿತವಾಗಿ ಕೆಲವು ಅಂಶಗಳನ್ನು ಮಾತ್ರ ಪ್ರಸ್ತಾಪಿಸಲಾಗಿತ್ತು.' ಆದರೆ ಬಾಗಲಕೋಟೆಯಲ್ಲಿ (೧೯೦೮) ಶಿವಯೋಗ ಮಂದಿರದಂತಹ ಪೂರ್ಣ ಪ್ರಮಾಣದ ಧಾರ್ಮಿಕ ಶಿಕ್ಷಣ ತರಬೇತಿ ಸಂಸ್ಥೆಯನ್ನು ಸ್ಥಾಪಿಸಲು ತೀರ್ಮಾನಿಸಲಾಯಿತು. ಜೊತೆಗೆ ಶಿವಯೋಗ ಮಂದಿರದ ಸ್ಥಾಪನೆಯ ಕುರಿತು ಈವರೆಗೆ ನಡೆದ ಆಲೋಚನೆಗಳು ಮತ್ತು ಅಮೂರ್ತ-ಅವ್ಯಕ್ತ ಚಿಂತನೆಗಳಿಗೆ ಒಂದು ಚಾಲನೆ ಸಿಕ್ಕ ಹಿನ್ನೆಲೆಯಲ್ಲಿ ಬಾಗಲಕೋಟೆಯ ಮಹಾಸಭೆಗೆ ಚಾರಿತ್ರಿಕ ಮಹತ್ವ ಸಲ್ಲುತ್ತದೆ. ಕಾರಣ ಶಿವಯೋಗ ಮಂದಿರ ಸ್ಥಾಪನೆಯ ಹಿನ್ನೆಲೆಯಲ್ಲಿ ಈ ಅಧಿವೇಶನವೂ ಕೂಡ ಒಂದು ಮಹತ್ತರ ಅಂಶವಾಗಿರುವುದರಿಂದ ಅದು ಇಲ್ಲಿ ಹೆಚ್ಚು ಪ್ರಸ್ತುತ.

ಇನ್ನೂ ಶಿವಯೋಗ ಮಂದಿರ ಸ್ಥಾಪನೆಯ ಬಗ್ಗೆ ಮಹಾಸಭೆಯ ಎರಡನೇ ದಿನ ೨೯ನೇ ತಾರೀಖು ಮಧ್ಯಾಹ್ನ ಚರ್ಚಿಸಿ ನಿರ್ಣಯವನ್ನು ಮಂಡಿಸಲಾಗಿ ಈ ವಿಚಾರವಾಗಿ ವಿದ್ವಾಂಸರು, ಉದ್ಯಮಿಗಳು, ಅನೇಕ ಗುರು-ಹಿರಿಯರು, ಮಠದ ಸ್ವಾಮೀಜಿಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು, ಸಲಹೆಗಳನ್ನು, ಮಾರ್ಗದರ್ಶನವನ್ನು ಮಾಡಲಾಗಿ ಶಿವಯೋಗ ಸಂಸ್ಥೆಯೊಂದು ಭವಿಷ್ಯದಲ್ಲಿ ಸ್ವಾವಲಂಬಿಯಾಗಿ, ಕ್ರಿಯಾಶೀಲತೆಗೆ ಧಕ್ಕೆಯಾಗದಂತೆ ನಡೆಯುವಲ್ಲಿ ನೀಡಿದ ಮಾರ್ಗದರ್ಶಿ ನುಡಿಗಳು ಇಂತಿವೆ.[೧೦]

೧. ಅಧ್ಯಕ್ಷರಾದ ಶ್ರೀಮಂತ ಲಖಮನಗೌಡ ಬಸವಪ್ರಭು, ಬಾರ್-ಆಟ್-ಲಾ ತಮ್ಮ ಅಧ್ಯಕ್ಷ ನುಡಿಯಲ್ಲಿ ಧಾರ್ಮಿಕ ಸುಧಾರಣೆ, ಸುಶಿಕ್ಷಿತರೂ, ಸದಾಚಾರ ಸಂಪನ್ನರೂ ಆದ ಮಠಾಧಿಕಾರಿಗಳಿಂದ ಸಮಾಜಕ್ಕಾಗುವ ಲಾಭ ಕುರಿತು ಮಾತಾಡಿದರು.

ವಿದ್ಯೆಯಿಂದ, ಆಚಾರ-ವಿಚಾರಗಳಿಂದ-ನಾಗರೀಕತೆ, ಸಂಪತ್ತಿನ ಸ್ಥಿತಿಯಿಂದ ಹಿಂದುಳಿದ ನಮ್ಮ ಸಮಾಜವನ್ನು ಉನ್ನತಾವಸ್ಥೆಗೆ ತರಲು ಶಿವಯೋಗದಂತಹ ಸಂಸ್ಥೆಯು ಅಗತ್ಯ ಎಂಬುದಾಗಿ ಅವರ ಮಾತಿನ ಆಶಯವಾಗಿದೆ.

೨. ಶ್ರೀ ಚಂದ್ರಶೇಖರ ಶಾಸ್ತ್ರೀಗಳು, ತೆಲಗಿಮಠ, ದಾವಣಗೆರೆ ಇವರು 'ಶಿವಯೋಗ' ಶಬ್ದದ ಬಗ್ಗೆ ವಿವರಿಸುತ್ತಾ ಶಿವಯೋಗ ಮಂದಿರವೆಂಬ ಕಲ್ಪವೃಕ್ಷದ ಆಶ್ರಯದಿಂದ ನಮ್ಮ ಮತವು ಶಿವಯೋಗ ಬ್ರಹ್ಮಚರ್ಯ ರಕ್ಷಣ ಸದಾಚಾರ, ಸದ್ವಿದ್ಯಾವೃದ್ಧಿ ಮೊದಲಾದ ತನ್ನ ಇಷ್ಟಾರ್ಥ ಫಲಗಳನ್ನು ಪ್ರಕಾಶಿಸಲು ತುಂಬಾ ಅವಕಾಶವುಂಟಾಗುವುದು ಎಂದು ಹೇಳಿ ಶಿವಯೋಗ ಮಂದಿರದ ಸ್ಥಾಪನೆಯ ಅವಶ್ಯಕತೆಯನ್ನು ಸಮರ್ಥಿಸಿದ್ದಾರೆ.

೩. ಸೊಲ್ಲಾಪುರದ ಶ್ರೀಮಂತ 'ರಾವಸಾಹೇಬ' ಮಲ್ಲಪ್ಪಣ್ಣ ವಾರದ ಅವರು 'ಸಮಾಜದಲ್ಲಿ ಧರ್ಮ ಜಾಗೃತಿಯನ್ನುಂಟು ಮಾಡುವ ಉಪಾಯಗಳಲ್ಲಿ ಸಮಾಜದ ಗುರುವರ್ಗವನ್ನು ಸುಧಾರಿಸುವುದೆ ಮೊದಲನೆಯ ಉಪಾಯ. ಅದು ಕಾರ್ಯರೂಪದಲ್ಲಿ ಬರಬೇಕಾದರೆ ಶಿವಯೋಗ ಮಂದಿರ ಸಂಸ್ಥೆಯ ಸ್ಥಾಪನೆಯಾಗಲೇ ಬೇಕು. ಅದು ನಿರಂತರವಾಗಿ ನಡೆಯಲು ಬರಿಯ ವರ್ಗಣಿ (ಭಿಕ್ಷಾವೃತ್ತಿ)ಯಿಂದ ಆಗದೆ ಅದಕ್ಕೊಂದು ಸಹಕಾರಿ ಮಾದರಿಯ ನೂಲಿನ ಗಿರಿಯ ಸ್ಥಾಪನೆ ಅಗತ್ಯವಾಗಿ ಆಗಲೇಬೇಕೆಂದಿದ್ದಾರೆ. ಶಿವಯೋಗ ಮಂದಿರ ಮತ್ತು ಉಳಿದ ಕಾರ್ಯಗಳು ಸಾಂಗವಾಗಿ ನಡೆಯಬೇಕಾದರೆ ಅದಕ್ಕೆ ಆರ್ಥಿಕ ಬೆಂಬಲ ಬೆನ್ನೆಲುಬಾಗಿರಬೇಕೆಂಬ ದೂರದೃಷ್ಠಿಯನ್ನು ಇಲ್ಲಿ ತಿಳಿಸಿದ್ದಾರೆ.

೪. ಶ್ರೀ ಶಿವಪ್ಪ ಶಾಸ್ತ್ರಿಗಳು ಭಕ್ತ ಮಾಹೇಶ್ವರ ಬಾಲಕರನ್ನು ಸ್ವಮತ ಪರಿಜ್ಞಾನವನ್ನುಂಟು ಮಾಡುವ ಶಿವಾನುಭವ ಶಾಸ್ತ್ರಗಳಲ್ಲಿ ಚಿಕ್ಕ ವಯಸ್ಸಿನಲ್ಲಿಯೇ ಸುಲಭವಾಗಿ ತಿಳಿಯಪಡಿಸುವ ಗ್ರಂಥಗಳಿಂದ ಪರೀಕ್ಷೆಯ ಮೂಲಕ ಬುದ್ಧಿವಂತರನ್ನು ಮಾಡಿಸುವುದಲ್ಲದೆ ಶಿವಯೋಗ ಸಂಸ್ಥೆಯನ್ನು ತುಂಗಭದ್ರಾ ತೀರದಂತಹ ರಮ್ಯ ಸ್ಥಾನದಲ್ಲಿ ಸ್ಥಾಪಿಸಬೇಕೆಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆ ಮೂಲಕ ಶಿವಯೋಗ ಮಂದಿರಕ್ಕೆ ಸೂಕ್ತ ಸ್ಥಳ, ದಾಖಲಾತಿ ಮತ್ತು ಪಠ್ಯಕ್ರಮ ಕುರಿತ ವಿಚಾರದೊಂದಿಗೆ ಗಮನ ಸೆಳೆದಿದ್ದಾರೆ.

ಇದಲ್ಲದೆ ಇನ್ನೂ ಕೊಲ್ಲಾಪುರದ ಶ್ರೀ ವೀರಬಸಪ್ಪ ಶಿವಲಿಂಗಪ್ಪ ಶ್ರೇಷ್ಠಿ ಬಿ.ಎ., ಶ್ರೀ ಸಿದ್ದರಾಮಪ್ಪ ದುಂಡಪ್ಪ ಪಾವಟೆ ಬಿ.ಎ.ಎಲ್.ಎಲ್.ಬಿ, ಹೊಸದುರ್ಗದ ಶ್ರೀ ಜಿ. ಮುರಿಗೆಪ್ಪನವರು, ಶ್ರೀ ಕಲಿಗಣನಾಥಯ್ಯ ಪಂಚಾಕ್ಷರಶಾಸ್ತ್ರಿ ಗದಗ ಮೊದಲಾದವರು ಈ ಪ್ರಕಾರವಾಗಿ ಭಾಷಣ ಮಾಡಲಾಗಿ, ಅಂತಿಮವಾಗಿ ಅಧಿಕರ ಅಭಿಪ್ರಾಯ ಕೇಳಲು ಸರ್ವರು ಒಮ್ಮತದಿಂದ 'ಶಿವಯೋಗ ಮಂದಿರ' ಸ್ಥಾಪನೆಗೆ ಸಮ್ಮತಿಸಿದರು.

ಈ ಬಗ್ಗೆ ಸಮಾಜದ ಗಣ್ಯರು, ಸಾಹಿತಿಗಳು, ಸಮಾಜೋದ್ಧಾರಕರು, ಚಿಂತಕರು ತಮ್ಮದೇ ಶೈಲಿಯಲ್ಲಿ ಮೆಚ್ಚುಗೆ, ಹರ್ಷವನ್ನು ವ್ಯಕ್ತಪಡಿಸುತ್ತಾರೆ. ಅದಕ್ಕೊಂದು ಉದಾಹರಣೆಗಳೆಂದರೆ. ಪುಣೆಯಲ್ಲಿ ಪ್ರಕಟವಾಗುತ್ತಿದ್ದ "ವಂದೇ ಮಾತರಂ" ಮರಾಠಿ ಪತ್ರಿಕೆ ದಿನಾಂಕ: ೩೦.೦೧.೧೯೦೯ರಂದು ಹೀಗೆ ವರದಿ ಮಾಡಿದೆ. ಅದನ್ನು ಯಥಾವತ್ತಾಗಿ ಇಲ್ಲಿ ನಮೂದಿಸಲಾಗಿದೆ. "ಇಷ್ಟು ದಿವಸಗಳವರೆಗೆ ನಿದ್ರಾವಸ್ಥೆಯಲ್ಲಿದ್ದ ಲಿಂಗಾಯತ ಸಮಾಜವು ಈಗ ಜಾಗ್ರತವಾಗಿ ಆತ್ಮ ಸಮಾಜದ ಉನ್ನತಿಯ ಬಗ್ಗೆ ಟೊಂಕ ಕಟ್ಟಿಕೊಂಡು ನಿಂತುದುದನ್ನು ನೋಡಿ ಯಾರಿಗೆ ತಾನೆ ಆನಂದವಾಗಲಿಕ್ಕಿಲ್ಲ ಕರ್ಣಾಟಕ ದೇಶದಲ್ಲಿ ಬಂಗಾಳ, ಮಹಾರಾಷ್ಟ್ರಗಳಂತೆ ಜೀವ ಕಳೆಯು ತುಂಬಬೇಕಾದರೆ ಅದು ಲಿಂಗಾಯತ ಸಮಾಜದವರಿಂದಲೇ. ಯಾಕೆಂದರೆ–ಕರ್ನಾಟಕದಲ್ಲಿ ಅವರ ಸಂಖ್ಯೆಯೇ ಹೆಚ್ಚಿರುವುದಲ್ಲದೆ, ಶ್ರೀಮಂತ ವರ್ಗದಲ್ಲಿಯೂ, ವ್ಯಾಪರಸ್ಥರ ವರ್ಗದಲ್ಲಿಯೂ, ಒಕ್ಕಲಿಗರ ವರ್ಗದಲ್ಲಿಯೂ ಅವರ ಅಂಗವೇ ವಿಶೇಷವಾಗಿರುವುದು. ಇನ್ನು ಈ ಸಮಾಜಕ್ಕೆ ಶಿಕ್ಷಣದ ಸಂಸ್ಕಾರವಷ್ಟು ದೊರೆಯಲಿಕ್ಕೆ ಹತ್ತಿತೆಂದರೆ ನಮ್ಮ ಕರ್ನಾಟಕದ ಅಭ್ಯುದಯ ಪ್ರಾರಂಭವಾಗುವುದು. ಈ ಅಭ್ಯುದಯಕ್ಕೆ ಅಂತಃಕಲಹವು ಮಾತ್ರ ಅಡ್ಡವಾಗಲಿಕ್ಕಿಲ್ಲವೆಂದು ನಾವು ಸೌಮ್ಯವಾಗಿ ಸೂಚಿಸುತ್ತೇವೆ."[೧೧]

ಹೀಗೆ ಬಾಗಲಕೋಟೆಯ ಅಧಿವೇಶನ ಹಾನಗಲ್ಲ ಕುಮಾರಸ್ವಾಮಿಗಳ ಮಾರ್ಗದರ್ಶನದಲ್ಲಿ ಬಹಳಷ್ಟು ಅಚ್ಚುಕಟ್ಟುತನದಲ್ಲಿ ಜನರ ಒಮ್ಮತದ ಒಮ್ಮನಸ್ಸಿನ ಉತ್ಸಾಹದಲ್ಲಿ ಶಿವಯೋಗ ಮಂದಿರದ ಸ್ಥಾಪನೆಗೆ ಕಾರಣವಾಗುತ್ತದೆ. ಹಾಗಾಗಿ ಇದು ಪ್ರಾಮುಖ್ಯತೆ ಪಡೆದಿದೆ.

ಶಿವಯೋಗ ಮಂದಿರದ ಸ್ಥಾಪನೆಯ ಹಿನ್ನೆಲೆಯಲ್ಲಿ ಆಲೋಚನಾ ಕಮೀಟಿಯು ಒಂದು ಬಹು ಪ್ರಮುಖವಾದ ಅಂಶವಾಗಿದೆ. ಈ ಆಲೋಚನಾ ಕಮೀಟಿ ಅಥವಾ "ಕಾರ್ಯನಿರ್ವಾಹಣೆ ಸಂಘ"ದ ರಚನೆಯೂ ಕೂಡ ತನ್ನದೇ ಆದ ಪ್ರಾಮುಖ್ಯತೆಯನ್ನು ಹೊಂದಿದೆ. ಜೊತೆಗೆ ಅದು ಹೇಗೆ ಪ್ರಭಾವ ಬೀರಿದೆ ಎಂಬುದನ್ನು ನಾವು ಇಲ್ಲಿ ಕಾಣಬಹುದಾಗಿದೆ.

"ಬಾಗಲಕೋಟೆಯ ಮಹಾಸಭೆಯು ಮುಗಿದ ಮೂರನೇ ದಿನಕ್ಕೆ ಅಂದರೆ ೧೯೦೮ ಡಿಸೆಂಬರ್ ೩೧ಕ್ಕೆ ಕಾರ್ಯನಿರ್ವಾಹಕ ಸಂಘ ಅಥವಾ ಆಲೋಚನಾ ಕಮೀಟಿ ಸ್ಥಾಪನೆಯಾಗಿ ಕಾರ್ಯಾಚರಣೆ ಮಾಡಿತು."[೨] ಈ ಆಲೋಚನಾ ಸಭೆಯ ಅಧ್ಯಕ್ಷರಾಗಿ ಶ್ರೀಮಂತ ರಾವಸಾಹೇಬ ಮಲ್ಲಪ್ಪಣ್ಣ ವಾರದ ಅವರನ್ನು ಆಯ್ಕೆ ಮಾಡಲಾಯಿತು. ಸದಸ್ಯರಾಗಿ ಗೋಕಾಕಿನ ಶಿವಮೂರ್ತಿ ಕಣಬುರ್ಗಿ, ವೀರಣ್ಣ ಮಾನ್ವಿ ಗದಗ ಇವರನ್ನು ಆರಿಸಲಾಯಿತು.

ಶಿವಯೋಗ ಮಂದಿರ ಸ್ಥಾಪನೆಯಲ್ಲಿ ಇಡಬೇಕಾದ ಮೊದಲ ಹೆಜ್ಜೆಯೆಂದರೆ ಆಡಳಿತಾತ್ಮಕ ಸ್ವರೂಪ, ಭೌತಿಕ ತಳಹದಿಯ ನಿಲುವುಗಳು ಇವುಗಳನ್ನು ರೂಪಿಸುವುದೇ ಆಲೋಚನ

ಕಮೀಟಿಯ ಮೂಲ ಉದ್ದೇಶವಾಗಿತ್ತು. ಆದರೆ ಮುಂದೆ ಅದು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಆಲೋಚನಾ ಕಮೀಟಿಯು ಪ್ರಸಿದ್ಧ ಪತ್ರಿಕೆಗಳಲ್ಲಿ ಧಾರ್ಮಿಕ ಶ್ರದ್ಧೆಯುಳ್ಳ ಪ್ರಭಾವಿ ಮುಖಂಡರು, ಸಾಮಾಜಿಕ ಪ್ರಾಂತೀಯ ಗಣ್ಯರಿಂದ ಶಿವಯೋಗ ಮಂದಿರ ಸ್ಥಾಪನೆಗೆ ಯೋಗ್ಯವಾದ ಸ್ಥಳಗಳಾವುವು. ಆ ಸ್ಥಳದ ನಕಾಶೆ, ಅಗತ್ಯ ಸೂಚನೆಗಳನ್ನು, ಧನ ಸಂಗ್ರಹವನ್ನು ಮಾತ್ರ ಆಲೋಚಿಸಬಹುದಿತ್ತೆ ವಿನಃ ಶಿವಯೋಗ ಮಂದಿರವನ್ನು ಎಲ್ಲಿ ಸ್ಥಾಪಿಸಬೇಕು? ಎಂಬ ಜಿಜ್ಞಾಸೆ ಕಮೀಟಿಯ ಮುಂದಿರಲಿಲ್ಲ. ಹಾಗಾಗಿ ಇದೊಂದು ದೊಡ್ಡ ಸಮಸ್ಯೆಯಾಯಿತು. ಏಕೆಂದರೆ ಎಲ್ಲಾ ದೊಡ್ಡ ದೊಡ್ಡ ಪ್ರಾಂತ್ಯದ ಪ್ರಭಾವಿ ವ್ಯಕ್ತಿಗಳು, ಸಮಾಜ ಬಾಂಧವರು ಅತಿ ಉತ್ಸಾಹದಲ್ಲಿ ಅದನ್ನು ತಮ್ಮ ತಮ್ಮ ನೆಲದಲ್ಲೆ ಸ್ಥಾಪಿಸಲು ಬಯಸಿದ್ದರು. ಇದು ಆಲೋಚನಾ ಕಮೀಟಿಯ ನಿಧಿಸಂಗ್ರಹದಲ್ಲಿ ತೊಡಕಾಗಿ ತೋರಿದ್ದರಿಂದ ಈ ಸಮಸ್ಯೆಗೆ ಪರಿಹಾರ ದೊರೆಯದೆ ಹೋಯಿತು. ಕೊನೆಯದಾಗಿ ಹಾನಗಲ್ಲ ಕುಮಾರಸ್ವಾಮಿಗಳ ಸಲಹೆಯ ಮೇರೆಗೆ ಅಂತಿಮವಾಗಿ ಮಹಾಮಹಿಮರೂ, ಪರಮಪೂಜ್ಯರೂ, ಶಿವಾನುಭವಚಾರ್ಯರೂ ಆದ (ಚಿತ್ತರಗಿ) ಇಳಕಲ್ಲ ಸಂಸ್ಥಾನಮಠದ ಶ್ರೀ ವಿಜಯಮಹಾಂತ ಸ್ವಾಮಿಗಳು ತೋರಿದ ಸ್ಥಾನದಲ್ಲೇ ಮಂದಿರ ಸ್ಥಾಪಿಸಲು ಒಮ್ಮತದಿಂದ ಆಲೋಚನಾ ಕಮೀಟಿಯಲ್ಲಿ ನಿರ್ಧರಿಸಲಾಯಿತು.

ಹೀಗೆ ಆಲೋಚನಾ ಕಮೀಟಿಯವರು ಆಡಳಿತಾತ್ಮಕ ವಿಚಾರವನ್ನು ತನ್ನ ಪರವಾಗಿಟ್ಟುಕೊಂಡು ಸ್ಥಳದ ಹುಡುಕಾಟ, ಪರಿಶೀಲನೆ, ಆಯ್ಕೆಯ ಅಂತಿಮ ತೀರ್ಮಾನವನ್ನು ಚಿತ್ತರಗಿ ಸಂಸ್ಥಾನದ ವಿಜಯಮಹಾಂತ ಮಹಾಸ್ವಾಮಿಗಳು ತೋರಿಸಿದ ಸ್ಥಳದಲ್ಲಿ ಸ್ಥಾಪಿಸಬೇಕೆಂದು ನಿಶ್ಚಯಿಸಲಾಯಿತು.

ಹಾನಗಲ್ಲ ಕುಮಾರಸ್ವಾಮಿಗಳು ಎಂದೂ, ಯಾವುದೇ ಕಾರ್ಯವನ್ನು ಯಾವುದೇ ಕಾರಣಕ್ಕೂ ಮುಂದೂಡಿದವರಲ್ಲ. ಹಾಗಾಗಿ ಹದಿನೈದು ದಿನದಲ್ಲಿ ಇಳಕಲ್ಲಿಗೆ ಬಂದು ವಿಜಯಮಹಾಂತರಲ್ಲಿ ಸ್ಥಳವನ್ನು ತೋರಿಸಬೇಕೆಂದು ಆಗ್ರಹಿಸಿದರು. ಅದರಂತೆ ೨೦-೩೦ ಜನ ಭಕ್ತವರ್ಗದೊಂದಿಗೆ ಪ್ರಯಾಣ ಆರಂಭಿಸಿದ ವಿಜಯಮಹಾಂತರು ಅನೇಕ ಸ್ಥಳಗಳನ್ನು ಸುತ್ತಿ ಭಕ್ತರು ಸೂಚಿಸಿದ ಸ್ಥಳದಲ್ಲಿನ ದೋಷಗಳನ್ನು ತೋರಿಸುತ್ತಾ ಅಂತಿಮವಾಗಿ ಕೊಟ್ಟೂರು ಬಸವೇಶ್ವರನ ಗದ್ದುಗೆಗೆ ಮಂಗಳಾರತಿ ನೆರವೇರಿಸಿ ಸ್ಥಳ ಆಯ್ಕೆಯನ್ನು ತೋರಿದರು. ಅಲ್ಲಿಯೇ ಇದ್ದ ಸದ್ಗೃಹಸ್ಥನಾಡಿದ ಮಾತಿಗೆ ವಿಜಯಮಹಾಂತ ಸ್ವಾಮಿಜಿಗಳು "ಶಿವನ ಕಾರ್ಯಕ್ಕೆ ಶಂಕೆಯನ್ನು ಮಾಡಬಾರದು ಎಲ್ಲವೂ ಅನುಕೂಲವೇ ಆಗುವುದು. ಮೊದಲು ಮುಂದಿನ ಕಾರ್ಯಕ್ಕೆ ಪ್ರವರ್ತರಾಗಿರಿ ಎಂದು ಸಮ್ಮತಿ ಸೂಚಿಸಿದರು".[೩]

"ಮಾರನೆ ದಿನ ಹಾನಗಲ್ಲ ಕುಮಾರಸ್ವಾಮಿಗಳು, ಕಿತ್ತೂರ ರೇವಣಸಿದ್ಧಪ್ಪನವರು, ಗುಳೇದಗುಡ್ಡದ ಜರ್ಲಿ ಮುರಿಗಪ್ಪ ಮೊದಲಾದವರು ಅಲ್ಲಿನ ಹತ್ತಿರವೆ ಇದ್ದ ಮಂಗಳೂರು

ಗ್ರಾಮಕ್ಕೆ ಧಾವಿಸಿ ಆ ಹೊಲದ ಯಜಮಾನನಿಗೆ ತಮ್ಮ ಉದ್ದೇಶದ ಬಗ್ಗೆ ವಿವರಿಸಿ ಡಂಬಗಳ್ಳಿಯ ಆ ಹೊಲವನ್ನು ಅಂತಿಮವಾಗಿ ಎರಡನೂರ ಐವತ್ತು ರೂಗಳಿಗೆ ಗೊತ್ತುವಳಿ ಮಾಡಿ ಖರೀದಿ ಮಾಡಿಕೊಂಡು ಬಂದರು."[೧೪]

ಹೀಗೆ ಶಿವಯೋಗ ಮಂದಿರದ ಸ್ಥಾಪನೆಗೆ ಕಾರಣವಾದ ಸಮಕಾಲೀನ ಸಂದರ್ಭಗಳನ್ನು ಅವಲೋಕಿಸಿದಾಗ ಸಮಾಜ ಸಂಘಟನೆಯ ದೃಷ್ಟಿಕೋನ ಅಂದಿನ ಲಿಂಗಾಯತ ಸಮಾಜ, ಸಮಾಜದಲ್ಲಿನ ಅನಕ್ಷರತೆ, ಬಡತನ, ಮೂಢನಂಬಿಕೆ, ಆರ್ಥಿಕ ದಿವಾಳಿತನ, ಶೈಕ್ಷಣಿಕ ಸಂಸ್ಥೆಗಳ ಕೊರತೆ, ಸಾಮಾಜಿಕ ಚಿಂತಕರ ಕರ್ತವ್ಯ ಲೋಪ, ಸರಿಯಾಗಿರದ ಅರಿವಿನ ಕೊರತೆ, ಉದಾಸೀನತೆ, ವ್ಯಾಪಕವಾದ ವಿಶಾಲ ಮನೋಭಾವದ ಕೊರತೆ ಹೀಗೆ ಹತ್ತು ಹಲವು ಸಂಗತಿಗಳು ಈ ಪಟ್ಟಿಗೆ ಸೇರುತ್ತವೆ.

ಇನ್ನೂ ಧಾರ್ಮಿಕ ಜಾಗೃತಿಯ ಹಿನ್ನೆಲೆಯಲ್ಲಿ ಸಾಮಾಜಿಕ ಪುನರುಜ್ಜೀವನಕ್ಕೆ ಸಮರ್ಥ ನಾಯಕನ ಕೊರತೆ, ಸರಿಯಾದ ಒಮ್ಮತವಾದ ಅಭಿಪ್ರಾಯವಿರದ ಧರ್ಮಗುರುಗಳು, ಕರ್ತವ್ಯಕ್ಕಿಂತ ಸ್ವಸುಖಕ್ಕೆ ಜಾರಿದ ಗುರುವರ್ಗ, ವ್ಯಕ್ತಿ–ವ್ಯಕ್ತಿಗಳಲ್ಲಿ ಪರಸ್ಪರ ಮಧುರ ಸಂಬಂಧ ಸ್ಥಾಪಿಸುವಲ್ಲಿನ ಐಕ್ಯತೆಯ ಕೊರತೆಗಳು, ಮಾನವೀಯ ಚಟುವಟಿಕೆಗಳ ವಿವಿಧ ಕ್ಷೇತ್ರದಲ್ಲಿನ ಬೆಳವಣಿಗೆಗೆ ಉತ್ತೇಜನ ನೀಡುವುದು ಹಾಗೂ ಔದ್ಯೋಗಿಕ, ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ರಂಗದಲ್ಲಿ ಸಮಾಜವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವುದು. ಇವು ಸದೃಢ ಸಮಾಜ ನಿರ್ಮಾಣದ ಪರಿಕಲ್ಪನೆಯ ಹಿನ್ನೆಲೆಯಲ್ಲಿ ರೂಪಗೊಂಡ ಸಮಕಾಲೀನ ಸಮಾಜಮುಖಿ ಸಂದರ್ಭಗಳಾಗಿವೆ. ಇವುಗಳಲ್ಲದೆ ೧೯ನೇ ಶತಮಾನದ ಉತ್ತರಾರ್ಧದಲ್ಲಿ ಲಿಂಗಾಯತ ಸಮಾಜದ ದುಸ್ಥಿತಿ ಹಾಗೂ ಶಿಕ್ಷಣದಿಂದ ವಂಚಿತರಾದ ವೀರಶೈವ–ಲಿಂಗಾಯತರು. ನಾಡಿನುದ್ದಗಲಕ್ಕೂ ಹಂಚಿಹೋಗಿದ್ದ ಸಮುದಾಯದವರಲ್ಲಿ ಒಮ್ಮತವಾದ ಯಾವುದೇ ಸಿದ್ಧಾಂತ–ತತ್ವಗಳಿಲ್ಲದೆ ಇರುವುದು. ಔದ್ಯೋಗೀಕರಣ, ಜಾಗತೀಕರಣದಂತಹ ಪ್ರಸ್ತುತ ಸಂದರ್ಭಕ್ಕೆ ದೇಶದ ಮುಖ್ಯ ವಾಹಿನಿಯಲ್ಲಿ ಬೆರೆಯದೆ ದೂರ ಉಳಿದದು. ಕ್ರಿಯಾಶೀಲ, ಲಾಭದಾಯಕವಾದ ವ್ಯಾಪಾರ ವ್ಯವಹಾರದಲ್ಲಿ ತಮ್ಮನ್ನು ತೊಡಗಿಸಿಕೊಳ್ಳದೆ ಆರ್ಥಿಕವಾಗಿ ಹಿಂದುಳಿದವರಾಗಿ ಉಳಿದು ಹೋಗಿದ್ದರು. ವಿಶ್ವಕ್ಕೆ ಬಸವಾದಿ ಶರಣರ ಸಂದೇಶವನ್ನು ಸಾರಿದ ಕಾಯಕ ನಿಷ್ಠಾವಂತರ ವರ್ಗವು ಯಾವುದೇ ರಾಜಕೀಯ ಮುಖ್ಯ ವಾಹಿನಿಯಲ್ಲಿ ದೃಢತೆಯಿಂದ ತಲೆ ಎತ್ತಿರಲಿಲ್ಲ. ಎಲ್ಲಕ್ಕಿಂತ ಮಿಗಿಲಾಗಿ ಸಮಾಜ ನಿರ್ಮಾಣದಂತ ಸೂಕ್ಷ್ಮತೆ ಗ್ರಹಿಸಿ ಮಾರ್ಗದರ್ಶಿಯಾಗಿ ಮಾರ್ಗದರ್ಶಕವನ್ನು ಮಾಡುವಂತ ಹೃದಯ ವಿಶಾಲವಂತರ ಕೊರತೆ ಇತ್ತು ಎಂಬುದು ಸಮಕಾಲೀನ ಸಂದರ್ಭಗಳ ಅವಲೋಕನದಿಂದ ತಿಳಿದುಬರುತ್ತದೆ.

೨. ಧ್ಯೇಯೋದ್ದೇಶಗಳು

ಇಂಗ್ಲೀಷ್ ಸಾರ್ವಭೌಮ ಸರಕಾರಕ್ಕೆ ಒಳಪಟ್ಟ ಈ ಹಿಂದೂಸ್ಥಾನದಲ್ಲಿ ವೀರಶೈವ ಮತೀಯ ಸಂಖ್ಯೆಯು ಆ ಕಾಲಕ್ಕೆನೆ ಸುಮಾರು ಮೂವತ್ತೈದು ಲಕ್ಷದವರೆಗೆ ಇರುವುದೆಂದು ಪರಿಗಣಿಸಿದ್ದರು. ಈ ಮತೀಯರು ಮುಂಬಯಿ ಆಧಿಪತ್ಯದ ದಕ್ಷಿಣ ಭಾಗದಲ್ಲಿಯೂ, ಮೈಸೂರು ಸೀಮೆಯಲ್ಲಿಯೂ ವಿಶೇಷವಾಗಿರುವುದು ಸರ್ವರಿಗೂ ವಿಧಿತವಾದ ಅಂಶವೇ ಆಗಿದೆ. “ವೀರಶೈವ ಮತವು ಅನಾದಿ ಸಂಶಿದ್ಧಮಾಗಿಯೂ, ವೇದಗಮ ಪ್ರತಿಪಾದಿಯಾಗಿಯೂ ಇರುತ್ತದೆ. ಅಂದರೆ ವೇದದ ಅಂತ್ಯಭಾಗದ ಉಪನಿಷತ್ತುಗಳಲ್ಲಿ ಮತ್ತು ದಿವ್ಯಾಗಮಗಳು ಉತ್ತರಭಾಗಗಳಲ್ಲಿ ವೀರಶೈವ ಮತ ತತ್ವಗಳು ವಿಶದವಾಗಿ ವಿವರಿಸಲ್ಪಟ್ಟಿರುವುದಲ್ಲದೆ ಈ ಮತವು ಆಗಮಾಂತರ್ಗತ ಮಂತ್ರ, ಲಯ, ಹಠ, ರಾಜ ಈ ನಾಲ್ಕು ಯೋಗಗಳನ್ನು ಒಳಕೊಂಡ ಶಿವಯೋಗಕ್ಕೆ ಅನುಸರಿಸಿರುತ್ತದೆ.”[೧೫]

ಪೂರ್ವದಲ್ಲಿ ಸದಾನಂದನೆಂಬ ಶಿವಯೋಗಿಯು ಶ್ರೀಶೈಲದಲ್ಲಿದ್ದು ಶಿವಯೋಗವನ್ನು ಉಪದೇಶಿಸಿ, ಶ್ವೇತಪಿರಿಗಳಾದಿ ಶಿಷ್ಯರನ್ನು ಉದ್ಧರಿಸಿದನು. ರೇಣುಕಾರಾಧ್ಯ ಮೊದಲಾದ ಆಚಾರ್ಯರು ಮಲಯಾಚಲಾದಿ ದಿವ್ಯಸ್ಥಾನಗಳಲ್ಲಿ ಶಿವಯೋಗ ಮಂಟಪದಲ್ಲಿ ಕುಳಿತು, ಅಗಸ್ತ್ಯ ಮುಂತಾದ ಮುನಿಗಳಿಗೆ ಸಿದ್ಧಾಂತವನ್ನು ಉಪದೇಶಿಸಿದರು. ಮಲ್ಲಿಕಾರ್ಜುನ ಯೋಗಿ, ಮಂಚಣಪಂಡಿತ ಮೊದಲಾದವರು ಮಾದಿರಾಜ ಮೊದಲಾದ ಶಿಷ್ಯರಿಗೆ ಶ್ರೀಗಿರಿ ಮೊದಲಾದ ಕ್ಷೇತ್ರಗಳಲ್ಲಿ ವೀರಶೈವ ಸಿದ್ಧಾಂತವನ್ನು ಉಪದೇಶಿಸಿದರು. ಬಸವೇಶ್ವರ ದೇವರು, ಚನ್ನಬಸವೇಶ್ವರ ದೇವರು ಮುಂತಾದ ಮಹಿಮಾಶಾಲಿಗಳು ಕಲ್ಯಾಣದಲ್ಲಿ ವಿಚಾರ ಮಂಟಪವನ್ನು ಏರ್ಪಡಿಸಿದ್ದರು. ಅಲ್ಲಿ ಶೂನ್ಯ ಸಿಂಹಾಸನಾರೂಢರಾಗಿ ಪ್ರಥಮ ಸಭೆಯಲ್ಲಿ ಅಲ್ಲಮಪ್ರಭುದೇವರು ಶಿವಾನುಭವವನ್ನು ಬೋಧಿಸಿದರು. ಈ ರೀತಿಯಾಗಿ ಮತ ತತ್ವಗಳ ಬೆಳವಣಿಗೆಯ ಪ್ರಯತ್ನವು ಮೊದಲಿನಿಂದ ನಡೆದು ಬಂದಿರುತ್ತದೆ. ಹಾಗಾಗಿ ಯೋಗ ಮಾರ್ಗದಿಂದುಂಟಾಗತಕ್ಕ ಸ್ಥಿತಿ ಸೂಚಕಗಳಾದ ಸಮಾಧಿ, ಕೈವಲ್ಯ, ಶಿವಾಧೀನ ವಿಮಾನ, ಲಿಂಗೈಕ್ಯ ಮುಂತಾದವುಗಳು ಈ ಮತದಲ್ಲಿ ಸರ್ವತ್ರ ಪ್ರಚಾರದಲ್ಲಿರುತ್ತವೆ. ಇದರೊಂದಿಗೆ ಯೋಗವು ಪ್ರತಿಯೊಬ್ಬ ವೀರಶೈವನಿಗೆ ಅಗತ್ಯವಾದುದೆಂದು ಅದಕ್ಕಾಗಿ ಪ್ರತಿಯೊಂದು ಗ್ರಾಮದಲ್ಲಿ ಶಿವಯೋಗ ಮಂದಿರಗಳು ಇದ್ದರೂ ಸಾಲದು ಅದಕ್ಕಾಗಿ ಜ್ಞಾನವುಳ್ಳ, ಸ್ವಮತಾಭಿಮಾನಿಗಳು ಒಂದೆಡೆ ಸೇರಿ ಅನೇಕ ವಿಷಯವನ್ನು ಚರ್ಚಿಸಿ ಯೋಗ್ಯ ನಿರ್ಣಯ ಕೈಗೊಂಡು ಶಿವಯೋಗ ಮಂದಿರವನ್ನು ಸ್ಥಾಪಿಸಲು ಮುಂದಾಗುತ್ತಾರೆ.

ಈ ಹಿನ್ನೆಲೆಯಲ್ಲಿ ಶಿವಯೋಗ ಮಂದಿರದಂತಹ ಸಂಸ್ಥೆಯ ಸ್ಥಾಪನೆಗೆ ಕಾರಣಗಳಾವುವು? ಮತ್ತು ಅದರ ಸ್ಥಾಪನಾ ಉದ್ದೇಶಗಳಾವುವು? ಅದರ ಪ್ರಸ್ತುತ ಉದ್ದೇಶೋಪಾಯಗಳಾವುವು ಎಂಬುದನ್ನು ಈ ಭಾಗದಲ್ಲಿ ತಿಳಿಸಲಾಗಿದೆ. ಅವು ಈ ಕೆಳಗಿನಂತಿವೆ.

ಶಿವಯೋಗ ಮಂದಿರದ ಸ್ಥಾಪನೆಯು ಧಾರ್ಮಿಕ ನೆಲೆಗಟ್ಟಿನಲ್ಲಿ ನೋಡಬೇಕೆ ವಿನಃ ಅದನ್ನು ರಾಜಕೀಯವಾಗಿ ಅಥವಾ ಮತ್ತಾವುದೋ ಲಾಭದಾಯಕ ದೃಷ್ಟಿಕೋನದಿಂದಲ್ಲ. ಸಮಾಜದ ಅಭಿವೃದ್ಧಿಯ ಹಿನ್ನೆಲೆಯಲ್ಲಿ ವಿಮರ್ಶಿಸಬೇಕೆ ಹೊರತು ವ್ಯಕ್ತಿ, ಜಾತಿ, ಧರ್ಮದ ನೆಲೆಯಲ್ಲಿ ವಿಚಾರ ಮಾಡಬಾರದು. ಈ ಹಿನ್ನೆಲೆಯಲ್ಲಿ ಶಿವಯೋಗ ಮಂದಿರದಂತಹ ಸಂಸ್ಥೆಯನ್ನು ಸ್ಥಾಪಿಸುವಲ್ಲಿ ಆಗಿನ ಕಾಲದ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂದರ್ಭಿಕ ಸ್ಥಿತಿ-ಗತಿಗಳು ಹೇಗಿದ್ದವು ಎಂಬುದನ್ನು ನಾವು ಈ ಹಿಂದೆ ಅವಲೋಕಿಸಿದ್ದೇವೆ. ಈ ಹಿನ್ನೆಲೆಯಲ್ಲಿ ಶಿವಯೋಗ ಮಂದಿರದ ಸ್ಥಾಪನಾ ಉದ್ದೇಶಗಳಾವುವು ಎಂಬುದನ್ನು ಆ ಕಾಲದಲ್ಲಿ ಒದಗುತ್ತಿದ್ದ ಧಾರ್ಮಿಕ ಶಿಕ್ಷಣದ ಪಥ್ಯಗಳ ಸುಧಾರಣೆ ಮತ್ತು ಅಂದು ಲಭ್ಯವಿದ್ದ ಸಾಧಕನಿಗೆ ಮಠವನ್ನು ನಿರ್ವಹಿಸಲು ಬೇಕಾದ ತಪೋಬಲದ ಪ್ರಾಪ್ತಿ ಹಾಗೂ ಧಾರ್ಮಿಕವಾದ ಅನುಕೂಲ ಮತ್ತು ಪ್ರತಿಕೂಲ ವಾತಾವರಣದ ನೆಲೆಯಲ್ಲಿಯೇ ಸಂಸ್ಥೆಯ ಸ್ಥಾಪನಾ ಉದ್ದೇಶಗಳು ಕಂಡುಬರುತ್ತವೆ.

"ನಾಡಿನ ಗ್ರಾಮ-ನಗರಗಳಲ್ಲಿ ಬಹು ಸಂಖ್ಯೆಯಲ್ಲಿರುವ ವೀರಶೈವ ಮಠಗಳು ಸಾಂಸ್ಕೃತಿಕ ಕೇಂದ್ರಗಳು ಅವುಗಳ ಅಧ್ಯಕ್ಷರಾದ ಧರ್ಮಗುರುಗಳು ಸುಶಿಕ್ಷಿತರಾಗದೆ ಇದ್ದುದ್ದರಿಂದ ಅವು ಸಮಾಜದ ಸಮಷ್ಟಿಯ ಜಾಗೃತಿಗೆ ಅರ್ಥಪೂರ್ಣವಾಗಿ ಸ್ಪಂದಿಸದೇ ಸಂಕುಚಿತ ಮನೋವೃತ್ತಿಯ ಅಂಧ ಪರಂಪರೆಯ ಸುಳಿಗೆ ಸಿಕ್ಕು ಅಂತಃಸತ್ವ ಕಳೆದುಕೊಂಡು ನಗ್ನವಾದಾಗ ಅದಕ್ಕೊಂದು ನೆಲೆ-ಬೆಲೆಯನ್ನು ಒದಗಿಸುವ ಸಲುವಾಗಿ ಶಿವಯೋಗ ಮಂದಿರದಂತಹ ಸಂಸ್ಥೆಯನ್ನು ಸ್ಥಾಪಿಸಬೇಕಾಯಿತು".[೧೬]

"ರಾಜಕೀಯ ಕಾರಣದಿಂದ ಚದುರಿದ್ದ ಧರ್ಮೀಯರನ್ನು ಸಂಘಟಿಸುವುದು ಆಧುನಿಕತೆಗೆ ಸ್ಪಂದಿಸುತ್ತಿದ್ದ ಇಡೀ ಸಮಾಜದಲ್ಲಿ ಅನುಕೂಲ, ಸೌಲಭ್ಯಗಳನ್ನು ಪಡೆದು ಮುಂಚೂಣಿಯಲ್ಲಿರುವುದು ಧಾರ್ಮಿಕವಾಗಿ ಏಕಸೂತ್ರತೆಯಲ್ಲಿ ತೊಡಗುವುದು. ಧಾರ್ಮಿಕತೆಯ ಬಗ್ಗೆ ಸಮಗ್ರ ಧರ್ಮೀಯರಿಗೆ ಪರಿಜ್ಞಾನವನ್ನುಂಟು ಮಾಡುವ ಅನುಕೂಲ ಒದಗಿಸುವುದು. ಧಾರ್ಮಿಕ ಚರಿತ್ರೆಗಾಗಿ ಸಂಬಂಧಿಸಿದ ಅಪ್ರಕಟಿತ ಗ್ರಂಥಗಳನ್ನು ಪ್ರಸಿದ್ಧ ಪಡಿಸುವುದು. ಪ್ರಕಟಿತ ಗ್ರಂಥಗಳ ಮಾಹಿತಿಗಳನ್ನು ಆಧರಿಸಿ ಈ ಧರ್ಮದ ಚರಿತ್ರೆ ಬರೆಯುವುದು. ಧಾರ್ಮಿಕ ಶಿಕ್ಷಣವನ್ನು ಒದಗಿಸುವುದು ಮತ್ತು ಧರ್ಮದ ತತ್ವ ವಿಚಾರಗಳನ್ನು ಅನುಸರಿಸುವ ನಿಮಿತ್ತ ಪ್ರಯತ್ನಿಸುವುದು."[೧೭]

ಹೀಗೆ ದೊಡ್ಡದಾದ ಈ ಸಮಾಜಕ್ಕೆ ಶಿಕ್ಷಣದ ಅನುಕೂಲವನ್ನುಂಟು ಮಾಡುವುದು, ಸಂಸ್ಕೃತ ಪಾಠಶಾಲೆಗಳನ್ನು ಸ್ಥಾಪಿಸುವ ಪುನರುಜ್ಜೀವನಗೊಳಿಸುವ ಕಾರ್ಯದಲ್ಲಿ ತೊಡಗುವುದು ಈ ಎಲ್ಲಾ ಕಾರಣವಾಗಿ ಶಿವಯೋಗ ಸಂಸ್ಥೆಯು ಸ್ಥಾಪಿಸಲಾಗುತ್ತದೆ.[೧೮]

"ಮುಂಬೈ ಪ್ರಾಂತದ ಉತ್ತರ ಕರ್ನಾಟಕ ಆಗತಾನೇ ಪಾಶ್ಚಾತ್ಯ ಶಿಕ್ಷಣದ ಕಡೆ ಸಾಗುತ್ತಿತ್ತು. ಆದರೆ ಬಹುಸಂಖ್ಯಾತ, ವ್ಯಾಪಾರಸ್ಥ ಒಕ್ಕಲುತನದ ವರ್ಗವೊಂದು ಸೂಕ್ತ ತಿಳುವಳಿಕೆ ಇಲ್ಲದೆ, ಧಾರ್ಮಿಕ ಅರಿವು ಗಳಿಸದೆ ಹೋಗುತ್ತಿತ್ತು. ಅಂತಹ ವರ್ಗವೊಂದು ಸಮಾಜದ ಮುಖ್ಯವಾಹಿನಿಯ ಭಾಗವಾಗಿ ತೊಡಗಿಕೊಳ್ಳುವ ಅಗತ್ಯವಿದ್ದ ಕಾರಣವಾಗಿ ಶಿವಯೋಗ ಸಂಸ್ಥೆಯು ಸ್ಥಾಪನೆಗೊಳ್ಳುತ್ತದೆ."[೧೮]

ಸವದತ್ತಿ ಕಲ್ಮಠದಲ್ಲಿ ಜರುಗಿದ ಬಸವ ಪುರಾಣದ ಕಾಲಕ್ಕೆ ರಾಜಕೀಯ ಶಕ್ತಿಗಳು, ಸಮಾಜದ ಶ್ರೀಸಂಪನ್ನರು, ಧನವಂತರ ಸಂಗಮವು ಸಮಾಜದ ಏಳ್ಗೆಗಾಗಿ ಆಲೋಚಿಸಿದ ಹೊಸ ರೂಪದ ಪರಿಣಾಮವಾಗಿ ಶಿವಯೋಗ ಮಂದಿರದಂತಹ ತರಬೇತಿ ಸಂಸ್ಥೆಯ ಸ್ಥಾಪನೆಗೆ ಕಾರಣವಾಗುತ್ತದೆ.

"ಮಕ್ಕಳು ಸದಾಚಾರಿಗಳಾಗುವುದಕ್ಕೆ ತಂದೆ-ತಾಯಿಗಳ, ಪೋಷಕರ ಸದ್ಗುಣಗಳು ಕಾರಣವಾಗಿರುವಂತೆ ಸಮಾಜದ ಸದಾಚಾರಕ್ಕೆ ಗುರುವರ್ಗದವರ ಆಚರಣೆಗಳು ಪ್ರಮುಖ ಕಾರಣವಾಗುತ್ತದೆ. 'ವೃಕ್ಷದ ಮೂಲಕ್ಕೆರೆದ ನೀರು ಶಾಖೋಪಶಾಖೆಯಾಗಿ ವ್ಯಾಪಿಸುತ್ತದೆ. ಗುರುವರ್ಗ ವಿದ್ಯಾವಂತ ಸದಾಚಾರಿಗಳಾಗಿದ್ದರೆ ಶಿಷ್ಯಕೋಟಿ ಸುಧಾರಿಸುತ್ತದೆ.' ಎಂಬ ಮಾತು ಮಲ್ಲಣಾಚಾರ್ಯರು, ಎಳಂದೂರು ಬಸವಲಿಂಗ ಸ್ವಾಮಿಗಳಂತ ಗುರುಗಳಿಂದ ಅರಿತಿದ್ದ ಹಾನಗಲ್ಲ ಕುಮಾರಸ್ವಾಮಿಗಳು ಗುರುವರ್ಗಕ್ಕೆ ಮೊದಲು ಶಿಕ್ಷಣ ಒದಗಿಸಿದರೆ ಉಚ್ಚ ಪ್ರಗತಿಯ ಸಮಾಜವನ್ನು ಕಾಣಬಹುದೆಂಬ ಉದ್ದೇಶದಿಂದ ಶಿವಯೋಗದಂತಹ ಸಂಸ್ಥೆ ಸ್ಥಾಪಿಸುತ್ತಾರೆ."[೧೯]

"ವೀರಶೈವ ಸಮಾಜದಲ್ಲಿ ಸದ್ಯ ದುರ್ದೈವದಿಂದ ಧರ್ಮಗ್ಲಾನಿಯುಂಟಾಗಿರುತ್ತಿದ್ದು ಅದನ್ನು ಹೋಗಲಾಡಿಸುವುದಕ್ಕೂ, ಶೂನ್ಯ ಸಿಂಹಾಸನಾಧ್ಯಕ್ಷರು, ಪಂಚ ಸಿಂಹಾಸನಾಧೀಶ್ವರರು, ಪಟ್ಟಚರಮೂರ್ತಿಗಳು ಮೊದಲಾದ ಪೂಜ್ಯರಾದ ಸ್ವಾಮಿಗಳಿಗೆ ಯೋಗ್ಯವಾದ ಶಿಕ್ಷಣವನ್ನು ಕೊಟ್ಟು ಅವರಿಂದ ಸಮಾಜದಲ್ಲಿ ಭಕ್ತ ಮಹೇಶ್ವರರಿಬ್ಬರಿಗೂ ಶಿವಾನುಭವ ಶಾಸ್ತ್ರಜ್ಞಾನವನ್ನು ಪ್ರಸಾರಗೊಳಿಸಲಿಕ್ಕೆ ಶ್ರೀ ಶಿವಯೋಗ ಮಂದಿರವೆಂಬ ಹೆಸರಿನ ಒಂದು ಸಂಸ್ಥೆಯನ್ನು ಸ್ಥಾಪಿಸಿದರು."[೨೦]

ಅದೇ ರೀತಿ ದಾವಣಗೆರೆಯ ಮಾಗಾನಹಳ್ಳಿ ದೊಡ್ಡ ಬಸಪ್ಪನವರು ಶಿವಯೋಗ ಮಂದಿರದ ಸ್ಥಾಪನೆಯ ಉದ್ದೇಶದಲ್ಲಿರುವ ಧಾರ್ಮಿಕ ಅವಶ್ಯಕತೆಗಳನ್ನು ಮುಖ್ಯವಾಗಿ ಐದು ಅಂಶಗಳಲ್ಲಿ ವಿಜ್ಞಾಪಿಸಿದ್ದಾರೆ ಅವುಗಳು ಇಂತಿವೆ.[೨೧]

೧. ಶ್ರೀಮದ್ವೀರಶೈವ ಮತದ ಪ್ರಾಶಸ್ತ್ಯವನ್ನೇ ಪಾತಾಳಗತವಾಗಿ ಮಾಡಲು ಮಹಾಸಮರ್ಥರಾದ ಕೆಲವರು ಹಲವು ಪ್ರಯತ್ನಗಳನ್ನು ಮಾಡುತ್ತಲಿದ್ದರೂ, ಈ ವೀರಶೈವ ಜಗತ್ತು ಯಾವ

ಮಹಾಪುರುಷರಿಂದ ಸೃಷ್ಟಿಸಲ್ಪಟ್ಟಿತೋ ಆತನ ಮತ್ತು ಮತ ಸ್ಥಾಪನಾಚಾರ್ಯರ ಅಲ್ಲದೆ ಮತೋದ್ಧಾರಕರ ಘನತವಾದ ಆಶೀರ್ವಾದ ಬಲವು ಈ ಮತವನ್ನು ವಜ್ರ ಪಂಚರೋಪಮಾನವಾಗಿ ಸಂರಕ್ಷಣೆ ಮಾಡಿಕೊಂಡು ಬರುತ್ತಲಿದೆ.

೨. ಶತ್ರುಗಳಿಲ್ಲದವನು, ನೇತ್ರಗಳಿಲ್ಲದವನು ಯಾವ ಕಾರ್ಯವನ್ನಾದರೂ ಸಾಧಿಸಲಾರನು. ಆದಕಾರಣ ನಮ್ಮಗಳ ಬಾಂಧವರ ಏಳಿಗೆಯನ್ನು ನಿರ್ಮೂಲ ಮಾಡಲು ಪ್ರಯತ್ನಶೀಲರಾದ ಅನ್ಯರ ಸಮುದಾಯವು ನಿಮ್ಮಗಳ ನೇತ್ರಗಳಿಗೆ ಗೋಚರಿಸಿದುದರಿಂದಲೇ ಈ ಮಹಾ ಪ್ರಯತ್ನಗಳನ್ನು ನೀವುಗಳು ಕೈಗೊಂಡು ನಿವಾರಿಸಲು ಪ್ರತಿಜ್ಞಾರೂಢರಾಗುತ್ತೀರಿ.

೩. ಲೋಹಗಳಲ್ಲಿ ಬಂಗಾರವು ಹೇಗೆ ಶ್ರೇಷ್ಠವೋ ಹಾಗೆ ಮತಗಳಲ್ಲಿ ವೀರಶೈವ ಮತವು ಶ್ರೇಷ್ಠವೆಂದು ವೇದಾಂಗವು ಪುರಾಣಾದಿಗಳೇ ಉದ್ಘೋಷಿಸುತ್ತಲಿವೆ.

೪. 'ಪ್ರಕೃತ ನಮ್ಮ ಬಾಂಧವರನ್ನು ಅವಹೇಳನ ಮಾಡತಕ್ಕವರನ್ನು ಹೊಗಳತಕ್ಕ ಸಮಯವೊದಗಿತು. ಕೋಪಿಸದೆ ಕ್ಷಮಿಸಬೇಕೆಂದು ಪ್ರಾರ್ಥಿಸುತ್ತೇನೆ.' ಅನ್ಯರು ಅವರವರ ಮತ ನಿರ್ಬಂಧನೆಗನುಸಾರವಾಗಿ ನಿತ್ಯ ಕರ್ಮಗಳನ್ನು ಭಯ-ಭಕ್ತಿ ವಿಶಿಷ್ಟರಾಗಿ ಪ್ರತಿನಿತ್ಯವೂ ಸ್ತ್ರೀ-ಪುರುಷರಾದಿಯಾಗಿ ನಡೆಸುತ್ತ ಬರುವುದರ ಬಲವೇ ಅವರುಗಳಿಗೆ ರಾಜಾಂಗದಲ್ಲಿ ಅಧಿಕಾರ ಮುಂತಾದ ಸುಫಲಗಳು ಲಭಿಸುವದಕ್ಕೆ ಸಾಧಕವಾಗಿ, ಅವರು ಸೌಖ್ಯೋನ್ನತಿಗಳನ್ನು ಪಡೆದಿರುವುದೇ ಸಾಕ್ಷಿಭೂತವಾಗಿದೆ. ಆದುದಕ್ಕೆ ಕಾರಣ ಹಿಂದುಳಿದಿರುವ ನಮ್ಮ ಬಾಂಧವರೆಲ್ಲರಿಗೂ ನಮ್ಮ ಮತದ ಕಟ್ಟಳೆಗನುಸಾರವಾಗಿ ನಿತ್ಯ ಕರ್ಮರಾದ ಶ್ರೀ ಶಿವಪೂಜಾದಿಗಳನ್ನು ಸಮಂತ್ರವಾಗಿ, ಶುದ್ಧವಾಗಿ ತಮ್ಮ ತಮ್ಮ ಅನುಕೂಲಕ್ಕೆ ತಕ್ಕಂತೆ ತಪ್ಪದೆ ನಡೆಸುತ್ತ ಬಂದರೆ ನಮಗೂ ಇಹಲೋಕದಲ್ಲಿ ಸಂಪದ್ಗೌರವಾದಿಗಳೂ, ಪರದಲ್ಲಿ ಸದ್ಗತಿಯೂ ಪ್ರಾಪ್ತವಾಗುವುದೆಂದು ನಾನು ನಿಸ್ಸಂದೇಹವಾಗಿ ನಂಬಿದ್ದೇನೆ.

೫. ನಮ್ಮ ಶ್ರೀ ಗುರುಪರಂಪರೆಗಳಲ್ಲಿ ಯಾರು ಸತ್ಕ್ರಿಯಾ ಸಂಪನ್ನರಾಗಿರುತ್ತಾರೋ ಅಂಥವರಲ್ಲಿ ಸಾಮರಸ್ಯಾದಿಗಳನ್ನು ಭಕ್ತರು ಅಂಗೀಕರಿಸಬೇಕು. ಯಾರು ಸದಾಚಾರ ಸಂಪನ್ನರಾದ ಭಕ್ತನೋ ಅವನಲ್ಲಿ ಸಾಮರಸ್ಯಾಧಿಕಾರವನ್ನು ಜಂಗಮ ಮೂರ್ತಿಗಳು ನಡೆಸಿಕೊಡಬೇಕು. ಈ ಕಟ್ಟಳೆಯನ್ನು ಖಂಡಿತವಾಗಿ ಮಾಡುವುದರಿಂದ ಅನಾಚಾರಣೆಗೆ ಅವಕಾಶವೇ ಉಂಟಾಗುವುದಿಲ್ಲ. ಅತಿಥಿಗಳು ತಮ್ಮ ಗೋತ್ರ-ಸೂತ್ರಗಳನ್ನು ಸರಿಯಾಗಿ ತಿಳಿಸಿದರೆ ಅಂಥವರನ್ನು ಸನ್ಮಾನಿಸಬೇಕೆಂತಲೂ, ಜನಜನಿತವಾಗಿರುವಂತೆ ಏರ್ಪಡಿಸಿದಲ್ಲಿ ಅವಿದ್ಯೆತೆಗೂ, ಅನಾಚಾರಕ್ಕೂ ಆಸ್ಪದವುಂಟಾಗಲಾರದೆಂದು ಘೃತಪಡಿಸುತ್ತೇನೆ. ಈ ಯಾವತ್ತೂ ಕಾರಣಗಳಿಂದ ನಮ್ಮ ಧರ್ಮೋದ್ಧಾರ ಕಾರ್ಯಗಳು ನಮ್ಮ ಗುರುವರ್ಗದವರಿಂದಲೇ ಜರುಗಿಸಲ್ಪಡಬೇಕಾಗಿದೆ.

ಆದರೆ ಅವರು ಈಗ ಅತಿ ಅಜ್ಞಾನ ಸ್ಥಿತಿಯಲ್ಲಿರುವರು. ಅವರನ್ನು ವಿದ್ಯಾವಂತರನ್ನಾಗಿ ಮಾಡದ ವಿನಃ ನಮ್ಮ ಸುಧಾರಣೆ ಆಗದು. ಆದ ಕಾರಣ ಶಿವಯೋಗ ಮಂದಿರ ಸ್ಥಾಪಿಸುವುದು ಅತ್ಯವಶ್ಯ ಎಂದಿದ್ದಾರೆ.

ಶಿವಯೋಗ ಮಂದಿರ ಶಿವಯೋಗಿಗಳ, ಧರ್ಮಗುರುಗಳ ತರಬೇತಿಯ ಆದರ್ಶ ಕೇಂದ್ರವಾಗಿದೆ. ಇಲ್ಲಿ ಸದಾಚಾರ, ಜಿತೇಂದ್ರಿಯತ್ವ, ವೇದಾಗಮಾದಿಗಳ ಜ್ಞಾನ, ಬ್ರಹ್ಮವಿದ್ಯಾ ವಿಚಾರ ಅಂದರೆ ಲಿಂಗಾಂಗ ಸಾಮರಸ್ಯ ಜ್ಞಾನ ಮೊದಲಾದ ಶಿವಯೋಗಾಂಗಭೂತ ವಿಷಯಗಳಲ್ಲಿ ಧರ್ಮಗುರುಗಳನ್ನು ನಿರತರನ್ನಾಗಿ ಮಾಡಲಾಗುವುದು. ಅವರಲ್ಲಿ ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಚೆನ್ನಾಗಿ ನೆಲೆಗೊಳಿಸುವುದು. ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಮೊದಲಾದ ಸಿದ್ಧಾಂತಗಳ ತಾರತಮ್ಯ ಜ್ಞಾನವುಂಟಾಗದಂತೆ ಅವರು ಶಿವಯೋಗ ಸಿದ್ಧಿಯನ್ನು ಪಡೆಯಬೇಕೆಂಬುದೂ ಈ ಮಂದಿರದ ಮುಖ್ಯ ಉದ್ದೇಶಗಳು. ಈ ಉದ್ದೇಶಗಳು ನೆರವೇರುವುದಕ್ಕೆ ಮಾಡಬೇಕಾದ ಉಪಾಯಗಳನ್ನು ಈ ಕೆಳಗಿನಂತೆ ಹೇಳಲಾಗಿದೆ.[೨೨]

೧. ಶಿವಯೋಗ ಮಂದಿರದಲ್ಲಿ ಗುರುಸ್ಥಲದ ಯೋಗ್ಯ ಮಠಸ್ಥರ ಹನ್ನೆರಡುವರ್ಷದೊಳಗಿನ ಹುಡುಗರನ್ನು ತೆಗೆದುಕೊಂಡು ಅವರಿಗೆ ಕನ್ನಡ, ಸಂಸ್ಕೃತ ಭಾಷಾಜ್ಞಾನವನ್ನು ಚೆನ್ನಾಗಿ ಮಾಡಿಕೊಡುವುದಲ್ಲದೆ ವೀರಶೈವ ಧರ್ಮಗ್ರಂಥ ವೇದಾಗಮೋಪನಿಷತ್, ಸ್ಮೃತಿಪುರಾಣ ಪುರಾತನೋಕ್ತಿಗಳ ಅಭ್ಯಾಸವನ್ನು ಮಾಡಿಸಿ ಲಿಂಗಾಂಗ ಸಾಮರಸ್ಯ ಜ್ಞಾನವನ್ನು ಅವರಲ್ಲಿ ಉಂಟುಮಾಡಿಕೊಡುವುದು, ಈ ವಟುಗಳು ೨೫,೩೫ ಹಾಗೂ ೪೫ ವರ್ಷ ವಯಸ್ಸಿನವರಾಗುವವರೆಗೆ ಸ್ತ್ರೀ ದರ್ಶನವಿಲ್ಲದಂತೆ ಶಿವಯೋಗ ಮಂದಿರದಲ್ಲಿದ್ದು, ಬ್ರಹ್ಮಚರ್ಯ ಮೊದಲಾದ ಸದ್ಗುಣ, ಸದಾಚಾರ ಸಂಪನ್ನರಾಗಿ, ಶಿವಯೋಗ ಸಿದ್ಧಿಯನ್ನು ಪಡೆದುಕೊಂಡು ನಂತರ ಅಲ್ಲಲ್ಲಿನ ಗುರುಪೀಠಗಳಿಗೆ ಭಕ್ತರ ಉದ್ಧಾರಾರ್ಥಕವಾಗಿ ಅವರನ್ನು ಸಿದ್ಧ ಮಾಡುವುದು.

೨. ಶಿವಯೋಗ ಮಂದಿರದಿಂದ ಶಾಖಾಮಂದಿರಗಳನ್ನು ಅಲ್ಲಲ್ಲಿ ಸ್ಥಾಪಿಸಿ ಅವುಗಳ ಮೂಲಕ ಸರ್ವರಿಗೂ ಶಿವಾನುಭವದ ಬೋಧೆಯಾಗುವಂತೆ ಏರ್ಪಡಿಸುವದು.

೩. ಮಂದಿರದಲ್ಲಿ ಒಂದು ಗ್ರಂಥಾಲಯವನ್ನು ಸ್ಥಾಪಿಸಿ ಅದರಲ್ಲಿ ಸ್ವಮತ, ಪರಮತಗಳ ಗ್ರಂಥಗಳನ್ನು ವಿಶೇಷವಾಗಿ ಸಂಗ್ರಹಿಸಿ ಶಿವಯೋಗ ಮಂದಿರಕ್ಕೆ ಬಂದವರು ಗ್ರಂಥಗಳ ಮೂಲಕ ಅಥವಾ ಶಾಸ್ತ್ರಗಳ ಮೂಲಕ ಅಥವಾ ಚರ್ಚೆಯ ಮೂಲಕ ಧರ್ಮ ಸಂಬಂಧವಾದ ತಮ್ಮ ಸಂಶಯಗಳನ್ನು ತೊಲಗಿಸಿಕೊಳ್ಳುವಂತೆ ಮಾಡುವುದು.

೪. ಶಿವಕೀರ್ತನಕಾರರು ಈಗ ವಿರಳವಾಗಿರುವುದರಿಂದ ಸ್ವಮತ ಸುಧಾರಣೆಗನುಕೂಲವಾಗುವ ರೀತಿಯಲ್ಲಿ ಕೀರ್ತನೆಗಳನ್ನು ಸಿದ್ಧಮಾಡಿಸಿ ಕೀರ್ತನಕಾರರನ್ನು ಹೆಚ್ಚಿಸಿ ತನ್ಮೂಲಕ ಶಿವಧರ್ಮಜ್ಞಾನವನ್ನು ಸಮಾಜದಲ್ಲಿ ಉಂಟುಮಾಡುವುದು.

೫. ಉಪನ್ಯಾಸಕರನ್ನು ಸರ್ವತ್ರ ಕಳುಹಿಸಿ ಅವರು ಧಾರ್ಮಿಕ ವ್ಯವಹಾರಿಕ ವಿಷಯಗಳ ಸುಧಾರಣೆಯನ್ನು ಕುರಿತು ವೀರಶೈವ ಮಂಡಳಿಗೆ ಬೋಧಿಸುವಂತೆ ಮಾಡುವುದು.

೬. ಮಂದಿರದಲ್ಲಿ ಆಕಳುಗಳನ್ನು ಕೂಡಿಸಿ ತನ್ಮೂಲಕ ವೀರಶೈವರಿಗೆ ಮುಖ್ಯವಾದ ಅನುಷ್ಠಾನಗಳಲ್ಲಿ ಒಂದಾದ ಭಸ್ಮವನ್ನು ವಿಧ್ಯುಕ್ತವಾಗಿ ಮಾಡಿಸಿ, ಭಸ್ಮ ರಚನಾ ಕ್ರಮವನ್ನು ಬೇರೆ ಸ್ಥಳಗಳಲ್ಲಿಯೂ ಪರಿಶುದ್ಧವಾದ ರೀತಿಯಿಂದ ಮಾಡಿಕೊಳ್ಳುವುದಕ್ಕೆ ಮಾರ್ಗತೋರಿಸುವುದು.

೭. ಧರ್ಮ ಜೀವನ ರೂಪವಾದ ಲಿಂಗವನ್ನು ಶಾಸ್ತ್ರೋಕ್ತವಾಗಿ ಪಂಚ ಸೂತ್ರಕ್ಕನುಸರಿಸಿ ರಚಿಸುವಂತೆ ಏರ್ಪಡಿಸಿ ಆ ಕ್ರಮವನ್ನು ಸರ್ವತ್ರ ಪ್ರಚಾರದಲ್ಲಿ ತರುವುದು.

೮. ಶಾಲಾ ಮಾಸ್ತರರು ಮುಂತಾದ ಸರಕಾರಿ ಉದ್ಯೋಗಸ್ಥರು ವರ್ಷಕ್ಕೆ ಒಂದು ತಿಂಗಳು ಹಕ್ಕಿನ ರಜೆಯನ್ನು ಪಡಕೊಂಡ ಕಾಲದಲ್ಲಿ ಅಥವಾ ತಮಗೆ ಅನುಕೂಲವಿದ್ದ ಬೇರೆ ಕಾಲಗಳಲ್ಲಿ ಶಿವಯೋಗ ಮಂದಿರಕ್ಕೆ ಬಂದು ಮತತತ್ವ ವಿಚಾರ ಮಾಡಿಕೊಂಡು ಹೋಗಿ, ತಮಗೆ ಅನುಕೂಲವಾದಾಗ್ಗೆ, ತಾವು ವಾಸಿಸುವ ಗ್ರಾಮದ ಮತ್ತು ನೆರೆ-ಹೊರೆಯ ಗ್ರಾಮಗಳ ವೀರಶೈವರಿಗೆ ಆಗಾಗ್ಗೆ ಉಪನ್ಯಾಸ ಮೂಲಕವಾಗಿಯೂ, ಪ್ರಾಕೃತ ಭಾಷೆಯಲ್ಲಿ ಸುಲಭ ಶೈಲಿಯಿಂದ ಸರ್ವರಿಗೂ ತಿಳಿಯುವಂತೆ ಚಿಕ್ಕ ಚಿಕ್ಕ ಪುಸ್ತಕಗಳನ್ನು ರಚಿಸುವದರಿಂದಲೂ ಶಿವಾನುಭವವು ಸರ್ವತ್ರ ವ್ಯಾಪಿಸುವಂತೆ ಮಾಡುವುದು.

೯. ಈ ಮತದ ವೃದ್ಧರಾದ ಭಕ್ತ ಮಾಹೇಶ್ವರರೂ ಇನ್ನುಳಿದ ಮುಮುಕ್ಷಗಳು ಈ ಶಿವಯೋಗ ಮಂದಿರಕ್ಕೆ ಬಂದು, ಶಿವಾನುಭವ ಶಾಸ್ತ್ರಗಳನ್ನು ಓದಿ ಅಥವಾ ತಿಳಿದುಕೊಂಡು ತಮ್ಮ ಬಂಧುಗಳಲ್ಲಿಯೂ, ಪರಿಚಿತರಲ್ಲಿಯೂ ಮುಖ್ಯವಾಗಿ ಸ್ತ್ರೀ ವರ್ಗದಲ್ಲಿಯೂ ಮತಧರ್ಮ ಜ್ಞಾನವನ್ನು ಪಸರಿಸುವಂತೆ ಮಾಡುವುದು. ಅವರಲ್ಲಿ ಶಿವಯೋಗ ಸಾಧನಾಸಕ್ತರಾದವರಿಗೆ ಮಂದಿರದಲ್ಲಿ ಸ್ಥಿರವಾಗಿರಲಿಕ್ಕೆ ಮಂದಿರದ ನಿಯಮಕ್ಕನುಸರಿಸಿ ಅನುಕೂಲಪಡಿಸುವುದು.

೧೦. ಒಕ್ಕಲುತನ, ವ್ಯಾಪಾರ ಮುಂತಾದ ಉದ್ಯೋಗಸ್ಥರು ತಮ್ಮ ಅನುಕೂಲ ಕಾಲದಲ್ಲಿ ಶಿವಯೋಗ ಮಂದಿರಕ್ಕೆ ಬಂದು ಸಾಧ್ಯವಾದ ಮಟ್ಟಿಗೆ ಧರ್ಮಜ್ಞಾನ ಮಾಡಿಕೊಳ್ಳುವಂತೆ ಏರ್ಪಡಿಸುವುದು.

೧೧. ಧರ್ಮ ಪ್ರಸಾರವನ್ನು, ಶಿವಕೀರ್ತನೆ, ಶಿವಭಜನೆ, ಶಿವಪುರಾಣ ಮುಂತಾದ ಅನೇಕ ಮಾರ್ಗಗಳಿಂದ ಹೆಚ್ಚು ಶೀಘ್ರವಾಗಿ ಮಾಡಲಿಕ್ಕೆ ಬರುವುದರಿಂದ ಅವುಗಳಿಗೆಲ್ಲ ಸಾಧನವಾದ ಸಂಗೀತ ವಿದ್ಯೆಯನ್ನು ತಕ್ಕವರಿಗೆ ಕಲಿಸಲು ಅನುಕೂಲ ಮಾಡಿಕೊಡುವುದು.

೧೨. ಅನಾದಿಯಿಂದ ವೀರಶೈವ ಮತಬೋಧಕ ಕಾರ್ಯವನ್ನು ಕೈಗೊಂಡ ಕಾಯಕದ ಗಣಂಗಳು ತಮ್ಮ ಕರ್ತವ್ಯವನ್ನು ಮರೆತು ಕೇವಲ ತಮ್ಮ ಹೊಟ್ಟೆ ಹೊರೆದುಕೊಳ್ಳುವುದಕ್ಕೆ

ರೂಪಧಾರಿಗಳಾಗಿ ಮಾತ್ರ ಈಗ ಸಂಚರಿಸಿ ದುಡ್ಡು ಸೆಳೆಯುತ್ತಿರುವರು. ನಮ್ಮ ಪುರಾತನರು ಈ ಕಾಯಕ ಸ್ಥಾಪನೆ ಮಾಡಿದ ಉದಾತ್ತ ತತ್ವವನ್ನು ಪ್ರಚಾರದಲ್ಲಿ ತರುವುದಕ್ಕಾಗಿ ಅವರನ್ನು ಶಿವಯೋಗ ಮಂದಿರಕ್ಕೆ ಬರಮಾಡಿಕೊಂಡು, ಅವರಿಗೆ ತಕ್ಕ ಶಿಕ್ಷಣವನ್ನು ಕೊಟ್ಟು ಅವರ ಸ್ಥಿತಿಯನ್ನು ಸುಧಾರಿಸಿ, ಬಳಿಕ ಅವರವರ ಕಾಯಕಗಳನ್ನು ಮಾಡಲಿಕ್ಕೆ ಅಪ್ಪಣೆ ಕೊಟ್ಟು ಶಿವಧರ್ಮವನ್ನು ಪ್ರಚಾರಪಡಿಸುವಂತೆ ಮಾಡುವುದು.

೧೩. ವೀರಶೈವ ಧರ್ಮಜೀವನ ರೂಪವಾದ ಲಿಂಗಧಾರಣೆ, ಲಿಂಗಪೂಜೆ ಮುಂತಾದ ವಿಧಿಗಳನ್ನು ಸಶಾಸ್ತ್ರವಾಗಿ ಪ್ರತಿಯೊಂದು ಗ್ರಾಮದ ಗುರುಸ್ಥಲದ ಮಠದ ಅಯ್ಯನವರು ಅಭ್ಯಾಸ ಮಾಡುವುದಕ್ಕೆ ಅನುಕೂಲ ಮಾಡಿಕೊಟ್ಟು ಅವುಗಳನ್ನು ಸಶಾಸ್ತ್ರವಾಗಿ ಪ್ರಚಾರದಲ್ಲಿ ತರುವುದಕ್ಕೆ ಯತ್ನ ಮಾಡುವುದು.

೧೪. ವೀರಶೈವ ಧರ್ಮಶಾಸ್ತ್ರವು ಸಂಸ್ಕೃತ ಭಾಷೆಯಲ್ಲಿ ವಿಶೇಷವಾಗಿರುವುದರಿಂದ ಅದರ ಭಾಷಾಂತರವು ಸುಲಭವಾಗಿ ತಿಳಿಯುವಂತೆ ದೇಶೀಯ ಭಾಷೆಗಳಲ್ಲಿ ಗ್ರಂಥಗಳನ್ನು ಮುದ್ರಿಸಿ ಅಲ್ಪ ಬೆಲೆಯಿಂದ ಎಲ್ಲರಿಗೂ ಸಿಗುವಂತೆ ಯತ್ನ ಮಾಡುವುದು.

೧೫. ಮತ ಗ್ರಂಥಗಳನ್ನು ಅಭ್ಯಾಸ ಮಾಡಿದ ವೀರಶೈವ ಇಂಗ್ಲೀಷ್ ಪಂಡಿತರನ್ನು ಆರಿಸಿ ಅವರನ್ನು ಈ ಸಂಸ್ಥೆಗೆ ಸೇರಿಸಿಕೊಂಡು, ಅವರಿಂದ ಶಿವಯೋಗ ಮಂದಿರದ ವ್ಯವಸ್ಥೆಯನ್ನು ನಡೆಸಿ ಸಾಧ್ಯವಾದ ಮಟ್ಟಿಗೆ ಮತ ಗ್ರಂಥಗಳನ್ನು ಇಂಗ್ಲೀಷ್ ಭಾಷೆಯಲ್ಲಿ ಬರೆಯಿಸುವುದು. ಅವರಿಂದ ಅಲ್ಲಲ್ಲಿ ವಿದ್ಯಾರ್ಥಿಗಳಿಗೂ, ವೀರಶೈವ ಜನಸಾಮಾನ್ಯಕ್ಕೂ ಧರ್ಮ ಸಂಬಂಧದ ವ್ಯಾಖ್ಯಾನಗಳನ್ನು ಕೊಡಿಸುವುದು. ಮಹತ್ವದ ಪ್ರಸಂಗಗಳಲ್ಲಿ ದೇಶದಲ್ಲೆಲ್ಲ ನಡೆಯುವ ಧರ್ಮ ಪರಿಷದಗಳಿಗೆ ಅವರು ಹೋಗುವಂತೆ ಮಾಡಿ, ನಮ್ಮ ಮತತತ್ವಗಳನ್ನು ಪ್ರಸಿದ್ಧ ಮಾಡುವುದು. ತಕ್ಕ ಪ್ರಸಂಗಗಳನ್ನು ನೋಡಿ ಸರ್ಕಾರಕ್ಕೆ ಧರ್ಮ ರಕ್ಷಣೆಯ ಬಗ್ಗೆ ಬೇಕಾಗುವ ಯಥಾರ್ಥ ಮಾಹಿತಿಯನ್ನು ಅವರಿಂದ ಕೊಡಿಸುವುದು ಮತ್ತು ಅವರು ಜಗತ್ತಿನಲ್ಲೆಲ್ಲ ನಡೆದಿರುವ ಧರ್ಮ ಸಂಸ್ಥೆಗಳ ಪರಿಚಯವನ್ನು ಮಾಡಿಕೊಂಡು ಅವರ ಸಂಗಡ ಪತ್ರವ್ಯವಹಾರ ನಡೆಸುವಂತೆ ಪ್ರಯತ್ನಿಸುವುದು.

೧೬. ವೀರಶೈವ ಮತಪರವಾಗಿ ಭಾಷ್ಯಗಳು, ಆಗಮಗಳು, ಉಪನಿಷತ್ತುಗಳು ಈ ಮತದ ಪೂರ್ವಿಕರಿಂದ ಕ್ರೋಢೀಕರಿಸಲ್ಪಟ್ಟ ಅನೇಕ ಸಂಸ್ಕೃತ, ಕನ್ನಡ ಗ್ರಂಥಗಳು ಇನ್ನೂ ಸಿಕ್ಕಿರುವುದಿಲ್ಲ. ಕೆಲವು ತಾಡೋಲೆಯ ಮೇಲೆ ಬರೆಯಲ್ಪಟ್ಟಿದ್ದು ಅವು ಮುಖ್ಯವಾಹಿನಿಗೆ ಬಂದಿರುವುದಿಲ್ಲ. ಸಿಗದೇ ಇದ್ದ ಗ್ರಂಥಗಳು ಎಲ್ಲೆಲ್ಲಿ ಇವೆ ಎಂಬುದನ್ನು ಶೋಧಮಾಡಿ ಯಾವತ್ತು ಮತ ಗ್ರಂಥಗಳನ್ನು ಮುಖ್ಯವಾಹಿನಿಗೆ ತಂದು ಪ್ರಸಿದ್ಧ ಮಾಡುವುದು.

೧೭. ಸಾಧ್ಯವಾದ ಹಾಗೆ ಭಕ್ತ ಮಾಹೇಶ್ವರರಲ್ಲಿ ಸಂಸಾರಿಗಳಾದರೂ ಬ್ರಹ್ಮಚರ್ಯ ಪಾಲನೆ ಮಾಡಿ ಮತತತ್ವಗಳನ್ನು ಅಭ್ಯಾಸ ಮಾಡಲಿಕ್ಕೆ ಶಿವಯೋಗ ಮಂದಿರದಲ್ಲಿ ಅನುಕೂಲತೆಯನ್ನು ಮಾಡಿಕೊಡುವುದು.

೧೮. ವೀರಶೈವ ಧರ್ಮ ಗ್ರಂಥಗಳ ಅಭ್ಯಾಸವನ್ನು ಪ್ರಚಾರದಲ್ಲಿ ತರಬೇಕಾದುದರಿಂದ ಧರ್ಮ ಗ್ರಂಥಗಳ ಪರೀಕ್ಷೆಯನ್ನಿಟ್ಟು ಅದರಲ್ಲಿ ತೇರ್ಗಡೆ ಹೊಂದಿದವರಿಗೆ ಬಹುಮಾನಗಳನ್ನು ಕೊಟ್ಟು ಉತ್ತೇಜನ ಕೊಡುವುದು.

೧೯. ವರ್ಷಕ್ಕೊಮ್ಮೆ ಶಿವರಾತ್ರಿಯಲ್ಲಿ ಎಲ್ಲ ಜನರನ್ನು ಬರಮಾಡಿಕೊಂಡು ಧರ್ಮಜ್ಞರಾದ ವಿದ್ಯಾವಂತರಿಂದ ವ್ಯಾಖ್ಯಾನ, ಕೀರ್ತನ, ಭಜನ ಮುಂತಾದವುಗಳ ದ್ವಾರಾ ಧರ್ಮಬೋಧವನ್ನು ಮಾಡಿಸುವುದು.

ಹಾನಗಲ್ಲ ಕುಮಾರಸ್ವಾಮಿಗಳ ಸ್ವಾನುಭವ ಅವರಿಗೆ ಮಾರ್ಗದರ್ಶಕರಾಗಿ ನಿಂತ ಎಳಂದೂರ ಬಸವಲಿಂಗ ಮಹಾಸ್ವಾಮಿಗಳು ಮತ್ತು ಬಾಗಲಕೋಟೆಯ ವೈರಾಗ್ಯದ ಮಲ್ಲಣಾರ್ಯರು ಇವರೊಂದಿಗಿನ ಸಂಪರ್ಕ, ಮಾರ್ಗದರ್ಶನ, ಸಲಹೆ ಮತ್ತು ವೀರಶೈವ ಸಮಾಜದ ಮುಖಂಡರ ಸಮಾಜಪರ ಕಾಳಜಿ ಹಾಗೂ ಅದಕ್ಕೆ ಕ್ರಿಯಾತ್ಮಕ ಸ್ಪಂದನ, ಬ್ರಿಟಿಷ್ ಅಧಿಪತ್ಯದ ಅನುಷಂಗಿಕ ಪರಿಣಾಮ, ಆಧುನಿಕತೆಯ ಪ್ರಭಾವದಿಂದಾಗುತ್ತಿದ್ದ ವಿಲೋಮತೆ, ಧಾರ್ಮಿಕತೆಯ ಉನ್ನತಿಗೆ ಕಾರಣವಾಗುತ್ತದೆ. ಪ್ರಗತಿಶೀಲ ಚಿಂತನೆ ಮತ್ತು ಇವೆಲ್ಲವುಗಳ ಜೊತೆಗೆ ಆ ಕಾಲದ ಧರ್ಮಗ್ಲಾನಿ ಇಂತಹ ಹತ್ತು ಹಲವಾರು ಕಾರಣವಾಗಿ ಶಿವಯೋಗ ಮಂದಿರದಂತಹ ತರಬೇತಿ ಸಂಸ್ಥೆಯು ಸ್ಥಾಪನೆಯಾಗುತ್ತದೆ. ಈ ಮೇಲಿನ ಉದ್ದೇಶಗಳ ಪೂರ್ತಿಗಾಗಿ ಶಿವಯೋಗ ಮಂದಿರವು ಒಂದು ನೂರು ವರ್ಷಗಳಿಂದ ಸಾಧ್ಯವಿದ್ದ ಮಟ್ಟಿಗೆ ಪ್ರಯತ್ನಿಸುತ್ತಿದೆ. ಇದರ ಫಲವಾಗಿ ಸಮಾಜದಲ್ಲಿ ಹತ್ತಾರು ಜಾಗೃತಿಗಳಾಗಿವೆ. ಇದಕ್ಕೆ ಶಿವಯೋಗ ಮಂದಿರವೇ ಕಾರಣವಾಗಿದೆ. ಇಲ್ಲಿ ತಯಾರಾದ ಮಠಾಧಿಕಾರಿಗಳು, ಸಂಗೀತಗಾರರು, ಶಿವಕೀರ್ತನಕಾರರು, ಶಿಕ್ಷಕರು, ಶಾಸ್ತ್ರಿಗಳು ಸಮಾಜದಲ್ಲಿ ಅನೇಕ ಮುಖವಾಗಿ ಸೇವೆ ಸಲ್ಲಿಸಿ ಈ ಉದ್ದೇಶಗಳನ್ನು ಕಾರ್ಯಗತಗೊಳಿಸಿ ಮಂದಿರಕ್ಕೆ ಕೀರ್ತಿಯನ್ನು ತಂದವರುಂಟು.

೩. ಆಡಳಿತ ಮಂಡಳಿ

ಪೂಜ್ಯ ಹಾನಗಲ್ಲ ಕುಮಾರ ಮಹಾಸ್ವಾಮಿಗಳು ಶಿವಯೋಗ ಮಂದಿರ ಭವಿಷ್ಯದಲ್ಲಿ ಉನ್ನತ ಮಟ್ಟಕ್ಕೇರಲು ಬಯಸಿ ಎಲ್ಲಾ ರೀತಿಯಿಂದಲೂ ಅದು ಉತ್ತಮ ಕಾರ್ಯಗಳನ್ನು ನಿರ್ವಹಿಸುವ ಸಲುವಾಗಿ ೧೯೧೦ರಲ್ಲಿ ಅಂದರೆ ಶಿವಯೋಗ ಮಂದಿರದ ಮೊದಲನೆಯ ಶಿವರಾತ್ರಿ ಉತ್ಸವದ ಕಾಲಕ್ಕೆ ಒಂದು ಸಂಘಟಿತ ಸಂಘವನ್ನು ರೂಪಿಸಿದರು. ಆ ಮೂಲಕ

ಶಿವಯೋಗ ಮಂದಿರ ಸ್ವಾವಲಂಬಿಯಾಗಿ ಮುನ್ನಡೆಯುವಂತಹ ಮಾರ್ಗಸೂಚಿಯನ್ನು ರೂಪಿಸಿದರು. ಅದು ಬದಲಾದ ಕಾಲಮಾನಕ್ಕೆ, ಸಮಾಜಿಕ ಸ್ಥಿತಿ–ಗತಿಗೆ ಅನುಸಾರವಾಗಿ ಮಂದಿರದ ಮೂಲ ಉದ್ದೇಶಗಳಿಗೆ ಚ್ಯುತಿಬಾರದಂತೆ ಪರಿವರ್ತನೆಗೊಂಡು ಇಂದಿಗೂ ಒಂದು ವ್ಯವಸ್ಥಿತವಾದ ಆಡಳಿತ ಕ್ರಮವನ್ನು, ಅದಕ್ಕೆ ಅಗತ್ಯವಾದ ನಿಯಮಗಳನ್ನು ಇಟ್ಟುಕೊಂಡು ಬರುತ್ತಿದೆ. ಅಂತಹ ಆಡಳಿತ ಕ್ರಮ ನಡೆದು ಬಂದ ಬಗ್ಗೆ ಹಾಗೂ ಆರಂಭದಲ್ಲಿ ಇದ್ದ ನಿಯಮಗಳು, ಜೊತೆಗೆ ಬದಲಾದ ನಿಯಮಾವಳಿಗಳು ಯಾವುದು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಹಾನಗಲ್ಲ ಕುಮಾರಸ್ವಾಮಿಗಳು ಶಿವಯೋಗ ಮಂದಿರ ಸ್ಥಾಪನೆಗೊಂಡು ಒಂದು ವರ್ಷಕ್ಕೆ ಅಂದರೆ ೧೯೧೦ರಲ್ಲಿ ಸಂಸ್ಥೆಯ ಎಲ್ಲಾ ಕಾರ್ಯಗಳು ವ್ಯವಸ್ಥಿತವಾಗಿ ಸಂಘಟಿತವಾಗಿ ನಡೆಯಬೇಕೆಂಬ ವಿಚಾರವಾಗಿ ೬೦ ಜನರ ಒಂದು ಜನರಲ್ ಕಮೀಟಿಯನ್ನು ಸ್ಥಾಪಿಸಿ ಅದರಲ್ಲಿ ೧೫ ಜನರ ಒಂದು ವ್ಯವಸ್ಥಾಪಕ ಕಮೀಟಿ ರಚಿಸಿದರು. ಹಲವು ವರ್ಷಗಳು ಗತಿಸಿದ ನಂತರ ಅಂದರೆ ೧೯೧೮ರಲ್ಲಿ ತಮ್ಮ ಬಲಭುಜವಾಗಿದ್ದ ಹಾವೇರಿ–ಹುಕ್ಕೇರಿ ಮಠದ ಶಿವಬಸವ ಮಹಾಸ್ವಾಮಿಗಳೊಂದಿಗೆ ಚರ್ಚಿಸಿ ಆಡಳಿತ ವ್ಯವಸ್ಥೆಯಲ್ಲಿ ವ್ಯಾಪಕವಾದ ಪ್ರಗತಿಗಾಗಿ ಒಂದು ಟ್ರಸ್ಟ್ ಕಮೀಟಿಯನ್ನು ನೇಮಿಸಿದರು. ಮಂದಿರದ ಎಲ್ಲಾ ವ್ಯವಸ್ಥೆಗಳನ್ನು ಈ ಟ್ರಸ್ಟಿನ ಬೋರ್ಡಿಗೆ ಒಪ್ಪಿಸುವುದಾಗಿ ತೀರ್ಮಾನಿಸಲಾಯಿತು.

ಮಂದಿರದ ಭಕ್ತರು, ಹಿತೈಸಿಗಳು, ಅಭಿಮಾನಿಗಳು ಇದ್ದ ಜನರಲ್ ಕಮೀಟಿ ಹಾಗೂ ವ್ಯವಸ್ಥಾಪನ ಕಮೀಟಿ ಒಂದು ಸಭೆ ಸೇರಿ ಸರ್ವಾನುಮತದಿಂದ ಹಾವೇರಿಯ ಶ್ರೀ ನಿ.ಪ್ರ ಶಿವಬಸವಮಹಾಸ್ವಾಮಿಗಳೇ ಟ್ರಸ್ಟಿ ಕಮೀಟಿಯ ಅಜೀವ ಅಧ್ಯಕ್ಷರಾಗಿರಬೇಕು. ಅವರ ತರುವಾಯ "ಸಂಸ್ಥೆಯ ಏಳ್ಗೆಗೆ ತ್ರಿಕರಣಪೂರ್ವಕ ಪ್ರಯತ್ನಿಸುವ ಶಿವಯೋಗ ಮಂದಿರದಲ್ಲಿ ಶಿಕ್ಷಣ ಪಡೆದು ಸಂಸ್ಥೆಯ ಸೇವೆಯನ್ನು ನಿಷ್ಠೆಯಿಂದ ಅಜೀವ ಮಾಡಲು ದೃಢ ಪ್ರತಿಜ್ಞರಾದ ಸ್ವಾಮಿಗಳನ್ನೇ ಮೂರು ವರ್ಷಗಳವರೆಗೆ ಅಧ್ಯಕ್ಷರೆಂದು ಚುನಾಯಿಸುವ ನಿರ್ಣಯ ಮಾಡಲಾಯಿತು."[೨೩] ಅಧ್ಯಕ್ಷರು ಮೂರು ವರ್ಷಗಳಿಗೆ ಮಾತ್ರ ಚುನಾಯಿತರಾಗಿರುತ್ತಾರೆ. ಟ್ರಸ್ಟಿಗಳು ೭ ಜನರಿಗಿಂತ ಕಡಿಮೆ ಮತ್ತು ೨೧ ಜನರಿಗಿಂತ ಹೆಚ್ಚು ಇರಬಾರದು ಈ ಟ್ರಸ್ಟಿಗಳಲ್ಲಿ ೨/೩ ಭಾಗ ಮಂದಿರದಲ್ಲಿ ಶಿಕ್ಷಣ ಪಡೆದ ಮಠಾಧಿಪತಿಗಳಿರಬೇಕು. ಉಳಿದಂತೆ ಸಂಸ್ಥೆಯ ಬಗ್ಗೆ ಶ್ರದ್ಧಾಳು, ಧರ್ಮನಿಷ್ಠರು ಆಗಿರಬೇಕು. ಸಂಸ್ಥೆಯ ಶಿಕ್ಷಣಾದಿ ಇತರೆ ಕಾರ್ಯಕ್ಕಾಗಿ ಟ್ರಸ್ಟಿಗಳು ೩ ಜನರಿಗಿಂತ ಕಡಿಮೆ ೫ ಜನರಿಗಿಂತ ಹೆಚ್ಚಿಲ್ಲದ ಒಂದು ಮೆಂಬರುಗಳ ಸಬ್ ಕಮೀಟಿ ನೇಮಿಸಬಹುದು ಎಂಬಂತಹ ನಿಯಮವನ್ನು ಮಾಡಿದರು.

ಹೀಗೆ ಕುಮಾರಸ್ವಾಮಿಗಳು ಸೂಚನೆ ಕೊಟ್ಟ ಪತ್ರ ಮಾಹಿತಿಯನ್ನು ಯಥಾವತ್ತಾಗಿ ಅನುಬಂಧದಲ್ಲಿ ನಮೂದಿಸಲಾಗಿದೆ. ಈ ಪತ್ರದ ಪ್ರಕಾರ: ೧೯೦೯ ರಿಂದ ೧೯೧೮ರ ವರೆಗೆ ಶಿವಯೋಗ ಮಂದಿರಕ್ಕೆ ಚರ-ಸ್ಥಿರ ಆಸ್ತಿ ಮಾಡಿ ಅದನ್ನು ನಡೆಸಿಕೊಂಡು ಬಂದವರು ಹಾನಗಲ್ಲ ಕುಮಾರಸ್ವಾಮಿಗಳು. ಅಲ್ಲಿಯವರೆಗೂ ಮಂದಿರವು ಸುಭದ್ರವಾಗಿ ನಡೆದುಕೊಂಡು ಬರುವಂತಿದ್ದು ೧೯೧೮ರಷ್ಟೊತ್ತಿಗೆ ಅದು ಸ್ವತಂತ್ರವಾಗಿ ಕಾರ್ಯನಿರ್ವಹಿಸುವಂತಾಯಿತು. ಇನ್ನು ಮುಂದೆ ಶಾಶ್ವತವಾಗಿಯೂ ಸುವ್ಯವಸ್ಥಿತವಾಗಿಯೂ ಇರಬೇಕೆಂಬ ಉದ್ದೇಶವನ್ನು ಹೊಂದಲಾಯಿತು. ಈ ಕಾರಣಕ್ಕಾಗಿ ಟ್ರಸ್ಟ್ ಕಮೀಟಿಯನ್ನು ಸ್ಥಾಪಿಸಿ ಹಾನಗಲ್ಲ ಕುಮಾರಸ್ವಾಮಿಗಳೇ ಹಾವೇರಿ, ಹುಕ್ಕೇರಿ ಮಠದ ಶ್ರೀಶಿವಬಸವ ಮಹಾಸ್ವಾಮಿಗಳಲ್ಲಿ ವಿನಂತಿಸಿ ಈ ಕಮೀಟಿಯ ಅಜೀವ ಅಧ್ಯಕ್ಷರಾಗಬೇಕೆಂದು ಕೇಳಿಕೊಂಡರು. ಹಾವೇರಿ ಶ್ರೀಗಳು ಕಮೀಟಿಯ ಟ್ರಸ್ಟ್‌ಗಳನ್ನು ನೇಮಿಸಿಕೊಂಡರು ಎಂಬ ಅಂಶವು ಇದರಿಂದ ವಿದಿತವಾಗುತ್ತದೆ.

ಈ ಶಾಸನಬದ್ಧ ಕಮೀಟಿಯು ನಂತರದಲ್ಲಿ ಕೆಲವೊಂದು ಕಾರ್ಯಗಳ ರೂಪರೇಷೆಯನ್ನು ಹಾಕಿಕೊಂಡಿತು. ಅವುಗಳೆಂದರೆ. "ಶಿವಯೋಗ ಮಂದಿರದಲ್ಲಿ ಪ್ರತಿವರ್ಷ ನಡೆಯುವ ಮಹಾಶಿರಾತ್ರಿ ಯಾತ್ರೋತ್ಸವದ ನಂತರ ಈ ಕಮೀಟಿಯು ಜನರಲ್ ಸಭೆ ಸೇರುವುದು ಹಾಗೂ ನಿಯಮಾನುಸಾರ ಯೋಗ್ಯ ವಟುಗಳನ್ನು ಆಯ್ಕೆ ಮಾಡಿ ಸಂಸ್ಥೆಗೆ ದಾಖಲೆಗೊಳಿಸುವುದು. ಶಿವರಾತ್ರಿಯ ಕಾಲಕ್ಕೆ ವಾರ್ಷಿಕ ಸಮ್ಮೇಳನ ನಡೆಸಿ ಅದರಲ್ಲಿ ಧಾರ್ಮಿಕ, ಸಾಮಾಜಿಕ ವಿಷಯವಾಗಿ ವ್ಯಾಖ್ಯಾನ, ಕೀರ್ತನೆ ಮುಂತಾದವುಗಳ ವ್ಯವಸ್ಥೆ ಮಾಡುವುದು.

ಕಮೀಟಿಯು ನೇಮಿಸಿದ ಆಡಿಟರ್ ಪರೀಕ್ಷಿಸಿ ಸಂಸ್ಥೆಯ ಎಲ್ಲ ಲೆಕ್ಕ-ಪತ್ರ ವೀಕ್ಷಿಸಿ, ವಿಚಾರಿಸಿ ಅಗತ್ಯ ವರದಿಯನ್ನು ಪಾಸು ಮಾಡುವುದು. ಹಾಗೂ ಅದರ ವಾರ್ಷಿಕ ವರದಿ ಮುದ್ರಿಸಿ ಸಂಸ್ಥೆಯ ಹಿತಚಿಂತಕರಿಗೆ ಕಳಿಸುವುದು.

ಬಾಗಲಕೋಟೆಯಲ್ಲಿರುವ ಸಂಸ್ಥೆಯ ಆಸ್ತಿ-ವ್ಯವಸ್ಥೆ ಮತ್ತು ಸಂಸ್ಥೆಯ ಕೋರ್ಟಿನ ವ್ಯವಹಾರಗಳನ್ನು ನಡೆಸಿಕೊಂಡು ಹೋಗಲು ಒಬ್ಬ ಜನರಲ್ ಮ್ಯಾನೇಜರ್ ನೇಮಿಸುವುದು. ಸಂಸ್ಥೆಯ ಬಗೆಗೆ ಸಲಹೆ-ಸೂಚನೆಗಳು ಬಂದಾಗ ಅವುಗಳ ಬಗ್ಗೆ ವಿಚಾರ-ವಿನಿಮಯ ಮಾಡಿ ಕಾರ್ಯರೂಪಕ್ಕೆ ತರಲು ಯತ್ನಿಸುವುದು."[೨೪]

ಹೀಗೆ ಶಿವಯೋಗ ಮಂದಿರ ಸಂಸ್ಥೆಯ ಆರಂಭಿಕ ಆಡಳಿತ ನಿಯಮ ರೂಪಿಸಿ ಶ್ರೀಶಿವಬಸವಮಹಾಸ್ವಾಮಿಗಳು ಹಾವೇರಿ-ಹುಕ್ಕೇರಿಮಠ ಇವರ ಪ್ರಥಮ ಅಧ್ಯಕ್ಷತೆಯಲ್ಲಿ ಮುನ್ನಡೆಯಿತು. ಹಾನಗಲ್ಲ ಕುಮಾರಸ್ವಾಮಿಗಳು ಸೂಚಿಸಿದ ಆಡಳಿತ ವ್ಯವಸ್ಥೆಯ ವಿಭಾಗೀಯ ಅಂಶ ಹೀಗಿದೆ.

ಜನರಲ್ ಕಮೀಟಿ (೬೦ ಜನ ಸದಸ್ಯರು), ವ್ಯವಸ್ಥಾಪಕ ಕಮೀಟಿ (೧೫ ಜನ ಸದಸ್ಯರು), ವ್ಯವಸ್ಥಾಪಕ ಕಮೀಟಿ ಚೇರಮನ್, ಟ್ರಸ್ಟ್ ಕಮೀಟಿ (೭ ರಿಂದ ೨೧ ಜನ), ಸಬ್ ಕಮೀಟಿ (೩–೫ ಜನ) ಈ ಐದು ಕಮಿಟಿಗಳನ್ನೊಳಗೊಂಡಂತೆ ಶ್ರೀ ಮದ್ವೀರಶೈವ ಶಿವಯೋಗ ಮಂದಿರ ಸಂಸ್ಥೆಯ ನಿಯಮಗಳು ೧೯೦೯ರಲ್ಲಿ ರೂಪಿಸಲಾಯಿತು. ಹಾಗೂ ಅದರಂತೆ ನಡೆಯುವ ಬಗ್ಗೆ ಟ್ರಸ್ಟ್ ಕಮೀಟಿಯು ಯತ್ನಿಸುವ ಬಗ್ಗೆ ದೃಢಸಂಕಲ್ಪ ಮಾಡಿ ಸರಿಸುಮಾರು ಒಂದುನೂರು ವರ್ಷ ಅದರಂತೆ ನಡೆದುಕೊಂಡು ಬಂದಿದೆ. ಅದು ಸಾಗಿದ ಮಾರ್ಗ ಗಮನಿಸಿದರೆ ಅದರ ಆಡಳಿತ ಕ್ರಮದಲ್ಲಿ ಇದ್ದ ದಕ್ಷತೆ, ಪಾರದರ್ಶಕತೆ, ಇಚ್ಛಾಶಕ್ತಿಯ ಮನೋಭಾವನೆಯನ್ನು ತೋರಿಸುತ್ತದೆ. ಇದಕ್ಕೆ ಕಾರಣ ಹಾನಗಲ್ಲ ಕುಮಾರಸ್ವಾಮಿಗಳಿಗೆ ಇದ್ದ ದೂರದೃಷ್ಠಿ ಅನುಭವದ ಪಕ್ವತೆಯನ್ನು ಅದು ಬಿಂಬಿಸುತ್ತದೆ.

ಶ್ರೀ ಮದ್ವೀರಶೈವ ಶಿವಯೋಗ ಮಂದಿರ ಸಂಸ್ಥೆಯ ನಿಯಮಗಳಲ್ಲಿ ಈ ಸಂಸ್ಥೆಯು ಶ್ರೀ ಮದ್ವೀರಶೈವ ಶಿವಯೋಗ ಮಂದಿರ ಎಂಬ ಹೆಸರಿನಿಂದ ಕರೆಯಲ್ಪಡತಕ್ಕದ್ದು. ಈ ಸಂಸ್ಥೆಗೆ ವಿಜಾಪುರ ಜಿಲ್ಲಾ (ಈಗಿನ ಬಾಗಲಕೋಟೆ ಜಿಲ್ಲೆ) ಬಾದಾಮಿ ತಾಲೂಕಿನ ಮಹಾಕೂಟ ಕ್ಷೇತ್ರೋಪ್ರಾಂತ್ಯ ಮಲಾಪಹಾರಿ ನದಿ ತೀರದಲ್ಲಿ ಸ್ಥಾಪಿತವಾದ ಈಗಿನ ಶ್ರೀಮದ್ವೀರಶೈವ ಶಿವಯೋಗ ಮಂದಿರ ಸ್ಥಾನವು ಯಾವಾಗಲೂ ಖಾಯಂ ಮುಖ್ಯಸ್ಥಾನವಾಗಿ ಎಣಿಸಲ್ಪಡತಕ್ಕದ್ದು ಎಂದು ಹೇಳುವುದಲ್ಲದೆ, ಅಲ್ಲಿ ನಡೆಯಬೇಕಾದ ಶೈಕ್ಷಣಿಕ, ಧಾರ್ಮಿಕ ಮತ್ತು ಸಾಮಾಜಿಕ ಉದ್ದೇಶಗಳನ್ನು ಈ ಕೆಳಗಿನಂತೆ ಠರಾವುಗೊಳಿಸಿದರು. ಅದನ್ನು ಯಥಾವತ್ತಾಗಿ ಇಲ್ಲಿ ನಮೂದಿಸಲಾಗಿದೆ"[೨೫]

೧. ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತ (ವೀರಶೈವ) ಮತದ ಶಿವಯೋಗ ಸಾಧಕರು ಮೊದಲಾದವರಿಗೆ ಅಧ್ಯಾತ್ಮೋನ್ನತಿಯಾಗುವಂತೆ ಮಂತ್ರ, ಲಯ, ಹಠ, ರಾಜ ಮತ್ತು ಶಿವಯೋಗ ಮುಂತಾದ ಸಾಧನಗಳ ಶಿಕ್ಷಣವನ್ನು ಅಧಿಕಾರವರಿತು ಕೊಡುವುದು.

೨. ವೇದಾಗಮೋಪನಿಷತ್ತುಗಳಿಂದಲೂ ಅವುಗಳನ್ನನುಸರಿಸಿ ಸಂಸ್ಕೃತ ಪುರಾತನೋಕ್ತಿಗಳಿಂದಲೂ ಭಾಷಾ ಪ್ರಬಂಧಾದಿ ಕನ್ನಡ ಗ್ರಂಥಗಳಿಂದಲೂ ಶಿವಾನುಭವ ಶಾಸ್ತ್ರಜ್ಞಾನವನ್ನು ಮಾಡಿಕೊಡುವುದು.

೩. ಸ್ವಮತ ಸಿದ್ಧಾಂತಜ್ಞಾನವನ್ನು ಮಾಡಿಕೊಡುವದಲ್ಲದೆ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಮುಂತಾದ ಇತರೆ ವೈದಿಕ ಮತಗಳ ಜ್ಞಾನವನ್ನು ಸಹ ತುಲನಾತ್ಮಕ ದೃಷ್ಟಿಯಿಂದ ಮಾಡಿಕೊಡುವುದು. ಇದಕ್ಕಾಗಿ ಬೇಕಾಗುವ ಗ್ರಂಥಗಳ ಜ್ಞಾನವನ್ನೂ, ನ್ಯಾಯ, ವ್ಯಾಕರಣ, ಸಾಂಖ್ಯ, ಯೋಗಮೀಮಾಂಸಾದಿ ಶಾಸ್ತ್ರಾಧ್ಯಯನವನ್ನೂ ಸಾಧ್ಯವಾದ ಮಟ್ಟಿಗೆ ಮಾಡಿಸುವುದು.

೪. ವಿರಕ್ತಮಠದ ಸಿರಾಭಾರಿ ಅಧಿಕಾರಕ್ಕೂ ಗುರುಸ್ಥಲದ ಮಠದ ಪಟ್ಟಚರಂತಿ ಅಧಿಕಾರಕ್ಕೂ ಯೋಗ್ಯವಾಗುವಂತೆ ಯೋಗ್ಯ ವಂಶೋತ್ಪನ್ನರಾದ ಮಹೇಶ್ವರ ವಟುಗಳಿಗೆ ಶಿಕ್ಷಣ ಕೊಡುವುದು.

೫. ಸ್ವಮತ, ಪರಮತ, ಧಾರ್ಮಿಕ ಹಾಗೂ ತಾತ್ವಿಕ ಹಸ್ತಲಿಖಿತ ಹಾಗೂ ತಾಡೋಲೆ ಮುಂತಾದ ಗ್ರಂಥಗಳ ಸಂಗ್ರಹಾಲಯವನ್ನು ಸ್ಥಾಪಿಸುವುದು.

೬. ಧರ್ಮಗ್ರಂಥಗಳ ಪರಿಶೋಧನ ಮಾಡುವುದು, ಮುದ್ರಿಸುವುದು ಮತ್ತು ಪ್ರಸಾರ ಮಾಡುವುದು.

೭. ಪೂರ್ವ ಪರಂಪರೆಗನುಸರಿಸಿದ ಶಾಸ್ತ್ರ ಸಮ್ಮತವಾದ ವೀರಶೈವರ ಧರ್ಮಾಚರಣೆಗಳು ಹಾಗೂ ಮೂಲ ತತ್ವಗಳು ಪ್ರಚಾರದಲ್ಲಿ ಬರುವಂತೆ ಯೋಗ್ಯವಾದ ಗ್ರಂಥಗಳನ್ನು ಬರೆಸುವುದು ಮತ್ತು ಅಂಥ ಗ್ರಂಥಗಳನ್ನು ಮಾಡುವಂಥವರಿಗೆ ಉತ್ತೇಜನ ನೀಡುವುದು.

೮. ಉಪದೇಶಕರಿಂದ ಧರ್ಮಜಾಗ್ರತೆಯನ್ನುಂಟು ಮಾಡುವುದು ಮತ್ತು ಪ್ರಮಥರ ಚರಿತ್ರೆ ಅವರ ವಚನ ಹಾಗೂ ಅವರ ಗದ್ಯ-ಪದ್ಯಾತ್ಮಕ ಗ್ರಂಥಗಳನ್ನು ಪ್ರಸಿದ್ಧಿಸುವುದು.

೯. ಶಾಸ್ತ್ರೋಕ್ತ ರೀತಿಯಿಂದ ಶುದ್ಧವಾದ ಲಿಂಗ ಭಸ್ಮಗಳನ್ನು ತಯಾರಿಸುವುದು ಮತ್ತು ಹಾಗೆ ತಯಾರಿ ಮಾಡುವವರಿಗೆ ಉತ್ತೇಜನ ಕೊಡುವುದು. ಭಸ್ಮದ ಕೆಲಸಕ್ಕೆ ಬೇಕಾಗುವ ಗೋಮಯದ ಸಂಗ್ರಹದ ದೆಸೆಯಿಂದ ಗೋವುಗಳ ರಕ್ಷಣೆ ಮಾಡುವುದು.

೧೦. ಶಿವಧರ್ಮಕ್ಕನುಸರಿಸಿದ ಭಜನೆ, ಕೀರ್ತನ, ಪುರಾಣಾದಿಗಳಿಗೆ ಅನುಕೂಲವಾಗುವ ಸಂಗೀತ ಶಿಕ್ಷಣ ಕೊಡುವುದರ ದೆಸೆಯಿಂದ ಸಂಗೀತ ಶಾಲೆಯನ್ನು ಸ್ಥಾಪಿಸುವುದು. ಇದರಲ್ಲಿ ಸದ್ಗುಣ ಸದಾಚಾರಿಗಳಾದ ವಿದ್ಯಾರ್ಥಿಗಳನ್ನು ತೆಗೆದುಕೊಂಡು ಶಿಕ್ಷಣ ಕೊಡುವುದು. ಅಂಗಹೀನಣೆಯ ಶಕ್ತ್ಯಾನುಸಾರವಾಗಿ ಸಂಗೀತ ಶಿಕ್ಷಣ ಕೊಡುವುದು. ಅನುಕೂಲವರಿತು ಪರಮತಸ್ಥರಿಗೆ ಸಹ ಸಂಗೀತ ಶಿಕ್ಷಣ ಕೊಡುವುದು.

೧೧. ಅಧ್ಯಕ್ಷರಾದ ಸ್ವಾಮಿಗಳ ಅಥವಾ ಟ್ರಸ್ಟ್ ಕಮೀಟಿಯವರ ಅನುಕೂಲತೆ ಅರಿತು ಸಂಸಾರಿಗಳಾಗತಕ್ಕ ವೀರಶೈವ ಬ್ರಹ್ಮಚಾರಿಗಳಿಗೂ ಭಕ್ತ ಮಾಹೇಶ್ವರರ ಮಕ್ಕಳಿಗೂ ನೈತಿಕ, ಧಾರ್ಮಿಕ ಮತ್ತು ಆಧ್ಯಾತ್ಮಿಕ ಜ್ಞಾನವಾಗುವಂಥ ಶಿಕ್ಷಣ ಕೊಡುವುದು.

೧೨. ಗ್ರಹಸ್ಥಾಶ್ರಮದಿಂದ ನಿವೃತ್ತಿಯನ್ನು ಪಡೆದು ಸ್ವಧರ್ಮಾಚರಣೆಗೆ ಸರಿಯಾಗಿ ನಡೆಯಬೇಕೆಂಬ ಇಚ್ಛೆಯುಳ್ಳ ಮುಮುಕ್ಷಗಳಿಗೆ ಸಾಧ್ಯವಾದ ಮಟ್ಟಿಗೆ ಅನುಕೂಲ ಮಾಡಿಕೊಡುವುದು.

೧೩. ನಿಜವಾದ ಧರ್ಮತತ್ವಗಳಿಗನುಸರಿಸಿ ಗ್ರಂಥಗಳನ್ನು ಪ್ರಸಿದ್ಧ ಮಾಡುವವರಿಗೂ ವೀರಶೈವ ಧರ್ಮತತ್ವಗಳನ್ನು ಜನರ ಮನಸ್ಸಿನ ಮೇಲೆ ಪರಿಣಾಮವಾಗುವಂತೆ ವಕ್ತೃತ್ವಕಲಾ ಸಂಪಾದನೆ ಮಾಡತಕ್ಕವರಿಗೂ ಪರೀಕ್ಷಿಸಿ ಅನುಕೂಲವರಿತು ಉತ್ತೇಜನಕೊಡುವುದು.

೧೪. ವೀರಶೈವರಲ್ಲಿ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ನೈತಿಕ ವಿಷಯಗಳ ಜಾಗ್ರತೆಯಾಗುವಂತೆ ಮಾಸಿಕ, ಸಾಪ್ತಾಹಿಕ ಮತ್ತು ದೈನಿಕ ಪತ್ರಗಳನ್ನು ಹೊರಡಿಸುವುದು.

೧೫. ಸ್ವಧರ್ಮ, ಸ್ವಮತಗಳ ಇತಿಹಾಸದ ಸಂಶೋಧನಕ್ಕೆ ಉಪಯೋಗವಾಗುವಂತೆ ಅನುಕೂಲವರಿತು ಶಿಲಾಲೇಖ, ತಾಮ್ರಪಟ ಮುಂತಾದದವುಗಳನ್ನು ಶೋಧ ಮಾಡಿ ಸಂಗ್ರಹಿಸುವುದು.

೧೬. ಹಿಂದುಸ್ಥಾನದ ಆಯಾಯ ಭಾಗಗಳಲ್ಲಿ ಮತ್ತು ಇಂಗ್ಲೆಂಡ್, ಅಮೆರಿಕಾ, ಜರ್ಮನ್, ಫ್ರಾನ್ಸ್ ಮುಂತಾದ ಪರ ರಾಷ್ಟ್ರಗಳಲ್ಲಿ ಆಗಾಗ್ಗೆ ಸಂಸ್ಥೆಗಳಿಗೆ ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತದ ತತ್ವಗಳನ್ನು ಪ್ರಸಾರ ಮಾಡುವುದಕ್ಕೊಸ್ಕರ ಈ ಸಂಸ್ಥೆಯವತಿಯಿಂದ ಪ್ರತಿನಿಧಿಗಳನ್ನು ಅಥವಾ ಲೇಖನಗಳನ್ನು ಕಳುಹಿಸುವುದು ಮತ್ತು ಹೋಗಲಿಚ್ಛಿಸುವ ಯೋಗ್ಯ ಜನರಿಗೆ ಸಾಧ್ಯವಿದ್ದ ಮಟ್ಟಿಗೆ ಅನುಕೂಲವರಿತು ಅನುಕೂಲತೆಗಳನ್ನು ಒದಗಿಸುವುದು.

೧೭. ಶಿವಯೋಗ ಸಾಧಕರ ವಸತಿ ಸ್ಥಾನವೆಂಬ ಗೊತ್ತು ಮಾಡಲ್ಪಟ್ಟ ಸ್ಥಾನದಲ್ಲಿ ಕುಟುಂಬಸ್ಥ, ಸಂಸಾರಿಗಳ ವಸತಿಗೆ ಅವಕಾಶ ಕೊಡದಿರುವುದು.

ಈ ಮೇಲಿನ ನಿಯಮಗಳಿಗನುಸಾರವಾಗಿ ಆಡಳಿತಮಂಡಳಿ ಅಸ್ತಿತ್ವಕ್ಕೆ ಬಂದಿರುವುದಲ್ಲದೆ ಅದರ ಕಾರ್ಯವ್ಯಾಪ್ತಿ ಕಾಲಾಂತರದಲ್ಲಿ ವಿಸ್ತರವಾಗುತ್ತ ಬಂದಂತಿದೆ. ಹೀಗಾಗಿ ಮೊದಲಿನ ಟ್ರಸ್ಟ್‌ಕಮಿಟಿಗಳ ಜೊತೆಗೆ ಮ್ಯಾನೆಜಿಂಗ್ ಕಮಿಟಿಗಳು ಅಸ್ತಿತ್ವಕ್ಕೆ ಬಂದವು. ಅವುಗಳಿಗೂ ತಮ್ಮದೇ ಆದ ಆಡಳಿತ ಜವಾಬ್ದಾರಿಯನ್ನು ನಿರ್ವಹಿಸಲು ಅವಕಾಶ ಮಾಡಿಕೊಡಲಾಗಿದೆ.

ಟ್ರಸ್ಟ್ ಕಮೀಟಿಯ ಕಾರ್ಯಗಳು

೧. ಶ್ರೀಮನ್ನಿರಂಜನ ಹಾನಗಲ್ಲ ಕುಮಾರಸ್ವಾಮಿಗಳು ಶ್ರೀಮನ್ನಿರಂಜನ ಹಾವೇರಿ ಶ್ರೀಶಿವಬಸವ ಮಹಾಸ್ವಾಮಿಗಳವರ ಸಹಾಯದಿಂದ ಬಂದ ಭಿಕ್ಷೆ ಹಾಗೂ ಕಾಣಿಕಾ ರೂಪದಿಂದ ಕೂಡಿದ ಹಣದಿಂದ ಶಿವಯೋಗ ಹಾಗೂ ಶಿವಧರ್ಮದ ಪ್ರಸಾರವಾಗಬೇಕೆಂಬ ಉದಾತ್ತ ವಿಚಾರದಿಂದ ಈ ಸಂಸ್ಥೆಯನ್ನು ಸ್ಥಾಪಿಸುತ್ತಾರೆ. ಅವರ ತಪಃ ಪ್ರಭಾವದಿಂದಲೂ, ಅವರ ಮೇಲಿದ್ದ ಭಕ್ತಿ-ವಿಶ್ವಾಸದಿಂದಲೂ ಈ ಸಂಸ್ಥೆಗಾಗಿ ಧಾರ್ಮಿಕ ಬುದ್ಧಿಯಿಂದ ಜನರು ಸಹಾಯ ಮಾಡುತ್ತಾರೆ. ಈ ಸಂಸ್ಥೆಯು ಯಾವತ್ತು ಕಾರ್ಯಗಳು ಸುವ್ಯವಸ್ಥೆಯಿಂದಲೂ, ಸಂಘಟಿತ ರೀತಿಯಿಂದಲೂ ನಡೆಯಬೇಕೆಂಬ ವಿಚಾರದಿಂದ ಶ್ರೀ ಹಾನಗಲ್ಲ ಕುಮಾರಸ್ವಾಮಿಗಳವರು, ಶ್ರೀ ಹಾವೇರಿ ಸ್ವಾಮಿಗಳವರ ಅನುಮತಿಯನ್ನು ಪಡೆದು ಒಂದು ಕಮೀಟಿಯನ್ನು (ಬೋರ್ಡ್ ಆಫ್ ಟ್ರಸ್ಟೀಜ) ನೇಮಿಸಿ ತಮ್ಮಲ್ಲಿದ್ದ ಯಾವತ್ತೂ ಹಕ್ಕು ಅಧಿಕಾರಗಳನ್ನು ಸದರಿ ಬೋರ್ಡಿನ ಸ್ವಾಧೀನದಲ್ಲಿ ಕೊಟ್ಟ ಪ್ರಕಾರ ಆ ಬೋರ್ಡಿನ

ಸ್ಥಾನದಲ್ಲಿದ್ದ ಈಗಿರುವ ಶಾಸನಬದ್ಧ ಕಮೀಟಿಯು ಈ ಸಂಸ್ಥೆಯನ್ನು ಯಾವಾಗಲೂ ವ್ಯವಸ್ಥೆಯನ್ನು ಮಾಡತಕ್ಕದ್ದು.

೨. ಶ್ರೀ ಮನ್ನಿರಂಜನ ಹಾವೇರಿ ಶಿವಬಸವ ಮಹಾಸ್ವಾಮಿಗಳವರು ಈ ಕಮೀಟಿಯ ಅಜೀವ ಅಧ್ಯಕ್ಷರಾಗಿರತಕ್ಕದ್ದು. ಅವರ ಪಶ್ಚಾತ್ ಅವರು ಈ ಸಂಸ್ಥೆಯ ಏಳಿಗೆಯ ಬಗ್ಗೆ ತ್ರಿಕರಣ ಪೂರ್ವಕವಾಗಿ ಪ್ರಯತ್ನಿಸತಕ್ಕ ಮತ್ತು ಆಶ್ರಯ ಧರ್ಮಕ್ಕನುಸಾರವಾಗಿ ನಡೆಯತಕ್ಕ ಧರ್ಮನಿಷ್ಠ ಹಾಗೂ ಆಚಾರ ಸಂಪನ್ನರಾದಂಥ ಶಿವಯೋಗ ಮಂದಿರದಲ್ಲಿ ಶಿಕ್ಷಣ ಪಡೆದು ಆಮರಣ ಶಿವಯೋಗ ಮಂದಿರದ ಸೇವೆ ಮಾಡತಕ್ಕಂಥವರಲ್ಲಿ ಯೋಗ್ಯರಾದ ಸ್ವಾಮಿಗಳನ್ನು ಅಧ್ಯಕ್ಷ ಸ್ಥಾನಕ್ಕೆ ಮೂರು ವರ್ಷಗಳವರೆಗೆ ನೇಮಿಸತಕ್ಕದ್ದು, ಅನಂತರ ಟ್ರಸ್ಟ್ ಕಮೀಟಿಯವರು ಅವರನ್ನಾಗಲಿ ಮೇಲೆ ಹೇಳಿದಂತೆ ಎಲ್ಲ ರೀತಿಯಿಂದ ಯೋಗ್ಯರಾದ ಬೇರೆಯವರನ್ನಾಗಲಿ ನೇಮಿಸಬಹುದು. ಹೀಗೆ ಆರಿಸಿದ ಅಧ್ಯಕ್ಷರು ಮೂರು ಮೂರು ವರ್ಷಗಳವರೆಗೆ ಅಥವಾ ಆ ಅವಧಿಯಲ್ಲಿ ಕಮೀಟಿಯು ಕೊಡದೇ ಇದ್ದಲ್ಲಿ ಮುಂದೆ ಕಮೀಟಿಯು ಕೊಡುವವರೆಗೆ ಅಧ್ಯಕ್ಷರಾಗಿ ಕೆಲಸ ಮಾಡತಕ್ಕದ್ದು.

೩. ಯಾವುದೇ ಕಾರಣದಿಂದ ಅಧ್ಯಕ್ಷರು (ಹಾವೇರಿ ಮಹಾಸ್ವಾಮಿಗಳವರು) ಮುಂದಿನ ಅಧ್ಯಕ್ಷರನ್ನು ನೇಮಿಸದೇ ಇದ್ದಲ್ಲಿ ಯಾವತ್ತೂ ಟ್ರಸ್ಟ್ ಜನರು ೨-೩ ಬಹುಮತದಿಂದ ಮೇಲೆ ಹೇಳಿದಂಥವರನ್ನು ಅಧ್ಯಕ್ಷ ಸ್ಥಾನದಲ್ಲಿ ಕಮೀಟಿಯವರು ಯೋಜಿಸಬೇಕು. ಆದರೆ ನಿರಾಧಾರವಾದ ಸಮಯ ಭೇದ ಮುಂತಾದವುಗಳನ್ನು ಮನಸ್ಸಿನಲ್ಲಿ ತರದೆ ಮೇಲೆ ಬರೆದ ಸದ್ಗುಣಗಳ ಕಡೆಗೆ ಲಕ್ಷ್ಯ ಕೊಟ್ಟು ಯೋಜನೆ ಮಾಡಬೇಕು.

೪. ಅಧ್ಯಕ್ಷರಿಲ್ಲದಾಗ ಅವರಂತೆ ಕೆಲಸ ಮಾಡಲಿಕ್ಕೆ ಒಬ್ಬ ಉಪಾಧ್ಯಕ್ಷರನ್ನು ನೇಮಿಸಬೇಕು.

೫. ಈ ಸಂಸ್ಥೆಯ ಹಿತಚಿಂತಕರಾದ ೨೧ ವರ್ಷಕ್ಕೆ ಮೇಲ್ಪಟ್ಟ ವಯಸ್ಸಿನವರಾದ ವೀರಶೈವರು ಟ್ರಸ್ಟಿಯಾಗಲು ಅರ್ಹರಿರುತ್ತಾರೆ.

೬. ರಾಜಕೀಯ ಗುನ್ಹೆಯ ಹೊರತಾಗಿ ಕ್ರಿಮಿನಲ್ ಕೇಸುಗಳಿಗಾಗಿ ಶಿಕ್ಷೆ ಹೊಂದಿರಿವರೂ, ನಾದಾರಿಯಂದು ಕೋರ್ಟನಿಂದ ಠರಾಯಿಸಲ್ಪಟ್ಟವರೂ, ಹುಚ್ಚು ಹಿಡಿದವರೂ, ಟ್ರಸ್ಟ್ ಕೆಲಸ ಮಾಡಲಿಕ್ಕೆ ಅಯೋಗ್ಯರಿದ್ದವರೂ ಬೋರ್ಡಿನಲ್ಲಿ ಇರಕೂಡದು.

೭. ಮರಣದಿಂದ ಅಥವಾ ರಾಜಿನಾಮೆ ಕೊಟ್ಟ ಅಥವಾ ೨೫ನೇ ಕಲಮಿನಲ್ಲಿ ಬರೆದ ಕಾರಣಗಳಿಂದ ಕಡಿಮೆಯಾದ ಟ್ರಸ್ಟಿಯ ಸ್ಥಾನದಲ್ಲಿ ೨೪ನೇ ಕಲಮಿನ ಪ್ರಕಾರ ಯೋಗ್ಯ ಜನರನ್ನು ಬಹುಮತದಿಂದ ಟ್ರಸ್ಟ್ ಬೋರ್ಡಿನವರು ನೇಮಿಸಬಹುದು.

೮. ಜನರ ಸಂಖ್ಯೆಯು ೭ ಜನರಿಗಿಂತ ಕಡಿಮೆ ೩೧ ಜನರಗಿಂತ ಹೆಚ್ಚು ಇರಕೂಡದು.

೯. ಟ್ರಸ್ಟ್ ಕಮೀಟಿಯ ಜನರಲ್ಲಿ ೨-೩ ಸಂಖ್ಯೆಯು ಶಿವಯೋಗ ಮಂದಿರದಲ್ಲಿ ಶಿಕ್ಷಣ ಹೊಂದಿ ಕಾರ್ಯಾಧ್ಯಕ್ಷರಾದವರೂ, ಅಧಿಕಾರ ಸ್ಥಾನವನ್ನು ಹೊಂದಿದವರೂ, ಸ್ವಾಮಿಗಳಾದವರೂ ಇರತಕ್ಕದ್ದು. ಇನ್ನುಳಿದವರು ಈ ಸಂಸ್ಥೆಯ ಉನ್ನತಿಯ ಸಲುವಾಗಿ ಪರಿಶ್ರಮ ಪಡುವವರೂ, ಶ್ರದ್ಧೆಯುಳ್ಳವರೂ, ಧರ್ಮ ನಿಷ್ಠರಾದಂಥವರೂ ಇರತಕ್ಕದ್ದು.

೧೦. ಈ ಸಂಸ್ಥೆಯ ಹಿತದ ಮತ್ತು ಉದ್ದೇಶದ ವಿರುದ್ಧವಾಗಿ ವರ್ತನೆಯು ಟ್ರಸ್ಟಿಯವರನ್ನು ಮುಂದೆ ನೇಮಿಸಲ್ಪಡುವ ಅಧ್ಯಕ್ಷರನ್ನು ಸಹ ಒಡಗೂಡಿ ಬೋರ್ಡಿನವರು ಬಹುಮತದಿಂದ ಕಡಿಮೆ ಮಾಡಬಹುದು. ಅಂಥವರನ್ನು ಪುನಃ ನೇಮಿಸಬೇಕಾದಲ್ಲಿ ೨-೩ ಮತಾಧಿಕ್ಯದಿಂದ ನೇಮಿಸಿಕೊಳ್ಳಬಹುದು.

೧೧. ಪ್ರಾರಂಭದ ೩ ಹಾಗೂ ೪ನೇ ಕಲಮುಗಳಲ್ಲಿ ಹೇಳಿದ ಮುಖ್ಯ ಉದ್ದೇಶಗಳ ವಿರುದ್ಧವಾಗಿ ವರ್ತಿಸಲಿಕ್ಕೆ ಅಥವಾ ಅದರಲ್ಲಿ ಏನಾದರೂ ಹೆಚ್ಚು ಕಡಿಮೆ ಮಾಡಲಿಕ್ಕೆ ಟ್ರಸ್ಟಿ ಜನರಿಗೆ ಸರ್ವಾನುಮತದಿಂದಲಾದರೂ ಅಧಿಕಾರವಿಲ್ಲ. ಈ ಟ್ರಸ್ಟ್‌ಕಮಿಟಿಯು ಆಡಳಿತ ಮಂಡಳಿಯ ಕಾರ್ಯವ್ಯಾಪ್ತಿಯಲ್ಲಿ ಮಂದಿರದ ಹಿತದೃಷ್ಟಿಯಿಂದ ಕೆಲವು ಅಧಿಕಾರಿಗಳನ್ನು ಹೊಂದಿರುತ್ತಾರೆಂದು ತೋರುತ್ತದೆ ಆ ಸಂಬಂಧ

೧. ಮುಖ್ಯ ಮತ್ತು ಸಾಮಾನ್ಯ ಉದ್ದೇಶಗಳಿಗನುಸರಿಸಿ ಗುಣ ವಿಶಿಷ್ಟ ವಿದ್ಯಾರ್ಥಿಗಳನ್ನು ಕಮೀಟಿಯವರು ಬಹುಮತದಿಂದ ತೆಗೆದುಕೊಳ್ಳಬಹುದು.

೨. ಶಾಸನಬದ್ಧ ಕಮೀಟಿಯವರು ವಾರ್ಷಿಕ ಸಮ್ಮೇಳನದ ಕಾಲಕ್ಕೆ (ಮಹಾಶಿವರಾತ್ರಿಯ ಕಾಲಕ್ಕೆ) ಶಿವಯೋಗ ಮಂದಿರದಲ್ಲಿ ಟ್ರಸ್ಟಿ ಜನರ ಸಭೆ ಮಾಡಿ ಕೆಳಗೆ ಬರೆದ ವ್ಯವಸ್ಥೆ ಮಾಡತಕ್ಕದ್ದು. (ಅ) ಟ್ರಸ್ಟಿ ಜನರ ಪೈಕಿ ಒಬ್ಬರನ್ನಾಗಲಿ ಹೆಚ್ಚು ಜನರನ್ನಾಗಲಿ ಮ್ಯಾನೇಜಿಂಗ್ ಟ್ರಸ್ಟಿಗಳನ್ನು ಅಥವಾ ಟ್ರಸ್ಟಿಗಳನ್ನು ಒಂದು ವರ್ಷದವರೆಗೆ ನೇಮಿಸತಕ್ಕದ್ದು.

(ಬ) ಹೀಗೆ ನೇಮಿಸಲ್ಪಟ್ಟ ಮ್ಯಾನೇಜಿಂಗ್ ಟ್ರಸ್ಟಿಯ ಅಥವಾ ಟ್ರಸ್ಟಿಗಳ ಅಧಿಕಾರಕ್ಕೊಳಪಟ್ಟು ಒಬ್ಬ ವೇತನವುಳ್ಳ ಮ್ಯಾನೇಜರನನ್ನು ನೇಮಿಸಬೇಕು. ಹೀಗೆ ನೇಮಿಸಲ್ಪಟ್ಟ ಮ್ಯಾನೇಜರನು ಮ್ಯಾನೇಜಿಂಗ್ ಟ್ರಸ್ಟಿಯ ಕೈಕೆಳಗೆ ಕೆಲಸ ಮಾಡತಕ್ಕದ್ದು.

೩. ಕಮೀಟಿಯವರು ಗೊತ್ತುಮಾಡಿಕೊಟ್ಟ ಈ ಸಂಸ್ಥೆಯ ಕಾರ್ಯಗಳನ್ನು ಮಾಡುವುದಕ್ಕಾಗಿ ೯ ಜನರಿಗಿಂತ ಕಡಿಮೆಯಲ್ಲದಷ್ಟು ೧೫ ಜನರಿಗಿಂತ ಹೆಚ್ಚಿಲ್ಲದಷ್ಟು ಸಂಖ್ಯೆಯುಳ್ಳ ಒಂದು ಮ್ಯಾನೇಜಿಂಗ್ ಕಮೀಟಿಯನ್ನು ಒಂದು ವರ್ಷದ ಮಟ್ಟಿಗೆ ಅಥವಾ ಹೊಸ ಮ್ಯಾನೇಜಿಂಗ್

ಕಮೀಟಿಯು ನೇಮಿಸಲ್ಪಡುವವರೆಗೆ ಬೋರ್ಡಿನವರು ನೇಮಿಸಬಹುದು. ಅದರ ಚೇರಮನ್‌ನನ್ನು ಮತ್ತು ಸೆಕ್ರೆಟರಿಯನ್ನು ಸಹ ಟ್ರಸ್ಟ್ ಬೋರ್ಡಿನವರೆ ನೇಮಿಸತಕ್ಕದ್ದು. ಹೀಗೆ ನೇಮಿಸಲ್ಪಟ್ಟ ಮ್ಯಾನೇಜಿಂಗ್ ಕಮೀಟಿಯನ್ನಾಗಲೀ, ಅಥವಾ ಅದರ ಮೆಂಬರರನ್ನಾಗಲಿ ಟ್ರಸ್ಟ್ ಬೋರ್ಡಿನವರು ಬೇಕಾದಾಗ ೨-೩ ಬಹುಮತದಿಂದ ತೆಗೆದು ಹಾಕಬಹುದು. ಈ ಕಮೀಟಿಯಲ್ಲಿ ಟ್ರಸ್ಟ್ ಜನರ ಪೈಕಿ ಯಾರಾದರು ಆರಿಸಿ ಬಂದಲ್ಲಿ ಅವರಲ್ಲಿ ಒಬ್ಬರನ್ನು ಮ್ಯಾನೇಜಿಂಗ್ ಕಮೀಟಿಯ ಚೇರಮನ್‌ರಾಗಿ ಆರಿಸತಕ್ಕದ್ದು.

೪. (ಅ) ಟ್ರಸ್ಟ್ ಕಮೀಟಿಯವರು ಪ್ರಸಂಗ ವಿಶೇಷದಲ್ಲಿ ಸಂಸ್ಥೆಯ ಶಿಕ್ಷಣಾದಿ ವ್ಯವಸ್ಥೆಯನ್ನು ನೋಡುವ ಸಲುವಾಗಿ ೩ ಜನರಿಗಿಂತ ಕಡಿಮೆಯಲ್ಲದಷ್ಟು ೫ ಜನರಿಗಿಂತ ಹೆಚ್ಚಿಲ್ಲದಷ್ಟು ಮೆಂಬರಗಳುಳ್ಳ ಒಂದು ಅಥವಾ ಹೆಚ್ಚು ಸಬ್ ಕಮೀಟಿಗಳನ್ನು ನೇಮಿಸಬಹುದು. ಆ ಕಮೀಟಿಯ ಚೇರಮನ್‌ರನ್ನು ಬೋರ್ಡಿನವರೇ ನೇಮಿಸತಕ್ಕದ್ದು. ಇಂಥ ಕಮೀಟಿ ಅಥವಾ ಕಮೀಟಿಗಳನ್ನು ಅಥವಾ ಅವುಗಳ ಯಾವುದೇ ಮೆಂಬರರನ್ನು ಟ್ರಸ್ಟ್ ಬೋರ್ಡಿನವರು ಬೇಕಾದಾಗ ೩-೪ ಮತದಿಂದ ತೆಗೆದು ಹಾಕಬಹುದು.

(ಬ) ಮ್ಯಾನೇಜಿಂಗ್ ಮತ್ತು ಸಬ್ ಕಮೀಟಿಗಳು ಬೋರ್ಡಿನವರು ಮಾಡಿಕೊಟ್ಟ ಪೋಟ್ ನಿಯಮಾವಳಿಗನುಸಾರವಾಗಿ ತಮ್ಮ ತಮ್ಮ ಕಾರ್ಯಗಳನ್ನು ಮಾಡತಕ್ಕದ್ದು.

(ಕ) ಮ್ಯಾನೇಜಿಂಗ್ ಹಾಗೂ ಸಬ್ ಕಮೀಟಿಗಳ ನಿರ್ಣಯಗಳ ಮೇಲೆ ಅಪೀಲು ಬಂದರೆ ಅವುಗಳನ್ನು ತೆಗೆದುಕೊಂಡು ನಿರ್ಣಯಿಸುವ ಅಧಿಕಾರವು ಟ್ರಸ್ಟ್ ಕಮೀಟಿಗೆ ಇರುತ್ತದೆ.

೫. (ಅ) ಸಂಸ್ಥೆಯ ಯಾವತ್ತೂ ಲೆಕ್ಕಪತ್ರಗಳ ತಪಾಸಣೆಗಾಗಿ ಯೋಗ್ಯ ಮತ್ತು ಅನುಭವವುಳ್ಳ ಲೆಕ್ಕಪತ್ರಗಳ ಜ್ಞಾನವುಳ್ಳಂಥ ಅಡಿಟರ್‌ರನ್ನು ನೇಮಿಸತಕ್ಕದ್ದು. ಮತ್ತು ಅವರ ವೇತನವನ್ನು ಗೊತ್ತು ಮಾಡತಕ್ಕದ್ದು. (ಬ) ಅಡಿಟರ್‌ರು ಮಾಡಿದ ರಿಪೋರ್ಟ್‌ನ್ನು ಟ್ರಸ್ಟ್ ಬೋರ್ಡಿನವರು ವಿಚಾರ ಮಾಡಿ ಪಾಸು ಮಾಡತಕ್ಕದ್ದು. ಹೀಗೆ ಪಾಸಾದ ರಿಪೋರ್ಟ್‌ನ್ನು ಹಾಗೂ ಲೆಕ್ಕಪತ್ರಗಳನ್ನು ಮುದ್ರಿಸಿ ಯಾತ್ರೆಯ ಕಾಲದಲ್ಲಿ ಸಂಸ್ಥೆಯ ಹಿತಚಿಂತಕರಿಗೂ, ಸಹಾಯಕರಿಗೂ ಕಳಿಸತಕ್ಕದ್ದು ಅಥವಾ ಕೊಡತಕ್ಕದ್ದು.

೬. ಅಧ್ಯಕ್ಷರು ಯಾತ್ರಾಕಾಲದ ಹೊರತು ಮಧ್ಯದಲ್ಲಿ ಬೇಕಾದ ವೇಳೆಗೆ ಬೇಕಾದ ಕಾಲದಲ್ಲಿ ಟ್ರಸ್ಟ್ ಕಮೀಟಿಯನ್ನು ಕರೆಯಬಹುದು. ಅಧ್ಯಕ್ಷ ಗೈರು-ಹಾಜರಿಯಲ್ಲಿ ಉಪಾಧ್ಯಕ್ಷರಾದರೂ ಕಮೀಟಿಯನ್ನು ಕರೆಯಬಹುದು.

೭. (ಅ) ಪ್ರಸಂಗ ವಿಶೇಷದಲ್ಲಿ ಮ್ಯಾನೇಜಿಂಗ್ ಟ್ರಸ್ಟಿಗಳು ಅಥವಾ ಮ್ಯಾನೇಜಿಂಗ್ ಟ್ರಸ್ಟಿಯು ಇನ್ನೊಬ್ಬ ಟ್ರಸ್ಟಿಯನ್ನು ಕೂಡಿಕೊಂಡು ಟ್ರಸ್ಟ್ ಕಮೀಟಿಯನ್ನು ಬೇಕಾದಾಗ, ಬೇಕಾದ ಸ್ಥಳದಲ್ಲಿ ಕರೆಯಬಹುದು.

(ಬ) ಒಟ್ಟು ಟ್ರಸ್ಟ್ ಕಮೀಟಿಯ ಅರ್ಧ ಟ್ರಸ್ಟಿ ಜನರು ಕೂಡಿ ಪ್ರಸಂಗ ವಿಶೇಷದಲ್ಲಿ ಟ್ರಸ್ಟ್ ಕಮೀಟಿಯನ್ನು ಕರೆಯಲಿಕ್ಕೆ ಅಧ್ಯಕ್ಷರಾಗಲಿ ಅಥವಾ ಮ್ಯಾನೇಜಿಂಗ್ ಟ್ರಸ್ಟಿಯವರಾಗಲಿ ಲೇಖಿಯಿಂದ ತಿಳಿಸಿ ಅವರು ಕರೆಯದೇ ಇದ್ದ ಪಕ್ಷದಲ್ಲಿ ತಮ್ಮ ಜವಾಬ್ದಾರಿಯ ಮೇಲಿಂದ ಬೇಕಾದಾಗ ಟ್ರಸ್ಟ್ ಕಮೀಟಿಯನ್ನು ಶಿವಯೋಗ ಮಂದಿರದಲ್ಲಿ ಕರೆಯಬಹುದು. ಇಂಥ ಸಭೆಯಲ್ಲಿ ಪಾಸಾದ ನಿರ್ಣಯಗಳು ೨/೩ ಮತಾಧಿಕ್ಯದಿಂದ ಪಾಸಾದರೆ ಅಮಲಿನಲ್ಲಿ ಬರುವುದು.

೮. ಐವತ್ತು ರೂಪಾಯಿ ಅಥವಾ ಅದಕ್ಕಿಂತ ಹೆಚ್ಚಿನ ಸಂಬಳದ ಕಾಯಂ ನೌಕರರನ್ನು ನೇಮಿಸುವುದು. ಮತ್ತು ತೆಗೆಯುವುದು ಟ್ರಸ್ಟ್ ಬೋರ್ಡಿನವರಿಗೆ ಅಧಿಕಾರವಿದೆ.

೯. ಈ ಸಂಸ್ಥೆಯ ಹಿತಚಿಂತಕರೂ, ಆಶ್ರಯದಾತರೂ, ಸಂಸ್ಥೆಯ ಸಂಬಂಧ ನಡೆದಿರುವ ಮತ್ತು ನಡೆಯಿಸುವ ಕೆಲಸಗಳ ವಿಷಯಕ್ಕೆ ಸೂಚನೆಗಳನ್ನು ಮಾಡಿದರೆ ಅವುಗಳ ವಿಚಾರವನ್ನು ಟ್ರಸ್ಟ್ ಕಮೀಟಿಯವರು ಅವಶ್ಯವಾಗಿ ಮಾಡತಕ್ಕದ್ದು. ಇಂಥ ಸೂಚನೆಗಳನ್ನು ಕೊಡಲು ಯೋಗ್ಯರೆಂದೆನಿಸುವ ವೀರಶೈವ ಸದ್ಗೃಹಸ್ಥರ ಒಂದು ಆಲೋಚನಾ ಮಂಡಳಿಯನ್ನು ಟ್ರಸ್ಟ್ ಕಮೀಟಿಯವರು ಗೊತ್ತುಪಡಿಸಿಕೊಂಡು ಬೇಕಾದಾಗ ಅವರಿಂದ ಸೂಚನೆಗಳನ್ನು ಕೇಳಿಕೊಳ್ಳಬಹುದು.

೧೦. ಶಿವಯೋಗ ಮಂದಿರದ ಮತ್ತು ಎಲ್ಲ ಉಪಸಂಸ್ಥೆಗಳ ಮಹತ್ವದ ಕಾಗದ ಪತ್ರಗಳು ಶಿವಯೋಗ ಮಂದಿರಲ್ಲಿ ಟ್ರಸ್ಟ್ ಬೋರ್ಡಿನವರು ನೇಮಿಸಿದ ಅಧಿಕಾರಿಗಳ ಜವಾಬ್ದಾರಿಯಲ್ಲಿರತಕ್ಕದ್ದು.

೧೧. ಶಿವಯೋಗ ಮಂದಿರದ ಎಲ್ಲ ಉಪಸಂಸ್ಥೆಗಳ ಯಾವುದೆ ಚರ-ಸ್ಥಿರ ಆಸ್ತಿಗಳ ರಿಜಿಸ್ಟರನ್ನು ತಯಾರಿಸಿ ವಾರ್ಷಿಕ ರಿಪೋರ್ಟಿನಲ್ಲಿಯೇ ಪ್ರಸಿದ್ಧ ಮಾಡಬೇಕು.

೧೨. ಈ ಸಂಸ್ಥೆಗೆ ಭಿಕ್ಷೆ, ಕಾಣಿಕೆ, ವರ್ಷಾಶನ, ಭೂದಾನ ಮುಂತಾದ ರೂಪದಿಂದ ಸಹಾಯ ಮಾಡಿದವರ ಒಂದು ರಿಜಿಸ್ಟರ್ ಮಾಡಿ ಆಯಾ ಸದರಿನಲ್ಲಿ ಅವರವರ ಹೆಸರು ಬರೆದು ಇಡಬೇಕು.

೧೩. ಕಮೀಟಿಯನ್ನು ವರ್ಷದೊಳಗೆ ಮೂರುಸಾರಿ ಕನಿಷ್ಠ ಪಕ್ಷ ಏಳು ದಿವಸಗಳ ಅವಧಿಯನ್ನಿಟ್ಟು ನೋಟಿಸಿನಿಂದ ಕರೆಯಬೇಕು. ಜರೂರಿ ಪ್ರಸಂಗ ಬಂದರೆ ೨೪ ತಾಸು ಅವಧಿಯನ್ನಿಟ್ಟು ತಾರಿಖಿನಿಂದ ಟ್ರಸ್ಟ್ ಕಮೀಟಿಯನ್ನು ಕರೆಯಬಹುದು. ಪ್ರಸಂಗ ಬಿದ್ದಲ್ಲಿ ಸರ್ಕ್ಯುಲೇಶನ್ ದ್ವಾರದಿಂದಲೂ ಅಭಿಪ್ರಾಯವನ್ನು ತರಿಸಿಕೊಳ್ಳಬಹುದು.

೧೪. ಕಮೀಟಿಯ ಮೆಂಬರ್‌ರ ೧/೩ರಷ್ಟು ಮೆಂಬರು ಕೂಡಿದರೆ ಕೋರಂ ಆಯಿತೆಂದು ತಿಳಿಯತಕ್ಕದ್ದು.

೧೫. ಗೊತ್ತು ಮಾಡಿದ ದಿವಸ ಕೋರಂ ಆಗದೆ ಇದ್ದ ಪಕ್ಷದಲ್ಲಿ ಮತ್ತೊಂದು ತಾರೀಕು ನೇಮಿಸತಕ್ಕದ್ದು. ಆ ಕಾಲಕ್ಕೆ ನಾಲ್ಕು ಜನ ಮೆಂಬರ್‌ರು ಕೂಡಿದರೂ ಸಹ ನಮೂದೆ ಮಾಡಿದ ವಿಷಯಗಳ ಮಟ್ಟಿಗೆ ಸಭೆಯ ಕಾರ್ಯವನ್ನು ನಡೆಸಬಹುದು.

೧೬. ಸತತ ಮೂರು ಕಮೀಟಿಯ ಸಭೆಗಳಿಗೆ ಯೋಗ್ಯ ಕಾರಣವಿಲ್ಲದೆ ಗೈರು-ಹಾಜರಿ ಇದ್ದ ಯಾವುದೇ ಟ್ರಸ್ಟಿಯನ್ನು ಟ್ರಸ್ಟ್ ಜಾಗದಿಂದ ಕಡಿಮೆ ಮಾಡಿ ಪುನಃ ಬೇರೆಯವರನ್ನು ಅಥವಾ ಅವರನ್ನೇ ನೇಮಿಸುವ ಅಧಿಕಾರವು ಕಮೀಟಿಗೆ ಇರುತ್ತದೆ.

೧೭. ಯಾವತ್ತು ಕೆಲಸದ ಜವಾಬ್ದಾರಿಯು ಕಮೀಟಿಯ ಮೇಲೆ ಇರುವುದರಿಂದ ಪ್ರೆಸಿಡೆಂಟರಾಗಲಿ ಅಥವಾ ಟ್ರಸ್ಟ್ ಕಮೀಟಿಯ ಮೆಂಬರರಾಗಲಿ, ಈ ಸಂಸ್ಥೆಯ ಶಾಖೆಗಳಿಗೆ ಹೋಗಿ ಯೋಗ್ಯ ರೀತಿಯಿಂದ ಎಲ್ಲ ವ್ಯವಸ್ಥೆಯ ಬಗ್ಗೆ ತಪಾಸಣೆ ಮಾಡಿ ಅಲ್ಲಿದ್ದ ಶರಾ ಬುಕ್ಕಿನಲ್ಲಿ ತಮ್ಮ ಅಭಿಪ್ರಾಯವನ್ನು ಬರೆಯಬೇಕು. ಮತ್ತು ಆ ಬಗ್ಗೆ ಟ್ರಸ್ಟ್ ಬೋರ್ಡಿಗೆ ತಿಳಿಸಬೇಕು.

೧೮. ಕಮೀಟಿಗಳಿಗೆ ಮೆಂಬರ್‌ರು ಬಂದಾಗ್ಗೆ ಅವರು ಹೋಗಿ ಬರುವ ರೇಲ್ವೆ ಚಾರ್ಜ ಹಾಗೂ ಮೇಲಿನ ಕಲಮಿನಲ್ಲಿ ಹೇಳಿದ ಕರ್ತವ್ಯವನ್ನು ಮಾಡುವಾಗ ತಗಲಿದ ಯೋಗ್ಯ ವೆಚ್ಚವನ್ನು ಸಂಸ್ಥೆಯಿಂದ ಕೊಡುವುದರಲ್ಲಿ ಬರುವುದು.

೧೯. ಈ ಸಂಸ್ಥೆಯ ಉತ್ಪನ್ನದ ಮರ್ಯಾದೆಯೊಳಗೆ ಮತ್ತು ಟ್ರಸ್ಟ್ ಕಮೀಟಿಯವರು ಬಜೆಟ್ಟಿನಿಂದ ಮಂಜೂರ ಮಾಡಿದ ಹಣದಲ್ಲಿ ಸಂಸ್ಥೆಯ ಕಾರ್ಯವನ್ನು ನೆರವೇರಿಸಬೇಕು. ಆದರೆ ವಿಶೇಷ ಪ್ರಸಂಗದಲ್ಲಿ ಅಕಸ್ಮಾತ್ ಕೆಲಸದ ಸಲುವಾಗಿ ವರ್ಷದಲ್ಲಿ ೧೫೦ ರೂಪಾಯಿಗಳವರೆಗೆ. ಅಧ್ಯಕ್ಷರಿಗೂ ೧೦೦ ರೂಗಳವರೆಗೆ ಉಪಾಧ್ಯಕ್ಷ ಅಥವಾ ಮ್ಯಾನೇಜಿಂಗ್ ಟ್ರಸ್ಟಿ ಇವರಿಗೂ ಖರ್ಚು ಮಾಡುವ ಅಧಿಕಾರವಿರುತ್ತದೆ. ಹೀಗೆ ವೆಚ್ಚ ಮಾಡಿದ ಹಣವು ಮುಂದೆ ಕೂಡಿದ ಯಾವುದೇ ಟ್ರಸ್ಟ್ ಕಮೀಟಿಯಲ್ಲಿ ಮಂಜೂರ ಆದ ನಂತರ ಮತ್ತು ಅಷ್ಟು ರಕಮಿನವರೆಗೆ ಖರ್ಚುಮಾಡಲಿಕ್ಕೆ ಅಧಿಕಾರ ಬರುವುದು.

೨೦. ಹಿಂದಿನ ವರ್ಷದ ಲೆಕ್ಕಪತ್ರ ಮತ್ತು ರಿಪೋರ್ಟ್ ಪಾಸು ಮಾಡುವುದು ಮತ್ತು ೩೫ನೇ ಕಲಮಿನಲ್ಲಿ ಹೇಳಿದಂತೆ ಅಡಿಟರ್‌ರ ರಿಪೋರ್ಟ್‌ನೊಡನೆ ಇದನ್ನು ಪ್ರಸಿದ್ಧಪಡಿಸುವುದು ಕಮೀಟಿಯ ಕರ್ತವ್ಯವಿದೆ.

೨೧. ಮುಂದಿನ ವರ್ಷದ ಅಂದಾಜು ಪಟ್ಟಿಯನ್ನು ತಯಾರಿಸಿ ಪಾಸು ಮಾಡುವುದು ಕಮೀಟಿಯ ಕರ್ತವ್ಯವಿದೆ.

೨೨. ಕಮೀಟಿಯ ಮೀಟಿಂಗಿನಲ್ಲಿ ಅಧ್ಯಕ್ಷರಾದವರಿಗೆ ಕಾಸ್ಟಿಂಗ್ ವೋಟು ಕೊಡುವ ಅಧಿಕಾರವುಂಟು.

೨೩. (ಅ) ಖಾಯಂ ಉತ್ಪನ್ನ ಬರತಕ್ಕ ಈಗ ಅಸ್ತಿತ್ವದಲ್ಲಿದ್ದ ಹಾಗೂ ಮುಂದೆ ಮಾಡಲ್ಪಟ್ಟ ಸಾಧನೆಗಳಿಂದಲೂ ಮತ್ತು ಭಿಕ್ಷೆ, ಕಾಣಿಕೆ ಇತ್ಯಾದಿ ಇತರ ಉತ್ಪನ್ನಗಳಿಂದಲೂ ಈ ಸಂಸ್ಥೆಯನ್ನು ನಡೆಸುವುದು.

(ಬ) ಪ್ರಸಂಗ ವಿಶೇಷದಲ್ಲಿ ಈ ಸಂಸ್ಥೆಯ ವ್ಯವಸ್ಥೆಗಾಗಿ ಸಾಲ ತೆಗೆಯುವುದು. ಚರಾಸ್ತಿ–ಚಿರಾಸ್ತಿ ವತ್ತಿ ಹಾಕುವುದು. ಮತ್ತು ಮಾರಾಟ ಮಾಡುವುದು ಟ್ರಸ್ಟ್ ಕಮೀಟಿಯ ಅಧಿಕಾರದಲ್ಲಿರುತ್ತದೆ.

(ಕ) ಚರಾಸ್ತಿ–ಚಿರಾಸ್ತಿಗಳ ಸಂಬಂಧವಾದ ಮೇಲಿನ ಪೋಟ್ ನಿಯಮದ ಅಧಿಕಾರವನ್ನು ಯಾವದೊಂದು ಕಾಲದಲ್ಲಿ ಇದ್ದ ಒಟ್ಟು ಟ್ರಸ್ಟಿ ಜನರ ೨/೩ ಮತ್ಯೈಕ್ಯದಿಂದ ನಿರ್ಣಯಿಸಿ ನಡೆಸಬೇಕು. ಈ ಕೆಲಸಗಳ ಬಗ್ಗೆ ಟ್ರಸ್ಟ್ ಬೋರ್ಡಿನವರು ಯಾರಿಗೆ ಠರಾವಿನ ಮೂಲಕ ಅಧಿಕಾರ ಕೊಡುವರೋ ಅವರಿಗೆ ಖರೀದಿ, ಮಾರಾಟ ವೃತ್ತಿ, ಪ್ರಾಮೇಶರಿ ನೋಟ್, ಹುಂಡಿ, ಚಕ್ಕು ಮುಂತಾದ ಲೆಕ್ಕಗಳನ್ನು ಬರೆದು ಕೊಡಲಿಕ್ಕೆ ಅಧಿಕಾರವುಂಟು.

೨೪. ಈ ಸಂಸ್ಥೆಯ ಶುಲ್ಕಿನ ಹಣವನ್ನು ಯೋಗ್ಯ ಹಾಗೂ ಭದ್ರತೆಯುಳ್ಳ ಬ್ಯಾಂಕುಗಳಲ್ಲಿ ಇಡುವುದು ಕಮೀಟಿಯವರ ಅಧಿಕಾರದಲ್ಲಿರುತ್ತದೆ.

೨೫. ಶ್ರೀಮದ್ವೀರಶೈವ ಶಿವಯೋಗ ಮಂದಿರದ ಟ್ರಸ್ಟಿಯವರನ್ನಾಗಿ ನೇಮಿಸಲ್ಪಟ್ಟ ಗೃಹಸ್ಥರು ಈ ಸಂಸ್ಥೆಯ ಕಾರ್ಯಕಾರಿ ಮಂಡಲದ ಮೆಂಬರರಾಗಲು ಅಡ್ಡಿಯಿಲ್ಲ.

೨೬. ವೀರಶೈವೇತರ ಸದ್ಗೃಸ್ಥರು ಈ ಸಂಸ್ಥೆಯ ಉಪಯುಕ್ತತೆಯನ್ನು ಕಂಡು ಇಲ್ಲಿಯ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಇಮಾರತಿ ಮುಂತಾದ ಕೆಲಸಕ್ಕೆ ದ್ರವ್ಯಾದಿಗಳಿಂದ ಮಾಡಿದ ಸಹಾಯವನ್ನು ಕಮೀಟಿಯವರು ಅಭಾರ ಪೂರ್ವಕ ಸ್ವೀಕರಿಸಿ ಅವರ ಇಚ್ಛೆಯ ಪ್ರಕಾರ ಸಂಸ್ಥೆಯ ನಿಯಮಗಳಿಗೆ ವಿರೋಧವಾಗದಂತೆ ಆ ದೇಣಿಗೆಯ ವಿನಿಯೋಗವನ್ನು ಮಾಡತಕ್ಕದ್ದು.

೨೭. ಐದು ವರ್ಷಕ್ಕಿಂತ ಮೇಲಿನ ಹನ್ನೆರಡು ವರ್ಷಕ್ಕಿಂತ ಕೆಳಗಿನ ವಿದ್ಯಾರ್ಥಿಗಳನ್ನು ಈ ಸಂಸ್ಥೆಯಲ್ಲಿ ತೆಗೆದುಕೊಳ್ಳಬೇಕು. ಎಂಟು ವರ್ಷಕ್ಕಿಂತ ಮೇಲಿನವರು ನಿಧಾನ ಪ್ರಾಥಮಿಕ ಶಾಲೆಯಲ್ಲಿ ಮೂರು–ನಾಲ್ಕು ತರಗತಿಗಳವರೆಗೆ ಅಭ್ಯಾಸ ಮಾಡುವವರೆಗೂ ಅಥವಾ ಇಲ್ಲಿಯ ಕಮೀಟಿಯವರು ಪರವಾನಿಗೆ ಕೊಡುವವರೆಗೂ ಮಂದಿರದಲ್ಲಿಯೇ ಇದ್ದು ಈಗ ಮಾಡಿದ ಮತ್ತು ಮೇಲೆ ಮಾಡುವುದರಲ್ಲಿ ಬರುವ ನಿಯಮಕ್ಕನುಸರಿಸಿ ನಡೆಯತಕ್ಕದ್ದು.

೨೮. ಪ್ರವೇಶವನ್ನು ಬೇಡುವವರು ಶಿವಯೋಗ ಮಂದಿರದ ಅರ್ಜಿಯ ನಮೂನೆಯಲ್ಲಿ ಪಾಲಕರ ಮತ್ತು ಆ ಊರ ಸಭ್ಯ ಗೃಹಸ್ಥರ ಸಹಿಗಾಗಿ ಅರ್ಜಿ ಮಾಡತಕ್ಕದ್ದು. ಸದರಿ ಅರ್ಜಿ ಮಂಜೂರು ಆದ ನಂತರ ನಿಯಮ ಪ್ರಕಾರ ಲೇಖಿನ ವಗೈರಿ ಬರೆಸಿಕೊಂಡು ವಿದ್ಯಾರ್ಥಿಗಳನ್ನು ತೆಗೆದುಕೊಳ್ಳತಕ್ಕದ್ದು.

೨೯. (ಅ) ವಿದ್ಯಾರ್ಥಿಗಳಲ್ಲಿ ಯಾರಾದರೂ ಸಂಸ್ಥೆಯ ನಿಯಮಕ್ಕನುಸಾರಿಸಿ ನಡೆಯುವುದಿಲ್ಲವೆಂದು ಕಂಡುಬಂದಲ್ಲಿ ಅಥವಾ ಅದರ ವರ್ತನವು ಸಮಾಧಾನಕಾರವಿಲ್ಲದಲ್ಲಿ ಅವರನ್ನು ಅಧ್ಯಕ್ಷರಾಗಲು, ಉಪನ್ಯಾಸಕರಾಗಲಿ ಅಥವಾ ಟ್ರಸ್ಟ್ ಬೋರ್ಡಿನವರಾಗಲಿ ಹೊರಗೆ ಹಾಕಬಹುದು.

(ಬ) ಅತ್ಯಾವಶ್ಯಕ ಸಂದರ್ಭದಲ್ಲಿ ಮಂದಿರದ ವ್ಯವಸ್ಥಾಪಕರೂ ಸಹ ಅಂಥವರನ್ನು ಕೂಡಲೇ ಹೊರಗೆ ಹಾಕಬಹುದು. ಆದರೆ ಕೂಡಲೆ ಈ ಬಗ್ಗೆ ಅಧ್ಯಕ್ಷರ ಲೇಖೀ ಮಂಜೂರಿ ದೊರೆಯುವವರೆಗೆ ಬೇರೆ ಮಾತ್ರ ಇಡಬೇಕು.

(ಕ) ಹೀಗೆ ಹೊರಗೆ ಹಾಕಲ್ಪಟ್ಟ ವಿದ್ಯಾರ್ಥಿಗಳ ಬಗ್ಗೆ ಅವರನ್ನು ತೆಗೆದುಕೊಳ್ಳುವ ಕಾಲಕ್ಕೆ ಬರೆಯಿಸಿಕೊಂಡ ಕರಾರ ಪತ್ರದಲ್ಲಿ ನಮೂದಿಸಿದಂತೆ ತಜವೀಜು ಮಾಡಲು ಬರುವುದು.

ಮ್ಯಾನೇಜಿಂಗ್ ಇತರೆ ಸಬ್ ಕಮೀಟಿಗಳು

೩೦. ಮ್ಯಾನೇಜಿಂಗ್ ಕಮೀಟಿಯು ಮತ್ತು ಇತರ ಸಬ್ ಕಮೀಟಿಗಳು ಒಂದು ವರ್ಷದವರೆಗೆ ಅಥವಾ ಬೋರ್ಡ್ ಆಫ್ ಟ್ರಸ್ಟಿಯವರು ಹೊಸದಾಗಿ ನಿಯಮಿಸುವವರೆಗೆ ಕೆಲಸ ಮಾಡತಕ್ಕದ್ದು.

೩೧. ಈ ಕಮೀಟಿಯವರು ವರ್ಷದಲ್ಲಿ ನಾಲ್ಕು ಸಾರೆ ಮೂರು ತಿಂಗಳಿಗೊಮ್ಮೆ ಶಿವಯೋಗ ಮಂದಿರಲ್ಲಿ ಅಥವಾ ಬಾಗಲಕೋಟೆ ಶಿವಾನಂದ ಫ್ಯಾಕ್ಟರಿಯ ಆಫೀಸದಲ್ಲಿ ಸೇರಬೇಕು.

೩೨. ಬೋರ್ಡ್ ಆಫ್ ಟ್ರಸ್ಟಿಯವರು ನೇಮಿಸಿಕೊಟ್ಟ ಕಾರ್ಯಗಳನ್ನು ಯೋಗ್ಯ ರೀತಿಯಿಂದ ಪೋಟ್ ನಿಯಮಗಳಿಗನುಸಾರವಾಗಿ ಮಾಡತಕ್ಕದ್ದು.

೩೩. ಮ್ಯಾನೇಜಿಂಗ್ ಕಮೀಟಿಯವರು ಮತ್ತು ಇತರ ಸಬ್ ಕಮೀಟಿಯವರು ವೇಳೆ ವೇಳೆಗೆ ಕೂಡಿದ ಕಮೀಟಿಯ ಪ್ರೊಸಿಡಿಂಗ್ಸದ ನಕಲನ್ನು ಮ್ಯಾನೇಜಿಂಗ್ ಟ್ರಸ್ಟಿಯವರ ಕಡೆಗೆ ಕೂಡಲೇ ಕಳಿಸತಕ್ಕದ್ದು. ಮತ್ತು ತಾವು ಮಾಡಿದ ಕೆಲಸದ ಬಗ್ಗೆ ವಾರ್ಷಿಕ ರಿಪೋರ್ಟನ್ನು ಮತ್ತು ಅಂದಾಜು ಪತ್ರಿಕೆಗಳನ್ನು ತಯಾರಿಸಿ ಪ್ರತಿವರ್ಷದ ಮಾರ್ಗದರ್ಶಿ ಶು.೧೫ರೊಳಗೆ ಮ್ಯಾನೇಜಿಂಗ್ ಟ್ರಸ್ಟಿಗಳ ಕಡೆಗೆ ಕಳಿಸತಕ್ಕದ್ದು.

೩೪. ಮ್ಯಾನೇಜಿಂಗ್ ಕಮೀಟಿಯಲ್ಲಿ ಮತ್ತು ಇತರ ಸಬ್ ಕಮೀಟಿಗಳಲ್ಲಿ ೫ ಜನರು ಕೂಡಿದರೆ ಕೋರಂ ಎಂದು ತಿಳಿಯತಕ್ಕದ್ದು. ಮುಂದೆ ಹಾಕಿದ ಸಭೆಯಲ್ಲಿ ೩ ಜನರ ಕೋರಂ ಇರತಕ್ಕದ್ದು.

೩೫. ಸಂಸ್ಥೆಯ ಉದ್ದೇಶದ ಮೇರೆಗೆ ಬೇರೆ ಬೇರೆ ಸ್ಥಳಗಳಲ್ಲಿ ಈ ಸಂಸ್ಥೆಯ ಶಾಖೋಪಾಶಾಖೆಗಳನ್ನುಸ್ಥಾಪಿಸುವುದಾದರೆ ಬೋರ್ಡಿನ ೩/೪ ಬಹುಮತದಿಂದ ಪಾಸಾದ ಠರಾವಿನ ದ್ವಾರಾ ಮಂಜೂರಿಯನ್ನು ಹೊಂದಬೇಕು. ಇಂಥ ಹೊಸ ಶಾಖೆಯನ್ನು ಸಂಸ್ಥೆಯ ಉದ್ದೇಶಕ್ಕನುಸರಿಸಿ ಆಯಾ ಭಾಗಗಳಲ್ಲಿ ತಕ್ಕಷ್ಟು ಹಣವನ್ನು ಕೂಡಿಸಿ ಸ್ಥಾಪನೆ ಮಾಡತಕ್ಕದ್ದು. ಸದರಿ ಶಾಖಾ ಸಂಸ್ಥೆಗಳ ಚಾಲಕರು ತಮ್ಮ ಸಂಸ್ಥೆಗಳ ಆಂತರಿಕ ವ್ಯವಸ್ಥೆಗೆ ಟ್ರಸ್ಟ್ ಕಮೀಟಿಗೆ ಜವಾಬ್ದಾರರಿರುತ್ತಾರೆ. ಪ್ರತಿವರ್ಷದ ಲೆಕ್ಕಪತ್ರ, ರಿಪೋರ್ಟ್ ಹಾಗೂ ಮುಂದಿನ ವರ್ಷದ ಅಂದಾಜು ಪತ್ರಕೆಗಳನ್ನು ಮಂಜೂರಿಗಾಗಿ ಸಕಾಲದಲ್ಲಿ ಕಳಿಸಿ ಟ್ರಸ್ಟ್ ಬೋರ್ಡಿನ ಅಧಿಕಾರಕ್ಕೊಳಪಟ್ಟಿರುತ್ತದೆ. ಅನಧಿಕಾರದಿಂದ ಈ ಶಾಖಾ ಸಂಸ್ಥೆಗಳು ಮಾಡಿದ ಸಾಲ ಮುಂತಾದವುಗಳಿಗೆ ಟ್ರಸ್ಟ್ ಬೋರ್ಡಿನವರು ಜವಾಬ್ದಾರರಾಗಿರುವುದಿಲ್ಲ. ಈ ಕಮಿಟಿಯ ಕರ್ತವ್ಯಗಳನ್ನು ಹಂಚಲಾಗಿದೆ. ಈ ಕೆಳಗಿನಂತೆ

೧. ಬೋರ್ಡ್ ಆಫ್ ಟ್ರಸ್ಟಿಜ ಇವರು ನೇಮಿಸಿಕೊಟ್ಟ ಯಾವತ್ತು ಕಾರ್ಯಗಳನ್ನು ಮಾಡುವುದು.

೨. ಕಮೀಟಿಯ ಮೆಂಬರರಿಂದಾಗಲಿ ಅಥವಾ ಇತರ ಸಬ್ ಕಮೀಟಿಗಳ ಮೆಂಬರರಿಂದಾಗಲಿ ಹಾಗೂ ಯಾವುದೇ ಹಿತಚಿಂತಕರಿಂದಾಗಲಿ ಬಂದ ಸೂಚನೆಗಳನ್ನು ಕಮೀಟಿಯ ಮುಂದೆ ಇಡತಕ್ಕದ್ದು.

೩. ಸಂಸ್ಥೆಯ ಮತ್ತು ಯಾವತ್ತು ಶಾಖೆಗಳ ಬಗ್ಗೆ ಆ ಕಮೀಟಿಗಳಿಂದ ತಯಾರಿಸಿ ಬಂದ ರಿಪೋರ್ಟ್ ಮತ್ತು ಮುಂದಿನ ವರ್ಷದ ಆಯವ್ಯಯದ ಅಂದಾಜು ಪತ್ರಿಕೆಗಳನ್ನು ತಯಾರಿಸಿ ಟ್ರಸ್ಟ್ ಬೋರ್ಡಿನ ಮುಂದೆ ಸಕಾಲದಲ್ಲಿ ಇಡತಕ್ಕದ್ದು.

೪. ಟ್ರಸ್ಟ್ ಬೋರ್ಡಿನಲ್ಲಿ ಪಾಸಾದ ಯಾವತ್ತು ಠರಾವುಗಳನ್ನು ಜಾರಿಗೆ ತರುವುದು.

೫. ಕಮೀಟಿಯ ಯಾವುದೇ ಮೆಂಬರರಿಗೆ ಸಂಸ್ಥೆಯ ಬಗ್ಗೆ ಬೇಕಾದ ಮಾಹಿತಿಯನ್ನು ಕೊಡುವುದು.

೬. ಸಂಸ್ಥೆಯ ಶಾಖೋಪಶಾಖೆಗಳಿಗೆ ಹೋಗಿ ಅಲ್ಲಿಯ ಲೆಕ್ಕಪತ್ರಗಳನ್ನು ಮತ್ತು ನಿಯಮಕ್ಕೆ ಸರಿಯಾಗಿ ಕೆಲಸ ನಡೆಯುತ್ತದೆಂಬುದನ್ನು ನೋಡುವುದು. ಮತ್ತು ಜನರ ಕಡೆಯಿಂದ ಬರುವ ಬಾಕಿ ಮುದ್ಧತಿನೊಳಗೆ ವಸೂಲ ಆಗುವಂತೆ ದಾವಾ ವಗೈರೆ ವ್ಯವಸ್ಥೆ ಮಾಡುವುದು.

೭. ಸಂಸ್ಥೆಯ ಬೋರ್ಡಿನವರು ಗೊತ್ತು ಮಾಡಿಕೊಟ್ಟ ಕೋರ್ಟು-ಕಚೇರಿಗಳಲ್ಲಿ ಸಂಸ್ಥೆಯ ಪರವಾಗಿ ನಡೆಯುವ ಯಾವತ್ತು ವ್ಯಾಜ್ಯಗಳಲ್ಲಿ ಕೆಲಸ ನಡೆಯುವುದು.

೮. ಬೋರ್ಡಿನವರ ನಿರ್ಣಯದ ಪ್ರಕಾರ ಸಾಲ ತರುವ ಮತ್ತು ಕೊಡುವ ಹಾಗೂ ಅದಕ್ಕೆ ಬೇಕಾಗುವ ಕಾಗದ ಪತ್ರಗಳನ್ನು ಮಾಡಿಕೊಡುವ ಮತ್ತು ಮಾಡಿಸಿಕೊಳ್ಳುವ ಅಧಿಕಾರವು ಮ್ಯಾನೇಜಿಂಗ್ ಟ್ರಸ್ಟಿಯದು (ಗಳದು) ಇರುತ್ತದೆ.

೯. ಬೋರ್ಡಿನಿಂದ ಮೊದಲೆ ಮಂಜೂರಾದ ೮೦ ರೂಪಾಯಿಗಳಿಗಿಂತಲೂ ಕಡಿಮೆ ಸಂಬಳದ ನೌಕರರನ್ನು ನೇಮಿಸಿಕೊಳ್ಳುವುದು, ತೆಗೆಯುವುದು ಅಥವಾ ತಹಕೂಬ ಇಡುವುದು. ಹೀಗೆ ಮಾಡಿದ್ದನ್ನೆಲ್ಲ ಮುಂದಿನ ಬೋರ್ಡಿನ ಸಭೆಯಲ್ಲಿ ಇಟ್ಟು ಅದರ ಕೊನೆಯ ನಿಕಾಲೆಯನ್ನು ಪಡೆಯುವುದು. ೭೫. ೮೦ ರೂಪಾಯಿಗಳಿಗಿಂತ ಹೆಚ್ಚಿನ ಸಂಬಳದ ನೌಕರರನ್ನು ಜರೂರಿಯ ಪ್ರಸಂಗದಲ್ಲಿ ಸಸ್ಪೆಂಡ್ ಮಾಡಬಹುದು. ಹೀಗೆ ಮಾಡಿದ ಒಂದು ತಿಂಗಳಲ್ಲಿ ಬೋರ್ಡಿನ ಮುಂದೆ ಆ ವಿಷಯವನ್ನಿಟ್ಟು ಅದರ ಕೊನೆಯ ನಿಕಾಲೆಯನ್ನು ಪಡೆಯತಕ್ಕದ್ದು.

೧೦. ಹೀಗೆ ತೆಗೆಯಲ್ಪಟ್ಟ ಅಥವಾ ಸಸ್ಪೆಂಡ್ ಮಾಡಲ್ಪಟ್ಟ ನೌಕರರು ಬೋರ್ಡಿನ ಕಡೆಗೆ ಒಂದು ತಿಂಗಳದ ಒಳಗಾಗಿ ಅಪೀಲಮಾಡಬಹುದು.

೧೧. ಮ್ಯಾನೇಜಿಂಗ್ ಟ್ರಸ್ಟಿಯ ಹತ್ತಿರ ಯಾವಾಗಲೂ ಖರ್ಚಿನ ಸಲುವಾಗಿ ೨೦೦ ರೂಪಾಯಿಗಳಿಗಿಂತ ಹೆಚ್ಚಿನ ಹಣವು ಇರಕೂಡದು.

೧೨. ಈ ಸಂಸ್ಥೆಯ ಹಣವನ್ನು "ಬೋರ್ಡ್ ಆಫ್ ಟ್ರಸ್ಟಿಜ" ಇವರು ಗೊತ್ತು ಮಾಡಿದ ಅಧಿಕಾರಿಯ ಹೆಸರಿನಿಂದ ಬ್ಯಾಂಕಿನಲ್ಲಿ ಇಡತಕ್ಕದ್ದು.

೧೩. ಪ್ರಸಂಗ ವಿಶೇಷದಲ್ಲಿ ಟ್ರಸ್ಟ ಬೋರ್ಡಿನ ಪರವಾನಿಗೆ ಇಲ್ಲದೆ ಬಜೆಟ್ಟಿನಲ್ಲಿ ಪಾಸಾದ ರೂಪಾಯನ್ನು ಹೊರತುಪಡಿಸಿ ಮ್ಯಾನೇಜಿಂಗ್ ಟ್ರಸ್ಟಿಯ ತನ್ನ ಜವಾಬ್ದಾರಿಯಿಂದ ೧೦೦ ರೂಪಾಯಿಗಳವರೆಗೆ ಖರ್ಚು ಮಾಡಬಹುದು. ಆದರೆ ಇಂಥ ವೆಚ್ಚದ ಬಗ್ಗೆ ಟ್ರಸ್ಟ ಬೋರ್ಡಿನ ಮಂಜೂರಿಯನ್ನು ಆದಷ್ಟು ಶೀಘ್ರ ದೊರೆಕಿಸತಕ್ಕದ್ದು.

೧೪. ಮ್ಯಾನೇಜಿಂಗ್ ಟ್ರಸ್ಟಿಯ ಆಫೀಸಿನಲ್ಲಿ ಆಫೀಸಿನ ಕೆಲಸದ ಸಲುವಾಗಿ ಒಬ್ಬ ಕ್ಲಾರ್ಕ್ ಹಾಗೂ ಒಬ್ಬ ಸಿಪಾಯಿಯನ್ನು ನೇಮಿಸಿಕೊಳ್ಳಬಹುದು.

೧೫. ಮ್ಯಾನೇಜಿಂಗ್ ಟ್ರಸ್ಟಿಯ ಆಫೀಸು ಟ್ರಸ್ಟ ಬೋರ್ಡಿನವರು ಗೊತ್ತು ಮಾಡಿಕೊಟ್ಟ ಸ್ಥಳದಲ್ಲಿ ಇರತಕ್ಕದ್ದು.

೧೬. ಮ್ಯಾನೇಜಿಂಗ್ ಟ್ರಸ್ಟಿಯವರಲ್ಲಿ ಯಾವದೊಂದು ಕಾರ್ಯದಲ್ಲಿ ಭಿನ್ನಾಭಿಪ್ರಾಯವಾದರೆ ಬಹುಮತದಿಂದ ಕೆಲಸ ಮಾಡತಕ್ಕದ್ದು. ಅವರು ತೋರಿದ ತಮ್ಮ ತಮ್ಮ ಭಿನ್ನಾಭಿಪ್ರಾಯಗಳನ್ನು ಮತ್ತು ತೋರಿದ ಕಾರಣಗಳನ್ನು ಒಂದು ಪುಸ್ತಕದಲ್ಲಿ ಬರೆದು ಸಹಿ ಮಾಡಿ ಇಡತಕ್ಕದ್ದು. ಇಬ್ಬರು ಅಥವಾ ಮೂರು ಮ್ಯಾನೇಜಿಂಗ್ ಟ್ರಸ್ಟ್ ಬೋರ್ಡಿಗೆ ತಮ್ಮ ತಮ್ಮ ಭಿನ್ನಾಭಿಪ್ರಾಯಗಳನ್ನು ರಿಪೋರ್ಟ್ ಮೂಲಕ ತಿಳಿಸತಕ್ಕದ್ದು.

೧೭. ತಮ್ಮ ಆಫೀಸಿಗೆ ಜನರಲ್ ಮ್ಯಾನೇಜರ್‌ನ ಕಡೆಯಿಂದ ಮ್ಯಾನೇಜಿಂಗ್ ಟ್ರಸ್ಟಿಯು ಸಂಸ್ಥೆಯ ಪ್ರತಿ ದಿವಸ ಅಥವಾ ವಾರದ ರಿಪೋರ್ಟ್‌ನ್ನು ತರಿಸಿಕೊಳ್ಳತಕ್ಕದ್ದು. ಇಲ್ಲಿಯ ಜನರಲ್ ಮ್ಯಾನೇಜರ್‌ನು ಮ್ಯಾನೇಜಿಂಗ್ ಟ್ರಸ್ಟಿಯ ಅಧಿಕಾರಕ್ಕೊಳಪಟ್ಟು ಇರತಕ್ಕದ್ದು. ಸಂಸ್ಥೆಯ ಆಯಾಮ ಶಾಲೆಗಳ ಪ್ರತಿ ದಿವಸದ ಅಥವಾ ವಾರದ ರಿಪೋರ್ಟ್‌ಗಳನ್ನು ತಪ್ಪದೇ ಮ್ಯಾನೇಜಿಂಗ್ ಟ್ರಸ್ಟಿಗಳ ಕಡೆಗೆ ಕಳಿಸತಕ್ಕದ್ದು. ಸಂಸ್ಥೆಯ ಯಾವತ್ತು ನೌಕರರ ಮೇಲೆ ದೇಖರೇಖಿ ಇಡತಕ್ಕದ್ದು. ಮತ್ತು ಅವರೆಲ್ಲರು ಅವನ ಸಂಪೂರ್ಣ ಅಧಿಕಾರಕ್ಕೊಳಪಟ್ಟಿರುತ್ತಾರೆ. ಪ್ರಸಂಗ ವಿಶೇಷದಲ್ಲಿ ನೌಕರರನ್ನು ಏಳು ದಿವಸಗಳವರೆಗೆ ಕೆಲಸದಿಂದ ಸಸ್ಪೆಂಡ ಇಡಲಿಕ್ಕೆ ಜನರಲ್ ಮ್ಯಾನೇಜರ್‌ನಿಗೆ ಅಧಿಕಾರವಿರುತ್ತದೆ. ಹೀಗೆ ಸಸ್ಪೆಂಡ್ ಮಾಡಿದ ಕೂಡಲೇ ಮ್ಯಾನೇಜಿಂಗ್ ಟ್ರಸ್ಟಿಯವರಿಗೆ ಆ ವಿಷಯವಾಗಿ ಮುಂದಿನ ವ್ಯವಸ್ಥೆಯ ಕುರಿತು ರಿಪೋರ್ಟ ಮಾಡತಕ್ಕದ್ದು. ಯಾವಾಗಾದರೂ ಜನರಲ್ ಮ್ಯಾನೇಜರ್‌ನ ಕಡೆಗೆ ೧೦೦ ರೂಪಾಯಿಗಳಿಗಿಂತ ಹೆಚ್ಚು ಇಡಕೂಡದು. ತನ್ನ ಅಧಿಕಾರದ ಹೆಸರಿನಿಂದ ಚಾಲ್ತಿ ಠೇವಣಿಯಲ್ಲಿ ಬ್ಯಾಂಕಿನಲ್ಲಿ ಒಂದು ಸಾವಿರ ರೂಪಾಯಿಗಳವರೆಗೆ ಇಡತಕ್ಕದ್ದು. ಅದಕ್ಕೂ ಹೆಚ್ಚಿನ ಹಣವನ್ನು ಟ್ರಸ್ಟ್ ಬೋರ್ಡಿನವರು ಗೊತ್ತು ಮಾಡಿದ ಹೆಸರಿನಿಂದ ಬ್ಯಾಂಕಿನಲ್ಲಿಡತಕ್ಕದ್ದು. ಆದರೆ ಬ್ಯಾಂಕು ಬಂದಾಗ ನಂತರ ಜಮಾ ಬಂದಲ್ಲಿ ಮರು ದಿವಸವೇ ಬ್ಯಾಂಕಿಗೆ ಕಳಿಸತಕ್ಕದ್ದು. ಬಜೆಟ್ಟಿನಲ್ಲಿ ಮಂಜೂರು ಆದ ರಕಾಮಿನ ತುರ್ತು ಪಡಿಸಿ ತನ್ನ ಸ್ವಂತ ಜವಾಬ್ದಾರಿಯಿಂದ ೧೦೦ ರೂಪಾಯಿಗಳವರೆಗೆ ಖರ್ಚು ಮಾಡಬಹುದು. ಹೀಗೆನ ಖರ್ಚು ಮಾಡಿದ್ದಕ್ಕಾಗಿ ಮೂರು ದಿವಸಗಳಲ್ಲಿ ಮ್ಯಾನೇಜಿಂಗ್ ಟ್ರಸ್ಟಿಯ ಕಡೆಗೆ ರಿಪೋರ್ಟ್ ಮಾಡಿ ಮಂಜೂರಿ ಪಡೆಯತಕ್ಕದ್ದು. ಜನರಲ್ ಮ್ಯಾನೇಜರನು ಯಾವತ್ತು ನೌಕರ ಜನರ ಸಂಬಳದ ಬಿಲ್ಲುಗಳನ್ನು ತಯಾರಿಸಿ ಅವರ ಕಡೆಯಿಂದ ಸರಿಯಾದ ಪಾವತಿಗಳನ್ನು ತೆಗೆದುಕೊಂಡು ಸಂಬಳವನ್ನು ಕೊಡತಕ್ಕದ್ದು. ತನಗೆ ನೇಮಿಸಿಕೊಟ್ಟ ಕೆಲಸದ ಸಲುವಾಗಿ ಟ್ರಸ್ಟ್ ಕಮೀಟಿಯ ಹೆಸರಿನಿಂದ ಇದ್ದ ಹಣವನ್ನು ತೆಗೆಯುವ ಪ್ರಸಂಗದಲ್ಲಿ ಮ್ಯಾನೇಜಿಂಗ್ ಟ್ರಸ್ಟಿಯವರ ಸಹಿಯನ್ನು ಚೆಕ್ಕಿನ ಮೇಲೆ ತೆಗೆದುಕೊಳ್ಳತಕ್ಕದ್ದು. ಸಮಯಾನುಸಾರ ೫೦ ರೂಪಾಯಿಗಳಿಗಿಂತ ಕಡಿಮೆ ಸಂಬಳದ

ನೌಕರನಿಗೆ ೫ ರೂಪಾಯಿಗಳವರೆಗೆ ದಂಡ ಮಾಡುವ ಅಧಿಕಾರವು ಜನರಲ್ ಮ್ಯಾನೇಜರ್‌ನಿಗೆ ಇರುತ್ತದೆ. ಜನರಲ್ ಮ್ಯಾನೇಜರ್‌ನು ಬಾಗಲಕೋಟೆಯಲ್ಲಿರುವ ಸಂಸ್ಥೆಯ ಮತ್ತು ಖಾತೆ-ಕಿರ್ದಿ ಮುಂತಾದ ಲೆಕ್ಕದ ವಹಿಗಳಲ್ಲಿ ದಿನ ಸಹಿ ಮಾಡತಕ್ಕದ್ದು. ಟ್ರಸ್ಟ್ ಕಮೀಟಿಯ ಹಾಗೂ ಇತರೆ ಕಮೀಟಿಗಳ ಸಭಾ ಸದಸ್ಯರು ಸಂಸ್ಥೆಯ ದ್ವಾರಾ ತಮ್ಮ ಮತ್ತು ಆಪ್ತೇಷ್ಟರ ಹಿತವನ್ನು ಯಾವ ರೀತಿಯಿಂದಲೂ ಸಾಧಿಸಕೂಡದು. ವರ್ಷಾರಂಭವು ಕಾರ್ತಿಕ ಶು॥೧ ಎಂದು ತಿಳಿಯತಕ್ಕದ್ದು. ಯಾತ್ರಾಕಾಲವು (ವಾರ್ಷಿಕ ಸಮ್ಮೇಳನ ಕಾಲವು) ಮಾಘ ಬಹುಳ ೧೪ (ಮಹಾಶಿರಾತ್ರಿ) ಎಂದು ತಿಳಿಯತಕ್ಕದ್ದು. ದರವೊಂದು ಕಮೀಟಿಯಲ್ಲಿ ಹಿಂದಿನ ಕಮೀಟಿಯ ಪ್ರೊಸಿಂಡ್ಸ್ ಓದಿ ಹೇಳಿ ಮುಂದಿನ ಕೆಲಸವನ್ನು ಸಾಗಿಸತಕ್ಕದ್ದು.

ಹೀಗೆ ಈ ಮೇಲಿನ ಎಲ್ಲ ನಿಯಮಗಳನ್ನು ನೆರವೇರಿಸುವಲ್ಲಿ ಶಿವಯೋಗ ಮಂದಿರ ನೂರು ವರ್ಷದಿಂದ ಶ್ರಮಿಸುತ್ತಾ ಅಗತ್ಯ ಬದಲಾವಣೆಗಳನ್ನು ರೂಪಿಸಿಕೊಂಡು ಬರುತ್ತಲಿದೆ. ಸಂಸ್ಥೆಯ ನಿಯಮಗಳಲ್ಲಿ ಶಿಕ್ಷಣ ಪಡೆಯಲು ಮಾಹೇಶ್ವರ ವಟುಗಳಿಗೆ ಮಾತ್ರ ಪ್ರವೇಶವಿದ್ದ ಅವಕಾಶಕ್ಕೆ ತಿದ್ದುಪಡಿ ಮಾಡಲಾಗಿದೆ ಎಂದು ಆರ್.ಪಿ. ಅಪರಾಜ ತಮ್ಮ ಲಿಂಗಾಯತ ಮತ್ತು ಆಧುನಿಕ ಸಂದರ್ಭ ಎಂಬ ಪುಸ್ತಕದಲ್ಲಿ ಬರೆದುಕೊಂಡಿದ್ದಾರೆ. ಸೂಕ್ತ ಅರ್ಹರಾದ ವಟುಗಳಿಗೂ ಅವಕಾಶಕ್ಕೆ ಆದ್ಯತೆ ನೀಡಲಾಗಿದೆ. ಈಗ ಮಂದಿರದಲ್ಲಿ ಅನ್ಯ ವರ್ಗದ ವಟುಗಳೂ ಎಲ್ಲರಂತೆ ಶಿಕ್ಷಣ ಪಡೆಯುತ್ತಲಿದ್ದಾರೆ ಎಂಬ ಅಂಶವನ್ನು ಸಂಶೋಧನಾ ಕ್ಷೇತ್ರಕಾರ್ಯ ಕಾಲಕ್ಕೆ ಅಲ್ಲಿನ ಹಿರಿಯರೊಬ್ಬರು ಹೇಳಿಕೊಂಡಿದ್ದಾರೆ. ಆದರೆ ಅದಕ್ಕೆ ಸಾಕ್ಷಿಗಳು ನಮಗೆ ದೊರೆತಿರುವುದುದಿಲ್ಲ.

ಹೀಗೆ ತನ್ನ ಸ್ಥಾಪನೆಯ ಕಾಲಮಾನದಲ್ಲಿ ಅನೇಕ ಉದ್ದೇಶ, ಆಡಳಿತಮಂಡಳಿ, ಉಪಸಮಿತಿಯಿಂದ ಸಾಂಸ್ಕೃತಿಕ ಸಂವರ್ಧನೆಗೆ ಮುಂದಾದ ಶಿವಯೋಗ ಮಂದಿರದಲ್ಲಿ ಪೂಜ್ಯ ಹಾನಗಲ್ಲ ಶಿವಯೋಗಿಗಳ ನಿಧನ ನಂತರ ಆ ಸಂಸ್ಥೆಯನ್ನು ವಿಶ್ವಸ್ಥ ಮಂಡಳಿ ಅಧ್ಯಕ್ಷರು ಹಾಗೂ ಸದಸ್ಯರು ಎಂಬ ಆಡಳಿತಾಂಗದ ಸ್ವರೂಪದಲ್ಲಿ ಮುನ್ನೆಡೆಸುವ ನಿಲುವನ್ನು ಉತ್ತರ ಕರ್ನಾಟಕದ ಪ್ರಮುಖ ಮಠಾಧಿಪತಿಗಳು ನಿರ್ಣಯಿಸಿದಂತೆ ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಸಂಸ್ಥೆಯ ವಿಶ್ವಸ್ಥ ಮಂಡಳಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಪೂಜ್ಯರ ಈ ಕೆಳಗಿನಂತೆ ಮಂಡಿಸಿ ದಾಖಲಾಗಿದೆ.

ವಿಶ್ವಸ್ಥ ಮಂಡಳಿ ಅಧ್ಯಕ್ಷರು

೧. ಶಿವಬಸವ ಮಹಾಸ್ವಾಮಿಗಳು ಹಾವೇರಿ–ಹುಕ್ಕೇರಿಮಠ–೧೯೩೦ ರಿಂದ ೧೯೪೬

೨. ಮೂರುಸಾವಿರ ಮಠ ಹುಬ್ಬಳ್ಳಿ–೧೯೪೬ ರಿಂದ ೧೯೫೬–೧೯೫೮ ರಿಂದ ೧೯೭೦

೩. ಶಿವಬಸವ ಮಹಾಸ್ವಾಮಿಗಳು ನಾಗನೂರು ರುದ್ರಾಕ್ಷಿಮಠ–೧೯೭೦ ರಿಂದ ೧೯೯೩ (ಅಖಂಡ ೨೩ ವರ್ಷ)

೪. ಅನ್ನದಾನೀಶ್ವರ ಮಹಾಸ್ವಾಮಿಗಳು ಮುಂಡರಗಿ–೧೯೯೬ ರಿಂದ ೨೦೦೦

೫. ಗುರುಸಿದ್ಧರಾಜ ಯೋಗೀಂದ್ರ ಮಹಾಸ್ವಾಮಿ ಬಣ್ಣದ ಮಠ ಸಿರಸಿ–೧೯೯೬ ಹಂಗಾಮಿ

೬. ಜಗದ್ಗುರು ಸಂಗನ ಬಸವ ಮಹಾಸ್ವಾಮಿಗಳ ಹೊಸಪೇಟೆ–೧೯೯೩ ರಿಂದ ೧೯೯೫ರ ವರೆಗೆ, ೨೦೦೦ ದಿಂದ ಇಂದಿನ ವರೆಗೆ (೨೦೧೧) ಮುಂದುವರೆದು ಈ ಮೇಲಿನ ಕೆಲ ಮಠಾಧಿಪತಿಗಳು ವಿಶ್ವಸ್ಥ ಮಂಡಳಿಯ ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ ಹಾಗೂ ಸದಸ್ಯರಾಗಿ ಕಾರ್ಯನಿರ್ವಹಿಸಿದ ನಿರೂಪಗಳ ಪಟ್ಟಿ ಈ ಮುಂದಿನಂತಿದೆ.

ಶ್ರೀ ಶಿವಯೋಗ ಮಂದಿರ ಸಂಸ್ಥೆಯ ಪ್ರಥಮ ಅಧ್ಯಕ್ಷರು

ಶ್ರೀ ಗುರು ಕುಮಾರಸ್ವಾಮಿ ಹಾನಗಲ್ಲ, ತಾ: ೧೨.೦೩.೧೯೮೧. ಈ ದಿವಸ ನೆರೆದ ಸಭೆಯಲ್ಲಿ ಶ್ರೀ ಹಾನಗಲ್ಲ ಕುಮಾರಸ್ವಾಮಿಗಳಾದ ನಾವು ನಿರೂಪ ಕೊಟ್ಟ ವಿವರ ಬಾಗಲಕೋಟೆಯಲ್ಲಿ ಸನ್ ೧೯೦೮ನೇ ಇಸ್ವಿ ಡಿಸೆಂಬರ್ ತಿಂಗಳಲ್ಲಿ ನೆರೆದ ಶ್ರೀ ಮದ್ವೀರಶೈವ ಮಹಾಸಭೆಯಲ್ಲಿ ಗೊತ್ತುಪಡಿಸಿದ ಮೇರೆಗೆ ಹಾಗೂ ಶ್ರೀ ಇಳಕಲ್ಲ ಮಹಾಂತ ಶಿವಯೋಗಿಗಳು ಅಪ್ಪಣೆ ಕೊಡಿಸಿದ ಮೇರೆಗೆ ಪಂಚಕೋಶದ ಭಾಗವಾದ ಹಾಗೂ ಶ್ರೀಕ್ಷೇತ್ರ ಮಹಾಕೂಟ ಸಮೀಪವಾಗಿ ಮಲಾಪಹಾರಿ ತೀರದಲ್ಲಿ ಸನ್ ೧೯೦೯ನೇ ಇಸ್ವಿ ಫೆಬ್ರವರಿ ತಿಂಗಳ ೭ನೇ ತಾರೀಖಿಗೆ ಶ್ರೀ ಮದ್ವೀರಶೈವ ಶಿವಯೋಗ ಮಂದಿರ ಸಂಸ್ಥೆಯು ಸ್ಥಾಪಿಸಲ್ಪಟ್ಟಿದ್ದು ಸರ್ವಶೃತವಿರುತ್ತದಷ್ಟೆ. ಅದರ ಬಗ್ಗೆ ನಾವು ಭಿಕ್ಷಾ ಹಾಗೂ ಕಾಣಿಕಾ ವಸೂಲಿ ಮಾಡಿ ಚರ–ಸ್ಥಿರ ಆಸ್ತಿ ಮಾಡಿ ಈವರೆಗೂ ಅದನ್ನು ನಡೆಸಿಕೊಳ್ಳುತ್ತಾ ಬಂದಿವೆ. ಈಗ ಅದು ಕಾಯಂ ಆಗಲಿಕ್ಕೆ ಲಾಯಬ ಸ್ಥಿತಿಯಲ್ಲಿದ್ದು ಅದು ಇನ್ನು ಮುಂದೆ ಮತ್ತು ನಮ್ಮ ಪಶ್ಚಾತ್ ಸುವ್ಯವಸ್ಥೆಯಿಂದ ನಡೆಯಬೇಕೆಂಬ ಉದ್ದೇಶದಿಂದ ೨೧ ಜನರ ವರೆಗೆ ಟ್ರಸ್ಟಿಗಳನ್ನು (೭ ಜನರಿಗಿಂತ ಕಮ್ಮಿ ಇರಕೂಡದು) ನೇಮಿಸಿಕೊಂಡು ತಾವು ಅದರ ಅಧ್ಯಕ್ಷರಾಗಿ ಅಲಾಹಿದಾ ಮಾಡಿದ ನೇಮಗಳಿಗನುಸರಿಸಿ ಸಂಸ್ಥೆಯ ಉದ್ದೇಶವು ಸಫಲವಾಗುವಂತೆ ವ್ಯವಸ್ಥೆ ಮಾಡಬೇಕೆಂದು ಶ್ರೀ ಹಾವೇರಿ ಹುಕ್ಕೇರಿ ಮಠದ ಶಿವಬಸವ ಸ್ವಾಮಿಗಳವರಿಗೆ ವಿನಂತಿ ಮಾಡಿಕೊಂಡ ಪ್ರಕಾರ ಸದರಿ ಹಾವೇರಿ ಸ್ವಾಮಿಗಳು ಇದಕ್ಕೆ ಒಪ್ಪಿಕೊಂಡು ಕೆಳಗೆ ಕಾಣಿಸಿದ ಟ್ರಸ್ಟಿಗಳನ್ನು ನೇಮಿಸಿಕೊಂಡಿರುತ್ತಾರೆ. ಅವರ ಹೆಸರುಗಳು ಹೀಗಿವೆ.[೨]

೦೧. ವೇ॥ ಶಿವಲಿಂಗಶಾಸ್ತ್ರಿ ಎಸ್. ಶಾಸ್ತ್ರಿ ಧರ್ಮತರಂಗಿಣಿ ಎಡಿಟರ್ ಧಾರವಾಡ

೦೨. ಮಿ॥ ರೇವಣಸಿದ್ಧಪ್ಪಯ್ಯ ಕಿತ್ತೂರು ಎಲ್.ಸಿ.ಈಡಿ॥ಡಿ॥ ಕಲೆಕ್ಟರ್ ಧಾರವಾಡ

೦೩. ಮಿ॥ ಸತ್ಯಪ್ಪ ಸಂಗಪ್ಪ ಸಂಗಪ್ಪ ಫಾಳಿ ಬಿ.ಎ. ರಿ॥ ಮಾಮಲೇದಾರ ಧಾರವಾಡ

೦೪. ಮಿ॥ ಚನ್ನಗೌಡ ಎಸ್. ಪಾಟೀಲ ಎಲ್.ಎಮ್. ಮತ್ತು ಎಸ್. ಹುಬ್ಬಳ್ಳಿ

೦೫. ಮಿ॥ ಬಸವಲಿಂಗಪ್ಪ ಬಸವಪ್ರಭಪ್ಪ ಯಾದವಾಡ ಮರ್ಚೆಂಟ್

೦೬. ಮಿ॥ ಬಸವನಗೌಡ ಜ. ಪಾಟೀಲ ವತನದಾರ ಕೊಂಗವಾಡ

೦೭. ಮಿ॥ ವೀರಬಸವ ಎಸ್. ಶ್ರೇಷ್ಠಿ ಬಿ.ಎ. ಮ್ಯಾನೇಜರ್ ಶಿವಯೋಗ ಮಂದಿರ

ಹುಬ್ಬಳ್ಳಿ ಮೂರುಸಾವಿರ ಮಠದವರು ವಿಶ್ವಸ್ಥ ಮಂಡಳಿಯ ಅಧ್ಯಕ್ಷರಾಗಿದ್ದ ಕಾಲದಲ್ಲಿದ್ದ ವಿವರ ಹೀಗಿದೆ.[೨೭]

ಅಧ್ಯಕ್ಷರು * ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು ಮೂರುಸಾವಿರಮಠ ಹುಬ್ಬಳ್ಳಿ

ಉಪಾಧ್ಯಕ್ಷರು * ಶ್ರೀ.ನಿ.ಪ್ರ. ಬಸವಲಿಂಗಸ್ವಾಮಿಗಳು, ಗವಿಮಠ, ನವಲಗುಂದ

ಸದಸ್ಯರು * ಶ್ರೀ.ನಿ.ಪ್ರ. ಅನ್ನದಾನಿ ಸ್ವಾಮಿಗಳು, ಹಾಲಕೆರೆ

* ಶ್ರೀ.ನಿ.ಪ್ರ. ಸಿದ್ಧವೀರ ಸ್ವಾಮಿಗಳು, ಬನವಾಸಿ
* ಶ್ರೀ.ನಿ.ಪ್ರ. ಶಿವಮೂರ್ತಿ ಸ್ವಾಮಿಗಳು ಕಲಬುರ್ಗಿಮಠ, ಹುಬ್ಬಳ್ಳಿ
* ಶ್ರೀ.ನಿ.ಪ್ರ. ಶಿವಬಸವ ಸ್ವಾಮಿಗಳು, ನಾಗನೂರ
* ಶ್ರೀ.ನಿ.ಪ್ರ. ಸದಾಶಿವ ಸ್ವಾಮಿಗಳು, ಹಾನಗಲ್ಲ
* ಶ್ರೀ.ನಿ.ಪ್ರ. ಶಿವಲಿಂಗ ಸ್ವಾಮಿಗಳು, ಹಾವೇರಿ
* ಶ್ರೀ.ನಿ.ಪ್ರ. ಗುರುಸಿದ್ಧ ಸ್ವಾಮಿಗಳು, ಬಣ್ಣದಮಠ ಶಿರ್ಶಿ
* ಶ್ರೀ.ನಿ.ಪ್ರ. ಶಿವಬಸವ ಸ್ವಾಮಿಗಳು ಹೊಸಮಠ, ಹುಬ್ಬಳ್ಳಿ
* ಶ್ರೀ.ನಿ.ಪ್ರ. ಕುಮಾರ ಸ್ವಾಮಿಗಳು, ಸವದತ್ತಿ
* ಶ್ರೀ.ನಿ.ಪ್ರ. ಗುರುಮಹಾಂತ ಸ್ವಾಮಿಗಳು, ಚಿತ್ತರಗಿ–ಇಳಕಲ್ಲ
* ಶ್ರೀ.ಘ.ಚ. ರೇವಣಸಿದ್ಧ ಸ್ವಾಮಿಗಳು, ಕೆಳದಿ
* ಶ್ರೀ.ಘ.ಚ. ಶಾಂತವೀರ ಪಟ್ಟಾಧ್ಯಕ್ಷರು, ಸಿಂದಗಿ
* ಶ್ರೀ.ಘ.ಚ. ಶ್ರೀಮಂತರಾಯ ಕಾಶಿರಾಯ ಸೇಶಮುಖ, ಬಾಲ್ಕಿ
* ಶ್ರೀ.ಘ.ಚ. ಶ್ರೀ ಸಿದ್ಧರಾಮಪ್ಪನವರು ಮಾನ್ವಿ, ಗದಗ

* ಶ್ರೀ.ಘ.ಚ. ಶ್ರೀ ಸಿ.ಜೆ. ಹುಂಡೇಕಾರ, ಬಿ.ಎ. ಎಲ್.ಎಲ್.ಬಿ, ಗದಗ
* ಶ್ರೀ.ಘ.ಚ. ಶ್ರೀ ಎಸ್.ಎಸ್. ಯಾವಗಲ್ಲ ಬಿ.ಎ. ಎಲ್.ಎಲ್.ಬಿ, ಹುಬ್ಬಳ್ಳಿ

ಶ್ರೀ ಮ.ನಿ.ಪ್ರ, ಶಿವಬಸವ ಮಹಾಸ್ವಾಮಿ ಇವರ ಕಾಲದ ಶಿವಯೋಗ ಮಂದಿರದ ವಿಶ್ವಸ್ಥ ಮಂಡಳಿ ಇಂತಿದೆ.[೨೮]

ಅಧ್ಯಕ್ಷರು * ಶ್ರೀ ಮ.ನಿ.ಪ್ರ, ಶಿವಬಸವ ಮಹಾಸ್ವಾಮಿಗಳು ರುದ್ರಾಕ್ಷಿಮಠ ನಾಗನೂರು, ಬೆಳಗಾವಿ

ಉಪಾಧ್ಯಕ್ಷರು * ಶ್ರೀ ಮ.ನಿ.ಪ್ರ, ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು ಮೂರುಸಾವಿರಮಠ, ಹುಬ್ಬಳ್ಳಿ

ಸದಸ್ಯರು * ಜ. ಅನ್ನದಾನೀಶ್ವರ ಮಹಾಸ್ವಾಮಿಗಳು ಸಂಸ್ಥಾನ ಮಠ, ಮುಂಡರಗಿ

* ಜ. ಸಂಗನಬಸವ ಮಹಾಸ್ವಾಮಿಗಳು ಕೊಟ್ಟೂರು ಸ್ವಾಮಿಮಠ, ಹೊಸಪೇಟೆ
* ಶಿವಲಿಂಗ ಮಹಾಸ್ವಾಮಿಗಳು ಹುಕ್ಕೇರಿಮಠ, ಹಾವೇರಿ
* ಮಹಾಂತ ಮಹಾಸ್ವಾಮಿಗಳು ಸಂಸ್ಥಾನಮಠ, ಇಳಕಲ್ಲ
* ಪ್ರಭುರಾಜೇಂದ್ರ ಮಹಾಸ್ವಾಮಿಗಳು ಅನ್ನದಾನೀಶ್ವರ ಸಂಸ್ಥಾನಮಠ, ಹಾಲಕೆರೆ
* ಸಿದ್ಧಪ್ರಭು ಮಹಾಸ್ವಾಮಿಗಳು ಸಿದ್ಧ ಸಂಸ್ಥಾನಮಠ, ಚಿಂಚಣಿ
* ಅಡವಿ ಗುರುಸಿದ್ಧ ಸ್ವಾಮಿಗಳು ಅಡವೀಮಠ, ಅಂಕಲಗಿ
* ಶ್ರೀ ಮ.ಘ.ಚ. ಗುರುಸಿದ್ಧ ಶಿವಾಚಾರ್ಯರು ಸಂಸ್ಥಾನಮಠ, ಕೆಳದಿ
* ಶ್ರೀ ಪುಟ್ಟರಾಜ ಗವಾಯಿಗಳು ವೀರೇಶ್ವರ ಪುಣ್ಯಾಶ್ರಮ, ಗದಗ
* ಶ್ರೀ ಸದಾಶಿವಯ್ಯನವರು ವಸ್ತ್ರದ, ಗುಳೇದಗುಡ್ಡ
* ಶ್ರೀ ಮಹಾಂತಯ್ಯನವರು ವಸ್ತ್ರದ, ಗುಳೇದಗುಡ್ಡ
* ಶ್ರೀ ಅರಳೆಪ್ಪನವರು ಪಟ್ಟಣದ, ಬಾದಾಮಿ
* ಶ್ರೀ ಅನ್ನದಾನಪ್ಪನವರು ಮಾನ್ವಿ, ಗದಗ
* ಶ್ರೀ ರಾಜಶೇಖರಪ್ಪನವರು ಹೊಸಕೇರಿ, ನರಗುಂದ
* ಶ್ರೀ ಮೌನಪ್ಪ ತಪಶೆಟ್ಟಿ, ಬಾಗಲಕೋಟೆ

ಶ್ರೀ ಅನ್ನದಾನೀಶ್ವರ ಮಹಾಸ್ವಾಮಿ ಶಿವಯೋಗ ಮಂದಿರ ಸಂಸ್ಥೆಯ ವಿಶ್ವಸ್ಥ ಮಂಡಳಿಯ ವಿವರ ಈ ಕೆಳಗಿನಂತಿದೆ.[೫]

ಅಧ್ಯಕ್ಷರು : ಶ್ರೀ ಮ.ನಿ.ಪ್ರ ಜಗದ್ಗುರು ಡಾ. ಅನ್ನದಾನೀಶ್ವರ ಮಹಾಸ್ವಾಮಿಗಳು ಸಂಸ್ಥಾನಮಠ, ಮುಂಡರಗಿ

ಉಪಾಧ್ಯಕ್ಷರು : ಶ್ರೀ ಮ.ನಿ.ಪ್ರ, ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು ಮೂರುಸಾವಿರಮಠ, ಹುಬ್ಬಳ್ಳಿ

ಸದಸ್ಯರು : ಜ. ಸಂಗನಬಸವ ಮಹಾಸ್ವಾಮಿಗಳು ಕೊಟ್ಟೂರು ಸ್ವಾಮಿಮಠ, ಹೊಸಪೇಟೆ

* ಶ್ರೀ ಕುಮಾರಸ್ವಾಮಿಗಳು ವಿರಕ್ತಮಠ, ಹಾನಗಲ್ಲ
* ಶ್ರೀ ಶಿವಲಿಂಗ ಮಹಾಸ್ವಾಮಿಗಳು ಹುಕ್ಕೇರಿಮಠ, ಹಾವೇರಿ
* ಶ್ರೀ ಮಹಾಂತ ಮಹಾಸ್ವಾಮಿಗಳು ಸಂಸ್ಥಾನಮಠ, ಇಳಕಲ್ಲ
* ಶ್ರೀ ಶಿವಲಿಂಗ ಮಹಾಸ್ವಾಮಿಗಳು ವಿರಕ್ತಮಠ, ದೇಶನೂರು
* ಶ್ರೀ ಗಂಗಾಧರ ಮಹಾಸ್ವಾಮಿಗಳು ಶಾಖಾ ಮೂರುಸಾವಿರಮಠ, ಬೈಲಹೊಂಗಲ
* ಶ್ರೀ ಅಡವಿ ಗುರುಸಿದ್ಧ ಸ್ವಾಮಿಗಳು ಅಡವೀಮಠ, ಅಂಕಲಗಿ
* ಶ್ರೀ ಸಿದ್ಧರಾಮ ಮಹಾಸ್ವಾಮಿಗಳು ರುದ್ರಾಕ್ಷಿಮಠ, ಬೆಳಗಾವಿ
* ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಸುವರ್ಣಗಿರಿ ವಿರಕ್ತಮಠ, ಒಳಬಳ್ಳಾರಿ
* ಶ್ರೀ ಶಾಂತಲಿಂಗ ಮಹಾಸ್ವಾಮಿಗಳು ವಿರಕ್ತಮಠ, ದುಧನಿ
* ಶ್ರೀ ಪುಟ್ಟರಾಜ ಗವಾಯಿಗಳು ವೀರೇಶ್ವರ ಪುಣ್ಯಾಶ್ರಮ, ಗದಗ
* ಶ್ರೀ ಗದಿಗೆಪ್ಪ ದೇಶನೂರ, ಬೈಲಹೊಂಗಲ
* ಶ್ರೀ ವೀರಣ್ಣ ಚರಂತಿಮಠ, ಬಾಗಲಕೋಟೆ
* ಶ್ರೀ ವಿರುಪಾಕ್ಷಪ್ಪ ಗಂಗಲ್, ಚೊಳಚಗುಡ್ಡ
* ಶ್ರೀ ಜಿ.ಎಸ್. ಪಾಟೀಲ, ರೋಣ
* ಶ್ರೀ ರಾಜಶೇಖರಪ್ಪನವರು ಹೊಸಕೇರಿ, ನರಗುಂದ
* ಶ್ರೀ ಮೌನಪ್ಪ ತಪಶೆಟ್ಟಿ, ಬಾಗಲಕೋಟೆ

ಶತಸಂವತ್ಸರಗಳನ್ನು ಪೂರ್ಣವಾಗಿ ಅನುಭವಿಸಿದ ಮಂದಿರವನ್ನು ಈ ಎಲ್ಲ ವಿಶ್ವಸ್ಥ ಮಂಡಳಿಯು ಮುನ್ನಡೆಸಿದೆ. ಇಲ್ಲಿ ಶ್ರೀಶಿವಬಸವಮಹಾಸ್ವಾಮಿಗಳು ರುದ್ರಾಕ್ಷಿಮಠ ಇವರು ಅಖಂಡ ೨೩ ವರ್ಷ ಸುದೀರ್ಘಕಾಲ ಮುನ್ನಡೆಸಿದ್ದಾರೆ. ನಂತರದಲ್ಲಿ ಅಂದರೆ ಪ್ರಸ್ತುತ ಅಧ್ಯಕ್ಷರಾಗಿರುವ ಸಂಗನಬಸವಮಹಾಸ್ವಾಮಿಗಳು ಎರಡನೇ ಅತಿ ದೀರ್ಘಕಾಲ ಸಂಸ್ಥೆಯಲ್ಲಿ ಮುಂದುವರಿದಿದ್ದಾರೆ. ಇದಕ್ಕೆ ಕಾರಣ ಅವರ ಕಾರ್ಯದಕ್ಷತೆ ಹಾಗೂ ಮಂದಿರ ಸ್ಥಾಪನೆ ಆಶಯಕ್ಕೆ ಅವರು ಕೊಟ್ಟ ಕೊಡುಗೆ ಎಂದರೆ ತಪ್ಪಾಗಲಾರದು. ಹಾಗಾಗಿ ಅವರು ಮತ್ತೊಂದು ಅವಧಿಗೆ ೨೦೧೧ರಿಂದ ಮುಂದುವರಿದಿದ್ದಾರೆ. ಸಾಧಿಸುವುದು ಸಾಕಷ್ಟಿದೆ, ಸಾಧಿಸಿದ್ದು ಮಾತ್ರ ಅಲ್ಪ ಎಂದು ಸದಾ ನುಡಿಯುತ್ತಾ ಸಮಾಜಮುಖಿ ಕಲ್ಪನೆಗೆ ಮೂರ್ತರೂಪ ನೀಡಲು ಯತ್ನಿಸುತ್ತಿದ್ದಾರೆ.

ಅಡಿ ಟಿಪ್ಪಣಿಗಳು

೧. ಬೆಳಗಿನೊಳಗನ ಬೆಳಗು–ಮು.ಸಂ–೬

೨. ಅದೇ–ಮು.ಸಂ–೧೨

೩. ಅದೇ–ಮು.ಸಂ–೧೩

೪. ಉತ್ತಂಗಿ ಚನ್ನಬಸಪ್ಪ ಜೀವನ ಚರಿತ್ರೆ–ಮು.ಸಂ–೧೯

೫. ಹೊಸಗನ್ನಡ ಸಾಹಿತ್ಯದ ಉದಯ ಕಾಲ–ಮು.ಸಂ–೯

೬. ಬೆಳಗು–ಮು.ಸಂ–೨೦೭

೭. ಕುರುಹು–ಮು.ಸಂ–೨೯

೮. ಬೆಳಗು–ಮು.ಸಂ–೨೦೭

೯. ಅದೇ–ಮು.ಸಂ–೨೦೮

೧೦. ಅದೇ–ಮು.ಸಂ–೨೦೧೧

೧೧. ಬೆಳಗು–ಮು.ಸಂ–೨೧೩

೧೨. ಬೆಳಗಿನೊಳಗನ ಬೆಳಗು–ಮು.ಸಂ–೧೩೬

೧೩. ಶ್ರೀ ವಿಜಯಮಹಾಂತೇಶ್ವರ ಲೀಲೆ–ಮು.ಸಂ–೨೫೫

೧೪. ಶಿವಯೋಗ ಮಂದಿರ ರಿಪೋರ್ಟ್–೧೯೦೯

೧೫. ಶಿವಯೋಗ ಮಂದಿರ ರಿಪೋರ್ಟ್–೧೯೧೧

೧೬. ದಾಸೋಹ ಸಿರಿ–ಮು.ಸಂ–೪೨

೧೭. ಬೆಳಗಿನೊಳಗನ ಬೆಳಗು–ಮು.ಸಂ–೫೪

೧೮. ಅದೇ–ಮು.ಸಂ–೫೬

೧೯. ಅದೇ-ಪು.ಸಂ-೧೦೨

೨೦. ಅದೇ-ಪು.ಸಂ-೧೧೫

೨೧. ಅದೇ-ಪು.ಸಂ-೧೨೨

೨೨. ಬೆಳಗು-ಪು.ಸಂ-೨೨೦

೨೩. ಶಿವಯೋಗ ಮಂದಿರದ ಪ್ರಥಮ ವರದಿ-೧೯೧೯

೨೪. ಅದೇ-ಪು.ಸಂ-೧೨

೨೫. ಶಿವಯೋಗ ಮಂದಿರದ ನಿಯಮ-ಪು.ಸಂ-೧ ೧೯೧೯

೨೬. ಶಿವಲಿಂಗ ವಿಜಯ-ಪು.ಸಂ-೨೦

೨೭. ಶಿವಯೋಗಿರಾಜ ಶ್ರೀ ಶಿವಬಸವ-ಪು.ಸಂ-೨

೨೮. ಬೆಳಗು-ಪು.ಸಂ-೨೬೬

೨೯. ಶಿವಯೋಗ ಮಂದಿರ ಸೂಚಿ-ಪು.ಟ-೪೨

ಅಧ್ಯಾಯ - ಮೂರು

ಶಿವಯೋಗ ಮಂದಿರ : ಹಾನಗಲ್ಲ ಕುಮಾರ ಶಿವಯೋಗಿಗಳು

೧. ಬಾಲ್ಯ-ವಿದ್ಯಾಭ್ಯಾಸ
೨. ಸಾಮಾಜಿಕ ಕಾರ್ಯಗಳು

ಅಧ್ಯಾಯ - ಮೂರು

ಶಿವಯೋಗಮಂದಿರ : ಹಾನಗಲ್ಲ ಕುಮಾರ ಶಿವಯೋಗಿಗಳು

ಉಚ್ಚ-ನೀಚ ಭಾವನೆಯನ್ನು ತೊಡೆದು ಸರ್ವಸಮಾನತೆಯಿಂದ ಮನುಕುಲವನ್ನೇ ಪ್ರೀತಿಸುವುದು. ಪ್ರತಿಯೊಬ್ಬ ಮನುಷ್ಯನ ಉದ್ಧಾರಕ್ಕಾಗಿ ಶ್ರಮಿಸುವುದು. ಇಂತ ವಿಶಿಷ್ಟ ಗುಣಗಳ ಸಮಾಜ-ಸಾಹಿತ್ಯ-ಸಂಸ್ಕೃತಿಗಳಲ್ಲಿ ಬಂದವರು ಈ ನಾಡಿನ ಪುಣ್ಯಪುರುಷರು. ಅಂತಹ ಪುಣ್ಯ ಪುರುಷರ ದುಡಿಮೆಯ ಕಾರಣವಾಗಿ, ಬಸವಾದಿ ಪ್ರಥಮರ ನೂರೊಂದು ವಿರಕ್ತರು, ಶಿವಯೋಗಿಗಳು, ಆಚಾರ್ಯಪುರುಷರು ಸರ್ವಾಂಗ ಪರಿಪೂರ್ಣರು ಈ ನೆಲದಲ್ಲಿ ಹೆಮ್ಮರವಾಗಿ ಬೆಳೆದಿದ್ದಾರೆ. ಭಕ್ತಿ ಜ್ಞಾನ ಸ್ವರೂಪರಾದ ಶ್ರೀ ಕುಮಾರ ಶಿವಯೋಗಿಗಳು ಬಸವಾದಿ ಪ್ರಥಮರ ತತ್ವಗಳನ್ನು ಬೆಳಗಲು ಶರಣ ಧರ್ಮವನ್ನು ಪುನರ್ ಸ್ಥಾಪಿಸಲೆಂದೇ ಜನಿಸಿ ಬಂದವರು. ಶರಣರಿಗೆ ಸರಿ ದೊರೆಯಾಗಿ ದೀನರಿಗೆ ದಯಾಮೂರ್ತಿಯಾಗಿ, ಗುರುಗಳಿಗೆ ಪರಮ ಗುರುವಾಗಿ ಭಕ್ತ ಸ್ವಾತಂತ್ರ್ಯ ಕರುಣಿಸಿದರು. ಅವರ ಜನನವು ಒಂದು ಮಹಾ ಘಟನೆಯೇ ಸರಿ. ಈ ನಾಡಿನ ಭಾಗ್ಯೋದಯಕ್ಕೆ ಪೂರ್ವದಲ್ಲಿ ಅವರ ಪೂರ್ವಿಕರ ನೆಲೆಯ ಬಗ್ಗೆ ನಿಖರವಾದ ಯಾವುದೇ ದಾಖಲೆಗಳಾಗಲಿ, ಮಾಹಿತಿಗಳಾಗಲಿ ಉಪಲಬ್ಧವಿಲ್ಲ. ಈ ಕುರಿತು ಹಾನಗಲ್ಲ ಕುಮಾರಸ್ವಾಮಿಗಳು: ಒಂದು ಅಧ್ಯಯನ ಎಂಬ ಸಂಶೋಧನಾ ಕೃತಿಯಲ್ಲಿ ಮಾತ್ರ ಪ್ರಕಟವಾಗಿದೆ. ಇದುವರೆಗೆ ಅವರ ಜೀವನ ಚರಿತ್ರೆ ನಿರೂಪಿಸಿದ ಕೃತಿ-ಲೇಖನಗಳ ಆಧರಿಸಿ 'ಶ್ರೀ ಕುಮಾರೇಶ್ವರರ ಪೂರ್ವಜರು ಮೂಲತಃ ಬಳ್ಳಾರಿ ಜಿಲ್ಲೆಯ ಕೊಟ್ಟೂರಿನವರು. ಇಲ್ಲಿಂದ ವಲಸೆ ಬಂದು ಹಾವೇರಿ ಜಿಲ್ಲೆ ರಾಣಿಬೆನ್ನೂರು ತಾಲೂಕಿನ ಜೋಯಿಸರಹರಳಳ್ಳಿ ಗ್ರಾಮದಲ್ಲಿ ನೆಲೆಸಿದ ಮನೆತನವಾಗಿದೆ. ಬೆಳಕನಕೊಂಡದ ಮಳಿಯಪ್ಪ-ಶಾಂತಮ್ಮ ಎಂಬ ಶಿವಭಕ್ತಿ ಸಂಪನ್ನ ದಂಪತಿಗಳು ತಮ್ಮ ಮನೆಯ ಹತ್ತಿರದ ಜಾಗದಲ್ಲಿ ಈ ಮನೆತನದವರಿಗೂ ವಾಸಿಸಲು ಸ್ಥಳವನ್ನು ಕೊಟ್ಟು

ಇಲ್ಲಿಯೇ ಮನೆ ಕಟ್ಟಿಕೊಂಡು ವಾಸಿಸುವಂತೆ ಸೂಚಿಸುತ್ತಾರೆ. ಅದರಂತೆ ಕೊಟ್ಟೂರು ಬಸವಾರ್ಯರು ಕರಿಹಂಚಿನ ಚಿಕ್ಕ ಮನೆಯೊಂದನ್ನು ನಿರ್ಮಿಸಿಕೊಂಡು ಜೀವನ ಮಾಡ ಹತ್ತಿದರು. ಬಳ್ಳಾರಿ ಭಾಗದಲ್ಲಿ ಉಂಟಾದ ಆ ಕಾಲದ ಭೀಕರ ಬರಗಾಲದ ಹಾವಳಿಗೆ ಜನ ತತ್ತರಿಸಿ ಹೋಗಿದ್ದರು. ಮೇಲಿಂದ ಮೇಲೆ ಬರುತ್ತಿದ್ದ ಬರಗಾಲ, ಪ್ಲೇಗ್ ಕಾಯಿಲೆಗೆ ಅಧಿಕ ಜನರು ಅಸುನೀಗಿದ್ದಲ್ಲದೆ ವಲಸೆ ಕೂಡ ಹೋಗಿರುವುದು ಮಾಹಿತಿಯಿಂದ ತಿಳಿದುಬರುತ್ತದೆ. ಬರಗಾಲ-ಬಡತನದಿಂದಾಗಿ ನಲುಗಿ ಹೋಗಿದ್ದಾಗ ಕೊಟ್ಟೂರು ಬಸವಾರ್ಯರು ಜೋಯಿಸರ ಹರಳಹಳ್ಳಿ ಗ್ರಾಮಕ್ಕೆ ಬಂದು ಅಕ್ಷರ ದೀಕ್ಷೆಯ ವೃತ್ತಿ ಆರಂಭಿಸಿದರು. ಮನೆಯಲ್ಲಿಯೇ ಶಾಲೆಯನ್ನು ಮಾಡಿಕೊಂಡು ಗ್ರಾಮದ ಮಕ್ಕಳಿಗೆ ಅಕ್ಷರ ಕಲಿಸಿದರು. ಕಂತಿಭಿಕ್ಷೆ ಮಾಡಿ ಅದರಿಂದ ಬಂದ ಪ್ರಸಾದವನ್ನು ಮಕ್ಕಳಿಗೆ ಉಣಬಡಿಸಿ ಅಕ್ಷರ ದಾಸೋಹ ಆರಂಭಿಸಿದರು. ಅವರಲ್ಲಿದ್ದ ಶಿಸ್ತು, ಸಂಯಮ, ಶ್ರದ್ಧೆ, ಅಂತಃಶಕ್ತಿ, ಆತ್ಮಸ್ಥೈರ್ಯ ಬಡತನ ಮರೆಸಿ ಗ್ರಾಮಸ್ಥರಲ್ಲಿ, ವಿದ್ಯಾರ್ಥಿಗಳಲ್ಲಿ ಅಗಾಧ ಪರಿವರ್ತನೆಯನ್ನು ಮಾಡಿತು. ಅವರ ಸಾಲಿ ಕಲಿಸುವ ವೃತ್ತಿಯ ಘನತೆಯಿಂದಾಗಿ 'ಸಾಲಿಮಠ ಬಸವಾರ್ಯರು' ಎಂಬುದಾಗಿಯೇ ಗ್ರಾಮದಲ್ಲಿ ಹೆಸರಾದರು. ಅಕ್ಷರ ಸಂಸ್ಕೃತಿಯ ಕಾರಣವಾಗಿ ಈ ಮನೆತನಕ್ಕೆ 'ಸಾಲಿಮಠ' ಎಂಬ ಹೆಸರು ಅಡ್ಡ ಹೆಸರಾಗಿ ಬಂದಿತು. ಹೀಗೆ ಈ ಎರಡೂ ಅನ್ವರ್ಥಕಗಳು ಶ್ರೀ ಕುಮಾರ ಶಿವಯೋಗಿಗಳ ಪೂರ್ವಜರ ಪೂರ್ವೇತಿಹಾಸವನ್ನು ಸ್ಪಷ್ಟಪಡಿಸುತ್ತದೆ.

ಪೂರ್ವಿಕರ ಬದುಕಿನ ಆಚಾರ-ವಿಚಾರ, ನಡೆ-ನುಡಿ, ಶಿಸ್ತು, ಸಂಯಮಗಳಿಂದ ಬಾಳಿದ ಅನುಭಾವ ಅಜ್ಜ ಬಸವಾರ್ಯರ ಪ್ರಭಾವಗಳೆ ಶ್ರೀ ಕುಮಾರ ಶಿವಯೋಗಿಗಳ ವ್ಯಕ್ತಿತ್ವ ನಿರ್ಮಾಣಕ್ಕೆ ಮೂಲ ಪ್ರೇರಣೆಯಾಯಿತೆನ್ನಬಹುದು. ಮಳೆಶಾಂತಸ್ವಾಮಿಗಳ ಮಠ, ಗುರುಶಾಂತಸ್ವಾಮಿಗಳ ಮಠಗಳಿರುವ ಜೋಯಿಸರಹರಳಹಳ್ಳಿ ಗ್ರಾಮ ಬಸವಾರ್ಯರ ಸಾಲಿಮಠದಿಂದಾಗಿ ತನ್ನ ಸಾಂಸ್ಕೃತಿಕ ಹಿರಿಮೆಯನ್ನು ಹೆಚ್ಚಿಸಿಕೊಂಡಿದ್ದಲ್ಲದೇ ಶ್ರೀ ಕುಮಾರರ ಜನನದಿಂದಾಗಿ ನಾಡಿನ ಇತಿಹಾಸದಲ್ಲಿ ಮಾಸದ ಮುದ್ರೆಯಾಗಿ ಉಳಿದಿದೆ.

೧. ಬಾಲ್ಯ-ವಿದ್ಯಾಭ್ಯಾಸ

ಮೃಗದಿಂದ ಕಸ್ತೂರಿಯೂ, ಖಣಿಯಿಂದ ರತ್ನವೂ, ಸಿಂಪಿಯಿಂದ ಮುತ್ತುಗಳೂ ಉದಯವಾಗುವಂತೆ ಜಗತ್ತಿನಲ್ಲಿಯ ಯಾವ ಸುಪ್ರಸಿದ್ಧ ಚರಿತ್ರಾ ನಾಯಕರು ಅವತಾರಗಳಾಗಿರುವುದಿಲ್ಲ. ಚರಿತ್ರಾ ನಾಯಕರ ಉಗಮಸ್ಥಾನಗಳು ಹಳ್ಳಿಗಳೇ ಆಗಿರುತ್ತವೆಂದು ಹೇಳಬಹುದು. ನಮ್ಮ ಚರಿತ್ರಾ ನಾಯಕರಾದ ಹಾನಗಲ್ಲ ಸ್ವಾಮಿಗಳವರ ಜನ್ಮಸ್ಥಾನವು ಹಳ್ಳಿಯೇ ಆಗಿದೆ. ಧಾರವಾಡ ಜಿಲ್ಲೆಯೊಳಗಿನ ರಾಣೆಬೆನ್ನೂರು ತಾಲೂಕಿನಲ್ಲಿ ಜೋಯಿಸರಹರಳಹಳ್ಳಿ ಎಂಬ ಗ್ರಾಮದಲ್ಲಿ. ಅಲ್ಲಿ ಸಾಲಿಮಠವೆಂಬ ಹೆಸರಿನ ಮನೆತನ ಶಾಖಾನುವರ್ತಿಯಾದ

ಗುರುಸ್ಥಾನವಿರುತ್ತದೆ. ಅಲ್ಲಿ ಸುಮಾರು ಒಂದುನೂರು ವರ್ಷಗಳ ಕೆಳಗೆ ಕೊಟ್ಟೂರಪ್ಪಯ್ಯ ಎಂಬ ಸಾಧು ಗೃಹಸ್ಥ ಗಣಂಗಳಿದ್ದರು. ಅವರಿಗೆ ಬಸವಪ್ಪಯ್ಯ ಎಂಬ ಮಹಾ ಆಚಾರಶೀಲನೂ, ವಾಕ್ಯಸಿದ್ಧಿಯವನೂ ಆದ ಓರ್ವ ಮಗನಿದ್ದನು. ಅವರಿಗೆ ಅದೇ ರಾಣೆಬೆನ್ನೂರು ತಾಲೂಕಿನಲ್ಲಿರುವ ಲಿಂಗದಹಳ್ಳಿ ಹಿರೇಮಠದಲ್ಲಿ ಜನಿಸಿದ ನೀಲಮ್ಮ ಎಂಬ ಕನ್ಯೆಯನ್ನು ನಿಶ್ಚಯಿಸಿ ಲಗ್ನ ಮಾಡಿದರು. ಕೆಲ ದಿವಸಗಳ ಮೇಲೆ ಓರ್ವ ಗಂಡು ಕೂಸು ಜನಿಸಿತು. ಇದಕ್ಕೆ ಶಿವಬಸಯ್ಯ ಎಂದು ನಾಮಕರಣ ಮಾಡಿದರು. ಕೆಲ ವರ್ಷದ ನಂತರ ಸತಿಶಿರೋಮಣಿಯಾದ ನೀಲಮ್ಮನ ಸ್ವಪ್ನದಲ್ಲಿ ಓರ್ವ ತಪಸ್ವಿಯು ದರ್ಶನವನ್ನು ಕೊಟ್ಟನು. ಸುಂದರವೂ, ಸುಗಂಧವೂ ಆದ ಒಂದು ಪುಷ್ಪವನ್ನು ಆ ಸಾಧ್ವಿಯ ಕೈಯೊಳಗಿಟ್ಟನು. ನಮಗೋರ್ವ ಪುತ್ರನನ್ನು ಕೊಡುವಂತೆ ಆಗ ಕೇಳಿದಳಂತೆ. ಅದರಂತೆ ಆ ಮಾತೆಯು ಗಂಡುಕೂಸಿಗೆ ಜನ್ಮ ನೀಡಿದಳು. "ಈ ದಂಪತಿಗಳಿಗೆ ಎರಡನೆಯ ಪುತ್ರರಾಗಿ ಪ್ರಭವನಾಮ ಸಂವತ್ಸರ ಭಾದ್ರಪದ ಶುಕ್ಲಪಕ್ಷ ತ್ರಯೋದಶಿಯ ಬುಧುವಾರ ಬೆಳಗ್ಗೆ ಸೂರ್ಯೋದಯದ ವೇಳೆಗೆ ಅಂದರೆ ಕ್ರಿ.ಶ. ೧೮೬೭ರಲ್ಲಿ ಶ್ರೀ ಕುಮಾರ ಶಿವಯೋಗಿಗಳ ಜನನವಾಯಿತು."[೧] "ಜನಿಸಿದ ಮಗುವಿಗೆ ಜನ್ಮನಾಮದ ಪ್ರಕಾರ 'ಖಿಂಬಣ್ಣ' ಎಂದು ನಾಮಕರಣ ಮಾಡಬೇಕೆಂದುಕೊಂಡಿದ್ದ ಬಸಯ್ಯ-ನೀಲಮ್ಮರು ತಾವು ನಂಬಿರುವ ನಂಬಿಗೆಯ ಕುರುವಿಗಾಗಿ ಮಗುವಿಗೆ ಹಾಲಯ್ಯ ಎಂದು ಹೆಸರಿಟ್ಟರು."[೨]

ಹಾಲಯ್ಯ ಬೆಳೆದಂತೆ ಹಾಲಯ್ಯ ಮಾಸ್ತರರಾಗಿ, ಹಾಲಯ್ಯ ದೇಶಿಕರಾಗಿ, ಹಾನಗಲ್ಲ ಮಠದ ಸದಾಶಿವಸ್ವಾಮಿ ಎಂದು ನಾಮಕರಣಗೊಂಡರು. ಶ್ರೀ ಮ.ನಿ.ಪ್ರ. ಕುಮಾರಸ್ವಾಮಿಗಳು ಎಂಬ ಗುರುವಾಗಿ ಸಮಾಜದ ಕಾರಣಿಕ ಶ್ರೀಕುಮಾರ ಶಿವಯೋಗಿಯಾಗಿ ಬೆಳೆದರು.

"ಹೊಲೆಗಂಡಲ್ಲದೆ ಪಿಂಡದ ನೆಲೆಗೆ ಆಶ್ರಯವಿಲ್ಲ ಜಲಬಿಂದುವಿನ ವ್ಯವಹಾರವೊಂದೇ... ಕರ್ಣದಲ್ಲಿ ಜನಿಸಿದವರುಂಟೆ?"[೩] ಎಂದು ಬಸವಣ್ಣ ಕೇಳುವಂತೆ ಹಾಲಯ್ಯ ಹುಟ್ಟಿದುದು ಕೂಡ ನಮ್ಮ ನಿಮ್ಮಂತೆಯೇ. ತಂದೆ-ತಾಯಿಗಳಿಟ್ಟ ಹೆಸರಿನ ಪರಿಪೂರ್ಣಾರ್ಥದಲ್ಲಿ ಸಾರ್ಥಕ ಪಡಿಸಿಕೊಂಡ ವ್ಯಕ್ತಿಗಳಲ್ಲಿ ಅವರೂ ಒಬ್ಬರೆಂಬುದು ನಿರ್ವಿವಾದ.

ಆರು ವರುಷದವನಾಗಿದ್ದಾಗ ಅಜ್ಜ, ಬಸವಾರ್ಯನು ಅಕ್ಷರದ ದೀಕ್ಷೆ ಕೊಡುತ್ತಾರೆ. ಒಂದು ಮಹಾಚೇತನವನ್ನು ಪೋಷಿಸಲು ಅಗತ್ಯವಾದ ಪರಿಸರವನ್ನು ಅಜ್ಜಯ್ಯನವರೇ ಬಾಲಕ ಹಾಲಯ್ಯನಿಗೆ ನೀಡಿದರು. ಅವರ ಪ್ರೇರಣಾಶಕ್ತಿ, ಮನಸ್ಸಿನ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿದವರು. ಬಸವಾರ್ಯರ ಆಧ್ಯಾತ್ಮಿಕ ಚಿಂತನೆಯು ಬಾಲಕ ಹಾಲಯ್ಯನನ್ನು ಅಲೌಕಿಕ ಅತೀಂದ್ರಿಯ ಸ್ತರಕ್ಕೆ ಅವ್ಯಕ್ತವಾಗಿ ಗಟ್ಟಿಗೊಳಿಸಹತ್ತಿತು. 'ಮನುಷ್ಯ ತಾನೊಂದು ಬಗೆದರೆ, ದೈವ ಮತ್ತೊಂದನ್ನು ಬಗೆದಿರುತ್ತದೆ' ಎಂಬಂತೆ ಹಾಲಯ್ಯನು ಎಂಟು ವರ್ಷದವನಿದ್ದಾಗ, ತಂದೆ

ಬಸವಯ್ಯನವರನ್ನು ವಿಧಿ ಸೆಳೆದುಕೊಂಡಿತು. ಕುಟುಂಬದಲ್ಲಿ ಬಡತನ, ಮನೆ ತುಂಬಾ ಮಂದಿ ಬಾಲಕ ಹಾಲಯ್ಯನಿಗೆ ವಿದೀರ್ಣವಾದ ಅಜ್ಜನ ವಾತ್ಸಲ್ಯವು ಶ್ರೀರಕ್ಷೆಯಾಯಿತು. ಬಾಲಕನಲ್ಲಿ ಬಾಲ ಸಹಜ ಗುಣಗಳಾದ ಆಟಗಳೊಂದಿಗೆ ಅಜ್ಜಯ್ಯನವರ ಪಾಠಗಳನ್ನು ಏಕಚಿತ್ತದಿಂದ ಆಲಿಸುವುದು ಕುತೂಹಲದೊಂದಿಗೆ ಪ್ರಶ್ನಿಸುವುದು, ಗಹನವಾದ ಆಲೋಚನೆಗಳು ವಿನಮ್ರ ಗುಣಗಳು ಗಟ್ಟಿಗೊಂಡವು. ಆದರೂ ಮನಸ್ಸು ಏನೇನೋ ಮೆಲಕು ಹಾಕುತ್ತಿತ್ತು. ವಯಸ್ಸಿಗೆ ಮೀರಿದ ಅಲೌಕಿಕ ಸಂಗತಿಗಳು ಚಿಂತನಶೀಲತೆ, ಏಕಾಂತದಲ್ಲಿ ಅಲೆಯುವಾಗ, ಆಡುವಾಗ ಪಾಠ ಕೇಳುವಾಗಲೆಲ್ಲ ಏನನ್ನೊ ಸಾಧಿಸುವಂತಹ ಏಕಾಗ್ರತೆ ವ್ಯಕ್ತವಾಗುತ್ತಿತ್ತು.

ವಿಧಿಲೀಲೆಯೊಂದೆಡೆ, ಒಂದು ದೊಡ್ಡ ಕುಟುಂಬ ಕಡುಬಡತನದ ಜೀವನ ಪ್ರತಿನಿತ್ಯ ಇಬ್ಬರು ಇಲ್ಲವೆ ಮೂವರು ನೆರೆಯ ಹಳ್ಳಿಗೆ ಹೋಗಿ ಕಂತಿಭಿಕ್ಷೆ ಮಾಡದ ವಿನಹ ಕುಟುಂಬದ ಚರಿತಾರ್ಥವೇ ಸಾಗುವಂತಿದ್ದಿಲ್ಲ. ಆರು ವರ್ಷದ ಬಾಲಕ ಹಾಲಯ್ಯ ಊರಿನಲ್ಲಿಯ ಅಜ್ಜಯ್ಯನ ಗಾವಠೀ ಶಾಲೆಯಲ್ಲಿ ಅಕ್ಷರಾಭ್ಯಾಸವನ್ನು ಮಾಡುತ್ತಾ, ಕಂತಿಭಿಕ್ಷೆಯ ಕಾಯಕವನ್ನು ನಡೆಸುತ್ತಿದ್ದನು. ಆಟ, ಪಾಠ, ಬಡತನ, ಭಿಕ್ಷೆ, ಪಾಪ, ಪುಣ್ಯ, ದೇವರು, ಜಗತ್ತು, ಸೃಷ್ಠಿ, ಸಮಾಜ, ಶಿಕ್ಷಣ ಹೀಗೆ ಎಲ್ಲದರೊಂದಿಗೆ ಮನೆ ಮನೆ ಅಲೆಯಬೇಕಾಗಿತ್ತು. ಒಮ್ಮೊಮ್ಮೆ ತುಂಬಾ ಗಹನವೂ ಉನ್ನತವೂ, ಆದ ವಿಚಾರಗಳ ಕಡೆಗೂ ಎರಿಳಿಯುತ್ತಿತ್ತು. ಒಮ್ಮೆ ಕಂತಿಭಿಕ್ಷೆಗಾಗಿ ಜೋಳಿಗೆ, ಬೆತ್ತ ಹಿಡಿದು ಮನೆ ಮನೆ ಅಲೆಯುತ್ತಿದ್ದರು. ಓರ್ವ ವಯೋವೃದ್ಧನಾದ ಲಿಂಗಾಯತ ಮನುಷ್ಯನು ಹಾಲಯ್ಯನಿಗೆ "ಏ ಅಯ್ಯಪ್ಪ ನೀ ಹಿಂಗ ಎಷ್ಟು ದಿವಸಂತ ಭಿಕ್ಷಾ ಬೇಡಾವಾ? ಇನ್ನೂ ವಯಸ್ಸು ಸಣ್ಣದ ಕಾಣತೈತಿ, ಓದಿ ಬರೆದ ಮಾಡಿ ಬುದ್ಧಿವಂತನಾಗೋದನ್ನ ಬಿಟ್ಟು, ದಿನಾ ಭಿಕ್ಷೆ ಬೇಡಿದರ ಆಗೋದೇನು? ನೀ ಹುಟ್ಟದಿದ್ದರ ಜಗತ್ತೇನೂ ಹಾಳಾಗಿ ಹೋಗತಿತ್ತ!"[೪] ಎಂದು ಕಳಕಳಿಯಿಂದ ಬೈದನು. ಆಗ ಆ ಯಜಮಾನನ ಮಾತು ಹಾಲಯ್ಯನ ಮನದಲ್ಲಿ ನಾಟಿ, ತನ್ನ ಕಂತಿಭಿಕ್ಷೆಯನ್ನು ಅರ್ಧಕ್ಕೆ ಮುಗಿಸಿದರು. ದುಃಖಿತನಾಗಿ ಮುದುಕನ ಕಳಕಳಿ ಮಾತು ಮನದೊಳಗೆ ಮರುಕಳಿಸಿ, ತನ್ನ ಪರಿಸ್ಥಿತಿಗಾಗಿ ಕಣ್ಣೀರು ಸುರಿಸುತ್ತಾ ಮನೆಯ ದಾರಿ ಹಿಡಿದನು. ಭಿಕ್ಷೆ ಮಾಡುವುದನ್ನು ನಿಲ್ಲಿಸಿ ಮುಂದಿನ ವಿದ್ಯಾಭ್ಯಾಸಕ್ಕಾಗಿ ಯೋಚನಾ ಮಗ್ನನಾದನು. ಅಜ್ಜಯ್ಯನ ಗಾವಠೀ ಶಾಲೆಯಲ್ಲಿ ೩ನೇ ಈಯತ್ತೆಯವರೆಗೆ ಓದಿದ ಹಾಲಯ್ಯ ದೇವರಗುಡ್ಡ ರೈಲ್ವೆನಿಲ್ದಾಣದ ಪಕ್ಕದಲ್ಲಿ ಪವಡಿಸಿರುವ ಕಜ್ಜರಿ ಗ್ರಾಮಕ್ಕೆ ಮುಂದಿನ ಓದಿಗಾಗಿ ಹೋದನು. ಅಲ್ಲಿ ಮಹಾದೇವಪಂತ ಜೋಗಳೇಕರ ಎಂಬುವರು ನುರಿತ ಶಿಕ್ಷಕರಿದ್ದರು. ಅವರ ಶಾಲೆಯ ಕೀರ್ತಿ ಸುತ್ತೆಲ್ಲ ಪ್ರಸಿದ್ಧಿಯನ್ನು ಪಡೆದಿತ್ತು. ಕಜ್ಜರಿ ಗ್ರಾಮದಲ್ಲಿ ಹಿರೇಮಠ ರಾಚಯ್ಯನೆಂಬ ಯಜಮಾನ ಹಾಗೂ ಇನ್ನುಳಿದವರ ಉದಾರಾಶ್ರಯವನ್ನು ಪಡೆದು ಮುಲ್ಕಿ ಪರೀಕ್ಷೆಯವರೆಗೆ ಅಲ್ಲಿಯೇ ಓದಿದನು. ಆ ಶಾಲೆಯಲ್ಲಿ ಒಳ್ಳೆಯ ಪ್ರತಿಭಾವಂತ ವಿದ್ಯಾರ್ಥಿಯೆಂದು ಹೆಸರನ್ನೂ

ಗಳಿಸಿದನು. 'ಅಸುಂಡಿ ಶಿವನಗೌಡ' ಎಂಬ ಸಹಪಾಠಿಯೊಂದಿಗೆ ಧಾರವಾಡಕ್ಕೆ ನಡೆದುಕೊಂಡೇ ಹೋಗಿ ಮುಲ್ಕಿ ಪರೀಕ್ಷೆಯನ್ನು ಬರೆದರೂ ಅನುತ್ತೀರ್ಣರಾದರು. ಪುರುಷನ ಭಾಗ್ಯ ಅರಿಯುವುದು ಸುಲಭವಲ್ಲ! ಪರೀಕ್ಷೆ ಪಾಸಾಗಿದ್ದರೂ ಶಾಲೆಯ ಮಾಸ್ತರನಾಗಿಯೋ, ಮತ್ತೇನೋ ಆಗಿ ಬದುಕು ಮಾಡಬೇಕಿತ್ತು. ದೈವಬಲವೋ ಏನೋ ಜಗದ ಶಿಕ್ಷಕನಾಗಿ ಜನಜೀವನಕ್ಕೆ ಬೋಧಕನಾಗುವ ಫಲ ನಿನ್ನದಾಗಲೆಂಬ ಶಿವಸಂಕಲ್ಪ ಹಾಲಯ್ಯನನ್ನು ಆಧ್ಯಾತ್ಮ ಚಿಂತನೆಯತ್ತ ತಿರುಗಿಸಿತ್ತು.

ಸೋಲಾದಾಗ ಮುಗಿಲೇ ತಲೆಯ ಮೇಲೆ ಬಿದ್ದಂತೆ ಚಿಂತಿಸುತ್ತ ಕೂಡುವ ಜಾಯಮಾನದವನಲ್ಲ ಹಾಲಯ್ಯ. ಸೋಲು ಅವನ ಜೀವನಕ್ಕೆ ಇನ್ನೊಂದು ದಿಕ್ಕನ್ನು ಹಿಡಿಸಿತು. ಮುಂದೆ ತಾನು ಕೈಗೊಳ್ಳಲಿರುವ ಸಮಾಜ ಶಿಕ್ಷಣದ ಮಹಾಮಣಿಹಕ್ಕೆ ಒಂದು ಬಗೆಯ ತರಬೇತಿಯೆಂಬಂತೆ ಹದಿಹರಯದ ಹಾಲಯ್ಯ ತನ್ನ ತಾಯಿಯ ತವರುಮನೆ ಲಿಂಗದಹಳ್ಳಿಗೆ ಬಂದು ಒಂದು ಗಾವಠೀ ಶಾಲೆ ಆರಂಭಿಸಿದನು. ಯಾವುದೋ ಸಂದರ್ಭದಲ್ಲಿ ಹಾಲಯ್ಯನ ಕಣ್ಣಿಗೆ ನಿಜಗುಣರ ಗ್ರಂಥಗಳು ಬಿದ್ದವು. ಮೊದಲು ನಿಜಗುಣರ ಕೆಲವು ಹಾಡುಗಳನ್ನು ಬಿಡಿಬಿಡಿಯಾಗಿ ಹಾಲಯ್ಯ ಓದಿದ್ದನಾದರೂ, ಇಡಿಯಾಗಿ ಅವುಗಳನ್ನು ಓದಿರಲಿಲ್ಲ. ಈಗ ಅವರ ಕೃತಿಗಳ ಅಧ್ಯಯನ, ಅಲ್ಲಿಯ ತತ್ವ ವಿವೇಚನೆ ಹಾಲಯ್ಯನ ಮನಸ್ಸನ್ನು ಬಹುವಾಗಿ ಆಕರ್ಷಿಸಿತು. ಇದು ಹಾಲಯ್ಯನ ಸಹಜ ವೈರಾಗ್ಯಪರ ಮನೋಭಾವನೆಯ ಸೂಚಕವಾಗಿದೆ. ಅದೇ ಊರಿನಲ್ಲಿದ್ದ ಸಮಾಳದ ಬಸಪ್ಪನೂ ನಿಜಗುಣರ ಆರಾಧಕ, ಸರಿ ಇಬ್ಬರೂ ಕೂಡಿದರು. ಅಲ್ಲಿ ನಿಜಗುಣರ ಗ್ರಂಥಗಳ ಅಧ್ಯಯನ ನಡೆದರೆ ಶಾಲೆಯಲ್ಲಿ ಮಕ್ಕಳಿಗೆ ಅಧ್ಯಾಪನ ಕಾರ್ಯ ಮುಂದುವರಿಯಿತು.

ಹುಟ್ಟಿನೊಡಗೂಡಿ ಬಂದಂತಿದ್ದ ಬೀಜರೂಪದ ಹಾಲಯ್ಯನ ವಿರಕ್ತ ಮನೋಭಾವನೆಯನ್ನು ನಿಜಗುಣರ ಕೃತಿಗಳ ಅಧ್ಯಯನ ಮೆಲ್ಲಮೆಲ್ಲನೆ ಹದಗೊಳಿಸಲಾರಂಭಿಸಿತ್ತು. ಅದೇ ಸಮಯಕ್ಕೆ ಮದುವೆಯ ವಯಸ್ಸಿಗೆ ಬಂದ ಮಗನಿಗೆ ಮದುವೆ ಮಾಡಿಸುವ ಸಹಜ ಬಯಕೆಯಿಂದ ತಾಯಿ ನೀಲಮ್ಮ ಮಗನನ್ನು ಕಾಣಲು ಲಿಂಗದಹಳ್ಳಿಗೆ ಬಂದೇಬಿಟ್ಟಳು. ತಾಯಿಯ ಬಯಕೆಯನ್ನು ತಿಳಿದ ಹಾಲಯ್ಯ ಒಂದು ವರ್ಷದ ಮೇಲೆ ತನ್ನ ನಿರ್ಧಾರ ತಿಳಿಸುವುದಾಗಿ ಹೇಳಿ ಕಳುಹಿಸಿದನು. ಹದಿಹರೆಯ ಮೆಲ್ಲಮೆಲ್ಲನೆ ತಾರುಣ್ಯಕ್ಕೆ ಪುಟಿದೆಳುತ್ತಿರುವ ಹಾಲಯ್ಯನಿಗೆ ಜನ್ಮವಿತ್ತ ತಾಯಿ ಮದುವೆಯ ಪ್ರಸ್ತಾಪವೆತ್ತಿದಾಗ ಕೂಡಲೇ ನಿರ್ಧಾರ ತಿಳಿಸುವುದು ಇಲ್ಲಿ ಸಾಧ್ಯವಾಗಿಲ್ಲದುದನ್ನು ಗಮನಿಸಬೇಕು. ಎರಡು ವರ್ಷಗಳುರುಳಿದವು. ತಾಯಿ ಮದುವೆಯ ಪ್ರಸ್ತಾಪವೆತ್ತುವುದನ್ನು ಬಿಡಲಿಲ್ಲ. ವಿರಕ್ತ ಮಾರ್ಗದ ಕರಕಷ್ಟತೆ, ನಿಷ್ಠುರತೆ ಅದಕ್ಕೆ ಬೇಕಾದ ಮನೋದಾರ್ಢ್ಯತೆ ಬಗ್ಗೆ ಮತ್ತೆ ಮತ್ತೆ ಆಲೋಚಿಸಿದರು. ಕೊನೆಗೆ ಅದೇ ಮಾರ್ಗಗಾಮಿಯಾಗುವ ನಿರ್ಧಾರ ಕೈಗೊಂಡರು ಹಾಲಯ್ಯ. ಮತ್ತೊಮ್ಮೆ ತನ್ನ ತಾಯಿ ಬಂದಾಗ "ಅಮ್ಮಾ ನಿನಗೆ

ಇನ್ನೊಬ್ಬ ಮಗನಿದ್ದಾನೆ. ದುಡಿಯುವುದರಲ್ಲಿ ಅವನ ಮುಂದೆ ನಾನಾವ ಗಿಡದ ತಪ್ಪಲು! ಅವನು ನಿನ್ನ ರಕ್ಷಣೆಯನ್ನೂ ಮಾಡಬಲ್ಲನೆಂಬ ವಿಶ್ವಾಸ ನನಗಿದೆ. ಅವನಿಂದ ನಮ್ಮ ವಂಶ ಮುಂದುವರಿಯುತ್ತದೆ. ನನಗೆ ಮದುವೆಯಾಗುವ ಇಚ್ಛೆಯಿಲ್ಲ. ಅದಕ್ಕಾಗಿ ಚಿಂತಿಸಬೇಕಾಗಿಲ್ಲ. ನನ್ನ ಮೇಲಿನ ಮಮತೆಯನ್ನು ನಿನ್ನ ಇನ್ನೊಬ್ಬ ಮಗನ ಮೇಲಿಟ್ಟು ತೃಪ್ತರಾಗಿ. ನಾನು ಈಗ ಹಿಡಿಯಲು ನಿರ್ಧರಿಸುವ ಹಾದಿಗೆ ಅಡ್ಡ ಬರಬೇಡಿ, ಅಡ್ಡಿ ತರಬೇಡಿ, ನನಗೆ ಜನ್ಮವಿತ್ತು, ಸಾಕಿ ಸಲಹಿದ ತಾಯಿಯ ಋಣ ತೀರದಂತಹದು. ಆದರೂ ಋಣಭಾರ ಸ್ವಲ್ಪವಾದರೂ ಕಡಿಮೆಯಾಗಬೇಕಲ್ಲ. ಇಗೋ ನನ್ನ ಕಾಯಕದಿಂದ ಬಂದ ಸಂಪಾದನೆ ಈ ಮೂನ್ನೂರು ರೂಪಾಯಿ ನಿನಗರ್ಪಿತ ಎಂದರು. ಇನ್ನೂ ಅಪ್ಪಣೆ ಕೊಡಿ"[೫] ಎಂದು ಹೇಳಿ ಹಣವನ್ನು ತಾಯಿಯ ಉಡಿಯಲ್ಲಿ ಹಾಕಿ, ಅವಳು ಬೆಕ್ಕಸ ಬೆರಗಾಗಿ ನೋಡುತ್ತಿರುವಂತೆಯೇ ಹುಬ್ಬಳ್ಳಿಯತ್ತ ದಾಪುಗಾಲು ಹಾಕಿದ ಹಾಲಯ್ಯ.

ಅವನ ರಕ್ತದ ಕಣಕಣದಲ್ಲಿ ವಿರಕ್ತಿಯೇ ಅನುರಣಿತವಾಗುತ್ತಿದ್ದುದಕ್ಕೆ ಈ ಘಟನೆ ಹಿರಿಯ ಸಾಕ್ಷಿಯಾಗಿದೆ. ತಾಯಿಗೆ ಒಬ್ಬ ಒಳ್ಳೆಯ ಮಗ ಮಾಡಬೇಕಾದ ಕರ್ತವ್ಯವನ್ನು ಹಾಲಯ್ಯ ಮಾಡಲಿಲ್ಲವೆಂದು ಸಂಸಾರವನ್ನೇ ಸರ್ವಸ್ವವೆಂದು ತಿಳಿದ ನಮ್ಮಂತಹ ಸಾಮಾನ್ಯರಿಗೆ ಅನ್ನಿಸಬಹುದು. ಆದರೆ ಸಮಸ್ತ ಸಮಾಜಕ್ಕೆ ಕವಿದ ಕಳಂಕ ಕಳೆದು ಅದರ ಉದ್ಧಾರವನ್ನೇ ತಮ್ಮ ಪರಮಧ್ಯೇಯವಾಗಿಸಿಕೊಳ್ಳಬಯಸಿದ ಮಹಿಮರಿಗೆ ಅದು ತಪ್ಪೆನಿಸುವುದಿಲ್ಲ. ಅವರದು ವಿಶ್ವ ವಿಶಾಲ ದೃಷ್ಟಿ. ನಮ್ಮದು ಸಂಕುಚಿತ ದೃಷ್ಟಿ. ಇಲ್ಲಿಗೆ ಹಾಲಯ್ಯನ ಜೀವನದ ಒಂದು ಘಟ್ಟ ಮುಗಿಯುತ್ತದೆ.

ತಮ್ಮ ಮುಂದಿನ ಕಾಲಘಟ್ಟದಲ್ಲಿ ಸಿದ್ಧಾರೂಢರಂತಹವರಲ್ಲಿ ಶಿಷ್ಯರಾಗಿ ತಾವು ಬೆಳೆದ ಪರಿಸರಕ್ಕೂ ಪ್ರಸ್ತುತ ಕಲಿಯುವ ಆರೂಢ ಪರಂಪರೆಗೂ ವ್ಯತ್ಯಾಸಗಳನ್ನು ಕಂಡರು. ತಮ್ಮ ಅನುಮಾನಗಳಿಗೆ ಉತ್ತರವನ್ನು ಬಯಸಿ ಜಡೆಯಸಿದ್ಧರನ್ನು ಕಂಡು ತಮ್ಮ ಮನೋಗತವನ್ನು ಪೂರ್ಣಗೊಳಿಸಿಕೊಂಡರು. ನಿಜಗುಣಾರ್ಯರ ಕೃತಿಯೊಳಗಿನ ಸಂಶಯ ನಿವಾರಣೆಗಾಗಿ ದರ್ಶನ ದೊರೆತು, ಅವರಲ್ಲಿ ಶಿಷ್ಯತ್ವಕ್ಕಾಗಿ ಪರೀಕ್ಷೆಗೆ ಒಳಪಟ್ಟು ಅವರಿಂದ ಶಂಭುಲಿಂಗನ ಬೆಟ್ಟದಲ್ಲಿ ದೀಕ್ಷೆಯನ್ನು ಹೊಂದಿ ಸಾಧಕರಾಗಿ ರೂಪಗೊಂಡರು. ಅಲ್ಲಿಂದ ಮುಂದೆ ಅವರ ಮೂರನೇ ಕಾಲಘಟ್ಟ ಆರಂಭವಾಗುತ್ತದೆ.

ವಿಜ್ಞಾನ ಬೆಳೆದಷ್ಟು ವೈಜ್ಞಾನಿಕ ಮನೋಭಾವವೂ ಬೆಳೆಯತೊಡಗಿತು. ಜೊತೆ ಜೊತೆಗೆ ಲೌಕಿಕ ವ್ಯವಹಾರವೂ ವಿಶ್ವದಗಲಕ್ಕೆ ವ್ಯಾಪಿಸಿತು. ಜೀವನಶೈಲಿಯಲ್ಲಿ ಆಧುನಿಕ ಮೌಲ್ಯಗಳ ಕಾರಣದಿಂದ ಮಹತ್ತರವಾದ ಪರಿವರ್ತನೆಯಾಗಿದೆ. ದೇವರ ಬಗೆಗಿನ ನಂಬಿಕೆಯಲ್ಲಿನ

ಪರಿಳಿತಗಳಿದ್ದರೂ, ಮಠ-ಮಂದಿರದ ಬಗೆಗೆ, ಮಠಾಧಿಪತಿಗಳು, ಶಿವಯೋಗಿಗಳು, ಸಾಧುಗಳ ಬಗೆಗೆ ಇನ್ನೂ ನಂಜಿಕೆ, ಪ್ರಾಮಾಣಿಕತೆ, ಭಯ, ಭಕ್ತಿ, ಅಭಿಮಾನ, ಗೌರವಗಳಿವೆ. ಆಧುನಿಕ ಕಾಲಘಟ್ಟದಲ್ಲಿ ಮಠಕ್ಕೂ, ಮಠಾಧಿಪತ್ಯಕ್ಕೂ ವಿಶಿಷ್ಟವಾದ ಮೌಲ್ಯವನ್ನು ಒದಗಿಸಿದವರೆಂದರೆ ಹಾನಗಲ್ಲ ವಿರಕ್ತಮಠದ ಎರಡನೇ ಪೀಠಾಧಿಪತಿಗಳಾದ ಹಾಲಯ್ಯನವರು. "ಮಠದಿಂದ ಘಟ ಬೆಳಗದೆ, ಘಟದಿಂದ ಮಠ ಬೆಳಗಬೇಕು" ಎಂದು ನುಡಿದು ನಡೆದವರು. ಕರ್ನಾಟಕವನ್ನಾಳಿದ ಪ್ರಾಚೀನ ಪ್ರಮುಖ ಅರಸು ಮನೆತನಗಳಲ್ಲಿ ಕದಂಬ ಮನೆತನ ಮೊದಲನೆಯದು. ಕದಂಬ ವಂಶದ ಒಂದು ಶಾಖೆ ಹಾನಗಲ್ಲನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ತದನಂತರ ಆಳಿತು. ಅವರನ್ನು ಹಾನಗಲ್ಲ ಕದಂಬರೆಂದೇ ಇತಿಹಾಸಕಾರರು ಕರೆದಿದ್ದಾರೆ. ಹೀಗೆ ರಾಜಧಾನಿ ಪಟ್ಟಣವಾದ ಹಾನಗಲ್ಲ ಪ್ರಾಚೀನವಾಗಿರುವಂತೆ ಅಲ್ಲಿಯ ಪ್ರಖ್ಯಾತ ವಿರಕ್ತಮಠಕ್ಕೂ ಪ್ರಾಚೀನ ಇತಿಹಾಸವಿದೆ. ಆ ವಿರಕ್ತಮಠದ ಮೊದಲ ಸ್ವಾಮಿಗಳಾಗಿದ್ದ ಫಕೀರಸ್ವಾಮಿಗಳು ತಪೋನಿಷ್ಠರು, ಅನ್ನದಾನಿಗಳು, ವೈರಾಗ್ಯಶಾಲಿಗಳು ಮತ್ತು ವಾಕ್‌ಸಿದ್ಧಿ ಪಡೆದವರು. ಆಗ ಅವರಿಗೆ ವಯಸ್ಸಾದುದರಿಂದ ತಮ್ಮ ಮಠಕ್ಕೆ ಒಬ್ಬ ಯೋಗ್ಯ ಉತ್ತರಾಧಿಕಾರಿಯ ಹುಡುಕಾಟದಲ್ಲಿದ್ದರು. ಇದನ್ನು ದ್ಯಾಂಪುರ ಚೆನ್ನಕವಿಗಳು ಹೀಗೆ ದಾಖಲಿಸಿದ್ದಾರೆ.

"ವರಕುಮಾರಸ್ವಾಮಿ ಮಠವೆನಿಪ್ಪೊಂದು
ಚರಮಾಶ್ರಮಮುಂಟು ಹಾನಗಲ್ಲೊಳಿದಕ್ಕೆ
ವಿರತುರಂ ಧರ್ಮಾತ್ಮರುಂ ತಪೋನಿಷ್ಠರುಂ
ಶಿವಯೋಗಿವರ್ಯರಾದ
ಪರತರ ಫಕೀರೇಶ ನಾಯಕ ಯತೀಶ್ವರರು
ಮರೆವುತಿರ್ದರು ಮುಪ್ಪವರೆದಸ್ವಾಮಿಗಳಾಗಿ
ಹರಿಭಕ್ತಕುಲದ ಯೋಗಕ್ಷೇಮವನ್ನು ಪೊತ್ತು ಪಡೆದು
ಪಾಲಿಸುತಿರ್ದರು"[೬]

ಹಾನಗಲ್ಲ ವಿರಕ್ತ ಮಠಕ್ಕೆ ತಮ್ಮ ತರುವಾಯ ಸತ್ವ-ತತ್ವಗಳೆರಡನ್ನೂ ತುಂಬಬಲ್ಲ ಯೋಗ್ಯ ಉತ್ತರಾಧಿಕಾರಿಯ ನಿರೀಕ್ಷೆಯಲ್ಲಿದ್ದರು. ಅಂತ ಸಮಯದಲ್ಲಿ ಗುರುವನ್ನಾಗಲಿ ಅನುಷ್ಠಾನಕ್ಕೆಂದು ಸೊರಬ ಪ್ರಾಂತದ ಕೆಳದಿ ರಾಜರ ಪಂಚಮಠಗಳಲ್ಲೊಂದಾದ ಕ್ಯಾಸನೂರ ಮಠದ ಸಪ್ತಕಾವ್ಯದ ಶ್ರೀ ಗುರುಬಸವಸ್ವಾಮಿಗಳ ಗದ್ದುಗೆಯಿರುವ ತಾಣದಲ್ಲಿ ಹಾಲಯ್ಯನವರು ನೆಲೆಸಿದ್ದರು. ಹಾಲಯ್ಯನವರಿಗೆ ನೆರವು ನೀಡಿದ್ದ ಉಳುವಿಯ ಮಠದ ಗುರುಬಸಯ್ಯನವರು ಹಾಗೂ ಮಳಗದ್ದೆ ಕೆಂಡಪ್ಪಗೌಡ ಇವರೀರ್ವರು ಹಾನಗಲ್ಲ ವಿರಕ್ತಮಠದ ಬಗ್ಗೆ ಅಪಾರ ಅಭಿಮಾನ ಹೊಂದಿದ್ದ ಸೇವಕರಾಗಿದ್ದರು. ಅವರಲ್ಲಿ ಫಕೀರಸ್ವಾಮಿಗಳು "ನಮಗೆ ವಯಸ್ಸಾಗಿದೆ

ಮಠಕ್ಕೆ ಉತ್ತರಾಧಿಕಾರಿಗಳನ್ನು ನೋಡಿರಿ ಎಂದು ಅಪ್ಪಣೆ ಮಾಡಿದ್ದರು. ಹಾಲಯ್ಯನವರನ್ನು ಶ್ರೀ ಫಕೀರಸ್ವಾಮಿಗಳ ಕಣ್ಣಿಗೆ ಹಾಕಬೇಕೆಂಬುದು ಅವರ ಬಯಕೆಯಾಯಿತು."[೭] ಮೂರು ವರ್ಷ ಮೌನಾನುಷ್ಠಾನಕ್ಕೆ ತೊಡಗುವ ಪೂರ್ವದಲ್ಲಿ ಮಹಾತಪಸ್ವಿಗಳಾದ ಶ್ರೀ ಫಕೀರಸ್ವಾಮಿಗಳ ದರ್ಶನ ಪಡೆಯುವುದು ಸರಿಯಾದೀತೆಂಬ ತಮ್ಮ ಸೂಚನೆಯನ್ನು ಅವರು ಹಾಲಯ್ಯರ ಮುಂದೆ ಇಟ್ಟರು. ಅದಕ್ಕೆ ಅವರು ಒಪ್ಪಿ, ಹಾನಗಲ್ಲ ವಿರಕ್ತಮಠದ ಫಕೀರಸ್ವಾಮಿಗಳ ದರ್ಶನಕ್ಕೆಂದು ಕರೆ ತರುತ್ತಾರೆ. ಫಕೀರಸ್ವಾಮಿಗಳ ಮನದಿಂಗಿತ ಹಾಲಯ್ಯನಿಗೆ ತಿಳಿಸಿದಾಗ "ನಾನೊಬ್ಬ ಸಾಧಕ, ಸಮಾಜಸೇವಕ ನನಗೇಕೆ ಈ ಮಠ-ಮಾನ್ಯಗಳ ಅಧಿಕಾರವೆಂದರು. ಉರುಲಿಗೆ ಸಿಕ್ಕಿಸಿಕೊಳ್ಳದೆ ಸಮಾಜ ಸೇವೆಯಲ್ಲಿ ತೊಡಗಿರುವ ನಿರ್ಧಾರಕ್ಕೆ ಬಂದಿದ್ದಾಗಿ ಹಾಲಯ್ಯ ತಿಳಿಸಿದರು. ಆಗ ಫಕೀರಸ್ವಾಮಿಗಳು 'ತಮ್ಮಾ ಸಮಾಜ ಸೇವೆ ಮಾಡಲು ನೀನು ಸ್ವತಂತ್ರನೇ ಇರುವೆ' ಎಂದರು. ವಿರಕ್ತಸ್ವಾಮಿಗಳ ಮುಖ್ಯ ಕರ್ತವ್ಯಗಳಲ್ಲಿ ಸಮಾಜಸೇವೆಯೂ ಒಂದು. ಮಠದ ಅಧಿಕಾರ ಅದಕ್ಕೆ ಅಡ್ಡಿ ಮಾಡುತ್ತದೆಂಬ ಮಾತಿಗೆ ಅರ್ಥವಿಲ್ಲ. ನೆನಪಿಡು, ಒಂದು ಸ್ಥಾನದ ಅಧಿಕಾರಿಯಾಗದೆ ವಿನಹ ನಿನ್ನ ಮಾತಿನಲ್ಲಿ ಬೋಧನೆಯ ಅಧಿಕಾರ ಶಕ್ತಿ ಬರಲಾರದು. ನೀನು ಅಧಿಕಾರ ರೂಢನಾದರೆ ಲೆಕ್ಕ ಹಾಕಿರುವುದಕ್ಕಿಂತ ಹೆಚ್ಚಾಗಿ ಸಮಾಜ ಸೇವೆ ಮಾಡಲು ಸಾಧ್ಯವಾದೀತು"[೮] ಎಂದು ಹೇಳಿದರು. ಭಕ್ತಾದಿಗಳೂ ಪ್ರಾರ್ಥಿಸಿದರು. 'ಇದು ದೈವಲೀಲೆ, ಶಿವನ ಚಿತ್ತ, ಆಗಲಿ' ಎಂದು ಹಾಲಯ್ಯ ಒಪ್ಪಿದರಾದರೂ ಆ ಸಂದರ್ಭದಲ್ಲಿ ಅವರು ಒಂದು ಷರತ್ತು ಹಾಕಿದರು.

"ಮಠಕ್ಕೆ ಸ್ವಾಮಿಗಳಾಗ ಬಯಸುವವರೆಲ್ಲರೂ ಸದಾ ಸ್ಮರಣೆಯಲ್ಲಿಡುವಂತಹದಾಗಿದೆ 'ದರ್ಶನ ನಿಮಿತ್ತ ಬಂದ ನಾನು ಒಮ್ಮಿಂದೊಮ್ಮೆ ಈ ಮಠದ ಅಧಿಕಾರಿಯಾಗುವುದು ಶಾಸ್ತ್ರ ವಾಕ್ಯಕ್ಕೂ ವಿರುದ್ಧ, ವೃದ್ಧಾಚಾರಕ್ಕೂ ದೂರವಾದುದು ಎಂದರು. ಆದುದರಿಂದ ನಾನು ಮೊದಲು ಕೆಲವು ದಿನ ಸದ್ಗುರುವಿನ ಸೇವೆ ಮಾಡುತ್ತೇನೆ. ಆ ಮೇಲೆ ಗುರುಕರುಣೆಯಾದಾಗ ಅಧಿಕಾರ ಸ್ವೀಕರಿಸುತ್ತೇನೆ"[೯] ಎಂಬುದೇ ಆ ಮಾತು. ಅವರ ಈ ಮಾತಿನಲ್ಲಿ ಅತ್ಯಂತ ಮಹತ್ವಪೂರ್ಣ ಅಂಶವೊಂದಿದೆ, ಸ್ವಾಮಿಯಾಗಬಯಸುವವರು ಕೇವಲ ಧಾರ್ಮಿಕ ತತ್ವ, ಆಚಾರ-ವಿಚಾರಗಳನ್ನು ಓದಿ ತಿಳಿದರೆ ಸಾಲದು, ಅರ್ಚನ-ಅರ್ಪಣ-ಅನುಭಾವಗಳಲ್ಲಿ ತೊಡಗಿದರೂ ತೀರದು ಇವುಗಳ ಜೊತೆಗೆ ವೃದ್ಧಸ್ವಾಮಿಗಳ ಸೇವಾನಿರತನಾಗಿ 'ವೃದ್ಧಾಚಾರ'ವನ್ನೂ ಪಾಲಿಸಬೇಕೆಂಬುದೆ, ಆ ಮಹತ್ವಪೂರ್ಣ ಅಂಶ. ಸಮಾಜದ ಶಕ್ತಿಯ ಕೇಂದ್ರಗಳಂತಿರುವ ಮಠಗಳಲ್ಲಿ ಅದು ಗುರುಸ್ಥಲ ಮಠವಿರಬಹುದು, ವಿರಕ್ತಮಠವಿರಬಹುದು ಇಂತಹ ತರಬೇತಿ ಪಡೆದ ಸ್ವಾಮಿಗಳಿದ್ದರೆ ಸಮಾಜದಲ್ಲಿ ಶಕ್ತಿ ಚಲನೆಯುಂಟಾಗಿ ಅದರ ಸ್ವಾಸ್ಥ್ಯ ಸಿದ್ಧಿಸಬಹುದೆಂಬುದರ ಪರಿಕಲ್ಪನೆ ಆಗಲೇ ಅವರಿಗಿದ್ದಿತೆಂಬುದು ಇದರಿಂದ ವಿಧಿತವಾಗುತ್ತದೆ. ಅವರ ದೂರದರ್ಶಿತ್ವ

ಹಾಗೂ ಯೋಜಕಶಕ್ತಿಗಳು ನಿಜಕ್ಕೂ ಅಸಾಮಾನ್ಯ. ಅವರ ಷರತ್ತಿಗೆ ಸ್ವಾಮಿಗಳೂ, ಭಕ್ತರೂ ಒಪ್ಪಿದರು. ಅವರದು ತನುಮುಟ್ಟಿ ಮನಮುಟ್ಟಿ ಮಾಡುವ ಸೇವೆಯಾಗಿತ್ತೇ ವಿನಾಃ ತೋರಿಕೆಯ ಸೇವೆಯಾಗಿರಲಿಲ್ಲ. ಗುರು ಸೇವೆಯ ಜೊತೆಗೆ ಸಮಾಜ ಸೇವೆ ಮಾಡುವುದನ್ನವರು ಮರೆಯಲಿಲ್ಲ. ಮಠದಲ್ಲಿ ನಡೆದು ಬರುತ್ತಿದ್ದ ದಾಸೋಹ ಇನ್ನಷ್ಟು ಸುವ್ಯವಸ್ಥೆಗೊಂಡು, ಅದು ಹೊಸಶಕ್ತಿ, ಹೊಸರೂಪ ಪಡೆಯಿತು. ಮಲೆನಾಡಿನ ಆ ಭಾಗದ ಭಕ್ತರ ಬಯಕೆಯಂತೆ ರೀತಿ-ನೀತಿ, ಆಚಾರ-ವ್ಯವಹಾರಗಳ ಬಗ್ಗೆಯೂ ಬೋಧಿಸುತ್ತ ಧರ್ಮ ಜಾಗೃತಿ ಕಾರ್ಯದಲ್ಲಿ ನಿರತರಾದರು.

ಶ್ರೀ ಫಕೀರಸ್ವಾಮಿಗಳು ವಯೋವಾರ್ಧಕ್ಯದಿಂದ ಹೆಚ್ಚಾದ ಕಾಯಿಲೆಯ ಕಾರಣವಾಗಿ ಮಠದ ಭಕ್ತವೃಂದವನ್ನೂ, ಪ್ರಾಂತದ ಪ್ರಮುಖರನ್ನೂ ಕರೆದು "ನನಗೆ ವಾರ್ಧಕ್ಯ ಮತ್ತು ಕಾಯಿಲೆಯಿಂದಾಗಿ ಈ ಮಠದ ಎಲ್ಲ ಭಾರವನ್ನು ಬಿದರಿ ಶ್ರೀ ಕುಮಾರಸ್ವಾಮಿಗಳಿಗೆ ಈಗ ಒಪ್ಪಿಸಿಕೊಡುತ್ತಿದ್ದೇನೆ. ಮುಂದೆ ನೀವೆಲ್ಲರೂ ಅವರ ಇಚ್ಛೆಯಂತೆ ನಡೆದು ಅವರು ಯಾರಿಗೆ ಅಧಿಕಾರ ಕೊಡುವರೋ ಅವರನ್ನು ಆಧರಿಸುವುದು. ಮಠದ ವಿಷಯದಲ್ಲಿಯೂ ಭಾವಿ ಉತ್ತರಾಧಿಕಾರಿಗಳ ವಿಷಯದಲ್ಲಿಯೂ ಯಥಾ ಪ್ರಕಾರ ನಡೆದುಕೊಳ್ಳಬೇಕು ಎಂದು ಅಪ್ಪಣೆ ಮಾಡಿದರು. ಮುಂದಿನ ಕೆಲವು ದಿನಗಳ ನಂತರವಷ್ಟೆ ಶ್ರೀಗಳು ಲಿಂಗೈಕ್ಯರಾದರು. ಮಲೆನಾಡಿನ ಭಾಗದಲ್ಲಿ ಭಿಕ್ಷಾಟನೆಗಾಗಿ ದಯಮಾಡಿಸಿದ್ದ ಹಾಲಯ್ಯನವರನ್ನು ಭಕ್ತರ ಮೂಲಕ ಕರೆಸಿ ಹಾನಗಲ್ಲ ಮಠದ ಮಠಾಧಿಪತ್ಯ ವಹಿಸಿಕೊಳ್ಳುವಂತೆ ಅಪ್ಪಣೆ ಮಾಡುತ್ತಾರೆ. ಭಕ್ತರ, ಫಕೀರಸ್ವಾಮಿಗಳ ಇಚ್ಛೆಯಂತೆ ಬಿದರಿ ಕುಮಾರಸ್ವಾಮಿಗಳ ಅಪ್ಪಣೆಯ ಮೇರೆಗೆ ಹಾಲಯ್ಯ ದೇಶಿಕರಿಗೆ ಬಿದರಿ "ಶ್ರೀ ಮ.ನಿ.ಪ್ರ ಕುಮಾರಸ್ವಾಮಿಗಳು ಹಾನಗಲ್ಲ ವಿರಕ್ತಮಠದ ಅಧಿಕಾರ ದಯಪಾಲಿಸಿ ಶ್ರೀ ಮ.ನಿ.ಪ್ರ ಸದಾಶಿವ ಶಿವಯೋಗಿಗಳು ಎಂದು ನಾಮಕರಣಗೊಳಿಸಿದರು."[೧೦] ಬಿದರಿ ಶ್ರೀಗಳ ಅನುಗ್ರಹ ಪಡೆದಿದ್ದರಿಂದ ಶ್ರೀ ಮ.ನಿ.ಪ್ರ. ಸದಾಶಿವ ಶಿವಯೋಗಿಗಳಿಗೆ ಗುರುವಿನ ಹೆಸರು ಅಭಿಧಾನ ಕಾರಣವಾಗಿ ಶ್ರೀ ಮ.ನಿ.ಪ್ರ ಕುಮಾರ ಶಿವಯೋಗಿಗಳೆಂದೇ ಭಕ್ತರ ಬಾಯಲ್ಲಿ ಬೇರೂರಿತು.

ಹಾನಗಲ್ಲ ಪರಿಸರದ ಕನಸೋ ಏನೋ! ಅಂದಿನ ಸಮಾಜದ ಸಂಕಲ್ಪವೋ ಏನೋ! ಸಂಕ್ರಮಣ ಸಮಾಜಪುರುನ ನಿರೀಕ್ಷೆಯೋ ಏನೋ ಹಾನಗಲ್ಲ ಪ್ರಾಚೀನ ಇತಿಹಾಸಕ್ಕೊಂದು ಧಾರ್ಮಿಕ ಇತಿಹಾಸ ಸೇರಿಕೊಂಡಿತು. ಪೌರಾಣಿಕ, ಮಹಾಭಾರತದ ಇತಿಹಾಸ, ರಾಜಮನೆತನಗಳ ಆಡಳಿತದ ಇತಿಹಾಸ ಹೊಂದಿದ್ದ ಹಾನಗಲ್ಲ ಶ್ರೀ ಕುಮಾರ ಶಿವಯೋಗಿಗಳ ಮಠಾಧಿಪತ್ಯದಿಂದಾಗಿ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಆಧ್ಯಾತ್ಮಿಕದ ಇತಿಹಾಸದ ಬಾಗಿಲುಗಳು ತೆರೆದುಕೊಂಡವು. ಸಮಾಜದಲ್ಲಿ ಅನೇಕ ಕ್ಷೇತ್ರಗಳಲ್ಲಿ ಸೇವೆ ಗೈಯ್ಯಲು ಇದೊಂದು ವೇದಿಕೆಯಾಗಿ ರೂಪಗೊಂಡಿತು.

೨. ಸಾಮಾಜಿಕ ಕಾರ್ಯಗಳು

ಲೇಪನದಿಂದ ಕಸ್ತೂರಿಯ ಸುಗಂಧವೂ, ಸಾಣೆಯಿಂದ ವಜ್ರದ ಹೊಳಪೂ, ಬಿಸಿಯಿಂದ ಬಂಗಾರದ ಹೊಂಬಣ್ಣವೂ ಹೊಳಪಿಗೆ ಬರುವಂತೆ ಹಾನಗಲ್ಲ ಮಠದ ಅಧಿಕಾರದ ಕಾರ್ಯವು ಬಿದರಿ ಕುಮಾರ ಶಿವಯೋಗಿಗಳಂಥ ಮಹಾತಪಸ್ವಿಗಳ ಹಸ್ತದಿಂದ ಜರುಗುತ್ತದೆ. ಇನ್ನಿತರ ಸ್ವಾಮಿಗಳಂತೆ "ಮಠವು ಕೈಗೆ ಸಿಕ್ಕ ಕೂಡಲೆ ಮಠಗಳ ಮಹಾದ್ವಾರಗಳನ್ನು ಕಟ್ಟಿಸುವುದಕ್ಕಾಗಿಲೀ, ಹೊಲ-ಗದ್ದೆಗಳ ಸುಧಾರಣೆಗಾಗಲೀ ಮನಗೊಡದೆ ತಮ್ಮ ಸಮಾಜದ ಪರಿಸ್ಥಿತಿಯು ಎಷ್ಟು ಅವನತಿಗೀಡಾಗಿರುವುದೆಂಬುದನ್ನೂ, ಅದರ ನಿವಾರಣೋಪಾಯವನ್ನೂ ಹಗಲಿರುಳೂ ಚಿಂತಿಸತೊಡಗಿದರು."[೧೧]

ಮರದ ಬಾಯಿ ಬೇರೆಂದು ತಳಕ್ಕೆ ನೀರೆರೆದರೆ ಮೇಲೆ ಪಲ್ಲವಿಸಿತ್ತು ನೋಡಾ। ಎಂದು ಬಸವಣ್ಣನವರ ಹೇಳಿದ್ದಾರೆ. ಸಮಾಜವೆಂಬ ವೃಕ್ಷಕ್ಕೆ ಬೇರಿನಂತಿರುವ ಮಾಹೇಶ್ವರ ವರ್ಗವು ಸುಧಾರಿಸದೇ ವಿನಹ ಸಮಾಜ ಎಂದೂ ಸುಧಾರಿಸದು. ಹಾಗಾಗಿ ಮೊದಲು ಸಮಾಜ ಉದ್ಧಾರಕ ಕಾರ್ಯಗಳಿಗೆ ಮುಂದಾದರು. ಅವುಗಳೆಂದರೆ

೧. ಧರ್ಮ ಪ್ರಚಾರ

೨. ವಿದ್ಯಾ ಪ್ರಸಾರ

೩. ಪ್ರಸಾರಾಂಗ

೧. ಧರ್ಮಪ್ರಚಾರ

ಶ್ರೀ ಕುಮಾರಸ್ವಾಮಿಗಳು ಸದಾ ಚಿಂತಿಸುತ್ತಿದ್ದದು ಸಮಾಜವನ್ನು. ಎಡದ ಕೈ ಇಷ್ಟಲಿಂಗಕ್ಕೆ ಪೀಠವಾಗಬೇಕು, ಬಲದ ಕೈ ಸಮಾಜಕ್ಕೆ ಅಭಯ ಹಸ್ತವಾಗಬೇಕು ಎಂಬುದನ್ನು ಕಾಯಕ ರೂಪದಲ್ಲಿ ನೆರವೇರಿಸಿದರು. ಕರ್ತವ್ಯದಿಂದ ವಿಮುಖರಾಗಿ ಸಮಾಜದ ಬಗೆಗಿನ ಕಾಳಜಿಯನ್ನೇ ಕಳೆದ ಭಕ್ತ ವರ್ಗದಲ್ಲಿನ ಗುರು ವಿರಕ್ತರ ಭಾವವನ್ನು ತಿಳಿಗೊಳಿಸಲು ಕಂಕಣಬದ್ಧರಾದರು.

ಹಾನಗಲ್ಲ ಪ್ರಾಂತ್ಯದಲ್ಲಿ ಸಂಚಾರ ಕೈಗೊಂಡು ಧರ್ಮ ಪ್ರಚಾರ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. "ವೀರಶೈವ ತತ್ವ, ಆಚಾರ-ವಿಚಾರಗಳ ಆಳವಾದ ಪರಿಚಯ, ಸಾಮಾಜಿಕ ಮೌಲ್ಯಗಳ, ಸಮಾಜ ರಚನೆಯ ಪರಿಪೂರ್ಣ ಪರಿಜ್ಞಾನ ಪಡೆದು ಪ್ರವಚನ ನೀಡಿದರು. ಈ ಬಗೆಯ ತತ್ವಪ್ರಚಾರ, ತತ್ವಬೋಧೆ, ಧರ್ಮಜಾಗೃತಿ ಮತ್ತು ವಿದ್ಯಾಪ್ರಸಾರ ಕಾರ್ಯಗಳು ಹಾನಗಲ್ಲ ಪ್ರದೇಶಕ್ಕೆ ಮಾತ್ರ ಸೀಮಿತವಾಗಿದ್ದರೂ ಅವು ಕರ್ನಾಟಕದ ಇತರ ಭಾಗದ ಸ್ವಾಮಿಗಳವರ ಧಾರ್ಮಿಕ ಮುಖಂಡರ ಹಾಗೂ ಸಮಾಜದ ಬಗ್ಗೆ ಕಾಳಜಿಯುಳ್ಳವರ ಆಸಕ್ತಿಯನ್ನು ಕೆರಳಿಸಿದವು."[೧೨]

ಸಮಾಜದಲ್ಲಿ ಈ ರೀತಿ ನಿರ್ಮಾಣಗೊಂಡ ಆಶಾದಾಯಕ ವಾತಾವರಣದ ಸದುಪಯೋಗ ಪಡೆಯಲು ಶ್ರೀ ಕುಮಾರಸ್ವಾಮಿಗಳವರು ನಿರ್ಧರಿಸಿದರು. ಈ ನಿಟ್ಟಿನಲ್ಲಿ ಅವರು ಯೋಜಿಸಿದ ಮೊದಲ ಕಾರ್ಯವೆಂದರೆ ವಿದ್ಯಾವಂತರನ್ನು ಬರಮಾಡಿಕೊಂಡು ಅವರ ಜೊತೆ ಸಮಾಲೋಚನೆ ನಡೆಸಿ ಸಮಾಜದ ಬಗ್ಗೆ ಅವರಲ್ಲಿ ಕಳಕಳಿಯನ್ನೂ, ಅಭಿಮಾನವನ್ನೂ ಮೂಡಿಸಿ ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವಲ್ಲಿ ಯಶಸ್ವಿಯಾದುದು. ಸಮಾಜೋದ್ಧಾರದ ಬಗ್ಗೆ ಅವರು ಹಾಕಿಕೊಟ್ಟ ಯೋಜನೆಯ ರೂಪರೇಷಗಳು ಒಪ್ಪಿಗೆಯಾದವು. ಅಧಿಕಾರಿ ವರ್ಗದವರಿಂದಲೂ, ವಿದ್ಯಾವಂತರಿಂದಲೂ ಸಲಹೆಗಳು ಬಂದವು. ಅವುಗಳಲ್ಲಿ ಬಹು ಮುಖ್ಯವಾದುದು ಇಡೀ ಸಮಾಜವನ್ನೇ ಪ್ರತಿನಿಧಿಸುವ ಒಂದು ಅತ್ಯಂತ ಜವಾಬ್ದಾರಿಯುತ ಸಂಸ್ಥೆಯೊಂದನ್ನು ಸ್ಥಾಪಿಸಿ, ಅದರ ಮೂಲಕ ಸಮಾಜ ಸುಧಾರಣೆಯ ಕಾರ್ಯಗಳನ್ನು ನೆರವೇರಿಸುವುದು, ಅದಕ್ಕಾಗಿ ಸಮಂಜಸವೆನಿಸಿದ ಆಲೋಚನಾ ಸಭೆಯೊಂದನ್ನು ಸಿದ್ಧಗೊಳಿಸಿದರು. "೧೯೦೩ರಲ್ಲಿ ಧಾರವಾಡದಲ್ಲಿ ಒಂದು ಪ್ರಾಂತೀಯ ಪರಿಷತ್ತೊಂದು ಶ್ರೀಯುತ ಖರೆ ಅವರ ಅಧ್ಯಕ್ಷತೆಯಲ್ಲಿ ಸೇರಿತ್ತು."[೧೩] ಇದು ಹಲವಾರು ವೀರಶೈವ ಮುಖಂಡರೂ, ವ್ಯಾಪಾರಸ್ಥರೂ, ವಿದ್ಯಾವಂತ ವೀರಶೈವರ ಸಮಸ್ಯೆಗಳ ಪರಿಹಾರಕ್ಕೆ ಒಂದು ಪರಿಷತ್ತು ಸ್ಥಾಪಿಸಿದರು.

ಮಠಾಧಿಪತಿಗಳ ನೇಮಕ

ಸಮಾಜ ಮತ್ತು ವ್ಯಕ್ತಿಯ ಬದುಕನ್ನು ಹಸನಾಗಿಸಲು ರೂಪಿತಗೊಂಡ ಅರ್ಥಪೂರ್ಣ ವ್ಯವಸ್ಥೆ 'ಮಠ' ಎಂದು ಕರೆಯುತ್ತೇವೆ. ಪ್ರಾಚೀನ ಕಾಲದ ಆಶ್ರಮಗಳು ಲೋಕಾತೀತವಾದ ಬ್ರಹ್ಮಜ್ಞಾನ ಹೊಂದುವುದನ್ನೇ ಮುಖ್ಯ ಗುರಿಯಾಗಿಸಿಕೊಂಡಿದ್ದವು. ಕಾಲಾಂತರದಲ್ಲಿ ಸಮಾಜ ಕಲ್ಯಾಣವನ್ನು ಗುರಿಯಾಸಿಕೊಂಡು ಗ್ರಾಮ, ಪಟ್ಟಣಗಳ ಮಧ್ಯದಲ್ಲಿ ಮಠಗಳಾಗಿ ವಿಕಸಿತಗೊಂಡಿರುವುದನ್ನು ಕಾಣುತ್ತೇವೆ. ಇಂದು ಸಮಾಜದ ಮಧ್ಯದಲ್ಲಿರುವ ಮಠಗಳು ಆಧ್ಯಾತ್ಮಿಕ, ನೈತಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳ ರಕ್ಷಣೆಯ ಜೊತೆಗೆ ಆಧುನಿಕ ಕಾಲದ ಪ್ರಗತಿಪರ ವಿಚಾರಗಳಿಗೂ ಪ್ರಜಾತಾಂತ್ರಿಕ ಮೌಲ್ಯಗಳಿಗೂ ಸ್ಪಂದಿಸುವುದು ಅನಿವಾರ್ಯವಾಗುತ್ತದೆ. ಧರ್ಮ ಪ್ರಸಾರದೊಂದಿಗೆ ಶಿಕ್ಷಣ ಪ್ರಸಾರ, ಸಾಹಿತ್ಯ ಪ್ರಸಾರ, ವೈದ್ಯಕೀಯ ಸೇವೆ, ನ್ಯಾಯಪಾಲನೆ, ಕಲಾ ಪೋಷಣೆ, ಸಂಸ್ಕೃತಿ, ಸಂವರ್ಧನೆಯಂಥ ಚಟುವಟಿಕೆಗಳಲ್ಲಿ ಸದಾ ತೊಡಗಿಕೊಂಡಿರುವ ಮಠಗಳು ಸಾಮಾಜಿಕ ಸಂಸ್ಥೆಗಳಾಗಿ, ಸಾಂಸ್ಕೃತಿಕ ಕೇಂದ್ರಗಳಾಗಿ ರೂಪಗೊಂಡಿರುವುದು ಹೆಮ್ಮೆಯ ಸಂಗತಿ.

ನಮ್ಮ ದೇಶ 'ಸರ್ವಧರ್ಮ ಸಮನ್ವಯ ಭೂಮಿ' ಎಂದು ಖ್ಯಾತಿ ಪಡೆದಿದೆ. ನಮ್ಮ ನಾಡಿನಲ್ಲಿ ಶೈವ, ವೀರಶೈವ, ಜೈನ, ಬೌದ್ಧ, ಸಿಖ್ಖ, ಕ್ರೈಸ್ತ ಹಾಗೂ ಹೊರಗಿನಿಂದ ಬಂದ

ಮುಸ್ಲಿಂ ಧರ್ಮಗಳಿವೆ. ಈ ಸಂಬಂಧ ಎಲ್ಲಾ ಭಾರತೀಯ ಧರ್ಮಗಳಿಗೂ ಸಂಬಂಧಿಸಿದ ಸಾವಿರಾರು ಮಠಗಳಿವೆ, ಧಾರ್ಮಿಕ ಸಂಸ್ಥೆಗಳಿವೆ. ಅವು ಒಂದಿಲ್ಲೊಂದು ರೀತಿಯ ಸಮಾಜ ಸೇವೆಯಲ್ಲಿ ತೊಡಗಿಕೊಂಡಿವೆ. ಈ ಸಂಸ್ಥೆಗಳ ನೇತಾರರು ಮತ್ತು ಮಠಾಧಿಪತಿಗಳು ಭಾರತೀಯ ಸಂಸ್ಕೃತಿಯನ್ನು ತಮ್ಮ ನಡೆ–ನುಡಿಗಳಲ್ಲಿ ಅಳವಡಿಸಿಕೊಂಡು ಜನತೆಯಲ್ಲಿ ಜಾಗೃತಿಯನ್ನುಂಟು ಮಾಡುವ ಉತ್ತಮ ಜೀವನ ವಿಧಾನಗಳವನ್ನು ರೂಪಿಸುವ ಕಾರ್ಯದಲ್ಲಿ ತತ್ಪರರಾಗಿದ್ದಾರೆ.

ಇತರರಿಗೆ ಮಾದರಿಯಂತೆ ೨೦ನೇ ಶತಮಾನದಲ್ಲಿಯೇ ಸಮಾಜದ ಉನ್ನತಿಗೆ ಸಮಾಜವನ್ನು ಒಗ್ಗೂಡಿಸುವ ಕಾರ್ಯಕ್ಕಾಗಿ ಮಠಗಳಲ್ಲಿ ಪೀಠಾಧಿಪತಿಗಳಿಲ್ಲದ ಸಂದರ್ಭದಲ್ಲಿ ಯೋಗ್ಯ ಸಾಧಕರನ್ನು ಗುರುತಿಸಿ ಮಠಾಧಿಕಾರ ಸಂಹಿತೆಯನ್ನು ರೂಪಿಸಿದ ಶ್ರೀ ಕುಮಾರ ಶಿವಯೋಗಿಗಳ ದಿವ್ಯದೃಷ್ಟಿ, ದೂರದೃಷ್ಟಿಯಿಂದ ಕೂಡಿದ್ದಾಗಿದೆ. "ಹುಬ್ಬಳ್ಳಿ ಜಗದ್ಗುರು ಮೂರುಸಾವಿರಮಠದ ೪ನೇ ಪೀಠಾಧಿಪತಿಗಳಾದ ಶ್ರೀಜಗದ್ಗುರು ಗುರುಸಿದ್ಧರಾಜಯೋಗೀಂದ್ರಸ್ವಾಮಿಗಳು ೧೮೯೪ರಲ್ಲಿ ಲಿಂಗೈಕ್ಯರಾದಾಗಿನಿಂದ ಏಳುವರ್ಷಗಳ ಕಾಲ ಪೀಠಕ್ಕೆ ಅಧಿಕಾರಿಗಳು ಇಲ್ಲದೇ ಇದ್ದುದನ್ನು ಗಮನಿಸಿದ ಶ್ರೀ ಕುಮಾರ ಶಿವಯೋಗಿಗಳು ಭಕ್ತರೊಂದಿಗೆ ಚರ್ಚಿಸಿ ಅಂಬಳೆಯ ವೀರಾಧ್ಯಶಾಸ್ತ್ರಿಗಳನ್ನು ಕರೆತಂದು ೧೯೦೦ರಲ್ಲಿ ಮಠದ ಉತ್ತರಾಧಿಕಾರಿಗಳೆಂದು ನೇಮಿಸಿ ಅವರಿಗೆ 'ವೀರಶೈವ ದೇವರು' ಎಂದು ನಾಮಕರಣ ಮಾಡಿದರು. ಮುಂದೆ ಹಾನಗಲ್ಲ ಶ್ರೀ ಕುಮಾರ ಶಿವಯೋಗಿಗಳ ನೇತೃತ್ವದಲ್ಲಿ ಬಿದರಿ ಶ್ರೀ ಕುಮಾರಸ್ವಾಮಿಗಳಿಂದ ೧೦.೦೩.೧೯೦೧ರಂದು ಶ್ರೀ ವೀರೇಶ್ವರರು ಪಟ್ಟಾಭಿಷೇಕ ಹೊಂದಿ ಶ್ರೀ ಮನ್ನಿರಂಜನ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳೆಂಬ ನೂತನ ಅಭಿಧಾನ ಹೊಂದಿದರು."[೧೪] ಅಂದಿನಿಂದ ಶ್ರೀ ಜಗದ್ಗುರು ಮೂರುಸಾವಿರಮಠದ ಅಭಿವೃದ್ಧಿಯ ದ್ವಾರಗಳೂ ತೆರೆದುಕೊಂಡವು.

ಹಾವೇರಿಯ ಹುಕ್ಕೇರಿಮಠವು ನಾಲ್ಕು ಶತಮಾನಗಳ ಇತಿಹಾಸ ಹೊಂದಿರುವ ಕನ್ನಡ ನಾಡಿನ ಜಾಗೃತ ಪೀಠ. ಮಹಾತಪಸ್ವಿಗಳಾದ ಶ್ರೀ ಸಿದ್ಧಲಿಂಗ ಶಿವಯೋಗಿಗಳು ಲಿಂಗೈಕ್ಯರಾದ ಮೇಲೆ ಯೋಗ್ಯ ಮೂರ್ತಿಗಳು ಬಹುಬೇಗ ದೊರೆಯಲಿಲ್ಲ. ತಪೋನುಷ್ಠಾನ ಮಾಡಿ ಆಚಾರ–ವಿಚಾರ, ನಡೆ–ನುಡಿಗಳಿಂದ ಸಾಧಕರಾಗಿದ್ದರು. "ಅಥಣಿಯ ಶೆಟ್ಟರಮಠದಲ್ಲಿ ವಾಸವಾಗಿದ್ದ ಶ್ರೀ ಶಿವಬಸವೇಶ್ವರರನ್ನು ಹಾವೇರಿಗೆ ಕರೆತಂದು ಎಕ್ಕುಂಡಿಯ ಶ್ರೀ ಮುರುಘೇಂದ್ರ ಸ್ವಾಮಿಗಳ ಮುಖಾಂತರ ಅನುಗ್ರಹ ದಯಪಾಲಿಸಿ "ಶ್ರೀ ಮ.ನಿ.ಪ್ರ. ಶಿವಬಸವಸ್ವಾಮಿ ಎಂದು ನಾಮಕರಣಗೊಳಿಸಿ ೧೯೦೫ರಲ್ಲಿ ನಿರಂಜನ ಚರಪಟ್ಟಾಧಿಕಾರವನ್ನು ಜರುಗಿಸಲಾಯಿತು."[೧೫]

"ಬಸವಾದಿ ಪ್ರಥಮರ ಕಾಲದಲ್ಲಿಯೇ ಬಹು ಪ್ರಸಿದ್ಧಿ ಪಡೆದಿದ್ದ ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ಗೊಗ್ಗಿಹಳ್ಳಿ ಸಂಸ್ಥಾನಮಠಕ್ಕೂ ಕುಮಾರ ಶಿವಯೋಗಿಗಳು ಅಂತಃಸತ್ವವನ್ನು

ತುಂಬಿದವರು."[೧೬] ಗೊಗ್ಗಿಹಳ್ಳಿ ಮಠದ ಸ್ವತ್ತು ಬೇರೆಯವರ ಅಧೀನವಾಗಿದ್ದಾಗ ಶ್ರೀ ಕುಮಾರ ಶಿವಯೋಗಿಗಳು ಸ್ವತಃ ಮೂರುಸಾವಿರ ರೂಪಾಯಿಗಳನ್ನು ಕೊಟ್ಟು ಗ್ರಾಮದ ವ್ಯಕ್ತಿಯೋರ್ವನ ಕೈವಶವಾಗಿದ್ದ ಮಠವನ್ನು ಬಿಡಿಸಿ ಸೋಮನಾಥ ಶಾಸ್ತ್ರಿಗಳಿಗೆ ಮಠಾಧಿಕಾರವನ್ನು ವಹಿಸಿಕೊಟ್ಟರು.

ಹಾನಗಲ್ಲ ಕುಮಾರ ಶಿವಯೋಗಿಗಳು ಮಠಾಧಿಕಾರಕ್ಕಾಗಿ ಎಂದೂ ಹಂಬಲಿಸಿದವರಲ್ಲ ಎಂಬುದಕ್ಕೆ ಈ ಮೇಲಿನ ಅಧಿಕಾರ ನಿರ್ವಹಣಾ ಕಾರ್ಯವೇ ಒಂದು ಉದಾಹರಣೆ. ಆದಾಗ್ಯೂ ಅವರನ್ನು ಅಧಿಕಾರದ ಪರ-ವಾದ ವಿಚಾರವು ಚಿತ್ರದುರ್ಗ ಶ್ರೀ ಮದ್‌ಚಿನ್ಮೂಲಾದ್ರಿ ಬೃಹನ್ಮಠದ ಪೀಠಾಧಿಪತಿಗಳಾಗಿದ್ದ ಶ್ರೀಗಳಲ್ಲಿ ಮುರುಘರಾಜೇಂದ್ರ ಮುಪ್ಪಿನಸ್ವಾಮಿಗಳು ಮುಪ್ಪಾವಸ್ಥೆಯಿಂದ ಲಿಂಗೈಕ್ಯರಾದಾಗ ಈ ಮಠಕ್ಕೆ ಪೀಠಾಧಿಪತಿಗಳನ್ನು ನೇಮಿಸುವ ವಿಚಾರವಾಗಿ ಅಂಟಿಕೊಳ್ಳುತ್ತದೆ. "ಕಾಶಿಯಿಂದ ಅಪಾರ ಜ್ಞಾನಸಂಪತ್ತು ಗಳಿಸಿಕೊಂಡು ಬಂದಿರುವ ಶ್ರೀ ಜಯದೇವ ಪಂಡಿತರನ್ನೇ ಚಿತ್ರದುರ್ಗದ ಪೀಠಕ್ಕೆ ಆರಿಸುವುದು ಒಳಿತೆಂದು ಅವರಿಂದಲೇ ಸಮಾಜೋನ್ನತಿಯ ಸತ್ಕಾರ್ಯವಾಗುವುದು ಎಂದಿದ್ದರು."[೧೭] ಇದನ್ನು ಕುರಿತು ಶ್ರೀ ಮ.ನಿ.ಜ ಜಯದೇವ ಮುರುಘರಾಜೇಂದ್ರಸ್ವಾಮಿಗಳವರು ಚಿತ್ರದುರ್ಗ ಪೀಠಾಧಿಪತಿಗಳಾದ ಮೇಲೆ ಲೋಕಮತ ಪ್ರಕಾಶದ 'ಸ್ಮಾರಕ ಚಂದ್ರಿಕೆ' ಗ್ರಂಥಕ್ಕೆ ಸಂದೇಶ ಬರೆಯುವಾಗ ಶ್ರೀ ಕುಮಾರ ಶಿವಯೋಗಿಗಳನ್ನು ಕುರಿತು ಬರೆಯುತ್ತ "ಲೌಕಿಕ ಮತ್ತು ಪಾರಮಾರ್ಥಿಕ ವಿದ್ಯಾಭ್ಯಾಸವನ್ನು ಮಾಡುತ್ತಿದ್ದ ನಮ್ಮ ಜನಾಂಗದವರಿಗೆ ಕೈಲಾದ ಮಟ್ಟಿಗೆ ಮೊದಲಿನಿಂದಲೂ ಸಹಾಯ ಮಾಡುತ್ತಿದ್ದರೆಂಬುದಕ್ಕೆ ಕಾಶಿಯಲ್ಲಿ ಅಭ್ಯಾಸ ಮಾಡುವಾಗ ನಮಗೂ ಇನ್ನಿತರರಿಗೂ ಸಹಾಯ ಮಾಡಿದುದೇ ನಿದರ್ಶನವಾಗಿದೆ. ನನ್ನನ್ನು ೧೦೮ ಶ್ರೀ ಜಗದ್ಗುರು ಪೀಠಾಧಿಕಾರಕ್ಕೆ ಬರಮಾಡಿದವರು ಇವರೇ ಆಗಿದ್ದರು."[೧೮] ಎಂದು ಸ್ಪಷ್ಟಪಡಿಸಿದ್ದಾರೆ. ಆದರೆ "ಕಣಕುಪ್ಪಿ ಕೊಟ್ಟೂರು ಬಸವಪ್ಪನವರು ೧೯೬೬ರಲ್ಲಿ ಬರೆದ ಶ್ರೀ ಜಗದ್ಗುರು ಜಯದೇವ ದಿಗ್ವಿಜಯ ಗ್ರಂಥದಲ್ಲಿ ಚಿತ್ರದುರ್ಗ ಮಠದ ಉತ್ತರಾಧಿಕಾರದ ಉಮೇದುವಾರಿಕೆಗೆ ಹಾನಗಲ್ಲ ಕುಮಾರಸ್ವಾಮಿಗಳು ಮತ್ತು ಜಯದೇವ ಶಾಸ್ತ್ರಿಗಳು ಈರ್ವರ ನಡುವೆ ೧೯೦೨ನೇ ನವೆಂಬರ ಒಂದನೇ ತಾರೀಖು ಚುನಾವಣೆ ನಡೆದಿತು."[೧೯] ಎಂಬಿತ್ಯಾದಿ ಹೇಳಿಕೆ ಇದೆ. ಆದರೆ ಈ ಗ್ರಂಥದ ಹೊರತಾಗಿ ಇನ್ನುಳಿದ ಗ್ರಂಥವಾದ ೧೯೫೦ರಲ್ಲಿ ಶ್ರೀ ಜಿ.ಎಚ್. ಹೊಸೂರ ಮುಳಗುಂದ ಅವರು ಬರೆದ 'ಶ್ರೀ ಜಗದ್ಗುರು ಜಯದೇವ ಮುರಘಾರಾಜೇಂದ್ರ ವಿಜಯ'ದಲ್ಲಿ ಈ ಬಗ್ಗೆ ಯಾವ ಅಂಶವು ಬಿಚ್ಚಿಕೊಂಡಿಲ್ಲ. ಹಾನಗಲ್ಲ ವಿರಕ್ತಮಠದ ಮಠಾಧಿಪತ್ಯವನ್ನೇ ವಹಿಸಿಕೊಳ್ಳಲು ನಿರಾಕರಿಸಿದ ಶ್ರೀ ಕುಮಾರಸ್ವಾಮಿಗಳು ಮತ್ತೊಂದು ಮಠಾಧಿಪತ್ಯವನ್ನು ವಹಿಸಿಕೊಳ್ಳಲು ಮುಂದಾಗಿದ್ದರು ಎಂಬ ಸಂಗತಿಯು ವಿಚಾರಾರ್ಹವೂ, ಸಂದೇಹಾತ್ಮಕವೂ ಆಗಿದೆ.

ಹೀಗೆ ತಾವು ಬೆಳೆಸಿದ ಹಾನಗಲ್ಲ ವಿರಕ್ತಮಠಗಳಂತೆ ಶ್ರೀ ಕುಮಾರ ಶಿವಯೋಗಿಗಳು ಹಲವು ಶಾಖಾ ಮಠಗಳನ್ನು ಸ್ಥಾಪಿಸಿ ನಾಡಿನ ಉದ್ದಗಲಕ್ಕೂ ಆಧ್ಯಾತ್ಮಿಕ, ಧಾರ್ಮಿಕ, ಶೈಕ್ಷಣಿಕ, ಔದ್ಯೋಗಿಕ ಕ್ರಾಂತಿಗೆ ಮುನ್ನುಡಿ ತೋರಿದರು. ಅಂತಹ ಮಠಗಳೆಂದರೆ

೧.	ಗಿರಿಯಾಪುರ	ಕಡೂರ ತಾಲೂಕ, ಚಿಕ್ಕಮಗಳೂರು ಜಿಲ್ಲೆ,
೨.	ಸವಣೂರು	ಧಾರವಾಡ ಜಿಲ್ಲೆ
೩.	ಜಡೆ	ಹಾನಗಲ್ಲು ತಾಲೂಕ ಹಾವೇರಿ ಜಿಲ್ಲೆ
೪.	ಬೆಳಗಾಲಪೇಟೆ	ಹಾನಗಲ್ಲು ತಾಲೂಕ ಹಾವೇರಿ ಜಿಲ್ಲೆ
೫.	ಅಕ್ಕಿಆಲೂರು	ಹಾನಗಲ್ಲು ತಾಲೂಕ ಹಾವೇರಿ ಜಿಲ್ಲೆ
೬.	ಬಾಳೂರು	ಹಾನಗಲ್ಲು ತಾಲೂಕ ಹಾವೇರಿ ಜಿಲ್ಲೆ
೭.	ಸಿಂದೋಗಿ	'ಮುನವಳ್ಳಿ ವಿರಕ್ತಮಠ'–ಬೆಳಗಾವಿ ಜಿಲ್ಲೆ, ಸವದತ್ತಿ ತಾಲೂಕ.[೨೦]

ಈ ಮೊದಲು ಇವೆಲ್ಲವೂ ಹಾನಗಲ್ಲ ವಿರಕ್ತಮಠದ ಶಾಖಾ ಮಠಗಳಾಗಿದ್ದು, ಕಾಲಾಂತರದಲ್ಲಿ ಸ್ವತಂತ್ರ ಮಠಗಳಾಗಿ ಈಗ ಸ್ವಂತ ಆಡಳಿತ ನಿರ್ವಹಣೆ ಹೊಂದಿವೆ. ಶ್ರೀ ಕುಮಾರ ಶಿವಯೋಗಿಗಳ ಸತ್‌ಸಂಕಲ್ಪದಂತೆ ಈ ಶಾಖಾಮಠಗಳು ಹಾನಗಲ್ಲ ವಿರಕ್ತಮಠದ ಪರಂರೆಯನ್ನು ಇಂದಿಗೂ ಪಾಲಿಸುತ್ತಿವೆ. ಶ್ರೀ ಕುಮಾರ ಶಿವಯೋಗಗಳ ಹೆಸರಿನಲ್ಲಿ ಸ್ಮಾರಕ ಕೇಂದ್ರಗಳನ್ನು ನಿರ್ಮಿಸಿ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕವಾಗಿ ಅಮೋಘ ಕಾರ್ಯ ಮಾಡುತ್ತಿವೆ. ಈ ಮಠಗಳ ಮಠಾಧಿಪತಿಗಳು ಶ್ರೀ ಕುಮಾರ ಶಿವಯೋಗಿಗಳ ಸತ್‌ಸಂಕಲ್ಪವನ್ನೂ ಚಾಚು ತಪ್ಪದೇ ನಿರ್ವಹಿಸಿಕೊಂಡು ಹೋಗುತ್ತಿರುವುದನ್ನು ಇಂದಿಗೂ ನಾವು ಕಾಣಬಹುದಾಗಿದೆ. ಇಂದು ಬೆಳಗಾಲಪೇಟೆಯ ಶಾಖಾ ಮಂದಿರ ಸಂಪೂರ್ಣ ಜೀರ್ಣಾವಸ್ಥೆಯಲ್ಲಿದ್ದು ಸಮಾಜ ಅಂಥವುಗಳನ್ನು ಜೀರ್ಣೋದ್ಧಾರ ಮಾಡಬೇಕಿದೆ. ಒಟ್ಟಿನಲ್ಲಿ ಈ ಮಠಗಳು ಸ್ವತಂತ್ರವಾಗಿದ್ದರೂ ಭಾವನಾತ್ಮಕವಾಗಿ ಹಾನಗಲ್ಲ ವಿರಕ್ತಮಠದ ಮತ್ತು ಶ್ರೀ ಕುಮಾರ ಶಿವಯೋಗಿಗಳ ಮೇಲೆ ಅಪಾರ ನಂಬಿಕೆ, ಶ್ರದ್ಧೆಯನ್ನಿರಿಸಿಕೊಂಡು ಪರಂಪರೆಯನ್ನು ಆದರ್ಶವಾಗಿಸಿ ಮುಂದುವರೆಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ.

ಶಾಖಾ ಶಿವಯೋಗಮಂದಿರಗಳ ಸ್ಥಾಪನೆ

ಶಿವಯೋಗ ಮಂದಿರ ಸಂಸ್ಥೆಯನ್ನು ಸ್ಥಾಪಿಸಿ ಸಮಾಜದ ಉಪಯೋಗ ಕಾರ್ಯ ಕೈಗೊಂಡಿದ್ದರೂ ಮಹಾಸ್ವಾಮಿಗಳಿಗೆ ಸಂತೃಪ್ತಿಯಾಗಲಿಲ್ಲ. ಒಂದೇ ಭಾಗದ ಕಾರ್ಯ ನಿರ್ವಹಣೆ ಎಲ್ಲರಿಗೂ ದೊರೆಯದು ಹಾಗಾಗಿ ಎಲ್ಲಾ ಭಾಗದ ಜನರಿಗೆ ಅಗತ್ಯ ಮಾರ್ಗದರ್ಶನ ಮುಟ್ಟಲೆಂದು ಶಾಖಾ ಶಿವಯೋಗ ಮಂದಿರಗಳನ್ನು ತೆಗೆಯುವ ವಿಚಾರ ಮಾಡಿದರು.

ವಸ್ತುತಃ ಶಿವಯೋಗ ಮಂದಿರದಲ್ಲಿ ಕಲಿತ ಸಾಧಕರು ತಮ್ಮ ಮಠಗಳನ್ನು ಪ್ರತ್ಯಕ್ಷ ಶಿವಯೋಗ ಮಂದಿರವನ್ನಾಗಿಯೇ ರೂಪಿಸಿಬೇಕೆಂಬುದು ಪೂಜ್ಯರ ಸಂಕಲ್ಪವಾಗಿತ್ತು. ಅವರಿಗೆ ಈ ಶಾಖಾ ಶಿವಯೋಗ ಮಂದಿರಗಳು ಸಹಕಾರಿ ನೀಡಲೆಂಬುದೇ ಅವರ ಉದ್ದೇಶವಾಗಿತ್ತು. ಈ ನಿಟ್ಟಿನಲ್ಲಿ.

೧. ಶಾಖಾಶಿವಯೋಗಮಂದಿರ, ನಿಡಗುಂದಿಕೊಪ್ಪ
೨. ಶಾಖಾಶಿವಯೋಗಮಂಂದಿರ, ರಾಮಗಡ್ಡಿ
೩. ಶಾಖಾಶಿವಯೋಗಮಂಂದಿರ, ಕಪ್ಪನಹಳ್ಳಿ
೪. ಶಾಖಾಶಿವಯೋಗಮಂಂದಿರ, ಹಿರೇಹಾಳ
೫. ಶಾಖಾಶಿವಯೋಗಮಂಂದಿರ, ಬಾದಾಮಿ

ಈ ರೀತಿಯಾಗಿ ಶ್ರೀಕುಮಾರ ಶಿವಯೋಗಿಗಳು ನಾಡಿನ ನಾನಾ ಮೂಲೆಯ ಪ್ರಶಾಂತ ಸ್ಥಳಗಳ ಶೋಧನೆ ಮಾಡಿ, ಆ ಭಾಗದ ಭಕ್ತರ ಒತ್ತಾಯ, ಕೋರಿಕೆಯನ್ನು ಅರಿತು ಐದು ಸ್ಥಳದಲ್ಲಿ ಶಾಖಾ ಶಿವಯೋಗ ಮಂದಿರಗಳನ್ನು ಆರಂಭಿಸಿದರು.

೧. ಶಾಖಾ ಶಿವಯೋಗ ಮಂದಿರ ನಿಡಗುಂದಿಕೊಪ್ಪ:

ರೋಣ ತಾಲೂಕ ನಿಡಗುಂದಿಕೊಪ್ಪಕ್ಕೆ ಶಿವಯೋಗ ಮಂದಿರದ ಭಿಕ್ಷೆಗಾಗಿ ಹಾನಗಲ್ಲ ಶ್ರೀಗಳು ಹಾಗೂ ಹಾವೇರಿ ಶ್ರೀ ಶಿವಬಸವ ಮಹಾಸ್ವಾಮಿಗಳು ದಯಮಾಡಿಸಿದ್ದರು. ಶಿವಬಸವಸ್ವಾಮಿಗಳು ಹಾನಗಲ್ಲ ಪೂಜ್ಯರಿಗೆ 'ಶಿವನನ್ನು ಬೇಡಿ ಶಿವಯೋಗ ಮಂದಿರ ಕಟ್ಟೋಣ'ವೆಂದು ಸಲಹೆ ನೀಡಿದರು.ಮೂರು ತಿಂಗಳು ಕೊಪ್ಪದ ಹಳ್ಳದ ದಂಡೆಯಲ್ಲಿ ಅನುಷ್ಠಾನ ಕೈಗೊಂಡರು. ಆ ಫಲವಾಗಿ ನಿಡಗುಂದಿ, ಕೊಪ್ಪದ ಶಾಖಾ ಮಂದಿರವು ಸನ್ ೧೯೧೪ರಲ್ಲಿ ಸ್ಥಾಪನೆಯಾಯಿತು. ಹಾಲಕೆರೆ ಶ್ರೀಗಳವರ ನೇತೃತ್ವದಲ್ಲಿ ಕೊಪ್ಪ ಹಾಗೂ ಹಾಲಕೆರೆ ಭಕ್ತರು ೬೦೦ ಎಕರೆ ಜಮೀನನ್ನು ದಾನವಾಗಿ ಶಾಖಾ ಶಿವಯೋಗ ಮಂದಿರಕ್ಕೆ ಸಲ್ಲಿಸಿದರು. ಮೂರು-ನಾಲ್ಕು ವರ್ಷಗಳಲ್ಲಿ ಆ ಶಾಖಾ ಮಂದಿರವು ಹಾವೇರಿ ಶ್ರೀಗಳವರ ಅನುಷ್ಠಾನದ ಪ್ರಭಾವದಿಂದ ಸುತ್ತಲಿನ ಜನರಿಗೆ ಆಧ್ಯಾತ್ಮಿಕ ಕೇಂದ್ರವಾಯಿತು. ಧಾರ್ಮಿಕ ಉಪದೇಶ ಜನತೆಗೆ ಮುಟ್ಟುವಂತಾಯಿತು. "ಇಲ್ಲಿಯೇ ೧೬ ಜನ ವಿದ್ಯಾರ್ಥಿಗಳಿಂದ ಸಂಗೀತ ಪಾಠಶಾಲೆಯನ್ನು ಪಂಚಾಕ್ಷರಿ ಗವಾಯಿಗಳು ಪೂಜ್ಯರ ಆಶೀರ್ವಾದದ ಮೇರೆಗೆ ಪ್ರಾರಂಭಿಸಿದರು. ಇದು ಕೊನೆಗೆ ಗದುಗಿನಲ್ಲಿ ನೆಲೆ ನಿಂತಿದೆ."[೨೦] ಕಲ್ಯಾಣದ ದೇಶಿಕರೊಬ್ಬರನ್ನು ಇಲ್ಲಿಗೆ ಕರೆತಂದು ನಿರಾಭಾರಿ ಚರಾಪಟ್ಟಾಧಿಕಾರವನ್ನೂ ನೆರವೇರಿಸಿದರು. ಅನುಷ್ಠಾನ ಯೋಗ್ಯವಾದ ಈ ಸ್ಥಳದಲ್ಲಿ ಶ್ರೀ ಮಹಾದೇವ ಸ್ವಾಮಿಗಳು, ಶ್ರೀ ನಿರಂಜನಸ್ವಾಮಿಗಳು ಇನ್ನೂ ಅನೇಕ ಪೂಜ್ಯರು ಇಲ್ಲಿ ಅನುಷ್ಠಾನಗೈದು, ಸಿದ್ಧಿ ಪುರುಷರಾಗಿದ್ದಾರೆ. ನಂತರ ಮತ್ತೋರ್ವ ಶ್ರೀಗಳ ನೇಮಕದ ಹೊಣೆ ಹೊತ್ತ ಚರಿತ್ರನಾಯಕರು "ಕ್ರಿ.ಶ. ೧೯೨೪ರಲ್ಲಿ ಶಿವಯೋಗ ಮಂದಿರದಲ್ಲಿ ಸಾಧಕರಾಗಿದ್ದ

ಗೋಕಾಕದ ಶ್ರೀದೇಶಿಕರನ್ನು ಕರೆತಂದು ಆಶ್ರಯದ ಅಧಿಕಾರ ವಹಿಸಿಕೊಟ್ಟರು."[೨೨]

ಇಲ್ಲಿನ ಸುತ್ತ ಮುತ್ತಲಿನ ನಿಡಗುಂದಿ, ಕೊಪ್ಪ, ಹಾಲಕೆರೆ, ಆಲೂರ ಸದ್ಭಕ್ತರು ಈ ಮಂದಿರದ ಏಳ್ಗೆಗಾಗಿ ಬಹು ವಿಧವಾಗಿ ಸೇವೆ ಸಲ್ಲಿಸುತ್ತಾ ಹಗಲಿರುಳೂ ಶ್ರಮಿಸುತ್ತಾ ಬಂದಿದ್ದಾರೆ. ಕಾಲಾಂತರದಲ್ಲಿ ಈ ಶಾಖಾ ಶಿವಯೋಗ ಮಂದಿರವು ಸ್ವತಂತ್ರ ಅಸ್ತಿತ್ವವನ್ನು ಹೊಂದಿ ಜನಪರ ಕಾರ್ಯದಲ್ಲಿ ಮುಂದೆ ಸಾಗುತ್ತಿದೆ.

೨. ಶಾಖಾ ಶಿವಯೋಗ ಮಂದಿರ ರಾಮಗಡ್ಡಿ:

ರಾಯಚೂರು ಜಿಲ್ಲೆಯ ರಾಮಗಡ್ಡಿಯಲ್ಲಿ ೧೯೧೪ನೇ ಮಾಘಮಾಸ ಶುದ್ಧ ೧೪ರಂದು ಕೃಷ್ಣಾನದಿಯ ನಡುಗಡ್ಡೆಯಲ್ಲಿ ನಿಸರ್ಗರಮ್ಯ ತಾಣದಲ್ಲಿ ಶಾಖಾಶಿವಯೋಗಮಂದಿರ ರಾಮಗಡ್ಡೆಯಲ್ಲಿ ಆರಂಭಗೊಂಡಿತು. ನೀರಡಗುಂಭದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಈ ಆಶ್ರಮದ ಅಧಿಕಾರವನ್ನು ವಹಿಸಿಕೊಂಡರು. ಪ್ರಾರಂಭದಲ್ಲಿಯೇ ೫ ಜನ ಸಾಧಕರನ್ನು ೧೫ ಜನ ವಿದ್ಯಾರ್ಥಿಗಳನ್ನು ಸಂಸ್ಕೃತ ಪಾಠಶಾಲೆಯಲ್ಲಿ ಇಟ್ಟುಕೊಳ್ಳುವುದಲ್ಲದೆ ೬ ಜನ ಶಿವಯೋಗ ಮತ್ತು ಯೋಗ ಶಿಕ್ಷಣ ನೀಡಲು ಇಟ್ಟುಕೊಂಡರು. ಮುಂದೆ ಈ ಶಾಖಾ ಶಿವಯೋಗ ಮಂದಿರವು 'ಶಿವಪುತ್ರ ದೇವರ' ಮಾರ್ಗದರ್ಶನದಲ್ಲಿ ಮುನ್ನಡೆಯಿತು. ಈ ಆಶ್ರಮವು ಬೆಳೆದಂತೆ ಸಾಕಷ್ಟು ಸಾಧಕರನ್ನು ಸಂಸ್ಕೃತ ಪಂಡಿತರನ್ನು, ಅಧ್ಯಾಪಕರನ್ನು ತರಬೇತಿಗೊಳಿಸಿ ನಾಡಿನ ಸೇವೆಗೆ ಅರ್ಪಿಸಿದೆ. ಹಾಗೂ ಮೂಲ ಶಿವಯೋಗ ಮಂದಿರದ ಉದ್ದೇಶಗಳನ್ನು ಈಡೇರಿಸುವಲ್ಲಿ ಸಾಕಷ್ಟು ಶ್ರಮಿಸಿದೆ.

೩. ಶಾಖಾ ಶಿವಯೋಗ ಮಂದಿರ, ಕಪ್ಪನಹಳ್ಳಿ:

ಬಯಲು ನಾಡಿನಿಂದ ಆರಂಭವಾದ ಜನಜಾಗೃತಿಯನ್ನು ಮಲೆನಾಡಿಗೂ ಹುಟ್ಟಿತು. ಇಲ್ಲಿಯ ಜನಗಳ ಸುಧಾರಣೆಗಾಗಿ ಒಂದು ಶಾಖಾ ಶಿವಯೋಗ ಮಂದಿರವನ್ನು ಸ್ಥಾಪಿಸುವ ಅವಶ್ಯವಿದೆ. ಎಂದು "ಆನಂದಪುರದ ಶ್ರೀ ಮುರುಘಾಮಠದ ಅಂದಿನ ಜಗದ್ಗುರು ಲಿಂಗ ಮಹಾಸ್ವಾಮಿಗಳು, ಗುತ್ತಲ ರುದ್ರಸ್ವಾಮಿಗಳು, ಕೆಳದಿ, ಸಾಲೂರು, ಶೃವಣಗಿ ಮೊದಲಾದ ಮೂರ್ತಿಗಳು ಪ್ರಸ್ತಾಪ ಮಾಡಿದ್ದು, ಶಾಖಾ ಶಿವಯೋಗ ಮಂದಿರ ಸ್ಥಾಪನೆಗೆ ಕಾರಣವಾಯಿತೆಂದು ಹೇಳಬಹುದು."[೨೩]

೧೦.೦೩.೧೯೧೭ರಲ್ಲಿ ಕುಮದ್ವತಿ ಹಾಗೂ ಋಷಭಾವತಿ ನದಿಗಳ ಸಂಗಮವಾಗಿರುವ ತಾಣ. ನದಿಯು ಉತ್ತರವಾಹಿನಿಯಾಗಿ ಹರಿದಿದ್ದು ಪೂರ್ವಕ್ಕೆ ಕಾಳೇನಹಳ್ಳಿ, ಪಶ್ಚಿಮಕ್ಕೆ ಕಪ್ಪನಹಳ್ಳಿ ಗ್ರಾಮವಿದೆ. ಅಲ್ಲಿ "ಶಿಕಾರಿಪುರದ ಹೊಸ್ನಪ್ಪ ಶೆಟ್ಟರ ಎಂಬುವರು ಹಾಗೂ ಚನ್ನಪ್ಪನವರು ೧೦ ಸಾವಿರ ಮೂಲ ನಿಧಿಯೊಂದಿಗೆ ಹಾನಗಲ್ಲ ಶ್ರೀಗಳು ಉಪಸ್ಥಿತಿಯಲ್ಲಿ ಸುತ್ತಲ ಮಠದ ಮೂರ್ತಿಗಳ ನೇತೃತ್ವದಲ್ಲಿ 'ಶಿವಯೋಗಾಶ್ರಮ' ಎಂಬ ಹೆಸರಿನಿಂದ ಶಾಖಾ

ಶಿವಯೋಗ ಮಂದಿರ ಆರಂಭಿಸಿದರು."[೨೪] ಹೀಗೆ ಶಿವಯೋಗಾಶ್ರಮವು ಆರಂಭಗೊಂಡಾಗಿನಿಂದ ಮಲೆನಾಡು ಪ್ರದೇಶದಲ್ಲೆಲ್ಲ ಸಂಚರಿಸಿ ಧರ್ಮ ಜಾಗೃತಿಯ ಕಾರ್ಯನಿರ್ವಹಿಸಿದ್ದುದು ಆದರ್ಶಪ್ರಾಯವಾಗಿದೆ.

ಶ್ರೀ ಕುಮಾರ ಶಿವಯೋಗಿಗಳು ಕಪ್ಪನಹಳ್ಳಿ ಶಿವಯೋಗ ಆಶ್ರಮದ ಆಡಳಿತ ನಿರ್ವಹಣೆಗಾಗಿ ಕುರವತ್ತಿಯ ಶ್ರೀಮಹಾದೇವಸ್ವಾಮಿಗಳಗಳನ್ನು ನೇಮಿಸಿದರು. ಆನಂತರ ಶ್ರೀ ರುದ್ರ ಮುನಿಸ್ವಾಮಿಗಳು ಶಿವಯೋಗಾಶ್ರಮದ ಅಧಿಕಾರ ವಹಿಸಿಕೊಳ್ಳುವಾಗ ಶ್ರೀ ಕುಮಾರ ಶಿವಯೋಗಿಗಳು ಮೂರು ಮಂತ್ರಗಳನ್ನು ದಯಪಾಲಿಸಿದರು. ಅವುಗಳೆಂದರೆ

೧. ಕಾಯಕ ಮಾಡುವುದು

೨. ನೇಗಿಲಯೋಗ-ಶಿವಯೋಗವನ್ನು ಸಮಸಮವಾಗಿ ಆಚರಿಸುವುದು

೩. ಭಿಕ್ಷೆ ಬೇಡದಿರುವುದು

ಇಂದಿಗೂ ಈ ಮೂರು ತತ್ವಗಳು ಶಿವಯೋಗಾಶ್ರಮದಲ್ಲಿ ಸದ್ಯದ ಪೀಠಾಧಿಪತಿಗಳಾದ ಶ್ರೀ ಮ.ನಿ.ಪ್ರ ರೇವಣಸಿದ್ಧಸ್ವಾಮಿಗಳು ಆದರ್ಶವಾಗಿಟ್ಟುಕೊಂಡು ಸಾಗುತ್ತಿದ್ದಾರೆ. ಒಕ್ಕಲುತನ ಗೋಸಂರಕ್ಷಣೆಗೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ಶಿವಾನುಭವಗಳ ಮುಖಾಂತರ ಜನರಲ್ಲಿ ಸದಾಚಾರಗಳು ನೆಲೆಗೊಳ್ಳುವಂತೆ ಪ್ರಯತ್ನಿಸುತ್ತಿದ್ದಾರೆ. ಪ್ರತಿ ಅಮವಾಸ್ಯೆಯೆಂದು ಆಶ್ರಮದಲ್ಲಿ ಶಿವಾನುಭವವನ್ನು ಏರ್ಪಡಿಸಿ ಧರ್ಮ ಜಾಗೃತಿಗೈಯ್ಯುತ್ತಿದ್ದಾರೆ. ಇಂದಿಗೆ ೩೦೦ಕ್ಕೂ ಹೆಚ್ಚು ಶಿವಾನುಭವಗಳು ಜರುಗಿವೆ. ಇಂದು ಕಪ್ಪನಹಳ್ಳಿಯ ಶಿವಯೋಗಾಶ್ರಮ ಸ್ವತಂತ್ರವಾಗಿದೆ. ಶ್ರೀ ಕುಮಾರ ಶಿವಯೋಗಿಗಳ ಸಂಕಲ್ಪ ಮತ್ತು ಆಶಯಗಳನ್ನು ಈಡೇರಿಸುವಲ್ಲಿ ಸದಾ ಕಾರ್ಯನಿರತವಾಗಿದೆ.

೪. ಶಾಖಾ ಶಿವಯೋಗ ಮಂದಿರ ಹಿರೇಹಾಳ:

ಶ್ರೀ ಕುಮಾರ ಶಿವಯೋಗಿಗಳು ಶಾಖಾ ಶಿವಯೋಗ ಮಂದಿರ ಸ್ಥಾಪನೆಯ ಮುಂಚೆ ಆ ಪ್ರದೇಶದಲ್ಲಿ ತಪಸ್ವಿಗಳಿಂದ ಅನುಷ್ಠಾನ ಮೂಡಿಸುವುದು ಅವರ ಒಂದು ಗುಣ ವಿಶೇಷತೆಯಾಗಿತ್ತು. "ನಿಡಗುಂದಿ, ಕೊಪ್ಪದಲ್ಲಿ ಹಾವೇರಿಯ ಶ್ರೀ ಶಿವಬಸವಸ್ವಾಮಿಗಳು, ರಾಮಗಡ್ಡಿಯಲ್ಲಿ ಸಿದ್ಧಲಿಂಗಸ್ವಾಮಿಗಳು ಅನುಷ್ಠಾನಗೈದಂತೆ, ಹಿರೇಹಾಳದಲ್ಲಿ ಶ್ರೀನಿರಂಜನ ಸಿದ್ಧಲಿಂಗಸ್ವಾಮಿಗಳಿಂದ ಅನುಷ್ಠಾನ ಮಾಡಿಸಿ ೧೯೧೯ರ ವೇಳೆಗೆ ಹಿರೇಹಾಳದಲ್ಲಿ ಶಾಖಾ ಶಿವಯೋಗ ಮಂದಿರವನ್ನು ಸ್ಥಾಪಿಸಿದರು."[೨೫]

ಹಿರೇಹಾಳ ಶಾಖಾ ಶಿವಯೋಗ ಮಂದಿರವು ಶಿವಾನುಭವ ಪ್ರವಚನಗಳೊಂದಿಗೆ ಧರ್ಮ ಪ್ರಸಾರವನ್ನು ಮಾಡಲು ಅನುಕೂಲತೆಗಳನ್ನು ಭಕ್ತರು ಕಲ್ಪಿಸಿಕೊಟ್ಟಿದ್ದಾರೆ. ಇಂದು ಹಿರೇಹಾಳದ ಶಾಖಾ ಶಿವಯೋಗ ಮಂದಿರವು ಶಿವಯೋಗ ಮಂದಿರದ ಶಾಖೆಯಾಗಿಯೇ

ಉಳಿದುಕೊಂಡಿದೆ. ಪುರಾಣ, ಪ್ರವಚನ, ಶಿವಾನುಭವಗಳಂಥ ಕಾರ್ಯಕ್ರಮದ ಮೂಲಕ ತನ್ನದೇ ಆದ ಕೊಡುಗೆಯನ್ನು ಸಮಾಜಕ್ಕೆ ಕೊಡುತ್ತಿದೆ. ಹಿರೇಹಾಳ ಭಕ್ತರ ಆಶಯ ಶ್ರೀ ಕುಮಾರ ಶಿವಯೋಗಿಗಳ ಸದುದ್ದೇಶ ಎರಡೂ ಇಲ್ಲಿ ಸಾಕಾರಗೊಳ್ಳುತ್ತಿವೆ.

೫. ಶಾಖಾ ಶಿವಯೋಗ ಮಂದಿರ, ಬಾದಾಮಿ:

ಬಾದಾಮಿ ಶಿವಯೋಗ ಮಂದಿರಕ್ಕೆ ದೂರವಲ್ಲ. ಆದರೆ ಪರಸ್ಥಳದಿಂದ ಆಗಮಿಸಿದ ಭಕ್ತರು ನೇರವಾಗಿ ಮಂದಿರಕ್ಕೆ ಹೋಗಲು ಅನುಕೂಲವಿರಲಿಲ್ಲ. ದಾರಿ ಹಾಗೂ ವಾಹನದ ಅನುಕೂಲತೆ ಇರಲಿಲ್ಲ. ಆಚಾರಸ್ಥರಿಗೆ ತೊಂದರೆಯಾಗದಿರಲೆಂದು ಬಾದಾಮಿಯಲ್ಲಿ ಶಾಖಾ ಮಂದಿರವನ್ನು ಮಾಡಬೇಕಾಯಿತು.

ಶ್ರೀ ಕುಮಾರ ಶಿವಯೋಗಿಗಳ ಸಂಕಲ್ಪವನ್ನು ಹೊತ್ತ, ಸಮಾಜದ ಅಭಿಮಾನಿಗಳು ಬಾದಾಮಿಯ ಶಾಖಾ ಶಿವಯೋಗ ಮಂದಿರ ಸ್ಥಾಪನೆಗೆ ಕಾರಣವಾಯಿತೆನ್ನಬಹುದು. ೧೯೨೬ರಲ್ಲಿ ಶಾಖಾ ಶಿವಯೋಗ ಮಂದಿರವು ಬಾದಾಮಿಯಲ್ಲಿ ಸ್ಥಾಪನೆಗೊಂಡಿತು. ಈ ಕಾರ್ಯದಲ್ಲಿ ಇಳಕಲ್ಲ ಶ್ರೀ ಮಹಾಂತಸ್ವಾಮಿಗಳು, ಜಡೆ ಶ್ರೀ ಸಿದ್ಧಲಿಂಗಸ್ವಾಮಿಗಳು, ನವಲಗುಂದದ ಶ್ರೀ ಬಸವಲಿಂಗಸ್ವಾಮಿಗಳು ಅಲ್ಲಲ್ಲಿ ಸಂಚರಿಸಿ ನಿಧಿ ಸಂಗ್ರಹಿಸಿದರು. ಈ ಕಾರ್ಯದಲ್ಲಿ ಕಿತ್ತೂರ ಶ್ರೀ ರೇವಣಸಿದ್ಧಪ್ಪನವರು ಮತ್ತು ಸದ್ಭಕ್ತರು ಸಲ್ಲಿಸಿದ ಸಹಾಯ, ಸಹಕಾರಗಳು ಮುಖ್ಯವಾಗಿವೆ.

ಇಲ್ಲಿನ ಶಾಖಾ ಶಿವಯೋಗ ಮಂದಿರದಲ್ಲಿ ಶಿವಾನುಭವ ಮಂಟಪವು ಮೈದಾಳಿದೆ. ಪುರಾಣ, ಪ್ರವಚನ, ಶಿವಾನುಭವಗಳಿಂದ ಜ್ಞಾನ ಪ್ರಸಾರವು ಜನತೆಯಲ್ಲಿ ಜಾಗೃತಿಯನ್ನುಂಟು ಮಾಡುತ್ತಿದೆ. ಈ ಶಿವಯೋಗ ಮಂದಿರವು ಇಂದಿಗೂ ಶ್ರೀಮದ್ವೀರಶೈವ ಶಿವಯೋಗ ಮಂದಿರದ ಶಾಖಾ ಶಿವಯೋಗ ಮಂದಿರವಾಗಿಯೇ ಉಳಿದಿದೆ. ಇಲ್ಲಿಯೂ ಸಹ ವಟುಗಳಿಗೆ ಧಾರ್ಮಿಕ ಶಿಕ್ಷಣ ನೀಡಲಾಗುತ್ತಿದ್ದು ಕಾಲೇಜು ಹಂತದ ಶಿಕ್ಷಣವನ್ನು ಓದಲು ಪೂರಕವಾದ ವಾತಾವರಣ ಕಲ್ಪಿಸಿಕೊಡಲಾಗುತ್ತಿದೆ.

ಈ ರೀತಿಯಾಗಿ ಚರಿತ್ರನಾಯಕರು ಶ್ರೀಮದ್ವೀರಶೈವ ಶಿವಯೋಗದ ತರುವಾಯ ನಿಡಗುಂದಿ, ಕೊಪ್ಪ, ರಾಮಗಡ್ಡಿ, ಕಪ್ಪನಹಳ್ಳಿ, ಹಿರೇಹಾಳ, ಬಾದಾಮಿಯಲ್ಲಿ ಶಾಖಾ ಶಿವಯೋಗ ಮಂದಿರಗಳನ್ನು ಸ್ಥಾಪಿಸಿದ್ದು ಅವರ ಕರ್ತೃತ್ವದ ಶಕ್ತಿಗೆ ಜೀವಂತ ನಿದರ್ಶನವಾಗಿದೆ. ಅವುಗಳ ಮುಖಾಂತರ ಅನೇಕ ಬಗೆಯ ಧರ್ಮ ಪ್ರಸಾರಕವಾದ ಜಾಗೃತ ಕಾರ್ಯಗಳು ಯಶಸ್ವಿಯಾಗಿ ಕೈಗೊಂಡಿವೆ.

ಶ್ರೀ ಮದ್ವೀರಶೈವ ಮಹಾಸಭೆಯ ಸ್ಥಾಪನೆ

ವೀರಶೈವ–ಲಿಂಗಾಯತ ಧರ್ಮ, ವರ್ಗ, ವರ್ಣ, ವೃತ್ತಿ, ಲಿಂಗಬೇಧಗಳನ್ನು ಪರಿಗಣಿಸದೆ ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬ ಉದಾತ್ತ ಆಶಯಗಳ ಮೂಲಕ

ದಯವೇ ಧರ್ಮದ ಮೂಲವೆಂದು ಸಾರಿ, ಸಕಲ ಜೀವಾತ್ಮರಿಗೂ ಲೇಸನ್ನೇ ಬಯಸಿದ ವಿಶಾಲ ವ್ಯಾಪ್ತಿಯ ಧರ್ಮ. ಬಸವಾದಿ ಪ್ರಮಥರೂ ನೂರೊಂದು ವಿರಕ್ತರೂ, ಸಹಸ್ರಾರು ಹರ-ಗುರು ಚರಮೂರ್ತಿಗಳೂ ಕಾಲಕಾಲಕ್ಕೆ ಈ ಪರಂಪರೆಗೆ ಹೊಸ ಲೇಪದ, ಹೊಂಬೆಳಕನ್ನು ನೀಡಿದ್ದಾರೆ. ಪಂಚಾಚಾರಗಳ ಪರಿಕಲ್ಪನೆಯಲ್ಲಿ ಅಷ್ಟಾವರಣಗಳ ಅನುಸಂಧಾನದ ಮೂಲಕ ಷಟ್‌ಸ್ಥಳಗಳ ಸದ್ವಿಚಾರಗಳಿಂದ ಈ ಪರಂಪರೆ ಸತ್ವಯುತವಾಗಿರುವುದು ನಮ್ಮ ಹೆಮ್ಮೆ ಮತ್ತು ಅಭಿಮಾನದ ಸಂಕೇತ.

೧೯೦೨ ಮೇ ತಿಂಗಳು ಸವದತ್ತಿ ಕಲ್ಮಠದಲ್ಲಿ 'ಬಸವ ಪುರಾಣದ ಸಮಾರೋಪ ಅಲ್ಲಿ ಹುಬ್ಬಳ್ಳಿ ಮೂರುಸಾವಿರ ಮಠದ ೫ನೇ ಪೀಠಾಧಿಪತಿಗಳು, ಅಥಣಿಯ ಮುರುಘೇಂದ್ರ ಶಿವಯೋಗಿಗಳು, ಬೀಳೂರಿನ ಶ್ರೀ ಗುರು ಬಸವಸ್ವಾಮಿಗಳು, ಸೊಲ್ಲಾಪುರ ಕಿರೀಟ ಮಠದ ಶ್ರೀ ನಿಜಗುಣ ಶಿವಯೋಗಿಗಳು, ಚಿತ್ರದುರ್ಗದ ಶ್ರೀ ಜಯದೇವ ಮುರುಘರಾಜೇಂದ್ರ ಸ್ವಾಮಿಗಳು, ಹಾನಗಲ್ಲ ಶ್ರೀ ಕುಮಾರ ಶಿವಯೋಗಿಗಳು, ಧಾರವಾಡದ ವೀರಶೈವ ಮತ ಪ್ರಚಾರಕ ಸಂಘ'ದವರು ಕೂಡಿ "ಶ್ರೀ ಮದ್ವೀರಶೈವ ಮಹಾಸಭೆ ಸ್ಥಾಪನೆ ಹಾಗೂ ಅದರ ಸಂಘಟನೆ ಕುರಿತು ಪ್ರಸ್ತಾಪ ಮಾಡುತ್ತಾರೆ. ಅಂದಿನಿಂಲೇ ಮಹಾಸಭೆಗೆ ಅಗತ್ಯವಾದ ಧನ ಸಂಗ್ರಹಕ್ಕೆ ಊರೂರು ಸಂಚಾರ ಮಾಡಿ ಸಂಕಲ್ಪಿಸಿದ ಶ್ರೀ ಮದ್ವೀರಶೈವ ಮಹಾಸಭೆಯ ಉತ್ಪಾದಕತೆಗೆ ಸ್ಪಷ್ಟ ರೂಪವಾಗಿ ೧೯೦೩ ಜೂನ್ ೨೨ರಂದು ಪ್ರಕಟಣೆ ಹೊರಡಿಸಿ ಮಹಾಸಭೆಯ ವಿವರವಾದ ಅಂಶವನ್ನು ಪ್ರಚಾರಕ್ಕೆ ಹೊರಡಿಸಲಾಯಿತು."[೨೬] ಇದು ನಾಡಿನಾದ್ಯಾಂತ ಹರಡಿತು. ಎಲ್ಲಾ ಸಿದ್ಧತೆ ಜರುಗಿ ೧೯೦೩ ಡಿಸೆಂಬರ್‌ನಲ್ಲಿ ಮಹಾ ಸಮ್ಮೇಳನ ಜರುಗಬೇಕು ಎನ್ನುವಷ್ಟರಲ್ಲಿ ಪ್ಲೇಗ್ ಹಾವಳಿ ಉಭಯ ನಾಯಕರನ್ನು ತಬ್ಬಿಬ್ಬು ಮಾಡಿತು. ಹಾಗಾಗಿ ಅದು ೧೯೦೪ರ ಮೇ ನಲ್ಲಿ ನಡೆಸಲು ನಿರ್ಧಾರ ಮಾಡಲಾಯಿತು. "ಈ ಒಂದು ವರ್ಷದಲ್ಲಿ ಕೂಡಿಸಿದ ಹಣವನ್ನು 'ಲಿಂಗಾಯತ ಎಜುಕೇಷನಲ್ ಫಂಡಾಗಿ' ಇರಿಸಿ ಅದರ ಬಡ್ಡಿಯಲ್ಲಿ ಬಡ ವಿದ್ಯಾರ್ಥಿಗಳ ಆಂಗ್ಲ ಶಿಕ್ಷಣಕ್ಕೆ ಸಹಾಯವಾಗಿ ವಿತರಿಸಿದರು."[೨೭]

ವೀರಶೈವ-ಲಿಂಗಾಯತ ಸಮಾಜವು ಹನ್ನೆರಡನೆಯ ಶತಮಾನದ ನಂತರ ಸಾಮಾಜಿಕ ಹಾಗೂ ಧಾರ್ಮಿಕ ಮೌಲ್ಯಗಳನ್ನು ಕಳೆದುಕೊಂಡಂತಾಗಿತ್ತು. ಮುಸಲ್ಮಾನರು. ಮರಾಠರು, ಆಂಗ್ಲರು ರಾಜಕೀಯ ಸ್ಥಿತ್ಯಂತರಗಳಿಂದ ವೀರಶೈವ-ಲಿಂಗಾಯತ ಸಮಾಜ ಸರ್ವೋತೋಮುಖ ಪ್ರಗತಿ ಸಾಧಿಸಲು ಅಸಮರ್ಥವಾಗಿತ್ತು. ಅದಕ್ಕೆ ಕಾರಣಗಳಾದ ಸಂಘಟನೆಯ ಕೊರತೆ, ಪರಸ್ಪರರಲ್ಲಿ ಸಹಕಾರವಿರಲಿಲ್ಲ. ಬಡವ-ಶ್ರೀಮಂತರ ನಡುವಿನ ಅಂತರ, ಮುಖ್ಯವಾಗಿ ಶಿಕ್ಷಣದ ಕೊರತೆ, ಹೊನ್ನು-ಮಣ್ಣು-ಹೆಣ್ಣಿನ ಮೋಹದ ಪಾಶದಲ್ಲಿ ಬಹುಜನರು ಸಿಲುಕಿದ್ದರು. "ಪುಣ್ಯಕ್ಷೇತ್ರ ಮಠಗಳು ಪಾಪದ ನೆಲೆಯಾಗಿದ್ದವು. ಸ್ವಾಮಿಗಳು ಸಮಾಜದ ವಿಧ್ವಂಸಕರಾಗಿ ಬಿಟ್ಟಿದ್ದರು. ಈ

ಹೀನಾವಸ್ಥೆಯನ್ನು ಕಣ್ಣಾರೆ ಕಂಡ ಪರಸಮಾಜದವರು ನಗೆಯಾಡುತ್ತಿದ್ದರು."[೨೮] ಇಂಥ ಸಮಯದಲ್ಲಿ ಅಖಿಲಭಾರತ ವೀರಶೈವ ಮಹಾಸಭೆಯ ಸ್ಥಾಪನೆಯಾಯಿತು. ಇದಕ್ಕೆ ಕಾರಣವಾದ ಅಂಶಗಳನ್ನು ಹೀಗೆ ಪಟ್ಟಿ ಮಾಡಲಾಗಿದೆ.

೧. ಸಮಾಜವು ನೂರಾರು ವರ್ಷಗಳ ಹಿಂದೆ ಎಲ್ಲಾ ಬಗೆಯಿಂದಲೂ ಕಳೆಗುಂದಿ, ಕೃಷ್ಣಪಕ್ಷದಲ್ಲಿ ಸೇರುತ್ತಲಿತ್ತು. ಲಕ್ಷಾಂತರ ವೀರಶೈವ-ಲಿಂಗಾಯತರು ಸಮಾಜದಲ್ಲಿ ಯಾವುದೇ ಅಧಿಕಾರ ಸ್ವತಂತ್ರವಿಲ್ಲದೆ, ಅತಂತ್ರವಾಗಿದ್ದರು.

೨. ತಮ್ಮಲ್ಲಿರುವ ಪರಿಶುದ್ಧವಾದ ಪರಕಾಷ್ಠವಾದ ಶಿವಾನುಭವ ತತ್ವವನ್ನು ತಾವೇ ಮರೆತು, ತತ್ತ್ವಕ್ಕೆ ತಲೆಬಾಗದೆ, ಸಂಸ್ಕೃತಿಯನ್ನು ಅರಿಯದೆ ತಮ್ಮವರಿಂದಲೆ ಅದರ ತೇಜೋಹೀನತೆ ಆಗುತ್ತಿತ್ತು.

೩. ೧೨ನೇ ಶತಮಾನದ ಕ್ರಾಂತಿಯನ್ನು ಅರಿಯದೆ ೨೦ನೇ ಶತಮಾನ ಸುಧಾರಣೆ ಬಳಸಿಕೊಳ್ಳದೆ ಪಾಶ್ಚಿಮಾತ್ಯರ ವಿದ್ಯೆಯ ಗಂಧವನ್ನು ಆಘ್ರಾಣಿಸಿಕೊಳ್ಳದೆ ಹಳೆಯ ಜಾಡಿನಲ್ಲೆ ಕುರುಡಾಗಿ, ಅನೈಕ್ಯದ ಮುರುಕು ಕೋಲನ್ನೇ ಕೈಯಾಧಾರವಾಗಿ ಮಾಡಿಕೊಂಡಿದ್ದು.

೪. ಸಮಾಜದಲ್ಲಿ ಸಂಘಟನೆಗಾಗಿ ಯಾರೂ ಮುಂದೆ ಬರದೆ ಹೋದ ಕಾರಣ ದೇಶದೊಳಗೆ ಪೀಡೆಗಳು, ಹಿಂಸೆಗಳು ವೀರಶೈವ ಧರ್ಮದೊಂದಿಗೆ ಇಡೀ ಸಮಾಜವನ್ನು ಕಾಡುತ್ತಿದ್ದವು.

೫. ಸಮಾಜದಲ್ಲಿನ ಬಡತನ, ದಾರಿದ್ರ್ಯ, ಮೂಢನಂಬಿಕೆ, ಅಂಧಶ್ರದ್ಧೆಗಳು ಅಧಿಕವಾಗಿದ್ದವು.

೬. ಸಮಾಜದ ಗೊತ್ತು-ಗುರಿ, ಏಳು-ಬೀಳುಗಳು, ಸಂಘಟನೆ-ಸುಧಾರಣೆ ಮಾಡುವ ಸಮಾಜ ಒಂದುಗೂಡಿಸುವ ಶಕ್ತಿಗಳು ತೂಗು ಮಂಚವೇರಿ ಸುಖ ಅನುಭವಿಸುತ್ತಿದ್ದದ್ದು.

೭. ವ್ಯವಸ್ಥಾ ಬದ್ಧ ಸಮಾಜ, ಅದರ ಏಳ್ಗೆಗಾಗಿ ದುಡಿವ ಸಾಮಾಜಿಕ ಪ್ರಜ್ಞೆಯು ಸಮಾಜ ಸುಧಾರಕರ ಕೊರತೆಯಾಗಿದ್ದು.

೮. ಒಳಪಂಗಡ-ಗುರು-ವಿರಕ್ತರ ಸಮಯ ಬೇಧ, ಸಮಾಜ ಮುಖಂಡರ ಉಪೇಕ್ಷೆ, ನೈತಿಕತೆಯ ಸಮಸ್ಯೆ.

೯. ತಿಳುವಳಿಕೆ, ಪ್ರಜ್ಞಾವಂತಿಕೆ, ವಿದ್ಯೆ, ಉದ್ಯೋಗಗಳಿಲ್ಲದೆ ವ್ಯರ್ಥವಾಗಿ ಹೋಗುತ್ತಿದ್ದ ಯುವಶಕ್ತಿಯ ಆಲೋಚನಾ ಸಾಮರ್ಥ್ಯ ಕಡಿಮೆಯಾಗಿತ್ತು.

೧೦. ಕುಲ-ವೃತ್ತಿ, ಜಾತಿ, ಮತಗಳು, ಅಧಿಕಾರ, ಅಂತಸ್ತು, ಮೇಲು-ಕೀಳು ಇವುಗಳೇ ಮೌಲ್ಯಗಳೆಂಬ ತತ್ತ್ವ ಪರಿಪಾಲನೆ ರೂಢಿಯಾಗುತಿದ್ದದ್ದು.

೧೧. ಸಮಾಜದ ಸರ್ವಾಂಗೀಣ ಅಭಿವೃದ್ಧಿಗೆ ಕೈಕಾಲುಗಳಂತೆ ದುಡಿಯಲು ಸಂಘ-ಸಂಸ್ಥೆಗಳಿರಬೇಕು. ಆ ಮೂಲಕ ಸಮಾಜದ ಪ್ರಗತಿ ಸಾಧ್ಯವಾಗುವುದು. ಸಮಾಜದ ಕುಂದು-ಕೊರತೆಗಳನ್ನು ಸರ್ಕಾರದ ಗಮನಕ್ಕೆ ತರುವುದು. ಪರಿಹಾರಕ್ಕೆ ಯತ್ನಿಸುವುದು. ಸಮಾಜದಲ್ಲಿ ಸಾಮರಸ್ಯ ಉಂಟುಮಾಡುವುದು. ಅಂತ ಮಹೋನ್ನತ ಉದ್ದೇಶದಿಂದ ಅಖಿಲಭಾರತ ವೀರಶೈವ ಮಹಾಸಭೆ ಸ್ಥಾಪಿಸಲಾಯಿತು.

ಒಟ್ಟಿನಲ್ಲಿ ಸುಂದರ ಸಮಾಜ ನಿರ್ಮಾಣಕ್ಕೆ ಮಹಾಸಭೆಯೆಂಬ ಪ್ರಾತಿನಿಧಿಕ ಸಂಸ್ಥೆಯೊಂದರ ಸ್ಥಾಪನೆಗೆ ಈ ಮೇಲಿನ ಅಂಶಗಳ ಜೊತೆ ಪರಿಸರ ಹಾಗೂ ಪ್ರಾಮಾಣಿಕ ಹೃದಯದ ಶಕ್ತಿಗಳ ಪ್ರೇರಣೆಗಳು ಕಾರಣವಾದವು.

ವೀರಶೈವಮತ ಲೋಕಮತವಾಗಬೇಕು; ವೀರಶೈವ ಪಥ ವಿಶ್ವಪಥವಾಗಬೇಕು: ವೀರಶೈವ ಸಮಾಜ ವಿಶ್ವಸಮಾಜದವಾಗಬೇಕು ಎಂಬುದು ಶ್ರೀ ಕುಮಾರ ಶಿವಯೋಗಿಗಳ ಗುರಿ ಮತ್ತು ದೃಢಸಂಕಲ್ಪವಾಗಿತ್ತು. ಅದಕ್ಕಾಗಿ ಆತ್ಮ ಸಮರ್ಪಣಾ ಭಾವದಿಂದಲೇ ಶ್ರೀ ಮದ್ವೀರಶೈವ ಮಹಾಸಭೆ ಸ್ಥಾಪಿಸಿದರು. ಅದರ ಧ್ಯೇಯೋದ್ದೇಶಗಳು ಈ ಕೆಳಗಿನಂತಿವೆ.

೧. ಸರ್ವ ರೀತಿಯಲ್ಲೂ ಅಂದರೆ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ, ಧಾರ್ಮಿಕ, ಆಧ್ಯಾತ್ಮಿಕ, ಸಾಂಸ್ಕೃತಿಕ ಕ್ಷೇತ್ರಗಳು ಸೇರಿದಂತೆ ಎಲ್ಲಾ ಕ್ಷೇತ್ರದಲ್ಲೂ ವೀರಶೈವ ಧರ್ಮಾನುಯಾಯಿಗಳ ಕ್ಷೇಮವನ್ನು ಸ್ಥಾಪಿಸುವುದು.

೨. ವೀರಶೈವ ಧರ್ಮದಲ್ಲಿನ ಪಂಗಡ-ಒಳಪಂಗಡ-ಉಪಪಂಗಡಗಳ ನಡುವೆ ಸಾಮರಸ್ಯ ಸಾಧಿಸಿ ವೀರಶೈವ ಧರ್ಮವನ್ನು ಒಂದೇ ಮರದಡಿ ಸ್ಥಾಪಿಸುವುದು

೩. ವೀರಶೈವ ಧರ್ಮಕ್ಕೆ ಅಂಟಿದ ಅಸ್ಪೃಶ್ಯತೆ ನಿವಾರಣೆಗಾಗಿ ಹೋರಾಡುವುದು. ಅಗತ್ಯ ಸೌಕರ್ಯ ಒದಗಿಸುವುದು.

೪. ಯಾವುದೇ ಜಾತಿ, ಧರ್ಮ, ವರ್ಣವಿರಲಿ, ಬಡತನ, ಹಿಂದುಳಿದ, ದೀನ-ದಲಿತರ, ಅಂಗವಿಕಲರ, ಮಹಿಳೆಯರ ಹಿತಕಾಪಾಡುವುದು.

೫. ವೀರಶೈವ ಮಠ-ಮಠಾಧಿಪತಿಗಳು ಗುರು-ವಿರಕ್ತರಲ್ಲಿ ಸಮಾನ ಗೌರವ, ಸೇವಾ ಮನೋಭಾವ ಬೆಳೆಸುವುದು. ಪ್ರಗತಿಗಾಗಿ ಕಾರ್ಯ ನಿರ್ವಹಣೆಯಲ್ಲಿ ತೊಡಗುವುದು.

೬. ವಿವಿಧ ಧರ್ಮಗಳ ಮಧ್ಯೆ ಸೌಹಾರ್ದ, ಸಾಮರಸ್ಯ ಬೆಳೆಸುವುದರೊಂದಿಗೆ ಸಾಮಾಜಿಕ ಕುಂದು-ಕೊರತೆ ನಿವಾರಿಸುವುದು.

೭. ಕೃಷಿ. ವಾಣಿಜ್ಯ, ಕೈಗಾರಿಕೆಗಳ ಸ್ಥಾಪನೆ, ವಿದ್ಯಾಸಂಸ್ಥೆಗಳ ಸ್ಥಾಪನೆ, ಪ್ರೇರಣೆ, ಪ್ರೋತ್ಸಾಹ ನೀಡುವುದು.

೮. ವೀರಶೈವ ಧರ್ಮ, ಸಾಹಿತ್ಯ ಸಂಸ್ಕೃತಿಗೆ ಸಂಬಂಧಿಸಿದ ಸಂಶೋಧನೆ, ಸಂರಕ್ಷಣೆ, ಸಂವರ್ಧನೆ, ಪ್ರಸಾರ, ಅನುಸರಣೆಗೆ ಅಗತ್ಯ ಕಾರ್ಯ ನಡೆಸುವುದು.

ಹೀಗೆ ಸಂಘಟನೆ, ಸಮಾನತೆ, ದೂರದೃಷ್ಟಿ ಈ ನಿಟ್ಟಿನಲ್ಲಿ ಮಹಾಸಭೆ ಸ್ಥಾಪಿಸಿ ಪೂರಕ ಪರಿಸರ ನಿರ್ಮಿಸಿದರು. ಅದಕ್ಕಾಗಿ ಹಗಲಿರುಳು ಶ್ರಮಿಸಿ ಅದರ ಧ್ಯೇಯೋದ್ದೇಶಗಳನ್ನು ರೂಪಿಸಿದರು. ಚರ್ಚೆ, ಸಂವಾದಗಳನ್ನು ನಡೆಸಿ ನಿರ್ಣಯಗಳಲ್ಲಿ ಬದಲಾವಣೆ ಮಾಡಿದರು. ಇಂದು ಅವು ವೈಜ್ಞಾನಿಕ ತಳಹದಿಯಲ್ಲಿ ಸಮಾಜದ ಹೆಮ್ಮರಗಳಾಗಿ ನಿಂತಿವೆ.

ಅಖಿಲಭಾರತ ವೀರಶೈವ ಮಹಾಸಭೆ ತನ್ನ ೧೦೫ನೇ ವರ್ಷದ ದೀರ್ಘಾಯುಷ್ಯವನ್ನು ಇಂದಿಗೆ (೨೦೧೦ ಎಪ್ರಿಲ್ ೯ ರಿಂದ ೧೩) ಹೊಂದಿದೆ. ಇದುವರೆಗೆ ೨೨ ಮಹಾಸಭೆಯನ್ನು ಪೂರೈಸಿದ್ದು ೨೦ ಜನ ಮೇಧಾವಿ-ಮುತ್ಸದ್ದಿಗಳ ಸೇವಾ ಪರಂಪರೆ ಕಂಡಿದೆ. "ಕರ್ನಾಟಕ ರಾಜ್ಯದ ಒಳಗೂ-ಹೊರಗೂ ಮಹಾಸಭೆ ಜರುಗಿದ್ದು ಇಂದು ತನ್ನದೇ ಆದ 'ವೀರಶೈವ-ಲಿಂಗಾಯತ ಸಭಾ ಭವನ' ಎಂಬ ಸ್ವಂತ ಕಟ್ಟಡ ಹೊಂದಿದೆ. ಕರ್ನಾಟಕ, ಮಹಾರಾಷ್ಟ್ರ, ಕೇರಳ, ಆಂಧ್ರಪ್ರದೇಶ, ತಮಿಳುನಾಡು ರಾಜ್ಯಗಳಲ್ಲಿ ರಾಜ್ಯ ಸಮಿತಿಗಳಿವೆ. ನೇಪಾಳ, ಶ್ರೀಲಂಕ ದೇಶಗಳಲ್ಲೂ ಹಾಗೂ ಉದ್ಯೋಗ, ಶಿಕ್ಷಣ ಉದ್ದೇಶಗಳಿಗಾಗಿ ಹಲವಾರು ಪೌರತ್ವ ಮತ್ತು ಪಾಶ್ಚಮಾತ್ಯ ದೇಶಗಳಲ್ಲೂ ಸುಮಾರು ೨ ಕೋಟಿ ಜನಸಂಖ್ಯೆಯ ವೀರಶೈವ-ಲಿಂಗಾಯತರಿದ್ದಾರೆಂದು ಅಂದಾಜಿಸಲಾಗಿದೆ."[೯] ರಾಷ್ಟ್ರದಲ್ಲಿ ಮತ್ತು ಕರ್ನಾಟಕದಲ್ಲಿ ಹಲವಾರು ವೀರಶೈವ-ಲಿಂಗಾಯತ ಸಂಘ-ಸಂಸ್ಥೆಗಳು, ಮಠ-ಮಾನ್ಯಗಳಿದ್ದಾಗ್ಯೂ 'ಅಖಿಲಭಾರತ ವೀರಶೈವ ಮಹಾಸಭಾ' ಸಮಗ್ರ ವೀರಶೈವ-ಲಿಂಗಾಯತರ ಮಾತೃಸ್ವರೂಪದ ಪ್ರಾತಿನಿಧಿಕ ಸಂಸ್ಥೆಯಾಗಿದೆ. ಈ ಹಿನ್ನೆಲೆಯಲ್ಲಿ ಇದರ ಬಗೆಗಿನ ಸಮಗ್ರ ಅಧ್ಯಯನ-ಬರಹ ಒಂದು ಪ್ರತ್ಯೇಕ ಸಂಶೋಧನೆಗೆ ಶಿರೋನಾಮೆಯಾಗಿ, ವಸ್ತುವಾಗಿ ಬೆಳೆಯುವಷ್ಟಿದೆ. ಇದುವರೆಗೆ ಜರುಗಿದ ಅಖಿಲಭಾರತ ವೀರಶೈವ ಮಹಾಸಭೆಗಳು ಈ ಕೆಳಗಿನಂತಿವೆ.[೩೦]

ಸಂಖ್ಯೆ	ಅಧಿವೇಶನ ನಡೆದ ಸ್ಥಳ	ದಿನಾಂಕ	ಅಧ್ಯಕ್ಷರು
೧.	ಧಾರವಾಡ	ಮೇ. ೧೯೦೪	ಶಿರಸಂಗಿ ಲಿಂಗರಾಜರು
೨.	ಬೆಂಗಳೂರು	ಮೇ. ೧೯೦೫	ಶಿರಸಂಗಿ ಲಿಂಗರಾಜರು
೩.	ಸೊಲ್ಲಾಪುರ	೧೯೦೭	ಕೆ.ಪಿ. ಪಟ್ಟಣಶೆಟ್ಟರ
೪.	ಬಾಗಲಕೋಟೆ	ಡಿಸೆಂಬರ್ ೧೯೦೮	ಒಂಟಮುರಿ ದೇಸಾಯಿ
೫.	ಬಳ್ಳಾರಿ	೨೭ ಡಿಸೆಂಬರ್ ೧೯೦೯	ವಾರದ ಮಲ್ಲಪ್ಪನವರು
೬	ಬೆಳಗಾವಿ	೨೭ ಡಿಸೆಂಬರ್೧೯೧೧	ಮಾಮಲೆ ದೇಸಾಯಿ

೭.	ಸಿಪ್ಪಾಣಿ	ಡಿಸೆಂಬರ್ ೧೯೧೨	ಅರ್ಟಾಳ ರುದ್ರಗೌಡ
೮.	ದಾವಣಗೆರೆ	ಡಿಸೆಂಬರ್ ೧೯೧೭	ಕೆ.ಪಿ. ಪಟ್ಟಣಶೆಟ್ಟರು
೯.	ಬೀರೂರು	೫ ಜನವರಿ ೧೯೨೦	ಶಾಂತವೀರಪ್ಪ ಮಣಸಿನಕಾಯಿ
೧೦.	ಬೆಂಗಳೂರು	೭ ಡಿಸೆಂಬರ್ ೧೯೨೭	ಸಿದ್ಧಪ್ಪ ಕಂಬಳಿಯವರು
೧೧.	ಧಾರವಾಡ	೧೮ ಮೇ ೧೯೩೩	ಫ.ಗು. ಹಳಕಟ್ಟಿ
೧೨.	ರಾಯಚೂರ	೨ ಜೂನ್ ೧೯೩೭	ಸಿದ್ಧಪ್ಪ ಕಂಬಳಿಯವರು
೧೩.	ಹುಬ್ಬಳ್ಳಿ	೧೩ ಡಿಸೆಂಬರ್ ೧೯೩೮	ಎಸ್.ಎಸ್. ಬಸವನಾಳ
೧೪.	ಕುಂಭಕೋಣ	ಮೇ ೧೯೪೦	ಎಂ.ಎಸ್. ಸರ್ದಾರರ
೧೫.	ತುಮಕೂರ	೧೯೪೫	ಸಿ.ಸಿ. ಹುಲಕೋಟೆಯವರು
೧೬.	ಬಸವಕಲ್ಯಾಣ	ಜನವರಿ ೧೯೫೫	ಮ.ನಿ.ಪ್ರ ಸಂಗನಬಸವಸ್ವಾಮಿ
೧೭.	ಶಿವಯೋಗಮಂದಿರ	೨೧ ಫೆಬ್ರವರಿ ೧೯೬೦	ಡಾ.ಡಿ.ಸಿ ಪಾವಟೆಯವರು
೧೮.	ಮುಂಬಯಿ	೨೩ ಜೂನ್ ೧೯೬೦	ಮ.ನಿ.ಪ್ರ.ಸ್ವ ಶಿವಕುಮಾರಸ್ವಾಮಿ
೧೯.	ಬೆಂಗಳೂರು	ಡಿಸೆಂಬರ್ ೧೯೭೩	ಜೆ.ಟಿ. ಮಲ್ಲಾರಾಧ್ಯರು
೨೦.	ಮೈಸೂರು	೨೪, ೨೫ ಎಪ್ರಿಲ್ ೧೯೮೩	ಈಶ್ವರಪ್ಪ ಮಲ್ಲಪ್ಪ ಮಗದುಮ್ಮ
೨೧.	ಬೆಳಗಾವಿ	ಮೇ ೧೯೯೨	ಶರಣಬಸಪ್ಪ ಅಪ್ಪ
೨೨.	ಶಿವಯೋಗಮಂದಿರ	ಎಪ್ರಿಲ್ ೨೦೧೧	ಶ್ರೀ ಭೀಮಣ್ಣ ಖಂಡ್ರೆ

ಅಖಿಲ ಭಾರತ ವೀರಶೈವ ಮಹಾಸಭೆಯಂತೆ ಧರ್ಮೋತ್ತೇಜಕ ಸಭೆ ಹಾನಗಲ್ಲ ಶ್ರೀಗಳ ಸಮಾಜಮುಖಿ ಕಾರ್ಯಗಳಲ್ಲೊಂದು. ಮಹಾಸಭೆಯು ವಿದ್ಯಾವಂತ ಪದವೀಧರರ ಪಾಲ್ಗೊಳ್ಳುವಿಕೆಯಲ್ಲಿ ಹೊಸಯುಗಕ್ಕನುಸಾರವಾಗಿ ಸಮಾಜದವರೆಗೆ ದೊರೆಯಲಾರಂಭಿಸಿತು. ಅಲ್ಲಿ ಧಾರ್ಮಿಕ ಚರ್ಚೆಗಳಿಗೆ ಪ್ರಾತಿನಿಧ್ಯತೆಯ ಕೊರೆತೆಯುಂಟಾಯಿತು. ಆ ಬಗ್ಗೆ ಯಾವುದೇ ರೀತಿಯ ವಾದ-ವಿವಾದಕ್ಕೆ ಹೋಗದೆ ಮಹಾಸಭೆ ಲೌಕಿಕ ಸುಧಾರಣೆಗೆ ಅಗತ್ಯವೆಂದು ಭಾವಿಸಿದರು. ತಮ್ಮ ಉದ್ದೇಶದ ಒಂದು ಭಾಗ ಈ ಮೂಲಕವಾಗಿ ನೆರವೇರಲಿ ಎಂದು ಹರಿಸಿದರು. ಅದಕ್ಕೆ ಆಪತ್ತುಗಳು ಬಂದೊದಗಿದಾಗ ನಿತ್ಯ ಕ್ರಿಯೆಗಳನ್ನು ಬಿಟ್ಟು ಹೋದವರು.

"ವೀರಶೈವ ಮಹಾಸಭೆ ಹಾಗೂ ಶಿವಯೋಗ ಮಂದಿರದ ಕಾರ್ಯ ಕಲಾಪಗಳ ನಡುವೆಯೂ ಧರ್ಮ ಜಾಗೃತಿಗಾಗಿ. ತತ್ವ ಪ್ರಸಾರಕ್ಕಾಗಿ ಧಾರವಾಡ ಜಿಲ್ಲೆಯ ಬಂಕಾಪುರ

ಗ್ರಾಮದಲ್ಲಿ ೧೯೦೯ರಲ್ಲಿ ಪ್ರಥಮ ಧರ್ಮೋತ್ತೇಜಕ ಸಭೆ ರೂಪಗೊಳ್ಳುತ್ತದೆ".[೩೧] ನಂತರದಲ್ಲಿ ಎರಡನೇ ಧರ್ಮೋತ್ತೇಜಕ ಸಭೆಯು ಪಶುಪತಿಹಾಳ ಗ್ರಾಮ ಕುಂದಗೋಳ ತಾಲೂಕಿನಲ್ಲೂ ಮೂರನೇ ಸಭೆ ಶಿವಯೋಗ ಮಂದಿರದಲ್ಲಿಯೂ ನಡೆಯಿತು."[೩೨] ಈ ಸಭೆಯಲ್ಲಿ "ಶಿವಯೋಗ ಮಂದಿರದಲ್ಲಿ ಶ್ರೀ ಮಹಾಂತ ಶಿವಯೋಗಿ ಇನ್‌ಸ್ಟಿಟ್ಯೂಷನ್ ಎಂಬ ಆಂಗ್ಲ ಪ್ರೌಢಶಾಲೆ ಸ್ಥಾಪಿಸಬೇಕೆಂದು ನಿರ್ಧರಿಸಲಾಗುತ್ತದೆ."[೩೩]

ಪರಳಿ ವ್ಯಾಜ್ಯ

ಪರಳಿ ಚಿಕ್ಕಹಳ್ಳಿ ಆದರೂ ಹನ್ನೆರಡು ಜ್ಯೋತಿರ್ಲಿಂಗಗಳಲ್ಲೊಂದಾದ ವೈಜನಾಥ (ವೈದ್ಯನಾಥ) ಲಿಂಗವುಳ್ಳ ಪರಳಿ ಪ್ರಸಿದ್ಧಿ ಪಡೆದಿದೆ. ಈ ಗ್ರಾಮ ಹೈದ್ರಾಬಾದದಿಂದ ಮನಮಾಡಕ್ಕೆ ಹೋಗುವ ರೈಲ್ವೆ ಮಾರ್ಗದಲ್ಲಿದೆ. ಹೈದ್ರಾಬಾದ್ ರಾಜ್ಯದ ಮರಾಠ ಪ್ರದೇಶದಲ್ಲಿ ಪರಭಣಿ ಜಿಲ್ಲೆ ಇಲ್ಲಿ ಸಾಧರಣವಾದ ಒಂದು ಹಳ್ಳಿ ಪರಳಿ. ಗೋದಾವರಿ ನದಿಯ ಬಲದಂಡೆಯಲ್ಲಿ ಸುಂದರವಾದ ಮಂದಿರವುಳ್ಳ ಪರಳಿ ಸೊಲ್ಲಾಪುರದಿಂದ ಉತ್ತರಕ್ಕೆ ೧೩೦ ಮೈಲು ದೂರದಲ್ಲಿದೆ. "ಬಸವಣ್ಣನವರಿಗಿಂತ ಪೂರ್ವದ ಶರಣರೆನಿಸಿದ ಉರಿಲಿಂಗದೇವ, ಉರಿಲಿಂಗ ಪೆದ್ದಿ, ಕಾಳವ್ವೆ, ಕೋಲಂಬೆ ಮೊದಲಾದ ಶರಣರು, ಶಿವಶರಣೆಯರು ಇಲ್ಲಿ ಆಗಿ ಹೋಗಿದ್ದಾರೆ ಎಂದು ಫ.ಗು.ಹಳಕಟ್ಟಿಯವರು ನಿರ್ಣಯಿಸಿದ್ದಾರೆ."[೩೪] ಈ ಭಾಗದಲ್ಲಿ ಅವತರಿಸಿದ ಶಿವಶರಣ, ಶಿವಶರಣೆಯರಲ್ಲಿ ಕೆಲವರು ಕನ್ನಡ ವಚನಕಾರರಾಗಿದ್ದಾರೆ. ಈಗಲೂ ಇಲ್ಲಿಯ ಅನೇಕ ಗ್ರಾಮಗಳಿಗೆ ಕನ್ನಡ ಹೆಸರುಗಳಿವೆ. ಆದುದರಿಂದ "೧೧ನೇ ಮತ್ತು ೧೨ನೇ ಶತಮಾನದಲ್ಲಿ ಈ ಗೋದಾವರಿ ತೀರದ ಪ್ರದೇಶವು ೯ನೇ ಶತಮಾನದ ರಾಷ್ಟ್ರಕೂಟ ಅರಸನಾದ ನೃಪತುಂಗನ ಕಾಲದಲ್ಲಿ ಕನ್ನಡ ನಾಡಿಗಿದ್ದಂತೆ; ೧೩ನೇ ಶತಮಾನದಲ್ಲೂ ಅಚ್ಚಗನ್ನಡ ಪ್ರಾಂತವಾಗಿದ್ದಂತೆ ತೋರುತ್ತದೆ."[೩೫] ಇದು ಅಚ್ಚಗನ್ನಡದ ನೆಲವಾಗಿದ್ದರೂ ಕನ್ನಡಿಗರ ಅಭಿಮಾನಶೂನ್ಯತೆ ಹಾಗೂ ಕರ್ತವ್ಯ ಅದಕ್ಷತೆಗಳ ಅಭಾವದಿಂದ ಮರಾಠಿಗರ ಆಕ್ರಮಣಕ್ಕೆ ಪರಳಿ ವೈಜನಾಥ ಲಿಂಗ ಒಳಗಾಗಿತ್ತು. ಅಲ್ಲಿ ವೈಜನಾಥನನ್ನು ಅರ್ಚಿಸುವರು ವೀರಶೈವರೇ ಆಗಿದ್ದರು. ಪೇಶ್ವೆಯವರ ಆಶ್ರಯದಲ್ಲಿ ಪಂಡಿತರ ಕುಚ್ಯೋದ್ಯತನದಿಂದ ವೀರಶೈವರು ಶೂದ್ರರೂ, ಇವರಿಗೆ ವೈಜನಾಥನ ಅರ್ಚನೆ ಮಾಡುವ ಅಧಿಕಾರವಿಲ್ಲ. ಶ್ರಾವಣ ಮಾಸದಲ್ಲಿ ಇಂಥವರಿಂದ ರುದ್ರಾಭಿಷೇಕಾಧಿಗಳು ನಡೆಯಬಾರದು"[೩೬] ಎಂಬ ಅಂಶ ಬೆಳಕಿಗೆ ಬರುತ್ತದೆ.

ಪರಳಿ ಪ್ರಕರಣ ನಡೆಯುವ ಪೂರ್ವದಲ್ಲಿ ಮಹಾಸ್ವಾಮಿಗಳ ದೇಹಾಲಸ್ಯದಿಂದಾಗಿ ಮಂದಿರದಲ್ಲಿ ಉಳಿದುಕೊಂಡಾಗ ಪುರಾಣ-ಪ್ರವಚನಗಳನ್ನು ನಡೆಸುತ್ತಿದ್ದರು. ಆಗ ಸಾಧಕರಾಗಿದ್ದ ರೇಣುಕ ದೇವರಿಂದ ಅಂದರೆ ಸದಾಶಿವ ಸ್ವಾಮಿಗಳಿಂದ ಮುಖ್ಯ ಸಂಗತಿಗಳನ್ನು ಬರೆಸಿಡುತಿದ್ದರಂತೆ. ವೀರಶೈವರ ಅಭಿವೃದ್ಧಿಯನ್ನು ಸಹಿಸಿದ ಪಂಡಿತರು ಪುರಾಣಗಳಲ್ಲಿ 'ರುದ್ರಪದ'ವನ್ನು 'ಶೂದ್ರ'ವೆಂದು

ತಿದ್ದಿಸಿದ್ದನ್ನು ಗಮನ ಹರಿಸುತ್ತಾರೆ. ಸಂಸ್ಕೃತದ ರುದ್ರವನ್ನು ಶೂದ್ರ ಮಾಡಲು ಮಧ್ಯವೊಂದು ಗೆರೆ ಎಳೆದರೆ ಸಾಕು. ಹೀಗೆ ಅನೇಕ ವಿಷಯ ಸಂಗ್ರಹಿಸಲು ನಮಗೆ ಅಪ್ಪಣೆ ಮಾಡಿದ್ದರೆಂದು ಸದಾಶಿವ ಮಹಾಸ್ವಾಮಿಗಳು ವಟುಗಳಿಗೆ ಪಾಠ ಹೇಳುವಾಗ ತಿಳಿಸುತ್ತಿದ್ದರು.

ಪರಳಿಯ ಈ ವಿವಾದ ನ್ಯಾಯಾಲಯಕ್ಕೆ ಹೋಯಿತು. ತಾಲೂಕ, ಜಿಲ್ಲೆಗಳಲ್ಲಿ ನಿರ್ಣಯವಾಗದೆ, ಹೈದ್ರಾಬಾದ್ ಸರಕಾರ ಉಚ್ಚನ್ಯಾಯಾಲಯ 'ಉಮರ ಹಜಹಜಿಗೆ' ಬಂತು ಉನ್ನತ ನ್ಯಾಯಾಲಯವೆಂದ ಮೇಲೆ ಕೇಳುವುದೇನು? ಹಣದ ಹೊಳೆ ಹರಿಯಿತು. ಅಲ್ಲಿ ನ್ಯಾಯಕ್ಕೆ ಅವಕಾಶವಿಲ್ಲ. ಅಪಾರವಾದ ಧನಸಹಾಯ, ಪಂಡಿತರ ಸಹಕಾರ ಅವಶ್ಯವಾಗಿರಬೇಕಿತ್ತು. ಸಮಾಜದ ಹಿರಿಯರು ಮೊದಲು ಮುಂದಾಗಿ ಮೈಮೇಲೆ ಬಂದಾಗ ಹಿಂದೆ ಸರಿದಿದ್ದರು. ಇದು ವೀರಶೈವ ಸಮಾಜದ ಮರ್ಯಾದೆಯ ಮಾತಾಯಿತು. ಈ ಸಮಾಚಾರ ಕುಮಾರಮಹಾಸ್ವಾಮಿಗಳಿಗೆ ತಿಳಿದದ್ದೆ ತಡ; ಹಣ ಮತ್ತು ಪಂಡಿತರನ್ನು ಕರೆದುಕೊಂಡು ಹೈದ್ರಾಬಾದಿಗೆ ತೆರಳಿದ್ದು ಅವರ ದೃಢವಿಶ್ವಾಸ ಯಶಸ್ಸಿಗೆ ಕಾರಣವಾಗುತ್ತದೆ.

"ಪರಳಿಯ ವೈಜನಾಥ ಲಿಂಗದ ಸ್ಥಳ ಪುರಾಣದಂತೆ ಶರಣ ವೈಜವ್ವೆಯ ದೃಢ ಭಕ್ತಿಯ ಹಿನ್ನೆಲೆಯಾಗಿದೆ. ವೈಜವ್ವೆಯ ಹೆಸರು, ಗುಣಸಹಸ್ರನಾಮಗಳಲ್ಲಿ ಬರುತ್ತದೆ. ಆದ್ದರಿಂದ ಅವಳು ಪುರಾತನಳು ವೀರಶೈವ ಚಳುವಳಿಯ ಆರಂಭ ಕಾಲದಲ್ಲಿ ಇದ್ದಂತೆ ತೋರುತ್ತದೆ. ಬಹುಶಃ ಬಸವೇಶ್ವರನ ಕಾಲಕ್ಕಿಂತಲೂ ಕೆಲವು ಕಾಲ ಹಿಂದಿನವಳಿರಬಹುದು ಎಂದು ಡಾ.ಫ.ಗು.ಹಳಕಟ್ಟಿಯವರ ಅಭಿಪ್ರಾಯ."[೩೭]

ಪರಸ್ಪರ ವಾದ-ವಿವಾದಕ್ಕೆ ಪಂಡಿತರು, ವಕೀಲರು ಪರ-ವಿರೋಧಿ ಬಣಗಳಿಗೆ ನಿಯಮಿಸಲ್ಪಡುತ್ತದೆ. ಈ ಬಗ್ಗೆ ವೀರಶೈವರ ಪರವಾಗಿ ವಿಷಯ ಒದಗಿಸಿದ ಪಂಡಿತರು, ವಕೀಲರ ಹೆಸರುಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಲಾಗಿದೆ.[೩೮]

೧. ವೀರಶೈವ ಪಂಡಿತರು

* ಪಂ.ಸ್ವಾಮಿಶ್ರೀವಿರುಪಾಕ್ಷ ಒಡೆಯರು, ಇಂದೂರ
* ಪಂ.ಶ್ರೀ.ಪಿ.ಆರ್.ಕರಿಬಸವಶಾಸ್ತ್ರಿಗಳು, ಮೈಸೂರು
* ಪಂ.ಶ್ರೀ ಸದಾಶಿವಶಾಸ್ತ್ರಿಗಳು, ಹೋಳ್ಕರ, ಸಂಸ್ಕೃತ ಕಾಲೇಜು ಕಾಶಿ
* ಪಂ.ಶ್ರೀ ಗುರುಶಾಂತಶಾಸ್ತ್ರಿಗಳು, ಸಿರಸಿ
* ಪಂ.ಶ್ರೀ ಗುರುಬಸವ ಶಿವಾಚಾರ್ಯರು, ಕ್ಯಾಸನೂರು ಸಂಸ್ಥಾನಮಠ
* ಪಂ.ಶ್ರೀ ಕರಿಗಣನಾಥಶಾಸ್ತ್ರಿಗಳು, ಪಗಡಿದಿನ್ನಿ
* ಪಂ.ಶ್ರೀ ಅಜ್ಜಯ್ಯಶಾಸ್ತ್ರಿಗಳು, ಚೌಡದಾನಪುರ ಸಂಸ್ಥಾನಮಠ

* ಪಂ.ಶ್ರೀ ಚಂದ್ರಶೇಖರಶಾಸ್ತ್ರಿಗಳು, ಪಗಡದಿನ್ನಿ
* ಪಂ.ಶ್ರೀ ಸೋಮನಾಥಶಾಸ್ತ್ರಿಗಳು, ಗೊಗ್ಗಿದುರಹಳ್ಳಿ
* ಪಂ.ಶ್ರೀ ಬಸವರಾಜಶಾಸ್ತ್ರಿಗಳು, ಪಗಡದಿನ್ನಿ
* ಪಂ.ಶ್ರೀ ಮಣೂರ ಮಲ್ಲಿಕಾರ್ಜುನಶಾಸ್ತ್ರಿಗಳು, ಸೊಲ್ಲಾಪುರ
* ಪಂ.ಶ್ರೀ ಚಂದ್ರಶೇಖರಶಾಸ್ತ್ರಿಗಳು, ಯಾದಗಿರಿ
* ಪಂ.ಶ್ರೀ ಚಂದ್ರಶೇಖರಶಾಸ್ತ್ರಿಗಳು, ಕಂಪ್ಲಿ
* ಪಂಶ್ರೀ ಚಂದ್ರಶೇಖರಶಾಸ್ತ್ರಿಗಳು, ದಾವಣಗೆರೆ
* ಪಂ. ಮಹಾಂತಸ್ವಾಮಿಗಳು ಹಂಪಿತೋಪಿನ ಸಾವಿರದೇವರು, ಕಂಪ್ಲಿ
* ಪಂ. ವೈ.ನಾಗೇಶಶಾಸ್ತ್ರಿಗಳು ಸರ್ವದರ್ಶನತೀರ್ಥ, ಬಳ್ಳಾರಿ
* ಶಿವಕೋಟಿ ವೀರಭದ್ರಸ್ವಾಮಿಗಳು ಲಿಂಗಂಪಲ್ಲಿ
* ಶ್ರೀ ಸದಾಶಿವಶಿವಾಚಾರ್ಯರು, ಸಖರಾಯಪಟ್ಟಣ

೨. ವಕೀಲರುಗಳು

* ರಾಯ ವಿಶ್ವೇಶ್ವರನಾಥ ಹೈಕೋರ್ಟ್, ವಕೀಲರು
* ನಿರ್ಮಲ್ ದೇಶಮುಖ್ ಹೈಕೋರ್ಟ್, ಹೈದ್ರಾಬಾದ್
* ರಾವ್‌ಬಹದ್ದೂರ ಶಾಂತವೀರ ಒಡೆಯರ್, ಚೌಡದಾನಪುರ
* ಬಾಪೂರಾವ್ ವಕೀಲರು, ಹೈದ್ರಾಬಾದ್
* ಹೇಮಚಂದ್ರರಾವ್ ವಕೀಲರು ಹೈದ್ರಾಬಾದ್
* ಸೋಮೇಶ್ವರರಾವ್ ವಕೀಲರು, ಹೈದ್ರಾಬಾದ್
* ಶಿವಣಯ್ಯ ವಕೀಲರು, ಹೈದ್ರಾಬಾದ್
* ನಾಗನಾಥಯ್ಯ ವಕೀಲರು, ಹೈದ್ರಾಬಾದ್
* ಬಾಲಕಿ ದೇಶಮುಖ್ ವಕೀಲರು, ಹೈದ್ರಾಬಾದ್
* ಚನ್ನಬಸವಯ್ಯ ವಕೀಲರು, ಉದ್ಗಿರಿ
* ಚಂದ್ರಪ್ಪ ವಕೀಲರು, ಉದ್ಗಿರಿ
* ಸಂಗ್ರಾಮಪ್ಪ ವಕೀಲರು, ಉದ್ಗಿರಿ
* ಮಹಾದೇವಯ್ಯ ವಕೀಲರು, ಉದ್ಗಿರಿ
* ನಾಗನಾಥರಾವ್ ವಕೀಲರು, ಭಾಲ್ಕಿ

ಹೀಗೆ ಶ್ರೀಗಳು ಸಮಾಜೋದ್ಧಾರಕ್ಕಾಗಿ ಕರೆ ಕೊಟ್ಟಾಗ "ಪರವಾದಿಗಳಾಗಿ ಪುಣೆ, ಹೈದ್ರಾಬಾದ್‌ನ ಸಂಸ್ಕೃತ ಪಂಡಿತರೂ, ವಕೀಲರೂ ಅಭಿಮಾನದಿಂದ ಬಂದು ಈ ಪ್ರಕರಣದಲ್ಲಿ

ಭಾಗವಹಿಸಿದರು. ಇದರೊಂದಿಗೆ ಶ್ರೀಗಳ ಸಹಾಯ, ಸಹಕಾರ ಪಡೆದು ಕಾಶಿಯಲ್ಲಿ ಅಭ್ಯಾಸ ಮಾಡಿದ, ಮಾಡುತ್ತಿದ್ದ ಶಾಸ್ತ್ರಿಗಳ ವರ್ಗವು ಇವರ ಸೇವೆಗೆ ಆಗಮಿಸಿದರು."[೭೯]

ಶ್ರೀ ವೇದತೀರ್ಥ ಚೌಡದಾನಪುರ ಸಂಸ್ಥಾನ ಮಠದ ವಿರೂಪಾಕ್ಷ ಒಡೆಯರು ಬ್ರಾಹ್ಮಣರ ಪರವಾಗಿ ಜ್ಞಾನ ಸಂಪಾದಕರಾಗಿದ್ದ ಶ್ರೀ ಶಂಕರಾಚಾರ್ಯಸ್ವಾಮಿಗಳು, ಸಂಕೇಶ್ವರ ಇವರಿಗೆ ಆಹ್ವಾನ ನೀಡಿದರು. ಇದರೊಂದಿಗೆ ವಕೀಲರಾದ ವಿಷ್ಣುತೀರ್ಥ ಬಾಪಟ್, ಪುಣೆ, ಗಿರಿರಾವ್ ಹೈಕೋರ್ಟ್ ವಕೀಲರು, ಹೈದ್ರಾಬಾದ್ ಇವರು ಪರವಾಗಿ ವರದಿ ಮಂಡಿಸಿದರು.

ಕ್ರಿಶ. ೧೯೨೫ರಲ್ಲಿ ಈ ಘಟನೆ ಆರಂಭವಾಯಿತು. ಪರವಾದಿಗಳ ಪರವಾಗಿ ಪುಣೆಯಲ್ಲಿ ಪ್ರಸಿದ್ಧ ಪಂ.ಬಾಪಟ್‌ಶಾಸ್ತ್ರಿಗಳು ಒಂದು ವಾರದವರೆಗೆ ವಾದಿಸಿದರು. ವೀರಶೈವ ಪಂಡಿತರನೇಕರರ ಸಾಕ್ಷಿಗಳಾದವು. ಸರಕಾರಿ ನ್ಯಾಯಾಧೀಶರಲ್ಲಿ ನ್ಯಾಯ ಪ್ರಾರಂಭವಾಯಿತು. ಈ ವಾದದ ವಿಚಾರದಲ್ಲಿ ಮಧ್ಯಸ್ಥರಾಗಿರಲು ಓರ್ವ ನಿಷ್ಪಕ್ಷಪಾತಿಯೂ, ಧರ್ಮವಂತನೂ, ಜ್ಞಾನಿಯೂ ಆದ ಪುರುಷರನ್ನು ನಿಯಮಿಸಬೇಕೆಂದು ನಿಜಾಂ ಸರಕಾರದ ಅನುಮತಿಯನ್ನು ಕೇಳಲು, ಅವರು ನಿವೃತ್ತ ಮುಖ್ಯ ನ್ಯಾಧೀಶರೊಬ್ಬರನ್ನು ಆ ಬಗ್ಗೆ ತೀರ್ಪು ಕೊಡಲು ನೇಮಿಸಲಾಯಿತು. ನಿಜಾಂ ಸರಕಾರದವರು ಮೂರು ಜನರುಳ್ಳ ಒಂದು ಕಮಿಷನ್ ನೇಮಿಸಿದರು. ಮೊದಲನೆ ವಿಚಾರಣೆಯು ಪರಳಿ ಮಹಾಕ್ಷೇತ್ರದಲ್ಲಿ ತಾರೀಖು:೨೧.೦೫.೧೯೨೫ರಿಂದ ತಾರೀಖು:೨೩.೦೫.೧೯೨೫ರವರೆಗೆ ನಡೆಯಿತು. ಸಾವಿರಾರು ಜನರು ಪ್ರೇಕ್ಷಕರಾಗಿ ಕೇಳುತ್ತಿದ್ದರು. ಪ್ರತಿನಿತ್ಯ ಹೈದ್ರಾಬಾದಿನಲ್ಲಿ ಈ ನ್ಯಾಯದ ಸುದ್ದಿಯೇ ಹರಡಿ ಜನರ ಕುತೂಹಲವನ್ನು ಕೆರಳಿಸಿತ್ತು. ವೀರಶೈವರ ವತಿಯಿಂದ ಹೈದ್ರಾಬಾದಿನ ರಾಯಹೇಮಚಂದ್ರ ವಕೀಲರೂ, ರಾಯ ವಿಶ್ವೇಶ್ವರನಾಥ ವಕೀಲರು ವಾದಿಸುತ್ತಿದ್ದರು. ಇವರಿಗೆ ಸಹಾಯಕರಾಗಿ ಸೋಮೇಶ್ವರರಾವ್ ಮತ್ತು ಶರಣಸ್ವಾಮಿ, ಹೈಕೋರ್ಟ್ ವಕೀಲರು ಅಲ್ಲದೇ ಸಂಗ್ರಾಮಪ್ಪ ಉದ್ಗಿರಿ, ಮಹಾದೇವಯ್ಯ ಉದ್ಗಿರಿ, ನಾಗನಾಥರಾವ್ ಭಾಲ್ಕಿ ಮೊದಲಾದವರಿದ್ದರು. ಕೆಲವರು ಮಧ್ಯದಲ್ಲಿ ಊರಿಗೆ ಮರಳಿದರು. ಆದರೆ ಇಟಗಿ ಸೋಮನಾಥಶಾಸ್ತ್ರಿಗಳು ಮಣ್ಣೂರ, ಕಂಪ್ಲಿ, ಹೋಳಲಿನಶಾಸ್ತ್ರಿಗಳು ೪-೫ ತಿಂಗಳು ಪೂಜ್ಯರಾದ ಕುಮಾರ ಮಹಾಶಿವಯೋಗಿಗಳಿಗೆ ಬಲಗೈಯಾಗಿ ದುಡಿದರು. "ಈ ಸಮಯದಲ್ಲಿನ ಅತಿದೊಡ್ಡ ಮೊತ್ತದ ಆರ್ಥಿಕ ವೆಚ್ಚವನ್ನು ಬರಿಸಲು ಶ್ರೀಗಳು ಯಾದಗಿರಿ, ರಾಯಚೂರಿನವರೆಗೆ ಕಾಲ್ನಡಿಗೆಯಲ್ಲಿ ಅಲೆದು ಭಿಕ್ಷಾಟನೆಯಿಂದ ೭ ರಿಂದ ೮ ಸಾವಿರ ರೂಪಾಯಿ ಸಂಗ್ರಹಿಸಿದರು. ಇದಕ್ಕೆ ಕಾರಣೀಭೂತರಾದ ದೇವಿ ಹೊಸೂರಶೆಟ್ಟರ ತ್ಯಾಗ ಸ್ಮರಣೀಯವಾಗಿದೆ."[೮೦]

ವೀರಶೈವ ಪರ ಸಾಕ್ಷಿಗಳಲ್ಲಿ ಲಿಂಗವಂತ ಧರ್ಮವು ಶ್ರೇಷ್ಠವಾದುದು. ಇವರಿಗೆ ಗೋತ್ರ, ಸೂತ್ರಗಳುಂಟು. ಇವರು ತ್ರಿಕಾಲದಲ್ಲಿ ಶಿವಾರ್ಚನೆ ಮಾಡುತ್ತಾರೆ. ಇವರಿಗೆ ಸಂಸ್ಕಾರಗಳುಂಟು; ಜಗತ್ತಿನ ಯಾವುದೇ ಧರ್ಮದಲ್ಲಿ ಇಲ್ಲದ ವಿಧಿನೇಮಗಳಿರುತ್ತದೆ. ಉದಾಹರಣೆಗೆ ಈ ಧರ್ಮದಲ್ಲಿ

ಹುಟ್ಟಿದ ಕೂಡಲೇ ಸ್ತ್ರೀ–ಪುರುಷರೆಂಬುವ ಭೇದ–ಭಾವನೆಗಳಿಲ್ಲದೆ ಉಭಯರಿಗೂ ಲಿಂಗಧಾರಣೆ, ದೀಕ್ಷೆಯಾಗುತ್ತದೆ. ಇವರಿಗೆ ದೀಕ್ಷಾ, ವಿವಾಹ ಮೊದಲಾದ ಕಾರ್ಯಗಳನ್ನು ಮಾಡಲು ಸ್ವತಂತ್ರ ಗುರುಗಳಿರುತ್ತಾರೆ. ಅಭಕ್ಷ್ಯ ಭಕ್ಷಣ, ಅಪೇಯಪಾನಗಳಿಗೆ ಈ ಧರ್ಮದಲ್ಲಿ ನಿಷೇಧವಿದೆ. ಉಚ್ಚ ತರಗತಿಯ ಹಿಂದುಗಳಿಗೆ ಸೇರಿದ ಇದೊಂದು ಸಮಾಜವು ಸ್ವತಂತ್ರ ರೀತಿಯಿಂದ ಭರತಖಂಡದಲ್ಲಿ ಬೆಳೆದು ಬಂದಿರುತ್ತದೆ. ರೇಣುಕಾದಿ ಆಚಾರ್ಯರು ಬೇರೆ ಬೇರೆ ಕಾಲದಲ್ಲಿ ಈ ಮತದ ಏಳಿಗೆಗೆ ಕಾರಣರಾಗಿದ್ದಾರೆ. ಶ್ರೀ ಬಸವಾದಿ ಪ್ರಮಥರ ಕಾಲದಲ್ಲಿ ಈ ಸಮಾಜವು ಅತ್ಯುನ್ನತ ಶಿಖರಕ್ಕೆ ಹೋಗಿದ್ದಿತು. ಹೀಗಾಗಿ ವೀರಶೈವ ಧರ್ಮದ ಆಚರಣೆಗಳು ಪವಿತ್ರವಾಗಿರುತ್ತವೆಂದೇ ವೀರಶೈವರ ವಾದವಾಗಿದ್ದಿತು. ಸತತವಾಗಿ ೫–೬ ತಿಂಗಳ ಪ್ರಯತ್ನದಿಂದ ವೀರಶೈವರ ಪರವಾಗಿ ನ್ಯಾಯಾಲಯದಲ್ಲಿ ರಾಯ ವಿಶ್ವೇಶ್ವರನಾಥರು ಏಳು ದಿನಗಳವರೆಗೆ ಆರ್ಗ್ಯುಮೆಂಟ್ ಮಾಡುತ್ತಾರೆ. ೧೧೦ ವೀರಶೈವ ಧರ್ಮಗ್ರಂಥಗಳನ್ನು ಕೋರ್ಟಿಗೆ ಹಾಜರಪಡಿಸುತ್ತಾರೆ. ವಕೀಲರ ವಾದಸರಣಿ "ವೀರಶೈವರು ಇಷ್ಟಲಿಂಗವನ್ನು ಗುರುವಿನಿಂದ ಪಡೆದು ತ್ರಿಕಾಲದಲ್ಲಿ ಅರ್ಚನೆ ಮಾಡುತ್ತ ಷಡಕ್ಷರ ಮಂತ್ರವನ್ನು ಜಪಿಸತ್ತಕ್ಕವರು. ಪ್ರಾಚೀನ ಪರಂಪರೆಯಿಂದ ಈ ಮತದಲ್ಲಿ ಅನೇಕ ಶ್ರೇಷ್ಠ ವಿಭೂತಿಗಳು ಜನಿಸಿ ಕಾಲಕ್ಕೆ ತಕ್ಕಂತೆ ಈ ಮತದ ಕಾರ್ಯಕ್ರಮಗಳನ್ನು ಮಾಡುತ್ತ ಬಂದಿರುತ್ತಾರೆ. ಲಿಂಗಲೋಪವಾದರೆ ಪ್ರಾಣವನ್ನೇ ಕೊಡತಕ್ಕ ಕಠೋರ ಪ್ರತಿಜ್ಞೆಯುಳ್ಳ ಈ ಸಮಾಜವು ಹಿಂದೂ ಧರ್ಮದಲ್ಲಿ ಯಾವುದೇ ಒಂದು ಸಮಾಜಕ್ಕಿಂತ ಕಡಿಮೆಯದೇನೂ ಅಲ್ಲ"[೮೧] ಎಂದು ಭಾವಿಸುತ್ತಾರೆ. ಬ್ರಾಹ್ಮಣರು ಕೇಳಿದ ೩೬ ಪ್ರಶ್ನೆಗಳಿಗೆ ೧೧೦ ವೀರಶೈವ ಗ್ರಂಥ ಪ್ರಮಾಣಗಳ ನಿದರ್ಶನದಿಂದ ಖಂಡನಾರೂಪವಾದ ಉತ್ತರಗಳನ್ನು ಬರೆಯಿಸಿ ಧರ್ಮಕೋರ್ಟಿಗೆ ಕಳಿಸಿ ಮಾರ್ಮಿಕವಾದ ಸೇವೆ ಸಲ್ಲಿಸುತ್ತಾರೆ. ಹೀಗೆ "ಸುಮಾರು ನಾಲ್ಕು ವರ್ಷಗಳ ಕಾಲ ಪರಸ್ಪರ ವಾದ–ವಿವಾದವನ್ನು ಆಲಿಸಿದ ಹೈದ್ರಾಬಾದ್ ಹೈಕೋರ್ಟ್ ಮೂರು ಜನ ನ್ಯಾಯಾಧೀಶರ ಸಹಿಯಿರುವ ೪೦೦ ಪುಟಗಳ ಜಡ್ಜಮೆಂಟ್‌ನ್ನು ವೀರಶೈರ ಪರವಾಗಿ ನೀಡಿದರು. ವೀರಶೈವರು ಶೂದ್ರರಲ್ಲ, ಅವರದು ಸ್ವತಂತ್ರ ಸಮಾಜ. ಈ ಸಮಾಜದವರಿಗೆ ರುದ್ರಾಭಿಷೇಕ ಮಾಡುವ ಹಕ್ಕಿದೆ ಹಾಗಾಗಿ ಪರಳಿಯ ವೈಜನಾಥ ಲಿಂಗಕ್ಕೆ ರುದ್ರಾಭಿಷೇಕ ಮಾಡುವುದಕ್ಕೆ ಯಾರು ಅಡ್ಡಿಮಾಡಕೂಡದೆಂದು; ಆ ಕಾರಣ ವಾದಿಗಳ ಈ ದಾವೆಯನ್ನು ಕಿತ್ತು ಹಾಕುತ್ತೇವೆಂದು ನಿಜಾಮರ ಸಹಿ ಹಾಕಿ ಗೆಜೆಟ್ ಹೊರಡಿಸುತ್ತಾರೆ."[೮೨]

ನಿಜಾಮರ ಸಹಿ ಇರುವ ಗಜೆಟ್ ದಾಖಲೆ ಪತ್ರವನ್ನು ಯಥಾವತ್ತಾಗಿ ಇಲ್ಲಿ ನಮೂದಿಸಲಾಗಿದೆ.

ತಾ॥ ೯ನೇ ಮೆಹರ ೧೩೩೮ರಲ್ಲಿ ಸರ್ಕಾರದ ಧಾರ್ಮಿಕ ವಿಚಾರ ಖಾತೆಯಿಂದ ಸಾದರಾದ ತಿಳುವಳಿಕೆ.

ಸೂ.ನಂ.೫೭೬೮ ಫೈಲ್ ೨೦೦

ಫಸಲಿ ಕಛೇರಿ ೧೩೩೩ ೧೯೨೩

ಸರ್ಕಾರದ ಶೀಲು

ಸರ್ ಮಹಾರಾಜಾ ಸಾದರ್ ಅಜಮ್ ಬಹದ್ದೂರ್ (ಸರ್ಕಾರದ ಕಾರ್ಯಾಂಗದ ಅಧ್ಯಕ್ಷರು) ಹುಕ್ಕುಂ ಮೇರೆ

ಸರ್ಕಾರದ ಧಾರ್ಮಿಕ ವಿಚಾರಗಳ ಇಲಾಖಾ ಕಾರ್ಯದರ್ಶಿಗಳಾದ ನವಾಬ್ ಅಃಖ್ತರ್‌ಯಾರ್‌ಜಂಗ್ ಬಹದ್ದೂರ ಮಿನ್ನೈರವರಿಂದಾ.

ವಿಷಯ: ಪರಳಿ ಬ್ರಾಹ್ಮಣರು ಇತರರಿಗೆ ದೇವಾಲದಲ್ಲಿ ಅಭಿಷೇಕ ನಡೆಸುವ ಹಕ್ಕಿನ ಬಗ್ಗೆ ಕೋರಿಕೊಂಡ ವಿಷಯದಲ್ಲಿ

೧೩೩೮ನೇ ಫಸಲಿಯಾರ್ ಮಾಹೆ ತಾರೀಖು ಹತ್ತರಲ್ಲೂ ಇದೇ ಕಛೇರಿಯಿಂದ ೪೭೭೪ನೇ ನಂಬರಿನಲ್ಲಿ ಸಾದರಾದ ಆಜ್ಞೆಯನ್ನು ಅನುಸರಿಸಿ ತಿಳಿಸುವುದೇನೆಂದರೆ ಧಾರ್ಮಿಕ ವಿಚಾರಗಳ ಕಮೀಷನರ್‌ರವರಿಂದ ವರದಿಯನ್ನು ತರಿಸಿಕೊಂಡು ಬಾಲಿ–ಇ–ಹುಕುಮತ್ (ಆಡಳಿತ ಇಲಾಖೆ) ಅಭಿಪ್ರಾಯವನ್ನು ಪಡೆದು ರಾಯಲ್ ನ್ಯಾಯಾಲಕ್ಕೆ ಒಪ್ಪಿಸಲಾಯ್ತು. ತಾ॥ ೭ನೇ ರಬಿಆಲ್ ಅಮ್ಮಲ್ ೧೩೪೮ ಹೆಚ್ ರಂದು (ತಾ॥ ೧೫.೦೭.೨೯ರಂದು) ಫರ್ಮನ್‌ರವರ ಹುಕ್ಕುಂ ಮೇಲೆ ತಿಳಿಸುವುದೇನೆಂದರೆ ಧಾರ್ಮಿಕ ವಿಚಾರಗಳ ಕಮೀಷನರ್‌ರವರು ಮತ್ತು ಕೌನ್ಸಿಲ್‌ನ ಅಭಿಪ್ರಾಯಗಳು ಒಪ್ಪತಕ್ಕದ್ದಾಗಿರುತ್ತೆ. ಅದರಂತೆ ಲಿಂಗಾಯತ ಮತಸ್ಥರು ಪರಳಿ ವೈದ್ಯನಾಥ ದೇವಾಯದಲ್ಲಿ ತಮ್ಮ ಸಂಪ್ರಾದಾಯಾನುಸಾರ ಅಭಿಷೇಕ ವಗೈರೆ ನಡೆಸಿಕೊಳ್ಳಲು ಹಕ್ಕುದಾರರಾಗಿರುತ್ತಾರೆ. ಬ್ರಾಹ್ಮಣರು ಈ ಆಚಾರಣೆಗಳಿಗೆ ಅಡತಡೆಗಳನ್ನುಂಟು ಮಾಡಲು ಯಾವ ಹಕ್ಕು ಇರುವುದಿಲ್ಲ. ಅದರಂತೆ ಆಜ್ಞೆಯು ಜಾರಿಗೆ ಬರಲು ಏರ್ಪಾಡು ಮಾಡಿ ಅದರ ಫಲಿತಾಂಶವನ್ನು ತಿಳಿಸತಕ್ಕದ್ದು.

ನಕಲುಗಳು:

೧. ಔರಂಗಾಬಾದ್ ತಾಲೂಕಿನ ಸುಬೇದಾರರಿಗೆ

೩. ಸರ್ಕಾರಿ ಜಿಲ್ಲಾ ಕೊತ್ವಾಲರ ಮುಖ್ಯಾಧಿಕಾರಿಗಳಿಗೆ

ಸಹಿ

ನವಾಬ್ ಅಖ್ತರ್ ಯಾರ್ ಜಂಗ್ ಬಹಾದ್ದೂರ ಮಿನ್ನೆ

ಮುದ್ರಾ: ಹಿಮಾಲಯತ್ ತಿ.ದಖಿನ್ ರೆಸಿಡೆನ್ಸಿ

೯ನೇ ಮೆಹರ್ ೧೩೩೮ ಫಸಲಿ

೭ ರಬಿ ಅಲ್ ಅಮ್ಮಲ್ ೧೩೪೮ (ತಾ॥ ೧೫.೦೭.೧೯೨೯)

ಕ್ರಿ.ಶ.೧೯೨೩ರಲ್ಲಿ ಧಾರವಾಡ ಜಿಲ್ಲೆ, ರಾಣೆಬೆನ್ನೂರು ತಾ॥ ಚೌಡಯ್ಯದಾನಪುರ ಸಂಸ್ಥಾನ ನಿಜಸಿಂಹಾಸನ ಮಠದ ಶ್ರೀ.ಎಸ್.ಕೆ.ಒಡೆಯರ Lag, P.C.S ಅವರು ಕಾರವಾರ ಜಿಲ್ಲೆಗೆ ಹುಜೂರ್ ಡೆಪ್ಯೂಟಿಕಲೆಕ್ಟರಾಗಿ ಬಂದಾಗ ಜಿ: ಶಿವಮೊಗ್ಗ ತಾ: ಸೊರಬ ಗೌರೀಕೆರೆ ಪಂಚಗವಿ ಮಠದಲ್ಲಿ ಅವರ ಹಿರಿಯ ಮಗಳು ಲಿಂಗೈಕ್ಯರಾದರು. ಆ ಕಾರ್ಯಕ್ಕೆ ಕಾರವಾರ-ಶಿರಸಿ ಮಾರ್ಗವಾಗಿ ಗೌರೀಕೆರೆಗೆ ಹೊರಟಾಗ ಬನವಾಸಿ ಕೆರೆ ತುಂಬಿ, ಕಾರು ದಾಟಿಸಲಾಗದೆ ಹಾಳಾಯಿತು. ಆಗ ಬನವಾಸಿ ದೇವಾಲಯದ ಅರ್ಚಕರು, ವೀರಶೈವರು ಅವರನ್ನು ದಡ ಸೇರಿಸಿ ಕಾರು ರಿಪೇರಿಯಾಗುವವರೆಗೆ ತಾವು ದೇವರ ದರ್ಶನ ಮಾಡಿ ಬರಬಹುದು ಎಂದು ಮಧುಕೇಶ್ವರ ದೇವಾಲಯಕ್ಕೆ ಆಹ್ವಾನ ನೀಡಿ ಮಂಗಳಾರತಿ, ಪ್ರಸಾದವಿತ್ತು ಅಲ್ಲಿನ ಪರಿಚಯ ಮಾಡಿ ಗೌರವದಿಂದ ಬೀಳ್ಕೊಟ್ಟರು. ಇದು ಮೊದಲೇ ಹೊಗೆಯಾಡುತ್ತಿದ್ದ ವಿಷಯಕ್ಕೆ ಬೆಂಕಿ ಬಿದ್ದಂತಾಯಿತು. ಕಾರಣ ಡೆಪ್ಯೂಟಿ ಕಲೆಕ್ಟರ್‌ರು ವೀರಶೈವರು ಅವರನ್ನು ಅರ್ಧ ಮಂಟಪಕ್ಕೆ ಕರೆದೊಯ್ದುದ್ದು ಮಹಾಪರಾಧ ಆ ಫಲವಾಗಿ ದೇವಾಲಯ ಅಪವಿತ್ರವಾಗಿದೆ. ಹಾಗಾಗಿ ಅರ್ಚಕರು ಮತ್ತೆ ಸಂಪ್ರೋಕ್ಷಣೆ ಮಾಡಿ ದೇವಾಲಯ ಶುಚಿಗೊಳಿಸತಕ್ಕದ್ದು. ಅದಕ್ಕೆ ತಗಲುವ ೩೫೦ ರೂಗಳನ್ನು ಶ್ರೀ ಒಡೆಯರು ಇಡತಕ್ಕದೆಂದು ನೋಟಿಸು ನೀಡಿದರು. ಅದಕ್ಕೆ ತಾವು ಹಣ ಕೊಡುವ ಪ್ರಶ್ನೆಯೇ ಇಲ್ಲ ಎಂದು ನಿರಾಕರಿಸಿದರು. ಇದರಿಂದ ಕೆರಳಿದ ಕೆಲ ಬ್ರಾಹ್ಮಣರು ಜಿಲ್ಲಾಧಿಕಾರಿಗಳಿಗೆ ಅರ್ಜಿಕೊಟ್ಟು ಚಳುವಳಿ ಹೂಡಿದರು. ಬ್ರಾಹ್ಮಣ ವಕೀಲ ವರ್ಗ ದೇವಾಲಯದ ಧರ್ಮದರ್ಶಿಗಳ ವತಿಯಿಂದ ಶಿರಾ ಮುನ್ಸಿಪ್ ಕೋರ್ಟಿನಲ್ಲಿ ಒಡೆಯರ ಮೇಲೆ ದಾವೆ ಹಾಕಿದರು. ದುರ್ದೈವದಿಂದ ಅಲ್ಲಿನ ನ್ಯಾಯಮೂರ್ತಿ ಶ್ರೀ ಕೆಂಭಾವಿ ಬ್ರಾಹ್ಮಣರೇ ಆಗಿದ್ದು ತೀರ್ಪು ಕೂಡ ಬ್ರಾಹ್ಮಣರ ಪರವಾಯಿತು. ಸಾಲದಕ್ಕೆ ದೇವಾಲಯದ ಕಮಿಟಿ ಒಂದು ತಂತ್ರ ಹೂಡಿತು. ಅವರು ದೇವಾಸ್ಥಾನದ ಅರ್ಧ ಮಂಟಪದ ಹೊರಗೆ ದೊಡ್ಡ ಗಂಟೆಯ ಪಕ್ಕದಲ್ಲಿ ಒಂದು ಬೋರ್ಡ್‌ನ್ನು ಬರೆಸಿ ಅದರಲ್ಲಿ 'ದಶವಿಧ ಬ್ರಾಹ್ಮಣರ ಹೊರತಾಗಿ ಒಳಗೆ ಹೋಗಲು ಯಾರಿಗೂ ಅಧಿಕಾರವಿಲ್ಲ' ಎಂದು. ಇದನ್ನು ಕಂಡೂ ಕಂಡು ಒಡೆಯರು ದೇವಾಲಯ ಪ್ರವೇಶಿಸಿದರೆಂದು ಆಪಾದಿಸಿದರು. ಕೊನೆಗೆ ಶ್ರೀ ಗುಂಜಾಳ್ ನ್ಯಾಯಾಧೀಶರ

ಸಮಕ್ಷಮದಲ್ಲಿ ತನಿಖೆ ನಡೆದು ಇದು ವಾದಕ್ಕಾಗಿ ಸೃಷ್ಟಿಸಿದೆಂದು ಸತ್ಯಪಡಿಸಿದರು. ಆದರೂ ಈ ಸಂದರ್ಭದಿಂದ ಆ ಭಾಗದ ವೀರಶೈವರು ಅವರಿಗೆ ಅರ್ಧಮಂಟಪ ಮತ್ತು ದೇವರ ಸಮೀಪದಲ್ಲಿ ಉತ್ಸವಾದಿಗಳಲ್ಲಿ ಪಕ್ಕದಲ್ಲಿಯೇ ನಿಂತಿರಬೇಕಾಗಿದ್ದ ಒಡೆಯ ವಂಶೀಯ ಜಂಗಮರೂ ಸಹ ಅಂದಿನಿಂದ ದೇವರಿಂದ ೪೮ ಅಡಿ ದೂರದಲ್ಲಿ ನಿಲ್ಲಬೇಕಾಯಿತು. ವೀರಶೈವರು ಶೂದ್ರರು ಅಲ್ಲದೆ ಅಂಥವರ ಪ್ರವೇಶದಿಂದ ದೇವರು ಅಪವಿತ್ರವಾಯಿತು ಎಂದು ದಾವೆಯಲ್ಲಿ ಬರೆದರು. ಇದು ಇಡಿ ಸಮಾಜವನ್ನು ಕೆರಳಿಸಿತು. ಈ ಬಗ್ಗೆ ವರ್ತಮಾನ ಪತ್ರಿಕೆಗಳಲ್ಲಿ ವಿಶ್ಲೇಷಣಾವು ನಡೆಯಿತು. ಇದು ಸಹಜವಾಗಿ ಶ್ರೀಕುಮಾರರಿಗೆ ಬೇಸರ ತರಿಸಿತು. ಮೇಲು-ಕೀಳನ್ನು ತಡೆಯಲು ಅವರು ಪ್ರವೇಶ ಮಾಡಿದರು.

ಸತ್ಯತೆ ಮನಗಂಡ ನ್ಯಾಯಮೂರ್ತಿಗಳು ಬ್ರಾಹ್ಮಣ ವಕೀಲರಿಗೆ "ಈ ವಾಜ್ಯದಲ್ಲಿ ರಾಜಿ ಉತ್ತಮ. ಹಾಗೂ ಒಡೆಯರಿಂದ ಪಡೆದ ಹಣ ವಾಪಸ್ ಪಡೆಯಲು ಒಪ್ಪಿಸಿದರು. ವೀರಶೈವರು ಶೂದ್ರರಲ್ಲ ಅವರು ಶ್ರೇಷ್ಠ ವರ್ಗದ ಲಿಂಗೀಬ್ರಾಹ್ಮಣರು ಎಂದು ಹೈಕೋರ್ಟ್ ತೀರ್ಮಾನಿಸಿತು. ಅದರಲ್ಲಿ ನ್ಯಾಯಾಧೀಶರು ವೀರಶೈವ ಧರ್ಮವು ಶ್ಲಾಘನೀಯವಾಗಿಯೂ ಇವೆ ಎಂದು ಅಭಿಪ್ರಾಯಪಟ್ಟು ``The tenants of the lingyat community are entitled to very ligh respect" ಎಂದು ಬರೆದಿದ್ದಾರೆ."[೪೩]

ಬನವಾಸಿ ಮಧುಕೇಶ್ವರ ದೇವಾಲಯದ ಹೈಕೋರ್ಟ್ ಅಪೀಲಿನ ನಿರ್ಣಯದಲ್ಲಿ ವೀರಶೈವರಿಗೆ ವಿಜಯ ಎಂಬ ನಿರ್ಣಯ ಪತ್ರಿಕೆಯಲ್ಲಿ ಪ್ರಕಟವಾಗಿ ಪಡೆದ ಹಣ ಮರಳಿ ಕೊಡಲ್ಪಟ್ಟಿತು. "ಲಿಂಗಾಯತರ ಬಗ್ಗೆ ತಂದ ದಾವೆಯ ಅಪೀಲಿನ ಪುನರ್ವಿಚಾರಣೆಯಲ್ಲಿ ವೀರಶೈವರು ಲಿಂಗೀಬ್ರಾಹ್ಮಣರೆಂದೂ, ಶೂದ್ರರಲ್ಲವೆಂದೂ ವಾದಿಯು ಒಪ್ಪಿ ವಿವಾದಾಂಶಗಳನ್ನು ವಾಪಸ್ ಪಡೆದರು."[೪೪] ಎಂದು ಪ್ರಮುಖ ಸುದ್ಧಿ ಪತ್ರಿಕೆಯಲ್ಲಿ ಪ್ರಕಟವಾಯಿತು.

ಬನವಾಸಿಯ ಮಧುಕೇಶ್ವರ ದೇವಾಲಯದಲ್ಲಿ ವೀರಶೈವ ಪ್ರವೇಶ ವ್ಯವಹಾರದಲ್ಲಿ ಭಾಗವಹಿಸಿದ ವಕೀಲರ ವಿವರ ಪಟ್ಟಿ

೧೯೨೩ ರಿಂದ ೧೯೩೫

ವಾದಿಗಳು: ದೇವಾಲಯದ ಮೊಕ್ತೇಸರ್ ಮತ್ತು ಅರ್ಚಕರು

ಪ್ರತಿವಾದಿಗಳು: ಶ್ರೀ ಎಸ್.ಕೆ. ಒಡೆಯರ್ ಡೆಪ್ಯೂಟಿ ಕಲೆಕ್ಟರ್, ಕಾರವಾರ Lag, P.C.S

ಮುನ್ಸೀಪ್ ಕೋರ್ಟ್, ಶಿರಸಿ

ನ್ಯಾಯಾಧೀಶರು: ಶ್ರೀ ಕೆಂಚಾಪಿಯವರು ಸಬ್‌ಜಡ್ಜ, ಶಿರಸಿ ಶ್ರೀ ಗುಂಜಾಳ್‌ರವರು ಸಬ್‌ಜಡ್ಜ, ಶಿರಸಿ

ನ್ಯಾಯಾವಾದಿಗಳು: ಶ್ರೀಗಳಾದ ಸಿ.ಸಿ. ಹುಲಕೋಟಿ, ಧಾರವಾಡ ಶ್ರೀ ಸಿದ್ಧರಾಮಪ್ಪ ಪಾವಟೆ, ಹುಬ್ಬಳ್ಳಿ

ಸಹಾಯಕರು: ರಾ।ಸಾ। ಫ.ಗು. ಹಳಕಟ್ಟಿ, ಬಿಜಾಪುರ, ಶ್ರೀ ಮಳೀಮಠ ವಕೀಲರು ಧಾರವಾಡ ರಾ।ಸಾ। ಪಾಟೀಲ್ ವಕೀಲರು, ಧಾರವಾಡ ರಾ।ಸಾ। ಶೆಟ್ಟಿ ವಕೀಲರು, ಕಾರವಾರ, ಶ್ರೀ ಓಳ್ಳೇ ವಕೀಲರು, ತಿರುಚಿ, ಡಿಸ್ಟ್ರಿಕ್ಟ್ ಕೋರ್ಟ್, ಕಾರವಾರ, ಡಿಸ್ಟ್ರಿಕ್ಟ್ ಜಡ್ಜರು: ಶ್ರೀ ಕುಮ್ಠಕೇಕರ್, ನ್ಯಾಯವಾದಿಗಳು: ಶ್ರೀ ಕ್ಯೂಟನೋ ವಕೀಲರು, ಧಾರವಾಡ, ಸಹಾಯಕರು: ಶ್ರೀ ಚನ್ನವೀರಪ್ಪ ಒಡೆಯರ್, ಧಾರವಾಡ ಶ್ರೀ ಜೋಗ ವಕೀಲರು, ಧಾರವಾಡ ಹೈಕೋರ್ಟ್, ಮುಂಬಯಿ, ನ್ಯಾಯಮೂರ್ತಿಗಳು: ಶ್ರೀ ರಾಂಗಣೇಕರ್, ಶ್ರೀ ದಿವಾಜಯಾ, ನ್ಯಾಯವಾದಿ: ಬ್ಯಾರಿಸ್ಟರ್ ಡಾ.ಜಯಕರ್, ಬೊಂಬಾಯಿ"[೪೫]

ಮಹಿಳಾ ಪರಿಷತ್ತು: ವೈರಾಗ್ಯ ಮೂರ್ತಿಗಳಾದ ಕುಮಾರ ಮಹಾಸ್ವಾಮಿಗಳು ಮಹಿಳೆಯರ ಸಂಪರ್ಕದಿಂದ ದೂರವಿದ್ದರೂ ಸ್ತ್ರೀ ಕುಲದ ಬಗೆಗೆ ಅನುಕಂಪವಿತ್ತು. ಅವರ ಶ್ರೇಯೋಭಿವೃದ್ಧಿಗಾಗಿ ಶಿಕ್ಷಣ–ಸಂಸ್ಕೃತಿಗಾಗಿ ೧೯೦೯ರ ಡಿಸೆಂಬರ್‌ನಲ್ಲಿ ಅಖಿಲಭಾರತ ವೀರಶೈವ ಮಹಾಸಭೆಯಲ್ಲಿ 'ಮಹಿಳಾ ಪರಿಷತ್ತು' ಆರಂಭಿಸಿದರು. ಆ ಮೂಲಕ ಮತ್ತೆ ಸ್ತ್ರೀ–ಪುರುಷರು ಸಮಾನರೆಂಬ ಬಸವತತ್ತ್ವವನ್ನು ಪುನರ್ ಸ್ಥಾಪಿಸಿದರು. ಮಹಿಳಾ ಪರಿಷತ್ತು ನಿರಂತರವಾಗಿ ಬಳ್ಳಾರಿ, ಬೆಳಗಾವಿ, ನಿಪ್ಪಾಣಿಯಂತ ಸ್ಥಳದಲ್ಲಿ ಅನೇಕ ಮಹಿಳಾ ಅಧ್ಯಕ್ಷರುಗಳ ನೇತೃತ್ವದಲ್ಲಿ ಮುಂದುವರಿದು ಬರುತ್ತಿದೆ. ಈ ಮೂಲಕ ಮಹಿಳೆ ಸುಶಿಕ್ಷಿತಳಾದಳು. ಸಾಮಾಜಿಕ ಮನ್ನಣೆ ಪಡೆದು ಇಂದು ಜಾಗತಿಕ ಕ್ಷೇತ್ರದ ಎಲ್ಲಾ ರಂಗದಲ್ಲಿ ಸದೃಡವಾಗಿ ಮುನ್ನಡೆಯಲು ಅದು ಪ್ರೇರಣೆಯಾಗಿಸಿತು.

೨. ವಿದ್ಯಾ ಪ್ರಸಾರ:

ಹಾನಗಲ್ಲ ಮಠದ ಅಧಿಕಾರ ದೊರೆತ ಕೆಲವೇ ದಿನದಲ್ಲಿ ಒಂದು ಸಂಸ್ಕೃತ ಪಾಠಶಾಲೆಯನ್ನು ಏರ್ಪಡಿಸಿದರು. ೨೦–೨೫ ಜನ ವಿದ್ಯಾರ್ಥಿಗಳಿಗೆ ಆಸನ–ವಸನಾದಿಗಳನ್ನು ಕಲ್ಪಿಸಿ ವಿದ್ಯಾಪ್ರಸಾರಕ್ಕೆ ಶ್ರೀಕಾರ ಹಾಕಿದರು.

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧ ಇಪ್ಪತ್ತನೇ ಶತಮಾನದ ಪೂರ್ವಾರ್ಧಗಳಂತೂ 'ಚಳುವಳಿ ಯುಗ' ಎಂದು ವಿದ್ವಾಂಸರು ಗುರುತಿಸಿರುವುದು ಸ್ಪಷ್ಟವಾದುದಾಗಿದೆ. ಮಾರ್ಕ್ಸ್, ಲೆನಿನ್, ಗಾಂಧೀಜಿ ಇವರಿಂದ ಆರಂಭವಾದ ಸ್ವಾತಂತ್ರ್ಯ ಚಳುವಳಿಗೆ ಅರ್ಥ ಬಂದಂತೆ ಹಾನಗಲ್ಲ ಶ್ರೀ ಕುಮಾರ ಶಿವಯೋಗಿಗಳು ಆರಂಭಿಸಿದ ಸಂಸ್ಕೃತ ಪಾಠಶಾಲಾ ಚಳುವಳಿಯು ಧಾರ್ಮಿಕ, ಸಾಮಾಜಿಕ, ನೈತಿಕ, ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ಒಂದು ಸಾಂಘಿಕ ರೂಪವನ್ನೇ ಕಟ್ಟಿಗೊಂಡಿತು.

ಕನ್ನಡ ನಾಡಿನಲ್ಲಿ ವೀರಶೈವ ಧರ್ಮ ದಿಕ್ಕು-ದೆಸೆಗಳಿಲ್ಲದೆ ಕಂಗಾಲಾಗಿದ್ದಾಗ ಶ್ರೀ ಕುಮಾರರು ತಮ್ಮ ಕರ್ತೃತ್ವ ಶಕ್ತಿಯಿಂದ ಧರ್ಮ, ಸಮಾಜವನ್ನು ಮೇಲೆತ್ತಿದರು. ವೀರಶೈವ ಧರ್ಮದ ಸಂಸ್ಕೃತಿಗೆ ಸಂಸ್ಕಾರ ಕೊಡುವ ಕೇಂದ್ರವಾಗಲಿ, ಧರ್ಮಗುರುವಾಗಲಿ ಅಂದು ಇರಲಿಲ್ಲ. ಧರ್ಮಗುರುಗಳೆಂದು ಕರೆಸಿಕೊಳ್ಳುತಲಿದ್ದವರು. ವೀರಶೈವರನ್ನು ಶೂದ್ರರೆಂದು ಕರೆಯುತ್ತಿದ್ದರು. ತಾವು ಶುದ್ಧ, ಇನ್ನುಳಿದವರು ಅಶುದ್ಧರು ಎಂಬ ತಾರತಮ್ಯ ಭಾವದ ಬೀಜ ಬಿತ್ತುತಲಿದ್ದರು. "ದೇವರ ಭಾಷೆ" ಸಂಸ್ಕೃತವನ್ನು ತಾವೊಬ್ಬರೇ ಕಲಿಯಬೇಕು ಉಳಿದವರಿಗೆ ಕಲಿಕೆ ಮಡಿವಂತಿಕೆ ಎನ್ನುವ ಭಾವನೆ ರೂಢಿಸಿದ್ದರು. ವೀರಶೈವರು ಹೊಟ್ಟೆ ಹೊರೆಯಲು ನಾನಾ ರೀತಿಯ ಭಿಕ್ಷೆ ಮಾಡುತ್ತಿದ್ದರು. ಇದನ್ನು ಕಣ್ಣಾರೆ ಕಂಡಂತಹ ಕುಮಾರಸ್ವಾಮಿಗಳು ಸಮಾಜ ಸುಧಾರಿಸಲು ಮೊದಲ ಬೇಕಾದ ಸಾಧನವೆಂದರೆ ಪಾಠಶಾಲೆ ಎಂದು ಯೋಚಿಸಿದರು. ಮೊದಲು ಸಂಸ್ಕಾರ ಕೊಡಲು ಅಗತ್ಯ ಮಾಹಿತಿ ಹೊಂದಿದ ಸಂಸ್ಕೃತ ಪಾಠಶಾಲೆಗಳನ್ನು ಸಾಧ್ಯವಾದಷ್ಟು ತಾವು ಸಂಚರಿಸಿದೆಡೆಗಳಲೆಲ್ಲ ಆರಂಭಿಸಿದರು. ಇದಕ್ಕೆ ಕೊರತೆಯಾಗಿದ್ದ ಪಂಡಿತರನ್ನು ದೂರದ ಕಾಶಿಯಲ್ಲಿ ವ್ಯವಸ್ಥೆಗೊಳಿಸಿದರು. ಎಲ್ಲೆಲ್ಲೂ ಸಂಸ್ಕೃತ ಪಾಠಶಾಲೆ ಆರಂಭಿಸಬೇಕೆನ್ನುವ ವಿಚಾರವೇ ದಟ್ಟವಾಗಿ, ಗಾಢವಾದ ಆಲೋಚನೆಗಳಿಂದ, ಸಮಾಜದ ಬಗೆಗಿನ ದೂರದೃಷ್ಟಿಯಿಂದಾಗಿ ಸಂಸ್ಕೃತ ಪಾಠಶಾಲೆಗಳ ಸ್ಥಾಪನೆ ಆಯಿತು. ಬಹುಶಃ ಸಂಸ್ಕೃತ ಪಾಠಶಾಲೆ ಒಂದು ವೇಳೆ ಆರಂಭವಾಗದಿದ್ದರೆ ಇಂದಿನ ಸಮಾಜದಲ್ಲಿ ಅನಾಚಾರ, ಅಜ್ಞಾನ, ಅನಾದರ, ಅಂಧಶ್ರದ್ಧೆಗಳು, ದ್ವೇಷ, ಅಸೂಯೆ, ಕಲಹ, ಕದನ, ಸುಲಿಗೆ, ಕ್ರೂರತನ ತಲೆ ಎತ್ತಿ ಇಡೀ ಸಮಾಜವೇ ಕತ್ತಲೆಯಲ್ಲಿ ಸಾಗುತ್ತಿತ್ತು.

ಸಮಾಜದಪರ ತತ್ವಗಳ ಸಾರವನ್ನು ಕಲಿತು ಆ ಮೂಲಕ ನಾಡಿನಲ್ಲಿ ಒಂದು ಮೌನಕ್ರಾಂತಿಯ ಚಳುವಳಿಯನ್ನೇ ಈ ಸಂಸ್ಕೃತ ಪಾಠಶಾಲೆಗಳು ಆರಂಭಿಸಿದ್ದವು. ಕನ್ನಡ ಭಾಷೆಯೊಂದಿಗೆ ಸಂಸ್ಕೃತ ಭಾಷೆಯನ್ನು ವ್ಯವಸ್ಥಿತವಾಗಿ ಕಲಿಸಲು ಪಾಠಶಾಲೆಗಳ ಅವಶ್ಯಕತೆ ಇದೆ ಎಂದು ತಿಳಿದದ್ದೆ ತಡ ಕುಮಾರಸ್ವಾಮಿಗಳು ಪಂಡಿತರ ಗುಂಪೊಂದನ್ನು ಕಲೆ ಹಾಕಿ ಪಾಠಶಾಲೆಯ ರೂಪ-ರೇಷ ಬಗ್ಗೆ ಮಾರ್ಗದರ್ಶನ ಮಾಡಿದರು. ಇದರ ಫಲವಾಗಿ ೧೯೦೨ರ ಹೊತ್ತಿಗೆ ಹಾನಗಲ್ಲ, ಹಾವೇರಿ, ಶೇಲವಡಿ, ರಾಣೆಬೆನ್ನೂರು, ಸಂಶಿ, ಅಬ್ಬಿಗೇರಿ, ಹುನಗುಂದ ಮುಂತಾದೆಡೆ ಸಂಸ್ಕೃತ ಪಾಠಶಾಲೆ ಆರಂಭಿಸಿದರು. ನಂತರ ಹುಬ್ಬಳ್ಳಿ, ರೋಣ, ಮುಂಡಗರಿ, ಹಾಲಕೆರೆ, ಅಕ್ಕಿಆಲೂರು, ನೆರೆಗಲ್ಲ, ಇಳಕಲ್ಲ, ನೀರಡಗುಂಭ, ಅನಂತಪುರ, ಕೆಳದಿ, ಬಾದಾಮಿ, ಬಾಗಲಕೋಟೆಯಲ್ಲಿ ಸಂಸ್ಕೃತ ಪಾಠಶಾಲೆ ಸ್ಥಾಪಿಸಿದರು. ಇದಕ್ಕಾಗಿ ಜೋಳಿಗೆ ಹಿಡಿದು ನಿಧಿ ಸಂಗ್ರಹಿಸಿ ಯಶಸ್ಸು ಸಾಧಿಸಿದರು. ಅವರು ಸ್ಥಾಪಿಸಿದ ಪಾಠಶಾಲೆ ಮುಂದೆ ಹಲವು ಶಿಕ್ಷಣ ಸಂಸ್ಥೆಗಳ ಆರಂಭಕ್ಕೆ ಪ್ರೇರಣೆಯೂ ಆಯಿತು. ಶ್ರೀ ಕುಮಾರಸ್ವಾಮಿಗಳ ಅಲೌಕಿಕ ಶಿಕ್ಷಣಕ್ರಮ

ಪ್ರಗತಿಪರ ಮತ್ತು ಸಮಾಜಪರ ಚಿಂತನೆಯ ಶಿಕ್ಷಣ ಪದ್ಧತಿ ಪ್ರಾಯಶಃ ಶೈಕ್ಷಣಿಕ ಇತಿಹಾಸದಲ್ಲಿ ಮಹತ್ವದ ಮೈಲಿಗಲ್ಲಾಗಿದೆ. ಈ ಮೈಲಿಗಲ್ಲನ್ನು ಡಾ. ಎಂ.ಚಿದಾನಂದಮೂರ್ತಿಯವರು ಸಮಗ್ರವಾಗಿ ಸಂಗ್ರಹಿಸಿದ್ದಾರೆ.

ಶಿಕ್ಷಣ ಪ್ರಸಾರದಲ್ಲಿ ಸಂಸ್ಕೃತ ಪಾಠಶಾಲೆಯೊಂದನ್ನೇ ಆರಂಭಿಸಿ, ಅವಲಂಬಿಸದೆ ಲೌಕಿಕವಾದ ಔಪಚಾರಿಕ ಶಿಕ್ಷಣಕ್ಕೂ ಆದ್ಯತೆ ನೀಡಿದರು. ಇದಕ್ಕಾಗಿ ಪಾಠಶಾಲೆ, ವಾಚನ ಮಂದಿರಗಳು ಆರಂಭಗೊಂಡವು. ಪರಮಪೂಜ್ಯರ ಕೃಪಾಶ್ರಯದಲ್ಲಿ ಅನೇಕ ವಿದ್ಯಾಮಂದಿರಗಳು ಸ್ಥಾಪನೆಗೊಂಡವು. ಅದು ಕೂಡ ಒಂದು ಇತಿಹಾಸವೇ ಸರಿ. ಅಂತೆಯೇ ಹಲವಾರು ವರ್ಷಗಳಿಂದ ವೀರಶೈವರೇ ಕರ್ನಾಟಕದಲ್ಲಿ ವಿದ್ಯಾಪ್ರದಾನ ಕಾರ್ಯವನ್ನು ಮಾಡುತ್ತ ಬಂದಿದ್ದರೆ ಅವರ ಮಠಗಳೂ, ವಿಶ್ವವಿದ್ಯಾಲಯಗಳಾಗಿ ವಿದ್ಯಾರ್ಥಿಗಳ ವಸತಿ ಗೃಹಗಳು ಆಗಿದ್ದವೆಂಬುದು ಅನೇಕ ಮಠಗಳ ಇತಿಹಾಸದಿಂದ ಗೊತ್ತಾಗುತ್ತದೆ. ಆಂಗ್ಲರು ಭರತಖಂಡವನ್ನು ಆಳಿದಂತೆ ಅವರ ಭಾಷೆಯ ಮಹತ್ವ ವೀರಶೈವರಿಗೆ ಅಗತ್ಯವಾಗಿತ್ತು. ಇಂತಹ ಸಂದರ್ಭದಲ್ಲಿ ಆಂಗ್ಲಭಾಷೆಯ ಜ್ಞಾನವನ್ನು ವೀರಶೈವ ಜನತೆಯೊಳಗೆ ಬಿತ್ತಲಾರಂಭಿಸಿದವರಲ್ಲಿ ಕೈವಾರ ಚೆನ್ನಬಸವಣ್ಣ, ಧಾರವಾಡ ಡೆಪ್ಯೂಟಿ ಎಜ್ಯುಕೇಶನ್ ಇನ್ಸಪೇಕ್ಟರ್, ಕೈ.ವಾ ಗುರುಸಿದ್ಧಪ್ಪ ಅಣ್ಣಾ, ಗಿಲಗಂಜಿ ಡೆಪ್ಯುಟಿ ಕಲೆಕ್ಟರ್ ಹಾಗೂ ರಾವಬಹಾದ್ದೂರ ರುದ್ರಗೌಡ, ಚೆನ್ನವೀರಗೌಡ, ಅರಟಾಳ ರುದ್ರೇಗೌಡ ಮೊದಲಿಗರೆಂದು ಹೇಳಬಹುದು. ಇವರೆಲ್ಲರು ಆಂಗ್ಲ ಭಾಷೆಯಲ್ಲಿ ವಿಶ್ವವಿದ್ಯಾಲಯದ ಪದವೀಧರರಾಗಿರಲಿಲ್ಲ. ಉಚ್ಚ ಶಿಕ್ಷಣದವರೆಗೆ ಅಭ್ಯಾಸ ಮಾಡಿದವರಾಗಿರಲಿಲ್ಲ. ದೊಡ್ಡ ದೊಡ್ಡ ಸರಕಾರಿ ಉದ್ಯೋಗದಲ್ಲಿದ್ದರು. ಆಂಗ್ಲ ಭಾಷೆಯ ಮಹತ್ವವನ್ನು ಚೆನ್ನಾಗಿ ಅರಿತವರಾಗಿದ್ದರು. ಆ ಭಾಷೆಯ ಅಭ್ಯಾಸಕ್ಕೆ ವೆಚ್ಚವು ಬಹಳವಾಗುತ್ತದ್ದರಿಂದ ಅದಕ್ಕೆ ತಕ್ಕ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕೆಂಬ ಹಂಬಲವುಳ್ಳವರಾಗಿದ್ದರು. “ಶಿಕ್ಷಣ ಖಾತೆಯಲ್ಲಿಯೇ ಕೆಲಸ ಮಾಡುತಲಿದ್ದ ಡೆಪ್ಯುಟಿ ಚೆನ್ನಬಸಪ್ಪನವರು ಚಿತ್ರಕಲ್ಲುದುರ್ಗದ ಸಂಸ್ಥಾನಮಠದ ಶ್ರೀ ಜಗದ್ಗುರು ಶ್ರೀ ಮನ್ನಿರಂಜನ ಮಹಾಲಿಂಗಸ್ವಾಮಿಗಳ ಉದಾರಾಶ್ರಯದಿಂದ ವೀರಶೈವ ವಿದ್ಯಾರ್ಥಿಗಳಿಗಾಗಿ ಉಚಿತವಾಗಿ ಆಹಾರವನ್ನೊದಗಿಸಿ ಕೊಡುವ ಭೋಜನಾಲಯವನ್ನು ಬೆಳಗಾವಿಯಲ್ಲಿ ಸ್ಥಾಪಿಸಿದರು. ಇದು ವೀರಶೈವ ವಿದ್ಯಾಭಿವೃದ್ಧಿಗಾಗಿ ಮಾಡಿದ ಮೊದಲ ಸೌಕರ್ಯವಾಗಿತ್ತು.”[೮೬] ಬರಬರುತ್ತಾ ಬೆಳಗಾವಿ, ಧಾರವಾಡ ಮೊದಲಾದ ಊರುಗಳಲ್ಲಿಯ ಹೈಸ್ಕೂಲುಗಳಲ್ಲಿಯೂ ಪುಣೆಯ ಕಾಲೇಜುಗಳಲ್ಲಿಯೂ ವೀರಶೈವ ವಿದ್ಯಾರ್ಥಿಗಳ ಸಂಖ್ಯೆಯು ಬೆಳೆಯಲಾರಂಭಿಸಿರು. ಇದರಿಂದ “ಉಚಿತ ಭೋಜನಾ ಶಾಲೆಗಳ ಕೊರತೆಯಾದಾಗ ಶಿಷ್ಯವೃತ್ತಿ (Scholar Ship) ಕೊಡುವ ಯೋಜನೆಗಾಗಿ ರಾ.ಬ. ಗುರುಸಿದ್ಧಪ್ಪ ಗಿಲಗಂಚಿ ಹಾಗೂ ರಾ.ಬ. ರುದ್ರಗೌಡರು ಅರಟಾಳ ಇವರು ಧಾರವಾಡದಲ್ಲಿ ದಿನಾಂಕ: ೩೦ ಸೆಪ್ಟಂಬರ್ ೧೮೮೩ನೇ ದಿವಸ ವೀರಶೈವ ಪ್ರಮುಖ ಜನರ ಸಭೆ ಕೂಡಿಸಿ

'ಲಿಂಗಾಯತ ವಿದ್ಯಾಭಿವೃದ್ಧಿ ಸಭೆ' ಎಂಬ ಹೆಸರಿನ ಸಂಸ್ಥೆಯು ಸ್ಥಾಪಿತವಾಯಿತು."[೪೭] ಆಂಗ್ಲ ವಿದ್ಯಾಭ್ಯಾಸ ಹಾಗೂ ಸಂಸ್ಕೃತಾಭ್ಯಾಸಕ್ಕೆ ಉತ್ತೇಜನ ನೀಡಿದರು. ಒಂದು ವರ್ಷದೊಳಗಾಗಿ ಈ ಸಂಸ್ಥೆಯು ೩೦,೦೦೦ ಸಾವಿರ ರೂಗಳ ಧನರಾಶಿ ಕೂಡಿಸಿ ೧೮೮೪ನೇ ಫೆಬ್ರವರಿ ೨೪ರಂದು ಮುಂಬಯಿ ಸರಕಾರದ G.R.E.D ೩೬೯ನೇ ಠರಾವಿನ ಪ್ರಕಾರ ಮುಂಬೈ ಸರಕಾರದ ಚಾರಿಟೇಬಲ್ ಟ್ರಸ್ಟ್‌ದಲ್ಲಿಟ್ಟು ಧಾರವಾಡದ ಕಲೆಕ್ಟರ್‌ರ ಅಧ್ಯಕ್ಷತೆಯಲ್ಲಿ ೧೮೮೫ ರಿಂದ ೩೬ ವಿದ್ಯಾರ್ಥಿಗಳಿಗೆ ಈ ಶಿಷ್ಯವೃತ್ತಿಗಳನ್ನು ನೀಡಿದ್ದರು. ಇದರೊಂದಿಗೆ ೧೮೮೭ ಜೂನ್ ೧೪ನೇ ತಾರೀಖು ವಿಕ್ಟೋರಿಯಾ ಮಹಾರಾಣಿಯವರ ೫೦ನೇ ವರ್ಷದ ಅಂಗವಾಗಿ ಅಥಣಿ ವೀರಶೈವ ವ್ಯಾಪಾರಸ್ಥರು ಒಂದು ಸಾವಿರ ರೂಪಾಯಿ ಕೂಡಿಸಿ 'ಮಹಾರಾಣಿ ಮಹೋತ್ಸವ ಫಂಡು' ಎಂದು ಹೆಸರಿಟ್ಟು ಅದರಲ್ಲಿ ೪೦೦ ರೂಪಾಯಿಗಳಲ್ಲಿ ಎಂ.ಎ. ಪರೀಕ್ಷೆಯಲ್ಲಿ ಮೊದಲು ಬಂದವರಿಗೆ ಬಂಗಾರದ ಪದಕವನ್ನು ೩೦೦ ರೂಪಾಯಿಗಳ ೨ ಪದಕವನ್ನು, ಎಲ್.ಎಲ್.ಬಿ ಪರೀಕ್ಷೆಯಲ್ಲಿ ಪಾಸಾದವರಿಗೂ ಕೊಡಲು ನಿರ್ಧಾರ ಮಾಡಿದರು. "ಕ್ರಿ.ಶ. ೧೯೦೧ರ ವರೆಗೆ ಅದಕ್ಕೆ ಬಡ್ಡಿ ಸೇರಿಸಿ ನಂತರ ಅದನ್ನು ಶ್ರೀಯುತ ಸಿದ್ಧರಾಮಪ್ಪ ದುಂಡಪ್ಪ ಪಾವಟೆಗೆ ಅವರಿಗೆ ನೀಡಿದರು. (ಎಂ.ಎ. ಪರೀಕ್ಷೆಯಲ್ಲಿ ಮೊದಲು ಪಾಸದವರು) ನಂತರದ ವರ್ಷಗಳಲ್ಲಿ ಶ್ರೀಯುತ ವೀರಭದ್ರಣ್ಣಾ ಹಾಲಬಾವಿ ಇವರೂ ಇದೇ ಪರೀಕ್ಷೆಯನ್ನು ಪಾಸ್ ಮಾಡಿದ್ದಕ್ಕಾಗಿ ಸುವರ್ಣ ಪದಕವನ್ನು ಬಹುಮಾನವಾಗಿ ಪಡೆದವರು. ಕ್ರಿ.ಶ. ೧೯೧೬ರಲ್ಲಿ ಶ್ರೀ ಎಂ.ಆರ್. ಸಾಖರೆ ಮತ್ತು ಶ್ರೀ.ಶಿ.ಶಿ.ಬಸವನಾಳ ಇಬ್ಬರೂ ಒಂದೇ ವೇಳೆಗೆ ಉತ್ತೀರ್ಣರಾಗಿದ್ದರು. ಹಾಗಾಗಿ ಅವರ ಅನುಮತಿ ಪ್ರಕಾರ ಅವರೇ ಆರಿಸಿದ ಪುಸ್ತಕಗಳನ್ನು ಬಹುಮಾನವಾಗಿ ಬೆಳಗಾವಿ ಕಲೆಕ್ಟರ್‌ರು ನೀಡಿದರು."[೪೮] ನಂತರ "ಕ್ರಿ.ಶ. ೧೮೮೭ರಲ್ಲಿ ಸಂಸ್ಥೆಯ ಉತ್ಪಾದಕರಾದ ರಾ.ಬ.ಗಿಲಗಂಚಿ, ರಾ.ಬ.ಅರಟಾಳ ರುದ್ರಪ್ಪಗೌಡ ಅವರು ನವಲಗುಂದ, ಗದಗ ಈ ಎರಡು ತಾಲೂಕಿನಲ್ಲಿ ಫಂಡ್ ಸಂಗ್ರಹಿಸಿ ೧೫,೨೯೪ ರೂಗಳನ್ನು ಕೂಡಿಸಿ ಶಿವಲಿಂಗಪ್ಪ ಹೊಸಾಳಿ ಎಂಬ ವಿದ್ಯಾರ್ಥಿಯನ್ನು ಇಂಗ್ಲೆಂಡಿಗೆ ಐ.ಎ.ಎಸ್. ಪರೀಕ್ಷೆಗೆ ಕಳಿಸಿದರು. ಆದರೆ ಐ.ಪಿ.ಎಸ್. ಪರೀಕ್ಷೆಯಲ್ಲಿ ಉತ್ತೀರ್ಣರಾಗಲಿಲ್ಲ. ಬ್ಯಾರಿಸ್ಟರಾಗಿ ಹಿಂದುಸ್ತಾನಕ್ಕೆ ಮರಳಿ ಬಂದರು."[೪೯]

ಹೀಗೆ ಒಳ್ಳೆಯ ಉತ್ಸಾಹದಿಂದ ಸ್ಥಾಪಿತವಾದ ಈ ಸಂಸ್ಥೆ ಉತ್ಪಾದಕರ, ವ್ಯವಸ್ಥಾಪಕರ ಕಳಕಳಿಯಿಂದ ದಿನೇ ದಿನೇ ಅಭಿವೃದ್ಧಿಯನ್ನು ಹೊಂದುತ್ತಾ 'ಲಿಂಗಾಯತ ಹಾಲ್' ರೂಪಗೊಂಡಿತು. ಇಲ್ಲಿಂದ ಕ್ರಿ.ಶ. ೧೯೧೬-೧೭ರ ವರೆಗೆ ಈ ಸಂಸ್ಥೆಯವರು ಹೈಸ್ಕೂಲ್, ಕಾಲೇಜು ಸ್ಥಾಪನೆ ಮಾಡಿದವು. ಜೊತೆಗೆ ವಿದ್ಯಾರ್ಥಿಗಳಿಗೆ ಫಂಡು ನೀಡಲು ಕೈ.ವಾ. ಶ್ರೀಯುತ ಶಿರಸಂಗೀಕರ್ ದೇಣಿಗೆಯಾಗಿ ಅತುಲ ಸಂಪತ್ತಿನ ಉತ್ಪನ್ನ ನೀಡಿದರು. ಇದರಿಂದಾಗಿ ಇದುವರೆಗೆ ಸಾವಿರಾರು ವಿದ್ಯಾರ್ಥಿಗಳು ಈ ಸೌಲಭ್ಯ ಪಡೆದು. ಇಂದು ಎಲ್ಲೆಡೆ ಪದವೀಧರರೂ, ವಿದ್ಯಾವಂತರೂ,

ಅಧಿಕಾರಿಗಳೂ ಆಗಿದ್ದಾರೆ. ಮುಂಬೈ ಇಲಾಖೆಯಲ್ಲಿ ಕರ್ನಾಟಕದ ಮೊದಲನೆಯ ಮಂತ್ರಿಯೆಂಬ ಗೌರವಕ್ಕೆ ಪಾತ್ರರಾದ ಇನಾಮದಾರ, ಎಸ್.ಟಿ. ಕಂಬಳಿ ಇವರು ಈ ಸಂಸ್ಥೆಯಿಂದ ಸಹಾಯ ಹೊಂದಿದವರೆ ಆಗಿದ್ದಾರೆ. ಇಂದು ದೊಡ್ಡ ದೊಡ್ಡ ಹುದ್ದೆಯಲ್ಲಿ, ಬೇರೆ ಬೇರೆ ಖಾತೆಗಳಲ್ಲಿ ಯೋಗ್ಯರಾಗಿ ಮುಂದುವರಿದಿದ್ದಾರೆ. ಈ ಸಂಸ್ಥೆಯಿಂದ ಸಹಾಯ ಹೊಂದಿದ ಕೆಲವು ಪದವೀಧರರು, ಶಿಕ್ಷಣ ಪ್ರೇಮಿಗಳು ಒಂದಾಗಿ 'ಕರ್ನಾಟಕ ಲಿಂಗಾಯತ ಸೊಸೈಟಿ' (ಕೆ.ಎಲ್.ಇ.) ಎಂಬ ಇನ್ನೊಂದು ಸಂಸ್ಥೆಯನ್ನು ಬೆಳಗಾವಿಯಲ್ಲಿ ಸ್ಥಾಪಿಸಿದರು. ಅದರ ಸಹಯೋಗದಲ್ಲಿ ಇಡೀ ಕರ್ನಾಟಕದೆಲ್ಲೆಡೆ ಕಲಾ, ವಿಜ್ಞಾನ, ವಾಣಿಜ್ಯ, ವೈದ್ಯಕೀಯ, ವೃತ್ತಿಪರ ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ. ಇದು ಸಮಾಜದ ಇನ್ನುಳಿದ ತಮ್ಮ ತಮ್ಮ ಸಮುದಾಯದಲ್ಲಿಯೂ ಪ್ರೇರಣೆಯಾಗಿ ಮುನ್ನಡೆಯಲು ಕಾರಣವಾಯಿತು. ವೀರಶೈವರು ಮೊದಲೇ ದಾನಶೂರರು, ಅದರಲ್ಲಿಯೂ ವರ್ತಕರಂತೂ ಕೊಡಗೈ ದೊರೆಗಳು. ಹಾಗಾಗಿ ವೀರಶೈವರ ಎಲ್ಲ ಸಂಸ್ಥೆಗಳಿಗೂ ಅವರಿಂದ ಮಹದುಪಕಾರವಾಗಿದೆ-ವಾಗುತ್ತಲಿದೆ. ಕಲಿತ ವರ್ಗದವರಿಂದ ಇನ್ನಷ್ಟು ಸಹಾಯ ಈ ಸಂಸ್ಥೆಗೆ ಅಗತ್ಯವಿದೆ. ಇದು ಕೇವಲ ವಿದ್ಯಾಸಂಸ್ಥೆ, ಶಿಷ್ಯವೃತ್ತಿ, ವಸತಿ, ದಾಸೋಹಕ್ಕೆ ಸೀಮಿತವಾಗದೆ ಇತಿಹಾಸ, ಸಾಹಿತ್ಯ ಇವುಗಳ ಸಂಶೋಧನ ಕಾರ್ಯಕ್ಕೂ ವಿಸ್ತರಗೊಂಡಿದೆ.

ಕುಮಾರಸ್ವಾಮಿಗಳು ಲೌಕಿಕ ಶಿಕ್ಷಣದಲ್ಲಿಯೂ ಆಧ್ಯಾತ್ಮಿಕ ಶಿಕ್ಷಣದಲ್ಲಿಯೂ ಒಲವು ತೋರಿ, ಪ್ರೇರಣ ಶಕ್ತಿಯಾಗಿ ಅಖಿಲ ಭಾರತ ವೀರಶೈವ ಮಹಾಸಭೆಯ ಕಾರ್ಯಕ್ರಮದ ಫಲವಾಗಿ ಇದು ಕರ್ನಾಟಕದಾದ್ಯಂತ ವಿನೂತನ ಸೌಕರ್ಯದಾಯಕ ವಿದ್ಯಾಸಂಸ್ಥೆಗಳು ತಲೆ ಎತ್ತುತ್ತಲಿವೆ.

ಸ್ತ್ರೀಯರು ನಿದ್ದೆ ಹೋದರೆ ಭಾರತ ದೇಶವೆ ಎಚ್ಚರ ತಪ್ಪುತ್ತದೆ. ಭಾರತಾಂಬೆಯ ಮಣಿಮುಕುಟ, ಮುತ್ತೈದೆತನದ ರತ್ನಕಚಿತ ಮುಗುತಿ ಬಿದ್ದು ಹೋಗುತ್ತದೆ. ಎಂಬ ಸಂಸ್ಕೃತಿಯ ಆಳ ತಿಳಿದಿದ್ದ ಪೂಜ್ಯರು '೧೯೦೮ರಲ್ಲಿ ಸ್ತ್ರೀಯರಿಗಾಗಿ ಹಿರೇಕೇರೂರಲ್ಲಿ ಅಕ್ಕಮಹಾದೇವಿ ಎಂಬ ಪಾಠಶಾಲೆ ಆರಂಭಿಸಿದರು ಈ ವಿಷಯವನ್ನು ಶ್ರೀ ಶಿವಲಿಂಗಶಾಸ್ತ್ರಿ ಹಿರೇಮಠ ಎಂಬುವರು ಹಾವೇರಿ-ಹುಕ್ಕೇರಿ ಕ್ಷೇತ್ರಕಾರ್ಯ ಭೇಟಿಯಲ್ಲಿ ತಿಳಿಸಿದ್ದಾರೆ. ಈ ಪಾಠಶಾಲೆ ಶ್ರೀ ಬಸವಣ್ಣದೇವರ ಗುಡಿಯ ಮಹಡಿಯಲ್ಲಿ ಏಳು ಹುಡುಗಿಯರಿಂದ ಆರಂಭವಾಗುತ್ತದೆ. ಮುಂದೆ ಎರಡು ವರ್ಷದಲ್ಲಿ ಬಂದ ಬಾಲಕಿಯರೆಂದರೆ ೧. ಶೆಟ್ಟರ ಗಂಗಮ್ಮ ೨. ಶೆಟ್ಟರ ಗುರುಶಾಂತಮ್ಮ ೩. ಗೌರಮ್ಮ ಗುರುಪಾದಪ್ಪ ಹಾದರಳ್ಳಿ ೪. ಗಂಗಮ್ಮ ೫. ಚನ್ನಬಸಮ್ಮಾ ಶಿಕಾರಿಮಠ ೬. ಗಿರಿಜಮ್ಮ ಕೆರೂಡಿ ಹಂಸಬಾವಿ ೭. ಹಳಕಟ್ಟಿ ಬಸವಣ್ಣೆಮ್ಮ ೮. ಕಲಬುರ್ಗಿ ತಿಪ್ಪಮ್ಮ ೯. ನೀಲಮ್ಮ ವಾಲಿ ೧೦. ಉಂಕಿ ಗಂಗಮ್ಮ ಗಂಡ ಶೇಕಪ್ಪ ೧೧ ಶೆಟ್ಟರ ಪುಟ್ಟಮ್ಮ ೧೨ ಶಿವಮ್ಮ ಸೆಟ್ಟರ ೧೩. ಕಲಬುರ್ಗಿ ಮಾದೇವಕ್ಕ ೧೪. ಕಲಬುರ್ಗಿ ಸರೂಜಮ್ಮ ೧೫. ಕಲ್ಯಾಣಮ್ಮ ಕಲಬುರ್ಗಿ ೧೬

ಗುರುಬಸಮ್ಮ ಕಲಬುರ್ಗಿ (ಸಂಗ್ರಹ ಹಿರೇಕೆರೂರ, ಹಂಸಬಾವಿ, ಶಿಕಾರಿಪುರದಲ್ಲಿ ಕ್ಷೇತ್ರಕಾರ್ಯದಲ್ಲಿ) ಸ್ತ್ರೀ ಶೋಷಣೆ ನಿಲ್ಲಬೇಕು, ಸ್ತ್ರೀ ವಿದ್ಯಾವಂತೆಯಾಗಿ, ಸಾತಂತ್ರ್ಯವಾಗಿ ಬಾಳಬೇಕು. ಇದು ಪೂಜ್ಯರ ಅಭಿಲಾಷೆಯಾಗಿತ್ತು.

ಪೂಜ್ಯರು ಕೈಗೊಂಡ ವಿದ್ಯಾ ಪ್ರಸಾರ ಕಾರ್ಯದಲ್ಲಿ ಸಂಗೀತಶಾಲೆಯ ಸ್ಥಾಪನೆಯು ಒಂದಾಗಿದೆ. ೧೯೧೪ನೇ ಇಸ್ವಿಯಲ್ಲಿ (ಶಕೆ ೧೮೩೬ನೇ ಆನಂದನಾಮ ಸಂವತ್ಸರದ ವೈಶಾಖ ಶು. ೨ ರಂದು) ಬಸವಜಯಂತಿಯ ಆನಂದದ ಮುಹೂರ್ತದಲ್ಲಿ ಧಾರವಾಡ ಜಿಲ್ಲಾ, ರೋಣ ತಾಲೂಕಿನ ನಿಡಗುಂದಿ ಕೊಪ್ಪದ ಶಾಖಾ ಶಿವಯೋಗಮಂದಿರಲ್ಲಿ ಆರಂಭವಾಯಿತು.

ಅಂಧರಾದವರನ್ನು ಅಧ್ಯಾಪಕರನ್ನಾಗಿಸಿ ಲೋಕ ಸೇವೆಗೆ ನಿಯೋಜಿಸಿದ ಅವರ ಕಾರ್ಯ ಸಾಮಾನ್ಯವಾದುದಲ್ಲ. ಶಿಕ್ಷಣದ ಸೌಕರ್ಯದ ದೃಷ್ಟಿಯಿಂದ ಸಂಗೀತ ಶಾಲೆಯನ್ನು ಎರಡು ಭಾಗ ಮಾಡಿದರು. ಒಂದು ಸ್ಥಾಯಿಕ ಸಂಗೀತಶಾಲೆ ಇದಕ್ಕೆ ಕಮತಗಿ ಶ್ರೀ ಗದಿಗೆಪ್ಪ ಗವಾಯಿಗಳನ್ನು ನೇಮಿಸಿದರು. ಎರಡನೆಯ ಸಂಚಾರಕ ಸಂಗೀತಶಾಲೆ ಇದಕ್ಕೆ ಪಂಚಾಕ್ಷರಿ ಗವಾಯಿಗಳನ್ನು ನೇಮಿಸಿದರು. ಇದರೊಂದಿಗೆ ಕನ್ನಡ, ಸಂಸ್ಕೃತ, ಸಾಹಿತ್ಯ ಶಿಕ್ಷಣವನ್ನು ಕೊಡುವಂತೆ ಸೂಚಿಸುತ್ತಾರೆ.

ಇದರೊಂದಿಗೆ ಶ್ರೀ ಬಸರೀಗಿಡದ ವೀರಪ್ಪನವರ ದಾನದ ಫಲವಾಗಿ ವೀರೇಶ್ವರ ಪುಣ್ಯಾಶ್ರಮ ಸ್ಥಾಪಿತವಾಗುತ್ತದೆ. ಅಲ್ಲಿ ಪಂಚಾಕ್ಷರಿ ಗವಾಯಿಗಳು ವಾಸ್ತವ್ಯ ಹೂಡಿ ನೆಲೆ ನಿಲ್ಲುತ್ತಾರೆ. ಅವರ ತರುವಾಯ ಪುಟ್ಟಯ್ಯ ಗವಾಯಿ ಇದನ್ನು ಮುನ್ನಡೆಸುತ್ತಾರೆ.

ಹೀಗೆ ಜಾತಿ-ಮತ-ಪಂಥಗಳನ್ನು ಎಣಿಸದೆ ಸಮಾನ ದೃಷ್ಟಿಯಿಂದ ಸಂಗೀತ ವಿದ್ಯಾ ಪೋಷಣೆ ಮಾಡುತ್ತಾರೆ. ಆ ಮೂಲಕ ಅಂಧರು ಸ್ವಾವಲಂಬಿಯಾಗಿ ಬಾಳಲು ದಾರಿ ತೋರಿದ್ದಾರೆ. ಈಗ ನಾಡಿನ ಶಿಕ್ಷಣ ಸಂಸ್ಥೆಗಳಲ್ಲಿರುವ ಸಂಗೀತ ಶಿಕ್ಷಕರಲ್ಲಿ ಹೆಚ್ಚಿನವರು ಗವಾಯಿಗಳ ಶಿಷ್ಯ ಪರಂಪರೆಯಲ್ಲಿ ಬಂದವರೇ ಆಗಿದ್ದಾರೆ. ನೂರಾರು ನುರಿತ ಶಿಕ್ಷಕರು, ಸಂಗೀತ ಕಲಾ ನಿಪುಣರು, ಪ್ರಸಿದ್ಧ ಗವಾಯಿಗಳನ್ನು ಕೀರ್ತನಾಕಾರರನ್ನು ಈ ಸಂಸ್ಥೆ ಸಮಾಜಕ್ಕೆ ಕಾಣಿಕೆಯಾಗಿ ಕೊಟ್ಟಿದೆ.

೩. ಪ್ರಸಾರಾಂಗ

ಪೂಜ್ಯರು ಧರ್ಮ ಪ್ರಸಾರದಂತೆ ವಿದ್ಯಾಪ್ರಸಾರವನ್ನು ಕೈಗೊಂಡರು. ವಿಶ್ವವಿದ್ಯಾಲಯವೊಂದು ಮಾಡಬಹುದಾದ ಪ್ರಸಾರಾಂಗ ಕಾರ್ಯವನ್ನು ನೆರವೇರಿಸಿದ್ದಾರೆ. ಆ ಮೂಲಕ ತಾಡೋಲೆಗಳ ಸಂಗ್ರಹ, ಗ್ರಂಥ ಸಂಶೋಧನೆ, ಪತ್ರಿಕೆಗಳ ಪ್ರಕಟಣೆಗೂ ಅವಕಾಶ ಕಲ್ಪಿಸಿದ್ದಾರೆ. ಈ ಕುರಿತು ಶಿವಯೋಗಮಂದಿರ ಸಾಹಿತ್ಯ ಸಂಶೋಧಕರ ಚಟುವಟಿಕೆಗಳು ಎಂಬ ಅಧ್ಯಾಯದಲ್ಲಿ ಸವಿವರವಾಗಿ ತಿಳಿಸಲಾಗಿದೆ.

ಸಮಾಜದ ಉನ್ನತಿಗಾಗಿ ಜೀವನದುದ್ದಕ್ಕೂ ಹೋರಾಟ ಮಾಡಿದ ಮಹಾಂತರಿವರು. ಒಂದು ಮಠಕ್ಕೆ ಗುರುವಾಗಿ ಬಂದರೆ ಅವರಿಗೆ ಯಾವ ಗುಣಗಳಿರಬೇಕು ಎಂದು ವಿಚಾರಿಸುವವನಿಗೆ, ನಡೆಯುವವನಿಗೆ ಯಾರ ಆದರ್ಶವನ್ನು ಪಾಲಿಸಬೇಕೆಂದರೆ ಸದ್ಗುರು ಕುಮಾರ ಸ್ವಾಮಿಗಳ ಗುಣ ಅನುಸರಿಸಬೇಕೆಂದು ಪ್ರತಿಯೊಬ್ಬರು ಹೇಳುವಂತೆ ಅವರ ವ್ಯಕ್ತಿತ್ವ ಪಕ್ವಗೊಂಡಿತ್ತು. ಗುರುತ್ವಕ್ಕೆ ಅರ್ಹವಾದ ಸಕಲ ಸದ್ಗುಣಗಳಿಂದ ಕೂಡಿದ ಮಹಾನುಭಾವಿಗಳಾಗಿದ್ದರು. ವೈರಾಗ್ಯಶೀಲರು, ಕಾರ್ಯದಕ್ಷರು, ಜ್ಞಾನಾನುಭವ ಸಂಪನ್ನರು, ಶಿವಾನುಭಾವಿಗಳು, ತ್ರಿವಿಧ ದಾಸೋಹ ಮೂರ್ತಿಗಳು, ಉಚಿತ ಹಿತಮಿತ ಭಾಷಣವುಳ್ಳವರು, ಸತ್ಯನಿಷ್ಠರು, ಕಾರ್ಯ ಕುಶಲರು, ದೂರದೃಷ್ಟಿಯುಳ್ಳ ಶ್ರೀಗಳಂಥವರನ್ನು ಕಾಣುವುದು ಅಪರೂಪ. ಇಷ್ಟೆಲ್ಲ ಗುಣ ಸಂಪನ್ನರು ಇದ್ದರೆಂದೇ ಹೇಳುವುದು ಮುಂದಿನ ಶತಮಾನಗಳ ಜನರಿಗೆ ದಂತಕಥೆಯ ಪುರುಷನಂತೆ ಕಾಣುತ್ತಾರೆ.

ವೀರಶೈವ ಸಾಹಿತ್ಯ–ತತ್ವ–ಸಂಸ್ಕೃತಿಗೆ–ಸಮಾಜಕ್ಕೆ ವಿಪತ್ತು ಬಂದೊದಗಿದಾಗ ನಮ್ಮ ಹಿರಿಯರು ಬಹು ಆಸ್ಥೆಯಿಂದ ಬಚ್ಚಿಟ್ಟು ಶರಣ ಸಾಹಿತ್ಯವನ್ನು ಬದುಕಿಸಿದ್ದಾರೆ. ಪರಂಪರೆಯಿಂದ ಬಂದ ತತ್ವಗಳನ್ನೇ ಮತ್ತೆ ಬರೆದು ಸಾಹಿತ್ಯವನ್ನು ಬೆಳಗಿ, ಸಂಸ್ಕೃತಿಯನ್ನು ಉಳಿಸಿ, ತತ್ವವನ್ನು ಬೆಳಕಿಗೆ ತಂದಿದ್ದಾರೆ. ಸ್ಥೂಲವಾಗಿ ಹೇಳುವುದಾದರೆ ವೀರಶೈವ ಸಮಾಜದ ಸರ್ವಾಂಗೀಣ ಪ್ರಗತಿಗಾಗಿ ಹೋರಾಟ ಮಾಡಿದ ಧೀಮಂತ ವ್ಯಕ್ತಿ. ಹೀಗೆ ಶ್ರೀಗಳು ಮಾಡಿದ ಇನ್ನುಳಿದ ಸಮಾಜೋದ್ಧಾರ ಕಾರ್ಯಗಳೆಂದರೆ

೧. ಪ್ರಾಂತಿಕ ಧರ್ಮ ಪ್ರಚಾರ, ವಿದ್ಯಾವಂತರ ಸಂಪರ್ಕ

೨. ವಿದ್ಯಾಸಂಸ್ಥೆಗಳ ಸ್ಥಾಪನೆ

೩. ಮಠಾಧಿಪತಿಗಳಿಲ್ಲದ ಮಠಗಳಿಗೆ ಯೋಗ್ಯರ ನೇಮಕ

೪. ಶಾಖಾ ಮಠಗಳ ಸ್ಥಾಪನೆ

೫. ಶಿವಯೋಗಮಂದಿರ ಸ್ಥಾಪನೆ (ಮೊದಲ ಅಧ್ಯಯದಲ್ಲಿ ಹೇಳಲ್ಪಟ್ಟಿದೆ)

೬. ಶಾಖಾ ಶಿವಯೋಗಮಂದಿರಗಳ ಸ್ಥಾಪನೆ

೭. ಶ್ರೀಮದ್ವೀರಶೈವ ಮಹಾಸಭೆಯ ಸ್ಥಾಪನೆ

೮. ವೀರಶೈವ ಧರ್ಮೋತ್ತೇಜಕ ಸಭೆಯ ಸ್ಥಾಪನೆ–ಧಾರ್ಮಿಕ ಜಾಗೃತಿ

೯. ಪರಳಿಯ ಪರವಾದ ನಿಗ್ರಹ, ಸ್ವಧರ್ಮ ನಿಷ್ಠೆಯ ಸ್ಥಾಪನೆ

೧೦. ಸಮಾಜೋನ್ನತಿಗಾಗಿ ಮಹಿಳಾ ಮನ್ನಣೆ

* ಶರಣ ಸಾಹಿತ್ಯ ಪೋಷಣೆಯಲ್ಲಿ
* ತಾಡೋಲೆಗಳ ಸಂಗ್ರಹ

* ಗ್ರಂಥಗಳ ಸಂಶೋಧನೆ ಮತ್ತು ಪ್ರಕಟನೆ
* ಪತ್ರಿಕೆಗಳ ಪ್ರಕಟನೆ
* ವೀರಶೈವ ಪಂಡಿತರಿಗೆ ಸಹಾಯ-ಸಹಕಾರ
* ವ್ಯಾಖ್ಯಾನ-ಪುರಾಣ-ಶಿವಕೀರ್ತನ ಪ್ರವಚನಗಳು

ಇವು ಅವರ ಪಂಚತತ್ವಗಳು. ಇದರಿಂದ ಸಮಾಜದಲ್ಲಿ ಒಂದು ಹೊಸ ಕ್ರಾಂತಿಯನ್ನೇ ಹೂಡಿದರು. ಇದರ ಬಗ್ಗೆ ಮುಂದಿನ ಅಧ್ಯಯದಲ್ಲಿ ವಿಸ್ತಾರವಾಗಿ ಚರ್ಚಿಸಲಾಗಿದೆ.

೧೨. ಗುರು ವಿರಕ್ತರು

೧೩. ಕೃಷಿ ತಜ್ಞರು

೧೪. ದೀನ-ದಲಿತರ ಹಿತ ಚಿಂತಕರು

೧೫. ಕೀರ್ತನಕಾರ, ಕವಿಗಳು, ಸಂಗೀತಗಾರರಿಗೆ ಪ್ರೋತ್ಸಾಹಕರು

ಹೀಗೆ ಸಮಾಜದ ಏಳಿಗೆಯನ್ನೇ, ಹಗಲಿರುಳು ಜೀವನದ ಉಸಿರನ್ನಾಗಿ ಮಾಡಿಕೊಂಡಿದ್ದ ಕುಮಾರಸ್ವಾಮಿಗಳನ್ನು ಕುರಿತು ಡಾ.ಜ.ಚ.ನಿ ಹೀಗೆ ಬರೆಯುತ್ತಾರೆ.

ಭಕ್ತಿಯಲ್ಲಿ ಬಸವ ನೀನಯ್ಯ
ಜ್ಞಾನದಲ್ಲಿ ಚನ್ನಬಸವ ನೀನಯ್ಯ
ವಿರತಿಯಲ್ಲಿ ಅಲ್ಲಮಪ್ರಭು ನೀನಯ್ಯ
ಶಿವಯೋಗದಲ್ಲಿ ಸಿದ್ಧರಾಮ ನೀನಯ್ಯ
ಐಕ್ಯದಲ್ಲಿ ಅಜಗಣ್ಣ ನೀನಯ್ಯ
ಉಳಿದ ಕಾಯಕಗಳಲ್ಲಿ ಎಲ್ಲಾ
ಶಿವಶರಣರ ಅಂಶ ನೀನಯ್ಯ
ಶ್ರೀ ನಿಡುಮಾಮಿಡಿ ಶ್ರೀಗಿರಿ ಸೂರ್ಯ
ಸಿಂಹಾಸನಾಧೀಶವಾಸ ಕುಮಾರೇಶ್ವರ.[೫೦]

ಈ ನುಡಿ ಮುತ್ತುಗಳು ಅಕ್ಷರಶಃ ಸಲ್ಲುತ್ತದೆ. ಅವರು ಲಿಂಗದಹಳ್ಳಿಯಲ್ಲಿ ಶಿಕ್ಷಕರಾಗಿ ಉಜ್ವಲ ವ್ಯಾಸಂಗಿಗಳಾಗಿ ಜೀವನವನ್ನು ಶಿವಪಥದಲ್ಲಿ ನಡೆಸಿಕೊಂಡು ಹೊರಟ ಹಾಲಯ್ಯನವರು ಮುಂದೆ ಕುಮಾರಸ್ವಾಮಿಗಳೆಂಬ ಅಭಿನಾಮಕ್ಕೆ ಪಾತ್ರರಾದರು. ಯೋಗ ಶಕ್ತಿಯಿಂದ ಸಮಾಜದಲ್ಲಿ ಹೊಸ ಚೈತನ್ಯವನ್ನು ಹುಟ್ಟಿಸಿದ ಕ್ರಿಯಾವೀರರು, ವಿವೇಕಾನಂದರಂತೆ ವೀರಸನ್ಯಾಸಿಗಳಾಗಿ ನಿದ್ರಿತ ಸಮಾಜವನ್ನು ಜಾಗೃತಗೊಳಿಸಿದರು.

ದೈವದುರ್ವಿಲಸವು ಸರ್ವತಂತ್ರ ಸ್ವತಂತ್ರವಾದದು. ವೀರಶೈವ ಸಮಾಜದೊಳಗೆ ಗುಡುಚಾಗಿ ವ್ಯಾಪಿಸಿಕೊಂಡಿದ್ದ ಅಂಧಕಾರವು ಯಾರ ಉದಯದಿಂದ ಹರಿದು ಹೋಗಿತ್ತೋ? ಎಷ್ಟೋ ದಿವಸಗಳಿಂದ ಸಮಾಜದಲ್ಲಿ ಬೇರೂರಿದ ಅವಿದ್ಯಾವಂತಿಕೆ ಯಾರ ಪ್ರಯತ್ನಶಾಲಿಯಿಂದ ಹಿಂದಾಗಿದ್ದಿತೋ? ನಾಸ್ತಿಕ ಭಾವನೆಯುಳ್ಳ ಈಗಿನ ಕಾಲದಲ್ಲಿ ಅಲ್ಪ-ಸ್ವಲ್ಪ ಧರ್ಮಜ್ಯೋತಿಯು ಅಲ್ಲಲ್ಲಿ ಮಿನುಗುತ್ತಿರುವ ಶ್ರೇಯಸ್ಸಿಗೆ ಯಾವ ಶಿವಯೋಗಿಯ ಕಾಯಕವು ಕಾರಣವಾಯಿತೋ? ವೀರಶೈವ ಲಿಂಗಾಯತ ಸಮಾಜಕ್ಕೆ ಸೂರ್ಯತೇಜದಂತಿದ್ದ ಶಿವಯೋಗಮಂದಿರದ ಸಂಸ್ಥಾಪಕರು. "ಮಾಘ ಬಹುಳ ೬ ತಾರೀಖು ೧೯.೦೨.೧೯೩೦ನೇ ಬುಧುವಾರ ಸಾಯಂಕಾಲ ೬ ಗಂಟೆಯ ಸಮಯಕ್ಕೆ ನಿಮೋನಿಯಾ ಜ್ವರದಿಂದ ಶಿವಯೋಗ ಮಂದಿರದಲ್ಲಿ ಲಿಂಗೈಕ್ಯರಾದರು"[೫೧]

"ಶಿವಯೋಗಮಂದಿರಕ್ಕೆ ಆಗಮಿಸಿ ಅವರ ಯೋಗಕ್ಷೇಮ ವಿಚಾರಿಸುತ್ತಿದ್ದವರೆಲ್ಲ ಐಕ್ಯತೆಯಿಂದ ಸಮಾಜ ಕಲ್ಯಾಣವಾಗತಕ್ಕ ಕೆಲಸಗಳನ್ನು ಮಾಡುವುದು. ಶಿವಯೋಗಮಂದಿರದ ಪುರೋವೃದ್ಧಿಯನ್ನು ಮನಮುಟ್ಟಿ ಮಾಡಬೇಕೆಂದು ಹೇಳಿದರು. ಈ ಪ್ರಕಾರ ಅಂತ್ಯವಸ್ಥೆಯಲ್ಲಿಯೂ ಸಹ ಸಮಾಜದ ವಿಷಯಕ್ಕಿದ್ದ ಕಳಕಳಿಯನ್ನು ಕಂಡು ನೆರೆದವರೆಲ್ಲ ಆಶ್ಚರ್ಯಪಟ್ಟರು. ತಾರೀಖು ೧೯.೦೨.೧೯೩೦ನೇ ಬುಧುವಾರ ಪ್ರಾತಃ ಕಾಲ ೫ ಗಂಟೆಗೆ ಚಿತ್ರದುರ್ಗದ ಜಗದ್ಗುರುಗಳು ತಮ್ಮ ಉತ್ತರ ಕ್ರಿಯೆಯು ಎಲ್ಲಿ ಜರಗಬೇಕೆಂದು ಕೇಳಲು; ಹಾನಗಲ್ಲ ಶ್ರೀಗಳು ಶಿವಯೋಗಮಂದಿರದಲ್ಲೆ ಜರಗಲೆಂದು ಬಯಸಿದರು. ಅದರಂತೆ ಅವರು ಶಿವಯೋಗಮಂದಿರದಲ್ಲೆ ಶಾಶ್ವತವಾಗಿ ನೆಲೆಸಿರುವಂತಾಗಿದೆ. ಸಮಾಜದ ಸಲುವಾಗಿ ಸವೆದುಸಣ್ಣಾದ ಅಂತರಾತ್ಮನು ಶಿವನಲ್ಲಿ ಬೆರೆತು ಹೋಯಿತು.[೫೨] ಎಂಬುದಾಗಿ ಚಿತ್ರದುರ್ಗದ ಜಗದ್ಗುರುಗಳು ಸ್ಮರಕ ಚಂದ್ರಿಕೆ ದಾಖಲಿಸಿದ್ದಾರೆ.

ಅಡಿ ಟಿಪ್ಪಣಿಗಳು

೦೧. ಹಾನಗಲ್ಲ ಶ್ರೀಕುಮಾರೇಶ್ವರ ಪುರಾಣ-ಪು.ಸಂ-೧೦

೦೨. ಸುಕುಮಾರ ಸಂಪುಟ-೧೬-ಸಂಚಿಕೆ-೮,೯, ಮೇ, ಜೂನ್-೧೯೬೭-ಪು.ಸಂ-೯

೦೩. ಸುಕುಮಾರ ಸಂಪುಟ-೧ ಆಗಸ್ಟ್-೨೦೦೨ ಸಂಚಿಕೆ-೧-ಪು.ಸಂ-೧೨

೦೪. ಬೆಳಗು ಪು.ಸಂ-೪

೦೫. ಬೆಳಗು ಪು.ಸಂ-೭

೦೬. ಸುಕುಮಾರ ಪತ್ರಿಕೆ ಸಂಪುಟ-೧ ಆಗಸ್ಟ್ ೨೦೦೨ ಸಂಚಿಕೆ-೧-ಪು.ಸಂ-೧೬

೦೭. ಬೆಳಗು ಕಿರಣ-೧-ಪು.ಸಂ-೧೧

೦೮. ಕುರುಹು ಸ್ಮರಣ ಸಂಚಿಕೆ-೧೯೯೨-ಪು.ಸಂ-೪

೦೯. ಸುಕುಮಾರ ಪತ್ರಿಕೆ ಸಂಚಿಕೆ-೧-ಸಂಪುಟ-೧-೨೦೦೨-ಪು.ಸಂ-೨೪

೧೦. ಕಾರಣಿಕ ಯುಗಪುರುಷ ಪು.ಸಂ-೭೩

೧೧. ಅರಟಾಳು ರುದ್ರಗೌಡರು ಪು.ಸಂ-೩೩

೧೨. ಅದೇ-ಪು.ಸಂ-೩೨

೧೩. ಅದೇ-ಪು.ಸಂ-೪೧

೧೪. ಸ್ಮಾರಕ ಚಂದ್ರಿಕೆ ಪು.ಸಂ-೫೨

೧೫. ವೀರವೀರಾಗಿ ಶಿವಬಸವ ಶಿವಯೋಗಿ ಪು.ಸಂ-೮

೧೬. ವೀರವೀರಾಗಿ ಶಿವಬಸವಶಿವಯೋಗಿ ಪು.ಸಂ-೫

೧೭. ಹಾನಗಲ್ಲ ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ-೨ ಪು.ಸಂ-೪

೧೮. ಸಂದೇಶ ಭಾಗ ಪು.ಸಂ-೫

೧೯. ಕಾರಣಿಕ ಯುಗಪುರುಷ ಪು.ಸಂ-೯೬

೨೦. ಬೆಳಗು ಪು.ಸಂ-೨೫೭

೨೧. ಬೆಳಗು ಪು.ಸಂ-೨೫೭

೨೨. ಕಾರಣಿಕ ಯುಗಪುರುಷ ಪು.ಸಂ-೯೮

೨೩. ಶ್ರೀ ಹಾನಗಲ್ಲ ಕುಮಾರಸ್ವಾಮಿ: ಒಂದು ಅಧ್ಯಯನ ಪು.ಸಂ-೮೮

೨೪. ಕಾರಣಿಕ ಕುಮಾರಯೋಗಿ ಜ.ಚ.ನಿ. ಪು.ಸಂ-೪೪

೨೫. ಸ್ಮಾರಕ ಚಂದ್ರಿಕೆ ಪು.ಸಂ-೫೦

೨೬. ಅ.ಭಾ.ವೀರಶೈವ. ಮಹಾಸಭೆಯ ಅಧ್ಯಕ್ಷರುಗಳ ಭಾಷಣ ಸಂಗ್ರಹ ಪು.ಸಂ-೨

೨೭. ಅದೇ-ಪು.ಸಂ-೫೨ ರಿಂದ ೫೪

೨೮. ಅದೇ-ಪು.ಸಂ-೫೪ ರಿಂದ ೫೭

೨೯. ಅದೇ-ಪು.ಸಂ-೨೮

೩೦. ಅದೇ-ಪು.ಸಂ-೫೭ ರಿಂದ ೬೪

೩೧. ಅದೇ-ಪು.ಸಂ-೧ ರಿಂದ ೨೩

೩೨. ಅದೇ-ಪು.ಸಂ-೫ ರಿಂದ ೧೫

೩೩. ಅದೇ-ಪು.ಸಂ-೧ ರಿಂದ ೧೫

೩೪. ವೀರಶೈವ ವೇದಾಧಿಕಾರ ವಿಜಯ ಪು.ಸಂ-೪

೩೫. ಅದೇ-ಪು.ಸಂ-೧ ರಿಂದ

೩೬. ಅದೇ-ಪು.ಸಂ-೪ ರಿಂದ

೩೭. ಅದೇ-ಪು.ಸಂ-೫ ರಿಂದ

೩೮. ಅದೇ-ಪು.ಸಂ-೧ ರಿಂದ ೧೮

೩೯. ಅದೇ-ಪು.ಸಂ-೧೦

೪೦. ಅದೇ-ಪು.ಸಂ-೧ ರಿಂದ ೧೦

೪೧. ಅದೇ-ಪು.ಸಂ-೧

೪೨. ಅದೇ-ಪು.ಸಂ-೫೯

೪೩. ಅದೇ-ಪು.ಸಂ-೨೫

೪೪. ವೀರಶೈವ ವೇದಾಧಿಕಾರವಿಜಯ ಪು.ಸಂ-೪

೪೫. ಅದೇ ಪು.ಸಂ-೧೪೭

೪೬. ಸ್ಮಾರಕ ಚಂದ್ರಿಕೆ ಪು.ಸಂ-೩೭

೪೭. ಸ್ಮಾರಕ ಚಂದ್ರಿಕೆ ಪು.ಸಂ-೯೪

೪೮. ಮೂಜಗಂ ಜೀವನ ಸಾಧನೆ ಪು.ಸಂ-೯೯

೪೯. ವೀರವೀರಾಗಿ ಶಿವಬಸವಶಿವಯೋಗಿ ಪು.ಸಂ-೫

೫೦. ಶ್ರೀ ಸೋಮನಾಥಶಾಸ್ತ್ರಿಗಳ ಚರಿತ್ರೆ ಪು.ಸಂ-೩೮

೫೧. ಸುಕುಮಾರ ಸಂಪುಟ-೧ ಸಂಚಿಕೆ ಆಗಷ್ಟ್-೨೦೦೨ -ಪು.ಸಂ-೨೭

೫೨. ಸ್ಮಾರಕ ಚಂದ್ರಿಕೆ ಪು.ಸಂ-೩೦

ಅಧ್ಯಾಯ - ನಾಲ್ಕು

ಶಿವಯೋಗಮಂದಿರ : ಸಾಧಕರ ಶಿಕ್ಷಣ ಪದ್ಧತಿ

೧. ಪ್ರವೇಶ ಪಾಲನೆ
೨. ಪಠ್ಯಕ್ರಮ-ಪಾಠಕ್ರಮ-ಪರೀಕ್ಷಾಕ್ರಮ
೩. ಬೋಧಕ ವರ್ಗ
೪. ಪಠ್ಯೇತರ ಚಟುವಟಿಕೆಗಳು

ಅಧ್ಯಾಯ – ನಾಲ್ಕು

ಶಿವಯೋಗಮಂದಿರ : ಸಾಧಕರ ಶಿಕ್ಷಣ ಪದ್ಧತಿ

ಶಿವಯೋಗಮಂದಿರ ಕೇವಲ ಧಾರ್ಮಿಕ ವಿಧಿವಿಧಾನಗಳಿಗೆ ಸ್ಥಾಪನೆಯಾದ ಸಂಸ್ಥೆಯಲ್ಲ. ಅದೊಂದು ಸಾಕ್ಷರತಾ ಸಮಾಜವನ್ನು ನಿರ್ಮಾಣ ಮಾಡಬೇಕೆಂದು ಹುಟ್ಟಿಕೊಂಡ ಶೈಕ್ಷಣಿಕ ಕೇಂದ್ರ. ವೀರಶೈವ ಆಚಾರ–ವಿಚಾರ–ಸಂಪ್ರದಾಯ–ನಂಬಿಕೆಗಳನ್ನು ವೈಚಾರಿಕವಾಗಿ ಅಧ್ಯಯನ ಮಾಡಿ ಸಮಾಜದಲ್ಲಿ ಅನುಷ್ಠಾನಕ್ಕೆ ತಂದು ಸುಸಂಸ್ಕೃತ ಸಮಾಜ ಪ್ರಜ್ಞೆಯಿಂದ, ರಾಷ್ಟ್ರಪ್ರಜ್ಞೆ ಹಾಗೂ ಧರ್ಮಪ್ರಜ್ಞೆಯನ್ನು ಹುಟ್ಟುಹಾಕುವಲ್ಲಿ ಶಿವಯೋಗಮಂದಿರ ನಿರ್ವಹಿಸಿದ ಕಾರ್ಯ ಚರಿತಾರ್ಹವಾದದ್ದು. ಈ ಉದ್ದೇಶದಿಂದ ಶಿವಯೋಗಮಂದಿರದ ಸಾಧಕರು ಶೈಕ್ಷಣಿಕ ಕ್ಷೇತ್ರಕ್ಕೆ ಪ್ರವೇಶ ಹೊಂದುವ ಅರ್ಹತೆ, ಅಲ್ಲಿಯ ಪಠ್ಯಕ್ರಮ, ಪಾಠಬೋಧನೆ ಹಾಗೂ ಪರೀಕ್ಷಾ ವಿಧಾನಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

೧. ಪ್ರವೇಶ ಪಾಲನೆ

೧೯೦೪ ಶ್ರೀ ಮದ್ವೀರಶೈವ ಮಹಾಸಭೆಯು ಬಾಗಲಕೋಟೆಯಲ್ಲಿ ಆರಂಭವಾಗಿ 'ಶಿವಯೋಗ ಮಂದಿರ' ಸ್ಥಾಪನೆಯ ಬಗ್ಗೆ ಸ್ಪಷ್ಟವಾದ ನಿಲುವು ತಾಳಲಾಗುತ್ತದೆ. ಅದರಂತೆ ೧೯೦೮ರ ಹೊತ್ತಿಗೆ ಸ್ಥಳಾನ್ವೇಷಣೆ ಹಾಗೂ ಅದರ ಸ್ವರೂಪದ ಬಗ್ಗೆ ನಿರ್ಣಯಗಳು ಹಂತ ಹಂತವಾಗಿ ರೂಪಗೊಂಡವು. ಎಳೆಯ, ತಿಳಿಮನಸ್ಸಿನ ಶಿವಯೋಗಿಯ ತೊಟ್ಟಿಲೊಂದು ೧೯೧೧ರ ವೇಳೆಗೆ ಅಂತಿಮವಾಗಿ ಸಜ್ಜುಗೊಂಡು ಬಾಲ ಶಿವಯೋಗಿಗಳನ್ನು ತನ್ನ ಮಡಿಲಿಗೆ ಬರಮಾಡಿಕೊಳ್ಳುತ್ತದೆ. ಅದಕ್ಕೆ ಪೂರಕವಾದ ವ್ಯವಸ್ಥೆಗಳು, ನಿಯಮಗಳು, ಪದ್ಧತಿಗಳು, ಉದ್ದೇಶಗಳು, ಕ್ರಮಗಳನ್ನು ಹಾನಗಲ್ಲ ಕುಮಾರೇಶ್ವರರು ಬಹು ಆಲೋಚಿಸಿ, ಅನುಭವಾತ್ಮಕವಾದ ನೆಲೆಗಟ್ಟಿನಲ್ಲಿ ಶಾಶ್ವತವಾದ ನಿಯಮಗಳನ್ನು ಜಾರಿಗೆ ತಂದಿದ್ದಾರೆ. ಅದಕ್ಕೊಂದು ಅರ್ಥ ಬರುವಂತೆ ಕೊನೆವರೆಗೂ

ನಡೆಸಿದ್ದಾರೆ. ಅದರ ಫಲವಾಗಿ ಇಂದು ಒಂದು ಶತಮಾನವಾದರೂ ಅಳಿಯದೆ, ಬದಲಾಗದೆ ಸಾಗಿರುವುದೇ ದೊಡ್ಡ ಸಾಕ್ಷಿಯಾಗುತ್ತದೆ.

ಶಿವಯೋಗ ಮಂದಿರಕ್ಕೆ ಆಧ್ಯಾತ್ಮಿಕ ಜ್ಞಾನ ಸಂಪಾದನೆಗಾಗಿ, ಯೋಗ್ಯ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳುವ ಪ್ರಕ್ರಿಯೆ ಶಿವಯೋಗಮಂದಿರ ಸ್ಥಾಪನೆಯ ವರ್ಷದಿಂದಲೇ ಆರಂಭವಾಗುತ್ತದೆ. ಅದರಂತೆ ಇಲ್ಲಿನ ಪ್ರವೇಶ ಪದ್ಧತಿಯು ಈ ಕೆಳಗಿನ ಅರ್ಹತೆಗಳನ್ನು ವಿಶೇಷ ನಿಯಮಗಳನ್ನು ಅಪೇಕ್ಷಿಸುತ್ತದೆ. ಸಾಮಾನ್ಯವಾಗಿ ಇಲ್ಲಿಯ ನಿಯಮಗಳನ್ನು ಗಮನಿಸಿದರೆ ಪ್ರವೇಶಕ್ಕೆ ವಿಶೇಷ ನಿಯಮಗಳು ಹಾಗೂ ಸಾಮಾನ್ಯ ನಿಯಮಗಳು ಜಾರಿಯಲ್ಲಿದ್ದಂತೆ ತೋರುತ್ತದೆ.

ವಿಶೇಷ ನಿಯಮಗಳು

ಅ. "ಶಿವಯೋಗ ಮಂದಿರದಲ್ಲಿ ಆಧ್ಯಾತ್ಮ ಶಿಕ್ಷಣ ಪಡೆಯುವವರಿಗೆ ಕನಿಷ್ಠ ೫ ರಿಂದ ೧೦ ವರ್ಷದೊಳಗಿನವರಿಗೆ ಮಾತ್ರ ಇಲ್ಲಿ ಪ್ರವೇಶ ನೀಡಲಾಗುತ್ತದೆ.

ಆ. ಇಲ್ಲಿ ಪ್ರವೇಶ ಬಯಸಿ ಬರುವ ಸಾಧಕ ವಿದ್ಯಾರ್ಥಿಗೆ ಸಂಬಂಧಿಸಿದ ಪಾಲಕರು ಪ್ರವೇಶ ಪಡೆಯುವ ಪೂರ್ವದಲ್ಲಿ ಶಿವಯೋಗಮಂದಿರದ ಕಮಿಟಿಗೊಂದು ಪ್ರತಿಜ್ಞಾ ಪತ್ರ ಬರೆದು ಕೊಡಬೇಕು.

ಇ. ತಂದೆ-ತಾಯಿ, ಅಥವಾ ಸಂಬಂಧಪಟ್ಟ ಪಾಲಕರೆ ಸ್ವತಃ ಬಂದು ತಾವೇ ಶಿಶುವನ್ನು ಮಂದಿರಕ್ಕೆ ಅರ್ಪಿಸಿ, ಅಂತಹ ಶಿಶುವಿನ ಮೇಲೆ ಮುಂದೆ ಯಾವ ಮಮತೆಯನ್ನೂ ಹೊಂದುವಂತಿಲ್ಲ.

ಈ. ಹೀಗೆ ಅರ್ಪಿತವಾದ ಬಾಲಶಿವಯೋಗಿ ಮುಂದೆ ಮಂದಿರದ ಮಗುವಾಗಿ, ಸಮಾಜದ ಕೂಸಾಗುತ್ತದೆ. ಮುಂದೆ ಆ ಮಗುವನ್ನು ಹೆತ್ತು ಹೊತ್ತು ಸಾಕಿದ ತಂದೆ-ತಾಯಿ, ಪಾಲಕರಿಗೆ, ಸಂಬಂಧಿಕರಿಗೆ ಯಾವ ಸ್ವಾಮ್ಯವೂ ಉಳಿಯುವುದಿಲ್ಲ."[೧] ಎಂಬ ಪ್ರಾಥಮಿಕವಾದ ಪ್ರವೇಶದ ನಿಯಮವನ್ನು ಬರೆಯಲಾಗಿದೆ.

ಉಳಿದಂತೆ ಈ ಬಗ್ಗೆ ಶಿವಯೋಗ ಮಂದಿರದ ಉದ್ದೇಶಗಳ ಪಟ್ಟಿಯಲ್ಲಿ ಈ ಕೆಳಗಿನ ಅಂಶಗಳನ್ನು ಸೇರಿಸಿದ್ದಾರೆ ಅದನ್ನು ಇಲ್ಲಿ ಯಥಾವತ್ತಾಗಿ ನಮೂದಿಸಲಾಗಿದೆ.[೨]

ಉ. ಶಿವಯೋಗ ಮಂದಿರದಲ್ಲಿ ಗುರುಸ್ಥಲದ ಯೋಗ್ಯ ವಟುವನ್ನು, ಯೋಗ್ಯ ಮಠದ ಹನ್ನೆರಡು ವರ್ಷದೊಳಗಿನ ಹುಡುಗರನ್ನು ತೆಗೆದುಕೊಳ್ಳಬಹುದು.

ಊ. ಸದಾಚಾರ, ಜೀತೇಂದ್ರತ್ವ ವೇದಾಗಮಾದಿಗಳ ಜ್ಞಾನವಿರುವ ಬಾಲಕ, ಹಾಗೂ ಪಾಲಕರು ಸ್ವ-ಇಚ್ಛೆಯಿಂದ ಬಯಸಿ ಬಂದಿದ್ದೆ ಆದರೆ ಅಂತಹ ಬಾಲಕನ ಮುಖಭಾವ, ಆಧ್ಯಾತ್ಮಿಕಶಕ್ತಿ

ಆಂತರಿಕ ಅಭಿಲಾಷೆಯನ್ನು ಪರೀಕ್ಷಿಸಿ ಕಮೀಟಿಯಲ್ಲಿ ಚರ್ಚಿಸಿ, ಜನ್ಮಕುಂಡಲಿ ಪರೀಕ್ಷಿಸಿ ಅಂಥವರಿಗೂ ಪ್ರವೇಶ ನೀಡುವ ವಿಧಾನ ಕೂಡ ಇಲ್ಲಿ ಜಾರಿಯಲ್ಲಿದೆ.

ಋ. ಹೀಗೆ ಬಾಲ ಶಿವಯೋಗಿಗೆ ವಟುಗಳೆಂದು ಹಾಗೂ ಸಾಧಕರು ಎಂದು ನಾಮಕರಣ ಮಾಡುತ್ತಾರೆ.

ೠ. ಮುಂದೆ ಅವನ ಭವಿಷ್ಯ ರೂಪಿಸುವ ಗುರುತರವಾದ ಹೊಣೆ ಮಂದಿರದ್ದಾಗಿದ್ದು ಅಲ್ಲಿ ಬಾಲಶಿವಯೋಗಿ ಆಧ್ಯಾತ್ಮಿಕ ನೆಲೆಯಲ್ಲಿ ದೀಕ್ಷಿತನಾಗಿ ಜನ್ಮಾಂತರ ಹೊಂದಿ ಪೂರ್ವಾಶ್ರಮದ ವೇಷ ಕಳಚಿ ಮಂದಿರದ ಅಭಿನವ, ಅಭಿದಾನದ ಸಾತ್ವಿಕ ವೇಷ ಧರಿಸಿ 'ಆರ್ಯ' ಎಂದಾಗುತ್ತಾನೆ.

ಎ. ಗೃಹಸ್ಥಾಶ್ರಮದಿಂದ ನಿವೃತಿಯನ್ನು ಪಡೆದು ಸ್ವಧರ್ಮಾಚರಣೆಗೆ ಸರಿಯಾಗಿ ನಡೆಯಬೇಕೆಂಬ ಇಚ್ಛೆಯುಳ್ಳ ಮುಮುಕ್ಷುಗಳಿಗೆ ಸಾಧ್ಯವಾದ ಮಟ್ಟಿಗೆ ಅನುಕೂಲ ಮಾಡಿಕೊಡುವುದು.

ಏ. ವಿರಕ್ತಮಠ ನಿರಾಭಾರಿ ಅಧಿಕಾರಕ್ಕೂ ಗುರುಸ್ಥಲದ ಮಠದ ಪಟ್ಟಚರಂತಿ ಅಧಿಕಾರಕ್ಕೂ ಯೋಗ್ಯವಾಗುವಂತೆ ಯೋಗ್ಯ ವಂಶೋತ್ಪನ್ನರಾದ ಮಾಹೇಶ್ವರ ವಟುಗಳಿಗೆ ಶಿಕ್ಷಣ ಕೊಡುವುದು.

ಐ. ಅಧ್ಯಕ್ಷರಾದ ಸ್ವಾಮಿಗಳ ಅಥವಾ ಟ್ರಸ್ಟ ಕಮೀಟಿಯವರ ಅನುಕೂಲವರಿತು ಸಂಸಾರಿಗಳಾಗತಕ್ಕ ವೀರಶೈವ ಬ್ರಹ್ಮಚಾರಿಗಳಿಗೂ, ಭಕ್ತ ಮಾಹೇಶ್ವರರ ಮಕ್ಕಳಿಗೂ, ನೈತಿಕ, ಧಾರ್ಮಿಕ ಮತ್ತು ಆಧ್ಯಾತ್ಮಿಕ ಜ್ಞಾನವಾಗುವಂಥ ಶಿಕ್ಷಣ ಕೊಡುವುದು.

ಒ. ಈ ಮಠದ ವೃದ್ಧರಾದ ಭಕ್ತ ಮಾಹೇಶ್ವರರೂ, ಮುಮುಕ್ಷುಗಳು ಮಂದಿರಕ್ಕೆ ಬಂದು ಶಿವಾನುಭವ ಶಾಸ್ತ್ರ ಓದುವ, ಅರಿಯುವ, ಪರಿಚಿತರಲ್ಲಿಯೂ, ಸ್ತ್ರೀವರ್ಗದಲ್ಲಿಯೂ ಮತ ಧರ್ಮಜ್ಞಾನವನ್ನು ಪ್ರಸಾರ ಮಾಡಬಹುದು. ಅದಕ್ಕಾಗಿ ಮಂದಿರದಲ್ಲಿ ನಿಯಮಕ್ಕನುಸಾರವಾಗಿ ಅನುಕೂಲ ಕಲ್ಪಿಸಲಾಗುತ್ತದೆ.

ಓ. ಶಿವಯೋಗ ಸಾಧಕರ ವಸತಿಸ್ಥಾನದಲ್ಲಿ ಹೊರಗಿನಿಂದ ಬಂದ ಆಸಕ್ತರಿಗೆ ಮತ್ತು ಕುಟುಂಬಸ್ಥರಿಗೆ ವಸತಿ ಕೊಡುವುದು ನಿಷಿದ್ಧ.

ಸಾಮಾನ್ಯ ನಿಯಮಗಳು

ಇನ್ನೂ ವಟು-ಸಾಧಕನಾಗಲು ಬಯಸಿ ಬರುವ ವಿದ್ಯಾರ್ಥಿಗೆ ಪ್ರವೇಶಾರ್ಥವಾಗಿ ಕೆಲವೊಂದು ಸಾಮಾನ್ಯ ನಿಯಮಗಳನ್ನು ರೂಪಿಸಲಾಗಿದೆ. ಅವುಗಳೆಂದರೆ

ಅ. ಕನ್ನಡ ನಾಲ್ಕು ಪಾಸಾದವರು ಅದರ ಮೇಲೆ ಐದು, ಆರು, ಏಳು ಇಯತ್ತೆ ಪಾಸಾದವರಿಗೆ ಸಂಸ್ಥೆಯಲ್ಲಿ ಪ್ರವೇಶ ಉಂಟು.

ಆ. ವಟು (೧೨ ವರ್ಷದೊಳಗೆ) ಗಳಿಗೆ ಬಿಳಿಕಪನಿ, ಕಿವಿಟೊಪ್ಪಿಗೆ ಧರಿಸಿ ಆರ್ಯರೆನಿಸುವರು. ಒಂದೇ ಹೆಸರಿನವರು ಇಬ್ಬರಿದ್ದರೆ ಸಂಚಾಲಕ ಶ್ರೀಗಳ ಮಾರ್ಗದರ್ಶನದಂತೆ ಅಭಿದಾನ ಬದಲಿಸಲಾಗುವುದು.

ಇ. ೧೨ ವರುಷ ಮೇಲಿನವರು ಕಾವಿಯ ಮಹಾಲಿಂಗ ಕಪನಿ ತಲೆಗೆ ಮಸ್ತಕ ಪಾವಡಿಸುವುದು. ಇವರನ್ನು 'ದೇವರೆಂದು' ಕರೆಯುಲಾಗುವುದು, ಜೊತೆಗೆ ದೀಕ್ಷಾಬದ್ಧರಾಗಿ ಆಚಾರವಂತರಾಗುವರು.

ಈ. ಶಿವಯೋಗಮಂದಿರ ಸಂಸ್ಥೆಗೇನೆ ಸಮರ್ಪಿಸಲ್ಪಡುವ ಬಾಲಕನ ತಂದೆ-ತಾಯಿಗಳು ಮಗನ ತ್ಯಾಗಪತ್ರ, ಅವರ ಮನೆತನದ ಪರಿಚಯ ಪತ್ರ ಗ್ರಾಮಸ್ಥರಿಂದ ಪಡೆದುದ್ದು ಲಗತ್ತಿಸಬೇಕು.

ಉ. ಮಠಗಳಿಗೆ ಉತ್ತಾರಾಧಿಕಾರಿಯೆಂದು ನಿಯುಕ್ತರಾದ ಮರಿದೇವರು ಆಯಾ ಮಠದ ಸ್ವಾಮಿಗಳ ಊರ ಭಕ್ತರ ಪ್ರಮಾಣ ಪತ್ರ ತರಬೇಕು. ಇವರು ಟ್ರಸ್ಟ್ ಕಮೀಟಿಯವರು ನಿರ್ಧರಿಸಿದ ವಾರ್ಷಿಕ ವಂತಿಗೆಯನ್ನು ಕೊಡಬೇಕು.

ಊ. ಈ ವಟುಸಾಧಕರು ಸಂಸ್ಥೆಯ ಎಲ್ಲ ನಿಯಮಗಳಿಗೆ ಒಳಪಟ್ಟು ಪ್ರವೇಶ ಪತ್ರಿಕೆಯನ್ನು ತುಂಬಿ ಸಂಚಾಲಕರ ಮೂಲಕ ಅಧ್ಯಕ್ಷರಿಗೆ ಸಲ್ಲಿಸಬೇಕು. ಅಧ್ಯಕ್ಷರು ಇವರ ಪ್ರವೇಶವನ್ನು ಖಾಯಂಗೊಳಿಸಿದ ಬಳಿಕ ಪ್ರಸ್ತುತ ಇದ್ದ ವಟು ಸಾಧಕರೊಡನೆ ಕೂಡಿಸುವರು. ಅಲ್ಲಿಯವರೆಗೆ ಬಂದವರು ದಾಸೋಹ ಸೇವೆಯಲ್ಲಿ ಇರತಕ್ಕದ್ದು.

ಋ. ೫ ವರ್ಷಕ್ಕಿಂತ ಮೇಲಿನ ೧೨ ವರ್ಷಕ್ಕಿಂತ ಕೆಳಗಿನ ವಿದ್ಯಾರ್ಥಿಗಳನ್ನು ಈ ಸಂಸ್ಥೆಯಲ್ಲಿ ತೆಗೆದುಕೊಂಡಾಗ ಎಂಟು ವರ್ಷಕ್ಕಿಂತ ಮೇಲಿನವರು ನಿಧಾನ ಪ್ರಾಥಮಿಕ ಶಾಲೆಯಲ್ಲಿ ಮೂರು, ನಾಲ್ಕನೇ ಇಯತ್ತೆಯ ವರೆಗೆ ಅಭ್ಯಾಸ ಮಾಡುವರು. ವಿದ್ಯಾರ್ಥಿಗಳು ಪೂರ್ಣ ಅಭ್ಯಾಸ ಮಾಡುವವರೆಗೂ ಅಥವಾ ಇಲ್ಲಿಯ ಕಮೀಟಿಯವರು ಪರವಾನಿಗೆ ಕೊಡುವವರೆಗೂ ಮಂದಿರದಲ್ಲಿಯೇ ಇದ್ದು ಟ್ರಸ್ಟ ಕಮೀಟಿಯವರೆಗೆ ಪೂರ್ವದಲ್ಲಿ ವಿಧಿಸಿದ ನಿಯಮದಂತೆ ನಡೆದುಕೊಳ್ಳಬೇಕು.

ೠ. ವಿದ್ಯಾರ್ಥಿಗಳಲ್ಲಿ ಯಾರಾದರೂ ಸಂಸ್ಥೆಯ ನಿಯಮಕ್ಕನುಸರಿಸಿ ನಡೆಯುವುದಿಲ್ಲೆಂದು ಕಂಡುಬಂದಲ್ಲಿ ಅಥವಾ ಅವರ ವರ್ತನೆಯು ಸಮಾಧಾನಕರವಿಲ್ಲದಿದ್ದಲ್ಲಿ ಅವರನ್ನು ಅಧ್ಯಕ್ಷರಾಗಲಿ, ಉಪಾಧ್ಯಕ್ಷರಾಗಲಿ ಅಥವಾ ಟ್ರಸ್ಟ್ ಬೋರ್ಡಿನವರಾಗಲಿ ಹೊರಗೆ ಹಾಕಬಹುದು.

ಎ. ಅತ್ಯಾವಶ್ಯಕ ಸಂದರ್ಭದಲ್ಲಿ ಮಂದಿರದ ವ್ಯವಸ್ಥಾಪಕರೂ ಸಹ ಅಂಥವರನ್ನು ಕೂಡಲೇ ಹೊರಗೆ ಹಾಕಬಹುದು. ಆದರೆ ಕೂಡಲೆ ಈ ಬಗ್ಗೆ ಅಧ್ಯಕ್ಷರ ಲಿಖಿತ ಮಂಜೂರಿಯನ್ನು

ಪಡೆಯಬೇಕು. ಆದರೆ ಇಂಥವರನ್ನು ಅವರ ಮಂಜೂರಿ ದೊರೆಯುವವರೆಗೆ ಬೇರೆ ಕಡೆ ಇಡಬೇಕು.

ಏ. ಹೀಗೆ ಹೊರಗೆ ಹಾಕಲ್ಪಟ್ಟ ವಿದ್ಯಾರ್ಥಿಗಳ ಬಗ್ಗೆ ಅವರನ್ನು ತೆಗೆದುಕೊಳ್ಳುವ ಕಾಲಕ್ಕೆ ಬರೆಯಿಸಿಕೊಂಡ ಕರಾರು ಪತ್ರದಲ್ಲಿ ನಮೂದಿಸಿದಂತೆ ತಜವೀಜು ಮಾಡಲು ಬರುವುದು.

ಐ. ಪ್ರವೇಶದ ಸಮಯ ಸಾಮಾನ್ಯವಾಗಿ ಶಿವರಾತ್ರಿಯ ಉತ್ಸವದ ನಂತರ ಟ್ರಸ್ಟ್ ಕಮೀಟಿಯ ಅಧ್ಯಕ್ಷರಿಗೆ ಪಾಲಕರು ಪ್ರಾರ್ಥನೆ ಪತ್ರವನ್ನು ಸಲ್ಲಿಸಿ ಒಪ್ಪಿಗೆ ಪಡೆದು ವಟುವನ್ನು ಮಂದಿರದಲ್ಲಿ ಬಿಡಬೇಕು.

ಹೀಗೆ ಪ್ರವೇಶ ಪದ್ಧತಿಯೂ ರೂಪಿತವಾಗಿ, ಇಂದಿಗೂ ಯಥಾವತ್ತಾಗಿ ನಡೆದುಕೊಂಡು ಬಂದಿದೆ, ಬರುತ್ತಿದೆ. ಒಟ್ಟನಲ್ಲಿ ತಾತ್ವಿಕ ದೃಷ್ಠಿಯಲ್ಲಿ ಬೆಳೆಯುತ್ತ ಸಾತ್ವಿಕ ಶಿವಯೋಗಿಯಾಗುತ್ತಾನೆ.

ಶ್ರೀಮದ್ವೀರಶೈವ ಶಿವಯೋಗಮಂದಿರದ ಪ್ರವೇಶ ಪಾಲನೆಯ ನಿಯಮಾವಳಿಯನ್ನು ಅವಲೋಕಿಸಿದಾಗ ಹಾನಗಲ್ಲ ಶ್ರೀಗಳ ದೂರದೃಷ್ಟಿ ಆಲೋಚನ ಶಕ್ತಿಯ ವಿಶಾಲತೆ ಅವರಿಗೆ ತಿಳಿದಷ್ಟು ಇಂದಿನವರಿಗೆ ತಿಳಿಯದಾಗಿದೆ. ಎಂಟರಿಂದ ಹನ್ನೆರಡನೇ ವಯಸ್ಸು ಇರಬೇಕು ಎಂಬ ನಿಯಮವೊಂದೆ ಅವರ ಮನೋವೈಜ್ಞಾನಿಕ ಶಕ್ತಿಯನ್ನು ಬಿಂಬಿಸುತ್ತದೆ. 'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗಿತೇ' ಎಂಬ ನಾಣ್ನುಡಿಯನ್ನು ಪುಷ್ಟೀಕರಿಸುತ್ತದೆ. ಶಿವಯೋಗ ಶಾಸ್ತ್ರಕ್ಕೆ ಬೇಕಾದ ಮೊದಲ ಘಟ್ಟವೆ ವಯಸ್ಸು. ಅದಕ್ಕೆ ಪೂರಕವಾದ ಮನಸ್ಸು ಎಂಬುದು ಇಲ್ಲಿ ಕಾಣಬಹುದಾಗಿದೆ.

ಇನ್ನೂ ಪ್ರವೇಶ ಬಯಸಿ ಬರುವ ಬಾಲಕ, ಸ್ವಇಚ್ಛೆಯಿಂದ ಬಯಸಿ ಪಾಲಕರು ಒಪ್ಪಿದಲ್ಲಿ ಕಮೀಟಿ ಪರಿಶೀಲನೆ ಮಾಡಿ ಪ್ರವೇಶ ನೀಡಬೇಕು. ಗೃಹಸ್ಥಾಶ್ರಮದಿಂದ ಬಿಡುಗಡೆ ಹೊಂದಿ ಬಂದ ಮುಮುಕ್ಷುಗಳಿಗೂ, ಸಂಸಾರಿಗಳಾಗಿರತಕ್ಕ ಬ್ರಹ್ಮಚಾರಿಗಳಾಗಿರಲು ಬಯಸಿದ ಭಕ್ತ ಮಾಹೇಶ್ವರರಿಗೂ ಶಿವಾನುಭವ ಶಾಸ್ತ್ರ ಕಲಿಯಲು ಪ್ರವೇಶ ಪಾಲನೆಯಲ್ಲಿ ಅವಕಾಶವಿದೆ ಎಂಬುದು ವಿಶೇಷ. ಸಾಮಾನ್ಯ ಪ್ರವೇಶ ಪಾಲನೆಯ ಈ ನಿಯಮಗಳನ್ನು ಅವಲೋಕಿಸಿದಾಗ ಪ್ರಮುಖವಾಗಿ ತಿಳಿದುಬರುತ್ತದೆ.

ಈ ನಿಟ್ಟನಲ್ಲಿ ಗಮನಿಸಿದಾಗ ಶ್ರೀಕುಮಾರ ಶಿವಯೋಗಿಗಳ ದೃಷ್ಟಿ ಅತ್ಯಂತ ವಿಶಾಲವಾಗಿತ್ತು ಎಂಬ ಅಂಶ ಮೇಲ್ನೋಟಕ್ಕೆ ಕಂಡುಬರುತ್ತದೆ. ಅದನ್ನು ಅವರೆ ರೂಪಿಸಿದ ಒಂದೆರಡು ಉದ್ದೇಶಗಳಿಂದ ಸ್ಪಷ್ಟೀಕರಿಸಬಹುದಾಗಿದೆ.

"ಸಾಧ್ಯವಾದ ಹಾಗೆ ಭಕ್ತ ಮಾಹೇಶ್ವರರಲ್ಲಿ ಸಂಸಾರಿಗಳಾದರೂ ಬ್ರಹ್ಮಚರ್ಯ ಪಾಲನೆ ಮತ್ತು ಮತ ತತ್ವಗಳನ್ನು ಅಭ್ಯಾಸ ಮಾಡಲಿಕ್ಕೆ ಶಿವಯೋಗಮಂದಿರದಲ್ಲಿ ಅನುಕೂಲತೆಯನ್ನು

ಮಾಡಿಕೊಡುವುದು. ಮತ್ತು ಅಧ್ಯಕ್ಷರಾದ ಸ್ವಾಮಿಗಳ ಅಥವಾ ಟ್ರಸ್ಟ ಕಮೀಟಿಯವರ ಅನುಕೂಲವರಿತು ಸಂಸಾರಿಗಳಾಗತಕ್ಕ ವೀರಶೈವ ಬ್ರಹ್ಮಚಾರಿಗಳಿಗೂ, ಭಕ್ತ ಮಾಹೇಶ್ವರರ ಮಕ್ಕಳಿಗೂ ನೈತಿಕ, ಧಾರ್ಮಿಕ, ಆಧ್ಯಾತ್ಮಿಕ ಜ್ಞಾನವಾಗುವಂತ ಶಿಕ್ಷಣ ಕೊಡುವುದು"[೪] ಈ ಉದ್ದೇಶಗಳಾದ ಭಕ್ತವರ್ಗದ ವಿದ್ಯಾರ್ಥಿಗಳಿಗೂ ಮಾಹೇಶ್ವರ ದೀಕ್ಷೆಯನ್ನಿತ್ತು ಮಠಾಧಿಪತಿಗಳನ್ನಾಗಿ ನೇಮಿಸಿ, ಸಮಾಜ ಸೇವೆಗೆ ಸಿದ್ಧಪಡಿಸಬೇಕೆಂಬ ವಿಶಾಲವಾದ ವಿಶ್ವದೃಷ್ಟಿ ಹಾನಗಲ್ಲ ಪೂಜ್ಯರಿಗೆ ಇತ್ತು ಎಂಬುದು ತಿಳಿದುಬರುತ್ತದೆ.

ಹೀಗಿರುವಾಗ ಶಿವಯೋಗಮಂದಿರದ ಪ್ರವೇಶ ಪಾಲನೆಯಲ್ಲಿ ಲಿಂಗಾಯತರಿಗೆ ಮಾತ್ರ ಅವಕಾಶ ಎಂಬುದು ಒಂದು ತಪ್ಪು ಸಂದೇಶವಾಗುತ್ತದೆ. ಜಂಗಮ ವಟುಗಳಿಗೆ ಮಾತ್ರ ಪ್ರವೇಶ ಸಿಗಬೇಕು ಎಂಬುದು ಸಮಾಜ ಬಾಂಧವರಿಗೆ ಅಸಮಾಧಾನ ತರುತ್ತಿದೆ. ಅದರಲ್ಲೂ ವೀರಶೈವ ಲಿಂಗಾಯಿತರಲ್ಲೆ ಈ ಬಗ್ಗೆ ಅಸಮಾಧಾನವಿದೆ. ಈ ಬಗ್ಗೆ ಅನೇಕ ಚರ್ಚೆಗಳು ನಡೆದಿವೆ. ಕೊನೆಯದಾಗಿ ಬೆಳಗಾವಿ ಜಿಲ್ಲಾ ಘಟಕ ಇತ್ತೀಚೆಗೆ ಈ ಪ್ರವೇಶ ಪಾಲನೆಯಲ್ಲಿ ಅನ್ಯರಿಗೂ ಅಂದರೆ "ಭಕ್ತ ಮಾಹೇಶ್ವರರಾಗಿ ನೈತಿಕ, ಧಾರ್ಮಿಕ, ಆಧ್ಯಾತ್ಮಿಕ ಜ್ಞಾನ ಬಯಸಿ ಬರುವಂತಹ ವಟುವಿಗೆ ಅವಕಾಶ ಕಲ್ಪಿಸಬೇಕೆಂಬ ಮನವಿಗೆ ಶಿವಯೋಗಮಂದಿರ ಅಧ್ಯಕ್ಷ ಮಂಡಳಿ ಒಪ್ಪಿಗೆ ನೀಡಿ ನಿಯಮಾವಳಿಯಲ್ಲಿ ಸಡಿಲಿಕೆ ಮಾಡಿದೆ."[೫] ಇದು ಸಂತೋಷದ ಸಂಗತಿಯಾಗಿದ್ದು ಮುಂದೆ ಬರುವ ಎಲ್ಲಾ ವಿಶ್ವಸ್ಥ ಮಂಡಳಿಯು ಈ ನಿಯಮವನ್ನು ತಪ್ಪದೇ ಪಾಲಿಸುವಂತಾಗಬೇಕು. ಹಾನಗಲ್ಲ ಪೂಜ್ಯರೇ ಆರಂಭದಲ್ಲಿ ಅಧ್ಯಕ್ಷ ಮಂಡಳಿಗೆ ಪ್ರಗತಿಯ ಹಿನ್ನೆಲೆಯಲ್ಲಿ ಬದಲಾವಣೆಗೆ ಅವಕಾಶ ಕೊಟ್ಟಿರುವಾಗ ಅದಕ್ಕೆ ಸಂಕುಚಿತಾರ್ಥ ಕಲ್ಪಿಸುವುದು ಸೂಕ್ತವಲ್ಲ.

ಶಿಕ್ಷಣ ನಿಂತ ನೀರಾಗದೆ ಸದಾ ನದಿಯಂತೆ ಹರಿಯಬೇಕು. ಅದು ಗುರುಕುಲದಿಂದ ಆರಂಭವಾಗಿ ಶಾಲೆಯ ಸ್ವರೂಪ ಪಡೆದಿದ್ದು ಒಂದು ಇತಿಹಾಸವಾಗಿದೆ. ಧಾರ್ಮಿಕ ಚಟುವಟಿಕೆಗಳು ವಿಸ್ತೃತಗೊಂಡಂತೆ ಸಾಂಸ್ಥಿಕ ಶಿಕ್ಷಣವೂ ಅಧಿಕಗೊಂಡದ್ದರ ತತ್ಫಲವಾಗಿ ಸಾಮಾಜಿಕ ಪ್ರಾಮುಖ್ಯತೆ ಪಡೆಯುತ್ತದೆ. ಬರಹ-ಬರವಣಿಗೆ ಅರಿವು ಶೈಕ್ಷಣಿಕ-ಕ್ಷೇತ್ರದಲ್ಲಿ ಕಾಣಿಸಿಕೊಂಡವು. ತತ್ಪರಿಣಾಮವಾಗಿ ಧಾರ್ಮಿಕ ಚಟುವಟಿಕೆ ವಿಸ್ತಾರಗೊಂಡವು.

ಬದಲಾಗುತ್ತಿರುವ ಸಮಾಜದಲ್ಲಿ ಶಾಲೆಯ ಕಲ್ಪನೆಯೂ ಬದಲಾಗಬೇಕಾಗಿದೆ. ವಿದ್ಯಾರ್ಥಿಗಳ ಅಗತ್ಯತೆಗಳಿಗೆ ಕೊರತೆ ಇರದಂತೆ ಗಮನಹರಿಸಬೇಕಾದುದು ಆಧುನಿಕ ಶಾಲೆಯ ಪ್ರಮುಖ ಗುರಿಯಾಗಿರುತ್ತದೆ. ಇಂತಹ ಆಧುನಿಕ ಶಾಲೆಯಲ್ಲಿ ಶಿಕ್ಷಕ ವರ್ಗವು ಗುಣಮಟ್ಟ ಹಾಗೂ ಆದರ್ಶಗಳನ್ನು ತೀರ್ಮಾನಿಸುವ ಶಕ್ತಿ ಕೇಂದ್ರವಾಗಿರುತ್ತಾರೆ. ಶಿಕ್ಷಕರ ವ್ಯಕ್ತಿತ್ವ, ಬೋಧನಾ

ಕ್ರಮ, ಉತ್ತಮ ಸಂಪ್ರದಾಯಗಳು, ಉತ್ತಮ ಕಲಿಕಾ ಪಠ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ ಜ್ಞಾನ, ಉತ್ತಮ ಅನುಭವ, ಮಾನಸಿಕ ದೃಢತೆ, ತರಲು ಸಾಧ್ಯವಾಗುತ್ತದೆ.

ಕಾಲ ಬದಲಾದಂತೆ ಸಮಾಜ ಮತ್ತು ಸಮಾಜ ಜೀವಿಯಾದ ಮಾನವರು ಬದಲಾಗಿದ್ದಾರೆ. ಅಂತೆಯೇ ಅವನ ಕಲಿಕಾ ವಿಧಾನ ಪದ್ಧತಿ ಸಹ ಬದಲಾಗಿದೆ. ಅಂತಹ ಪರಿವರ್ತನೆಯ ಮುಖಗಳನ್ನು ನಾವು ಶಿವಯೋಗ ಮಂದಿರದ ಸಾಧಕರ ಶಿಕ್ಷಣ ಪದ್ಧತಿಯಲ್ಲಿಯೂ ಕಾಣಬಹುದಾಗಿದೆ. ಹಾನಗಲ್ಲ ಕುಮಾರಸ್ವಾಮಿಗಳ ಸ್ವಾನುಭವ, ಪರಿಸ್ಥಿತಿಯ ವಿಚಾರಗಳು, ತಮ್ಮ ತಮ್ಮ ಸಂಪರ್ಕಕ್ಕೆ ಬಂದ ಗುರುಸಮಾನರ ಸಲಹೆ, ಮಾರ್ಗದರ್ಶನ, ಸಮಾಜದ ತೀವ್ರ ಒತ್ತಾಯ ಇಂಥವುಗಳ ಪರಿಣಾಮವಾಗಿ ಶಿವಯೋಗ ಮಂದಿರದಂತಹ ವಿದ್ಯಾಪೀಠವೊಂದು ಸ್ಥಾಪಿತವಾಗುತ್ತದೆ.

೨. ಪಠ್ಯಕ್ರಮ-ಪಾಠಕ್ರಮ-ಪರೀಕ್ಷಾಕ್ರಮ

ಶಿವಯೋಗ ಮಂದಿರದ ಆಶಯವೆಂದರೆ ಪರಂಪರಾಗತವಾಗಿ ನಡೆದು ಬಂದ ರೂಢಿಗತ ಮೌಲ್ಯಗಳನ್ನು ಸಂರಕ್ಷಿಸುವುದು. ಈ ನಿಟ್ಟಿನಲ್ಲಿ ನಿಷ್ಠ ಗುರು ಪರಂಪರೆಯನ್ನು ಸೃಷ್ಟಿಸುವುದಾಗಿತ್ತು. ಈ ಎಲ್ಲಾ ಅಂಶವನ್ನು ಲೋಕಸಂಚಾರದಿಂದ ಅರಿತಿದ್ದ ಹಾಲಯ್ಯನವರು, ಬಾಗಲಕೋಟೆಯ ವೀರಶೈವ ಮಹಾಸಭೆಯ ಮಹಾಸಭೆಯ ಮೂಲಕ, ನಂತರದಲ್ಲಿ ತ್ವರಿತವಾಗಿ, ಗಂಭೀರವಾಗಿ ಚಿಂತಿಸಿ, ಸಮಾಜದ ಗಣ್ಯಾತೀತ ಗಣ್ಯರಲ್ಲಿ ಚರ್ಚಿಸಿ, ಬಾದಾಮಿಯ ನೆಲೆಯಲ್ಲಿ ಶಿವಯೋಗಿಗಳ ಮಾರ್ಗದರ್ಶನದಲ್ಲಿ ಧಾರ್ಮಿಕ ವಿದ್ಯಾಲಯದ ಅನುಷ್ಠಾನಕ್ಕೆ ಕಾರಣೀಭೂತರಾಗುತ್ತಾರೆ.

"ಧಾರ್ಮಿಕ ಶಿಕ್ಷಣ ಮತ್ತು ಧರ್ಮಗುರುಗಳಿಗೆ ಸಂಸ್ಕಾರ ಇವು ಶಿವಯೋಗ ಮಂದಿರದಲ್ಲಿನ ಶಿಕ್ಷಣ ಪದ್ಧತಿಯ ಎರಡು ಕಣ್ಣುಗಳಾಗಿ ಭವಿಷ್ಯದಲ್ಲಿ ಹುಟ್ಟಿ ಬರುವ ಕಂದಮ್ಮಗಳಿಗೆ ಸೂಕ್ತ ಅರಿವಿನ ದೃಷ್ಟಿ ಕೊಡುವ ಶಕ್ತಿ ಮೂರ್ತಿಗಳನ್ನು ರೂಪಿಸುವ ಯುಗಪುರುಷರ ನೆಲೆಯಾಗಿದೆ." ಎಂದು ಜ.ಚ.ನಿಯವರು ಅಭಿಪ್ರಾಯಪಡುತ್ತಾರೆ. 'ಧಾರ್ಮಿಕ ಗುರುಕುಲ' ದಕ್ಷಿಣದಲ್ಲಿ ಬನಶಂಕರಿ, ಉತ್ತರಕ್ಕೆ ಗಿಡ ಮಾಗಡಿಪುರವೆಂದು ಕರೆಸಿಕೊಂಡ ಮಹಾಕೂಟ, ಪೂರ್ವಕ್ಕೆ ಸಿದ್ಧನಕೊಳ್ಳ, ಪಶ್ಚಿಮಕ್ಕೆ ನಾಗನಾಥ ದೇವಾಲಯ, ಸುತ್ತ ಗಿರಿಗಳ ಕೋಟೆ, ಪೂರ್ವದಲ್ಲಿ ಉತ್ತರಾಭಿಮುಖವಾಗಿ ಹರಿಯುವ ಮಲಪಹಾರಿ ನದಿ-ಇವುಗಳ ಮಧ್ಯದಲ್ಲಿ ವಿಜೃಂಭಿಸುವ ಶಿವಯೋಗ ವಿದ್ಯಾಮಂದಿರ, ಇಲ್ಲಿನ ವಟು, ಸಾಧಕರಿಗೆ ಗುರುಕುಲ ಮಾದರಿಯಲ್ಲಿ ಆರಂಭವಾದ ಶಿಕ್ಷಣ ಇಂದು ಆಧುನಿಕ ಶಾಲಾ ಮಾದರಿಯವರೆಗೆ ಸಾಗಿ ಬಂದಿದೆ.

ಬಾಗಲಕೋಟೆಯ ಮಹಾಸಭೆಯ ಅಧ್ಯಕ್ಷತೆ ವಹಿಸಿದ್ದ ಲಖಮನಗೌಡ ಬಸವಪ್ರಭು ಸರದೇಸಾಯಿ ತಮ್ಮ ಅಧ್ಯಕ್ಷೀಯ ನುಡಿಯಲ್ಲಿ ವಟುಗಳಾಗುವವರ ಕುರಿತು, ಗಂಭೀರವಾಗಿ

ಆಡಿದ ಮಾತುಗಳಾದ "ಚಿಕ್ಕಂದಿನಲ್ಲಿ ವಿರಕ್ತರನ್ನು ಮಾಡಿದರೆ, ಆಗ ಅವರು ಅಶಿಕ್ಷಿತರಾಗಿಯೂ, ತಮ್ಮ ಆಶ್ರಮದ ಮಹಿಮೆಯನ್ನ ಅರಿಯದವರೂ ಆಗಿ ಭಾವೀ ವರ್ತಮಾನದ ವಿಷಯವಾಗಿ ಅಜ್ಞಾನಿಗಳೂ ಆಗಿರುವುದರಿಂದ, ಇಚ್ಚಿತ ಫಲವು ಸಮಾಜಕ್ಕೆ ದೊರೆಯುವ ಆಶೆಯು ತೀರ ಕಡಿಮೆಯಾಗಿ ಮತ್ತೆ ಸಮಾಜ ದುಸ್ಥಿತಿಗೆ ಹೋಗಬಹುದು" ಎಂಬ ಮಾತು ವಟು, ಸಾಧಕರಾಗಿ ಬರುವವರಿಗೆ ಕನಿಷ್ಠ ವಿದ್ಯಾಭ್ಯಾಸ, ಸಮಾಜದ ಕಲ್ಪನೆ ಜೊತೆಗೆ ಅಗತ್ಯ ವಿಷಯ, ವಿದ್ಯಮಾನಗಳ ಅಲ್ಪ ಅರಿವು ಬೇಕೆಂಬ ಸಲಹೆ ನೀಡಿದ್ದಾರೆನಿಸುತ್ತದೆ. ಅದರಂತೆಯೇ ಶಿವಯೋಗ ಮಂದಿರದಲ್ಲಿ ಪ್ರವೇಶಕ್ಕೆ ಕನಿಷ್ಠ ೮ ವರ್ಷ ಗರಿಷ್ಠ ೧೨ ವರ್ಷದೊಳಗಿನವರನ್ನು ಮಾತ್ರ ಆಯ್ಕೆ ಮಾಡುವ ಪದ್ಧತಿ ಜಾರಿಗೆ ತಂದಂತೆ ಕಾಣುತ್ತದೆ. ಇಲ್ಲಿ ಪ್ರವೇಶ ಬಯಸಿ ಶಿಕ್ಷಣ ಪಡೆಯುವವರನ್ನು ಎರಡು ವರ್ಗವಾಗಿ ವಿಂಗಡಿಸಲಾಗುತ್ತದೆ.

೧. ವಟುಗಳು

೨. ಸಾಧಕರು

೧. ವಟುಗಳೆಂದರೆ: ೮ ರಿಂದ ೧೨ ವರ್ಷದೊಳಗಿನವರು, ಇವರು ಬಿಳಿಕಪನಿ, ಕಿವಿಟೊಪ್ಪಿಗೆ ಧರಿಸುತ್ತಾರೆ ಇವರ ನಾಮಭಿದಾನದ ಮುಂದೆ 'ಆರ್ಯ' ಎಂದು ಸೇರಿಸಿ ಹೆಸರಿಸುತ್ತಾರೆ.

೨. ಸಾಧಕರು: ೧೨ ವರ್ಷ ಮೇಲ್ಪಟ್ಟವರನ್ನು ಸಾಧಕರೆಂದು ಕರೆಯುತ್ತಾರೆ. ಇವರು ಕಾವಿಯ ಮಹಾಲಿಂಗ ಕಪನಿ, ತಲೆಗೆ ಮಸ್ತಕಪಾವಡ ಸುತ್ತಿರುತ್ತಾರೆ. ಇವರ ಹೆಸರಿನ ಮುಂದೆ 'ದೇವರು' ಎಂಬ ಅಭಿನಾಮವಿರುತ್ತದೆ. ಜೊತೆಗೆ ಕಾಲಿಗೆ ಉಂಗುಟದ ಹಾವಿಗೆ ಧರಿಸುತ್ತಾರೆ. ದೀಕ್ಷಾವಿಧಿ ಪಡೆದು ಆಚಾರವಂತರಾಗಿದ್ದು ಕಿರಿಯ ವಟುಗಳಿಗೆ ಮಾದರಿಯಾಗಿರುತ್ತಾರೆ.

"ಶಿವಯೋಗ ಮಂದಿರದ ಶಿಕ್ಷಣ ಪದ್ಧತಿಯ ದಿನಚರಿಯ ಅತ್ಯಂತ ಮಹತ್ವ ಪೂರ್ಣವಾಗಿದ್ದು ಬೆಳಿಗ್ಗೆ ೪ ಗಂಟೆಯಿಂದ ಇವರ ಅಭ್ಯಾಸಕ್ರಮ ಆರಂಭವಾಗುತ್ತದೆ."[೮] (ಇಂದು ಕೂಡ ಆಧುನಿಕ ಶಿಕ್ಷಣ ಅಳವಡಿಕೆ ಆಗಿದ್ದರೂ ಪೂರ್ವದ ಪದ್ಧತಿ ಬಿಟ್ಟಿಲ್ಲ.)

ವೇಳಾಪಟ್ಟಿ	**ಬೆಳಗಿನ ಅವಧಿ**
೪.೦೦ ಗಂಟೆಗೆ	ಸಾಧಕರು ಏಳುವುದು
೫.೦೦ ಗಂಟೆಗೆ	ವಟುಗಳು ಏಳುವುದು
೪.೦೦ ರಿಂದ ೪.೧೫ಕ್ಕೆ	ಸಾಧಕರ ಸಾಮೂಹಿಕ ಪ್ರಾರ್ಥನೆ
೫ ರಿಂದ ೫.೧೫ಕ್ಕೆ	ವಟುಗಳ ಸಾಮೂಹಿಕ ಪ್ರಾರ್ಥನೆ
೪.೧೫ ರಿಂದ ೬	ವಟುಗಳ ಅಧ್ಯಯನ

೬ ರಿಂದ ೬.೩೦ ಶೌಚಾದಿ ನಿತ್ಯಕರ್ಮ

೬.೩೦ ರಿಂದ ೭ ಯೋಗಾಸನದ ಅಭ್ಯಾಸ

೭ ರಿಂದ ೯.೩೦ ಪಾಠ ಪ್ರವಚನಗಳು

೯.೩೦ ರಿಂದ ೧೧ ಸ್ನಾನ ಲಿಂಗಪೂಜೆ

೧೧ ರಿಂದ ೧೨ ಪ್ರಸಾದ (ಅರ್ಪಿತ)

೧೨ ರಿಂದ ೨ ವಿಶ್ರಾಂತಿ

ಮಧ್ಯಾಹ್ನ

೨ ರಿಂದ ೪.೩೦ ಪ್ರವಚನ

೪.೩೦ ರಿಂದ ೫ ವಿಶ್ರಾಂತಿ, ನಿತ್ಯಕರ್ಮ

೫ ರಿಂದ ೫.೩೦ ಪುರಾಣ, ಆಲಿಸುವುದು, ಸಂಗೀತ ಅಭ್ಯಾಸ

೫.೩೦ ರಿಂದ ೬.೩೦ ಸ್ವಚ್ಛತೆ, ಸೇವಾಕಾರ್ಯ, ಗಿಡ ಬೆಳೆಸುವುದು ಇತ್ಯಾದಿ

ಸಂಜೆ

೬.೩೦ ರಿಂದ ೭ ಸಾಮೂಹಿಕ ಪ್ರಾರ್ಥನೆ

೭ ರಿಂದ ೯ ಸ್ನಾನ, ಪೂಜೆ, ಪ್ರಸಾದ

೯ ರಿಂದ ೧೦ ಅಧ್ಯಯನ

೧೦ ರಿಂದ ವೈಯಕ್ತಿಕ ಪ್ರಾರ್ಥನೆಯೊಂದಿಗೆ ಮಲಗುವುದು.

ಹೀಗೆ ಆರಂಭದಿಂದಲೂ ಇದೇ ರೀತಿ ವೇಳಾ ಪಟ್ಟಿ ಇದ್ದು ಅದರಂತೆ ಎಲ್ಲರೂ ನಡೆಯಬೇಕಾಗಿದೆ. ಜೊತೆಗೆ ಅಭ್ಯಾಸ ಪಠ್ಯವಾಗಿ, ವ್ಯಾಕರಣ, ಯೋಗ, ವಚನಗಳು, ನ್ಯಾಯ, ಶರಣರ ಜೀವನ ಚರಿತ್ರೆ, ಮೀಮಾಂಸೆ, ಸಂಸ್ಕೃತ, ಕಾವ್ಯ, ಸಾಹಿತ್ಯ ವೇದ, ಶರಣರ ಪುಣ್ಯ ಸ್ಮರಣೆ, ಆಗಮಗಳು, ಉಪನ್ಯಾಸಗಳು, ಉಪನಿಷತ್ತು, ಪ್ರವಚನ ಮಾಡುವುದು, ಕನ್ನಡ ಶಿಕ್ಷಣ, ಸಂಸ್ಕೃತ ಶಿಕ್ಷಣ. ಹೀಗೆ ಇಲ್ಲಿ ಅಭ್ಯಾಸ ಪಠ್ಯವಾಗಿ ಅನುಭಾವದ ಸುಧೆಗಳಾಗಿ, ಅನುಭಾವದ ಚಟುವಟಿಕೆಗೆ ವಿಷಯವಾಗಿದ್ದವು. ಇವುಗಳನ್ನು ಅಭ್ಯಾಸ ಮಾಡಿ ಕಂಠಪಾಠ ಮಾಡಿ ಓದಿ ಪರೀಕ್ಷೆ ಕಟ್ಟಲು ಪುಣೆಯ ಕೇಂದ್ರಕ್ಕೆ ಹೋಗಬೇಕಾಗುತ್ತಿತ್ತು. ಇದರಿಂದ ಆಗುವ ಹೊರೆಯನ್ನು ನಂತರದಲ್ಲಿ ತಪ್ಪಿಸಿ ಹುಬ್ಬಳ್ಳಿಯ ಮೂರುಸಾವಿರ ಮಠದಲ್ಲಿ ಶ್ರೀ ಜಗದ್ಗುರು ಗಂಗಾಧರ ಸಂಸ್ಕೃತ ಕಾಲೇಜಿನಲ್ಲಿ ಪರೀಕ್ಷಾ ಕೇಂದ್ರ ಆರಂಭಿಸಲಾಯಿತು. ಇದನ್ನು ಮುಂದೆ ಮೈಸೂರಿಗೆ ವರ್ಗಾಯಿಸಲು ಚಿಂತನೆ ನಡೆದವು. ಆದರೆ ಪ್ರಸ್ತುತ ರಾಜ್ಯ ಸರ್ಕಾರ ನಿಯೋಜಿಸಿದ ಶಿಕ್ಷಣ ಮಾದರಿಯಲ್ಲಿ ಬೋಧನೆ ಆರಂಭಿಸಿದ್ದಾರೆ. ಮಂದಿರದಲ್ಲೆ ಶಾಲೆ ಸ್ಥಾಪಿಸಿ ಪರೀಕ್ಷೆ ನಡೆಸುವ

ಪದ್ಧತಿ ಜಾರಿಗೆ ತರಲಾಗಿದೆ. ಇದರಿಂದಾಗಿ ಸಾಧಕರಿಗೆ ಲಭ್ಯವಾಗಬೇಕಾದ ಗುಣಮಟ್ಟದ ಶಿಕ್ಷಣದ ಕೊರತೆ ಎದ್ದು ಕಾಣುತ್ತಿದೆ.

ಕೇವಲ ವಿದ್ಯೆಗೆ ಅನುಕೂಲವನ್ನು ಒದಗಿಸುವುದಷ್ಟೆ ಶಿವಯೋಗಮಂದಿರದ ಉದ್ದೇಶವಾಗಿರದೆ ಧರ್ಮದ ತಿಳುವಳಿಕೆಯನ್ನು, ಧಾರ್ಮಿಕ, ಸಾಹಿತ್ಯಿಕ ಜ್ಞಾನವನ್ನು ನೆಲೆಗಳಿಸುವುದು. ಈ ಅಂಶಗಳು ಶಿವಯೋಗ ಮಂದಿರದ ಸ್ಥಾಪನಾ ಕಾಲದಲ್ಲಿ ರೂಪಿಸಿದ ಉದ್ದೇಶೋಪಾಯಗಳು ಪ್ರಣಾಳಿಕೆಯಲ್ಲಿದ್ದವು ಎಂಬುದನ್ನು ಈ ಕೆಳಗಿನ ಅಂಶಗಳಿಂದ ತಿಳಿಯಬಹುದುದಾಗಿದೆ.[೯]

೧. ಮಂದಿರದಲ್ಲಿ ಒಂದು ಗ್ರಂಥಾಲಯ ಸ್ಥಾಪಿಸಿ ಅದರಲ್ಲಿ ಸ್ವಮತ ಪರಮತ ಗ್ರಂಥಗಳನ್ನು ವಿಶೇಷವಾಗಿ ಸಂಗ್ರಹಿಸಿ, ಶಿವಯೋಗ ಮಂದಿರಕ್ಕೆ ಬಂದವರು ಗ್ರಂಥಗಳ ಮೂಲಕ ಅಥವಾ ಶಾಸ್ತ್ರಗಳ ಮೂಲಕ ಅಥವಾ ಚರ್ಚೆಯ ಮೂಲಕ ಧರ್ಮಸಂಬಂಧವಾದ ತಮ್ಮ ಆಶಯಗಳನ್ನು ಈಡೇರಿಸಿಕೊಳ್ಳುವಂತೆ ಮಾಡುವುದು.

೨. ಉಪನ್ಯಾಸಕರನ್ನು ಸರ್ವತ್ರ ಕಳುಹಿಸಿ ಅವರ ಧಾರ್ಮಿಕ ವ್ಯವಹಾರ ವಿಷಯಗಳ ಸುಧಾರಣೆಯನ್ನು ಕುರಿತು ವೀರಶೈವ ಮಂಡಳಿಗೆ ಬೋಧಿಸುವಂತೆ ಮಾಡುವುದು.

೩. ವೀರಶೈವ ಧರ್ಮಶಾಸ್ತ್ರವು ಸಂಸ್ಕೃತ ಭಾಷೆಯಲ್ಲಿ ವಿಶೇಷವಾಗಿರುವುದರಿಂದ ಅದರ ಭಾಷಾಂತರವೂ ಸುಲಭವಾಗಿ ತಿಳಿಯುವಂತೆ ದೇಶಿಯ ಭಾಷೆಗಳಲ್ಲಿ ಗ್ರಂಥಗಳನ್ನು ಮುದ್ರಿಸಿ ಅಲ್ಪ ಬೆಲೆಯಿಂದ ಎಲ್ಲರಿಗೂ ಸಿಗುವಂತೆ ಪ್ರಯತ್ನ ಮಾಡುವುದು.

೪. ವೀರಶೈವ ಧರ್ಮ ಗ್ರಂಥಗಳ ಅಭ್ಯಾಸವನ್ನು ಪ್ರಚಾರದಲ್ಲಿ ತರಬೇಕಾದುದರಿಂದ ಧರ್ಮ ಗ್ರಂಥಗಳ ಪರೀಕ್ಷೆಯನ್ನಿಟ್ಟು ಅದರಲ್ಲಿ ತೇರ್ಗಡೆ ಹೊಂದಿದವರಿಗೆ ಬಹುಮಾನಗಳನ್ನು ಕೊಟ್ಟು ಉತ್ತೇಜನ ಕೊಡುವುದು. ಉಳಿದಂತೆ ಪಠ್ಯೇತರ ಚಟುವಟಿಕೆಯಾಗಿ ಅಂದರೆ ಶಿಕ್ಷಣೇತರ ಚಟುವಟಿಕೆಯಾಗಿ ಇಲ್ಲಿ ಹಲವಾರು ವಿಷಯವನ್ನು ಕಲಿಸಲಾಗುತ್ತಿತ್ತು. ಅವುಗಳೆಂದರೆ ಕೈತೋಟ ನಿರ್ಮಾಣ, ಚರ್ಚಾಕೂಟ, ಲೇಖನ ಬರೆಯುವುದು, ಲಲಿತ ಕಲೆಗಳು, ಸೇವಾಕಾರ್ಯ, ಶೂಶ್ರೂಷೆ, ನಿಸರ್ಗ ಜೀವನ, ದೇಶಿ ಆಟಗಳು, ಆಸನ ಹಾಕುವ ಸ್ಪರ್ಧೆ, ವಾಚನ ಸ್ಪರ್ಧೆ, ಕಂಠಪಾಠ ಸ್ಪರ್ಧೆ, ಶಾರೀರಿಕ ಶಿಕ್ಷಣ, ಲೇಖನ ಕಲೆ ಇಲ್ಲಿ ಕೇವಲ ಧಾರ್ಮಿಕ ಶಿಕ್ಷಣವಲ್ಲದೆ ವ್ಯಕ್ತಿತ್ವ ವಿಕಾಸ, ವಿಕಾಸಾತ್ಮಕ ಬೆಳವಣಿಗೆಯ ಶಿಕ್ಷಣವನ್ನು ಪೂರ್ವದ ಶಿಕ್ಷಣ ಪದ್ಧತಿಯಲ್ಲಿ ಅಳವಡಿಸಲಾಯಿತು.

ಒಟ್ಟಿನಲ್ಲಿ ಶಿವಯೋಗಮಂದಿರದ ಶಿಕ್ಷಣ ಕೇವಲ ಓದು-ಬರಹ, ಪೂಜೆ-ಪುನಸ್ಕಾರಗಳಿಗೆ ಮೀಸಲಾಗಲಿಲ್ಲ. ಕಾಯಕ ವ್ಯವಸ್ಥೆಗೆ ಆದ್ಯತೆ ನೀಡಿತು. ವಿದ್ಯಾರ್ಥಿಗಳು ಶಿವಾನುಭವವನ್ನು ಕುರಿತು ಚರ್ಚಿಸುತ್ತಿದ್ದರು. ಪುರಾಣಗಳ ಅರ್ಥ ವಿವರಿಸುವ ಕಲೆಯನ್ನು ಕಲಿಸಿಕೊಡಲಾಗುತ್ತಿತ್ತು.

ಈ ಸಂಗತಿಯನ್ನೆಲ್ಲ ಬಿದರಿ ಸವದತ್ತಿ ಅಪ್ಪಯ್ಯ ಸ್ವಾಮಿಗಳು ತಮ್ಮ ಶಿಷ್ಯರಲ್ಲಿ, ಮಿತ್ರರಲ್ಲಿ ಹೇಳಿಕೊಂಡಿದ್ದಾರೆಂದು ಸುಕುಮಾರ ಪತ್ರಿಕೆಯು ೧೯೫೫ರ ಸಂಚಿಕೆ ೮-ಸಂಪುಟ ೩ರಲ್ಲಿ ಮಂದಿರದ ಶಿಷ್ಯರೊಬ್ಬರು ಬರೆದ ಲೇಖನದಿಂದ ತಿಳಿದುಬರುತ್ತದೆ. ಗುರು-ಶಿಷ್ಯರು ಪ್ರಾಧ್ಯಾಪಕರು ಒಂದೇ ಕುಟುಂಬದವರಂತೆ ಮಂದಿರದಲ್ಲಿ ನೆಲೆಸಿ ಕಲಿಯುತ್ತಿದ್ದರು. ಬೋಧಕರು ಶ್ರದ್ಧೆಯಿಂದ ಕಲಿಸುತ್ತಿದ್ದರು.

ಶಿವಯೋಗ ಮಂದಿರದ ಮೂಲಭೂತ ಉದ್ದೇಶಕ್ಕೆ ಅನುಸಾರವಾಗಿ ಅದರಲ್ಲೂ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹೆಚ್ಚು ಪ್ರಾಧಾನ್ಯತೆ ನೀಡಿದೆ. ಶಿವಯೋಗ ಮಂದಿರದ ಸ್ಥಾಪಕರಾಗಿ ನಂತರದಲ್ಲಿ ಸಂಸ್ಕೃತ ಅಧ್ಯಾಪಕರೂ ಆದ ಹಾನಗಲ್ಲ ಕುಮಾರಸ್ವಾಮಿಗಳು, ಮಂದಿರದ ಆರಂಭದಲ್ಲಿ ಅಧ್ಯಾಪಕರಾಗಿದ್ದ "ಇಟಗಿಯ ಸೋಮನಾಥಶಾಸ್ತ್ರಿಗಳು, ಉಮಚಗಿಯ ಶಂಕರಶಾಸ್ತ್ರಿಗಳಂತವರೊಂದಿಗೆ ಚರ್ಚಿಸಿ ಮಂದಿರದ ವಟು ಸಾಧಕರಿಗಾಗಿ ಯೋಚಿತವಾದ ಪಠ್ಯಕ್ರಮ ರೂಪಿಸಿ ಜಾರಿಗೆ ತಂದರು. ಇದನ್ನು ೧೯೧೩ ರಲ್ಲಿ ಆರಂಭಿಸಲಾಗಿತ್ತು ಎಂದು ತಿಳಿಸಲಾಗಿದೆ."[೯] ಅವು ಇಂತಿವೆ.

ಶಿವಯೋಗ ಮಂದಿರದ ನಂತರದ ಶಿಕ್ಷಣ ಪದ್ಧತಿಯ ಪಠ್ಯಕ್ರಮ ಹಾಗೂ ಅಭ್ಯಾಸಿಸತಕ್ಕ ಪಠ್ಯ ಗ್ರಂಥಗಳು ಈ ಕೆಳಗಿನಂತಿದ್ದು ಅದನ್ನು ಎರಡು ಭಾಗವಾಗಿ ವಿಂಗಡಿಸಲಾಗಿದೆ.

೧. ಸಂಸ್ಕೃತ ಪರೀಕ್ಷೆಗಳು

ಪತ್ರಿಕೆ-೧. ಆದ್ಯ

ಪಠ್ಯ ಗ್ರಂಥಗಳು

೧. ಅನುಭವ ಸೂತ್ರ-ಮಗ್ಗೆಯ ಮಾಯಿದೇವ ಕೃತ

೨. ಸ್ಪಂದಕಾರಿಕಾ-ವಸುಗುಪ್ತ ಕೃತ-ರಾಮಕಂಠಾಚಾರ್ಯನ ವೃತ್ತಿ ಸಹಿತ

೩. ತತ್ವ ಪ್ರಕಾಶಿಕಾ-ಭೋಜದೇವ ಕೃತ, ಪರ್ವತೇಶನ ಕನ್ನಡ ಟೀಕೆಸಹಿತ

೪. ಈಶ್ವರ ಪ್ರತ್ಯಾಭಿಜ್ಞಾ ಹೃದಯ-ಕ್ಷೇಮರಾಜಿನ ಕೃತ

೫. ಪಂಚದಶಿ-ವಿದ್ಯಾರಣ್ಯ ಕೃತ

ಪತ್ರಿಕೆ-೨. ಮಧ್ಯಮ

ಪಠ್ಯ ಗ್ರಂಥಗಳು

೧. ಶಿವಸೂತ್ರ ವಿಮರ್ಶಿನಿ

೨. ಲಿಂಗಧಾರಣ ಚಂದ್ರಿಕಾ

೩. ಸಿದ್ಧಾಂತ ಶಿಖಾಮಣಿ-ರೇಣುಕಾಗಸ್ತ್ಯ ಸಂವಾದ-ಶಿವಯೋಗಿ ಶಿವಾಚಾರ್ಯಕೃತ

೪. ನ್ಯಾಯ ಸಿದ್ಧಾಂತ ಮುಕ್ತಾವಲಿ-ವಿಶ್ವನಾಥ ಪಂಚಾನ ಕೃತ

೫. ಶ್ರೀಕರ ಭಾಷ್ಯ

ಪತ್ರಿಕೆ-೩. ಉತ್ತಮ

ಪಠ್ಯ ಗ್ರಂಥಗಳು

೧. ಕ್ರಿಯಾಸಾರ-ನೀಲಕಂಠ ಶಿವಾಚಾರ್ಯಕೃತ ಪ್ರಥಮದ ನಾಲ್ಕು ಪರಿಚ್ಛೇದಗಳು

೨. ಶಾಂಕರಭಾಷ್ಯ ಅಧ್ಯಾಯ-೨

೩. ಶಿವಾದ್ವೈತ ಮಂಜರಿ-ಸುಪ್ರಭಾನಂದ ಶಿವಾಚಾರ್ಯ ಕೃತ

೪. ಬ್ರಹ್ಮಾದ್ವೈತ ಮಂಜರಿ-ಅದ್ವೈತ ಸಿರಿ ಮಧೂಸೂಧನ ಸರಸ್ವತೀ ಕೃತ

೫. ರಾಮಾನುಜಾಚಾರ್ಯರ ಶ್ರೀಭಾಷ್ಯ (ವಿಶಿಷ್ಟಾದ್ವೈತ)

೬. ಮಧ್ವಾಚಾರ್ಯರ ಪೂರ್ಣಪ್ರಜ್ಞಭಾಷ್ಯ (ದ್ವೈತ ಮತ)

೨. ಕನ್ನಡ ಪರೀಕ್ಷೆಗಳು

ಹಾನಗಲ್ಲ ಕುಮಾರ ಸ್ವಾಮಿಗಳು ಶಿವಯೋಗಮಂದಿರದಲ್ಲಿ ಸಾಧಕರಿಗೆ ಕೇವಲ ಸಂಸ್ಕೃತ ಭಾಷೆ ಕಲಿಸದೆ ಕನ್ನಡವನ್ನು ಕಲಿಸಿದರು. ಕನ್ನಡವೆಂದರೆ ಅಸಡ್ಡೆ ತೋರುತ್ತಿದ್ದ ಆಂಗ್ಲರ ಕಾಲಾವಧಿಯಲ್ಲೂ ಕನ್ನಡ, ಸಂಸ್ಕೃತ, ಇಂಗ್ಲೀಷ್ ಭಾಷೆಗಳ ಪ್ರೌಢ ಅಧ್ಯಯನಕ್ಕೆ ಶಿವಯೋಗ ಮಂದಿರದ ವಿದ್ಯಾಲಯದಲ್ಲಿ ಅವಕಾಶ ಕಲ್ಪಿಸಿದರು.

ಪತ್ರಿಕೆ - ೧. ಆದ್ಯ

ಪಠ್ಯ ಗ್ರಂಥಗಳು

೧. ಅಖಂಡೇಶ್ವರ ವಚನ, ಷಣ್ಮುಖ ಶಿವಯೋಗಿ, ಅಖಂಡೇಶ್ವರ ವಚನಶಾಸ್ತ್ರ

೨. ಬಸವೇಶ್ವರ ಷಟ್‌ಸ್ಥಲ ವಚನ, ಮರಿಶಂಕರದೇವರು

೩. ನಿಜಾಚರಣೆಯ ಕಟ್ಟು

೪. ಕೈವಲ್ಯ ಪದ್ಧತಿ, ನಿಜಗುಣ ಶಿವಯೋಗಿ ರಚಿತ

೫. ಷಟ್‌ಸ್ಥಲ ಸಿದ್ಧಾಂತ

(ಶಿವಾನುಭವ ದರ್ಪಣಂ, ಲಿಂಗಾಪೂಜಾ ವಿಧಾನ, ಮೈಲಾರದ ಬಸವಲಿಂಗ ಶರಣರ ನಾಲ್ಕು ವಚನಗಳು)

ಪತ್ರಿಕೆ - ೨. ಮಧ್ಯಮ

ಪಠ್ಯ ಗ್ರಂಥಗಳು

೧. ಶತಪಂಚಕ

೨. ವಿವೇಕ ಚಿಂತಾಮಣಿ-ನಿಜಗುಣ ಶಿವಯೋಗಿ ರಚಿತ (ನಾಲ್ಕು ಒಂಬತ್ತನೆ ಪ್ರಕರಣ)

೩. ಸಿದ್ದೇಶ್ವರ ಪುರಾಣ-ಮರಿತೋಂಟದಾರ್ಯ ಕೃತ

೪. ಪರಮಾನುಭವ ಬೋಧೆ-ನಿಜಗುಣ ಶಿವಯೋಗಿ ವಿರಚಿತ

೫. ಪರಮಾರ್ಥ ಪ್ರಕಾಶಿಕೆ-ನಿಜಗುಣ ಶಿವಯೋಗಿ ರಚಿತ

ಪತ್ರಿಕೆ – ೩. ಉತ್ತಮ

ಪಠ್ಯ ಗ್ರಂಥಗಳು

೧. ವೃಷಭೇಂದ್ರವಿಜಯ–ಷಡಕ್ಷರದೇವ ವಿರಚಿತ

೨. ಚನ್ನಬಸವೇಶ್ವರ ಪುರಾಣ–ವಿರೂಪಾಕ್ಷ ಪಂಡಿತ ವಿರಚಿತ

೩. ರಾಜಶೇಖರವಿಳಾಸ, ಷಡಕ್ಷರದೇವ ವಿರಚಿತ–ಕನ್ನಡ ಟೀಕೆ ಅಳಗಿ ಸಿಂಗರಯ್ಯ

೪. ಅನುಭವಸಾರ, ನಿಜಗುಣಶಿವಯೋಗಿ ವಿರಚಿತ

೫. ಶತಕತ್ರಯ, ಮಗ್ಗೆಯ ಮಾಯಿದೇವ ಕೃತ

೬. ಪಂಚದಶಿ (ಕನ್ನಡ) ಅಥವಾ ಯೋಗ ವೈಶಿಷ್ಟ್ಯ

ಹೀಗೆ ನಂತರದ ದಿನದಲ್ಲಿ ಜಾರಿಗೆ ತಂದಂತಹ ಈ ಹೊಸ ಮಾದರಿ ಪಠ್ಯಕ್ರಮವು ತನ್ನದೇ ಪರೀಕ್ಷಾ ಪದ್ಧತಿಯನ್ನು ಒಳಗೊಂಡಿತ್ತು. ಇಲ್ಲಿ ಮುಖ್ಯವಾಗಿ ಸಂಸ್ಕೃತ,–ಕನ್ನಡ ಎಂಬ ಎರಡು ಪತ್ರಿಕೆಗಳಿದ್ದು. ಸಂಸ್ಕೃತ ಪತ್ರಿಕೆಯಲ್ಲಿ ಮೊದಲನೆ ಪತ್ರಿಕೆ 'ಆದ್ಯ' ಎಂಬುದಾಗಿತ್ತು. ಇದರಲ್ಲಿ "ಐದು" ಅಂಶಗಳನ್ನು ಓದಿಕೊಂಡು ಪರೀಕ್ಷೆ ಬರೆಯುವ ಪದ್ಧತಿ ಇತ್ತು. ಈ ಐದು ಗ್ರಂಥಗಳು ಒಟ್ಟಿಗೆ ಓದಿಕೊಂಡು ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯನ್ನು ಪಡೆದವರಿಗೆ ೪೪ ರೂಪಾಯಿಗಳ ಬಹುಮಾನ ನೀಡಲಾಗುತ್ತಿತ್ತು. ಎರಡನೇ ಹಾಗೂ ಮೂರನೇ ಪತ್ರಿಕೆಯಾಗಿ ಮಧ್ಯಮ, ಉತ್ತಮ ಎಂಬ ಪತ್ರಿಕೆಗಳಿದ್ದು ಇದನ್ನು ಕೂಡ ಓದಿಕೊಂಡು ಪರೀಕ್ಷೆ ಬರೆದು ಪಾಸಾದವರಿಗೆ ಅನುಕ್ರಮವಾಗಿ ಪ್ರಥಮ ಶ್ರೇಣಿಯವರಿಗೆ ೫೭ ರೂಪಾಯಿ ಪಾರಿತೋಷಕವನ್ನು ಮಧ್ಯಮ ಪತ್ರಿಕೆಗೂ, ಉತ್ತಮ ಪತ್ರಿಕೆಯಲ್ಲಿ ಪ್ರಥಮ ಶ್ರೇಣಿಗೆ ೧೦೧ ರೂಪಾಯಿಗಳ ಪುರಸ್ಕಾರ ನೀಡುತ್ತಿದ್ದರು.

"ಸಂಸ್ಕೃತ ಪರೀಕ್ಷೆಯ ಈ ಮೂರು ಪತ್ರಿಕೆಯಾದ ಆದ್ಯ, ಮಧ್ಯಮ, ಉತ್ತಮ ಪರೀಕ್ಷೆಯಲ್ಲಿ ಸಂಗತಿ–ಪ್ರಯೋಜನ–ಸಂಶಯ–ಪೂರ್ವಪಕ್ಷ ಸಿದ್ಧಾಂತಗಳನ್ನು ಅನುಸಾರವಾಗಿ, ಪಂಡಿತ ಮಂಡಳಿಯವರು ಕೇಳುವ ಸಂದರ್ಶನದ ವಿಧಾನದಲ್ಲಿನ ಪ್ರಶ್ನೆಗಳಿಗೆ ಉತ್ತರಿಸಿ ಪ್ರಥಮ ಸ್ಥಾನ ಪಡೆದವರಿಗೆ ೨೧೬ ರೂ ಬೆಲೆಯ ಭುಜಕೀರ್ತಿ ಅಥವಾ ಭುಜಕಿರೀಟ ಬಹುಮಾನವಾಗಿ ನೀಡಿ, ಪದವೀಧರನೆಂಬ ಅಭಿನಂದನ ಪತ್ರ ನೀಡಲಾಗುತ್ತಿತ್ತು."[೧೦] ಸಿದ್ಧಾಂತ ಶಿಖಾಮಣಿಯೊಂದನ್ನೆ ಸ್ಥಲಗಳ ಸಂಗತಿ–ಪ್ರಯೋಜನ–ಸಂಶಯ–ಪೂರ್ವಪಕ್ಷ–ಸಿದ್ಧಾಂತ ಅನುಸಾರವಾಗಿ ಪರೀಕ್ಷೆ ಬರೆದು ಪ್ರಥಮ ಸ್ಥಾನ ಗಳಿಸಿದವರಿಗೆ ೩೭ ರೂಪಾಯಿ ಬಹುಮಾನ ಅಭಿನಂದನ ಪತ್ರ ಕೊಡಲಾಗುತ್ತಿತ್ತು.

ಪತ್ರಿಕೆ ಎರಡು 'ಕನ್ನಡ'ದಲ್ಲೂ ಮೂರು ಪತ್ರಿಕೆಗಳಿದ್ದು ಅವು ವಿಶೇಷವಾಗಿ ವಚನಶಾಸ್ತ್ರಕ್ಕೆ ಆದ್ಯತೆ ನೀಡಲಾಗಿತ್ತು. ಇಲ್ಲಿಯೂ ಕೂಡ ಪತ್ರಿಕೆ ಒಂದು ಆದ್ಯದಲ್ಲಿ ಪ್ರಥಮ ಶ್ರೇಣಿಗೆ ೧೦ ರೂ. ದ್ವಿತೀಯಕ್ಕೆ ೫ ರೂಪಾಯಿ. ಪತ್ರಿಕೆ ಎರಡು ಮಧ್ಯಮದಲ್ಲಿ ಪ್ರಥಮ ಶ್ರೇಣಿಗೆ ೧೫

ರೂಪಾಯಿ ದ್ವಿತೀಯಕ್ಕೆ ೧೦ ರೂಪಾಯಿ. ಪತ್ರಿಕೆ ಮೂರು ಉತ್ತಮದಲ್ಲಿ ಪ್ರಥಮ ಶ್ರೇಣಿಗೆ ೨೫ ರೂಪಾಯಿ ದ್ವಿತೀಯಕ್ಕೆ ೧೫ ರೂಪಾಯಿ ಬಹುಮಾನ ನೀಡಲಾಗುತ್ತಿತ್ತು.

ಸಾಮಾನ್ಯವಾಗಿ ಹಾನಗಲ್ಲ ಕುಮಾರಸ್ವಾಮಿಗಳೇ ಶಿವರಾತ್ರಿಯ ಆಧ್ಯಾತ್ಮ ಉತ್ಸವದಲ್ಲಿ ಎಲ್ಲಾ ಸಭಿಕರೆದುರು ಪ್ರಥಮ ಹಾಗೂ ದ್ವಿತೀಯ ಶ್ರೇಣಿಯಲ್ಲಿ ಪಾಸಾದ ವಟು, ಸಾಧಕರಿಗೆ ಬಹುಮಾನದ ಹಣ ಹಾಗೂ ಪಾರಿತೋಷಕ ಜೊತೆಗೆ ಪದವೀಧರನೆಂಬ ಪ್ರಮಾಣ ಪತ್ರ ನೀಡಿ ಗೌರವಿಸುತ್ತಿದ್ದರು.

ಶ್ರೀ ಕುಮಾರಸ್ವಾಮಿಗಳ ವಿದ್ಯಾಭ್ಯಾಸದಲ್ಲಿ ಕೇವಲ ಕನ್ನಡ ಸಂಸ್ಕೃತ ಅಭ್ಯಾಸಕ್ಕೆ ಒತ್ತು ನೀಡದೆ 'ಇಂಗ್ಲಿಷ್; ಕಲಿಕೆಗೂ ಆದ್ಯತೆ ನೀಡಲಾಗಿತ್ತು. ಎಂಬುದಕ್ಕೆ ೧೬.೦೩.೧೯೧೩ರಲ್ಲಿ ಶಿವಯೋಗ ಮಂದಿರದಲ್ಲಿ ಇಂಗ್ಲೀಷ್ ಶಿಕ್ಷಣಕ್ಕೆ ಸಂಬಂಧಿಸಿದ ಜಾಹೀರಾತು ನೋಟಿಸು ಹಾಕಿತ್ತು. ಅದರಲ್ಲಿ ಸೂಚಿಸಿದ ಅಂಶವೆಂದರೆ "ಶಿವಯೋಗ ಮಂದಿರದ ಸ್ವಂತ ಖರ್ಚಿನಿಂದ ಇಂಗ್ಲೀಷ್ ಕಲಿಯಲಿಚ್ಛಿಸುವ ವಿದ್ಯಾರ್ಥಿಗಳಿಗೆ ಚೈತ್ರ ಶು ೨ ರಂದು ಇಂಗ್ಲೀಷ್‌ನ್ನು ೧ ರಿಂದ ೫ನೇ ತರಗತಿವರೆಗೆ ಕ್ಲಾಸು ಆರಂಭಿಸಲಾಗುತ್ತದೆ. ಕಲಿಯಲಿಚ್ಛಿಸುವರು ಮಂದಿರದ ಸಮಯಕ್ಕೆ ಬದ್ಧರಾಗಿದ್ದು ತಮ್ಮ ಹೆಸರು-ತರಗತಿ-ವಯಸ್ಸು ಬರೆದು ವ್ಯವಸ್ಥಾಪಕರಿಗೆ ಸಲ್ಲಿಸತಕ್ಕದೆಂದು ಶಿವಯೋಗ ಮಂದಿರದ ಅಂದಿನ ವ್ಯವಸ್ಥಾಪಕರಾಗಿದ್ದ ಶಿವಬಸಪ್ಪ ಮಾಗಿಯವರು ನೋಟಿಸು ಹೊರಡಿಸಿದ್ದರು."[೧೧]

ಶಿವಯೋಗಮಂದಿರದ ಮೊದಲ ಮತ್ತು ಮೂಲಭೂತ ಉದ್ದೇಶವೆಂದರೆ ವೀರಶೈವ ಮಠಗಳಿಗೆ ಸೂಕ್ತ ಮಠಾಧಿಕಾರಿಯ ನೇಮಕ ಮಾಡುವುದು. ಆ ಮೂಲಕ ಗುರು-ವಿರಕ್ತರೆಂಬ ಭಾವ ಅಳಿಸಿ ಹಾಕುವುದು. ಅದಕ್ಕಾಗಿ ಸೂಕ್ತ ಶಿಕ್ಷಣ ಒದಗಿಸುವುದು. ಲಿಂಗಸಾಮರಸ್ಯದಂತೆ ಆಧ್ಯಾತ್ಮಿಕ ಸಾಧನೆ, ಯೋಗದಂತಹ ಆಂಗಿಕ ಸಾಧನೆ, ಸರ್ವಧರ್ಮದ ಆಳವಾದ ಅರಿವಿನಿಂದ ಶೈಕ್ಷಣಿಕ ಸಾಧನೆ. ಹೀಗೆ ಹಲವಾರು ಮುಖದಲ್ಲಿ ಜ್ಞಾನ ಸಂಪಾದಿಸುವುದೇ ಇಲ್ಲಿನ ಆರಂಭಿಕ ಪಠ್ಯ-ಪಾಠ ಕ್ರಮದ ಉದ್ದೇಶವಾಗಿತ್ತು ಎಂಬುದು ಈ ಮೇಲಿನ ಅಂಶಗಳಿಂದ ತಿಳಿದುಬರುತ್ತದೆ.

ಶಿಕ್ಷಣದಲ್ಲಿ ಶೈಕ್ಷಣಿಕ ತರಬೇತಿ ನಾನಾ ಮುಖವುಳ್ಳದ್ದಾಗಿರುತ್ತದೆ. ಜೊತೆಗೆ ವ್ಯಾಪಕವುಳ್ಳದ್ದಾಗಿರುತ್ತದೆ. ನಿರಂತರವಾದ ಸಂಶೋಧನೆಗಳಿಂದ ವೈಜ್ಞಾನಿಕತೆ ತಾಂತ್ರಿಕವಿಜ್ಞಾನ ಬೆಳೆದು ಸಮಾಜದ ಪರಿವರ್ತನೆಗೆ ಕಾರಣವಾಯಿತು. ಅದರಲ್ಲಿ ಶಿಕ್ಷಣ, ಶಿಕ್ಷಕ, ಪಠ್ಯವಸ್ತು ಕೂಡ ಬಹುಪಾಲು ಕಾರ್ಯ ನಿರ್ವಹಿಸಿದೆ. ಶಾಸ್ತ್ರಿಯ ನೆಲೆಗಟ್ಟಿನಿಂದಾಗಿ ವಿವಿಧ ಕ್ಷೇತ್ರದಲ್ಲಿನ ಸ್ವರೂಪಗಳು ವ್ಯಾಪಕವಾದ ಪರಿವರ್ತನೆಗೆ ಅದು ಕಾರಣವಾಯಿತು. ಅಂತೆಯೇ ಇಲ್ಲಿ ಗಮನಿಸಬೇಕಾದ ಒಂದಂಶವೆಂದರೆ ಶಿಕ್ಷಣದ ಗೊತ್ತುಗುರಿಗನುಸಾರವಾಗಿ ಬೋಧಿಸುವ ವಿಷಯ

ವ್ಯತ್ಯಾಸವಾಗುತ್ತಾ ಹೋಗುತ್ತದೆ. ಈ ರೀತಿಯ ನಿರ್ಧಾರವೂ ಅನುಷ್ಠಾನದಲ್ಲಿರುವ ಜೀವನ ಸಿದ್ಧಾಂತವನ್ನು ಅವಲಂಬಿಸಿದ್ದು ಇಲ್ಲಿಯವರೆಗೆ ಬರೆಯುವ, ಓದುವ, ಕಲಿಯುವುದು ಇದಿಷ್ಟೇ ಶಿಕ್ಷಣ ಎಂದು ಪರಿಗಣಿಸಲಾಗಿತ್ತು. ಆದರೆ ಬದಲಾದ ಕಾಲಮಾನಕ್ಕೆ ತಕ್ಕಂತೆ ಸಮಾಜ ಪರಿವರ್ತನೆ ಬಯಸಿದಂತೆ ವ್ಯಕ್ತಿಯಲ್ಲಿ ಸದ್ಗುಣಗಳ ನಿರ್ಮಾಣದಿಂದ ಅವಶ್ಯಕತೆಯು ಬದಲಾದವು. ಮೊದಲಿನ ಓದುವುದು, ಬರೆಯುವುದು, ಧಾರ್ಮಿಕ ವಿಷಯಗಳೊಂದಿಗೆ ಭಾಷೆ, ವ್ಯಾಕರಣ, ಗಣಿತಶಾಸ್ತ್ರದ ಅಗತ್ಯತೆಯು ಶಿಕ್ಷಣದ ವಿಷಯವಾಗಿ ಜಾರಿಗೆ ತರುವ ಚಿಂತನೆಗಳು ಆರಂಭವಾದವು. ಇದಕ್ಕೆ ಪೂರಕವಾಗಿ ಜಗತ್ತಿನ ಎಲ್ಲ ದೇಶಗಳಲ್ಲೂ ಪಠ್ಯಕ್ರಮದ ನವೀನ ನಿಯಮ ಜಾರಿಗೆ ಬಂದವು. ಅದನ್ನು ಶಿವಯೋಗ ಮಂದಿರವೂ ಕೂಡ ತನ್ನಲ್ಲಿ ಅಳವಡಿಸಿಕೊಂಡಿತ್ತು.

ಬದಲಾದ ಕಾಲಕ್ಕೆ ತಕ್ಕಂತೆ ಶಿಕ್ಷಣದ ಮುಂದಿನ ಹೊಸ ಹೆಜ್ಜೆಗಳನ್ನು ಇಡುವುದು ಅನಿವಾರ್ಯವಾಗಿತ್ತು. ಅದಕ್ಕೆ ಪೋಷಕವಾಗಿ ಮಾದರಿಯ ವ್ಯಾಪಕ ಶಿಕ್ಷಣದ ರೂಪರೇಷೆಗಳನ್ನು ಸಮಾಜದ ಅಭಿಮಾನಿ ಶಿಕ್ಷಣ ತಜ್ಞರಿಂದ ರೂಪಿಸಲಾಯಿತು. ೧೯೪೯ ರಲ್ಲಿ ಈ ನಿಟ್ಟಿನಲ್ಲಿ ಮಂದಿರದ ಪಾಲಕ ಶ್ರೀಗಳು ಪರಸ್ಪರ ವಿಚಾರ ಮಾಡಿ ಒಂದು ನಿರ್ಣಯ ಕೈಗೊಂಡರು. ಲಿಂಗೈಕ್ಯ ಜಗದ್ಗುರು ಶ್ರೀ ಗುರುಸಿದ್ಧರಾಜಯೋಗಿಂದ ಮಹಾಸ್ವಾಮಿಗಳು ಮೂರುಸಾವಿರ ಮಠ ಹುಬ್ಬಳ್ಳಿ ಅವರ ಅಪ್ಪಣೆ ಮೇರೆಗೆ ಕರ್ನಾಟಕದ ಪ್ರಸಿದ್ಧ ಶಿಕ್ಷಣವೇತ್ತರಾದ ಪ್ರೊ. ಶಿ.ಶಿ. ಬಸವನಾಳ ಮತ್ತು ಡಾ. ಶಿ.ಚೆ. ನಂದಿಮಠ ಅವರಿಗೆ ಈ ಕಾರ್ಯವನ್ನು ಒಪ್ಪಿಸಲಾಯಿತು. ಜೊತೆಗೆ ಶಿವಯೋಗ ಮಂದಿರದಲ್ಲಿ ಪ್ರಾಧ್ಯಾಪಕರಾಗಿದ್ದ ಶ್ರೀ ಉಮಾಪತಿಶಾಸ್ತ್ರಿ ಎಂ.ಎ. ಇವರು ಒಂದು ವರ್ಷದ ಪ್ರಯತ್ನದ ಫಲವಾಗಿ ಮಂದಿರದ ನೂತನ ಅಭ್ಯಾಸ ಪಠ್ಯಕ್ರಮ ರೂಪಗೊಳ್ಳುತ್ತದೆ. ಇದನ್ನು ಡಾ. ಶಿ.ಚೆ. ನಂದಿಮಠ ರವರು ಇಂಗ್ಲೀಷಿನಲ್ಲಿ ಬರೆದು ಲಿಂಗೈಕ ಜಗದ್ಗುರುಗಳಾದ ಹುಬ್ಬಳ್ಳಿ ಮೂರು ಸಾವಿರ ಮಠದವರ ಸನ್ನಿಧಿಗೆ ಕಳಿಸುತ್ತಾರೆ. ಅದರ ಸಾರಲೇಖ ಹೀಗಿದೆ.

"Scope of study in the proposed college of theology Shivayaogamandir. The study should cover a period of 12 years. The admission of a student shold be at age of 8-10. He should be able to read and write Kannada very well. In other words he should possess knowledge required for the 4th std. In Kannada Primary school,s. He should study up to his 20th to 22nd year. In this period he should require knowledge equivalent to Honours graduate of the famous Universities especially of the theological seminars of the Roman catholics.

The period of study during the course of 12 years may be divided as follows.

I. Preliminary - 4 years

II. Secondary - 3 years

III. Higher - 2 years

IV. Special - 3 years

Compulsory

I. Languages : Kannada

Sanskrit

Prakrit

Hindi

English

one of the neighbourings languages Viz-Marathi, Telugu, Tamil.

II. Complete knowledge of veerasaivism comprising.

History

Religion

Philosophy

Theology

III. Comparative study of Religion in India and principal Religions of the world.

IV. Knowledge of ther subjects equivalent to Honours Degree of M.A. in the famous Universities.[೯೨]

ಅಂತೆಯೇ ಪ್ರೋ. ಶಿ.ಶಿ. ಬಸವನಾಳರವರು ಶಿವಯೋಗ ಮಂದಿರದ ಟ್ರಸ್ಟ್ ಕಮೀಟಿಯ ವ್ಯವಸ್ಥಾಪಕ ಸದಸ್ಯರಾದ ಶ್ರೀ ನಿ.ಪ್ರ. ಸದಾಶಿವಸ್ವಾಮಿಗಳು ಹಾನಗಲ್ಲ ಅವರಿಗೆ ಪತ್ರ ಬರೆದು ಶಿಕ್ಷಣದ ಹೊಸ ಪಠ್ಯಕ್ರಮ ಸೂಚಿಸಿದರೆ ಪಂ. ಬಸವರಾಜ ಶಾಸ್ತ್ರಿ. ಪಗಡದಿನ್ನಿ, ಹಾಗೂ ಪಂ.ಜಿ.ಎಂ.ಉಮಾಪತಿಶಾಸ್ತ್ರಿಗಳು ಇದಕ್ಕೆ ಬೇಕಾದ ಪಠ್ಯ ಪುಸ್ತಕಗಳ ಪಟ್ಟಿ ಸಿದ್ಧಪಡಿಸಿದ್ದಾರೆ ಎನ್ನಲಾಗಿದೆ. ಆದರೆ ಅವರು ಸೂಚಿಸಿದರೆನ್ನಲಾದ ಪುಸ್ತಕಗಳ ಪಟ್ಟಿ ದೊರೆತಿರುವುದಿಲ್ಲ. ಉಳಿದಂತೆ ಪ್ರೊ. ಶಿ.ಶಿ. ಬಸವನಾಳನವರು ರೂಪಿಸಿದ ಹೊಸಕ್ರಮ ಡಾ. ಶಿ.ಚೆ. ನಂದಿಮಠ

ಅವರ ಸೂಚನೆಯ ಮೇರೆಗೆ ನಾಲ್ಕು ವಿಭಾಗ ಮಾಡಬಹುದು. ಆದರೆ ಮೂರನೆಯ, ನಾಲ್ಕನೆಯ ವಿಭಾಗವನ್ನು ಕ್ರಮವಾಗಿ 'ವಿಶಾರದ' ಮತ್ತು 'ಕೋವಿದ' ಎಂದು ಕರೆಯಬಹುದು ಎಂದು ಬದಲಾವಣೆ ಸೂಚಿಸಿದರು. ಅದು ಹೀಗಿದೆ

೧. ಪ್ರಾಥಮಿಕ ಶಿಕ್ಷಣ – ನಾಲ್ಕು ವರ್ಷ–ಹೈಸ್ಕೂಲು ಶಿಕ್ಷಣಕ್ಕೆ ಸಮ

೨. ಮಾಧ್ಯಮಿಕ ಶಿಕ್ಷಣ – ಮೂರು ವರ್ಷ–ಹೈಸ್ಕೂಲ ಶಿಕ್ಷಣಕ್ಕೆ ಸಮ

೩. ವಿಶಾರದ ಶಿಕ್ಷಣ – ಎರಡು ವರ್ಷ–ಕಾಲೇಜು (ಇಂಟರ್ ಮಿಡಿಯಕ್ಕೆ ಸಮ)

೪. ಕೋವಿದ ಶಿಕ್ಷಣ – ಮೂರು ವರ್ಷ –ಕಾಲೇಜು (ಬಿ.ಎ. ಆರ್ನಗೆ ಸಮ)

೫. ಆಚಾರ್ಯ ಶಿಕ್ಷಣ – ಎರಡು ವರ್ಷ–ಎಂ.ಎ. ಪರೀಕ್ಷೆಗೆ ಸಮ.

ಇನ್ನೂ ಪ್ರತಿಯೊಂದು ತರಗತಿಯು ಹೊಂದಬೇಕಾದ ಅಭ್ಯಾಸ ಪತ್ರಿಕೆಗಳನ್ನು ಸ್ಥೂಲವಾಗಿ ಪಟ್ಟಿಮಾಡಿದ್ದಾರೆ. ಅವು ಹೀಗಿವೆ.

೧. ಪ್ರಾಥಮಿಕ ನಾಲ್ಕು ವರ್ಷ

೧. ಭಾಷೆಗಳು (ಅವಶ್ಯವಾಗಿ ಕಲಿಯಬೇಕಾದವು)

* ಕನ್ನಡ–ಭಾಷಾಪತ್ರಿಕೆ
* ಸಂಸ್ಕೃತ–ಎರಡನೇ ಭಾಷಾಪತ್ರಿಕೆ
* ಇಂಗ್ಲೀಷ್–ಮೂರನೇ ಭಾಷಾಪತ್ರಿಕೆ

೨. ಕರ್ನಾಟಕದ ಇತಿಹಾಸ–ನಾಲ್ಕನೇ ಪತ್ರಿಕೆ

೩. ಭರತಖಂಡದ ಭೌಗೋಳಿಕ ಜ್ಞಾನ–ಐದನೇ ಪತ್ರಿಕೆ

೪. ಗಣಿತ ವಿಷಯ (ವ್ಯವಹಾರಿಕವಾಗಿ)–ಆರನೇ ಪತ್ರಿಕೆ

೨. ಮಾಧ್ಯಮಿಕ ಮೂರು ವರ್ಷ

೧. ಭಾಷೆಗಳು

* ಕನ್ನಡ–ಪ್ರಥಮ ಭಾಷಾಪತ್ರಿಕೆ
* ಸಂಸ್ಕೃತ–ದ್ವಿತೀಯ ಭಾಷಾಪತ್ರಿಕೆ
* ಇಂಗ್ಲೀಷ್–ತೃತೀಯ ಭಾಷಾಪತ್ರಿಕೆ

೨. ಭಾರತದ ಇತಿಹಾಸ–ನಾಲ್ಕನೇ ಪತ್ರಿಕೆ

೩. ಜಗತ್ತಿನ ಭೌಗೋಳಿಕ ಜ್ಞಾನ–ಐದನೇ ಪತ್ರಿಕೆ

೪. ಬೀಜಗಣಿತ–ಆರನೇ ಪತ್ರಿಕೆ

೫. ಹಿಂದಿ ಭಾಷೆಯ ಸಾಮಾನ್ಯ ಪರಿಚಯ–ವಿಶೇಷ ಪತ್ರಿಕೆ

೩. ವಿಶಾರದ ಎರಡು ವರ್ಷ

೧. ಭಾಷೆಗಳು

* ಕನ್ನಡ
* ಸಂಸ್ಕೃತ
* ಇಂಗ್ಲೀಷ್

೨. ಜಾಗತಿಕ ಇತಿಹಾಸ

೩. ಹಿಂದಿ ಭಾಷೆ

೪. ಸಾಮಾನ್ಯ ವಿಜ್ಞಾನ

೫. ನ್ಯಾಯ ಶಾಸ್ತ್ರ

೪. ಕೋವಿದ ಮೂರು ವರ್ಷ

೧. ಭಾಷೆಗಳು

* ಕನ್ನಡ
* ಸಂಸ್ಕೃತ
* ಇಂಗ್ಲೀಷ್

೨. ವೀರಶೈವ ತತ್ತ್ವಮತ, ದರ್ಶನಗಳ ಅಭ್ಯಾಸ

೩. ಭಾರತೀಯ ದಶರ್ನನಗಳ ಅಭ್ಯಾಸ

೪. ವಿಶ್ವ ಧರ್ಮಗಳು

೫. ಅಧ್ಯಾತ್ಮ ವಿಜ್ಞಾನ

೬. ಪ್ರಾಕೃತ, ತಮಿಳು, ತೆಲುಗು, ಮರಾಠಿ–ಇವುಗಳಲ್ಲಿ ಒಂದರ ಅಭ್ಯಾಸ

೫. ಆಚಾರ್ಯ (ಪಂಡಿತ) ಎರಡು ವರ್ಷ

೧. ಭಾರತೀಯ ತತ್ವಜ್ಞಾನ

೨. ಪಾಶ್ಚಾತ್ಯ ತತ್ವಜ್ಞಾನ

೩. ವಿಶ್ವಧರ್ಮಗಳ ತಾರತಮ್ಯಜ್ಞಾನ

೪. ಸಾಮಾಜಿಕ ಸಂಸ್ಥೆಗಳು

ಹೀಗೆ ಇಲ್ಲಿನ ವಟುಗಳು ಸಾಧಕರಾಗಿ ಕಲಿಯಲು ಈ ಮೇಲಿನ ಪಠ್ಯಕ್ರಮವನ್ನು ವಿದ್ವಾಂಸರು, ಶಿಕ್ಷಣ ತಜ್ಞರು ರೂಪಿಸಿಕೊಟ್ಟಿದ್ದಾರೆ. ಕಲಿಯುವವರ ವಯಸ್ಸಿಗೆ ಅವರ ಮಾನಸಿಕ ಬೆಳವಣಿಗೆಗೆ ಸಾಕಷ್ಟು ಜ್ಞಾನ ವಿಕಾಸಗೊಳಿಸಲು ಅದು ಅನುಕೂಲ ಮಾಡಿಕೊಟ್ಟಿದೆ.

ಪ್ರಾಥಮಿಕ ಹಂತದಲ್ಲಿ ತ್ರಿಭಾಷೆಯ ಜ್ಞಾನಕ್ಕೆ ಒತ್ತು ನೀಡಿದೆ. ಜೊತೆಗೆ ಕರ್ನಾಟಕ, ಭಾರತದ ಭೌಗೋಳಿಕ ಪರಿಜ್ಞಾನಕ್ಕೆ, ವ್ಯವಹಾರಿಕ ಗಣಿತಕ್ಕೆ ಆದ್ಯತೆ ನೀಡಿದೆ.

ಮಾಧ್ಯಮಿಕ ಹಂತದಲ್ಲಿ ಎಸ್.ಎಸ್.ಎಲ್.ಸಿ. ಅಭ್ಯಾಸಕ್ಕೆ ಸರಿಸಮಾನತೆ ಕಲ್ಪಿಸಿದೆ. ವಿಶಾರದವನ್ನು ಪದವಿ ಪೂರ್ವಕ್ಕೂ, ಕೋವಿದವನ್ನು ಪದವಿ ತರಗತಿಯ ಮಟ್ಟದಲ್ಲಿ ರೂಪಿಸಲಾಗಿದೆ. ಆಚಾರ್ಯ ಅಥವಾ ಪಂಡಿತ ಸ್ನಾತಕೋತ್ತರ ಪದವಿಗೆ ಸಮ ಎಂದು ಪರಿಚಯಿಸಲಾಗಿದೆ.

ಒಟ್ಟಿನಲ್ಲಿ ಲಿಂಗಾಯತ ಧರ್ಮ, ತತ್ವ, ಸಾಹಿತ್ಯ, ಇತಿಹಾಸದ ಆಳವಾದ ಅಭ್ಯಾಸಕ್ಕೆ ಅಗತ್ಯ ಕ್ರಮಕೈಗೊಳ್ಳಲಾಗಿದೆ. ಜೊತೆಗೆ ಭಾರತೀಯ ಭಾಷೆಯೊಂದಿಗೆ, ಅನ್ಯದೇಶಿಯ ಭಾಷೆಗೆ ಆದ್ಯತೆ ನೀಡಲಾಗಿದೆ. ಭಾರತೀಯ ಷಡ್‌ದರ್ಶನ, ವಿಶ್ವಧರ್ಮಗಳ ಮೂಲತತ್ವಗಳು, ಅನುಭಾವಶಾಸ್ತ್ರ, ಜೊತೆಗೆ ಇತಿಹಾಸ, ಭೌಗೋಳಿಕ ವೈವಿಧ್ಯತೆ, ವಿಜ್ಞಾನ, ಸಾಮಾಜಿಕ ಅಂಶಗಳನ್ನು ಇಲ್ಲಿ ಪಠ್ಯವಾಗಿ ತರಲಾಗಿದೆ. 'ಕೋವಿದ' ಹಂತದಲ್ಲಿ ತೆಲಗು, ತಮಿಳು, ಮರಾಠಿ ಭಾಷೆಯಲ್ಲಿ ಒಂದನ್ನು ಐಚ್ಛಿಕವಾಗಿ ಕೊಡುವುದರೊಂದಿಗೆ ಅನ್ಯಭಾಷೆಯನ್ನು ಅರಿಯುವ ಅವಕಾಶ ಕಲ್ಪಿಸಲಾಗಿದೆ.

ಈ ರೀತಿಯ ಒಂದು ವ್ಯವಸ್ಥಿತ ಪಠ್ಯಕ್ರಮವನ್ನು ರೂಪಿಸಿ ಅದಕ್ಕೆ ಅಗತ್ಯ ಶಿಕ್ಷಕ ವರ್ಗವನ್ನಿರಿಸಿ ಇದನ್ನೊಂದು 'ಆಧ್ಯಾತ್ಮಿಕ ವಿಶ್ವವಿದ್ಯಾಲಯವಾಗಿ ರೂಪಿಸುವ ಸಲುವಾಗಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಪ್ರಸ್ತಾವನೆ ಮಂಡಿಸಿ ಅಪಾರ ಹಣ ವ್ಯಯಮಾಡಿದ್ದಾರೆ. ಜಗದ್ಗುರು ಗುರುಸಿದ್ದ ರಾಜ ಯೋಗೀಂದ್ರ ಮಹಾಸ್ವಾಮಿ ಮೂರು ಸಾವಿರ ಮಠ ಹುಬ್ಬಳ್ಳಿ ಅವರ ಈ ಪ್ರಯತ್ನ 'ಇಡೀ ಏಷ್ಯಾಖಂಡದಲ್ಲೆ' ಪ್ರಥಮವೆಂಬ ಕೀರ್ತಿಗೆ ಪಾತ್ರವಾಗುತ್ತದೆ ಎಂಬ ನಿರೀಕ್ಷೆಯಲ್ಲಿತ್ತು.

ಆದರೆ ಮೇಲ್ಕಾಣಿಸಿದ ಪಠ್ಯಕ್ರಮ ಕಾರ್ಯಗತಗೊಳಿಸಲು ಅಗತ್ಯ ವಿದ್ವಾಂಸರು, ನುರಿತ ಪ್ರಾಧ್ಯಾಪಕರು ಅಂತವರಿಗೆ ಯೋಗ್ಯ ವೇತನದ ಅವಶ್ಯಕತೆ ಇತ್ತು. ಅಗತ್ಯವಾದ ಬೋಧನಾಲಯ ತರಬೇತಿಗಳ ಅವಶ್ಯಕತೆ ಇತ್ತು. ಪಾರದರ್ಶಕ ಆಡಳಿತದ ವ್ಯವಸ್ಥಾಪಕರ, ನೌಕರ ವರ್ಗದ ಅವಶ್ಯಕತೆ ಇತ್ತು. ಎಲ್ಲಕ್ಕಿಂತ ಮಿಗಿಲಾಗಿ ಮಂದಿರವನ್ನು ಮುನ್ನಡಿಸುವಲ್ಲಿ ಹಾನಗಲ್ಲ ಶ್ರೀಗಳಂಥ ಇಚ್ಛಾಶಕ್ತಿಯ ದೂರದೃಷ್ಟಿಯುಳ್ಳ ಮನಸ್ಥಿತಿಯ ಅಗತ್ಯವಿತ್ತು. ಇದಾವುದು ಇಲ್ಲದೇ ಹೋದದ್ದು ಈ ನವೀನ ಪಠ್ಯಕ್ರಮದ ಹಿನ್ನಡೆಗೆ ಕಾರಣವಾಯಿತ್ತೆಂದು ಹೇಳಬಹುದು.

ನಮ್ಮ ಸಂಶೋಧನಾ ಕ್ಷೇತ್ರ ಕಾರ್ಯದ ಕಾಲಕ್ಕೆ ಈ ಬಗ್ಗೆ ಸಂದರ್ಶನಕ್ಕೆ ಒಳಪಟ್ಟವರು ನೀಡಿದ ಅಭಿಪ್ರಾಯದ ನೆಲೆಯಲ್ಲಿ ಹೇಳುವುದಾದರೆ "ಮಂದಿರದಲ್ಲಿ ಪ್ರೌಢ ಶಿಕ್ಷಣ ಕಲಿತು ಉನ್ನತ ಶಿಕ್ಷಣಕ್ಕೆ ಕಾಶಿಗೆ ಹೋಗಿ ಬಂದಂತಹ ಪಂಡಿತರು, ಶಾಸ್ತ್ರಿಗಳು ಆರಂಭದಲ್ಲಿ

ಸಿಗುತ್ತಿದ್ದರು. ಆದರೆ ಮುಂದೆ ಅಂತಹ ನಿಷ್ಠಾವಂತರು ಮಂದಿರದಿಂದ ದೂರ ಉಳಿದರು. ಬದಲಾಗುತ್ತಿದ್ದ ವಿಶ್ವಸ್ಥ ಮಂಡಳಿಯವರಿಗಿದ್ದ ಅಭಿಮಾನದ ಕೊರತೆಯಿಂದಲೂ, ಆ ಸಂದರ್ಭದ ಸಂಪರ್ಕದ ಕೊರತೆಯಿಂದಲೂ ಶಿಕ್ಷಣಕ್ಕೆ ಆದ್ಯತೆ ದೊರೆಯದೆ ಹೋಯಿತು. ವಿದ್ವತ್ ಪೂರ್ಣತೆಯುಳ್ಳ ಜಂಗಮರನ್ನು ಗುರುವರ್ಗಕ್ಕೆ ಗುರುತಿಸಿದೆ ಅಂಧಾಭಿಮಾನದಲ್ಲೇ ಮಂದಿರವನ್ನು ಮುನ್ನಡೆಸಿಬಹುದು. ಪರಿವರ್ತನೆಗಳಿಗೆ ಮುಂದಾದ ವೇಳೆಗೆ ಎದುರಾದ ವಿಷಯದ ಹೊಂದಾಣಿಕೆ, ಸಮಯದ ಅಭಾವ, ಆರ್ಥಿಕ ವ್ಯವಸ್ಥೆ, ಸಂಪನ್ಮೂಲದ ಕೊರತೆ ಹೀಗೆ ಇವೆಲ್ಲವು ಶಿವಯೋಗ ಮಂದಿರದ ಮೂಲ ಆಶಯದ ಶಿಕ್ಷಣದವನ್ನು ಕೊಡುವಲ್ಲಿ ಎದುರಾದ ನ್ಯೂನ್ಯತೆಗಳೆಂದು ಹೇಳಲಾಗುತ್ತದೆ."[೧೩]

ಈಗಿನ ಸಂಸ್ಥೆಯ ವಿಶ್ವಸ್ಥ ಮಂಡಳಿಯ ಅಧ್ಯಕ್ಷರಾಗಿರುವ ಪೂಜ್ಯ ಸಂಗನಬಸವ ಮಹಾಸ್ವಾಮಿಗಳು ಸದಾಶಿವಯೋಗಿಗಳ ಶಿಷ್ಯರು ಹಾಗೂ ನಾಡಿನ ಪ್ರಮುಖ ಶಿಕ್ಷಣ ತಜ್ಞರೊಂದಿಗೆ ಒಡನಾಟ ಹೊಂದಿದವರು. ಹಾಗಾಗಿ ಹಾನಗಲ್ಲ ಶ್ರೀಗಳ ಆಶಯವು ಉಳಿದು ಮಂದಿರವು ಧಾರ್ಮಿಕ ವಿದ್ಯಾಲಯವಾಗಿ ಬೆಳೆಯಲೇಬೇಕೆಂಬ ಹಂಬಲದಲ್ಲಿ ಪರಿವರ್ತನೆಯ ಹೊಸ ಪದ್ಧತಿಗೆ ತಾರ್ಕಿವಾಗಿ ಚರ್ಚಿಸಿ ಸೂಕ್ತ ಉತ್ತರವಾಗುವಂತಹ ರೀತಿಯಲ್ಲಿ ನೂತನ ಶಿಕ್ಷಣ ಪದ್ಧತಿಯನ್ನು ಅನುಷ್ಠಾನಗೊಳಿಸಿದ್ದಾರೆ. ಇದಕ್ಕೆ ಕಾರಣವೇನು ಎಂಬ ಪ್ರಶ್ನೆ ಎದುರಾದಾಗ ಸಿಗುವ ಉತ್ತರವೆಂದರೆ ಆಗಿ ಹೋದ ಎಲ್ಲ ವಿಶ್ವಸ್ಥ ಮಂಡಳಿಯ ಅಧ್ಯಕ್ಷರ ಕಾಲಕ್ಕೆ ಹುಡುಕಿದರೆ ಯಾವುದೆ ಸಮರ್ಥರಾದ ಪಂಡಿತರು, ಶಾಸ್ತ್ರಿಗಳು ದೀರ್ಘಕಾಲ ಇಲ್ಲಿ ಇದ್ದ ಪುರಾವೆಗಳಿಲ್ಲ. ಆ ಬಗ್ಗೆ ಯಾವುದೇ ದಾಖಲೆಗಳು, ಉಲ್ಲೇಖಗಳು ಮಂದಿರ ಸ್ಥಾಪನೆಯಾದ ಐವತ್ತು ವರ್ಷಗಳ ನಂತರ ನಮಗೆ ದೊರೆಯಲಿಲ್ಲ. ಇವನ್ನೆಲ್ಲ ಮನಗಂಡ ಈಗಿನ ಅಧ್ಯಕ್ಷರು ಧಾರ್ಮಿಕ ಶಿಕ್ಷಣದೊಂದಿಗೆ ಔಪಚಾರಿಕ ಶಿಕ್ಷಣದ ಅಗತ್ಯತೆ ಪ್ರಸ್ತುತ ಕಾಲಕ್ಕೆ ಒಬ್ಬ ಮಠಾಧಿಪತಿಗೆ ಅವಶ್ಯವಿದೆ ಎಂದು ಭಾವಿಸಿ ನೂತನ ಶಿಕ್ಷಣಕ್ಕೆ ಚಾಲನೆ ನೀಡಿದ್ದಾರೆ ಎಂಬುದು ನಾವು ಕಂಡುಕೊಂಡ ವಿಚಾರವಾಗಿದೆ.

ಸದಾಶಿವಶಿವಯೋಗಿಗಳ ಕಾಲಕ್ಕೆ ಪ್ರೊ.ಶಿ.ಶಿ.ಬಸವನಾಳರವರು ಸೂಚಿಸಿದ ಐದು ವಿಭಾಗದ ಅಧ್ಯಯನ ಕ್ರಮಗಳನ್ನು ಅಲ್ಪ ಬದಲಾವಣೆಯೊಂದಿಗೆ ಈ ಕೆಳಗಿನಂತೆ ವಿಂಗಡಿಸಿದ್ದಾರೆ.[೧೪]

೦೧. ಪ್ರಾಥಮಿಕ ಶಿಕ್ಷಣ–ನಾಲ್ಕು ವರ್ಷ

೦೨. ಪ್ರೌಢ ಶಿಕ್ಷಣ–ಮೂರು ವರ್ಷ

೦೩. ವಿಶಾರದ–ಎರಡು ವರ್ಷ

೦೪. ಕೋವಿದ–ಮೂರು ವರ್ಷ

೦೫. ಆಚಾರ್ಯ ಅಥವಾ ಪಂಡಿತ–ಎರಡು ವರ್ಷ

ಇಲ್ಲಿ ಪಠ್ಯಕ್ರಮವಾಗಿ ಸಂಸ್ಕೃತ ಮಾಧ್ಯಮ, ಕನ್ನಡ ಮಾಧ್ಯಮ ಎಂಬ ಎರಡು ವಿಭಾಗ ಮಾಡಿದ್ದಾರೆ. ಸಂಸ್ಕೃತ ಮಾಧ್ಯಮದಲ್ಲಿ ಕರ್ನಾಟಕ ಸರ್ಕಾರದ ಸಂಸ್ಕೃತ ವಿಭಾಗ ನಿಗದಿಪಡಿಸಿದ ಪಠ್ಯಕ್ರಮವನ್ನು, ಕನ್ನಡ ಮಾಧ್ಯಮದಲ್ಲಿ ರಾಜ್ಯ ಸರ್ಕಾರ ನಿಯೋಜಿಸಿದ ಪಠ್ಯಕ್ರಮವನ್ನು ಬೋಧಿಸಲಾಗುತ್ತಿದೆ. ರಾಜ್ಯ ಸರ್ಕಾರ ರೂಪಿಸಿದ ಔಪಚಾರಿಕ ಶಿಕ್ಷಣ ವ್ಯವಸ್ಥೆಯಲ್ಲಿರುವ ರೀತಿಯಲ್ಲಿಯೇ ಪಠ್ಯಕ್ರಮವನ್ನು, ಪಾಠಕ್ರಮವನ್ನು, ಪರೀಕ್ಷಾಕ್ರಮವನ್ನು ನಿರ್ವಹಿಸಲಾಗುತ್ತಿದೆ.

ಪ್ರಸ್ತುತ ಶೈಕ್ಷಣಿಕ ವರ್ಷದಿಂದ ಅಂದರೆ ೨೦೧೦-೧೧ನೇ ಸಾಲಿನಿಂದ ಪದವಿ ಪೂರ್ವ ತರಗತಿಗಳನ್ನು ಆರಂಭಿಸಲಾಗಿದೆ. ಇಲ್ಲಿಯೂ ಕೂಡ ಎಂಟು ಪತ್ರಿಕೆಗಳಿವೆ. ಅವುಗಳು ಇಂತಿವೆ.[೧೬]

ಪತ್ರಿಕೆ-೧ ಕನ್ನಡ ಭಾಷೆ ಮತ್ತು ಸಾಹಿತ್ಯ

ಪತ್ರಿಕೆ-೨ ಸಂಸ್ಕೃತ ಭಾಷೆ ಮತ್ತು ವ್ಯಾಕರಣ

ಪತ್ರಿಕೆ-೩ ಆಂಗ್ಲ ಭಾಷೆ ಮತ್ತು ಸಾಹಿತ್ಯ

ಪತ್ರಿಕೆ-೪ ಹಿಂದಿ ಭಾಷೆ ಮತ್ತು ಸಾಹಿತ್ಯ

ಪತ್ರಿಕೆ-೫ ವೀರಶೈವ ವಾಙ್ಮಯ ಆಯ್ದ ಪಠ್ಯ ಭಾಗಗಳು

ಪತ್ರಿಕೆ-೬ ವೀರಶೈವ ಧರ್ಮದ ಸಂಕ್ಷಿಪ್ತ ಇತಿಹಾಸ

ಪತ್ರಿಕೆ-೭ ವೀರಶೈವ ದಾರ್ಶನಿಕ ಮಹಾಪುರುಷರು, ಜೀವನ-ಸಾಧನೆ-ಪರಿಚಯ

ಉಳಿದಂತೆ ಮುಂದಿನ ದಿನದಲ್ಲಿ ಉನ್ನತ ವ್ಯಾಸಂಗಕ್ಕೆ ವಿಶ್ವವಿದ್ಯಾಲಯದೊಂದಿಗೆ ಚರ್ಚಿಸಿ ತನ್ನದೇ ಆದ ಪಠ್ಯಕ್ರಮ-ಪಾಠಕ್ರಮ-ಪರೀಕ್ಷಾಕ್ರಮ ರೂಪಿಸಿಕೊಳ್ಳಲು ಒಪ್ಪಿಗೆಗಾಗಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆದರೆ ಈ ನೂತನ ಬದಲಾವಣೆಯ ಹಿಂದಿನ ಆಶಯ ಪ್ರಸ್ತುತ ಕಾಲಮಾನಕ್ಕೆ ಸೂಕ್ತವಾಗಿದ್ದರೂ ಮಂದಿರದ ಉದ್ದೇಶಕ್ಕೆ ಹಿನ್ನೆಡೆಯಾಗಿದೆ ಎಂಬಲ್ಲಿ ಎರಡು ಮಾತಿಲ್ಲ. ಈಗಿರುವ ಪದವಿ ತರಗತಿಯ ಪಠ್ಯಕ್ರಮವನ್ನೆ ಅವಲೋಕಿಸಿದಾಗ ಅಲ್ಲಿರುವ ಅಂಶಗಳಾವುವೂ ಬಸವ ತತ್ವಕ್ಕೆ ಪೂರಕವಾಗಿ ಹಾನಗಲ್ಲ ಶ್ರೀಗಳು ಬಯಸಿದಂತಹ ಸಮಾನತೆಯ, ಸಂಸ್ಕಾರ ಪೂರ್ಣವಾದ, ವಿಶಾಲ ಜ್ಞಾನಾಭಿವೃದ್ಧಿಯ ಅಂಶಗಳಿಗೂ ಹತ್ತಿರವಾಗಿಲ್ಲವೆಂಬ ಅನುಮಾನಕ್ಕೆ ದಾರಿ ತೋರಿಸುತ್ತದೆ.

ಒಟ್ಟಾರೆಯಾಗಿ ಬಸವ ಪರಂಪರೆಯ ನಂತರವೂ ಬಸವಣ್ಣ ಬಯಸಿದ ಸಮಾಜ ಸ್ಥಿರವಾಗಿ ನೆಲೆ ನಿಲ್ಲದೆ ಒಂದು ಧರ್ಮಕ್ಕಷ್ಟೆ ಸೀಮಿತವಾಗಿ ಹೋಯಿತು. ಅಂತೆಯೇ ಶಿವಯೋಗಮಂದಿರದ ಆಶಯ ಕೂಡ ಅದೇ ಹಾದಿಯಲ್ಲಿ ಸಾಗುತ್ತಿರುವುದು ಶೋಚನೀಯವೇ ಸರಿ. ಹಾನಗಲ್ಲ ಶ್ರೀಗಳ ಕನಸು, ಡಾ.ಸಿ.ಜೆ.ನಂದಿಮಠರು ರೂಪಿಸಿದ ಶಿಕ್ಷಣ ವ್ಯವಸ್ಥೆ ಜಾರಿಗೊಳ್ಳುವ ದಿನಗಳು ಹತ್ತಿರವಾಗುತ್ತಿವೆ ಎಂಬುದು ಬಾಯಿ ಮಾತುಗಳಾಗಿಯಷ್ಟೆ.

೩. ಬೋಧಕ ವರ್ಗ

ಓದುವ ಹಂಬಲವಿಲ್ಲದ ವಿದ್ಯಾರ್ಥಿ, ಕುತೂಹಲವಿಲ್ಲದ ಶಿಕ್ಷಕ, ಮಕ್ಕಳ ಭವಿಷ್ಯದ ಚಿಂತನವಿಲ್ಲದ ಪಾಲಕರು, ಇಂತವರ ಸಮಾಜದಲ್ಲಿ ಮಕ್ಕಳು ಸತ್ಯ, ನ್ಯಾಯ, ನೀತಿವಂತರು ಹೇಗಾಗಬೇಕು? ಇವರಲ್ಲಿ ದೇಶಭಕ್ತಿ, ನುಡಿಭಕ್ತಿ, ಸಂಸ್ಕೃತಿ ಹೇಗೆ ಬೆಳೆಯಬೇಕು? ಈ ನೀತಿ ತಿಳಿಯದೆ ಹೋದ ಕಾರಣವಾಗಿ ಸಮಾಜದಲ್ಲಿ ಅಶಾಂತಿ, ಅಸ್ಥಿರತೆ ತಲೆದೋರುದಂತಾಗಿದೆ. ಅದಕ್ಕಾಗಿ ಎಲ್ಲ ಮಠಗಳಲ್ಲಿ ನೈತಿಕ ಶಾಲೆಗಳು, ಧಾರ್ಮಿಕ ಮಾರ್ಗ ಶಾಲೆಗಳಾಗಲಿ ಅಲ್ಲಿಗೆ ವಿಶ್ವಗುರುವಿನಂತಹ ಶಿಕ್ಷಕ, ಬೋಧಕ ವರ್ಗ ದೊರೆಯುವಂತಾಗಲಿ ಎಂದು ಆಶಿಸುತ್ತಾರೆ. ಮಂದಿರದ ಪಾಠಶಾಲೆ ಅಂತಹ ಶ್ರೇಷ್ಠ ಆಚಾರ್ಯರು, ಪಂಡಿತರು, ಶಿಕ್ಷಕರನ್ನು ಕರೆಸುತ್ತಾರೆ. ತಾವೇ ವೆಚ್ಚ ಮಾಡಿ ನುರಿತ ಬೋಧಕರಿಗಾಗಿ ಕಾಶಿಯಲ್ಲಿ ಓದಿಸಿ ಮಂದಿರಕ್ಕೆ ನೇಮಿಸುತ್ತಾರೆ ಹಾಗೆ ಹಾನಗಲ್ಲ ಕುಮಾರೇಶ್ವರ ಕಾಲದಿಂದ ಆರಂಭವಾಗಿ ಬಂದ ಅಧ್ಯಾಪಕ ವರ್ಗ ಹಾಗೂ ಅವರ ಸಂಶೋಧನಾ ಸಾಧನೆಯ ವಿವರ ಇಂತಿದೆ.

ಪಂ.ಶಂಕರ ಶಾಸ್ತ್ರಿಗಳು ಉಮಚಗಿ: ೧೮೮೫ರಲ್ಲಿ ರೋಣ ತಾಲೂಕಿನ ಉಮಚಗಿ ಗ್ರಾಮದಲ್ಲಿ ಜನಿಸಿ ಹಾವೇರಿಯಲ್ಲಿ ಸಂಸ್ಕೃತ ಶಿಕ್ಷಣ ಪಡೆದು ಹಾನಗಲ್ಲ ಶ್ರೀಗಳ ಸಹಾಯ ಪಡೆದು, ಕಾಶಿಗೆ ಹೋಗಿ ಸಂಸ್ಕೃತದ ಪ್ರೌಢ ಶಿಕ್ಷಣವನ್ನು ಪಡೆದು, ನವ್ಯನ್ಯಾಯ ಅಥವಾ ತರ್ಕಶಾಸ್ತ್ರದಲ್ಲಿ ಪ್ರಾವೀಣ್ಯ ಪಡೆದು ಶಿವಯೋಗ ಮಂದಿರಕ್ಕೆ ಬಂದು, ಸಂಸ್ಕೃತ ಅಧ್ಯಾಪಕರಾಗಿ ಸೇವೆ ಸಲ್ಲಿಸಿ "ವೀರಶೈವ ಸಿದ್ಧಾಂತದ ಬಗೆಗೆ ಸಂಶೋಧನೆ ನಡೆಸಿದರು. ನಂತರ ಉಜ್ಜಯನಿಯ ಶ್ರೀ ಜಗದ್ಗುರು ಸಿದ್ಧಲಿಂಗ ಮಹಾಸ್ವಾಮಿಗಳ ಉದಾರಾಶ್ರಯದಲ್ಲಿ ಅಧ್ಯಾಪಕರಾಗಿ, ಅನೇಕ ಗ್ರಂಥಗಳನ್ನು ಪ್ರಕಟಿಸಿದರು. ಅವರು ಈಶ, ಕೇನ ಮೊದಲಾದ ಉಪನಿಷತ್ತುಗಳಿಗೆ ಸಂಸ್ಕೃತದಲ್ಲಿ ಬರೆದಿರುವ ಶಾಂಕರೀ ವ್ಯಾಖ್ಯೆಯು ವಿದ್ವತ್ಪೂರ್ಣವಾಗಿದೆ."[೧೬]

ಪಂ.ಸೋಮನಾಥಶಾಸ್ತ್ರಿಗಳು, ಇಟಗಿ: ಹಾನಗಲ್ಲ ಕುಮಾರಸ್ವಾಮಿಗಳ ಕನಸಿನ ಶಿವಯೋಗ ಮಂದಿರಕ್ಕೆ ಸುಂದರ ರೂಪವನ್ನು ಒದಗಿಸಲೆಂದು ಶ್ರಮಿಸಿದ ಪಂಡಿತ ಸೋಮನಾಥಶಾಸ್ತ್ರಿಗಳು, ಸ್ವತಹ ಶಿವಾನುಭವಿಗಳಾಗಿ ಮಂದಿರದ ನದಿತೀರದಲ್ಲಿ ಅನುಷ್ಠಾನ ಮಾಡುವುದರೊಂದಿಗೆ ಸಾಧಕರಿಗೆ ತತ್ವಶಾಸ್ತ್ರವನ್ನು ಬೋಧಿಸುತ್ತಾ. ವೀರಶೈವ ಧರ್ಮ ಗ್ರಂಥಗಳನ್ನು, ಸಂಸ್ಕೃತ ಗ್ರಂಥಗಳನ್ನು, ಲೇಖನಗಳನ್ನು ಬರೆದು ಪ್ರಕಟಿಸಿದ್ದಾರೆ. ತಮ್ಮ ಬದುಕಿನ ಕೊನೆ ಕಾಲಕ್ಕೆ ಗೊಗ್ಗಿನಹಳ್ಳಿ, ಕೆಳದಿ ಹಿರೇಮಠದ ವ್ಯವಸ್ಥೆಯನ್ನು ನಿರ್ವಹಿಸಿದ್ದಾರೆ. ಹೀಗೆ ತಮ್ಮ ಬದುಕಿನ ತನು-ಮನ-ಧನವನ್ನು ಶಿವಯೋಗ ಮಂದಿರಕ್ಕಾಗಿ ಧಾರೆ ಎರೆದಿದ್ದಾರೆ.

ಪಂ.ವೀರಭದ್ರ ಶಾಸ್ತ್ರಿಗಳು, ಕೊಂಗವಾಡ: ೧೮೮೯ರಲ್ಲಿ ಧಾರವಾಡ ಜಿಲ್ಲೆ ನವಲಗುಂದ ತಾಲೂಕಿನ ಕೊಂಗವಾಡದಲ್ಲಿ ರಾಚೋಟಯ್ಯ, ಬಸವಮ್ಮ ದಂಪತಿಯ ಮಗನಾಗಿ ಜನಿಸಿದರು.

ತಂದೆಯ ಅನುಗ್ರಹದಂತೆ ಸಂಸ್ಕೃತ ಪಾಠಶಾಲೆ ಸೇರಿ ಮೂರು ವರ್ಷ ಓದಿ, ಶ್ರೀಮಂತ ವಾರದ ಮಲ್ಲಪ್ಪನ ಉದಾರಾಶ್ರಯದಲ್ಲಿ ಕಾಶಿಯಲ್ಲಿ ನಾಲ್ಕುವರ್ಷ ತರ್ಕಶಾಸ್ತ್ರದಲ್ಲಿ ಪಾಂಡಿತ್ಯ ಪಡೆದರು. ಉಜ್ಜಯಿನಿ ಜ.ಸಿದ್ಧಲಿಂಗ ಶಿವಾಚಾರ್ಯಮಹಾಸ್ವಾಮಿಗಳು, ಸರ್ವದರ್ಶನ ತೀರ್ಥ ಮೊದಲಾದ ಉಪಾಧಿಮಂಡಿತರಾದ ಬಳ್ಳಾರಿ ಏಳುಬೆಂಚೆಮಠದ ಶ್ರೀ.ವೈ.ನಾಗೇಶಶಾಸ್ತ್ರಿ ಇವರು ವೀರಭದ್ರಶಾಸ್ತ್ರಿಗಳ ನೆಚ್ಚಿನ ಶಿಷ್ಯರು, ಇವರ ಶಿಷ್ಯವೃಂದ ಬಹುದೊಡ್ಡದು. ಇವರು ಅತಿ ದೀರ್ಘಾವಧಿಯ ವರೆಗೆ ಮಂದಿರದ ಅಧ್ಯಾಪಕರಾಗಿ ಸೇವೆ ಸಲ್ಲಿಸಿ ೧೯೫೫ರಲ್ಲಿ ಲಿಂಗೈಕ್ಯರಾಗಿರುತ್ತಾರೆ.

ಪಂ.ಸೋಮಶೇಖರಶಾಸ್ತ್ರಿಗಳು ಬೆಣಕಲ್: ಕೊಪ್ಪಳ ತಾಲೂಕಿನ ಬೆಣಕಲ್ ಗ್ರಾಮದಲ್ಲಿ ಜನಿಸಿ ಗದುಗಿನ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಕೃತ ಪಾಠಶಾಲೆಯಲ್ಲಿ ಸಂಸ್ಕೃತ ಕಲಿತು. ಕಾಶಿಯಲ್ಲಿ 'ನ್ಯಾಯಶಾಸ್ತ್ರ' ಅಭ್ಯಾಸಮಾಡಿದರು. ಹಾನಗಲ್ಲ ಶ್ರೀಗಳ ಅನುಮತಿ ಮೇರೆಗೆ ಸಾಗರ ತಾಲೂಕಿನ ಶಿವಮೊಗ್ಗ ಜಿಲ್ಲೆಯ ಕೆಳದಿ ಸಂಸ್ಥಾನದ ಹಿರಿಯ ಮಠದಲ್ಲೂ, ಶಿವಯೋಗ ಮಂದಿರದಲ್ಲೂ ೧೯೨೬ರಲ್ಲಿ ಹುಬ್ಬಳ್ಳಿ ಮೂರು ಸಾವಿರ ಮಠದ ಜ. ಗಂಗಾಧರ ಸಂಸ್ಕೃತ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿ ನಿರ್ವಹಿಸಿದರು. ಪಾಂಡಿತ್ಯ, ವ್ಯವಹಾರ ಕುಶಲರೂ ಆದ ಶಾಸ್ತ್ರಿಗಳು ಉತ್ತಮ ಗ್ರಂಥಗಳನ್ನು ಸಂಪಾದಿಸಿದರು, 'ವೀರಶೈವಾನಾಂದ ಚಂದ್ರಿಕೆ' ಇವರ ಪ್ರಯತ್ನದ ಒಂದು ಅಂಶವಾಗಿದೆ.

ಪಂ.ರೇವಣಸಿದ್ಧಶಾಸ್ತ್ರಿಗಳು ಪಡೇಕನೂರು: ವಿಜಾಪುರ ಜಿಲ್ಲೆಯ ಪಡೇಕನೂರು ಗ್ರಾಮದಲ್ಲಿ ಜನಿಸಿ, ಸೊಲ್ಲಾಪುರದ ಶ್ರೀಮಂತ ವಾರದ ಮಲ್ಲಪ್ಪನವರ ಸಂಸ್ಕೃತ ಪಾಠಶಾಲೆಯಲ್ಲಿ ಅಧ್ಯಯನ ಮುಗಿಸಿ ಕಾಶಿಯಲ್ಲಿ ವ್ಯಾಕರಣ ಶಾಸ್ತ್ರದಲ್ಲಿ ಪಾಂಡಿತ್ಯ ಪಡೆದು ಬಂದರು. ಅಬ್ಬಿಗೇರಿಯಲ್ಲಿ ಸಂಸ್ಕೃತ ಅಧ್ಯಾಪಕರಾಗಿ ನಂತರ ಶ್ರೀಗಳ ಅಪ್ಪಣೆಯಂತೆ ಶಿವಯೋಗಮಂದಿರದ ಅಧ್ಯಾಪಕರಾಗಿ ಬಹುಕಾಲದವರೆಗೆ ಅಂದರೆ ತಮ್ಮ ಆಯುಷ್ಯವನ್ನೆಲ್ಲ ಇಲ್ಲಿಯೇ ಮುಗಿಸಿ ನೂರಾರು ಮಠಾಧಿಪತಿಗಳಿಗೆ ಶಿಕ್ಷಣಭಾಗ್ಯ ಕಲ್ಪಿಸಿದರು.

ಪಂ.ಬಸವರಾಜ ಶಾಸ್ತ್ರಿಗಳು ಪಗಡದಿನ್ನಿ: ದಿನಾಂಕ ೩೦.೮.೧೯೦೨ರಲ್ಲಿ ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಪಗಡದಿನ್ನಿ ಗ್ರಾಮದಲ್ಲಿ ಪಂ. ರುದ್ರಮೂರ್ತಿಶಾಸ್ತ್ರಿಗಳು, ಮಗನಾಗಿ ಜನಿಸಿದರು. ಸಕ್ಕರೆ ಕಂಡೆಪ್ಪನವರಲ್ಲಿ ಅಭ್ಯಾಸ ಆರಂಭಿಸಿ ೧೯೧೪ರಲ್ಲಿ ಕಂಪಲಿಯ ಸಂಸ್ಕೃತ ಪಾಠಶಾಲೆಯಲ್ಲಿ ಪಂ. ಜಗನ್ನಾಥಶಾಸ್ತ್ರಿಗಳಲ್ಲಿ ಪಂಚಕಾವ್ಯ ಅಧ್ಯಯನಮಾಡಿ ೧೯೧೮ರಲ್ಲಿ ಕಾಶಿಯಲ್ಲಿ ಉನ್ನತ ವ್ಯಾಸಂಗ ಮಾಡಿ ಪ್ರಸಿದ್ಧ ವೈಯಾಕರಣಿಗಳಾದ ಪಂ. ದೇವನಾರಾಯಣ ತಿವಾರಿ ಅವರಲ್ಲಿ ವ್ಯಾಕರಣಶಾಸ್ತ್ರ ಅಭ್ಯಾಸ ಮಾಡಿದರು. ನಂತರ 'ವ್ಯಾಕರಣ ಶಾಸ್ತ್ರದಲ್ಲಿ' ವ್ಯಾಕರಣ ತೀರ್ಥ ಪರೀಕ್ಷೆ ಬರೆದು ಪದವಿ ಪಡೆದರು.

ಹೀಗೆ ಪದವಿ ಪಡೆದು ಬಂದ ಬಸವರಾಜ ಶಾಸ್ತ್ರಿಗಳು ೧೯೨೬ ರಿಂದ ೧೯೫೦ರ ವರೆಗೆ ವಿವಿಧ ಶಿಕ್ಷಣ ಸಂಸ್ಥೆಯಲ್ಲಿ ಮಠಗಳಲ್ಲಿ ಅಧ್ಯಾಪಕರಾಗಿ, ನಿರ್ವಾಹಕರಾಗಿ ಸೇವೆ ಸಲ್ಲಿಸಿದರು. ಹಾನಗಲ್ಲ ಕುಮಾರೇಶ್ವರರ ಅನುಗ್ರಹ ಪಡೆದು ಮಂದಿರದ ವಟು-ಸಾಧಕರಿಗೂ ಅಧ್ಯಾಪಕರಾಗಿ ವ್ಯಾಕರಣಶಾಸ್ತ್ರ, ಪ್ರವಚನದಂತಹ ವಿಷಯವನ್ನು ಬೋಧಿಸಿದರು. ಅಧ್ಯಾಪಕರಾಗಿ ಪಠ್ಯಪುಸ್ತಕ ರಚನಾಕಾರರಾಗಿ ಸಂಶೋಧಕರಾಗಿ, ಸಂಪಾದಕರಾಗಿ ಬಹು ಮುಖ್ಯಕಾರ್ಯಗಳನ್ನು ಶಿವಯೋಗ ಮಂದಿರದಲ್ಲಿ ನಡೆಸಿದರು.

ಶ್ರೀ ಜಿ.ಎಂ.ಉಮಾಪತಿಶಾಸ್ತ್ರಿಗಳು ಗೌರಪುರ: ಚಿಕ್ಕಮಗಳೂರು ಜಿಲ್ಲೆಯ ತರಿಕೆರೆಯ ಅಜ್ಜಂಪುರ ಗ್ರಾಮದ ಗೌರಪುರ ಎಂಬ ಹಳ್ಳಿಯಲ್ಲಿ ಜನಿಸಿದ ಉಮಾಪತಿ ಶಾಸ್ತ್ರಿಗಳು, ತ್ರಿಭಾಷಾ ಪಂಡಿತರು. ಹಿಂದಿ, ಸಂಸ್ಕೃತ, ಕನ್ನಡ ಹೀಗೆ ಮೂರು ಭಾಷೆಯಲ್ಲಿ ಪದವಿ ಪಡೆದವರು ಇವರನ್ನು ಸಾಗರ ತಾಲೂಕಿನ ಆನಂದಪುರದ ಹತ್ತಿರದಲ್ಲಿರುವ ಮುರುಘಮಠವು ಮರಿದೇವರಾಗಿನ್ನಾ ಸ್ವೀಕರಿಸಿ ಶಿವಯೋಗ ಮಂದಿರಕ್ಕೆ ವಟುವಾಗಿ ದತ್ತಕ ನೀಡಿ ಅಂದಿನ ಶ್ರೀಗಳಾದ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಸಚ್ಚಿದಾನಂದಮಹಾಸ್ವಾಮಿಗಳ ಆಶೆಯಂತೆ ಕಾಶಿಯಲ್ಲಿ ಪಂ. ಶಿವದತ್ತರಲ್ಲಿ ವ್ಯಾಸಂಗ ಮಾಡಿ ವ್ಯಾಕರಣಶಾಸ್ತ್ರ ದರ್ಶನ, ನವ್ಯ ನ್ಯಾಯಶಾಸ್ತ್ರ ಕಲಿತು, ಜೊತೆಗೆ ಇಂಗ್ಲೀಷ್-ಹಿಂದಿ ಭಾಷೆಯನ್ನು ಅಭ್ಯಾಸ ಮಾಡಿ ೧೯೪೫ರಲ್ಲಿ ಅಡ್ಮಿಷನ್ (ಮ್ಯಾಟ್ರಿಕ್) ಪರೀಕ್ಷೆ ಪಾಸಾದರು.

೧೯೪೭ರಲ್ಲಿ ಇಂಟರ್ ಮೀಡಿಯಟ್ ಪರೀಕ್ಷೆಯನ್ನು ಕಾಶಿ ಹಿಂದೂ ವಿಶ್ವವಿದ್ಯಾಲಯದಲ್ಲಿ ಮುಗಿಸಿದರು. "೧೯೪೮ರಲ್ಲಿ ಹಾನಗಲ್ಲ ಸದಾಶಿವ ಮಹಾಸ್ವಾಮಿಗಳ ಅಪ್ಪಣೆ ಮೇರೆಗೆ ಶಿವಯೋಗ ಮಂದಿರದಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿ, ಸದಾಶಿವ ಮುದ್ರಣಾಲಯದ ಸಂಚಾಲಕರಾಗಿ, ಸುಕುಮಾರ ಪತ್ರಿಕೆಯ ಸಂಪಾದಕರಾಗಿ ಐದು ವರ್ಷ ದುಡಿದು ಅನೇಕ ಅಪ್ರಕಟಿತ ಗ್ರಂಥಗಳ ಶೋಧಿಸಿ, ಸಂಪಾದಿಸಿ ಶಿವಯೋಗ ಮಂದಿರಕ್ಕೆ ಸಂಗ್ರಹಕವಾಗಿ ನೀಡಿದ್ದಾರೆ. ಹೀಗೆ ಕಾಲಕಾಲಕ್ಕೆ ಪ್ರತ್ಯೇಕ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ, ಮುಂದೆ ಶ್ರೀ ಧರ್ಮಸ್ಥಳದ ಮಂಜುನಾಥೇಶ್ವರ ಪ್ರಾಚ್ಯ ಗ್ರಂಥಾಲಯಲ್ಲಿ ಹಲವಾರು ವರ್ಷ ದುಡಿದು ಈಗ ವಿಶ್ರಾಂತ ಬದುಕಿಗಾಗಿ ತಮ್ಮ ನೆಚ್ಚಿನ ಸಾಗರ ತಾಲೂಕಿನ ಮುರುಘಾಮಠದಲ್ಲಿ ಉಳಿದಿರುವ ಶ್ರೀಯುತರು ಇಂದು ೮೦ರ ಹರೆಯದಲ್ಲೂ ಓದಿನಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ."[೧೭]

ಪಂ.ಜಗದೀಶಶಾಸ್ತ್ರಿಗಳು ಅಬ್ಬಿಗೇರಿ: ೧೯೫೫ರಲ್ಲಿ ಶಿವಯೋಗ ಮಂದಿರದಲ್ಲಿ ಸಂಸ್ಕೃತ ಅಧ್ಯಾಪಕರಾಗಿ ಬಂದ ಶ್ರೀಯುತರು ಹಾಲಕೆರೆ ಸಂಸ್ಕೃತ ಪಾಠಶಾಲೆಯಲ್ಲೂ, ನರೇಗಲ್ಲ ಮಾಧ್ಯಮಿಕ ಶಾಲೆಯಲ್ಲೂ ಸೇವೆ ಸಲ್ಲಿಸಿದ್ದಾರೆ. ಕಾಶೀಯಲ್ಲಿ ಕಲಿತ ಇವರು ಪ್ರಾಧ್ಯಾಪಕರಾಗಿಯೇ ವೃತ್ತಿ ನಿರ್ವಹಿಸಿ ನಿವೃತ್ತರಾದರು.

ಶ್ರೀಗುರುಸಿದ್ಧ ಪಂಡಿತರು, ವೇದಾಂತಾಚಾರ್ಯ: ಶ್ರೀಯುತ ಗುರುಸಿದ್ಧ ಪಂಡಿತರು ಗಲಗಲಿಯವರು ೧೯೪೦ರಲ್ಲಿ ಶಿವಯೋಗ ಮಂದಿರಕ್ಕೆ ಪ್ರವೇಶ ಪಡೆದು ಪಂ. ಬಸವರಾಜ ಶಾಸ್ತ್ರಿಯವರಲ್ಲಿ ಸಂಸ್ಕೃತ ಪ್ರಾಥಮಿಕ, ಪ್ರೌಢ ಶಿಕ್ಷಣ ಪಡೆದು ೧೯೪೬ರಲ್ಲಿ ಕಾಶಿಗೆ ಹೋಗಿ ಕಾವ್ಯ, ಸಾಹಿತ್ಯ ಶಿಕ್ಷಣ ಪಡೆದು ೧೯೫೪ರಲ್ಲಿ 'ವೇದಾಮತಾರ್ಯ' ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ವೇದಾಂತದಲ್ಲಿ ಇವರ ಗುರುಗಳಾದ ಪಂ.ಲಕ್ಷ್ಮೀನಾಥ ಝಾ ರಿಂದ 'ಉದ್ಧಾಮ ಪಂಡಿತರೆನಿಸಿಕೊಂಡು' ಶಿವಯೋಗ ಮಂದಿರಕ್ಕೆ ಪ್ರಾಧ್ಯಾಪಕರಾಗಿ ಬಂದರು.

೧೯೫೫ ರಿಂದ ಶಿವಯೋಗ ಮಂದಿರದ ಪ್ರಾಧ್ಯಾಪಕರಾಗಿ, ಸದಾಶಿವ ಮುದ್ರಣಾಲಯದ ವ್ಯವಸ್ಥಾಪಕರಾಗಿಯೂ, ಸುಕುಮಾರ ಪತ್ರಿಕೆಯ ಸಂಪಾದಕರಾಗಿ ಕಾರ್ಯ ನಿರ್ವಹಿಸಿದ ಪಂಡಿತರು ಉತ್ತಮ ಬರಹಗಾರರು, ವಾಗ್ಮಿಗಳು ಆಗಿದ್ದರು.

ಶ್ರೀ ಚಿದ್ಘನ ಶಿವಾಚಾರ್ಯರು, ಕುನ್ನಾಳು: ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ಕುನ್ನಾಳ ಗ್ರಾಮದಲ್ಲಿ ಜನಿಸಿದ ಶಿವಾಚಾರ್ಯರು. ಕಾಶಿಯಲ್ಲಿ ಸಂಗೀತ, ಸಂಸ್ಕೃತ ವಿಷಯದಲ್ಲಿ ಪಾಂಡಿತ್ಯ ಪಡೆದು ಹಲವು ಕಾಲ ಸರ್ಕಾರಿ ಮಾಧ್ಯಮಿಕ ಶಾಲೆಯಲ್ಲಿ ಸಂಸ್ಕೃತ ಶಿಕ್ಷಕರಾಗಿ ಹಾರನಹಳ್ಳಿ ಸಂಸ್ಕೃತ ಪಾಠಶಾಲೆಯಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ ಇವರು ಶಿವಯೋಗ ಮಂದಿರದಲ್ಲೂ ಹಲವು ವರ್ಷ ಸೇವೆ ಸಲ್ಲಿಸಿದ್ದಾರೆ.

ಹೀಗೆ ಪ್ರಾಧ್ಯಾಪಕ ವರ್ಗದೊಂದಿಗೆ ಹಲವಾರು ಶಿಕ್ಷಕರು ಕೂಡ ಶಿವಯೋಗಮಂದಿರದ ವಟು-ಸಾಧಕರಿಗೆ ಬೋಧನೆ ಮಾಡಿದ್ದಾರೆ. ಅವುಗಳೆಂದರೆ

ಶ್ರೀ ಸಂಗನಬಸವಪ್ಪ ಬಸವಲಿಂಗಪ್ಪ ಚಿತ್ತವಾಡಗಿ: ೧೯೦೬ ರಿಂದ ೧೯೫೪ರ ವರೆಗೆ ಶಿವಯೋಗ ಮಂದಿರದಲ್ಲಿ ಕನ್ನಡ ಶಿಕ್ಷಕರಾಗಿ ಬಂದ ಚಿತ್ತವಾಡಗಿಯವರು. ಮಂದಿರದ ಪಂಡಿತರಿಂದ ಸಂಸ್ಕೃತದಲ್ಲಿ ಪಾಂಡಿತ್ಯ ಪಡೆದವರು. ಜೊತೆಗೆ ಬಿಡುವಿನ ವೇಳೆಯಲ್ಲಿ ವನಸ್ಪತಿ ಔಷಧಿಯನ್ನು ಸಿದ್ಧಪಡಿಸಿ ರೋಗಗಳಿಗೆ ಮದ್ದು ನೀಡುತ್ತಿದ್ದರು. ಕನ್ನಡದ ಜೊತೆ ಸಂಸ್ಕೃತವನ್ನು ಪ್ರಾಥಮಿಕ ಹಂತದ ವಟುಗಳಿಗೆ ಬೋಧಿಸುತ್ತಿದ್ದರು. ೧೯೫೪ರ ನಂತರ ವಿಜಾಪುರದ ಸರ್ಕಾರಿ ಜಿಲ್ಲಾ ಬೋರ್ಡಿನಲ್ಲಿ ಶಿಕ್ಷಕರಾಗಿ ಸೇವೆ ಆರಂಭಿಸಿ ೧೯೫೪ರಲ್ಲಿ ಮರಣ ಹೊಂದಿದರು.

ಸಂಗನಬಸಪ್ಪ ವೀರಬಸವಪ್ಪ ಹಂಡಿ: ೧೮೮೫ರಲ್ಲಿ ಐಹೊಳೆಯ ಗ್ರಾಮದಲ್ಲಿ ಜನಿಸಿದ ಹಂಡಿಯವರು ಧಾರವಾಡ ಸರ್ಕಾರಿ ಕನ್ನಡ ಟ್ರೇನಿಂಗ್ ಕಾಲೇಜಿನಲ್ಲಿ ಎರಡು ವರ್ಷ ತರಬೇತಿ ಪಡೆದು ೧೯೧೬ರಲ್ಲಿ ಶಿವಯೋಗ ಮಂದಿರಕ್ಕೆ ಶಿಕ್ಷಕರಾಗಿ ಬಂದು ೧೯೨೦ರ ವರೆಗೆ ಸೇವೆ ಸಲ್ಲಿಸಿ ಮುಂದೆ ಜಿಲ್ಲಾ ಬೋರ್ಡಿನ ಶಿಕ್ಷಕರಾದರು. ಆದರೂ ಬಿಡುವಿನ ವೇಳೆಯಲ್ಲಿ ಮಂದಿರಕ್ಕೆ ಬಂದು ವಟುಗಳಿಗೆ ಬೋಧಿಸುತ್ತಾ ಧಾರ್ಮಿಕ, ತಾತ್ವಿಕ, ಶಿಕ್ಷಣ, ವಚನಶಾಸ್ತ್ರ, ಪುರಾಣ ಪ್ರವಚನ, ಸಾಹಿತ್ಯ ಮುಂತಾದ ವಿಷಯಗಳ ಬಗ್ಗೆ ತಿಳಿಸುತ್ತಿದ್ದರು. ಶ್ರೀ ಘನಮಠಾರ್ಯರ

ಪುರಾಣ, ಶ್ರೀ ಅಥಣಿ ಶಿವಯೋಗೀಶ್ವರ ಪುರಾಣ, ಶ್ರೀ ಹಾನಗಲ್ಲ ಕುಮಾರೇಶ್ವರ ಪುರಾಣಗಳು ವಚನ ರೂಪದಲ್ಲಿ ಬರೆದು ಸಾಹಿತ್ಯ ಕ್ಷೇತ್ರದಲ್ಲೂ ಕೀರ್ತಿ ಪಡೆದವರು.

ಶ್ರೀ ಸಿದ್ದಪ್ಪ ಬಸವಲಿಂಗಪ್ಪ ಭಗವತಿ: ಕನ್ನಡ ಮುಲ್ಕಿ ಪರೀಕ್ಷೆ ಪಾಸುಮಾಡಿ ಕನ್ನಡ ಟ್ರೇನಿಂಗ್ ಮುಗಿಸಿ ಶಿವಯೋಗ ಮಂದಿರದಲ್ಲಿ ಶ್ರೀ ಶಿವಬಸಪ್ಪ ಮಾಗಿ ಮಾಸ್ತರ ಇವರ ಮಾರ್ಗದರ್ಶನದಲ್ಲಿ ವಟುಗಳಿಗೆ ಕನ್ನಡ ಭಾಷೆ, ಸಾಹಿತ್ಯ ಕಲಿಸಿದರು. ೧೯೪೮ರಲ್ಲಿ ಸರ್ಕಾರದಲ್ಲಿ ಶಿಕ್ಷಕ ವೃತ್ತಿ ಆರಂಭಿಸಿ ಆಫೀಸರ್, ಅಸಿಸ್ಟೆಂಟ್ ಡೆಪ್ಯೂಟಿಯಾಗಿ, ಜನಪ್ರಿಯ ಶಿಕ್ಷಣಾಧಿಕಾರಿಯಾಗಿ ಹಲವು ಕಡೆ ಸೇವೆ ಸಲ್ಲಿಸಿ ೧೯೫೬ರಲ್ಲಿ ನಿವೃತ್ತಿ ಹೊಂದಿದರು. ನಂತರ ಬಿಡುವಿನ ವೇಳೆಯಲ್ಲಿ ಹಲವು ಕಾಲ ಮಂದಿರಕ್ಕೆ ಬಂದು ವಟುಗಳಿಗೆ ಬೋಧಿಸಿದ್ದಾರೆ.

ಶ್ರೀ ಸಿದ್ಧರಾಮಪ್ಪ ಜೋಳದ, ರೋಣ: ೧೯೨೨ರಲ್ಲಿ ಮಂದಿರದ ಶಿಕ್ಷಕರಾಗಿ ಬಂದ ರಾಮಪ್ಪನವರು ಸರ್ಕಾರಿ ಕೆಲಸಕ್ಕೆ ಆಸೆ ಪಡದೆ ಹಲವು ಕಾಲ ಮಂದಿರದಲ್ಲಿ ಉಳಿದು ವಟುಗಳಿಗೆ 'ಕನ್ನಡ-ಇಂಗ್ಲೀಷ್' ಭಾಷೆಯನ್ನು ಬಹು ಶ್ರದ್ದೆಯಿಂದ ಕಲಿಸಿದವರು. "ರಾಮಪ್ಪನವರು ಇಂಗ್ಲೀಷ್ ಭಾಷೆಯನ್ನು ಆಳವಾದ ಅಭಿರುಚಿ ಹುಟ್ಟಿಸಿ ಬೋಧಿಸುತ್ತಿದ್ದರೆಂದು ಅವರ ಸಮಕಾಲೀನ ವಟುಗಳು ಹೇಳುತ್ತಿದ್ದರೆಂಬ ಮಾತುಗಳಿವೆ."[೧೮]

ಶ್ರೀಶಾಂತವೀರಯ್ಯ ನಿಶಾನಿಮಠ ದಾವಣಗೆರೆ: ಚಿಕ್ಕಂದಿನಿಂದಲೂ ಧಾರ್ಮಿಕ ಒಲವು ಹೊಂದಿದ್ದ ಶಾಂತವೀರಯ್ಯನವರು ಇಂಗ್ಲೀಷ್‌ನಲ್ಲಿ ಮ್ಯಾಟ್ರಿಕನವರೆಗೆ ಶಿಕ್ಷಣ ಪಡೆದವರು. ಇವರ ಆಸಕ್ತಿ ಕಂಡ ಮಂದಿರದ ಶ್ರೀಗಳು ೧೯೨೦ರಲ್ಲಿ ಇವರನ್ನು ಶಿವಯೋಗ ಮಂದಿರದ ವಟುಗಳಿಗೆ ಇಂಗ್ಲೀಷ್ ಭಾಷೆ ಕಲಿಸುವಂತೆ ಸೂಚಿಸಿ ಶಿಕ್ಷಕರಾಗಿ ಸೇವೆಗೆ ಆಹ್ವಾನಿಸಿದರು. ಮುಂದೆ ತಾಲೆಗರಿ ಸಂಗ್ರಹ ಓದುವ ಹವ್ಯಾಸದಿಂದ ಮಂದಿರಕ್ಕಾಗಿ ಶೋಧನೆಯ ಕಾರ್ಯವನ್ನು ನಿರ್ವಹಿಸಿದರು. ಜೊತೆಗೆ ಗ್ರಂಥಾಲಯದಲ್ಲಿ ಅವನ್ನು ಸಂಗ್ರಹಿಸಿದರು.

ಶ್ರೀಸಿದ್ಧಲಿಂಗಪ್ಪ ಅಂಗಡಿ: ೧೯೧೫ರಲ್ಲಿ ಬಾಗಲಕೋಟೆಯ ಚಿಕ್ಕಾಲಗುಂಡಿ ಗ್ರಾಮದಲ್ಲಿ ಜನಿಸಿದ ಸಿದ್ಧಲಿಂಗಪ್ಪ ಮುಲ್ಕಿ ಪರೀಕ್ಷೆಯನ್ನು ಭಗವತಿ ಶ್ರೀ.ತಿ.ಬಿ.ತಿಪ್ಪಣ್ಣ ಹಾಗೂ ಶ್ರೀ.ಬಿ.ಬಿ.ಮುರನಾಳ ಇವರ ಮಾರ್ಗದರ್ಶನದಲ್ಲಿ ಪಾಸುಮಾಡಿದವರು. ೧೯೩೨ರಲ್ಲಿ ಮಾಗಿ ಮಾಸ್ತರ ಮಾರ್ಗದರ್ಶನದಂತೆ ಮಂದಿರದಲ್ಲಿ ಶಿಕ್ಷಕರಾಗಿ ಯೋಗಾಸನ, ಕನ್ನಡ ವಿಷಯ ಬೋಧಿಸುತ್ತಿದ್ದರು. ಯೋಗಾಸನದಲ್ಲಿ ನುರಿತವರಾಗಿದ್ದ ಅಂಗಡಿಯವರು ಅನೇಕ ಬಹುಮಾನಗಳನ್ನು ಪಡೆದಿದ್ದಾರೆ.

ಶ್ರೀಕುಮಾರ, ಹಾನಗಲ್ಲ ಕುಮಾರೇಶ್ವರರ ದಿವ್ಯದರ್ಶನ ಭಾಗ್ಯದಿಂದ ಜನಿಸಿದ ಬಾಲಕನಿಗೆ ತಂದೆ ಮಲ್ಲಯ್ಯನವರು 'ಕುಮಾರ' ಎಂದು ನಾಮಕರಣ ಮಾಡಿದರು. ಅವನನ್ನು ಶ್ರೀಗಳ ಉಡಿಗೆ ಹಾಕಿದರು. ಹುಬ್ಬಳ್ಳಿ ಮೂರು ಸಾವಿರ ಮಠದ ಲಿಂ.ಶ್ರೀ.ಜ. ಗುರುಸಿದ್ಧರಾಜಯೋಗೀಂದ್ರರಲ್ಲಿ

ಬಾಲ್ಯದ ಕನ್ನಡ, ಮಾಧ್ಯಮಿಕ ಇಂಗ್ಲೀಷ್ ಶಿಕ್ಷಣ ಪಡೆದರು. ಶ್ರೀ ನಿ.ಪ್ರ. ಶಿವಬಸವಸ್ವಾಮಿಗಳ ಬೆಳಗಾವಿ ವೀರಶೈವ ಫ್ರೀ ಬೋರ್ಡಿಂಗಿನಲ್ಲಿ ಕಾಲೇಜು ಶಿಕ್ಷಣ ಪಡೆದರು. ಲಿಂಗರಾಜ ಕಾಲೇಜಿನಲ್ಲಿ ಬಿ.ಎ. ಪದವಿಯನ್ನು, ಮುಂಬೈ, ಕಾಶಿ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರ ಮತ್ತು ದರ್ಶನ ಶಾಸ್ತ್ರದಲ್ಲಿ ಎಂ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಶಿವಯೋಗ ಮಂದಿರದಲ್ಲಿ ಶಿಕ್ಷಕರಾಗಿ ವೃತ್ತಿಯಲ್ಲಿ ಮುಂದುವರಿದಿದ್ದಾರೆ.

ಶ್ರೀಎಸ್.ಬಿ.ದುಂದೂರು: ಧಾರವಾಡ ಜಿಲ್ಲೆಯ ಶಿಶುನಾಳ ಗ್ರಾಮದಲ್ಲಿ ಹುಟ್ಟಿ ಅಲ್ಲಿಯೇ ಪ್ರಾಥಮಿಕ ಶಿಕ್ಷಣ ಮುಗಿಸಿದ ಮೂರುಸಾವಿರ ಮಠದಲ್ಲಿ ಆಶ್ರಯ ಪಡೆದು ಮಾಧ್ಯಮಿಕ ಹಾಗೂ ಪ್ರೌಢ ಶಿಕ್ಷಣ ಪೂರೈಸಿ ಜ. ಗುರುಸಿದ್ದೇಶ್ವರ ಕನ್ನಡ ಟ್ರೇನಿಂಗ್ ಕಾಲೇಜಿನಲ್ಲಿ ತರಬೇತಿ ಪಡೆದರು. ೧೯೫೭ರಲ್ಲಿ ಶ್ರೀ ಗುರುಸಿದ್ಧರಾಜಯೋಗೀಂದ್ರ ಮಹಾಸ್ವಾಮಿಗಳ ಅಪ್ಪಣೆಯಂತೆ ಮಂದಿರಕ್ಕೆ ಶಿಕ್ಷಕರಾಗಿ ಐದು ವರ್ಷ ಮಂದಿರಕ್ಕಾಗಿ ದುಡಿದರು. ಮುಂದೆ ಧಾರವಾಡ ಜಿಲ್ಲಾ ಬೋರ್ಡಿನಲ್ಲಿ ಶಿಕ್ಷಕರಾಗಿ ಸೇವೆ ಮುಂದುವರಿಸಿದರು.

ಹೀಗೆ ಆರಂಭಿಕ ಹಂತದಲ್ಲಿ ಸಂಸ್ಥೆಯ ಟ್ರಸ್ಟಿ ಕಮೀಟಿಯಿಂದ ನಿಯುಕ್ತರಾದ ಇಬ್ಬರು ಸ್ವಾಮಿಗಳ ನೇತೃತ್ವದಲ್ಲಿ ಮಂದಿರದ ದಿನನಿತ್ಯದ ವ್ಯವಸ್ಥೆ ಸಾಗುತ್ತಿತ್ತು. ಸ್ವಾಮಿಗಳೂ ನಿಷ್ಠೆಯಿಂದಲೇ ಕಾರ್ಯ ನಿರ್ವಹಿಸುತ್ತಿದ್ದರು. ಈ ಸ್ವಾಮಿಗಳ ಮಾರ್ಗದರ್ಶನದಲ್ಲಿ ಸಹಾಯಕರಾಗಿ ಹಿರಿಯ ಸಾಧಕರು ಸೇವಾಭಾವನೆಯಿಂದಲೂ, ಕಳಕಳಿಯಿಂದಲೂ ಪಾಠ ಪ್ರವಚನ ಮಾಡುವ ಪಾಠ ಹೇಳುವ ಪಂಡಿತರಿಗೆ ಅನುಕೂಲ ಮಾಡಿಕೊಡುತ್ತಿದ್ದರು. ಆಗಿನ ಕಾಲದಲ್ಲಿ ಕಾಶಿಯಲ್ಲಿ ಹಲವಾರು ವರ್ಷಗಳ ಪರ್ಯಂತರ ಅಧ್ಯಯನ ಮಾಡಿದ ವಿದ್ವಾಂಸರು ಸಿಗುತ್ತಿದ್ದರು. ಸಂಸ್ಕೃತ ಶಾಸ್ತ್ರಗಳ ಪಾಠ ಹೇಳುವ ಇಂಥ ಶಾಸ್ತ್ರಿಗಳು ಇರುತ್ತಿದ್ದರು. ಕನ್ನಡವನ್ನು ಕಲಿಸುವ ಶಿಕ್ಷಕರೂ ತಮ್ಮ ಕೆಲಸವನ್ನು ಮಾಡುತ್ತಿದ್ದರು. ಶಿವಾನುಭವವನ್ನು ತಿಳಿಸಿಕೊಡುವ ಅನುಭವಿಗಳೂ ನಿಸ್ವಾರ್ಥ ಸೇವೆ ಸಲ್ಲಿಸುತ್ತಿದ್ದರು. ಪ್ರಾಥಮಿಕ ಶಿಕ್ಷಣವನ್ನು ಪೂರೈಸಿದವರಿಗೆ ಸಂಸ್ಕೃತಾಧ್ಯಯನ ಪ್ರಾರಂಭವಾಗುತ್ತಿತ್ತು. ವಟುಗಳು-ಸಾಧಕರು ತಮ್ಮ ತಮ್ಮ ಕಟ್ಟು ನಿಟ್ಟಾದ ಆಚಾರ ಮತ್ತು ನಿಯಮಗಳನ್ನು ಚಾಚೂತಪ್ಪದೇ ಆಚರಿಸುವಂತೆ ಹಿರಿಯ ಸಾಧಕರು ಸ್ವಾಮಿಗಳು ನಿರೀಕ್ಷಿಸುತ್ತಿದ್ದರು. ಕನ್ನಡ ಭಾಷಾಜ್ಞಾನವಾದ ಬಳಿಕ ಕಾವ್ಯ-ಪುರಾಣಗಳ ಅಭ್ಯಾಸ ನಡೆಯುತ್ತಿತ್ತು.

ಕನ್ನಡ ಅಭ್ಯಾಸ ಮುಗಿಯುತ್ತಿದ್ದಂತೆ ಸಂಸ್ಕೃತ ಭಾಷಾಜ್ಞಾನದತ್ತ ಗಮನಹರಿಸಲಾಗುತ್ತಿತ್ತು. ಸಂಸ್ಕೃತ ವ್ಯಾಕರಣ ಜ್ಞಾನ ಮಾಡಿಕೊಡುತ್ತಾ ಕಾವ್ಯಗಳ ಅಧ್ಯಯನ ಪ್ರಾರಂಭವಾಗುತ್ತಿತ್ತು. ಪ್ರತ್ಯೇಕವಾಗಿ ವ್ಯಾಕರಣ ಶಾಸ್ತ್ರ, ತರ್ಕಶಾಸ್ತ್ರ, ವೇದಾಂತಶಾಸ್ತ್ರ, ಯೋಗಶಾಸ್ತ್ರಗಳ ಪರಿಚಯ ಮಾಡಿಕೊಡಲಾಗುತ್ತದೆ. ಯಾವ ಯಾವ ಸಾಧಕರು ಯಾವ ವಿಷಯವನ್ನು ಕಲಿಯಲು

ಬಯಸುವರೋ ಅವರಿಗೆ ಆ ವಿಷಯವನ್ನು ಕಲಿಸಲಾಗುವುದು. ಪುರಾಣ-ಪ್ರವಚನ ಮಾಡಲು ಸಂಗೀತಾಭ್ಯಾಸಕ್ಕೂ ಅನುಕೂಲವಿತ್ತು. ಪಂ.ಪಂಚಾಕ್ಷರ ಗವಾಯಿಗಳು ಮೊದಲು ಶಿವಯೋಗ ಮಂದಿರದಲ್ಲಿಯೇ ಸಂಗೀತ ಪಾಠಶಾಲೆ ಪ್ರಾರಂಭಿಸಿ ನಂತರ ಸ್ವತಂತ್ರವಾಗಿ ಮಠವೊಂದನ್ನ ಸ್ಥಾಪಿಸಿದರೂ ಮಂದಿರದಲ್ಲಿ ಅಲ್ಪಮಟ್ಟಿನ ಸಂಗೀತಾಭ್ಯಾಸ ಇಂದಿಗೂ ನಡೆಯುತ್ತದೆ. ಪೂಜ್ಯ ಸದಾಶಿವ ಮಹಾಸ್ವಾಮಿಗಳು ಸುಮಾರು ಐವತ್ತು ವರ್ಷ ಸಂಸ್ಕೃತ-ಸಂಗೀತಾದ ವಿಷಯವನ್ನು ಅವರೇ ಹೇಳಿಕೊಡುತ್ತಿದ್ದರು. ಶಿವಯೋಗ ಮಂದಿರ ಸಂಸ್ಥೆಯು ಸ್ಥಾಪನೆಗೊಂಡ ಸಂದರ್ಭದಲ್ಲಿನ ಸಂಸ್ಕೃತ ಪಂಡಿತರುಗಳೆಂದರೆ

* ನವಲಗುಂದ ತಾಲೂಕಿನ ಕೊಂಗವಾಡ ಪಂ.ವೀರಭದ್ರಶಾಸ್ತ್ರಿಗಳು
* ಸಿಂಧನೂರು ತಾಲೂಕಿನ ಪಗಡದಿನ್ನಿ ಬಸವರಾಜಶಾಸ್ತ್ರಿಗಳು
* ಪಂ.ಕಲಿಗಣನಾಥಶಾಸ್ತ್ರಿಗಳು
* ಇಟಗಿ ಸೋಮನಾಥಶಾಸ್ತ್ರಿಗಳು
* ಚನ್ನಬಸವಶಾಸ್ತ್ರಿಗಳು
* ಜಗದೀಶಶಾಸ್ತ್ರಿ
* ಸದಾಶಿವಶಿವಾಚಾರ್ಯ ಗಿರಿಯಾಪುರ
* ಹಾನಗಲ್ಲ ಸದಾಶಿವಸ್ವಾಮಿಗಳು
* ನಿಡುಮಾಮಿಡಿ ಚನ್ನಬಸವದೇಶಿಕೇಂದ್ರರು
* ಹುಬ್ಬಳ್ಳಿ ಹೊಸಮಠದ ಶಿವಬಸವಸ್ವಾಮಿಗಳು
* ಪಂ.ಉಮಾಪತಿಶಾಸ್ತ್ರಿಗಳು
* ಪ್ರೊ.ಎ.ಎಲ್.ಹಿರೇಮಠ

ಇವರೆಲ್ಲ ಮಂದಿರದಲ್ಲೇ ಅಭ್ಯಾಸ ಮಾಡಿ ಅಲ್ಲಿಯೇ ಪಾಂಡಿತ್ಯವನ್ನು ಸಂಪಾದಿಸಿ ಅತ್ಯುತ್ತಮ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ತ್ರಿಭಾಷಾ ಪಂಡಿತರಾಗಿ, ಹಲವಾರು ವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಡಿಲಿಟ್ ಪದವಿ ಪಡೆದಿದ್ದಾರೆ."[೧೯]

ಶಿವಯೋಗ ಮಂದಿರ ಸಂಸ್ಥೆಯಲ್ಲಿ ಅಧ್ಯಕ್ಷರುಗಳ ಕಾಲಕ್ಕೆ ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ, ಶಿಕ್ಷಕರಾಗಿ, ಯೋಗಶಿಕ್ಷಕರಾಗಿ ಸಂಗೀತ, ಪ್ರವಚಕರಾಗಿ ಸೇವೆ ಸಲ್ಲಿಸಿದವರ ಸಮಗ್ರ ಮಾಹಿತಿಯಾಗಲಿ, ವಿಚಾರವಾಗಲಿ ಎಲ್ಲಿಯೂ ದಾಖಲೆಯ ರೂಪದಲ್ಲಿ ದೊರೆತಿಲ್ಲ ಹಾಗಾಗಿ ಸಿಕ್ಕ ಮೇಲಿನ ಅಂಶವು ದಾಖಲೆಗೆ ಅರ್ಹವೆಂದು ಭಾವಿಸಿ ಇಲ್ಲಿ ದಾಖಲಿಸಲಾಗಿದೆ. ಇದರೊಂದಿಗೆ ಕಾರ್ಯನಿರ್ವಹಿಸಿರುವವರ ಮಾಹಿತಿಯನ್ನು ನಾವು ಸಂದರ್ಶನದ ಮೂಲಕ ಅಲ್ಲಿ ಕಲಿತ ವಟು ದೇವರುಗಳಿಂದ ಕೆಲವಾರು ಹೆಸರುಗಳನ್ನು ಪಟ್ಟಿ ಮಾಡಲಾಗಿದ್ದು, ಇದು ಕೇವಲ

ಅವರ ಹೆಸರುಗಳಾಗಿದ್ದು ಕೆಲವೊಬ್ಬರ ಊರು, ತಾಲೂಕು ಅವರು ಕಲಿಸುತ್ತಿದ್ದ ವಿಷಯದ ಬಗ್ಗೆ ಮಾತ್ರ ಮಾಹಿತಿ ಕಲೆ ಹಾಕಲಾಗಿದೆ. ಅವು ಇಂತಿವೆ.[೨೦]

* ಪಂಡಿತ ಗುರುಸಿದ್ಧ ಗಲಿಗಲಿ ಶಾಸ್ತ್ರಿಗಳು–ಸಂಸ್ಕೃತ, ಹಿಂದಿ, ಕನ್ನಡ
* ಕೊಪ್ಪಳದ ಶಿವಯ್ಯ ಹಿರೇಮಠ–ಕಾವ್ಯಗಳು
* ನಾಗರಮೋಡು ಆನಂದಗೌಡ ಪಾಟೀಲ–ಇಂಗ್ಲೀಷ್ ಭಾಷೆ
* ಈಶ್ವರ ಕಾಪ್ಸೆ–ಯೋಗಶಾಸ್ತ್ರ
* ಗದಗದ ಹಿರೇಹಾದಿಗೋಳ ರುದ್ರಪ್ಪ ಪಾಟೀಲ–ಗಣಿತ
* ನೆವಲಗಿ ಶಿವಯ್ಯ ಶಿವಲಿಂಗಯ್ಯ ಜಾಳಿಹಾಳ–ಸಂಗೀತಶಾಸ್ತ್ರ
* ಕೇಡಗಿಯ ಶಿವಬಸವಸ್ವಾಮಿ–ಸಮಾಜ,ಜ್ಯೋತಿಶಾಸ್ತ್ರ
* ಶಿವಲಿಂಗಶಾಸ್ತ್ರಿಗಳು–ಶರಣರ ವಚನಗಳ ಪ್ರವಚನ
* ಶ್ರೀ ಸಿದ್ಧವೀರ ಹಿರೇಮಠ ತಾಳಗುಪ್ಪ ಕೊಡಗಿಮಠ–ಇಂಗ್ಲೀಷ್
* ರವಿಮಠದ–ಗಣಿತ
* ರಾಜನಾಯ್ಕ–ಇಂಗ್ಲೀಷ್
* ನೀಲಪ್ಪ–ಕನ್ನಡ ಭಾಷೆ
* ಅಕ್ಕಿಪೇಟೆ ಶಿವಬಸವರು
* ಸದಾಶಿವ ಮಹಾಸ್ವಾಮಿಗಳು–ಪ್ರವಚನ,ಸಂಗೀತ,ಗಮಕ,ಕನ್ನಡ
* ಶಿವಬಸವದೇವರು ನಾಗನೂರು
* ಶ್ರೀವೀರಬಸವಪ್ಪ ಶಿವಲಿಂಗಪ್ಪ ಶ್ರೇಷ್ಠಿ–ಸಂಸ್ಕೃತ, ಇಂಗ್ಲೀಷ್
* ಪಂ.ಮಹಾಲಿಂಗಯ್ಯನವರು ಹಿರೇಮಠ ದ್ಯಾಂಪುರ–ಷಡಕ್ಷರದೇವರ ಕಾವ್ಯ, ವಚನಶಾಸ್ತ್ರ

ಇದರೊಂದಿಗೆ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಬೋಧಕ ವರ್ಗ ಹಾಗೂ ಅವರ ವಿದ್ಯಾರ್ಹತೆ ಬೋಧನಾ ವಿಷಯಗಳು, ಮೊದಲಾದ ಅಂಶಗಳು ದಾಖಲೆಯಾಗಿರಲೆಂಬ ಆಶಯದಿಂದ ಇಲ್ಲಿ ಪಟ್ಟಿ ಮಾಡಲಾಗಿದೆ.

೧. ಶ್ರೀ. ಮರುಳರಾಧ್ಯ ಕೆ. ಹಿರೇಮಠ, ಮುಖ್ಯೋಪಾಧ್ಯಾಯರು ಬಿ.ಎ., ಬಿ.ಇಡಿ
ಬೋಧಾನಾ ವಿಷಯಗಳು: ಕನ್ನಡ ಭಾಷಾ ಪತ್ರಿಕೆ, ಸಮಾಜ ವಿಜ್ಞಾನ
೨. ಶ್ರೀ. ಸಂಗಪ್ಪ. ಬಿ. ಹಗೇದಾಳ, ಪಿ.ಯು.ಸಿ., ಡಿ.ಇಡಿ; ವಿಜ್ಞಾನ, ಗಣಿತ
೩. ಶ್ರೀ. ಶ್ರೀಶೈಲ ಮ. ಪಟ್ಟೇದಾ, ಎಂ.ಎ.,ಎಂ.ಫಿಲ್; ಹಿಂದಿ
೪. ಶ್ರೀ. ಗಂಗಾಧರಯ್ಯ ಸಿ. ಹಿರೇಮಠ, ಎಂ.ಎ.ಬಿ.ಇಡಿ.; ಇಂಗ್ಲೀಷ್
೫. ಶ್ರೀ. ದೇವರೆಡ್ಡಿ. ಬಿ. ಇಮ್ರಾಪುರ ಬಿ.ಎಸ್‌ಸಿ, ಬಿ.ಇಡಿ, ಗಣಿತ, ವಿಜ್ಞಾನ

೭. ಶ್ರೀ. ಸಿ.ಸಿ. ಹಿರೇಮಠ ಎಂ.ಎ.,ಬಿ.ಇಡಿ.; ಸಂಸ್ಕೃತ

೭. ಶ್ರೀ. ಶರಣಯ್ಯ ಎಸ್. ಚರೇದ ಎಂ.ಎ,ಬಿ.ಇಡಿ.; ಕಂಪ್ಯೂಟರ್

೮. ಶ್ರೀ. ಬಸವರಾಜ್ ಎಂ.ಎ, ಕನ್ನಡ

೯. ಶ್ರೀ. ಗುರುಮಹಾಂತ ಎಂ. ಹಿರೇಮಠ, ಬಿ.ಎ.ಸಿ.ವೈ.ಎಸ್.; ಯೋಗಾಭ್ಯಾಸ

೧೦. ಶ್ರೀ. ಅಜಯ್ ಪುರಾಣೀಕಮಠ; ವೀರಶೈವವಾಗ್ಮೇಯ, ವೀರಶೈವ ಧರ್ಮತತ್ವ

೧೧. ಶ್ರೀ. ವಾಯ್. ನಾರಾಯಣ ಶರಣರು; ಪ್ರವಚನ

ಹೀಗೆ ಈ ಮೇಲಿನ ಎಲ್ಲಾ ಶಿಕ್ಷಕರು ಮಾಧ್ಯಮಿಕ, ಪ್ರೌಢ, ಪದವಿಪೂರ್ವ ತರಗತಿಗಳಿಗೆ ಆಯಾ ಅರ್ಹತಾ ವಿಷಯವನ್ನು ವರ್ಗವಾರು ಪ್ರತ್ಯೇಕ ಅವಧಿಯಲ್ಲಿ ವೇಳಾಪಟ್ಟಿ ಅನುಸಾರ ತರಗತಿವಾರು ಬೋಧನೆಯನ್ನು ಮಾಡುತ್ತಾರೆ. ಸಾಧಕರನ್ನು ಎಲ್ಲ ಬಗೆಯಿಂದಲೂ ಏಳಿಗೆಯಾಗುವಂತೆ ಬಯಸಿ ಪುರಾಣ-ಪ್ರವಚನಗಳಲ್ಲಿ ನಿಪುಣತೆಯನ್ನು, ಸಂಸ್ಕೃತ-ಕನ್ನಡ ಹಿಂದಿ ಭಾಷೆಗಳಲ್ಲಿ ಪ್ರೌಢತೆಯನ್ನು ಗಳಿಸುವಂತೆ ಮಾಡಿ ಸಾಧಕರು ಆದರ್ಶ ಧರ್ಮಪ್ರಚಾರಕರಾಗಿ, ದೇಶ-ವಿದೇಶಗಳಲ್ಲಿ ಸಂಚಾರ ಮಾಡಿ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತದ ತತ್ವವನ್ನು ಪ್ರಸಾರ ಮಾಡುವುದಕ್ಕೋಸ್ಕರ, ಸಮಾಜದಲ್ಲಿ ಕ್ರಾಂತಿಕಾರ ಪರಿವರ್ತನೆಗಾಗಿ, ಮೌಢ್ಯತೆಯ ನಿವಾರಣೆಗಾಗಿ ಯತ್ನಿಸಲಾಗುತ್ತಿದೆ.

ಪ್ರಸ್ತುತ ಶಿಕ್ಷಣ ರಂಗ ಬಹು ವಿಚಿತ್ರವಾಗುತ್ತಿದೆ. ಗುರುಶಿಷ್ಯರ ಸಂಬಂಧ ಮುರಿದು ಹೋಗುತ್ತಲಿದೆ. ಆಸ್ತಿ, ಅಧಿಕಾರ, ಪಟ್ಟಕ್ಕಾಗಿ ಶಿಷ್ಯರು ಗುರುವಿಗೆ ವಿಷ ಹಾಕುತ್ತಿದ್ದಾರೆ. ಮಠದ ಅಧಿಕಾರಕ್ಕೆ ಜೋತುಬಿದ್ದಿದ್ದಾರೆ. ಸಮಾಜ ಅಂತವರಿಂದಲೇ ತುಂಬಿ ಹೋಗಿದೆ. ಇಂಥವರಿಂದಲೇ ಗುರುಶಿಷ್ಯರು, ತಂದೆ-ಮಕ್ಕಳು, ಅಣ್ಣ-ತಮ್ಮಂದಿರು ವೈರಿಗಳಾಗಿ ಕೋರ್ಟು, ಜೈಲು ತಿರುಗುವಂತಾಗಿದೆ. ಹಾಗಾಗಿ ಮಂದಿರಕ್ಕೆ ಇಂದಿಗಿಂತಲೂ ಸಮರ್ಥರಾದ, ನುರಿತ ವಿಷಯ ಸಂಪನ್ನರೂ, ಹಿರಿಯರೂ, ಅನುಭಾವಿಗಳ ಅಗತ್ಯತೆ ಅತಿ ಅವಶ್ಯವಾಗಿದೆ. ಹಾಗಾದಲ್ಲಿ ಮಾತ್ರ ಶಿವಯೋಗಮಂದಿರದ ಶೈಕ್ಷಣಿಕ ಉದ್ದೇಶ ಪೂರ್ಣವಾಗುವುದು. ಹಾಗೂ ಸಮಾಜಕ್ಕೆ ಅಗತ್ಯವಾದ ಶಕ್ತನಾದ ಅಧಿಪತಿಯನ್ನು ಒದಗಿಸಲು ಸಾಧ್ಯವಾಗುವುದು.

೪. ಪಠ್ಯೇತರ ಚಟುವಟಿಕೆಗಳು

ಮಾನವ ಜೀವನವು ಶರೀರ, ಮನಸ್ಸು ಹಾಗೂ ಆತ್ಮ - ಈ ಮೂರು ಅಂಶಗಳನ್ನು ಒಳಗೊಂಡಿದೆ. ಜೀವನದಲ್ಲಿ ಈ ಮೂರಕ್ಕೂ ಸಮಾನ ಮಹತ್ವವಿದೆ. ಇವುಗಳಲ್ಲಿ ಯಾವುದೇ ಒಂದು ಅಂಶ ಕುಂದಿದರೂ ಪರಿಪೂರ್ಣ ಜೀವನವಾಗುವುದಿಲ್ಲ. ಈ ಮೂರು ಅಂಶಗಳು ಪರಿಪೂರ್ಣವಾಗಿ ವಿಕಾಸಗೊಂಡಾಗಲೇ ವ್ಯಕ್ತಿಯ ಸರ್ವತೋಮುಖ ಅಭಿವೃದ್ಧಿಯಾಗುತ್ತದೆ.

ಹಿಂದಿನ ಕಾಲದಲ್ಲಿ ಶಿಕ್ಷಣವೆಂದರೆ ಕೇವಲ ಓದು, ಬರಹ, ಮತ್ತು ಅಂಕಗಣಿತ ಎಂದು ಹೇಳಲಾಗಿತ್ತು. ಆದ್ದರಿಂದ ಪಠ್ಯವಸ್ತು ಕೇವಲ ಇತಿಹಾಸ, ಭೂಗೋಳ, ಭಾಷೆ, ಗಣಿತ, ವಿಜ್ಞಾನಗಳನಷ್ಟೇ ಒಳಗೊಂಡಿತ್ತು. ಕಾಲ ಕ್ರಮೇಣ ಆಟ, ನಾಟಕ, ಚರ್ಚಾಕೂಟ, ಸಮಾಜ ಸೇವೆ, ಪ್ರವಾಸ ಮೊದಲಾದ ಚಟುವಟಿಕೆಗಳ ಮಹತ್ವದ ಅರಿವಾಗಿ ಅವನ್ನು ಶಾಲೆಯಲ್ಲಿ ಆಚರಣೆಗೆ ತಂದರೂ, ಪಠ್ಯವಸ್ತುವಿನಲ್ಲಾಗಲಿ ವೇಳಾಪತ್ರಿಕೆಯಲ್ಲಾಗಲಿ ಅವುಗಳಿಗೆ ಸ್ಥಾನವಿರಲಿಲ್ಲ. ಅಲ್ಲದೆ ಇಷ್ಟವಿದ್ದ ವಿದ್ಯಾರ್ಥಿಗಳು ಮಾತ್ರ ಭಾಗವಹಿಸುತ್ತಿದ್ದರು. ಇವು ಶಾಲಾ ಅವಧಿಯಿಂದ ಹೊರತುಪಡಿಸಿದ್ದವು. ಇದರಿಂದ ಇವುಗಳಿಗೆ ಪಠ್ಯೇತರ ಚಟುವಟಿಕೆಗಳೆಂದು ಕರೆಯಲಾಯಿತು.

ಮುಂದೆ ಬಂದ ಬ್ರಿಟೀಷರು ಶಿಕ್ಷಣದಲ್ಲಿ ಪಠ್ಯೇತರ ಚಟುವಟಿಕೆಗೆ ಮಹತ್ವ ಕೊಡಲಿಲ್ಲ, ಭಾರತ ಸ್ವತಂತ್ರವಾದ ನಂತರ ನೇಮಿಸಲ್ಪಟ್ಟ ವಿಶ್ವವಿದ್ಯಾಲಯ ಶಿಕ್ಷಣ ಆಯೋಗವು ಪಠ್ಯೇತರ ಚಟುವಟಿಕೆಗೆ ಮಹತ್ವ ಕೊಟ್ಟಿತು. ಮತ್ತು ಮೊದಲಿಯಾರ್ ಶಿಕ್ಷಣ ಆಯೋಗವು ಇದನ್ನೆ 'ಕಾರ್ಯನುಭವ' ಎಂದು ಕರೆದರು. "ಶಿಕ್ಷಣ ತಜ್ಞರು ಚಿಂತಕರೂ ಆದ ರವೀಂದ್ರನಾಥ ಟ್ಯಾಗೋರರು 'ಕಲಾ ಪೂರ್ಣ ಸ್ವ ಅಭಿವ್ಯಕ್ತಿಗಾಗಿ, ಸಾಮರಸ್ಯಕ್ಕಾಗಿ ಶಿಕ್ಷಣ' ಎಂದು ಪಠ್ಯೇತರ ಅಂಶವನ್ನು ತಮ್ಮದೇ ರೀತಿಯಲ್ಲಿ ಪಠ್ಯದೊಂದಿಗೆ ಸಮ್ಮಿಲನಗೊಳಿಸಿದರೆ, ಸ್ವಾಮಿ ವಿವೇಕಾನಂದರು 'ಮಾನವ ನಿರ್ಮಾಣವೇ ಶಿಕ್ಷಣ' ಎನ್ನುತ್ತಾ ಧಾರ್ಮಿಕ, ದೇಶಭಕ್ತಿಯಂಥ ಪಠ್ಯೇತರ ಅಂಶಕ್ಕೆ ಆದ್ಯತೆ ನೀಡಿದರು. ಮಹಾತ್ಮ ಗಾಂಧೀಜಿಯವರ "ಮೂಲ ಶಿಕ್ಷಣ' ದಲ್ಲಿ ಇದಕ್ಕೆ ಹೆಚ್ಚು ಮಹತ್ವ ನೀಡಿ 'ಕರ, ಉರ, ಶಿರಗಳನ್ನು ಸಂಸ್ಕರಿಸಿ ಮಗುವಿನ ದೈಹಿಕ ಮಾನಸಿಕ, ಆದ್ಯಾತ್ಮಿಕ ಅಂಶಗಳ ಅಭಿವೃದ್ಧಿಗೆ ಒತ್ತು ನೀಡಿದ್ದಾರೆ."[೨೧] ಹೀಗೆ ಎಲ್ಲಾ ಶಿಕ್ಷಣ ಚಿಂತಕರು ಮುಂದೆ ಇದರ ಅಗತ್ಯವನ್ನು ಶಾಲಾ ಹಂತದಲ್ಲೆ ನೀಡುವುದರ ಮಹತ್ವಕ್ಕೆ ಒತ್ತು ನೀಡಿದರು. ಅದರ ಫಲವಾಗಿ ಇಂದು ವೇಳಾ ಪಟ್ಟಿಯಲ್ಲಿ ಸಹಪಠ್ಯ, ಪಠ್ಯೇತರ ಚಟುವಟಿಕೆಗೆ ಪಠ್ಯದಷ್ಟೇ ವೇಳೆಯನ್ನು ಮೀಸಲಿಡಲಾಗಿದೆ.

ಪಠ್ಯೇತರ ಚಟುವಟಿಕೆ ಶಿಕ್ಷಣದ ಅವಿಭಾಜ್ಯ ಅಂಗಗಳಾಗಬೇಕು ಎಂದು ಶಿಕ್ಷಣ ತಜ್ಞರು ಬಯಸುವ ಹಂತದಲ್ಲಿ ಶಿವಯೋಗ ಮಂದಿರ ಅದನ್ನು ಪಠ್ಯೇತರ ಅಂಶವಾಗಿ ಸ್ವೀಕರಿಸಿದೆ. ಇಂದೂ ಕೂಡ ಅದಕ್ಕೆ ಶಾಲೆಯಲ್ಲಿ ಸಿಗುವಷ್ಟೇ ಮಾನ್ಯತೆ ಸಿಗುತ್ತಿದೆ. ಆದರೆ ಅದರ ಪ್ರಕಾರ ಮಾತ್ರ ಭಿನ್ನವಾಗಿದೆ. ಉದಾ: ಆಧ್ಯಾತ್ಮಿಕ ಚಿಂತನೆಗೆ ಹತ್ತಿರವಾಗಿ ಬಿಡುವಿನ ವೇಳೆಯ ಸಾಧನವಾಗಿದೆ. ಇನ್ನೂ ಶಿವಯೋಗ ಮಂದರಿದ ಸ್ಥಾಪನಾದಿಯಿಂದ ಬಂದ ಪಠ್ಯೇತರ ಚಟುವಟಿಕೆಗಳೆಂದರೆ

೧. ಶಾರೀಕ ಶಿಕ್ಷಣದಲ್ಲಿ–ಯೋಗಾಸನ ತರಬೇತಿ, ಆಯುರ್ವೇದ ಕಲೆ, ದೇಶಿಯ ಆಟಗಳು

೨. ಆಧ್ಯಾತ್ಮಿಕ ಶಿಕ್ಷಣದಲ್ಲಿ–ಪುರಾಣ, ಶ್ರವಣ, ಪ್ರವಚನ ನೀಡುವುದು.

೩. ಇತರೆ ಅಂಶಗಳಾದ-ಕೈತೋಟ ನಿರ್ಮಾಣ, ಕಾಯಿಪಲ್ಯೆ ಬೆಳೆಯುವುದು, ಪರಿಸರ ಸಂರಕ್ಷಣೆ, ಗೋಶಾಲೆ, ಕೃಷಿ ಕಾರ್ಯಗಳು.

ಹೀಗೆ ಸಮಾಜದ ಅವಶ್ಯಕತೆಗನುಸಾರವಾದ ಅಂಶಗಳನ್ನು ಇಲ್ಲಿ ಇಡಲಾಗಿತ್ತು. ಕಾಲ ಬದಲಾದಂತೆ ಶಿಕ್ಷಣದಲ್ಲೂ ಬದಲಾವಣೆಗಳಾಗಿ ಕಲಿಯುವ ಕಲಿಸುವ ವ್ಯವಸ್ಥೆಯಿಂದಾಗಿ ಅದರ ವ್ಯಾಪಕತೆಯು ಬೆಳೆಯುತ್ತಾ ಸಾಗಿದೆ. ಇಂದು ಅದು, ಶ್ರಮದಾಯಕವಾಗಿ, ಮಾನಸಿಕ ನೆಮ್ಮದಿಗಾಗಿ, ಸಂಪನ್ಮೂಲವಾಗಿ ಶೈಕ್ಷಣಿಕ ಮೌಲ್ಯವೂ ಆಗಿ, ಮಕ್ಕಳ ಸಾಮರ್ಥ್ಯಕ್ಕೆ ತಕ್ಕಂತೆ ರೂಪಗೊಂಡಿದೆ. ಹೀಗೆ ರಚನೆಗೊಂಡ ಪಠ್ಯೇತರ ಅಂಶಗಳೆಂದರೆ

೧. ಯೋಗಾಭ್ಯಾಸ

೨. ಕಂಪ್ಯೂಟರ್ ಶಿಕ್ಷಣ

೩. ಧಾರ್ಮಿಕ ಶಿಕ್ಷಣ

೪. ಪ್ರವಚನ ನೀಡಿಕೆ

೫. ಚರ್ಚಾಕೂಟ

೬. ಲೇಖನಗಳ ರಚನೆ

೭. ಸೇವೆ-ಶುಶ್ರೂಷೆ

೮. ಸಹಕಾರ

೯. ಕೈತೋಟ ನಿರ್ವಹಣೆ

೧೦. ದೇಶಿಯ ಆಟಗಳು

೧೧. ಶರಣರ ವಚನ, ತತ್ತ್ವಪದ ಕಂಠಪಾಠ

೧೨. ಜ್ಯೋತಿಷ್ಯ ಅಭ್ಯಾಸ

೧೩. ನೈತಿಕ ಶಿಕ್ಷಣ

೧೪. ಆಯುರ್ವೇಧ ಔಷಧೋಪಚಾರ ಇವು ಸಹ ಅವಶ್ಯವಾದ ಪಠ್ಯೇತರ ಅಂಶಗಳಾಗಿವೆ.

ಯೋಗಾಭ್ಯಾಸ

ಪ್ರತಿನಿತ್ಯ ವಟು-ಸಾಧಕರಿಬ್ಬರೂ ಮುಂಜಾನೆ ೬.೩೦ಕ್ಕೆ ಸರಿಯಾಗಿ ಕಲ್ಲುಮಠದ ಅಂಗಳದಲ್ಲಿ ವಂದನಾ ಮುದ್ರೆ ಹಾಕಿ ಶಿವಯೋಗ ಮಂದಿರ ಗೀತೆಯಾದ

ಗುರುದೇವೋ ಮಹಾದೇವೋ ಗುರುದೇವಃ ಸದಾಶಿವಃ

ಗುರುದೇವಾತ್ಪರಂ ನಾಸ್ತಿತಸ್ಮೈಶ್ರೀ ಗುರುವೇ ನಮಃ

ಎಂದು ಶ್ರೀ ಗುರುವನ್ನು ಭಕ್ತಿಭಾವದಿಂದ ಸ್ಮರಿಸಿ ಯೋಗಶಿಕ್ಷಕರ ಮಾರ್ಗದರ್ಶನದಲ್ಲಿ ಆಸನಗಳನ್ನು ಹಾಕಲು ಪ್ರಾರಂಭಿಸುತ್ತಾರೆ. ಶಿವಯೋಗ ಸಾಧಕರಿಗೆ ಹಠಯೋಗವು ತುಂಬಾ ಸಹಕಾರಿಯಾಗಿದ್ದು ಈ ಮೂಲಕವೇ ದಿನದ ಆರಂಭವಾಗಿ ನಂತರ ಉಳಿದ ಪಾಠ ಪ್ರವಚನ ಇತ್ಯಾದಿ ಕಾರ್ಯಗಳು ಜರುಗುತ್ತವೆ. ಯೋಗಾಸನದ ಪರಮ ಉದ್ದೇಶ ಶರೀರವನ್ನು ಸ್ವಸ್ಥವನ್ನಾಗಿಡಲು, ಚಿತ್ತಚಂಚಲತೆ ತಡೆಯುವುದು. ಸಾತ್ವಿಕ ಅಂಗಸಾಧನೆ, ಜೊತೆಗೆ ಶಾರೀರದ ಎಲ್ಲ ಅಂಗಾಂಗಗಳಿಗೆ ಸಮಾನ ವ್ಯಾಯಾಮ ದೊರೆಯುವುದು. ಹಾಗಾಗಿ ಹಠಯೋಗದ ಆಸನವೆ ಪ್ರಥಮ ಅಂಗವೆಂದಿದ್ದಾರೆ. ಶ್ರೀಗಳು ತಮ್ಮ ಸಾಧನೆಯಿಂದ ಅನೇಕ ಆಸನ ಕಂಡುಹಿಡಿದು ಸಿದ್ಧಿ ಪಡೆದಿದ್ದರು. ಅವುಗಳಲ್ಲಿ ಮುಖ್ಯವಾದ ೮೪ ಆಸನವನ್ನು ಶಿವಯೋಗ ಮಂದಿರದಲ್ಲಿ ನಿತ್ಯವು ಪ್ರತಿಯೊಂದು ದಿನದ ವೇಳಾಪಟ್ಟಿಯಂತೆ ಹಾಕಲಾಗುತ್ತದೆ. ಅವು ಹೀಗಿವೆ. "ಸಿದ್ಧಾಸನ, ಅಂಗುಷ್ಠಾಸನ, ತ್ರಿಕೋಣಾಸನ, ಮತಾಂತ ಸಿದ್ಧಾಸನ, ವಾತಾಯನಾಸನ, ದಕ್ಷಿಣಪಾದ ತ್ರಿಕೋಣಾಸನ, ಶಿರಸಿದ್ಧಾಸನ, ಗೋಮುಖಾಸನ, ವಾಮಪಾದ ತ್ರಿಕೋಣಾಸನ, ಸ್ವಸ್ತಿಕಾಸನ, ಜಾನ್ವಾಸನ, ಮತ್ಸೇಂದ್ರಾಸನ, ವೀರಾಸನ, ಅರ್ಧಶವಾಸನ, ನಾಮಪಾದ ಮತ್ಸೇಂದ್ರಾಸನ, ಸುಖಾಸನ, ಊರ್ಧ್ವ ಪದ್ಮಾಸನ, ಭುಜಾಸನ, ಪದ್ಮಾಸನ, ಪವನ ಮುಕ್ತಾಸನ, ವಾಮಪಾದ ಭುಜಾಸನ, ಬದ್ಧ ಪದ್ಮಾಸನ, ಸಿಂಹಾಸನ, ದಕ್ಷಿಣಪಾದ ಭುಜಾಸನ, ಕುಕ್ಕುಟಾಸನ, ಚಕ್ರಾಸನ, ಉಭಯಪಾದ ಭುಜಾಸನ, ಗರ್ಭಾಸನ, ದೃಢಾಸನ, ಉತ್ಥಾನ ಭುಜಾಸನ, ಟಿಟ್ಟಿಭಾಸನ, ಶವಾಸನ, ಕಂದಪೀಡಾಸನ, ಗ್ರಂಥಿಹಾಸನ, ವಜ್ರಾಸನ, ಮತಾಂತರ ಕಂದಪೀಡಾಸನ, ಮತ್ಸ್ಯಾಸನ, ಸುಪ್ತವಜ್ರಾಸನ, ಮತಾಂತರ ಮತ್ಸ್ಯಾಸನ, ಉಷ್ಟ್ರಾಸನ, ಕೂರ್ಮಾಸನ, ಗೋರಕ್ಷಾಸನ, ವೃಕ್ಷಾಸನ, ಭದ್ರಾಸನ, ಹಸ್ತವೃಕ್ಷಾಸನ, ಮಂಡೂಕಾಸನ, ಮುಕ್ತಾಹಸ್ತಾಸನ, ತಾಡಾಸನ, ಶಲಭಾಸನ, ಉತ್ಥಾನತಾಡಾಸನ, ಶ್ರೀಪಾದ ಧನುರಾಸನ, ತೋಲಾಸನ, ಏಕಪಾದ ದೀರ್ಘಾಸನ, ಅರ್ಧಪಾದಾಸನ, ದೀರ್ಘಪಾದ ಅಂಗುಷ್ಠಾನ, ಮಯೂರಾಸನ, ಪಶ್ಚಿಮತಾಸನ, ಪದ್ಮಾಸನಯುಕ್ತ ವಿಶಾಲಪಾದಾಸನ, ಉತ್ಕಟಾಸನ, ಉತ್ಥಾನ ವಿಶಾಲ ಪಾದಾಸನ, ಮತಾಂತರ ಶಲಭಾಸನ, ಏಕಪಾದ ಭುಜಾಸನ, ಧನುರಾಸನ, ಉಭಯಪಾದ ಶಿರಾಸನ, ಊರ್ಧ್ವಧನುರಾಸನ, ಉತ್ಥಾನ ಪಾದ ಶಿರಾಸನ, ಯೋಗನಿದ್ರಾಸನ, ಸುಪ್ತಶಿರಾಸನ, ಅಪನಪಾದಾಸನ, ಗರುಡಾಸನ, ಧ್ಯಾನಸನ, ಭುಜಂಗಾಸನ, ಪ್ರಾರ್ಥನಾಸನ, ಅಂಗುಷ್ಠಾಸನ, ಭೇಕಾಸನ, ಸರ್ವಾಂಗಾಸನ, ವೃಶ್ಚಿಕಾಸನ, ಹಲಾಸನ, ಪಾರ್ಶ್ವಾಸನ, ಪ್ರಾಣಾಸನ, ದಕ್ಷಿಣಪಾದ ಪಾರ್ಶ್ವಾಸನ, ಶ್ವಾಸಗಮನಾಸನ"[೨೨]

ಪ್ರತಿನಿತ್ಯವು ಹಾಕುವ ಆಸನಗಳನ್ನು ಈ ಕೆಳಗಿನಂತೆ ಪ್ರತ್ಯೇಕವಾಗಿ ದಿನವಾರು ವಿಭಾಗಿಸಲಾಗಿದೆ. ಅವು ಹೀಗಿವೆ.[೨೩]

೦೧. ಸೋಮವಾರ ಹಾಕುವ ಆಸನಗಳು

ಸಿದ್ಧಾಸುರ, ಶಿರಸಿದ್ಧಾಸನ, ಬದ್ಧಪದ್ಮಾಸನ, ಊರ್ಧ್ವಪದ್ಮಾಸನ, ಗರ್ಭಾಸನ.

೦೨. ಮಂಗಳವಾರ ಹಾಕುವ ಆಸನಗಳು

ಕುಕ್ಕಟಾಸನ, ಗ್ರಂಥಕಾಸನ, ಉತ್ಕಾಟಾಸನ, ಗೋಮುಖಾಸನ, ಕುರ್ಮಾಸನ

೦೩. ಬುಧವಾರ ಹಾಕುವ ಆಸನಗಳು

ಭುಜಾಸನ, ತೋಲಾಸನ, ಗೋರಕ್ಷಾಸನ, ವೃಕ್ಷಾಸನ, ವಜ್ರಾಸನ

೦೪. ಗುರುವಾರ ಹಾಕುವ ಆಸನಗಳು

ಬಿಟ್ಟಿಭಾಸನ, ವಾತಾಯನಾಸನ, ಮಂಡೂಕಾಸನ, ಶ್ವಾಸಗಮನಾಸನ, ಶಿರಾಸನ

೦೫. ಶುಕ್ರವಾರ ಹಾಕುವ ಆಸನಗಳು

ಸ್ವಸ್ತಿಕಾಸನ, ಹಸ್ತವೃಕ್ಷಾಸನ, ದೀರ್ಘಪಾದಾಸನ, ಉತ್ಥಾನ ಶಿರಾಸನ, ಚಕ್ರಸನ

೦೬. ಶನಿವಾರ ಹಾಕುವ ಆಸನಗಳು

ಧನುದಾಸನ, ಹಾಸಾಸನ, ಪಶ್ಚಿಮ ತಾನಾಸನ, ಮತ್ಸ್ಯಾಸನ, ಅಂಗುಪ್ರಾಸನ

೦೭. ಭಾನುವಾರ ಹಾಕುವ ಆಸನಗಳು

ಗರುಡಾಸನ, ಊರ್ಧ್ವ ಧನುರಾಸನ, ಸರ್ವಾಂಗಾಸನ, ಉಷ್ಟಾಸನ, ಶಲಭಾಸನ ಈ ಮೇಲಿನ ಎಲ್ಲ ಆಸನಗಳನ್ನು ಎರಡು ನಿಮಿಷಕ್ಕೆ ಒಂದೊಂದು ಆಸನವನ್ನು ಕಡ್ಡಾಯವಾಗಿ ಹಾಕಬೇಕು. ಉಳಿದಂತೆ ನಿತ್ಯವು ಇವುಗಳೊಂದಿಗೆ ವೃಶ್ಚಿಕಾಸನ, ಮಯೂರಾಸನ, ತ್ರಿಕೋಣಾಸನ, ಪಾರ್ಶ್ವಸನ, ಪತ್ಸೇಂದ್ರಾಸನ, ಕಂದಪೀಡಾಸನ – ಈ ಆರು ಆಸನಗಳನ್ನು ಮೂರು ನಿಮಿಷ ತಪ್ಪದೇ ಹಾಕಲೇಬೇಕು. ಇದನ್ನು ಕೂಡ 'ಪ್ರಾಯೋಗಿಕ ಪರೀಕ್ಷೆ' ಎಂದು ಕೂಡ ಪರಿಗಣಿಸಿ ಅಂಕಗಳನ್ನು, ನೀಡಿ ಉತ್ತಮ ಸಾಧನೆ ತೊರಿಸಿದ ವಟು–ಸಾಧಕರಿಗೆ ಪ್ರಮಾಣ ಪತ್ರ ಕೂಡ ನೀಡಲಾಗುತ್ತದೆ.

ಈ ನಿಟ್ಟಿನಲ್ಲಿ ಶಾರೀರಿಕ ಆರೋಗ್ಯದ ಆಯುಷ್ಯವನ್ನು ದೀರ್ಘಕಾಲದವರೆಗೆ ಸ್ವಾಸ್ಥ್ಯದಿಂದ ಕಾಪಾಡಿಕೊಳ್ಳುವುದು. ದೇಹ–ಮನಸ್ಸನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು ಸುಖಿ ಬದುಕನ್ನು ಕಾಣುವಂತಾಗುತ್ತದೆ. ಸಮಾಜದ ಬಾಹ್ಯ ಆಕರ್ಷಣೆಗಳ ಸೆಳೆತದಿಂದ ತಪ್ಪಿಸಿಕೊಳ್ಳಲು ಇದೊಂದು ಪ್ರಮುಖವಾದ ಅಸ್ತ್ರವು ಹೌದು ಎಂಬುದನ್ನು ಸ್ವತಹ ಅನುಭವಿಸಿ ಆರಂಭದಲ್ಲಿ ಅದನ್ನು ಇಲ್ಲಿ ಪಠ್ಯವಾಗಿಯೂ, ಮುಂದೆ ಪಠ್ಯೇತರವಾಗಿಯೂ ಜಾರಿಗೆ ತರಲಾಗಿದೆ.

ಕಂಪ್ಯೂಟರ್ ಶಿಕ್ಷಣ

ಬಹಳ ಕಾಲದ ಹಿಂದೆ ಮಾನವ ಕಲ್ಲಿನ ಆಯುಧಗಳನ್ನು ಮಾಡುತ್ತಿದ್ದ. ಅದರಿಂದ ತನ್ನ ಅಗತ್ಯತೆಯನ್ನು ಸಂಪಾದಿಸುತ್ತಿದ್ದನು. ಇದು 'ಶಿಲಾಯುಗ' ಎನಿಸುತ್ತದೆ. ಮುಂದೆ ಲೋಹಗಳನ್ನು

ಕಂಡುಹಿಡಿದು ತನ್ನ ಬಾಣದ ತುದಿಯನ್ನು, ಕೊಡಲಿಯನ್ನು ಲೋಹದಲ್ಲಿ ಮಾಡಿದ್ದು 'ಲೋಹಯುಗ' ದಲ್ಲಿ. ಹೀಗೆ ಮಾನವ ಸದಾಕಾಲ ನಿರಂತರ ಸಂಶೋಧನೆ ಮಾಡಿ ತನ್ನ ಜೀವನವನ್ನು ಸುಲಭವಾಗಿ ಸಾಗಿಸಲು ಪ್ರಯತ್ನಪಡುತ್ತಲೆ ಈ ದಿಶೆಯಲ್ಲಿ ಹೊಸ ಹೊಸ ಅಂಶಗಳೆಡೆ ದೃಷ್ಟಿಹರಿಸಿ ಬಾನಿನಲ್ಲಿ ಹಕ್ಕಿಯಂತೆ ಹಾರಾಡಲು ವಿಮಾನ, ನೀರಿನಲ್ಲಿ ಮೀನಿನಂತೆ ಈಜಲು ಸಬ್‌ಮರೀನನ್ನು ಕಂಡುಹಿಡಿದು ದೂರದ ಚಂದ್ರಲೋಕಕ್ಕೂ ಏರಿದ್ದಾನೆ. ವಿಜ್ಞಾನದ ಮುಂದುವರಿದ ಅದ್ಭುತವಾದ ಕಂಪ್ಯೂಟರ್ ಕಂಡುಹಿಡಿದನು. ಒಂದು ಕಾಲಕ್ಕೆ ಕೇವಲ ಬುದ್ಧಿವಂತರ, ಸಿರಿವಂತರ ಸೊತ್ತಾಗಿದ್ದ ಈ ಗಣಕಯಂತ್ರವು ಇಂದು ಆಸ್ಪತ್ರೆ, ಬ್ಯಾಂಕಿಗೆ, ಅಂಗಡಿ ರಾಜಕಾರಣದಲ್ಲಿ ಕೊನೆಗೆ ಬಸ್ ನಿರ್ವಾಹಕನ ಕೈಯಲ್ಲಿ ಉಪಯೋಗವಾಗುತ್ತಿದೆ. ಇದನ್ನೆಲ್ಲ ಕಂಡ ಮಂದಿರದ ನಿರ್ವಾಹಕರು ಅದನ್ನು ಭಾವಿ ಸಮಾಜದ ನಿರ್ವಾಹಕ ಶಕ್ತಿಗಳಿಗೆ ಒದಗಿಸಿದರೆ ಬಹು ಉಪಯುಕ್ತವೆಂದು ಮನಗಂಡು ಇಂದು ಅಲ್ಲಿನ ವಟು-ಸಾಧಕರಿಗೆ ಅದನ್ನೊಂದು ಪಠ್ಯೇತರ ವಿಷಯವಾಗಿ ಅಭ್ಯಾಸ ಮಾಡಲು ಅವಕಾಶ ಕಲ್ಪಿಸಿದ್ದಾರೆ. ಅದಕ್ಕಾಗಿ ಅಗತ್ಯವಾದ ಗಣಕಯಂತ್ರಗಳನ್ನು ತರಿಸಿ ಪ್ರತ್ಯೇಕ ವರ್ಗದಲ್ಲಿ ಇಟ್ಟು ಸೂಕ್ತ ಮಾರ್ಗದರ್ಶಿ ಉಪನ್ಯಾಸಕರನ್ನು ನೇಮಿಸಿ ಅದಕ್ಕಾಗಿ ವೇಳಾಪಟ್ಟಿಯಲ್ಲಿ ಸೂಕ್ತ ಅವಕಾಶವನ್ನು ಕಲ್ಪಿಸಲಾಗಿದೆ.

ಧಾರ್ಮಿಕ ಶಿಕ್ಷಣ

ವಾಸ್ತವಿಕವಾಗಿ ಶ್ರೀಮದ್ವೀರಶೈವ ಶಿವಯೋಗ ಮಂದಿರ ಎಂಬುದು ಒಂದು ಧಾರ್ಮಿಕ-ಆಧ್ಯಾತ್ಮಿಕ ವಿಶ್ವವಿದ್ಯಾನಿಲಯವಾಗಬೇಕೆಂಬುದು ಶ್ರೀ ಹಾನಗಲ್ಲ ಕುಮಾರಸ್ವಾಮಿಗಳ ಹಾಗೂ ಸಮಾಜ ಮುಖಂಡರ ಅಭಿಲಾಷೆಯಾಗಿತ್ತು. ಅಂತೆಯೇ ಇಂದಿಗೂ ಕೂಡ ಇಲ್ಲಿ ಸಾಮಾನ್ಯ ಶಿಕ್ಷಣವನ್ನು ಪ್ರಸ್ತುತದಲ್ಲಿ ಅಳವಡಿಸಿದ್ದರೂ ಜೊತೆಯಲ್ಲಿ ಧಾರ್ಮಿಕ ಶಿಕ್ಷಣಕ್ಕೆ ಪಠ್ಯವಿಷಯದೊಂದಿಗೆ ಪಠ್ಯೇತರ ವಿಷಯವಾಗಿಯೂ ಅದಕ್ಕೆ ಸ್ಥಾನ ಕಲ್ಪಿಸಿ ಶ್ರೀ ಕುಮಾರೇಶ್ವರ ಅಭಿಲಾಷೆಯನ್ನು ಇಮ್ಮಡಿಗೊಳಿಸಲಾಗಿದೆ.

ಶ್ರೀ ಮದ್ವೀರಶೈವ ಶಿವಯೋಗ ಮಂದಿರವೆಂಬ ಧಾರ್ಮಿಕ ವಿದ್ಯಾನಿಲಯವು ಹೇಗಿರಬೇಕೆಂಬುದಾಗಿ ಅಂದಿನ ನ್ಯಾಯಮೂರ್ತಿಗಳಾಗಿದ್ದ ಚಂದಾವರಕರ ಅವರು ಹಿಂದೂಸ್ಥಾನದ ಭಾವಿ ಸ್ಥಿತಿಯ ವಿಷಯವಾಗಿ ಟೈಮ್ ಆಫ್ ಇಂಡಿಯಾಕ್ಕೆ ಬರೆದಿದ್ದ ಪುರವಾಣಿ ಲೇಖನದಲ್ಲಿ ಹೀಗೆ ಹೇಳಿದ್ದಾರೆ. "ಪ್ರಾಚೀನ ಕಾಲದ ಗುರುಗಳು ಶಿಷ್ಯರ ಮನಸ್ಸಿನಲ್ಲಿ ತಮ್ಮ ವಿಷಯವಾಗಿ (ಅವರ ತಾಯಿ-ತಂದೆಗಳಿಗೆ ಯೋಗ್ಯವಾದ) ಶ್ರದ್ಧೆಯನ್ನು ಪ್ರೀತಿಯನ್ನು ಉತ್ಪನ್ನ ಮಾಡುವಂತಿದ್ದು, ಗುರು-ಶಿಷ್ಯರ ಆಸ್ಥಿಗೂ, ಸ್ಥಿರತ್ವಕ್ಕೂ ಅತ್ಯವಶ್ಯವಾದ ದೃಢತರ ಆಜ್ಞಾಪಾಲನ ಧರ್ಮವನ್ನು ಕೇವಲ ಮಮತೆಯಿಂದಲೇ ಅವರಲ್ಲಿ ಹುಟ್ಟಿಸಿ ಗುರು-ಶಿಷ್ಯರು (ಶಿಕ್ಷಣದ ಫಲದಲ್ಲಿ)

ಪಾಲುಗಾರರಿದ್ದು, ಅದರಲ್ಲಿ ಗುರುವಿನ ಅಂಶವು ತಮ್ಮ ಅಂಶಕ್ಕಿಂತ ಹೆಚ್ಚಿರುವುದೆಂಬ ಕಲ್ಪನೆಯನ್ನು ಅವರಲ್ಲಿ ಜಾಗೃತಪಡಿಸಿ, ತಮ್ಮ ವಿಷಯವಾಗಿ ಪ್ರೀತಿಯನ್ನು, ಪರಸ್ಪರ ಬಗ್ಗೆ ಹಿತಚಿಂತನೆಯನ್ನು ನೆಲೆಗೊಳಿಸುವಂತಾಗಬೇಕೆಂದು, ಸ್ಪಷ್ಟ ಉಲ್ಲೇಖಿತ ಅಂಶಗಳ ಮೂಲಕ ಸೂಚಿಸುತ್ತಾರೆ"[೨೪]

ಶಿಕ್ಷಣ ಕ್ಷೇತ್ರದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಮ್ಮದೇ ಆದ ಪಾತ್ರ ವಹಿಸಿವೆ. ಇಲ್ಲಿ ಧಾರ್ಮಿಕ ಶಿಕ್ಷಣ ಕೂಡ ಒಂದಾಗಿದೆ. ಜಾತ್ಯಾತೀತ ಕಲ್ಪನೆಯನ್ನು ಪ್ರತಿಪಾದಿಸುವ ನಮ್ಮ ಸಂವಿಧಾನವು ಸರ್ವಧರ್ಮಗಳನ್ನು ಸಮಾನಾಗಿ ಕಂಡಿವೆ. ಯಾವುದೇ ಧರ್ಮದವನಿದ್ದರೂ ಬೇಧ-ಭಾವ ನೀತಿಯನ್ನು ಅನುಸರಿಸಲಾಗದು. ಇದನ್ನು ಗಮನದಲ್ಲಿಟ್ಟುಕೊಂಡು "ಸಂವಿಧಾನ ಕಲಮು ೨೮(೧) ೨೮(೨) ೨೮(೩) ಎಂಬ ಮೂರು ಅಂಶದಲ್ಲಿ ಹೇಳಿದೆ. ಅದರಲ್ಲಿ ಕಲಮು ೨೮(೨) ನೇ ಕಲಮಿನ ಮೊದಲ ಭಾಗದಲ್ಲಿ ಹೇಳಿರುವ ಅಂಶಗಳು ದತ್ತಿದಾನಗಳಿಂದ ನಡೆಯುವ ಸಂಸ್ಥೆಗಳಿಗೆ ಅನ್ವಯಿಸುವುದಿಲ್ಲ, ಅಂಥವುಗಳಲ್ಲಿ ಧಾರ್ಮಿಕ ಬೋಧನೆ ಮಾಡಬಹುದು"[೨೫] ಎಂದಿದ್ದಾರೆ. ಅಂದರೆ ಸಮಾಜದ ಪ್ರಜೆಗಳಿಂದ ಸ್ಥಾಪಿತವಾದ ಹಾಗೂ ಭಕ್ತರ ದೇಣಿಗೆಯಿಂದ ನೀಡಿದ ಕಾಣಿಕೆಗಳಿಂದ ಸ್ಥಾಪಿತವಾದ ಶಿವಯೋಗ ಮಂದಿರದಲ್ಲಿ ಸಂವಿಧಾನಬದ್ಧವಾದ ಧಾರ್ಮಿಕ ಶಿಕ್ಷಣ ನೀಡಲಾಗುತ್ತಿದೆ. ಅದು ಕೇವಲ ವೀರಶೈವ ಧರ್ಮಕ್ಕೆ ಮಾತ್ರ ಸೀಮಿತವಾದ ಸಂಸ್ಥೆಯಾಗಿರದೆ ಸಮಾಜದ ಅಂಗ ಸಂಸ್ಥೆಯಾಗಿದೆ. ಅಂದರೆ ಸರ್ವರನ್ನು ಮಾನವ ಧರ್ಮದ ನೆಲೆಯಲ್ಲಿ ಕಾಣುವಂತ ಇಚ್ಛಾಶಕ್ತಿಯನ್ನು ಅದು ಹೊಂದಿದೆ. ಇಂತಹ ಇಚ್ಛಾಶಕ್ತಿಯನ್ನು ಇಲ್ಲಿನ ವಟು-ಸಾಧಕರು ಪಡಯಲೇಬೇಕೆಂಬ ಆಶಯದಿಂದಾಗಿ ಧಾರ್ಮಿಕ ಶಿಕ್ಷಣವನ್ನು ಇಲ್ಲಿ ಪಠ್ಯೇತರ ವಿಷಯವಾಗಿ ಇಡಲಾಗಿದೆ.ಈ ಮೂಲಕ ಸಮಾಜದ ಗುರುವಿಗೆ ಎಲ್ಲ ಧರ್ಮದ ಸಾರವನ್ನು ತಿಳಿಯುವಂತಾಗಲಿ ಎಂಬುದು ಇದರ ಉದ್ದೇಶವಾಗಿರುತ್ತದೆ.

ಪ್ರವಚನ ನೀಡಿಕೆ

ಕೀರ್ತನವು ಧರ್ಮ ಪ್ರಸಾರಕ್ಕೆ ಬಹು ಸಹಾಯಕವಾದ ಒಂದು ಮಾರ್ಗವೆಂದು ಪೂಜ್ಯರು ಅರಿತಿದ್ದರು. ಸಮೂಹ ಮಾಧ್ಯಮದ ಅಬ್ಬರವಿಲ್ಲದ ಕಾಲಕ್ಕೆ ಕೀರ್ತನವು ಒಂದು ಸಂಪರ್ಕ ಸಮೂಹ ಮಾಧ್ಯಮವಾಗಿತ್ತು. ಅದನ್ನೆ ಒಂದು ಕಲೆಯಾಗಿ ಬೆಳೆಸಿದರು. ಸಾಮಾನ್ಯರ ಮನವನ್ನು ಸೆಳೆಯುವ ಸಾಧನವಾಗಿ ರೂಪಿಸಿದರು. ಈ ದೆಸೆಯಲ್ಲಿ ಅದನ್ನು ಮಂದಿರದಲ್ಲಿನ ಸಾಧಕರಿಗೆ ಪಠ್ಯೇತರ ಅಂಶವಾಗಿ ರೂಢಿಸಿದರು. ಜೊತೆಗೆ ಆಸಕ್ತ ಮಾಹೇಶ್ವರ ಭಕ್ತ ವರ್ಗದ ಜೀವನೋಪಾಯಕ್ಕೆ ದಾರಿಯಾಗಿಯೂ, ಧಾರ್ಮಿಕ ಪ್ರಸಾರವಾಗಿ ಮಾಡಿದರು. ಅವರ ಕೃಪಾಶ್ರಯದಲ್ಲಿ ಬಂದು ಹೋದವರನ್ನು ಸ್ಮರಿಸುವ ಸಲುವಾಗಿ ಈ ಲೋಕಪ್ರಿಯರ ಹೆಸರುಗಳನ್ನು ಇಲ್ಲಿ ಪಟ್ಟಿಮಾಡಲಾಗಿದೆ. ಇದರೊಂದಿಗೆ ಮುಂದಿನ ಕಾಲಕ್ಕೆ ಇದೊಂದು ದಾಖಲೆಯಾಗಲಿ ಎಂಬುದು ನಮ್ಮ ಆಶಯವಾಗಿದೆ.

ಶಿವಯೋಗ ಮಂದಿರದಲ್ಲಿ ಶಿವಕೀರ್ತನಕಾರರಾಗಿ ಶಿಕ್ಷಣ ಪಡೆದು ಲೋಕಪ್ರಿಯತೆ ಗಳಿಸಿದವರಲ್ಲಿ ಪ್ರಮುಖರೆಂದರೆ

೧. ಶ್ರೀಬಸವಲಿಂಗಶಾಸ್ತ್ರಿಗಳು,ದೇವಪುರ

೨. ಶ್ರೀವೀರಯ್ಯಾಶಾಸ್ತ್ರಿಗಳು,ಹಿರೇಹಾಳ

೩. ಶ್ರೀಜಿ.ವೀರಾರ್ಯಶಾಸ್ತ್ರಿಗಳು,ಹಿರೇಮಠ ಸುರಕೋಡ

೪. ಶ್ರೀಗುರುಲಿಂಗಶಾಸ್ತ್ರಿಗಳು,ಸಾಲಿಮಠ ಬೀಳಗಿ

೫. ಶ್ರೀಶಿವಯೋಗಿಶಾಸ್ತ್ರಿಗಳು, ದೇವಗಿರಿ

೬. ಶ್ರೀಮಹಾದೇವಶಾಸ್ತ್ರಿಗಳು,ಹಿರೇಮಠ ಕೃಷ್ಣಾಪುರ

೭. ಶ್ರೀಚನ್ನಬಸವಯ್ಯಸ್ವಾಮಿ,ವಿಶ್ವನಾಥಮಠ ಧೋತರಗಾಂವ

೮. ಶ್ರೀಟಿ.ಎಂ.ಚಂದ್ರಶೇಖರಶಾಸ್ತ್ರಿಗಳು, ದಾವಣಗೆರೆ

೯. ಪಂ.ಚನ್ನಬಸವಶಿವಾಚಾರ್ಯ,ಹಿರೇಮಠ ನಾಲ್ವತವಾಡ

೧೦. ಶ್ರೀಕಲ್ಲಿನಾಥೇಶಾಸ್ತ್ರಿಗಳು, ದ್ಯಾಂಪುರ

೧೧. ಶ್ರೀಮಲ್ಲಿಕಾರ್ಜುನಶಾಸ್ತ್ರಿಗಳು, ಶಿವಣಗಿ

೧೨. ಶ್ರೀಬಸವಲಿಂಗಶಾಸ್ತ್ರಿಗಳು, ಮತ್ತಿಕಟ್ಟಿ

೧೩. ಶ್ರೀಇಂಧೂದರಶಾಸ್ತ್ರಿಗಳು

೧೪. ಶ್ರೀಕಂಠಶಾಸ್ತ್ರಿಗಳು, ನಲವಡಿ

೧೫. ಶ್ರೀಸದಾಶಿವಶಾಸ್ತ್ರಿಗಳು, ಹುಕ್ಕೇರಿ

ಹೀಗೆ ಧರ್ಮ ಪ್ರಸಾರಕ ಕಾರ್ಯದಲ್ಲಿ ಸಹಕಾರಿಯಾಗಲೆಂದೆ ಹಾನಗಲ್ಲ ಶ್ರೀಗಳು ಅನೇಕ ಶಿವಕೀರ್ತನಕಾರರನ್ನು ಶಿವಯೋಗ ಮಂದಿರದಲ್ಲೇ ತರಬೇತಿಗೊಳಿಸಿ ನಾಡಿನ ಮೂಲೆ-ಮೂಲೆಗಳಿಗೆ ಧಾರ್ಮಿಕ ಪ್ರಸಾರಕರಾಗಿ ಕಳಿಸಿದ್ದಾರೆ. ಮೂಲಕ ಜನತೆಗೆ, ಭೌತಿಕ ವೃತ್ತಿಯಾಗಿ, ಪರಂಪರೆಗೆ ಒಂದು ದೊಡ್ಡ ಕೊಡುಗೆ ನೀಡಿದ್ದಾರೆ. ಈ ಮೂಲಕ ಕೂಡ ಧರ್ಮ ಪ್ರಸಾರ ಕೈಗೊಂಡು ಸಾಮಾಜಿಕ ಪರಿವರ್ತನೆಗೆ ಕೊಡುಗೆಯನ್ನು ನೀಡಿದ್ದಾರೆ.

ಚರ್ಚಾಕೂಟ: ವಟು-ಸಾಧಕರೆ ಕೂಡಿ ತಮ್ಮೊಳಗೆಯೇ ಶಿವಯೋಗಿಗಳ ಸಂಘವನ್ನು ಸ್ಥಾಪಿಸಿಕೊಂಡು. ರಜೆಯ ದಿನಗಳಲ್ಲಿ, ಬಿಡುವಿನ ವೇಳೆಯಲ್ಲಿ ಹಿರಿಯರ, ಗುರುಗಳ ಮಾರ್ಗದರ್ಶನದಲ್ಲಿ ಭಾಷಣ ಕಲೆ ಕಲಿಯುತ್ತಾರೆ. ಹಾಗೂ ಪ್ರಸ್ತುತ ಅಂಶಗಳ ಬಗ್ಗೆ, ಗುರುತರವಾದ ವಿಷಯಗಳ ಬಗ್ಗೆ ಚರ್ಚೆ ನಡೆಸಿ ಅನುಭವಯುಕ್ತ, ಸಂಪನ್ಮೂಲ ವ್ಯಕ್ತಿಗಳಿಂದ ಆ ಬಗ್ಗೆ ಸಹ ಭಾಷಣಕ್ಕೆ ಅವಕಾಶ ನೀಡುತ್ತಾರೆ. ಮಾಹಿತಿ ಸಂಗ್ರಹಿಸಿಕೊಳ್ಳುತ್ತಾರೆ. ಹಾಗಾಗಿ ಇದು ಕೂಡ ಒಂದು ರೀತಿಯಲ್ಲಿ ಕಲಿಕೆಯಾಗಿದೆ.

ಲೇಖನ ಕಲೆ: ವಿಷಯ ಮಂಡನೆಯ ಕಲೆ ಕುರಿತಂತೆ, ಅದನ್ನು ಬರೆಯುವ ಕಲೆಯನ್ನು ಸಹ ಬೆಳಸಲಾಗುತ್ತದೆ. ಸುಂದರವಾಗಿ ಬರೆಯುವವರಿಗೂ ಉತ್ತೇಜನ ನೀಡಲಾಗುವದು. ಉತ್ತಮ ಲೇಖನವನ್ನು ಸುಕುಮಾರದಲ್ಲಿ ಪ್ರಕಟಿಸಲಾಗುತ್ತದೆ.

ಸೇವೆ-ಶುಶ್ರೂಷೆ: ಹೊಸದಾಗಿ ಬಂದ ಆರಂಭಿಕ ಹಂತದ ಚಿಕ್ಕ ಪ್ರಾಯದ ವಟುಗಳ ಬಟ್ಟೆ ತೊಳೆದುಕೊಡುವುದು. ಆರೋಗ್ಯದ ಸಮಸ್ಯೆಗಳಾದಾಗ ಪ್ರಾಥಮಿಕ ಚಿಕಿತ್ಸೆ ನೀಡಿ. ಆತ್ಮಸ್ಥೈರ್ಯ ತುಂಬುವುದು. ಮಂದಿರಕ್ಕೆ ಆಗಮಿಸುವ ಪೂಜ್ಯರನ್ನು, ಜಗದ್ಗುರುಗಳನ್ನು ಸ್ವಾಗತಿಸುವುದು. ಅವರ ಸೇವೆಗೆ ಅಗತ್ಯ ಸಿದ್ಧತೆ ನೀಡುವುದು.

ಸಹಕಾರ: ಬೇರೆ ಬೇರೆ ಭಾಗದಿಂದ ಬಂದ ವಟು-ಸಾಧಕರು ಒಂದೇ ಕುಟುಂಬದವರು ಎಂಬುವಂತೆ ಐಕ್ಯತಾ ಭಾವನೆಯಿಂದ, ಸ್ವಚ್ಛ ಮನಸ್ಸಿನಿಂದ ಬೆರೆತು. ಕಲಿಕೆಯಲ್ಲಿ ಒಂದಾಗಿ ಕೂಡಿ ಕಲಿಯುತ್ತಾರೆ. ಪರಸ್ಪರರು ವಿಚಾರ ವಿನಿಮಯ ಮಾಡುತ್ತಾರೆ. ತಮ್ಮ ತಮ್ಮ ದೈನಂದಿನ ಕಾರ್ಯದಲ್ಲಿ, ಕಲಿಕಾ ವಿಷಯದಲ್ಲಿ, ನಿಯಮಗಳು, ಆಚಾರಗಳಲ್ಲಿ ತಪ್ಪದೆ ಸಹಕಾರ ಭಾವನೆಯಿಂದ ವರ್ತಿಸುತ್ತಾರೆ.

ಕೈತೋಟ ನಿರ್ಮಾಣ: ಕೈತೋಟ ನಿರ್ಮಾಣ ಕುಮಾರ ವನದಲ್ಲಿ ಆಯಾ ಸಾಧಕರಿಗೆ ಹಂಚಲಾದ ಸ್ಥಳಗಳಲ್ಲಿ ಹೂವಿನ ಗಿಡಗಳನ್ನು, ಹಿಂಭಾಗದಲ್ಲಿ ಕಾಯಿಪಲ್ಲೆ ಬೆಳೆಸುವುದು ರೂಢಿಯಲ್ಲಿತ್ತು. ಇಂದಿಗೂ ಕೂಡ ಕೈತೋಟ ನಿರ್ಮಾಣ ಕಾರ್ಯದಲ್ಲಿ ವಟು-ಸಾಧಕರು ನಿರತರಾಗಿದ್ದು ಪತ್ರೆವನಗಳ, ಗಿಡಗಳ ಆರೈಕೆ ಮಾಡಿದ್ದಾರೆ.

ದೇಶಿಯ ಆಟಗಳು: ಪ್ರತಿ ದಿನ ಸಂಜೆ ಶಾಲೆಯ ಅವಧಿ ಮುಗಿದ ನಂತರ ತಮ್ಮ ವಸತಿ ಗೃಹದ ಹತ್ತಿರ ವಟುಗಳು-ಸಾಧಕರು ಸೇರಿ ಕಬಡ್ಡಿ, ಸಂಗೆರೆ (ತಳ್ಳಿ) ಖೋಖೋ, ಲಗೋರಿಯಂತ ದೇಶಿಯ ಆಟವಾಡಲು ಮೊದಲಿನಿಂದಲೂ ಅವಕಾಶ ಕಲ್ಪಿಸಲಾಗಿದೆ. ಈಗಲೂ ಕೂಡ ಶಾಲಾ ಅವಧಿಯಲ್ಲಿ ಬಿಡುವಿನ ವೇಳೆ ಚಿಕ್ಕ ವಟುಗಳು ಕಬಡ್ಡಿ ಆಡುವ, ಜಿಗಿಯುವ, ಹಾರುವ, ಓಡುವ ಆಟದಲ್ಲಿ ತಲ್ಲೀನರಾಗಿದ್ದಾರೆ.

ಜ್ಯೋತಿಷ್ಯದ ಅಭ್ಯಾಸ: ಶಿವಯೋಗ ಮಂದಿರಕ್ಕೆ "ಕಾಲಜ್ಞಾನನ ವಚನ" ಒಂದು ಸಾಕ್ಷಿ ಎಂಬುದಾಗಿ ಹೇಳಲಾಗುತ್ತದೆ. ಅಂತಹ ಜ್ಯೋತಿಷ್ಯ ರೂಪದ ಅಂಶವನ್ನು ಜಾತಕಾಧಾರ ಸಹಿತವಾಗಿ ಅರಿಯುವ ವಿದ್ಯೆ ಶ್ರೀಗಳಿಗೆ ತಿಳಿದಿತ್ತು. ಹಾಗಾಗಿ ಇಲ್ಲಿ ವಟುಗಳಾಗಿ ಪ್ರವೇಶ ಪಡೆಯುವಾಗ ಕುಂಡಲಿ ನೋಡುವ ಪದ್ಧತಿ ಇದೆ. ಅದಕ್ಕಾಗಿ ಒಂದು ವ್ಯವಸ್ಥಿತವಾದ "ಜ್ಯೋತಿಷ್ಯ ಪಾಠ ಶಾಲೆಯನ್ನು ಅಕ್ಕಿ ಆಲೂರಿನಲ್ಲಿಯೂ, ನಂತರ ಇಳಕಲ್ಲ ಮಠದಲ್ಲಿಯೂ ಸಂಸ್ಕೃತ ಪಾಠಶಾಲೆಯೊಂದಿಗೆ ಮೊದಲ ಬಾರಿ ಆರಂಭಿಸಿ ನಿರಂತರ ಮೂವತ್ತು ವರ್ಷ

ನಡೆಸಿಕೊಂಡು ಬಂದಿದ್ದಾರೆ."[೨೬] ಈ ನಿಟ್ಟಿನಲ್ಲಿ ಇದು ಕೂಡ ಇಲ್ಲಿ ಪರ್‍ಯೇತರ ಅಂಶವಾಗಿ ಒಡಮೂಡಿದೆ.

ಆಯುರ್ವೇದ ಔಷದೋಪಚಾರ: ಭಾರತೀಯ ಆಯುರ್ವೇದ ವಿದ್ಯೆಯ ಬಗ್ಗೆ ಬಹಳಷ್ಟು ಕನಸನ್ನು ಹೊಂದಿದ್ದ ಹಾನಗಲ್ಲ ಶ್ರೀ ಕುಮಾಸ್ವಾಮಿಗಳು ತಮ್ಮ ಗುರುಗಳಾದ ಎಳಂದೂರು ಶ್ರೀ ಬಸವಲಿಂಗ ಶಿವಯೋಗಿಗಳ ಕಡೆಯಿಂದ ನಿಜಗುಣರ ತಪೋಭೂಮಿಯಾದ ಶುಂಭುಲಿಂಗನ ಬೆಟ್ಟದಲ್ಲಿ ಹನ್ನೆರೆಡು ವರ್ಷ ಶಿವಯೋಗ ಸಾಧನೆ ಕಾಲಕ್ಕೆ ವನಸ್ಪತಿ ಶಾಸ್ತ್ರವನ್ನು ಕಲಿತು ಅದಕ್ಕೆ ಆಯುರ್ವೇದದ ಅನುಗುಣವನ್ನು ಜೊತೆಗೆ ಶಾಸ್ತ್ರೀಯ ಅಭ್ಯಾಸವನ್ನು ಮಾಡಲಾರಂಭಿಸಿದರು.

* ವನಸ್ಪತಿಗಳ ಗುಣಧರ್ಮದ ಪೃಥಕ್ ಬಗ್ಗೆ ನಿರಂತರ ಸಂಶೋಧನೆಗೆ ಪ್ರಯತ್ನಿಸಿದರು.
* ಸುವರ್ಣಾದಿ ಸರ್ವಧಾತುಗಳ ಶುದ್ಧೀಕರಿಸಿ ನಿರುತ್ಥ ಭಸ್ಮಗಳ ತಯಾರಿಸುವುದು.
* ರಸ-ಔಷಧಿಗಳನ್ನು ಶೋಧಿಸಿ ರಸಮಾತ್ರಾದಿಗಳನ್ನು ಸಿದ್ಧಪಡಿಸುವುದು.

ಹೀಗೆ ಹಲವಾರು ರೀತಿಯಲ್ಲಿ ಆಯುರ್ವೆದ ಔಷಧೋಪಚಾರಕ್ಕೆ ಸಂಬಂಧಿಸಿದ ಸಿದ್ಧಿಗಾಗಿ ಸದಾ ಆಶ್ರಮದ ವಟು-ಸಾಧಕರಿಂದ ಇಂತಹ ಪ್ರಯೋಗಗಳನ್ನು ಮಾಡಿಸುತ್ತಿದ್ದರು. ಈ ಅಂಶದ ಕುರಿತಾಗಿ ಸ್ವತಹ ಅಲ್ಲಿಯೇ ಕಲಿತು ಅನುಭವಗಳಿಸಿದ ಶ್ರೀ ಮ.ಘ.ಚ. ಶ್ರೀ ಬಸವಲಿಂಗ ಪಟ್ಟಾಧ್ಯಕ್ಷರು ಹಿರೇಮಠ ತೆಸಂಗ ಹೀಗೆ ಹೇಳಿದ್ದಾರೆ. "ನಾವು ಶಿಯೋಗ ಮಂದಿರದಲ್ಲಿರುವವರೆಗೂ ಯಾವ ವೈದ್ಯರ ಹತ್ತಿರ ಹೋಗಿಲ್ಲ. ನಮ್ಮ ಕುಮಾರ ಅಪ್ಪಗಳವರೆ ನಮಗೆ ಔಷಧಿ ಕೊಡುತ್ತಿದ್ದರು. ಒಣಗಿದ ನೀಲಗಿರಿ ಎಲೆ, ಲಿಂಬುಗಿಡದ ಎಲೆ, ಚಹಾದ ಗರಿಸೊಪ್ಪು, ಒಣಶುಂಠಿ ಕೋತಂಬರಿಕಾಳು ಇತ್ಯಾದಿಗಳನ್ನು ಒಣಗಿಸಿ ಕುಟ್ಟಿದ ಪುಡಿಯನ್ನೆ ಖಾಯಿಲೆ ಬಂದಾಗಲು ಆಯುರ್ವೇದ ಔಷಧಿ ಕೊಟ್ಟು ಗುಣಪಡಿಸುತ್ತಿದ್ದರು. ಎಂಬುದಾಗಿ ಹೇಳಿದ್ದಾರೆ."[೨೭]

ಕೇವಲ ಮನುಷ್ಯರಿಗಲ್ಲದೆ ಪಶುಗಳಿಗೂ ಪ್ರಾಣಿಗಳಿಗೂ ಬರುವ ಕಾಲುಬೇನೆ, ಬಾಯಿಬೇನೆ, ಹೊಟ್ಟೆಗೆ ಸಂಬಂಧಿಸಿದ, ಮುಂತಾದ ಸಮಸ್ಯೆಗಳಿಗೂ ಅವರೇ ಹೊಸ ಹೊಸ ಪದ್ಧತಿಯ ಚಿಕಿತ್ಸೆ ಮಾಡುತ್ತಿದ್ದರು ಎಂಬ ಮಾತುಗಳು ಕೇಳಿಬರುತ್ತವೆ. ತಮ್ಮ ಗುರುಗಳಿಂದ ಕುಮಾರಸ್ವಾಮಿಗಳು ಶರೀರದ ರಕ್ಷಣೆ, ಹಾಗೂ ಸದೃಢತೆಗಾಗಿ

೧. ಪತಂಜಲಯೋಗ ಪದ್ಧತಿ

೨. ಆಯುರ್ವೇದ ವೈದ್ಯ ಪದ್ಧತಿ

ವಿದ್ಯೆಯನ್ನು ಕಲಿತು ಅದರ ಅನುಷ್ಠಾನಕ್ಕಾಗಿ ಹಲವಾರು ಪ್ರಯೋಗ ವಿದ್ಯೆಯನ್ನು ನಡೆಸಿ ಯಶಸ್ಸು ಪಡೆದಿದ್ದರು ಎಂಬುದಕ್ಕೆ ಶ್ರೀಮತಿ ಗಂಗಾತಾಯಿ ಎಂಬ ಪುಣೆಯ ತಾಯಿಯ

ಮಗನಿಗಿದ್ದ 'ಜಿಳುಪುಕಳೆ' ಎಂಬ ರೋಗಕ್ಕೆ ನೀಡಿದ 'ದೃತಿ' ಎಂಬ ಗಿಡಮೂಲಿಕೆಯ ದ್ರಾವಕ ಅಂತಹ ಪ್ರಯೋಗಕ್ಕೆ ಒಂದು ನಿದರ್ಶನವಾಗಿದೆ. ಇದರ ಪ್ರತಿಕವಾಗಿ ಪುಣೆಯ ಶ್ರೀ ಗಂಗಾತಾಯಿ ಶಿವಯೋಗ ಮಂದಿರದ ಪುಸ್ತಕಾಲಯಕ್ಕೆ ಎರಡು ಉತ್ತಮ ಕಪಾಟು ಕಾಣಿಕೆಯಾಗಿ ಮಾಡಿಸಿಕೊಟ್ಟ ದಾಖಲೆ ಗ್ರಂಥಾಲಯದಲ್ಲಿ ಕಾಣಬಹುದಾಗಿದೆ.[೨೮]

ಶಿವಯೋಗ ಮಂದಿರದಲ್ಲಿ ಶ್ರೀ ಹಾನಗಲ್ಲ ಕುಮಾರಸ್ವಾಮಿಗಳಿಂದ ಕಲಿತಿದ್ದೆನ್ನಲಾದ ೧೯೫೫ರಲ್ಲಿ ಮಂಗಳೂರು ಗ್ರಾಮದ ವಿರಕ್ತಮಠದ ಶ್ರೀ.ಮ.ನಿ.ಪ್ರ.ಲಿಂ. ಚನ್ನಮಲ್ಲಮಹಾಸ್ವಾಮಿಗಳು ರೂಢಿಸಿದ್ದರೆನ್ನಲಾದ ಆಯುರ್ವೇದ ಔಷಧಿ ಮೂಲಿಕೆಗಳ ಬಗ್ಗೆ ಕ್ಷೇತ್ರ ಬೇಟಿ ಕಾಲಕ್ಕೆ ಹಾವೇರಿಯ ಹುಕ್ಕೇರಿ ಮಠದಲ್ಲಿ ನೆಲೆಸಿರುವ ಶ್ರೀ ಶಿವಲಿಂಗಶಾಸ್ತ್ರಿ ಹಿರೇಮಠ ಹೇಳಿದ ಅಂಶಗಳು ಇಂತಿವೆ.[೨೯] ಇವು ದಾಖಲೆಗೆ ಯೋಗ್ಯವೂ, ಮುಂದೆ ಉಳಿಯುವಂತ ಅಂಶವೂ ಆದ ಕಾರಣ ಇವುಗಳನ್ನು ಇಲ್ಲಿ ನಮೂದಿಸಲಾಗಿದೆ.

ಹಾವು ಕಚ್ಚಿದರೆ

೧. "ಯಾರಿಗಾದರೂ ಹಾವು ಕಚ್ಚಿದರೆ ಕೂಡಲೆ ವಿಷ ರಕ್ತದೊಡನೆ ಸೇರಿ ಮೇಲಕ್ಕೇರದಂತೆ ಹಾವು ಕಡಿದ ಜಾಗದಿಂದ ಸ್ವಲ್ಪ ಮೇಲಕ್ಕೆ ದಾರದಿಂದ ಗಟ್ಟಿಯಾಗಿ ಬಿಗಿದು ಮೊದಲು ಕಟ್ಟಬೇಕು. ಪೋಟ್ಯಾಸಿಯಂ ಪರಮಾಂಗನೇಟ್ ಹಾಕಿ ಕರಗಿಸಿರುವ ನೀರಿನಲ್ಲಿ ಬಟ್ಟೆಯನ್ನು ತೋಯಿಸಿ ಕಡಿದ ಭಾಗವನ್ನು ಒಂದೇ ಸವನೆ ತೊಳೆಯುತ್ತಿರಬೇಕು ಮತ್ತು ಬಾಳೆಗಿಡದ ಒಣಗಿದ ದಪ್ಪಗಿರುವ ಭಾಗವನ್ನು ಕುಟ್ಟಿ ರಸವನ್ನು ತೆಗೆದು ಎರಡೆರಡು ಚಮಚ ರಸವನ್ನು ೫ ನಿಮಿಷಗಳಿಗೊಮ್ಮೆ ಕುಡಿಸುತ್ತಿದ್ದರೆ ವಿಷ ಇಳಿಯುತ್ತದೆ. ೧೯೫೫ರಲ್ಲಿ ಚನ್ನಮಲ್ಲಯ್ಯಸ್ವಾಮಿಗಳು ವಣಗೇರಿ ಚನ್ನಬಸಯ್ಯನನ್ನು ಇದೇ ಮಾದರಿಯಲ್ಲಿ ಉಳಿಸಿದ್ದಾರೆ."[೩೦] "ಶಿವಯೋಗ ಮಂದಿರದ ಸಂಚಾಲಕರಾದ ಶ್ರೀ ಸದಾಶಿವ ಸ್ವಾಮಿಗಳಿಗೆ ಅರಕೇರಿ ಕೊಠಡಿಯೊಳಗಿನ ಮೆಟ್ಟಿಲಿನಲ್ಲಿ ಹಾವು ಕಡಿದಾಗ ಕೂಡ ಇದೇ ರೀತಿ ಉಪಚರಿಸಲಾಗಿ ಬದುಕಿಸಲಾಗಿತ್ತು."[೩೧]

೨. ಕಿರುಕಸಾಲಿ ಸೊಪ್ಪಿನ ಗಿಡ ತಂದು ಅಕ್ಕಿ ತೊಳೆದ ನೀರಿನಲ್ಲಿ ಅರೆದು ಸೋಸಿ ಕಾಲು ಗಂಟೆಗೆ (೧೫ ನಿಮಿಷ) ಒಮ್ಮೆ ಒಂದೊಂದು ತೊಲಿಯಷ್ಟು (ತೂಕ) ಕುಡಿಸಿದರೆ ಉಗ್ರಸರ್ಪದ ವಿಷ ಇಳಿಯುತ್ತದೆ.

೩. ಹಾಗಲ ಎಲೆಗಳ ರಸವನ್ನು ತೆಗೆದು ಕುಡಿಸಿದರೆ ವಾಂತಿಯಾಗಿ ವಿಷ ಇಳಿಯುತ್ತದೆ.

೪. ನಿಂಬೆ ರಸವನ್ನು ಜಾಪಾಳದ ಬೀಜವನ್ನು ತೆಯ್ದು ರೆಪ್ಪೆಗೆ ಹಚ್ಚಿದರೆ ವಿಷ ಇಳಿಯುತ್ತದೆ.

ಚೇಳಿನ ವಿಷ ನಿವಾರಣೆಗೆ:

೧. ಚೇಳು ಕಡಿದ ಜಾಗಕ್ಕೆ ನಿಂಬೆ ಹಣ್ಣಿನ ಹೋಳಿನಿಂದ ಉಜ್ಜಿದರೆ ವಿಷ ಇಳಿಯುತ್ತದೆ.

೨. ನವಸಾಗರ, ಬೆಳಗರ ಮತ್ತು ಸುಣ್ಣ ಈ ಮೂರು ಸಮಾನ ಪ್ರಮಾಣದಲ್ಲಿ ಅಂಗೈಯಲ್ಲಿ ಇಟ್ಟು ತಿಕ್ಕಿ ನಾಲ್ಕಾರು ಸಲ ಮೂಸಿ ನೋಡಿದರೆ ವಿಷ ಇಳಿಯುತ್ತದೆ.

೩. ಚಿಲ್ಲದ ಬೀಜವನ್ನು ನೀರಿನೊಡನೆ ತೆಯ್ದು ಚೇಳು ಕಡಿದ ಸ್ಥಳಕ್ಕೆ ಹಚ್ಚಿದರೆ ವಿಷ ಇಳಿಯುತ್ತದೆ.

೪. ಈರುಳ್ಳಿ ತಿಕ್ಕುವುದರಿಂದ ವಿಷ ಇಳಿಯುತ್ತದೆ.

೫. ಸೂರಣದ ಗಡ್ಡೆಯನ್ನು ಬೇಯಿಸಿ ಕಟ್ಟುವದರಿಂದ ಚೇಳಿನ ವಿಷ ನಿವಾರಣೆಯಾಗುತ್ತದೆ.

ತೊನ್ನು ರೋಗಕ್ಕೆ:

೧. ತಿಕಟವನ್ನು ೩೬ ಗ್ರಾಂನಂತೆ ಚೂರ್ಣಿಸಿ ೩೭೬ ಗ್ರಾಂ ತುಪ್ಪ ಚೆನ್ನಾಗಿ ಸೋಸಿದ ಗೋಮೂತ್ರ ಸೇರಿಸಿ ಕುದಿಸಿ ಗಡಿಗೆಯಲ್ಲಿ ಕಾಯಿಸಿ ಸೋಸಿ ಆರಿದ ನಂತರ ೧೪೪ ಗ್ರಾಂ ಜೇನು ತುಪ್ಪ ಸೇರಿಸಿ ನಿತ್ಯ ಬೆಳಿಗ್ಗೆ ರಾತ್ರಿ ೧೨ ಗ್ರಾಂ ನಂತೆ ೨-೩ ತಿಂಗಳು ಸೇವಿಸುವುದರಿಂದ ತೊನ್ನುರೋಗ (ಶ್ವೇತಕುಷ್ಠ) ನಿವಾರಣೆಯಾಗುತ್ತದೆ.

೨. ಮೂಲಂಗಿಯ ಬೀಜ, ಸಾಸಿವೆ, ಅರಗು, ಅರಿಸಿಣ, ಬಾವಾಚಿ ಬೀಜ, ವಾಯುವಿಳುಗ, ಶುಂಠಿ, ಮೆಣಸು, ಹಿಪ್ಪಲಿ, ಮರದರಿಷಣ ಇವು ಸಮಭಾಗ ಕುಟ್ಟಿ ಗೋಮೂತ್ರದೊಡನೆ ಕಲಸಿ ಹಚ್ಚುವುದರಿಂದ ತೊನ್ನು ರೋಗ ನಿವಾರಣೆಯಾಗುತ್ತದೆ.

ಮಕ್ಕಳ ಕೆಮ್ಮಿಗೆ:

ಅಗಸಿ ಎಲೆ ಅರೆದು ಒಂದು ಸಣ್ಣ ಚಮಚ ಜೇನುತುಪ್ಪ ೪ ಹನಿ ನಿಂಬೆರಸ ದಿನಾ ಬೆಳಗ್ಗೆ ಒಮ್ಮೆ ರಾತ್ರಿ ಮಲಗುವಾಗೊಮ್ಮೆ ಹೀಗೆ ದಿನಕ್ಕೆರೆಡು ಸಾರಿ ಕುಡಿಸಿದರೆ ಕೆಮ್ಮು ವಾಸಿಯಾಗುತ್ತದೆ.

ಬಿಳಿ ಸೆರಗು:

೧. ಅಗಲಿಗಿಡದ ಹಳದಿ, ಬಿಳಿ ಹೂವುಗಳನ್ನು ತುಪ್ಪದಲ್ಲಿ ಹುರಿದು ದಿನಕ್ಕೆ ೨ ಸಾರಿ ಸೇವಿಸಿದರೆ ಯೋಗ ನಿವಾರಣೆ.

೨. ಆನೆ, ನಗ್ಗಲಿಬಳ್ಳಿ ಬೇರು ಕುಟ್ಟಿ (ಮುಳ್ಳು ತೆಗೆದು) ಕೆಂಪು ಸಕ್ಕರಿ ಕೂಡಿಸಿ ಒಂದಷ್ಟು ದಿನ ಬೆಳಿಗ್ಗೆ ಒಮ್ಮೆ ತೆಗೆದುಕೊಳ್ಳಿರಿ. ೭ ದಿನ ತೆಗೆದುಕೊಳ್ಳಬೇಕು. ಬಿಳಿ ಸೆರಗು ನಿಲ್ಲುತ್ತದೆ ಮತ್ತು ಸಕ್ಕರೆ ರೋಗವು ನಿಲ್ಲುತ್ತದೆ.

ಪಾಚಕ, ಆರೋಗ್ಯವರ್ಧನೆ, ಅಜೀರ್ಣನಿವಾರಣೆ, ಹಸಿವು ಹೆಚ್ಚಿಸುವುದಕ್ಕೆ

೧. ಕಾಲುಕೇಜಿ ಅಜವಾನ ಮುಳುಗುವಷ್ಟು ನಿಂಬೆರಸದಲ್ಲಿ ಅರೆದು ಹಾಕಿ ನೆನಸಿ ಒಣಗಿಸೋದು. ೨ ದಿನ ಹೀಗೆ ಬೆಳಗ್ಗೆ ಲಿಂಬೆರಸ ಹಿಂಡೋದು ಒಣಗಿಸಿಟ್ಟು ದಿನಾ ಊಟಾದ ನಂತರ ಒಮ್ಮೆ ತೆಗೆದುಕೊಳ್ಳುವುದು.

೨. ಕಾರ್ಚಿಗಡ್ಡೆ ತೇಯ್ದು ಅದರ ಗಂಧ ನಾಲಿಗೆಗೆ ಹಚ್ಚಿ ನೆಕ್ಕಿದರೆ ಸರ್ವರೋಗ ನಿವಾರಣೆಯಾಗುತ್ತದೆ. (ದಮ್ಮು, ಕೆಮ್ಮು, ಕ್ಯಾನ್ಸರ್)

೩. ನಗ್ಗಲಿ ಮುಳ್ಳು ತೆಗೆದು ತೊಳಿದು ಅದರ ಗಂಟು ಒಣಗಿಸಿ ಪುಡಿ ಮಾಡಿ ಜಿನಗು ಹಿಟ್ಟು ಮಾಡಿ ಅಷ್ಟೇ ಪ್ರಮಾಣ ತುಳಸಿ ತಪ್ಪಲ ತೊಳೆದು ಒಣಗಿಸಿ ಪುಡಿಮಾಡಿ ಎರಡೂ ಮಿಕ್ಸಿ ಮಾಡಿ ಒಂದು ಕಪ್ಪು ಹಾಲಿಗೆ ಎರಡು ಚಮಚ ಪುಡಿ ಹಾಕಿ ೨ ಹೊತ್ತು ಖಾಲಿ ಹೊಟ್ಟೆಗೆ ತೆಗೆದು ಕೊಂಡು ಎರಡು ತಾಸು ಏನು ತಿನ್ನಬಾರದು ಇದರಿಂದ ಕೋಶದ ಕಲ್ಲು ಕರಗುತ್ತದೆ.

ಎಲಬು ಮುರಿದರೆ:

೧. ಹರದಚಗನ ತಪ್ಪಲ ಅರೆದು ಎಲುಬು ಮುರಿದುಕೊಂಡವರಿಗೆ ಒಂದು ಗುಳಿಗೆ ಆಡಿನ ಹಾಲಿನಲ್ಲಿ ಕುಡಿಸುವುದು, ಎಲುಬು ಕಟ್ಟಿ ಮೇಲೆಯೂ ತಪ್ಪಲದ ರಸ ಹಚ್ಚಬೇಕು.

೨. ದನದ ಹೊಟ್ಟೆ ಕಡಿತಕ್ಕೆ ಕಾಡಕವಡಿಕಾಯಿ ಚೆನ್ನಾಗಿ ಅರೆದು ಮಜ್ಜಿಗೆಯಲ್ಲಿ ಕೂಡಿಸಿ ದನಕ್ಕೆ ಕುಡಿಸಬೇಕು ಹೊಟ್ಟೆ ಕಡಿತ ನಿಲ್ಲುತ್ತದೆ.

೩. ದನಗಳು ಮೇಯುಲಿಲ್ಲ ಅಂದರೆ ಲವಳರಸ ಬೆಲ್ಲ ಕೂಡಿಸಿ ಕೊಟ್ಟರೆ ಮೇಯುತ್ತದೆ.

ಮಂಡಿ ನೋವಿಗೆ:

ಕರೆ ಮದುಗುಣಿಕೆ ಎಲೆಗೆ ಸ್ವಲ್ಪ ಔಡಲಎಣ್ಣೆ ಹಚ್ಚಿ, ಎಣ್ಣೆ ಹಚ್ಚಿದ ಎಲೆ ಬಿಸಿಮಾಡಿ ಮೊಳಕಾಲು ಮಂಡಿನೋವಿಗೆ ಹಾಕಿದರೆ ಕೀಲು ನೋವು ದೂರವಾಗುತ್ತದೆ.

ಸರ್ಪ ಹುಣ್ಣಿಗೆ:

ಗರುಡನ ಮಂತ್ರ: ಸೂರ್ಯ ದೇವಾಲಯಃ ನಮಃ! ಗರುಡ ಪಾಕ್ಷಾಯ ನಮಃ! ವಿಣಾತ ಮಂತ್ರಾಯ ನಮಃ! ಹವ ಹವ ಮಂತ್ರಾಯ ನಮಃ! ಚಂಡ ಚಂಡಾಯ ನಮಃ! ಅಪಾರ ಅಪಾರಾಯ ನಮಃ! ತದ್ವರೇಷ್ಮಾಯ ನಮಃ (ಮಂತ್ರಿಸಿ) ಮೊದಲಿಗೆ ಸೂರ್ಯನಿಗೆ ಪೂಜಿಸಿ ಕಾಯಿ ಒಡೆದು ತೆಂಗಿನ ಹಾಲಿನಲ್ಲಿ ಸುಣ್ಣ ಕಲಿಸಿ ತೆಂಗಿನ ಜುಬ್ರದಿಂದ ಹಚ್ಚಬೇಕು. ಜಾಜು ಕಲ್ಲು (ಕೆಂಪದು) ಹಾಲಿನಲ್ಲಿ ತೇದು ಜುಬ್ರದಿಂದ ಹಚ್ಚಬೇಕು. ಹಾಳು ಮಣ್ಣಿನ ಐದು

ಹೆಂಡೆ ತಂದು ಮೇಲಿನ ಮಂತ್ರದಿಂದ ಮಂತ್ರಿಸಿ ಐದು ವಿಳ್ಯದೆಲೆ ಮಂತ್ರಿಸಿ ಇಳೆದಗೆದು ನೀರಿದ್ದ ಬಾವಿಯಲ್ಲಿ ಇಲ್ಲವೆ ಹಳ್ಳದಲ್ಲಿ ಅಥವಾ ನದಿಯಲ್ಲಿ ಎಸೆಯಿರಿ.

ಮೂಲವ್ಯಾಧಿಗೆ:

೧. ೧೨ ಗ್ರಾಂ ಈರುಳ್ಳಿ ರಸಕ್ಕೆ ೩೦ಗ್ರಾಂ ಸಕ್ಕರೆ ಸೇರಿಸಿ ಪ್ರತಿ ನಿತ್ಯ ಬೆಳಗ್ಗೆ ಒಮ್ಮೆ ಸೇವಿಸಿ ಹೀಗೆ ೨ ವಾರ ಸೇವಿಸುದರಿಂದ ಮೂಲವ್ಯಾದಿ ನಿವಾರಣೆ.

೨. ಹೊನ್ನಗನ್ನೆ ಸೊಪ್ಪಿನ ರಸ ೨೪ ಗ್ರಾಂ, ಮೂಲಂಗಿ ಸೊಪ್ಪಿನ ರಸ ೨೪ಗ್ರಾಂ, ಒಂದು ಚಿಟಕಿ ಸೈಂಧವ ಲವಣ ಸೇರಿಸಿ ನಿತ್ಯ ೨ ಹೊತ್ತು ೨ ಅಥವಾ ೩ ವಾರ ಸೇವಿಸುವುದರಿಂದ ಪರಿಹಾರ.

೩. ಕಾಡು ತುಲಸಿಯ ಬೀಜದ ಚೂರ್ಣ ೧೨ಗ್ರಾಂ, ೧೨ಗ್ರಾಂ ಬೆಣ್ಣೆಯಲ್ಲಿ ಕಲಸಿ ಅದಕ್ಕೆ ೧೨ಗ್ರಾಂ ಸಕ್ಕರೆ ಸೇರಿಸಿ ನಿತ್ಯ ಬೆಳಗ್ಗೆ ರಾತ್ರಿ ೨ ಸಲ ೩ ವಾರ ಸೇವಿಸಿದರೆ ನಿವಾರಣೆ.

೪. ೨೪ ಗ್ರಾಂ ಬಿಲ್ವ ಪತ್ರಿ ರಸ ನಿತ್ಯ ಬೆಳಗ್ಗೆ ಹಾಳು ಹೊಟ್ಟೆಯಲ್ಲಿ ಸೇವಿಸೋದರಿಂದ ನಿವಾರಣೆ.

ಇಸಬು, ಗಜಕರ್ಣ, ಚರ್ಮರೋಗಕ್ಕೆ

೧. ದಾಳಿಂಬೆ ಸಿಪ್ಪೆ, ಕೊಬ್ರಿಯಣ್ಣೆಯಲ್ಲಿ ಹುರಿದು ಮತ್ತು ಪಟ್ಟಿ ಕರ್ಪೂರ ಕೂಡಿಸಿ ಹಚ್ಚಿರಿ.

೨. ಬೇವಿನ ತಪ್ಪಲು, ಗಜಗದ ತಪ್ಪಲು, ಮದಗಂಕಿ ತಪ್ಪಲು, ೩ ಸಮ ಪ್ರಮಾಣ ಕುಟ್ಟಿ ಒಣಗಿಸಿ ಪುಡಿಮಾಡಿ ಕೊಬ್ರಿ ಎಣ್ಣೆಯಲ್ಲಿ ಬಿಸಿ ಮಾಡಿ ಹುರಿದು ಪೇಸ್ಟ್ ಮಾಡಿ ಕರ್ಪೂರ ಕಲಸಿ ಹಚ್ಚಿರಿ ಪತ್ತೆ (ಸೂಚನೆ) ಉಪ್ಪು, ಖಾರಾ ಸ್ವಲ್ಪ ಊಟ ಮಾಡಿರಿ, ಹುಳಿ ತಿನ್ನಬಾರದು.

ಬಿಳಿ ಸೆರಗು

೧. ಲವಳಸರ ಅರ್ಧಚಮಚ ಕಲ್ಲು ಸಕ್ಕರೆ ಸಮ, ಜಿರಿಗೆ ೧ ಚಿಟಗಿ ಸೇವಿಸಿರಿ

೨. ಆಲದ ಗಿಡದ ಮುಗಲುಳು ಜಜ್ಜ ಅರಬಿಯಲ್ಲಿ ಹಿಂಡಿ ಸೇವಿಸುವುದು.

೩. ದಿನ ಖಾರಾ ತಿನ್ನಬಾರದು.

ಹೀಗೆ ಆಯುರ್ವೇದದಲ್ಲಿ ಸಾಕಷ್ಟು ಹೊಸ ಪ್ರಯೋಗ ಮಾಡಿ ಶಿಷ್ಯರಿಗೆ ಧಾರೆ ಎರೆದಿದ್ದಾರೆ. ಅವರ ಶಿಷ್ಯಂದಿರು ಅದನ್ನು ಮುಂದುವರಿಸಿಕೊಂಡು ಬಂದಿದ್ದಾರೆ.

ವಟು-ಸಾಧಕರನ್ನು ಮುಂಜಾನೆ, ಕೆಲವೊಮ್ಮೆ ಸಂಜೆಯ ವೇಳೆಗೆ ಹತ್ತಿರದ ಬೆಟ್ಟಕ್ಕೆ, ಮಲಪ್ರಭ ತೀರಕ್ಕೆ, ಮಹಾಕೂಟದ ಗುಡ್ಡಕ್ಕೆ ಕರೆತಂದು ಅಲ್ಲಿ ಸಿಗುವ ವನಸ್ಪತಿ ಗಿಡಮೂಲಿಕೆ, ಎಲೆಗಳನ್ನ ಮುಟ್ಟಿ ತೋರಿಸಿ ಅದರ ಮಹತ್ವ ಯಾವ ರೋಗಕ್ಕೆ ಯಾವುದು ಸೂಕ್ತ ಮದ್ದಾಗಬಲ್ಲದು

ಎಂಬ ವಿಷಯವನ್ನು ಹೇಳಿಕೊಡುತ್ತಿದ್ದರು. ಮುಂದೆ ಅದು ಆಶ್ರಮವಾಸಿಗಳಾದ ವಟು-ಸಾಧಕರು ಅನಾರೋಗ್ಯಕ್ಕೆ ತುತ್ತಾದ ಕಾಲದಲ್ಲಿ ಪರಸ್ಪರರ ಉಪಚಾರಕ್ಕೆ ಸಹಾಯಕವಾಗುತ್ತಿತ್ತು. ಜೊತೆಗೆ ಸಮಾಜದ ಹಿತಕ್ಕೆ ಅಣಿಯಾದ ದೇವರುಗಳಿಗೆ ಅದೊಂದು ವಿದ್ಯೆಯೂ ಆಗಿರುತ್ತಿತ್ತು. ಇದರ ಫಲವಾಗಿ ಶ್ರೀ ಉರಿಲಿಂಗದೇಶಿಕರು ಶ್ರೀ ಕುಮಾರಸ್ವಾಮಿಗಳ ಕೃಪೆಯಿಂದ ಉತ್ತಮ ವೈದ್ಯರಾಗುತ್ತಾರೆ. ಅವರಂತೆ ಶ್ರೀ ಶಿವಬಸವಪ್ಪ ಮಾಗಿ ಮಾಸ್ತರ ಇದರಲ್ಲಿ ಸಾಕಷ್ಟು ಅನುಭವ ಹೊಂದಿದ್ದವರಾಗಿದ್ದಾರೆ.

ನೈತಿಕ ಶಿಕ್ಷಣ:

ನೈತಿಕ ಶಿಕ್ಷಣ ಸ್ವಾಮಿಗಳವರ ಉಸಿರು "ಕ್ರಮ ತಪ್ಪಿ ನಡೆವುದರಿಂಕಷ್ಟಮಿನ್ನುಂಟೆ?" ಎಂದು ಯಾವಾಗಲು ಅಪ್ಪಣೆ ಕೊಡಿಸುತ್ತಿದ್ದರು. ಬಡವನಾಗಲಿ ಬಲ್ಲಿದನಾಗಲಿ ಸಂನ್ಯಾಸಿಯಾಗಲಿ ಸಂಸಾರಿಯಾಗಲಿ ಅಧಿಕಾರಿಯಾಗಲಿ ಅನಧಿಕಾರಿಯಾಗಲಿ ರೀತಿ ನೀತಿಗಳಲ್ಲದಿದ್ದರೆ ಅವರೆಲ್ಲ ಮನುಷ್ಯತ್ವಕ್ಕೆ ಸಲ್ಲದವರೆಂದು-ನೀತಿ ನ್ಯಾಯಗಳಿಂದ ನಡೆವವರೆ ಮಹಾನುಭಾವರೆಂದು ಸ್ವಾಮಿಗಳವರು ತಿಳಿದಿದ್ದರು ತಿಳಿಹೇಳುತ್ತಿದ್ದರು.

ಈ ನಿಟ್ಟಿನಲ್ಲಿ ಕುಮಾಸ್ವಾಮಿಗಳು ಬೋಧಿಸುತ್ತಿದ್ದ ನೀತಿಗಳು ಅನೇಕ. ಅವು ಅನುಭವಪೂರ್ಣವಾದ ಮಾತುಗಳಾಗಿದ್ದವು. ನಿಜಗುಣರ ನೀತಿಯ ಮಾತುಗಳನ್ನು ತಮ್ಮದೇ ಆದ ವಿಚಾರ ಸರಣಿಯಿಂದ ವಿಮರ್ಶಿಸಿ ಬೋಧಿಸುತ್ತಿದ್ದರು. ಅವುಗಳಲ್ಲಿ ಒಂದೆರೆಡು ನೀತಿಗಳು ಹೆಸರಿಸುವುದಾದರೆ ಅವು ಹೀಗಿವೆ.[೨]

೧. ಶ್ರೀ ಗುರು ವಚನದಿಂದಧಿಕ ಸುಧೆಯುಂಟೆ? ಇದು ಮಾನವ ಜೀವನಕ್ಕೆ ಅಗತ್ಯವಾದ ಅಮೃತದ ನೀತಿ ಎನ್ನುತ್ತಾರೆ. ಮಾನವನು ಅಮರವಾಗಿ ಅಖಂಡವಾಗಿ ಬದುಕಬೇಕಾದರೆ ಈ ನೀತಿಯನ್ನು ಪರಿಪೂರ್ಣವಾಗಿ ಆಚರಿಸಿಯೆ ತೀರಬೇಕು. ಅನುಭವಿಸಿಯೆ ಆಗಬೇಕು. ಶ್ರೀ ಗುರುವೆಂದರೆ ತಾಯಿ, ತಂದೆ, ಅಧ್ಯಾಪಕ, ಆಚಾರ್ಯ ಎಂಬುವವರೆ ಶ್ರೇಷ್ಠ ಗುರುಗಳು. ಇವರು ನರಮಾನವರಿಗೆಲ್ಲ ಗುರುವಾದವರು ಇವರ ವಚನ ಸುಧೆಯನ್ನು ಪ್ರತಿಯೊರ್ವನು ಪಾನಮಾಡಬೇಕು. ಆಗಲೆ ಜೀವನ ಪರಿಪೂರ್ಣ ಎಂದಿದ್ದಾರೆ.

ಆತ್ಮ ವಿದ್ಯೆಯನ್ನು ಅಳವಡಿಸಿಕೊಳ್ಳುವವರು ಅಪರೂಪವೆಂದು ಅರಿತಿದ್ದ ಹಾನಗಲ್ಲ ಕುಮಾರಸ್ವಾಮಿ ಶಿವಯೋಗ ಮಂದಿರದ ವಟು-ಸಾಧಕರಿಗಾಗಿ ಮಾತಾಡುವಿಕೆ, ಮಾಡುವಿಕೆ, ಅರಿಯುವಿಕೆ, ಅಳವಡಿಸುವಿಕೆ ಎಂಬ ನಾಲ್ಕು ಶ್ರೀ ಗುರುವಿನಂತಹ ನೈತಿಕ ಸುಧೆಯನ್ನು ನೀತಿಬೋಧನಾ ಅಂಶವಾಗಿ ಬೋಧಿಸುವಂತೆ ಹೇಳುತ್ತಾರೆ.

೨. ರಾಗದಿಂ ಬೇರಿನ್ನು ಭವಬೀಜಮುಂಟೆ? ಮಾನವನು ಮನೋವೃತ್ತಿಗೆ ಒಳಗಾಗಿ ಬದುಕುವಾಗ ಸ್ವಾರ್ಥಿಯಾಗಿ ಬಾಳುತ್ತಾನೆ. ಸ್ವಾರ್ಥವು ರಾಗದ (ಅತ್ಯಾಶಯ) ಬೀಜ. ರಾಗವು ಭವದ (ಬಳಲಿಕೆಯ) ಬೀಜ. ಇಲ್ಲಿ ಭವವೆಂದರೆ ಬಳಲಿಕೆ ಎನ್ನುತ್ತಾರೆ. ರಾಗ ವಿರಾಗಗಳು ಜೀವನದಲ್ಲಿ ಹಗಲು-ರಾತ್ರಿಗಳಂತೆ ಹಾಗಾಗಿ ರಾತ್ರಿ ಕಳೆದು ಹಗಲು ಬಾರದಿದ್ದರೆ ಮಾನವ ಜೀವನ ಶೂನ್ಯವೆನಿಸುತ್ತದೆ. ಹಾಗಾಗಿ ರಾಗದ ರಾತ್ರಿ ಕಳೆದು ವಿರಾಗದ ರವಿ ಮೂಡಿಸುವುದು ಅನಿವಾರ್ಯ, ಅದು ರಾಜಕೀಯ ರಂಗವೇ ಇರಲಿ ಧಾರ್ಮಿಕ ಕ್ಷೇತ್ರವೆ ಆಗಲಿ, ಅತಿಯಾಶೆಗೆ ಒಳಗಾಗದೆ ರಸವನ್ನು ರಾಗವೆಂದೆ ಭ್ರಮಿಸಿ ಬದುಕಿದರೆ ಬದುಕಿಗೊಂದು ಬೆಲೆ ಸಿಗದು ಎನ್ನುತ್ತಾರೆ. ಹಾಗಾಗಿ ರಾಗಿಗಳಿಗೆ ಎಷ್ಟಿದ್ದರು ತೃಪ್ತಿಯಿಲ್ಲ, ವಿರಾಗಿಗೆ ಇಷ್ಟವಿರಲಿ, ಇರದೆ ಹೋಗಲಿ ಯಾವುದೂ ಏನು ಅನಿಸದು. ಹಾಗಾಗಿ ಸಮಾಜದಲ್ಲಿ ಬದುಕುವರೆಲ್ಲ ವಿರಾಗಿಯಂತೆ ಭವವಿಮುಕ್ತರಾಗಿ ಭವ್ಯಶಕ್ತಿಗೆ ಬೀಜವಾಗಬೇಕು ಎನ್ನುತ್ತಾರೆ.

ಹೀಗೆ ಸ್ವಾಮಿಗಳು ಸದ್ಬೋಧೆಯಿಂದ ನೀತಿಜ್ಯೋತಿಯಾಗಿ ಬೆಳಗುವಂತಾಗಲು, ರೀತಿ-ನೀತಿಗಳ ಮಹೋನ್ನತಿಗೆ ಕಾರಣಪುರುಷರಾಗಿದ್ದಾರೆ. ಅಗತ್ಯವಾದ ನೈತಿಕ ಶಿಕ್ಷಣವು ಶಿವಯೋಗ ಮಂದಿರದ ಪಠ್ಯೇತರ ಚಟುವಟಿಕೆಯ ಭಾಗವಾಗಿ ಅಂದಿನಿಂದ- ಇಂದಿನ ವರೆಗೆ ಮುಂದೆಯು ಇರುವಂತದ್ದಾಗಿದೆ.

ಕಾಯಕ ನಿಷ್ಠೆ: ನೆಮ್ಮದಿಗೆ ಮೊದಲ ಸೂತ್ರವೆಂದರೆ ಕಾಯಕ ನಿಷ್ಠೆ. ಅದು ಶಿವಯೋಗ ಮಂದಿರದ ಸಾಧಕರಿಗೆ ಪಠ್ಯೇತರ ಚಟುವಟಿಕೆಯ ಮೂಲಕ ಒಂದು ಅಂಗವಾಗಿದೆ.

"ದುಡಿಯುವವರು, ಬಡವರಾಗಿದ್ದರೂ, ಒಡೆಯರೇ ಸರಿ

ದುಡಿಯಲೊಲ್ಲದವ ಒಡೆಯನಾಗಿದ್ದರೂ ಅವನು ಬಡವನೆ"[೨] ಎಂದು ಮೋಳಿಗೆ ಮಾರಯ್ಯ ಹೇಳಿದ್ದಾನೆ.

ಇದು ದುಡಿಮೆಯ ಘನತೆಯನ್ನು ತೋರಿಸುವುದು. ಉತ್ಪಾದಿಸಲಾಗದವನ ಬದುಕೆ ಶೋಷಣೆಯ ಬದುಕು. ಧರ್ಮದ ಹೆಸರಿನಲ್ಲಿ ಪೌರೋಹಿತ್ಯವನ್ನೇ ಒಂದು ವೃತ್ತಿಯೆಂದು ನಂಬಿರುವವರು ಶೋಷಕರು. ಶರಣರು ಕಾಯಕದಲ್ಲಿ ಮಹತ್ವವಿದೆ ಕಾಯಕವೇ ಕೈಲಾಸವೆಂದರು. ಸಾಧಕರೆ ನೀವು ಮಠಾಧೀಶರಾದರೂ ಕಾಯಕ ಮಾಡಿ ಪ್ರಸಾದ ಮಾಡಿರಿ ಕಾಯಕವನ್ನು ಎಲ್ಲರೂ ಮಾಡಬೇಕು ಮಠದ ಹೊಲದಲ್ಲಿ ದುಡಿದು ಕೃಷಿ ಪಂಡಿತರಾಗಿ ತಪಸ್ವಿಗಳಾಗಿ ಬಾಳಿರಿ ಯಾರ ಹಂಗಿಗೂ ಒಳಗಾಗಬೇಡಿರಿ.

"ಪೌರೋಹಿತ್ಯಂ ರಜನಿಚರಿತ್ರಂ, ಗ್ರಾಮಣಿತ್ವಂ ನಿಯೋಃ
ಮಠಾಧಿಪತ್ಯ ಹ್ಯನೃತವಚನಂ ಸಾಕ್ಷಿವಾದಃ ಪರಾನ್ನಂ
ಬ್ರಹ್ಮದ್ವೇಷಾಃ ಖಲಜನರಲೇ ಪ್ರಾಣೀನಾಂ ನಿರ್ದಯತ್ವಂ

ಮಾಭೂದೇವ ಮದುಪಶೂಪತೆ ಜನ್ಮ ಜನ್ಮಾಂತರೇಷು"[೩೨] ಎಂಬುದಾಗಿ ಶ್ರೀ ಶಂಕರಾಚಾರ್ಯರು ನುಡಿದಿದ್ದಾರೆ.

ಘಟದಿಂದ ಮಠ ಬೆಳಗಿಸಿ ಮಠದಿಂದ ಘಟ ಬೆಳಗಬಾರದು. ಹಾಗಾಗಿ ಮಠಕ್ಕೆ ಅಧೀನರಾಗದೆ ಪ್ರತಿನಿತ್ಯ ಕಾಯಕ ಮಾಡಿರಿ, ಕಾಯಕ ಎಂಬ ಮಾತಿನಲ್ಲಿ ಸಾಮಾಜಿಕ ಮತ್ತು ಆರ್ಥಿಕ ನೀತಿಯ ಸಮಷ್ಟಿಯ ಹಿತದ ತ್ರಿವಿಧಗಳಾದ ವಿದ್ಯಾದಾಸೋಹ, ಅನ್ನದಾಸೋಹ, ಶಿವಾನುಭವ ದಾಸೋಹ ಅಡಗಿದೆ ಇದನ್ನು ಪ್ರತಿಯೋರ್ವ ಮಠಾಧಿಪತೀಯು ರೂಢಿಸತಕ್ಕದೆಂದು ಬೋಧಿಸಿ ಅಂತೆಯೇ ತಾವೂ ನಡೆದರು.

ಬ್ರಹ್ಮಚರ್ಯ: 'ಆಹಾರ ನಿದ್ರಾ, ಭಯ, ಮೈಥುನಂ ಚ!ಸಾಮಾನ್ಯಮೆತತ್! ಪಶುಭಿರ್ನರಾಣಾಂ! ಉಣ್ಣುವುದು, ನಿದ್ರಿಸುವುದು, ಮೈಥುನ ಮಾಡುವುದು. ಭಯಭೀತನಾಗುವುದು ಈ ಎಲ್ಲಾ ಕ್ರಿಯೆಗಳು ಜೀವರಾಶಿಗಳಿಗೆ ಅಂದರೆ ಮಾನವ, ಪಶು ಪ್ರಾಣಿಗಳಿಗೆ ಸಮಾನ ಇವೆ. ಮಾನವ ಜನ್ಮದಲ್ಲಿ ಬುದ್ಧಿವಂತಿಕೆಯಿಂದ, ವಿವೇಕದಿಂದ ಜೀವನ ನಡೆಸಬೇಕು. ಮನುಷ್ಯ ಜನ್ಮದ ಲಾಭವಾವುದು? ತಾನಾರೆಂದು ತಿಳಿವುದು ಶರೀರ ಮಾಧ್ಯಮ ಖಲು ಧರ್ಮಸಾಧನಂ, ಧರ್ಮದ ಗಳಿಕೆಗಾಗಿ ಈ ಶರೀರ ದೊರತಿದೆ ಶ್ರಮ, ದಯಾದಿ, ಸದ್ಗುಣಗಳಿಂದ ಸಮಯ, ಶಕ್ತಿಯಿಂದ ಬ್ರಹ್ಮಚರ್ಯ ಸಂಪಾದಿಸಿ ತೇಜಸ್ವಿಗಳಾಗಬೇಕು. ಇದರಿಂದ ಆಯಸ್ಸು, ತೇಜ, ಬಲ, ವೀರ್ಯ, ಯಶ್, ಸಂಪದ, ಪ್ರೀತಿ, ಪುಣ್ಯ, ಆರೋಗ್ಯ, ಸ್ಫೂರ್ತಿ, ಸಹನೆ, ಸಂಪತ್ತು ವೃದ್ಧಿಯಾಗಿ ಮಾನವ, ಮಹಾಂತನಾಗುತ್ತಾನೆ. ಇಲ್ಲದಿದ್ದರೆ ದಾನವನಾಗುತ್ತಾನೆ. ಇಂದು ದೇಶದಲ್ಲಿ ೬ ಸೆಕೆಂಡಿಗೊಂದು ಬಲತ್ಕಾರ ಪ್ರತಿ ವರ್ಷ ಇಪ್ಪತ್ತು ಲಕ್ಷ ಸ್ತ್ರೀಯರು ಮದುವೆ ಆಗುವ ಮೊದಲೆ ಗರ್ಭಿಣಿಯರು. ಹೀಗಾಗಿ ವಿವಾಹ ವಿಚ್ಛೇದನ, ರೋಗಗಳು ಹೆಚ್ಚು, ಸಂಭೋಗದಿಂದ ಸಮಾಧಿ' ಎನ್ನುತ್ತಾರೆ. ಇದರಿಂದ ಸಮಸ್ಯೆಗಳು ಹೆಚ್ಚಾಗಿ ಜೀವಂತ ಹೆಣವಾಗುತ್ತಿದೆ ಯುವಶಕ್ತಿ.

ದೇವರು ಹೂವನ್ನು ಮುಳ್ಳನ್ನೂ ಎರಡನ್ನೂ ಸೃಷ್ಟಿಸಿದ್ದಾನೆ. ದೇವರಿಗೆ ಹೂವು ತರುತ್ತೇವೆ ವಿನಾಹ ಮುಳ್ಳು ಸೇರಿಸಿ ತರೋದಿಲ್ಲ ಅಂತೆಯೇ ಬುದ್ದಿಯ ಸದುಪಯೋಗದಿಂದ ಬ್ರಹ್ಮಚರ್ಯ, ವೀರ್ಯ ರಕ್ಷಣೆ ತುಂಬಾ ಅವಶ್ಯಕ. ಬ್ರಹ್ಮಚರ್ಯ ಪರಮಬಲ, ಶೀಘ್ರವಾಗಿ ಆತ್ಮಸಾಕ್ಷಾತ್ಕಾರ ಬಿಂದುನಾಶಮೃತ್ಯು ಬಿಂದುರಕ್ಷಣೆಯೆ ಜೀವನ.

"ಬಿಂದು ಮೂತ್ರಗಳೆರಡೂ ಒಂದೇ ನಾಳದಿ ಬಕ್ಕು!
ಒಂದು ಬಿಟ್ಟು ಒಂದು ಹಿಡಿದವನು
ಅಜನಕ್ಕು ಅಚ್ಚುತನಕ್ಕು ಸರ್ವಜ್ಞ".[೩೩]

ಬ್ರಹ್ಮಚರ್ಯದ ಉತ್ಕೃಷ್ಟ ತಪಸ್ಸು ಮೂರು ಲೋಕದಲ್ಲಿ ಇದು ಶ್ರೇಷ್ಠ ವೀರ್ಯ, ಶರೀರದ ಅಮೂಲ್ಯಧಾತು. ಉಂಡ ಅನ್ನ ಜೀರ್ಣವಾಗಿ ರಸವಾಗುತ್ತದೆ. ಐದು ದಿನದ ನಂತರ ರಕ್ತವಾಗುತ್ತದೆ ಆ ರಕ್ತ ಮಾಂಸ, ನೆಣ, ಕೊಬ್ಬು ಕೊಬ್ಬಿನ ಒಂದು ಹನಿ ವೀರ್ಯಸಿದ್ಧವಾಗುವುದೆಂದು ಶ್ರೀ ಸುಶ್ರುತಾಚಾರ್ಯರು ಬರೆದಿದ್ದಾರೆ. ವೀರ್ಯವಾಗಲು ಮೂವತ್ತು ದಿನಗಳು ಬೇಕಾದ ಕಾರಣ ವೀರ್ಯ ರಕ್ಷಿಸಿರಿ. ಸ್ತ್ರೀಯರಿಂದ ದೂರವಿರಬೇಕು ನೆನೆಯಬಾರದು, ನೋಡಬಾರದು, ಪಾದಗಳನ್ನು ಮುಟ್ಟಿಸಿಕೊಳ್ಳಬಾರದು ವೈಭವದಿಂದ ಬಾಳಬಾರದು. ಹೊಳೆಯುವ ಬಟ್ಟೆ ಧರಿಸಬಾರದು, ಸದಾ ಕಾವಿ ತೊಡಿರೆಂದು ಹಾನಗಲ್ಲ ಕುಮಾರೇಶ್ವರರು ಬೋಧಿಸಿದರು. ಇನ್ನೂ ಮಂದಿರಕ್ಕೆ ಬರುವಂತಹ ಬಾಲ ವಟುಗಳಿಗೂ ಅಲ್ಲಿಯೇ ಕಲಿಯುವಂತ ಸಾಧಕರಿಗೂ ಸಮಾನವಾದ ಕೆಲವೊಂದು ಸಾಮಾನ್ಯ ನಿಯಮಗಳನ್ನು ಪಠ್ಯೇತರ ಅಂಶದೊಂದಿಗೆ ರೂಪಿಸಲಾಗಿದೆ. ಅವುಗಳು ಇಂತಿವೆ.[೩೪]

೧. ಶಿವಯೋಗ ಮಂದರಿದ ವಟು-ಸಾಧಕರರಾದ ಬಳಿಕ ಅಲ್ಲಿಯ ನಿಯಮಗಳನ್ನು ಆಚಾರಗಳನ್ನು ತಪ್ಪದೆ ನಡೆಸುವುದು.

೨. ಅನಾರೋಗ್ಯವಾದ ಸಮಯದಲ್ಲಿ ಕಾರ್ಯದರ್ಶಿ ಸಾಧಕರಿಗೆ ತಿಳಿಸಿ ಅನುಮತಿ ಪಡೆದು ವಿಶ್ರಾಂತಿ ಉಪಚಾರ ಹೊಂದುವುದು.

೩. ಪಾಠ ಶಾಲೆಯ ಅವಧಿಯಲ್ಲಿ ಎಲ್ಲರೂ ತಪ್ಪದೆ ಇರಬೇಕು. ಅಧ್ಯಯನವನ್ನು ಮನಮುಟ್ಟಿ ಮಾಡುವುದು.

೪. ಯೋಗಾಸನ ಪ್ರಾರಂಭವಾಗುವ ಮುನ್ನ ಗುರುಧ್ಯಾನ ಮಾಡಿ ಸಂಸ್ಥೆಯ ಗೀತೆಯನ್ನು ಹೇಳುವುದು.

೫. ಪಾಠ ಶಾಲೆಯಲ್ಲಿ ಶಿಸ್ತಿನಿಂದ ಸ್ವಚ್ಛತೆಯಿಂದ ಕುಳಿತುಕೊಳ್ಳಬೇಕು. ಅಧ್ಯಾಪಕರ ಅಪ್ಪಣೆಯನ್ನು ಪಾಲಿಸಬೇಕು.

೬. ಯಾರಾದರೂ ಪೂಜ್ಯ ಶ್ರೀಗಳು ಆಗಮಿಸಿದಾಗ ಎದ್ದು ನಿಲ್ಲಬೇಕು ದೀರ್ಘದಂಡ ಪ್ರಣಾಮ ಮಾಡುವುದು. ಅವರು ಹೇಳುವವರೆಗೆ ಕೂಡಬಾರದು.

೭. ವಟು-ಸಾಧಕರು ಏಕವಚನದಿಂದ ಮಾತನಾಡಬಾರದು. ಅವಾಚ್ಯ ನುಡಿಗಳನ್ನು ಎಂದೂ ಆಡಬಾರದು ದೈನಂದಿನ ಕಾರ್ಯಕ್ರಮದಲ್ಲಿ ತಪ್ಪಿದರೆ ಶಿಕ್ಷಕರು ಅಥವಾ ಕಾರ್ಯದರ್ಶಿಯವರು ವಿಧಿಸಿದ ಶಿಕ್ಷೆಯನ್ನು ಪಾಲಿಸಬೇಕು.

೮. ನಿಯಮಿತ ಪರೀಕ್ಷೆ ಚರ್ಚಾಕೂಟ ಮುಂತಾದವುಗಳಿಗೆ ತಪ್ಪಿಸಬಾರದು ಸದಾಚರಣೆ ಸದ್ಗುಣಗಳ ಕಡೆಗೆ ಲಕ್ಷ್ಯವಿಡಬೇಕು.

೯. ಅನಾವಶ್ಯಕವಾಗಿ ಯಾರೂ ಹಣವನ್ನು ಇಟ್ಟುಕೊಳ್ಳಬಾರದು. ಸಂಸ್ಥೆಯ ಲೆಕ್ಕದಲ್ಲಿ ಜಮಾ ಬರೆಯಿಸಿ ಸಂಚಾಲಕರ ಅನುಮತಿಯಿಂದ ಪಡೆಯಬಹುದು.

೧೦. ಒಬ್ಬರಿಗೊಬ್ಬರು ಅತಿ ಸಮೀಪದಲ್ಲಿ ಮಲಗಬಾರದು ಜಿತೇಂದ್ರಯತ್ವವನ್ನು ಸದಾ ಬೆಳಗಿಸಿಕೊಳ್ಳಬೇಕು. ಬ್ರಹ್ಮಚರ್ಯ ಪಾಲನೆ ಮುಖ್ಯ ಗುರಿಯಾಗಿರಬೇಕು.

೧೧. ಸಂಸ್ಥೆಯು ಪ್ರಕೃತಿ ಮಧ್ಯದಲ್ಲಿರುವುದರಿಂದ ನಿಸರ್ಗವನ್ನು ಪ್ರೀತಿಸಬೇಕು ಗಿಡ-ಮರಗಳನ್ನು ಬೆಳೆಸಬೇಕು.

೧೨. ಶಿವಯೋಗ ಮಂದಿರವು ನನ್ನದೆಂಬ ಭಾವನೆಯನ್ನು ಬೆಳಸಿಕೊಳ್ಳಬೇಕು.

ಬಿಡುವಿನ ದಿನಗಳು: ಕಾಶಿಯಲ್ಲಿ ಚತುರ್ದಶಿ ಮತ್ತು ಪ್ರತಿಪದೆಯಂದು ಸಂಸ್ಕೃತ ಪಾಠಗಳನ್ನು ಮಾಡುವುದಿಲ್ಲ. ಅದರಂತೆ ಶಿವಯೋಗ ಮಂದಿರದಲ್ಲಿಯೂ ಪಕ್ಷಕ್ಕೆ ಮೂರು ದಿನಗಳು ಅಂದರೆ ಚತುರ್ದಶಿ, ಹುಣ್ಣಿಮೆ ಅಥವಾ ಅಮವಾಸ್ಯೆ ಹಾಗೂ ಪ್ರತಿಪದ ಈ ದಿನಗಳಲ್ಲಿ ಬಿಡುವು ದೊರೆಯುತ್ತದೆ. ಇವಲ್ಲದೆ ಸಂಸ್ಥೆಯ ವರ್ಧಂತಿ ಮತ್ತು ಪೂಜ್ಯರ ಪುಣ್ಯಾರಾಧನೆಯ ದಿನಗಳನ್ನು ರಜಾ ದಿನಗಳೆಂದು ಪರಿಗಣಿಸಲಾಗುವುದು.

೧. ಸಂಸ್ಥೆಯ ಸ್ಥಳವನ್ನು ತೋರಿಸಿದ ಪೂಜ್ಯ ಇಲಕಲ್ಲ ಶ್ರೀ ವಿಜಯ ಮಹಾಂತ ಶಿವಯೋಗಿಗಳ ಪುಣ್ಯತಿಥಿ ಕಾರ್ತಿಕ ಶುದ್ಧ ಪಂಚಮಿ

೨. ಸಂಸ್ಥೆಯ ಸಂಸ್ಥಾಪಕ ಗುರುವಾದ ಬಿದರಿ ಶ್ರೀಕುಮಾರಸ್ವಾಮಿಗಳು ಮತ್ತು ಎಳಂದೂರು ಶ್ರೀ ಬಸವಲಿಂಗ ಮಹಾಸ್ವಾಮಿಗಳವರ ಪುಣ್ಯದಿನ ಪುಷ್ಯ ಶುದ್ಧ ಪಂಚಮಿ.

೩. ಸಂಸ್ಥೆಗೆ ಅಪಾರ ಸೇವೆಗೈದ ಹಾವೇರಿಯ ಶ್ರೀ ಶಿವಬಸವ ಮಹಾಸ್ವಾಮಿಗಳ ಪುಣ್ಯ ತಿಥಿ ಪುಷ್ಯ ಶುದ್ಧ ಏಕಾದಶಿ

೪. ಶಿವಯೋಗ ಮಂದಿರದ ವರ್ಧಂತಿ ಮಾಘ ಶುದ್ಧ ರಥಸಪ್ತಮಿ

೫. ಸಂಸ್ಥೆಯ ಸಂಸ್ಥಾಪಕರಾದ ಪೂಜ್ಯ ಹಾನಗಲ್ಲ ಶ್ರೀ ಕುಮಾರಮಹಾಸ್ವಾಮಿಗಳ ಪುಣ್ಯ ತಿಥಿ ಮಾಘ ಬಹುಳ ಸಪ್ತಮಿ. ಇವೆಲ್ಲ ದಿನಗಳು ವಟು-ಸಾಧಕರಿಗೆ ಪುಣ್ಯಸ್ಮರಣೆಯ ದಿನಗಳು.

೬. ಇವಲ್ಲದೆ ಕೆಲವು ರಾಷ್ಟ್ರೀಯ ಹಬ್ಬಗಳನ್ನು ಸಹ ಆಚರಿಸಲಾಗುತ್ತದೆ.

೭. ಶಿವರಾತ್ರಿ ಜಾತ್ರೆಯ ಕಾಲಕ್ಕೆ ಎರಡು ವಾರ ರಜೆ ಕೊಡಲಾಗುತ್ತದೆ.

ಹೀಗೆ ವಿಶೇಷ ದಿನಗಳಲ್ಲಿ ಸಭೆಗಳನ್ನು ಏರ್ಪಡಿಸಿ ದಿನಗಳ ಮಹತ್ವವನ್ನು ತಿಳಿಸಿಕೊಡಲಾಗುವುದು ಹಾಗೂ ಮೇ ತಿಂಗಳಿನಲ್ಲಿ ದೀರ್ಘವಾದ ಬೇಸಿಗೆ ರಜೆಗೆ ಅವಕಾಶವಿರುತ್ತದೆ.[೨೫]

ಹೀಗೆ ಶಿವಯೋಗ ಮಂದಿರದ ಶಿಕ್ಷಣ ತರಬೇತಿಯು ಕೇವಲ ಓದು-ಬರಹ ಪೂಜೆಪುನಸ್ಕಾರಗಳಿಗೆ ಮೀಸಲಾಗಿರದೆ, ಕಾಯಕ ಪದ್ಧತಿಗೂ ಒತ್ತು ಕೊಡಲಾಗುತ್ತಿದೆ. ಇಲ್ಲಿನ

ಶಿವಯೋಗಿಗಳು ಉತ್ತಮ ಪ್ರವಚನಕಾರರು, ವಾಗ್ಮಿಗಳು ಆಗಿ ಶಿವಾನುಭವದ ಬಗೆಗೆ ಸದಾ ಚರ್ಚಿಸುತ್ತಾರೆ. ಗುರು-ಶಿಷ್ಯ ಸಂವಾದದಿಂದ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಜ್ಞಾನ ಉಂಟಾಗುತ್ತಿದ್ದು ತಮಗನಿಸಿದ ಶಿವಾನಭವವನ್ನು ಬರೆಯುತ್ತಾ, ಪುರಾಣಗಳ ಅರ್ಥವಿವರಣೆ ನೀಡುವ ಕಲೆಯನ್ನು ಕಲಿತು-ಕಲಿಸುತ್ತಾ, ತೋಟಗಳ ಆರೈಕೆ-ಹವ್ಯಾಸ ಕಾಯಕದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾ. ಶಾರೀರಿಕ ಶ್ರಮವಹಿಸಿ ಶಿವಯೋಗ ಮಂದಿರದಲ್ಲಿ ಹಣ್ಣಿನ, ಅಂದದ ಗಿಡಮರ ಬೆಳೆಸುವುದು ಮೊದಲಿನಿಂದಲೂ ರೂಢಿ ಮಾಡಿಸಲಾಗುತ್ತಿದೆ. ವಾರವಾರವೂ ಚರ್ಚಾ ಕೂಟವನ್ನು ಏರ್ಪಡಿಸಿ ಸಾಧಕರಿಗೆ ಭಾಷಣಕಲೆಯನ್ನು ಹೇಳಿಕೊಡುವುದು, ನಿಬಂಧ ಬರೆಯುವುದು, ಅತಿಥಿ ಅಭ್ಯಾಗತರನ್ನ ಆದರದಿಂದ ಕರೆತಂದು ಸ್ನಾನ ಪೂಜೆ ಪ್ರಸಾದ ವಿಶ್ರಾಂತಿ ಇತ್ಯಾದಿ ವ್ಯವಸ್ಥೆಗಳನ್ನು ನಿರ್ವಹಿಸುವುದು. ವಟು-ಸಾಧಕರಲ್ಲೆ ಯಾರಾದರೂ ಬೇನೆಗೊಳಗಾಗಿ ಹಾಸಿಗೆ ಹಿಡಿದರೆ ಅವರಿಗೆ ಯೋಗ್ಯ ಆರೈಕೆ ಮಾಡುವುದು. ಒಟ್ಟಿನಲ್ಲಿ ವೇಳೆಯನ್ನು ಸಾಗಿಸುವಲ್ಲಿ ಇರುವ ಪಠ್ಯೇತರ ಚಟುವಟಿಕೆ ಕೂಡ ಇಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಎಂಬುದನ್ನು ಈ ಮೇಲಿನ ಅಂಶಗಳಿಂದ ತಿಳಿಯಬಹುದಾಗಿದೆ.

ಅಡಿಟಿಪ್ಪಣಿಗಳು

೧. ಶಿವಯೋಗಮಂದಿರ ನಿಯಾಮವಳಿಗಳು - ಪು.ಸಂ-೧

೨. ಶಿವಯೋಗಮಂದಿರ ನಿಯಾಮವಳಿಗಳು - ಪು.ಸಂ-೧೬

೩. ಶ್ರೀ ಮದ್ವೀರಶೈವ ಶಿವಯೋಗಮಂದಿರ ಸಂಸ್ಥೆಯ ಅಭ್ಯಾಸ ಪತ್ರಿಕೆ ಪು.ಸಂ-೧೯

೪. ಶಿವಯೋಗಮಂದಿರ ನಿಯಮಗಳು ಪು.ಸಂ-೧೦

೫. ಲಿಂಗಾಯತರ ಆಧುನಿಕ ಸಂದರ್ಭ ಪು.ಸಂ-೭೨

೬. ಕಾರಣಿಕ ಕುಮಾರಯೋಗಿ ಪು.ಸಂ-೨೬

೭. ಶಿವಯೋಗಮಂದಿರ ಶತ ಸಂವತ್ಸರ ಪು.ಸಂ-೪೬

೮. ಶಿವಯೋಗಮಂದಿರ ನಿಯಮಗಳು ಪು.ಸಂ-೨೧

೯. ಶಿವಯೋಗಮಂದಿರ ರಿಪೋರ್ಟ್-೧೯೩೧

೧೦. ಶಿವಯೋಗಮಂದಿರ ವಾರ್ಷಿಕ ವರದಿ ಪು.ಸಂ-೧೧

೧೧. ಶಿವಯೋಗಮಂದಿರ ಶತ ಸಂವತ್ಸರ, ಪು.ಸಂ-೨೨೦

೧೨. ಬೆಳಗು ಪು.ಸಂ-೨೩೯

೧೩. ಸಂದರ್ಶನ ದಿನಾಂಕ-೧೧.೧೨.೨೦೧೦

೧೪. ಶ್ರೀ ಮ. ಶಿ. ಮಂ. ಸಂ. ಅಭ್ಯಾಸ ಪತ್ರಿಕೆ ಪು.ಸಂ-೨೧

೧೫. ಸಂದರ್ಶನ, ದಿನಾಂಕ ೧೧.೧೨.೨೦೧೦

೧೬. ಬೆಳಗು ಪು.ಸಂ-೨೫೯

೧೭. ಸಂದರ್ಶನ, ದಿನಾಂಕ ೨೬.೦೫.೨೦೧೦

೧೮. ಬೆಳಗು ಪು.ಸಂ-೩೬೫

೧೯. ಬೆಳಗು, ಪು.ಸಂ-೩೬೦

೨೦. ಸಂದರ್ಶನ, ದಿನಾಂಕ ೧೨.೧೦.೨೦೧೦ ಶ್ರೀಶೈಲ ಶಿಕ್ಷಕರಿಂದ

೨೧. ಪ್ರಗತಿಶೀಲ ಭಾರತದಲ್ಲಿ ಶಿಕ್ಷಣ - ಪು.ಸಂ. ೮೨

೨೨. ಬೆಳಗು ಪು.ಸಂ-೨೩೬

೨೩. ಅದೇ ಪು.ಸಂ-೨೩೭

೨೪. ಶಿವಯೋಗಮಂದಿರ ಶತ ಸಂವತ್ಸರ ಪು.ಸಂ-೧೩೮

೨೫. ಸುಕುಮಾರ-೧೯೯೯, ಪು.ಸಂ-೧೧

೨೬. ಶಿವಯೋಗಮಂದಿರ ವರದಿಗಳು, ಪು.ಸಂ-೧೧

೨೭. ಸುಕುಮಾರ ದೀಪ್ತಿ, ಪು.ಸಂ-೩೮

೨೮. ಬೆಳಗು ಪು.ಸಂ-೧೦೪

೨೯. ಸಂದರ್ಶನ ಹಾವೇರಿ, ಹುಕ್ಕೇರಿ ಮಠದಲ್ಲಿ ಶಿವಲಿಂಗಶಾಸ್ತ್ರಿ ಹಿರೇಮಠ ೧೯.೦೧.೨೦೧೧

೩೦. ಸನ್ನಿಧಾನ, ಪು.ಸಂ-೪೪

೩೧. ಕಾರಣಿಕ ಯುಗಪುರುಷ ಚ.ಜ.ನಿ. ಪು.ಸಂ-೧೧೭

೩೨. ಪರಂಪರೆಗೆ ಹೊಸ ಮುನ್ನುಡಿ, ಪು.ಸಂ. ೧೫೯

೩೩. ಅದೇ ಪು.ಸಂ-೧೬೫

೩೪. ಶ್ರೀ ಮದ್ವೀರಶೈವ ಶಿವಯೋಗಮಂದಿರ ಸಂಸ್ಥೆಯ ಅಭ್ಯಾಸ ಪತ್ರಿಕೆ-೨೯

೩೫. ಅದೇ ಪು.ಸಂ-೩೧

೩೬. ಅದೇ ಪು.ಸಂ-೪೦

ಅಧ್ಯಾಯ - ಐದು

ಶಿವಯೋಗಮಂದಿರ : ವೃತ್ತಿನಿರತ ಗುಡಿಕೈಗಾರಿಕೆ

೧. ಭೌತಿಕ ವೃತ್ತಿಗಳು
೨. ಬೌದ್ಧಿಕ ವೃತ್ತಿಗಳು

ಅಧ್ಯಾಯ – ಐದು

ಶಿವಯೋಗಮಂದಿರ : ವೃತ್ತಿನಿರತ ಗುಡಿಕೈಗಾರಿಕೆ

ಸ್ವಾತಂತ್ರ್ಯ ಸಿಕ್ಕು ಸುಮಾರು ಆರವತ್ತು ವರ್ಷಗಳಾದರೂ ನಮ್ಮ ಪ್ರಗತಿ ಏಕೆ ಕುಂಠಿತವಾಗಿದೆ? ವಿಶಾಲ ಮನೋಭಾವ, ರಾಷ್ಟ್ರೀಯ ದೃಷ್ಟಿ, ನೀತಿಯುಕ್ತ ನಿಲುಮೆ, ಸದ್ಗುಣಶೀಲತೆ, ಸ್ವಾಭಿಮಾನ, ಪ್ರಾಮಾಣಿಕ ಮತ್ತು ನಿಷ್ಕಪಟಭಾವ, ಸತ್ಯಸಂಧತೆ ಮತ್ತು ರಾಷ್ಟ್ರೀಯ ಶಿಸ್ತು ಮೊದಲಾದ ಗುಣಗಳು ಪ್ರತಿಯೊಬ್ಬ ರಾಷ್ಟ್ರೀಯನಲ್ಲಿಯೂ ಇರಬೇಕಾದುದು. ಈ ಯೋಗ್ಯತೆಗಳ ಅಭಾವವೇ ನಮ್ಮ ಪ್ರಗತಿಗೆ ಮಾರಕವಾಗಿದೆ. ಈ ಸದ್ಗುಣ, ಸಮಷ್ಟಿಯ ಸುಚಾರಿತ್ರ್ಯ ಗುಣಗಳನ್ನು ನಾವು ನಿತ್ಯ ಜೀವನದ ಪ್ರತಿಗಳಿಗೆಯಲ್ಲಿಯೂ ಬೆಳೆಸಿಕೊಳ್ಳದಿದ್ದರೆ ನಮ್ಮ ರಾಷ್ಟ್ರದ ಭವಿಷ್ಯ ಅಧೋಗತಿಗಿಳಿದೀತು. ಗಳಿಸಿಕೊಂಡಿರುವ ಸ್ವಾತಂತ್ರ್ಯವನ್ನು ಮತ್ತೇ ಕಳೆದುಕೊಂಡೆವು. ನಾವು ಬಹು ಎಚ್ಚರದಿಂದ ಜೀವನ ಮಾಡಬೇಕಾಗಿದೆ. ಇಂಥ ಚಾರಿತ್ರ್ಯವನ್ನು ಹೊಂದಿರುವ ಪ್ರಜೆಗಳೇ ರಾಷ್ಟ್ರದ ನಿಜವಾದ ಸಂಪತ್ತು–ಶಕ್ತಿ. "ಕಾಯಕವೇ ಕೈಲಾಸ"ವೆಂದು ಬರಿಯ ವೇದಾಂತ ಹೇಳದೆ ಪ್ರಾಮಾಣಿಕವಾಗಿ ದುಡಿಯುವ ನಾಗರೀಕರಿರುವ ರಾಷ್ಟ್ರ ಪ್ರಗತಿ ಹೊಂದುವಲ್ಲಿ ಎಳ್ಳನಿತು ಸಂದೇಹವಿಲ್ಲ. ದೇಶದ ಸಂಪನ್ಮೂಲಗಳು ಎಷ್ಟೇ ಘನವಾಗಿರಲಿ, ಜನ ಹೀನವಾಗಿದ್ದರೆ ಆಯಿತು. ದೇಶ ಸರ್ವನಾಶಕ್ಕೆ ಗುರಿಯಾಗುತ್ತದೆ. ಜಪಾನ, ಜರ್ಮನಿ ಮುಂತಾದ ರಾಷ್ಟ್ರಗಳು ಎರಡನೇ ಮಹಾಯುದ್ಧದ ದವಡೆಯಲ್ಲಿ ಸಿಕ್ಕು ನೆಲಸಮವಾಗಿ ಹೋಗಿದ್ದವು. ಆದರೆ ಅಲ್ಲಿಯ ನೀತಿವಂತ, ಶಕ್ತಿವಂತ ಮತ್ತು ಸತ್ವಶಾಲಿಗಳಾದ ಜನರು ದುಡಿದು ತಮ್ಮ ರಾಷ್ಟ್ರಗಳನ್ನು ಮೊದಲಿಕ್ಕಿಂತಲೂ ಹೆಚ್ಚು ಬಲವಾದ ಮತ್ತು ವೈಭವಶಾಲಿಯಾಗಿ ಉಳಿಯುವಂತೆ ಮಾಡಿದ್ದಾರೆ.

ಅಷ್ಟೆ ಅಲ್ಲ ತಮ್ಮ ಸತತ ಉದ್ಯಮದಿಂದ ಉತ್ಪಾದಿಸಿದ ಶ್ರೇಷ್ಠ ದರ್ಜೆಯ ವಸ್ತುಗಳನ್ನು ಇಡಿಯ ಜಗತ್ತಿಗೆ ಪೂರೈಸುತ್ತಾರೆ. ಅದಕ್ಕೆ ಕಾರಣವೇನು? ಆ ರಾಷ್ಟ್ರಗಳ ಪ್ರಜೆಗಳು ಬುದ್ಧಿವಂತರಾಗಿ, ತ್ಯಾಗಿಗಳಾಗಿ ರಾಷ್ಟ್ರೀಯ ಭಾವೈಕ್ಯದಿಂದ ಜಾಗೃತರಾಗಿ ತಮ್ಮ ತಾಯ್ನಾಡಿನ ಅಭ್ಯುದಯಕ್ಕೆ ಕಂಕಣ ಕಟ್ಟಿ ನಿಂತಿರುವುದು. ನಮ್ಮ ದೇಶದಲ್ಲಿ ಅಂಥ ಉತ್ತಮ ನಾಗರಿಕರು ಎಷ್ಟು ಜನರಿದ್ದೇವೆ.

೨೧ನೇ ಶತಮಾನದಲ್ಲಿ ಶ್ರೀ ಕುಮಾರರು ಸ್ಥಾಪಿಸಿದ ಗುಡಿಕೈಗಾರಿಕಾ ಸಾಲಿಗೆ ಅಪ್ಪಟ ಆರ್ಥಿಕ ಸ್ವಾವಲಂಬನೆ ಇದೆ. ನಿರಂತರ ಉದ್ಯೋಗದ ಪರಿಕಲ್ಪನೆ ಹಾಗೂ ಶಿವಯೋಗ ಮಂದಿರದ ಆರ್ಥಿಕ ಬಲ ಹೆಚ್ಚಿಸುವುದು, ಸಮಾಜ ಸುಧಾರಣೆಗೆ ದೀನ, ದುರ್ಬಲರ ಏಳಿಗೆ, ರಾಷ್ಟ್ರದ ಅಭಿವೃದ್ಧಿಗೊಳಿಸುವುದು. ಗಾಂಧೀಜಿಯವರ ಮೂಲ ಶಿಕ್ಷಣದ ಪರಿಕಲ್ಪನೆಯನ್ನು ಶಿವಯೋಗ ಮಂದಿರ ಸ್ಥಾಪನಾ ಕಾಲಕ್ಕೆ ಜಾರಿಗೆ ತಂದರು. ವಿದ್ಯಾರ್ಥಿಗಳು ಸ್ವಯಂ ಚಟುವಟಿಕೆಯಿಂದ ಸ್ವಾಭಾವಿಕ ಸನ್ನಿವೇಶದಲ್ಲಿ ಕಸುಬಿನೊಂದಿಗೆ ಶಿಕ್ಷಣವನ್ನು ಪಡೆಯಬೇಕೆಂದು ತಮ್ಮ ಗುರುಗಳಾದ ಎಳಂದೂರು ಶ್ರೀಗಳಿಂದ ಕಲಿತ ಪಾಠವನ್ನೇ ಮುಂದುವರಿಸಿಕೊಂಡು ವಟುಗಳಲ್ಲಿ ಅದನ್ನು ರೂಢಿಸಿದರು. ಕರ, ಉರ, ಶಿರಗಳನ್ನು ಸಂಸ್ಕರಿಸಲು ಹೆಚ್ಚು ಮಹತ್ವ ಕೊಡಲಾಯಿತು. ಅದರ ಫಲವಾಗಿ ಇಂದು ನೂರಾರು ಭೌತಿಕ, ಬೌದ್ಧಿಕ ವೃತ್ತಿ ಶಿಕ್ಷಣ ತರಬೇತಿ ಕೇಂದ್ರಗಳು, ಸಂಸ್ಥೆಗಳು ಎಲ್ಲೆಡೆ ಕಾಣುವಂತಾಗಿದೆ.

'ಹನಿಹನಿಗೂಡಿದರೆ ಹಳ್ಳ, ತೆನಿತೆನಿ ಸೇರಿದರೆ ರಾಶಿ' ಎನ್ನುವ ಮಾತಿನಂತೆ ತಮ್ಮ ಕನಸುಗಳ ಸಹಕಾರಕ್ಕಾಗಿ ಆರ್ಥಿಕ ಪ್ರಾಬಲ್ಯ ಹೊಂದಲು ನಿರಂತರ ಪ್ರಯತ್ನಗಳನ್ನು ನಡೆಸಿದರು. ಆರ್ಥಿಕ ಸಬಲೀಕರಣಕ್ಕಾಗಿ ಕೆಲವು ಯೋಜನೆ ರೂಪಿಸಲಾಯಿತು. ಅದೇ ಗುಡಿಕೈಗಾರಿಕಾ ಸಾಲಿಯ ಸ್ಥಾಪನೆ. ಇದರಿಂದ ಸ್ಥಳೀಯರಿಗೂ ಉದ್ಯೋಗ ದೊರೆತು ಜೀವನ ನಿರ್ವಾಹಣೆಯಲ್ಲಿ ಸುಧಾರಣೆಗಳಾಗಿ, ಸಮಾಜದ ಪ್ರಗತಿ ಸಾಧಿಸುವ ಆಲೋಚನೆ ಇತ್ತು. ಸಮಾಜದ ಪ್ರಗತಿಯಿಂದ ದೇಶದ ಅಭಿವೃದ್ಧಿ ಸಾಧ್ಯ ಎಂಬುದನ್ನು ತೋರಿಸಲು ಆಗಿನ ಕಾಲಕ್ಕೆ ಗುಡಿಕೈಗಾರಿಕಾ ಸಾಲಿಗಳನ್ನು ಸ್ಥಾಪಿಸಿದರು.

'ನಾನೊಬ್ಬ ಸಮಾಜ ಸೇವಕ'ನೆಂಬ ನುಡಿ ಆಡದೆ ಸ್ಪಷ್ಟವಾಗಿ ಆಗಿದ್ದಾಗೆ ಮಾಡಿ ತೋರಿಸುತ್ತಿದ್ದರು. ಒಬ್ಬ ಸಾಮಾನ್ಯ ಪುರುಷನಾಗಿ ಸಮುದಾಯದಲ್ಲಿ ದಿನ ಬೆರೆತು ಸಮಾಜ ಸೇವೆಯ ಕಾರ್ಯಗಳಲ್ಲಿ ತಲ್ಲಿನರಾದರು. ಕಾರ್ಯಭರದಲ್ಲಿ ಆಹಾರ ನಿದ್ರೆ, ಹಸಿವೆ, ನೀರಡಿಕೆಗಳೂ ಗೊತ್ತಿಲ್ಲದೆ ಒಮ್ಮೊಮ್ಮೆ ದೇಹ ಭಾರವನ್ನು ಕೂಡ ತೊರೆದು ಬಿಡುತ್ತಿದ್ದರು. ಇದೇ ಮೇರೆಗೆ ಶ್ರೀಗಳವರು ೪೦-೪೫ ವರ್ಷಗಳವರೆಗೆ ಒಂದೇ ಸಮನೆ ತಮ್ಮ ಸರ್ವಶಕ್ತಿಗಳನ್ನೆಲ್ಲ ಧಾರೆ ಎರೆದರು.

ಅಂದಿನ ಕಾಲಕ್ಕೆ ಸಮಾಜದಲ್ಲಿ ಶಿಕ್ಷಣ, ಧರ್ಮಜ್ಞಾನಗಳೇಲ್ಲ, ಮಾಯವಾಗಿ, ಮಠಗಳು, ಮಠಾಧಿಪತಿಗಳು ತಾವು ಯಾರು, ತಮ್ಮ ಕರ್ತವ್ಯಗಳೇನು ಎಂಬುದರ ಅರಿವು ಸಹ ಇರಲಿಲ್ಲ. ಭಕ್ತವರ್ಗವಂತೂ ಅಜ್ಞಾನಾಂಧಕಾರದಲ್ಲಿ ಮುಳುಗಿ ಹೋಗಿತ್ತು. ಲೌಕಿಕ, ಧಾರ್ಮಿಕ, ಔದ್ಯೋಗಿಕ ವ್ಯವಹಾರಗಳಲ್ಲಿ ಪರಮತದವರ ವಶವಾಗಿ, ಅಸ್ಥಿರವಾದ ಜೀವನಕ್ರಮ, ಅಪ್ರಯೋಜಕ ಕಾಯಕದ ಅಯ್ಯನವರು ತುಂಬಿ ಹೋಗಿದ್ದರು. ಶ್ರೀಗಳ ಪ್ರಯತ್ನದ ಫಲವಾಗಿ ಈ ಕಾಯಕದಯ್ಯನ ಕೌಶಲ್ಯದಿಂದ ಒಕ್ಕಲುತನ, ವ್ಯಾಪಾರ, ವ್ಯವಹಾರಿಕ ಕ್ಷೇತ್ರದಲ್ಲಿಯೂ ಸಂಪದಾಭಿವೃದ್ಧಿಯಾಗಿ ಮುಂದಿದ್ದ ಸಮಾಜಕ್ಕೆ ಆಲದಮರದಂತೆ ಆಶ್ರಯದಾತನಾಗಿದ್ದರು.

ಹಾನಗಲ್ಲ ಶ್ರೀಗಳು ಪುರಾತನರಿಗೆ ಪುರಾತನರು, ಆಧುನಿಕರಿಗೆ ಆಧುನಿಕರಾಗಿಯೂ ಸಮಾಜದ ಸರ್ವಾಂಗೀಣ ಪ್ರಗತಿಗಾಗಿ ಶ್ರಮಿಸಿದರು. ದೇಶಿಯ ಸಂಪನ್ಮೂಲವನ್ನು ಬಂಡವಾಳವಾಗಿ ಬಳಸಿಕೊಂಡು ಗುಡಿಕೈಗಾರಿಕೆಗಳನ್ನು ಪುನರ್ ಸ್ಥಾಪಿಸಲು ಯತ್ನಿಸಿದರು. ಔದ್ಯೋಗಿಕರಣದ ಸವಾಲುಗಳಿಗೆ ಯೋಜನಾಬದ್ಧವಾದ ಕ್ರಿಯಾಯೋಜನೆಯಿಂದ, ನಿಷ್ಠೆಯಿಂದ ಕೂಡಿದ ಕಾಯಕದಿಂದ ಪ್ರಗತಿ ಸಾಧ್ಯವೆಂದು ಸಾಧಿಸಲು ಯತ್ನಿಸಿದರು. ಭೌತಿಕ ಅಂಶಗಳಿಂದ ಮಾತ್ರ ಉದ್ಯೋಗ ಸೃಷ್ಟಿಯಾಗದು, ಬೌದ್ಧಿಕ ವೃತ್ತಿಗಳಿಂದಲೂ ಉದ್ಯೋಗ, ಸಂಪತ್ತು ಗಳಿಸಬಹುದೆಂಬುದನ್ನು ತೋರಿಸಿದರು.

ಹಣದ ಸಂಪಾದನೆಯಿಂದ ಎಲ್ಲವನ್ನು ಕಾಣಲು ಸಾಧ್ಯವಿಲ್ಲ. ಹಾಗಂತ ಹಣವಿಲ್ಲದೆ ಏನನ್ನೂ ಸಾಧಿಸಲು ಆಗದು ಎಂಬುದನ್ನು ಮನಗಂಡವರು ಪೂಜ್ಯರು. ಹಾಗಾಗಿ ಸಂಪತ್ತಿನ ಮೂಲವಾಗಿ, ಉದ್ಯೋಗದ ಸೃಷ್ಟಿಗಾಗಿ, ಸ್ವಾವಲಂಬನೆಯ ಬದುಕಿಗಾಗಿ ಹಾನಗಲ್ಲ ಪೂಜ್ಯರು ಎರಡು ರೀತಿಯ ವೃತ್ತಿಗಳನ್ನು ಸೃಷ್ಟಿಸಿದಂತೆ ತೋರುತ್ತದೆ. ಅವುಗಳು ಇಂತಿವೆ.

೧. ಭೌತಿಕ ವೃತ್ತಿ : ಇಲ್ಲಿ ಮುಖ್ಯವಾಗಿ ವಿಭೂತಿಗಳ ತಯಾರಿಕೆ, ಜಿನ್ನಿಂಗ್ ಫ್ಯಾಕ್ಟರಿ, ಚಿತ್ರಕಲಾಮಂದಿರ, ಕೃಷಿ, ಪಶುಸಂಗೋಪನೆ, ಬ್ಯಾಂಕ್, ಸಹಕಾರಿ ಸಂಘಗಳು, ಮಾರಾಟ ಮಳಿಗೆಗಳು, ಕರಡಿಕೆ, ಶಿವದಾರ, ಲಿಂಗಗಳ ಸಿದ್ಧತೆ ಹೀಗೆ ಹಲವಾರು ರೀತಿಯ ಅಂಶಗಳನ್ನು ಕಾಣಬಹುದಾಗಿದೆ.

೨. ಬೌದ್ಧಿಕ ವೃತ್ತಿ : ಇಲ್ಲಿ ಮಾನವನ ಪ್ರವೃತ್ತಿಗಳಿಗೆ ಕಲಿಕೆಯ ಸ್ವರೂಪ ನೀಡಿದರು. ಆ ಮೂಲಕ ಬುದ್ಧಿವಂತಿಕೆಯನ್ನು ಒಂದು ವೃತ್ತಿಯಾಗಿ ರೂಪಿಸಿದರು. ಕೀರ್ತನಾಕಾರರು, ಸಂಗೀತಕಾರರು, ನಾಟಕಕಾರರು, ಸಂಶೋಧಕರು ಹೀಗೆ ಬೌದ್ಧಿಕ ವೃತ್ತಿಗಳು ಕೂಡ ಸಂಪಾದನೆಗೆ ಮಾರ್ಗಗಳಾದವು. ಬದುಕಿನ ನಿರ್ವಾಹಣೆಯಲ್ಲಿ ಉದ್ಯೋಗದ ರೂಪವನ್ನು ಪಡೆದವು.

'ಎಲ್ಲ ವಿದ್ಯೆಗಳಿಗೂ ಮೂಲ 'ಮೇಟಿ ವಿದ್ಯೆ' ಎಂಬುದನ್ನು ಸಾಬಿತುಗೊಳಿಸಿದರು. "ಕೃಷಿ ವಿಜ್ಞಾನ ಕನ್ನಡ ನಾಡಿಗೆ ಬಂದ ಮೊದಲಿನಲ್ಲಿಯೇ ಅದನ್ನು ಬಳಸಿಕೊಂಡ ಹೊಸ ದೃಷ್ಟಿ

ಅವರದ್ದು.”[೫೦] ಯಂತ್ರಗಳ ಬಳಿಕೆ, ಕೃಷಿ ಉತ್ಪನ್ನದ ಸದುಪಯೋಗಕ್ಕೆ ಮೂಲ. ಸರ್ವಕಾಲಕ್ಕೂ ದೊರಕುವಂತಾಗಬೇಕೆಂಬ ದೂರದೃಷ್ಟಿ ಭವಿಷ್ಯದಲ್ಲಿ ಆರ್ಥಿಕ ಪ್ರಾಬಲ್ಯದಲ್ಲಿ ಸಂಸ್ಥೆಯ ಕನಸುಗಳು ಬಲಗೊಳ್ಳಲು ಅವರು ಹಾಕಿಕೊಟ್ಟ ಯೋಜನೆ, ನೀಡಿದ ಮಾರ್ಗದರ್ಶನ ನಿಜಕ್ಕೂ ಅಪೇಕ್ಷಣೀಯವಾದುದು.

ಶಿವಯೋಗ ಮಂದಿರದಲ್ಲಿ ನಿರಂತರ ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಆ ಮೂಲಕ ಗುಡಿ ಕೈಗಾರಿಕಾ ಸಾಲಿಯನ್ನು ಸಕ್ರಿಯವಾಗಿ ಮುನ್ನಡೆಸಿದರು.

ಮಹಾಸ್ವಾಮಿಗಳು ಯಾವ ಉದ್ದೇಶದಿಂದ ಶಿವಯೋಗ ಮಂದಿರವನ್ನು ಸ್ಥಾಪಿಸಿದರೋ ಆ ಎಲ್ಲಾ ಉದ್ದೇಶಗಳು ಕಾರ್ಯರೂಪಕ್ಕೆ ತರಲು ಯತ್ನಿಸುತ್ತಿದ್ದರು.

ಸಮಾಜದ ಏಳ್ಗೆಗೆ ಕೃಷಿ, ಪ್ರಧಾನ ಕಾಯಕದಿಂದ ಮಾತ್ರ ಸಾಧ್ಯ. ಹಾಗಾಗಿ ಬೌತಿಕ ವೃತ್ತಿ ಕಾಯಕದ ಧ್ಯೇಯಗಳೆಡೆ ಗಮನ ನೀಡಿದರು. ಶಿವಯೋಗ ಮಂದಿರ ಸಂಸ್ಥೆಯು ತನ್ನ ಕಾಲ ಮೇಲೆ ತಾನು ಮುನ್ನಡೆದು ಭವಿಷ್ಯದಲ್ಲಿ ನಿರುದ್ಯೋಗಗಳಿಗೆ ಉದ್ಯೋಗದ ಕೇಂದ್ರವಾಗಿ ರೂಪಿಸಿದರು. ಕೃಷಿಗೆ ಬೆನ್ನಲಬಾಗಿ, ಸ್ಥಳೀಯರ ಪ್ರಗತಿಯೊಂದಿಗೆ ನಿರಂತರ ಸಂಬಂಧ, ಸಂಪರ್ಕ ಬೆಸೆದರು. ಹಿಂದುಳಿದ ವರ್ಗಗಳ ವೀರಶೈವ-ಲಿಂಗಾಯತರ ಆರ್ಥಿಕ ಪ್ರಗತಿಯ ದೃಷ್ಟಿಯಿಂದ, ಸಾಮಾಜಿಕ ನ್ಯಾಯ ಭೌತಿಕ, ಬೌದ್ಧಿಕ ವೃತ್ತಿ ಸ್ಥಾಪನೆಯ ವಿಚಾರವನ್ನು ಕೈಗೊಳ್ಳುತ್ತಾರೆ.

ಹಲವಾರು ವರ್ಷಗಳಿಂದ ಹಗಲಿರುಳೆನ್ನದೆ ಸಮಾಜವನ್ನು ಸಂಘಟಿಸಲು ಅಖಿಲ ಭಾರತ ವೀರಶೈವ ಮಹಾಸಭೆ ಸ್ಥಾಪಿಸಿ ವೀರಶೈವರ ಒಗ್ಗಟ್ಟು ಪ್ರದರ್ಶಿಸುವ ವೇದಿಕೆಯನ್ನು ರೂಪಿಸುತ್ತಾರೆ. ಕೈಗಾರಿಕಾ ಕ್ರಾಂತಿಯ ನಂತರ ಗುಡಿ ಕಾಯಕಗಳಿಗೆ ದೊಡ್ಡ ಪೆಟ್ಟ ನೀಡಿದವು. ಅದರ ಪರಿಣಾಮ "ಉದ್ಯೋಗಕ್ಕಾಗಿ ಊರುರೂ ಅಲೆಯುತ್ತ ಅಲೆಮಾರಿಗಳಾದರು. ಅದನ್ನು ತಪ್ಪಿಸುವ ಸಲುವಾಗಿ. ವ್ಯಾಪಾರೋದ್ಯಮದಲ್ಲಿ ಮನಸ್ಸು ಹಾಕುವಂತೆ ಆರ್ಥಿಕ ಕ್ಷೇತ್ರದಲ್ಲಿ ದೊಡ್ಡ ಹೆಜ್ಜೆ ಇಡುವಂತೆ ಪ್ರೇರೆಪಿಸುತ್ತಾರೆ.”[೨] ಸಾಮಾಜಿಕ ಸಂಘಟನೆಯ ನೆಲೆಯಲ್ಲಿದ್ದ ವೀರಶೈವ ಸಮಾಜದ ಕರಕುಶಲ ಕಲೆಗಳೆಲ್ಲವೂ ಅವನತಿಯ ಹಾದಿಯನ್ನು ಹಿಡಿದವು. ಅವುಗಳ ಪುನರಚನೆಗೆ ಶ್ರಮಿಸಲು ಇದರಿಂದ ಸಾಧ್ಯವಾಯಿತು.

"ನಿರಕ್ಷರ ಕುಕ್ಷಿಗಳಾದ ಒಕ್ಕಲಿಗರು, ಕೂಲಿಗಾರರು, ಸಣ್ಣಪುಟ್ಟ ಕಾಯಕದವರಾದ ಕುಂಬಾರರು, ಗಾಣಿಗರು, ಹಡಪದರು, ಅಗಸರು, ಗೌಳಿಗರು, ನೇಕಾರರು ಮೊದಲಾದ ಕೈಕಸಬಿನ ಜನರೇ ವೀರಶೈವ ಜನಾಂಗದ ಬೆನ್ನೆಲುಬಾಗಿದ್ದಾರೆ.”[೩] ಬಸವಣ್ಣನವರ ಕಾಲದಿಂದಲೂ ಅತ್ಯಂತ ಹಿಂದುಳಿದ ಕಸಬಿನವರಾದ ಅಂಬಿಗರು, ಚಲವಾದಿಗಳು, ನೀಲಗಾರರು ಮೊದಲಾದ ವಿವಿಧ ಕಾಯಕದವರು

ವೀರಶೈವರಾಗಿ ಪರಿವರ್ತಿಸಲ್ಪಟ್ಟವರು. ವೀರಶೈವ ಧರ್ಮಾವಲಂಬಿಗಳಾದ ಮಾತ್ರಕ್ಕೆ ಇವರ ಆರ್ಥಿಕ ಸ್ಥಿತಿಯೇನೂ ಸುಧಾರಿಸಲಿಲ್ಲ. ಇವರ ಸಾಮಾಜಿಕ ಪ್ರತಿಷ್ಠೆ ಬೆಳೆಯಲು ಸ್ವಲ್ಪ ಅನುಕೂಲವಾದರೂ ಹೊಸ ಧರ್ಮಕ್ಕೆ ಸೇರಿದ ಮಾತ್ರದಿಂದ ಇವರ ಹಣಕಾಸಿನ ಸ್ಥಿತಿ ಸುಧಾರಿಸುವುದಿಲ್ಲ. 'ಧರ್ಮದ ಬದಲಾವಣೆಯಿಂದ ಅಥವಾ ಹೆಸರು ಬದಲಾಯಿಸಿದ ಮಾತ್ರಕ್ಕೆ ಜನರ ಆರ್ಥಿಕ ಸ್ಥಿತಿಯಲ್ಲಿ ತೀವ್ರ ಬದಲಾವಣೆಯಾಗಲು ಸಾಧ್ಯವಿಲ್ಲ' ಅಂತೆಯೇ ಕೃಷಿಕೃತ್ಯಕ್ಕೆ ಪೂರಕವಾದುದು ವ್ಯಾಪಾರ, ಕೃಷಿವಲಯಕ್ಕೆ ವ್ಯಾವಹಾರಿಕ ಬುದ್ಧಿಯುಳ್ಳವರು ಬರಬೇಕು ಎಂಬುದನ್ನು ಹಾನಗಲ್ಲ ಪೂಜ್ಯರು ಅರಿತರು. ಅದಕ್ಕಾಗಿ ವ್ಯಾಪಾರದ ಸತ್ಯ ಕಾಯಕವನ್ನು ತಿಳಿಸಿಕೊಟ್ಟರು. ದೇಶದಲ್ಲಲ್ಲದೆ ವಿದೇಶಗಳಿಗೂ ನಮ್ಮ ವ್ಯಾಪಾರದ ಸರಕು ಸಾಗಬೇಕು. ಹಡಗು ವ್ಯಾಪಾರದಲ್ಲಿ ತೊಡಗಿದ್ದರೆಂಬ ಆಧಾರಗಳನ್ನು ಆಧರಿಸಿ ಆ ನಿಟ್ಟಿನ ಪ್ರಯತ್ನಗಳಿಗೆ ಸಮಾಜದವರನ್ನು ಪ್ರೇರೇಪಿಸಿದರು.

ಒಕ್ಕಲುತನವನ್ನು ಅವಲಂಬಿಸಿದ ಕಂಬಾರಿಕೆ, ಬಡಿಗತನ, ಕುಂಬಾರಿಕೆ ಮೊದಲಾದ ಗುಡಿ ಕೈಗಾರಿಕಾ ಸಾಲಿಗಳು ಚೆನ್ನಾಗಿ ನಡೆದರೆ ಒಕ್ಕಲುತನ ಸುಲಭವಾಗುವುದು. ನೂಲುವುದು, ನೇಯ್ಯುವುದು ಇತ್ಯಾದಿ ಕೈಗಾರಿಕೆಗಳೂ ಮನೆಯಲ್ಲಿ ನಡೆಯುತ್ತಿದ್ದವು. ಪೂಜ್ಯರು ಆಗಮನ ಕಾಲದಲ್ಲಿ ಔದ್ಯೋಗಿಕ ಪ್ರಗತಿಯಿರಲಿಲ್ಲ. ಅಖಿಲ ಭಾರತ ವೀರಶೈವ ಮಹಾಸಭೆಯ ಮೊದಲನೆಯ ಅಧ್ಯಕ್ಷರಾದ ಶಿರಸಂಗಿ ಲಿಂಗರಾಜರು ನಮ್ಮ ಉದ್ಯೋಗಗಳ ನಾಶವು ಈಗ ಆಗಿರುವ ಮಟ್ಟಿಗೆ ಹಿಂದೆ ಎಂದೂ ಆಗಿರಲಿಲ್ಲವೆಂದು ತಮ್ಮ ಸ್ವಾನುಭವವನ್ನು ಮಹಾಸಭೆಯ ಮುಂದೆ ಪ್ರಸ್ತಾಪಿಸಿದ್ದರು. ಔದ್ಯೋಗಿಕ ಪ್ರಗತಿಯಿಂದಲೇ ದೇಶದ ಪ್ರಗತಿ, ಘನತೆ ಹೆಚ್ಚುವುದು. ಜಾಗತಿಕ ಸ್ಥಾನಮಾನಗಳನ್ನು ಹೊಂದಲು ಸಾಧ್ಯವಾಗುವುದು. ವ್ಯಾಪಾರವು ಬೆಳೆಯುವುದು. ಇಂಗ್ಲೀಷರು ಯಾಂತ್ರಿಕ ಉದ್ಯೋಗಗಳನ್ನು ಹೆಚ್ಚಿಸಿದ್ದರಿಂದ ಗುಡಿ ಕೈಗಾರಿಕೆಗಳು ಕಡಿಮೆಯಾಗ ಹತ್ತಿದವು ಜನರಿಗೆ ಉದ್ಯೋಗವಿಲ್ಲದೆ ಬಡತನದ ಬವಣೆ ನೀಗಲಿಲ್ಲ ಇದನ್ನು ಮನಗಂಡ ಮಹಾತ್ಮ ಗಾಂಧಿಜಿಯವರು 'ಖಾದಿಯೇ ಸ್ವರ್ಗದ ಹಾದಿ' ಎಂಬ ಘೋಷಣೆ ನೀಡಿದರು. "ಪೂಜ್ಯ ಹಾನಗಲ್ಲ ಕುಮಾರಸ್ವಾಮಿಗಳು ಅದೇ ಮಾರ್ಗದಲ್ಲಿ ಮುಂದೇ ಸಾಗಿ ಜೀವನ ಪರಿಯಂತ ಅಗತ್ಯಕ್ಕೆ ತಕ್ಕಷ್ಟಾದ ಸರಳವಾದ ಖಾದಿ ಬಟ್ಟೆಯನ್ನೇ ಧರಿಸಿ, ಉಳಿದವರಿಗೆ ಪ್ರೇರಣೆ ನೀಡಿದರು."[೪] ಶಿವಯೋಗ ಮಂದಿರದ ಸಾಧಕರಿಗೆ ಎಲ್ಲವನ್ನು ಸ್ವತಃ ಮಾಡಿಕೊಳ್ಳಲು ಕಲಿಸಿಕೊಡುತ್ತಿದ್ದರು. ಸ್ವಯಂ ಉದ್ಯೋಗ ಶೀಲನಾಗಲು ಅಪ್ಪಣೆ ಮಾಡುತ್ತಿದ್ದರು.

ಉದ್ಯೋಗಿಯಾದ ಪುರುಷ ಶ್ರೇಷ್ಠನಿಗೇನೆ ಲಕ್ಷ್ಮಿಯು ಒಲಿಯುತ್ತಾಳೆ ಅರ್ಥಾತ್ ಉದ್ಯೋಗದಿಂದ ಲಕ್ಷ್ಮಿಯು ಪ್ರಾಪ್ತವಾಗುವಳೆಂಬುದನ್ನು ಕುಮಾರಸ್ವಾಮಿಗಳು ತಿಳಿದಿದ್ದರು. ಪ್ರಗತಿಯ ಉದ್ದೇಶದಿಂದ ಮತ್ತು ಸಮಾಜ ಬಾಂಧವರೂ ಉದ್ಯಮಶೀಲರಾಗಲೆಂದೂ

ಬಾಗಲಕೋಟೆಯಲ್ಲಿ ಯಾಂತ್ರಿಕ ಉದ್ಯೋಗವನ್ನು ಹಾಗೂ ವ್ಯಾಪಾರವನ್ನು ಕೈಗೊಂಡರು. ಆರ್ಥಿಕ ಪ್ರಗತಿಯಲ್ಲಿ ಗುಡಿ ಕೈಗಾರಿಕೆ ಆರಂಭಿಸಿ ತಾವು ಮೊದಲಾಗಿ ಉಳಿದವರಿಗೆ ಪ್ರೇರಣೆ ನೀಡಿದರು. ಶ್ರೀ ಸಿದ್ಧಯ್ಯಪುರಾಣಿಕರು "ವಿರಕ್ತ ಸ್ವಾಮಿಗಳೊಬ್ಬರ ಉದ್ಯಮ ಸೃಷ್ಟಿಯ ಈ ಮಹಾದ್ಯೋಜನೆ ಎಂತಹ ಚಾಣಕ್ಷ ಸಿರಿವಂತನ ಉದ್ಯೋಗ ಪ್ರಗತಿಯ ಕಾರ್ಯದಕ್ಷತೆಯನ್ನು ಮೀರಿ ನಿಲ್ಲುತ್ತದೆ"[೫] ಎಂದು ಹಾಡಿದ್ದರು.

ಧರೆಯ ಮೇಲೊಂದು ಹಿರಿದಪ್ಪ ಅಂಗಡಿಯ ನಿಕ್ಕಿ
ಹರದ ಕುಳ್ಳರ್ದ ನಮ್ಮ ಮಹಾದೇವ ಶೆಟ್ಟಿ
ಒಮ್ಮನವಾದರೆ ಒಡನೆ ನುಡಿವ
ಇಮ್ಮನವಾದರೆ ನುಡಿಯ, ಕಾಣಿಯ ಸೋಲ

ಅರ್ಧಗಾಣಿಯಗೆಲ್ಲ ಜಾಣನೋಡಾ ನಮ್ಮ ಕೂಡಲಸಂಗಮದೇವಾ[೬] ಪರಮಾತ್ಮನು ಸ್ವತಃ ಧರಣಿಯ ಮಹಾವ್ಯಾಪಾರಿ, ಕಾಣಿಯ ಸೋಲದಂತೆ ಅರ್ಧಗಾಣಿಯನ್ನು ಗೆಲ್ಲದಂತೆ ಸತ್ಯ ಶುದ್ಧ ವ್ಯಾಪಾರಿಗಳು ಪೂಜ್ಯರು. ಸಮಾಜದ ಒಂದು ಕಾಣಿಯೂ ವ್ಯರ್ಥ ಹೋಗದಂತೆ ನೋಡಿಕೊಳ್ಳುತ್ತಿದ್ದರು. ಬಡವರ ಶೋಷಣೆಗೆ ಇಂಬಿಲ್ಲದಂತೆ, ಸಕಲರೂ ಸಮಭಾಗಿಗಳೆಂಬುದನ್ನು ಬಿಂಬಿಸುವಂತೆ ಕಾರ್ಯಗೈಯಲು ಆಡಳಿತಗಾರರಿಗೆ ನಿರೂಪಿಸುತ್ತಿದ್ದರು. ಕಾಯಕದ ಶುದ್ಧವಾದ ಪ್ರತಿಫಲನದಿಂದ ಶಿವಯೋಗ ಮಂದಿರದ ಸಾಧಕರ ಜೀವನ ನಿರ್ವಹಣೆಯಾಗಬೇಕೆಂಬುದು ಪೂಜ್ಯರ ಆಶಯವಾಗಿತ್ತು. ಈ ನಿಟ್ಟಿನಲ್ಲಿ ಗುಡಿಕೈಗಾರಿಕೆಯಾಗಿ ವಿಭೂತಿ ತಯಾರಿಕಾ ಕೇಂದ್ರವನ್ನು, ಕಬ್ಬಿಣ ವ್ಯಾಪಾರ ಘಟಕವನ್ನು, ಪಂಚಸೂತ್ರ ಪೀಠಿಕೆಗಳ ನಿರ್ಮಾಣವನ್ನು ಶಿವಾನಂದ ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಪ್ಯಾಕ್ಟರಿಯನ್ನು ವ್ಯವಹಾರಿಕವಾಗಿ ಗುರುಸಿದ್ಧೇಶ್ವರ ಚಲನಚಿತ್ರ ಮಂದಿರ ಸ್ಥಾಪನೆ, ಕೃಷಿ, ಒಕ್ಕಲುತನ, ಭೂ ಅಭಿವೃದ್ಧಿ ಕಾರ್ಯಗಾರಗಳು ಮುಂತಾದ ಆರ್ಥಿಕ ಮೂಲಗಳನ್ನು ಅಂದಿನ ಕಾಲಕ್ಕೆ ಆರಂಭಿಸಿದ್ದರು. ಪ್ರಸ್ತುತದಲ್ಲಿ ಅವುಗಳ ವಿಸ್ತಾರ ಕೂಡ ಶಿವಯೋಗ ಮಂದಿರದಲ್ಲಿ ಕಾಣಬಹುದಾಗಿದೆ.

ಸಮಾಜದಲ್ಲಿ ವೀರಶೈವ ಸಂಸ್ಕೃತಿ ಅವನತಿಯನ್ನು ಹೊಂದಿತ್ತೆಂದರೂ ತಪ್ಪಿಲ್ಲ. ಲಿಂಗಧಾರಣೆ ಕಡಿಮೆಯಾಗಿತ್ತು. ಶುದ್ಧ ವಿಭೂತಿಗಳಂತೂ ಸಿಕ್ಕುತ್ತಿರಲಿಲ್ಲ. ಪಂಚಸೂತ್ರ ಲಿಂಗಗಳ ಕಲ್ಪನೆಯೂ ಇರಲಿಲ್ಲ. ಗುರುಗಳ ಇಚ್ಚೆಯಂತೆ ಶ್ರೀಗಳು ಸಮಾಜಕ್ಕೆ ಅವಶ್ಯವೆನಿಸಿದ ಎಲ್ಲಾ ವಿಷಯದಲ್ಲೂ ಕರ್ತವ್ಯ ಶೀಲರಾದರು. 'ಇಷ್ಟಲಿಂಗ' ಸಂಸ್ಕಾರ ಹೊಂದಿದ ಪ್ರತಿಯೊಬ್ಬ ಸದ್ಭಕ್ತನಿಗೂ ಆತನ ಬದುಕಿನ ಸಾಧನಾ ಸಿದ್ಧಿಗೆ ಉಪಯುಕ್ತವಾಗುವಂತಹ ತತ್ವಗಳು ಇವೆ. ಮರ್ತ್ಯಲೋಕವೆಂಬುದು ಕರ್ತರನ ಕಮ್ಮಟವೆಂದು ಸಾರಿ ಸಹಜ ಜೀವನವನ್ನು ಬಾಳಲು ಬೋಧಿಸಿದವರು ಬಸವಾದಿ

ಶರಣರು. ಇಲ್ಲಿ ವರ್ಗ-ವರ್ಣ-ಆಶ್ರಮ-ಲಿಂಗ-ವಯೋಭೇದಗಳಿಲ್ಲ. ಅರಿವು-ಆಚಾರ-ಅನುಭವಗಳೇ ವ್ಯಕ್ತಿಯ ಉನ್ನತಿಯ ಆದರ್ಶ ನಿಲುವುಗಳು. ಇಂತಹ ಆದರ್ಶದ ಪರಿಪೂರ್ಣ ಜೀವನವೇ ಶರಣ ಜೀವನ ಎಂದು ಬಸವಾದಿ ಪ್ರಥಮರು ನಡೆದು ತೋರಿದರು.

'ಅಷ್ಟಾವರಣ' ಧಾರ್ಮಿಕ ತತ್ವಗಳು, 'ಪಂಚಾಚಾರ'ಗಳು, ಸಾಮಾಜಿಕ ನೈತಿಕ ತತ್ವಗಳು ಹಾಗೂ 'ಷಟಸ್ಥಲಗಳು', ಆಧ್ಯಾತ್ಮಿಕ ತತ್ವಗಳು ಎಂದು ವಿಂಗಡಿಸಲಾಗುತ್ತಿದೆ. ಈ ಮೂರು ತತ್ವ ಸಮುಚ್ಚಯಗಳ ಮುಪ್ಪುರಿಯೇ ಲಿಂಗವಂತ ಧರ್ಮವೆನ್ನಬಹುದು. 'ಅಷ್ಟಾವರಣ'ಗಳೆಂದರೆ ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರಗಳು ಪ್ರತಿಯೊಬ್ಬ ಲಿಂಗಭಕ್ತನಿಗೆ ಅಷ್ಟಾವರಣಗಳೇ ಅಂಗಗಳಾಗಬೇಕು ಎಂದು ಅನುಭಾವಿಗಳು ಹೇಳುತ್ತಾರೆ. ಈ ಎಂಟು ಆವರಣಗಳು ವ್ಯಕ್ತಿಯ ಬಹಿರಂಗ-ಅಂತರಗಂಗದ ದೋಷ-ಅನಿಷ್ಠಗಳನ್ನು ತೊಡೆದು ಭಕ್ತನನ್ನು ರಕ್ಷಿಸುವ ಕಾರಣ ಇವುಗಳಿಗೆ 'ಆವರಣ' ಅಂದರೆ ಹೊಂದಿಕೆಗಳೆಂದು ಕರೆಯಲಾಗಿದೆ.[೭] ಅಷ್ಟಾವರಣಗಳನ್ನು ತಿಳುವಳಿಕೆಯ ದೃಷ್ಠಿಯಿಂದ ಅಂತರಂಗಷ್ಟಾವರಣಗಳು, ಬಹಿರಂಗಷ್ಟಾವರಣಗಳೆಂದು ವಿಭಜಿಸಲಾಗಿದೆ. ಆದರೆ ಅಂತರಷ್ಟಾವರಣಗಳೇ ಬಾಹ್ಯದಲ್ಲಿ ಬಹಿರಷ್ಟಾವರಣಗಳಾಗಿವೆ. ಅಂತರಂಗದ ಅರಿವು-ಗುರು, ಆಚಾರ-ಲಿಂಗ, ಅನುಭಾವ-ಜಂಗಮ, ಚಿದ್ರಸ-ಪಾದೋದಕ, ಪ್ರಸನ್ನತೆ-ಪ್ರಸಾದ, ಬೆಧ್ಬೆಳಗು-ವಿಭೂತಿ, ಪ್ರಾತಿಭಚಕ್ಷು-ರುದ್ರಾಕ್ಷಿ, ಅನಾಹತನಾದವನೇ ಮಂತ್ರವಾಗಿದೆ. (ಪ್ರಣವನಾದ) ಈ ಅಷ್ಟಾವರಣಗಳು ಸಮಾನ ತತ್ವಗಳು ಎಲ್ಲರೂ ಪರಾತ್ಪರ ಪರವಸ್ತುವಿನ ಚೈತನ್ಯ ಸ್ವರೂಪವೇ ಆಗಿದೆ. ಇವುಗಳಲ್ಲಿ ಬೇಧ-ಭಾವ ಕಲ್ಪಿಸುವುದಾಗಲೀ, ಹೆಚ್ಚು ಕುಂದು ಎಣಿಸುವುದಾಗಲೀ ಸರ್ವಥಾಸಲ್ಲದು.

ವಿಭೂತಿ ಎಂದರೆ ಭೂತಗುಣಗಳನಳಿದುದೇ ಆಗಿದೆ. ವಿಭೂತಿ ಎಂಬುದು ಪರಶಿವನ ಮೈಬೆಳಗು. ದಿವ್ಯ, ತೇಜಸ್ಸು, ಚಿತ್‌ಪ್ರಕಾಶ ಎಂದು ಶರಣರು ತಿಳಿಸುತ್ತಾರೆ. ಈ ನಿಟ್ಟಿನಲ್ಲಿ ವಿಭೂತಿ ಕುರಿತು ಬಸವಾದಿ ಶರಣರ ವಚನಗಳ ಆಧಾರದ ಮೇಲೆ ಚಿಂತಿನೆ ಮಾಡಲಾಗಿದೆ. ಅವುಗಳಲ್ಲಿ ಮುಖ್ಯವಾದುದೆಂದರೆ

ಶರಣ ಆದಯ್ಯ ಸೂಚಿಸುವ ಐದು ಹೆಸರು ಅಥವಾ ಪ್ರಕಾರದ ವಿಭೂತಿ ಹೀಗಿವೆ.
"ಪಂಚಬ್ರಹ್ಮದಿಂದುದಯವಾದ ನಂದೆ, ಭದ್ರೆ, ಸುರಭಿ, ಸುಶೀಲ,
ಸುಮನೆ ಎಂಬ ಪಂಚಗೋವಿನಿಂದಾದ
ಭೂತಿ ಭಸಿತ ಕ್ಷರ ರಕ್ಷೆ ಎಂಬ ಪಂಚನಾಮವಾಯಿತ್ತು
ಅಂದೆಂತೆಂದೊಡೆ
ಶಿವಜ್ಞಾನ ಸುಖದ ಮಹದೈಶ್ವರ್ಯ ಸ್ವರೂಪಿನಿಂ ಭೂತಿಯಾಯಿತ್ತು

ಸಕಲಕಾಂಕ್ಷಿಗಳ ಬಯಕೆಯಂ ಸುಟ್ಟು ನಿಃಕಾಮರೂಪಿನಿಂ ಭಸಿತವಾಯಿತ್ತು
ಪೂರ್ವಕರ್ಮವನರುಹಿ ನಿಃಕಾಮರೂಪಿನಿಂ ಭಸ್ಮವಾಯಿತ್ತು
ಮಲಮಾಯೆಯ ಕಳೆವುದರಿಂ ಕ್ಷರೆಯಾಯಿತ್ತು
ಭೂತ ಪ್ರೇತ ಪಿಶಾಚಿ ರಾಕ್ಷಸರಗಳ ಹೊದ್ದಲೀಯದಿಪ್ಪುದರಿಂ ರಕ್ಷೆಯಾಯಿತ್ತು
ಇಂತಪ್ಪ ವಿಭೂತಿಯ ನಾನು ಮಹಾತ್ಮೆಯನರಿದು
ನೀನೊಲಿದ ವಿಭೂತಿಯ ನಾನು ಧರಿಸಿ ಬದುಕಿದೆನು
ಕಾಣಾ ಸೌರಾಷ್ಟ್ರ ಸೋಮೇಶ್ವರಾ."[೮]

ವಿಭೂತಿಯನ್ನು ಸಾಮಾನ್ಯವಾಗಿ 'ಸೋಪಾಧಿಕ' ಹಾಗೂ 'ನಿರುಪಾಧಿಕ'ವೆಂದು ಎರಡು ಬಗೆಯಾಗಿ ವಿಂಗಡಿಸಲಾಗಿದೆ. ಈ ಪಂಚವಿಧವಾದ ಸೋಪಾಧಿಕ ವಿಭೂತಿಯನ್ನು ಸಿದ್ಧ ಮಾಡುವ ವಿಧಾನವು ಕಲ್ಪ, ಅನುಕಲ್ಪ, ಉಪಕಲ್ಪ, ಅಕಲ್ಪವೆಂದು ನಾಲ್ಕು ಪ್ರಕಾರವಾಗಿದೆಯೆಂದು ಅನುಭವಿಗಳು ತಿಳಿಸುತ್ತಾರೆ. ಪರಿಶುದ್ಧವಾಗಿ ಸಿದ್ಧಪಡಿಸಿದ ವಿಭೂತಿಗಳನ್ನು ಯೋಗ್ಯ ಸದ್ಗುರುವಿನ ಪಾದೋದಕದಿಂದ ಶುದ್ಧಗೊಳಿಸಿದರೆ ಅದನ್ನು 'ದೀಕ್ಷಭಸಿತ'ವೆಂದು, ಅದೇ ವಿಭೂತಿ ಗಟ್ಟಿಗಳನ್ನು ಕರದಿಷ್ಟಲಿಂಗದ ಪಾದೋದಕದಿಂದ ಶುದ್ಧಗೊಳಿಸಿದರೆ ಅದು 'ಶಿಕ್ಷಾಭಸಿತ'ವೆಂದೂ, ಅದೇ ವಿಭೂತಿ ಗಟ್ಟಿಗಳನ್ನು ಅರಿವು–ಆಚಾರ–ಅನುಭವವುಳ್ಳ ಅನುಭಾವೀ ಜಂಗಮಪಾದೋದಕದಿಂದ ಸಂಸ್ಕರಿಸಿದರೆ ಅದು ಕ್ರಿಯಾಭಸಿತವೆನಿಸಿಕೊಳ್ಳುತ್ತದೆ.

ಸಹಜಾಚಾರದಿಂದ ಗುರು–ಲಿಂಗ–ಜಂಗಮ ಪಾದೋದಕಗಳಿಂದ ಮೇಲಿನಂತೆ ವಿಭೂತಿ ಘಟ್ಟಿಗಳನ್ನು ಬಸವ ಧರಿಸಿರುವ ಇಷ್ಟಲಿಂಗದಲ್ಲಿಯೇ ಗುರು–ಲಿಂಗ–ಜಂಗಮವುಂಟೆಂದು ಭಾವಿಸಿ ಪಾದೋದಕವನ್ನು ತಯಾರಿಸಿಕೊಂಡು ವಿಭೂತಿ ಘಟ್ಟಿಗಳ ಮೇಲೆ ಬಸವ ಮಂತ್ರದೊಂದಿಗೆ ಸಂಸ್ಕರಿಸಿ ಶುದ್ಧ ಮಾಡಬೇಕು. ಇದನ್ನು ಸಂಬಂಧಾಚರಣೆ ಎಂದು ಶರಣರು ಕರೆದಿದ್ದಾರೆ. ಹೀಗೆ ಭೌತಿಕ ವೃತ್ತಿ, ಬೌದ್ಧಿಕ ವೃತ್ತಿಗಳೆಂಬ ಪರಿಕಲ್ಪನೆಯ ನೆಲೆಯಲ್ಲಿ ವೃತ್ತಿ ನಿರತ ತರಬೇತಿಗಳ ಅಗತ್ಯತೆ, ಅನುಷ್ಠಾನ, ಪರಿಣಾಮವನ್ನು ತಿಳಿಸಲಾಗಿದೆ.

೧. ಭೌತಿಕ ವೃತ್ತಿಗಳು

ವಿಭೂತಿ ನಿರ್ಮಾಣ: ಲಿಂಗವಂತ ಧರ್ಮದಲ್ಲಿ 'ವಿಭೂತಿ'ಗೆ ಮಹತ್ವದ ಸ್ಥಾನವಿದೆ. ಅಷ್ಟಾವರಣಗಳಲ್ಲಿ ವಿಭೂತಿಯೂ ಒಂದಾಗಿದೆ. ಇಂತಹ ವಿಭೂತಿಯನ್ನು ಪ್ರತಿಯೊಬ್ಬ ಕಾಯಕ ಜೀವಿ ಸದ್ಭಕ್ತರು ಪರಿಶುದ್ಧವಾಗಿ ತಯಾರಿಸಬಹುದು. ಇಂದು ನಾಡಿನ ಹಲವೆಡೆಗಳಲ್ಲಿ ದೊರೆಯುವ ವಿಭೂತಿಯು ಬಿಳಿಮಣ್ಣು, ಖಟುಕ, ಸುಣ್ಣ ಬೆರೆತ ಮಣ್ಣು ಇತ್ಯಾದಿಗಳಿಂದ ನಿರ್ಮಿಸಿದುದೇ ದೊರೆಯುತ್ತಿದೆ. ಇಂತಹ ವಿಭೂತಿಯನ್ನು ಹಣೆ ಹಾಗೂ ಇತರ ಭಾಗಗಳಿಗೆ ಧರಿಸುವುದರಿಂದ

ಚರ್ಮದ ಮೇಲೆ ದುಷ್ಪರಿಣಾಮಗಳುಂಟಾಗಿ ಚರ್ಮ ಸುಟ್ಟು ಕಪ್ಪಾಗುವುದು, ಗುಳ್ಳೆಗಳು ಏಳುವುದು, ತಲೆಸುತ್ತಿ ಬರುವುದು, ತಲೆ ಹಣೆಗಳಲ್ಲಿ ಬೆವರುಬಂದಾಗ ಹಣೆಯ ಮೇಲಿನ ವಿಭೂತಿ ಕರಗಿ ಕಣ್ಣೊಳಗೆ ಆ ಹೊಲಸು ಸೇರಿ ಕಣ್ಣ ನೋವು ಉಂಟಾಗುವುದು ಎಂಬುದು ಅನುಭವಕ್ಕೆ ಬಂದ ಮಾತಾದಂತೆ ಕಾಣುತ್ತದೆ.

ಈ ಬಗೆಯಲ್ಲಿ ಚಿಂತನೆ ನಡೆಸಿ ವಿಭೂತಿ ನಿರ್ಮಾಣ ಕೇಂದ್ರದ ಸ್ಥಾಪನೆಗೆ ಮುಂದಾದರು. ಅದನ್ನು ಶಾಸ್ತ್ರೀಯ ವಿಧಾನವಾಗಿ ಆದ್ಯತೆ ಮತ್ತು ಪ್ರಶಸ್ತ ರೀತಿಯಲ್ಲಿ ಮೊಟ್ಟ ಮೊದಲ ಬಾರಿಗೆ ತಮ್ಮ ಗುರುಗಳ ಹೆಸರಿನೊಂದಿಗೆ ಶಿವಯೋಗ ಮಂದಿರದಲ್ಲಿ ಗುಡಿ ಕೈಗಾರಿಕಾ ಸಾಲಿಯ ಮಾದರಿಯಲ್ಲಿ ಆರಂಭಿಸುತ್ತಾರೆ. ಸದಾಘಟ್ಟಿ ಹಾಗೂ ಕ್ರಿಯಾಘಟ್ಟಿ ವಿಭೂತಿ ತಯಾರಿಕಾ ವಿಧಾನ ಈ ಕೆಳಗಿನಂತಿದೆ.[೯]

ಆಗತ್ಯವಾಗಿ ಬೇಕಾದ ವಸ್ತುಗಳು

೧. ಆಕಳ ಸಗಣಿ

೨. ಮಣ್ಣಿನ ಬಟ್ಟಿ

೩. ತೆಳುವಾದ ಬಟ್ಟೆ

೪. ಬಡಿಮಣಿಗಳು

೫. ಸೋಸಿ ಬಂದ ಸಂಗ್ರಹಕದ ಗುಂಡಿಗಳು

೬. ಅಗ್ನಿ ಸ್ಪರ್ಷಕ ಗುಂಡಿ

೭. ಘಟ್ಟಿಗಳ ಸುಡಲು ಕುಳ್ಳುಗಳು

೮. ತೋಡುವ ಸಾಧನಗಳು

೯. ಪಾಲಿಶ್ ಹಾಳೆಗಳು

೧೦. ಸೂಕ್ತವಾದ ನೆಲ

ತಯಾರಿಸುವ ವಿಧಾನ

೧. ಆಕಳ ಸಗಣಿ ಸಂಗ್ರಹಿಸುವುದು: ಆಕಳನ್ನು ನಾಡಿನ ಹಲವಾರು ಭಾಗದಲ್ಲಿ ಹಸು, ಗೋವು, ಗೋಮಾತೆ ಎಂದು ಕರೆಯುವುದುಂಟು. ಇಂತಹ ಆಕಳ ಸಗಣಿಯನ್ನು ಸಂಗ್ರಹಿಸುವಲ್ಲಿ ಪಾಲಿಸಬೇಕಾದ ನಿಯಮಗಳು ಆಕಳು ಆರೋಗ್ಯವಾಗಿದ್ದು ಸದೃಡವಾಗಿರಬೇಕು. ಆಕಳ ಕಟ್ಟುವ ಜಾಗದಲ್ಲಿ ಕಸ-ಕಡ್ಡಿ, ಮರಳು-ಮಣ್ಣು ಇರದೆ ಶುಭ್ರವಾದ ಗಟ್ಟಿ ನೆಲ, ಕಲ್ಲಿನ ಹಾಸು ಇರಬೇಕು. ಈ ರೀತಿಯಾಗಿ ಸಂಗ್ರಹಿಸಿದ ಸಗಣಿಯನ್ನು ಒಂದೆಡೆ ಸಂಗ್ರಹಿಸಿಟ್ಟುಕೊಳ್ಳಬೇಕು.

೨. ಸಗಣಿ ಒಣಗಿಸುವುದು: ಸಂಗ್ರಹಿಸಿದ ಸಗಣಿಯನ್ನು ಹೊರಗೆ ಬಯಲಿನಲ್ಲಿ ಕಲ್ಲು ಹಾಸಿನ ಮೇಲೆ ಅಥವಾ ಗಟ್ಟಿಯಾದ ಯೋಗ್ಯ ನೆಲದ ಮೇಲೆ ಉದುರು-ಉದುರಾಗಿ ಉದುರಿಸಬೇಕು. ಇದು ಗಾಳಿ, ಬಿಸಿಲಿಗೆ ಒಂದೆರಡು ದಿನಗಳು ಒಣಗಬೇಕು. ಬೇಸಿಗೆಯಲ್ಲಿ ಒಣಗಲು ಹಾಕಿದ ಸಗಣಿಯು ಸ್ವಲ್ಪ ನಮ್ಮು ಹಸಿಯಾಗಿದ್ದಾಗಲೇ ಒಟ್ಟುಗೂಡಿಸಬೇಕು. ಮಳೆಗಾಲ-ಚಳಿಗಾಲದಲ್ಲಿ ಚೆನ್ನಾಗಿ ಒಣಗಿಸಿ ರಾಶಿ ಮಾಡಬೇಕು. ಸುಟ್ಟಾಗ ಬೂದಿಯು ಮೃದುವಾಗಲು ಇದರಿಂದ ಸಹಾಯವಾಗುತ್ತದೆ.

೩. ಒಣಗಿದ ಸಗಣಿ ಸುಡುವುದು: ಒಣಗಿದ ಸಗಣಿ ಸುಡುವಾಗ ಕೂಡ ಸುಡುವ ನೆಲದಲ್ಲಿ ಕಲ್ಲು, ಮಣ್ಣು, ಕಸ, ಕಡ್ಡಿ ಇರಬಾರದು. ಸಾಯಂಕಾಲ ೬-೭ ಗಂಟೆಯ ಸುಮಾರಿಗೆ ಒಟ್ಟುಗೂಡಿಸಿ ಒಣ ಸಗಣಿಯ ರಾಶಿ ಮಾಡಿ ಅದಕ್ಕೆ ಅಗ್ನಿ ಸಂಸ್ಕಾರ ಮಾಡಿದರೆ ರಾತ್ರಿಯೆಲ್ಲಾ ಚೆನ್ನಾಗಿ ಸುಟ್ಟು ಬೆಳಗಿನ ಹೊತ್ತಿಗೆ ಉತ್ತಮ ಬೂದಿಯು ಸಂಗ್ರಹವಾಗುತ್ತದೆ.

೪. ಬೂದಿಯನ್ನು ತೊಯ್ಯಿಸುವುದು: ಚೆನ್ನಾಗಿ ಸುಟ್ಟು ಆರಿದ ನಂತರ ಸಂಗ್ರಹಿಸಿದ ಬೂದಿಯನ್ನು ರಾಶಿ ಮಾಡಿ ಸಂಗ್ರಹಿಸಿ ಅದಕ್ಕೆ ನಿಧಾನವಾಗಿ ಸ್ವಲ್ಪ ಸ್ವಲ್ಪವೇ ನೀರು ಕುಡಿಸುತ್ತ ಚೆನ್ನಾಗಿ ಕಲಸಬೇಕು. ಇದನ್ನು ೧೨ ತಾಸುಗಳವರೆಗೆ ಹಾಗೆಯೇ ಬಿಡಬೇಕು.

೫. ಬೂದಿಯನ್ನು ನೀರಿನಲ್ಲಿ ಸೋಸುವುದು: ನೆಲದಲ್ಲಿ ಸಮಾನ ಅಂತರದಲ್ಲಿ ೫ ಹರವಿಗಳನ್ನು ಹುಗಿದು ಅದಕ್ಕೆ ಪೂರ್ಣ ಮಟ್ಟದಲ್ಲಿ ನೀರು ತುಂಬಿಸಿ ಅದರಲ್ಲಿ ಬೂದಿ ತುಂಬಿ ಕಲಕುತ್ತಾ ಮಧ್ಯದಲ್ಲಿರುವ ಹರವಿ ನಂ೧ ಇದರಲ್ಲಿ ಈಗಾಗಲೇ ತೋಯಿಸಿ ಇಟ್ಟುಕೊಂಡಿರುವ ಬೂದಿಯನ್ನು ಹಾಕುತ್ತಾ ಚೆನ್ನಾಗಿ ರಾಡಿಯಾಗುವಂತೆ ತಗಡಿನ ಕೈಪಾಳಿಯಿಂದ ಆಗಾಗ ಅಲ್ಲಾಡಿಸುತ್ತಿರಬೇಕು. ಬೂದಿಯು ನೀರಿನಲ್ಲಿ ಬೆರೆತು ರಾಡಿಯಾದ ಈ ಹರವಿಗೆ 'ಬೂದಿ ಹರವಿ' ಎಂದು ಕರೆಯುವರು. ಈಗ ಹರವಿ ನಂ೨ ರಿಂದ ಎರಡು ತಂಬಿಗೆ ನೀರು ತೆಗೆದು ಹರವಿ ನಂ೧ಕ್ಕೆ ಹಾಕಿಕೊಳ್ಳಬೇಕು. ನಂತರ ಒಂದು ನೀರುಪಾಚೆ ಅಥವಾ ತೆಳ್ಳನೆ ಬಟ್ಟೆಯನ್ನು ಹರವಿ ನಂ೨ರ ಬಾಯಿಗೆ ಕಟ್ಟಿ ನಂತರ ಹರವಿ ನಂ೧ ರಿಂದ ೨ನೇ ತಂಬಿಗೆ ಬೂದಿ ರಾಡಿಯನ್ನು ಹರವಿ ನಂ೨ಕ್ಕೆ ಹಾಕಿ ಸೋಸಬೇಕು. ನಂತರ ಹರವಿ ನಂ೩ ರಿಂದ ೨ ತಂಬಿಗೆ ನೀರು ತೆಗೆದು ಹರವಿ ನಂ೧ಕ್ಕೆ ಹಾಕಬೇಕು. ಸೋಸುವ ಅರಿವೆಯನ್ನು ಹರವಿ ನಂ೩ಕ್ಕೆ ಹಾಕಿ ಬೂದಿ ಹರವಿಯಿಂದ ೨ ತಂಬಿಗೆ ರಾಡಿಯನ್ನು ಸೋಸಬೇಕು. ಒಂದು ಸುತ್ತು ಆದ ನಂತರ ಬೂದಿ ಹರವಿಯಲ್ಲಿ ತಗಡಿನ ಕೈ ಪಾಳೆಯಿಂದ ಅಲ್ಲಾಡಿಸಬೇಕು. ನಂತರ ಮತ್ತೇ ಮೊದಲಿನಂತೆ ಬೂದಿ ರಾಡಿಯನ್ನು ಸೋಸುತ್ತಲೇ ಹೋಗಬೇಕು. ಈ ರೀತಿಯಾಗಿ ದಿನಕ್ಕೆ ೮ ತಾಸುಗಳಂತೆ ನಾಲ್ಕು ದಿನಗಳ ಕಾಲ ಸೋಸುವ ಕ್ರಿಯೆಯು ನಡೆಯಬೇಕು. ನಾಲ್ಕನೇಯ ದಿನಕ್ಕೆ ಹರವಿ ನಂ೨.೩.೪.೫ರಲ್ಲಿ ಬೆಣ್ಣೆಯಂತಹ ಮೃದುವಾದ ಬೂದಿರಾಡಿ ಸಂಗ್ರಹವಾಗುತ್ತದೆ.

೬. ಬೆಣ್ಣೆಯಂತಹ ಬೂದಿರಾಡಿಯಲ್ಲಿರುವ ನೀರಿನ ಅಂಶ ಇಂಗಿಸುವುದು: ಸುಮಾರು ೬ ಇಂಚು ಆಳ, ೪ ಫೂಟು ಸುತ್ತಳತೆಯುಳ್ಳ ತಗ್ಗು ತೆಗೆದು ಅದರ ತಳಕ್ಕೆ ಒಂದೆರಡು ಬುಟ್ಟಿ ಸುಟ್ಟ ಒಣ ಬೂದಿಯನ್ನು ಹರವಿ ಅದರ ಮೇಲೆ ಗೋಣಿತಾಟು ಹಾಕಬೇಕು. ಇಂತಹ ತಗ್ಗಿನಲ್ಲಿ ಬೆಣ್ಣೆಯಂತೆ ಬಂದ ರಾಡಿಯನ್ನು ಸುರಿಯಬೇಕು. ಸುಮಾರು ೧೩ ರಿಂದ ೧೫ ತಾಸುಗಳ ನಂತರ ನೀರಿನ ಅಂಶ ಹೀರಲ್ಪಟ್ಟು ಗಟ್ಟಿಯಾದ ಬೂದಿ ಉಂಟಾಗುತ್ತದೆ. ಇದನ್ನು ಚೆನ್ನಾಗಿ ಕಲಸಿ ಉಂಡೆಗಳನ್ನು ಮಾಡಿ ಅವುಗಳನ್ನು ಅರಿವೆಯ ಮೇಲೆ ಇಡಬೇಕು. ಈ ಉಂಡೆಗಳನ್ನು ಕಟ್ಟಿಗೆಯ ಕೈ ಪಾಳೆಯಿಂದ ಚೌಕಾಕಾರದಲ್ಲಿ ತಟ್ಟಿ ಮತ್ತೆ ಒಂದೆರಡು ತಾಸು ಅರಿವೆಯ ಮೇಲೆಯೇ ಗಾಳಿಗೆ ಆರುವ ಸಲುವಾಗಿ ಇಡಬೇಕು. ಎರಡು ತಾಸಿನ ನಂತರ ಮತ್ತೇ ಕೈ ಪಾಳೆಯಿಂದ ಸಾವಕಾಶವಾಗಿ ತಟ್ಟಬೇಕು. ಮತ್ತೆ ಒಂದೆರಡು ತಾಸು ಆರಲು ಬಿಡಬೇಕು. ಹೀಗೆ ೪ ರಿಂದ ೫ ಸಲ ಮಾಡಬೇಕು. ಈ ತೆರನಾಗಿ ತಟ್ಟುವುದರಿಂದ ನೀರಿನ ಅಂಶ ಹೊರ ಹೋಗುತ್ತದೆ.

೭. ಬೂದಿಗಳ ಉಂಡಿಗಳನ್ನು ಒಣಗಿಸುವುದು: ಬೂದಿಯ ಈ ಚೌಕಾಕಾರದ ಉಂಡಿಗಳನ್ನು ಮನೆಯ ಹೊರಗೆ ಒಂದು ತಗಡು, ಕಟ್ಟಿಗೆಯ ಹಲಗೆಯ ಮೇಲೆ ಪೂರ್ಣ ಒಂದು ಹಗಲು ಬಿಸಿಲಿನಲ್ಲಿ ಒಣಗಿಸಬೇಕು.

೮. ಬೂದಿ ಉಂಡೆಗಳನ್ನು ಭಟ್ಟಿ ಇಳಿಸುವುದು: ೬ ಫೂಟ್ ಉದ್ದ ೬ ಫೂಟ್ ಅಗಲ ೩ ಫೂಟ್ ಆಳ ಒಂದು ತಗ್ಗು ತೋಡಿ ಇಟ್ಟಿಗೆಗಳ ಗೋಡೆ ಕಟ್ಟಿ ಭಟ್ಟಿ ರಚಿಸಬೇಕು. ಅದರ ತಳಕ್ಕೆ ಒಣಗಿದ ಆಕಳ ಸಗಣಿ ಹರಡಿ ಅದರ ಮೇಲೆ ಒಂದರ ಪಕ್ಕ ಒಂದರಂತೆ ಚೌಕಾಕಾರದ ಬೂದಿ ಉಂಡೆಗಳನ್ನು ಜೋಡಿಸಿ ಮತ್ತೆ ಅದರ ಮೇಲೆ ೪ ರಿಂದ ೫ ಬುಟ್ಟಿ ಒಣಗಿದ ಸಗಣಿ ಹರಡಿ ಸಂಜೆಯ ಮೇಲೆಗೆ ಅಗ್ನಿ ಸಂಸ್ಕಾರ ಮಾಡಿ ಬೆಳಗ್ಗೆ ಸುಟ್ಟ ಗಟ್ಟಿಯಾದ ಚೌಕಾಕಾರದ ಉಂಡೆಗಳ ಹೊರತೆಗೆದು ಸಂಗ್ರಹಿಸಬೇಕು. ಇಲ್ಲಿ ಸುಡಲು ಬಳಸಿದ ಸಗಣಿಯು ಬೂದಿಯಾದಾಗ ಅದನ್ನು ಬೂದಿ ಹರವಿಯಲ್ಲಿ ಸೋಸಲು ಬಳಸಬಹುದು.

೯. ವಿಭೂತಿಯ ಸಾದಾ ಘಟ್ಟಿಗಳ ನಿರ್ಮಾಣ: ಹೊರತೆಗೆದು ತಂದ ಚೌಕಾಕಾರದ ಬೂದಿ ಉಂಡೆಗಳನ್ನು ೫೦ ನಂಬರಿನ ಪಾಲಿಶ್ ಪೇಪರ್ ತೆಗೆದುಕೊಂಡು ನಾಲ್ಕು ಹೊರಮೈಗಳನ್ನು ಸಾವಕಾಶವಾಗಿ ತಿಕ್ಕಬೇಕು. ಇಲ್ಲಿ ಉದುರಿದ ಪುಡಿರಿಯನ್ನು ಬೂದಿ ಹರವಿಯಲ್ಲಿ ಮತ್ತೇ ಬಳಸಬಹುದು. ಈ ರೀತಿಯಾಗಿ ಸಿದ್ಧಗೊಂಡ ವಿಭೂತಿಗೆ "ಸಾದಾಗಟ್ಟಿ ವಿಭೂತಿ" ಎನ್ನುವರು.

೧೦. ವಿಭೂತಿಯ ಕ್ರಿಯಾಘಟ್ಟಿಗಳ ನಿರ್ಮಾಣ: ಪರಿಶುದ್ಧ ವಿಭೂತಿಯ ಕ್ರಿಯಾಘಟ್ಟಿಗಳನ್ನು ತಯಾರಿಸಬೇಕಾದರೆ ಸ್ವಲ್ಪ ಹೆಚ್ಚಿನ ರೀತಿಯ ಪರಿಶ್ರಮ ಪಡಬೇಕಾಗುವುದು. ಸಾದಾಗಟ್ಟಿಯ

ನಿರ್ಮಾಣದ ವಿಧಾನದಂತೆ ಎಲ್ಲಾ ಹಂತ ಪೂರೈಸಿ ಕೊನೆಯಲ್ಲಿ ಅದನ್ನು ಚೌಕಾಕಾರದ ಬದಲು ಗೋಲಾಕಾರದ ಉಂಡೆ ಮಾಡಿ ಭಟ್ಟಿಯಲ್ಲಿಟ್ಟು ಸುಟ್ಟು ಹೊರತೆಗೆದು ಅದನ್ನು ಮತ್ತೆ ಪುಡಿಮಾಡಿ ಐದು ಹರಪಿಗಳಲ್ಲಿ ಮತ್ತೇ ಸೋಸಿ ರಾಡಿಮಾಡಿ ಬೆಣ್ಣೆಯಂತೆ ಪುನಃ ಸಂಗ್ರಹಿಸಿ ತಟ್ಟಿ ತಟ್ಟಿ ಗೋಲಾಕಾರದಲ್ಲಿ ನಿರ್ಮಿಸಿ ಪುನಃ ಅದನ್ನು ನೆರಳಿನಲ್ಲಿ ೫ ರಿಂದ ೬ ತಾಸುಗಳಲ್ಲಿ ಒಣಗಿಸಿದರೆ ತೇವಾಂಶ ಆರಿಹೋಗಿ ಉತ್ತಮವಾದ ಕ್ರಿಯಾಘಟ್ಟಗಳು ಸಿದ್ಧವಾಗುತ್ತದೆ.

ಒಟ್ಟಿನಲ್ಲಿ ಕುಮಾರ ಶಿವಯೋಗಿಗಳ ಆಲೋಚನೆ, ವಿಭೂತಿಯ ಮಹತ್ವ ಏನೆಂದು ಅರಿತವರಾಗಿದ್ದರು. ಶಾಸ್ತ್ರೋಕ್ತವಾದ ಈ ವಿಧಾನದ ಬಗ್ಗೆ ಹೇಳಲು ಕಾರಣವೇನೆಂದರೆ ಪ್ರತಿಯೊಬ್ಬ ಸದ್ಭಕ್ತರೂ ತಾವೇ ಸ್ವತಃ ಇದನ್ನು ಚಿಕ್ಕದಾಗಿ ತಯಾರಿಸಿ ಶ್ರೀಗಳ ಆಶಯ ಈಡೇರಿಸಬೇಕೆಂಬುದಾಗಿದೆ. ಶಿವಯೋಗ ಮಂದಿರದ ಹೆಸರಿನಲ್ಲಿ ಮಾರಟವಾಗುತ್ತಿರುವ ನಕಲಿ ವಿಭೂತಿಯ ಹಾವಳಿ ತಪ್ಪಿಸಿ ಪ್ರತಿಯೊರ್ವನು ಒಂದು ಕಾಯಕ ಆರಂಭಿಸಲು ಇದರಿಂದ ಸಾಧ್ಯವಾಗಲಿ ಎಂಬುದು ಇಲ್ಲಿನ ಆಶಯವಾಗಿದೆ. ಅದಕ್ಕಾಗಿಯೇ ಈ ಬಗ್ಗೆ ಇಲ್ಲಿ ವಿಸ್ತಾರವಾದ ಬಿಡಿ ಬಿಡಿ ಹಂತದ ವಿವರ ನೀಡಲಾಗಿದೆ.

ಜಿನ್ನಿಂಗ್ ಫ್ಯಾಕ್ಟರಿ

ಪರಮಪೂಜ್ಯ ಮಹಾಸ್ವಾಮಿಗಳು ತಮ್ಮ ಅಕ್ಷಯವಾದ ಜೋಳಿಗೆಯ ಬಲದಿಂದ ಶಿವಯೋಗ ಮಂದಿರದ ಸಂಸ್ಥೆಯನ್ನು ಸ್ಥಾಪಿಸಿದರು. ಇದಕ್ಕೆ ಬೇಕಾದ ಅಪಾರ ಹಣವನ್ನು ನಾಡಿನಲ್ಲಿ ಸಂಚರಿಸಿ, ಸಂಗ್ರಹಿಸಿ ಕೊಟ್ಟರು. ಅವರ ಈ ಮಹಾ ಕಾರ್ಯಕ್ಕೆ ಹಾವೇರಿ ಶ್ರೀಗಳು ಬಲಗೈಯಂತೆ ನೆರವಾಗಿದ್ದರು. ಭಕ್ತರು ಸಲ್ಲಿಸುವ ಭಕ್ತಿಯ ಕಾಣಿಕೆ, ಧರ್ಮಧಾನ, ವರ್ಷಾಸನ ಭಿಕ್ಷೆಯ ಧಾನ್ಯ ಮತ್ತು ಜಮೀನುಗಳ ಉತ್ಪನ್ನ ಇವುಗಳಿಂದ ಸಂಸ್ಥೆಯ ಖರ್ಚು ನಡೆಯುವಂತಾಗಿತ್ತು. ಮತ್ತು ಅನೇಕ ಮಹನೀಯರು ಅಲ್ಲಲ್ಲಿ ಜಮೀನುಗಳನ್ನು ದಾನವಿತ್ತರು. ಶಿವಯೋಗ ಮಂದಿರವು ನಿರಂತರ ನಿರ್ವಿಘ್ನವಾಗಿ ಸಾಗಬೇಕೆಂಬ ಸದುದ್ದೇಶದಿಂದಲೂ ಈ ಸಂಸ್ಥೆಯು ಬಹುಕಾಲ ಬಾಳಿ ಬದುಕಿ ನಾಡಿಗೆ ಉತ್ತಮ ಸಾಧಕರನ್ನು ನೀಡುವಂತಾಗಲೆಂದು ಕೆಲ ಭಕ್ತರೊಡನೆ ವಿಚಾರಿಸಿ ಪೂಜ್ಯ ಹಾನಗಲ್ಲ ಕುಮಾರಸ್ವಾಮಿಗಳು ೧೯೧೧–೧೯೧೨ರ ವೇಳೆಗೆ ಬಾಗಲಕೋಟೆಯಲ್ಲಿ ಔದ್ಯೋಗಿಕವಾದ ಶಿವಾನಂದ ಜಿನ್ನಿಂಗ್ ಫ್ಯಾಕ್ಟರಿಯನ್ನು ಸ್ಥಾಪಿಸಿದರು. "ರ.ನಂ. ಎ.೪೫೨ (ವಿಜಾಪುರ) ಮುಂಬಯಿ ಟ್ರಸ್ಟ್ ಕಾಯಿದೆ ಅನ್ವಯ ಆಕ್ಟ್ ೧೯೫೦ರ ಪ್ರಕಾರ ೧೭೦೭೧೯೫೩ರಲ್ಲಿ ನೊಂದಾಯಿಸಲ್ಪಟ್ಟಿದೆ.[೨೦] ಇದರ ಸ್ಥಾಪನೆಗೆ ಆಗಿನ ದಿನದಲ್ಲಿ ೨೦ ಸಾವಿರ ರೂಗಳನ್ನು ತೊಡಗಿಸಿದರು. ೧೯೧೬ರಲ್ಲಿ ಈ ಫ್ಯಾಕ್ಟರಿಗೆ ಅರಳಿಗಂಟು ಕಟ್ಟುವ ಪ್ರೆಸ್ಸನ್ನು ಜೋಡಿಸುವುದಕ್ಕಾಗಿ ಮತ್ತೆ ೩೦ ಸಾವಿರ ರೂಗಳನ್ನು ವಿನಿಯೋಗಿಸಬೇಕಾಯಿತು. ಇದರಿಂದಾಗಿ ಶಿವಯೋಗ ಮಂದಿರಕ್ಕೆ ಪ್ರತಿವರ್ಷ ಆ ಕಾಲಕ್ಕೆ ನಾಲ್ಕುಸಾವಿರ ರೂಗಳ ಆದಾಯ ಬರುವಂತಾಯಿತು.

ಈ ಫ್ಯಾಕ್ಟರಿಯು ಮೊದಲು ಪಾಲುಗಾರಿಕೆಯಲ್ಲಿತ್ತು. ಸಂಸ್ಥೆ ಅರ್ಧಪಾಲು ಹೊಂದಿತ್ತು. ಆಡಳಿತದ ತೊಂದರೆಯಿಂದಾಗಿ ೧೯೨೬-೨೭ರಲ್ಲಿ ಪಾಲುದಾರರ ಪಾಲನ್ನು ಕೊಡಬೇಕಾಯಿತು. ಇದರಿಂದ ಸಂಸ್ಥೆಗೆ ೬೦ ಸಾವಿರ ರೂಗಳ ಸಾಲ ಮಾಡಬೇಕಾಯಿತು. ಸಂಸ್ಥೆಗೆ ೬ ರಿಂದ ೭ ಸಾವಿರ ರೂಗಳನ್ನು ಕೊಟ್ಟು ಉಳಿದ ಆದಾಯವನ್ನು ಸಾಲಕ್ಕೆ ಮುಟ್ಟಿಸುತ್ತಾ ಬಂದರೂ ೧೯೩೦ರ ಸುಮಾರಿಗೆ ಇನ್ನೂ ೧೭ ರಿಂದ ೧೮ ಸಾವಿರ ರೂಗಳ ಸಾಲ ಉಳಿದಿತ್ತು. ಇದೇ ದಿನಗಳಲ್ಲಿ ಸಂಸ್ಥಾಪಕ ಶ್ರೀಗಳೂ ಲಿಂಗೈಕ್ಯರಾಗಿ ಆಕಾಶವೇ ಕಳಚಿ ಬಿದ್ದಂತಾಯಿತು. ಹಾವೇರಿ ಪೂಜ್ಯರು ಸಂಸ್ಥೆಗೆ ಯಾವ ತೊಂದರೆ ಬಾರದಂತೆ ಕಾಳಜಿ ವಹಿಸಿದರು. ೧೯೩೯ನೇ ಶಿವರಾತ್ರಿ ಯಾತ್ರಾ ಸಂದರ್ಭದಲ್ಲಿ ಟ್ರಸ್ಟಿಗಳೆಲ್ಲ ವಿಚಾರಿಸಿ ಭಿಕ್ಷೆಯನ್ನು ಮಾಡಿ ಸಾಲ ತೀರಿಸುವ ನಿರ್ಧಾರ ಮಾಡಿ ೧೫ ಸಾವಿರ ಕೂಡಿಸಿದರು. ಫ್ಯಾಕ್ಟರಿಯಲ್ಲಿ ೨೪ ಸಾವಿರ ಲಾಭವಾಯಿತು. ಈ ಕಾರ್ಯದಲ್ಲಿ ಹಾನಗಲ್ಲ, ಹಾಲಕೆರೆ, ನವಲಗುಂದ, ಗುಳೇದಗುಡ್ಡ, ಕೊಪ್ಪ, ರೋಣ ಶ್ರೀಗಳ ಶ್ರಮ ಸ್ಮರಣೀಯವಾಗಿದೆ. ಬಂದ ಸಂಕಟ ನಿವಾರಣೆಯಾಯಿತು. ೧೯೪೬ರಲ್ಲಿ ಹಾವೇರಿ ಶ್ರೀಗಳೂ ಶಿವನಲ್ಲಿ ಬೆರೆತರು. ಮುಂದೆ ಶ್ರೀ ಜಗದ್ಗುರು ಗುರುಸಿದ್ಧರಾಜಯೋಗೀಂದ್ರ ಮಹಾಸ್ವಾಮಿಗಳ ನೇತೃತ್ವದಲ್ಲಿ ೧೯೪೮ರ ಸುಮಾರಿಗೆ ಸಂಸ್ಥೆಯು ಆರ್ಥಿಕ ಭದ್ರತೆಯನ್ನು ಪಡೆಯಿತು. ಜನ್ನಿಂಗ್ ಫ್ಯಾಕ್ಟರಿಯ ಲಾಭವೂ ಹೆಚ್ಚಿತು. ಹೀಗಾಗಿ ಲಕ್ಷಕ್ಕೂ ಮಿಕ್ಕಿನ ನಿಧಿಯ ಸಂಗ್ರಹವಾಯಿತು. ಹೀಗೆ ಅನೇಕ ಸಂಚಾಲಕರ ಮುಂದುವರಿಕೆಯಲ್ಲಿ ಸಂಸ್ಥೆ ಮುನ್ನಡೆದರೂ "೧೯೯೪ರಲ್ಲಿ ಜಿನ್ನಿಂಗ್ ಫ್ಯಾಕ್ಟರಿಯ ಪ್ರೆಸ್ಸಿನ ಆದಾಯ ಕಡಿಮೆಯಾಯಿತೆಂದು ಪ್ರೆಸ್ ಮೆಶನ್ ಮಾರಾಟ ಮಾಡಿದರು. ಅದರಲ್ಲಿ ಬಂದ ೨೦ ಲಕ್ಷ ೩೮,೭೫೦ರೂಗಳ ಯು.ಟಿ.ಪಿ. ಶೇರುಗಳನ್ನು ಖರೀದಿಸಿದರು." ಈ ಅರಳಿಗುಂಟು ಕಟ್ಟುವ ಪ್ರೆಸ್ ಫ್ಯಾಕ್ಟರಿಯ ಸಣ್ಣ ಬಾಯ್ಲರನ್ನು ಸಹ ೮೦ ಸಾವಿರಕ್ಕೆ ಮಾರಾಟ ಮಾಡಲಾಗಿ, ೧೯೯೬ರ ಸುಮಾರಿಗೆ ಆರ್ಥಿಕ ಸ್ಥಿತಿ ತೃಪ್ತಿದಾಯಕವಾಗಿರಲಿಲ್ಲ. ಪೂಜಾವಂತಿಕೆ, ದುರ್ಗದ ಭೂಮಿಯ ಮಾವಿನ ಮರ, "ಜನ್ನಿಂಗ್ ಫ್ಯಾಕ್ಟರಿಯ ದಕ್ಷಿಣದ ಭಾಗದಲ್ಲಿ ಅಂಗಡಿ ಕಟ್ಟಡಕ್ಕೆ ಠರಾವು ಮಾಡಿ ಅಲ್ಲಿ ಬೇಳೆಮಿಲ್ ಹಾಕಿಸಿ ೧೩.೦೮.೧೯೯೬ರಲ್ಲಿ ಬಾಡಿಗೆಗೆ ಸಭೆ ಕರೆದು ಅದನ್ನು ಬಾಡಿಗೆಗೆ ನೀಡಿದರು."[೨] ಈ ರೀತಿ ಸತತ ಪ್ರಯತ್ನದಿಂದ ಆದಾಯ ಇಂದಿಗೆ ಹೆಚ್ಚಿತ್ತೆನ್ನಬೇಕು.

ವಿರಕ್ತ ಸ್ವಾಮಿಗಳ ಚಾಣಾಕ್ಷ ಸಿರಿವಂತರ ಉದ್ಯೋಗ ಪ್ರಗತಿ ಕಾರ್ಯಕ್ಷಮತೆಯಿಂದ ಆಗಿನ ಕಾಲಕ್ಕೆ ಸುಮಾರು ೨೫೦ ಬಡಕುಟುಂಬಗಳಿಗೆ ಉದ್ಯೋಗದ ಜೀವನ ದೊರೆತಿತ್ತು. ಸುತ್ತ ಮುತ್ತಲಿನ ರೈತರಿಗೆ ಮಾರುಕಟ್ಟೆ ಒದಗಿಸುತ್ತಿತ್ತು. ಶ್ರೀಗಳ ಬುದ್ಧಿ ವೈಭವ, ದೂರದೃಷ್ಟಿ ಅಪರಮಿತ, ಅಸಾಧಾರಣವಾದುದಾಗಿತ್ತು.

ಕಲಾಮಂದಿರ

ಶ್ರೀ ಕುಮಾರ ಮಹಾಸ್ವಾಮಿಗಳವರಲ್ಲಿ ಅನುಪಮವಾದ ವಿರಕ್ತಿ, ಅಸದೃಶ್ಯವಾದ ಸ್ವಾರ್ಥತ್ಯಾಗಬುದ್ಧಿ, ಅಚಲವಾದ ಧೈರ್ಯ, ಅಖಂಡವಾದ ಸಾಹಸ ಪ್ರವೃತ್ತಿ, ವಿಲಕ್ಷಣವಾದ ದೂರದೃಷ್ಟಿ, ಅತಿಯವಾದ ಶ್ರಮ ಸಹಿಷ್ಣುತೆ, ಕಠಿಣವಾದ ಮನೋನಿಗ್ರಹ, ಉಪಮಾತೀತವಾದ ಶಾಂತಿ ಮೊದಲಾದ ಸದ್ಗುಣಗಳು ಮನೆ ಮಾಡಿದ್ದವು. ಅದರಿಂದಾಗಿ ಪೂಜ್ಯರು ಹೊಸ ದೃಷ್ಟಿಯಿಂದ ವಿನೂತನ ಸೃಷ್ಟಿಯನ್ನೇ ಗೈದರು. ಆಧುನಿಕ ನವ ನಾಗರಿಕತೆಯ ಅಭಿವೃದ್ಧಿಯನ್ನು ಕೈಗೊಳ್ಳುವಂತೆ ಪ್ರೇರಣೆ ನೀಡಿದರು.

ಪರಮಪೂಜ್ಯ ಮಹಾಶಿವಯೋಗಿಗಳ ಸ್ವಾವಲಂಬನೆಯ ಆರ್ಥಿಕ, ವಾಣಿಜ್ಯ ಸೃಷ್ಟಿಯ ದ್ಯೋತಕವಾಗಿ ಬಾಗಲಕೋಟೆಯ ಶಿವಾನಂದ ಜನ್ನಿಂಗ್ ಫ್ಯಾಕ್ಟರಿಯ ಪಕ್ಕದಲ್ಲಿ ಹೆದ್ದಾರಿಗೆ ಹೊಂದಿ ಶ್ರೀ ಗುರುಸಿದ್ಧೇಶ್ವರ ಚಿತ್ರಮಂದಿರ ೧೯೨೪ರ ವೇಳೆಗೆ ನಿರ್ಮಾಣವಾಯಿತು. ಆದರೆ "ಇವರ ಹಿಂದಿರುವ ಹಿನ್ನೆಲೆ, ಉದ್ದೇಶ ಶ್ರೀಗಳಿಗೆ ಅರ್ಥವಾಗಿದ್ದಂತೆ ಇತರರಿಗೆ ಅರ್ಥವಾಗುವುದು ಕಷ್ಟಸಾಧ್ಯ. ಈ ಬಗೆಯ ಉದ್ದೇಶ ಮತ್ತು ದೂರದೃಷ್ಟಿತ್ವ ಅಂಶಗಳು ಹೀಗಿವೆ."[೧೩]

* ಕಲಾಕಾರರಿಗೆ ಪ್ರೋತ್ಸಾಹ
* ಚಿತ್ರೋದ್ಯಮಕ್ಕೆ ಪ್ರೋತ್ಸಾಹ
* ಮನರಂಜನೆಗೆ ಪ್ರೋತ್ಸಾಹ
* ಶಿವಯೋಗ ಮಂದಿರಕ್ಕೆ ಆರ್ಥಿಕ ಭದ್ರತೆ

ಅಂದಿನ ದಿನಗಳಲ್ಲಿ ಜನಪ್ರಿಯವಾದ ಚಿತ್ರೋದ್ಯಮದಿಂದ ಲಾಭ ಹೆಚ್ಚುವುದು ಸಾಧ್ಯವೆಂದು ಈ ಸಿನಿಮಾ ಮಂದಿರ ನಿರ್ಮಾಣ ಮಾಡಿದರು. ಅದು ಪ್ರಾರಂಭವಾಗಿ ಸಂಸ್ಥೆಗೆ ಅದೆಷ್ಟು ಲಾಭವಾಯಿತೆಂದು ತಿಳಿದುಬಂದಿಲ್ಲ. ಆದರೆ ವಿವಾದದಿಂದ ಹೆಚ್ಚಿನ ಹಾನಿಯನ್ನೆ ಅನುಭವಿಸಿತು.

ಸುಮಾರು ಎರಡು ದಶಕಗಳಿಂದ ಈ ಚಿತ್ರಮಂದಿರ ಹಾಳು ಬಿದ್ದಿತು. ನ್ಯಾಯಾಲಯದಲ್ಲಿ ಸಾಕಷ್ಟು ಖರ್ಚು ಮಾಡಿಸಿತು. ನಂತರ "ದಿನಾಂಕ: ೦೧.೦೯.೧೯೯೮ರಲ್ಲಿ ಸಂಸ್ಥೆಯ ಸದಸ್ಯರಾದ ಜಿ.ಎಸ್. ಪಾಟೀಲರಿಗೆ ಇದರ ಕಾರ್ಯವಹಿಸಿದರೂ ಫಲಕಾರಿಯಾಗದೆ, ೧೪.೦೯.೧೯೯೯ರ ಸಭೆಯಲ್ಲಿ ಮಲಪ್ರಭೆಗೆ ಸೇತುವೆ ನಿರ್ಮಾಣ ಮಾಡಿದ ಕೆ.ಎಸ್. ಪಳಿನಿಸ್ವಾಮಿ ಆಲಮಟ್ಟಿ ಇವರಿಗೆ ಇದನ್ನು ಸಂಪೂರ್ಣ ವ್ಯವಸ್ಥೆ ಮಾಡುವುದಾಗಿ ಅರ್ಜಿ ಸಲ್ಲಿಸಿ ಅದರಂತೆ ದಿನಾಂಕ: ೦೯.೧೦.೧೯೯೯ರ ಸಭೆಯ ಅಜೆಂಡಾದಲ್ಲಿ ಅವರಿಗೆ ವಹಿಸಲಾಯಿತು. ಸತತ ೩-೪ ತಿಂಗಳ ಪರಿಶ್ರಮದಿಂದ ಸುಂದರವಾದ ಚಿತ್ರಮಂದಿರ ರೂಪಗೊಂಡಿತು."[೧೪] ಹಿಂದಿನ ಬಾಡಿಗೆದಾರರಾದ ಹುಂಡೇಕಾರರನ್ನು ಕರೆಸಿ ಸಂಧಾನ ಮಾಡಿ ಅವರೂ ಸಂಸ್ಥೆಗೆ ಸಹಾಯ, ಸಹಕಾರ ನೀಡಿದ್ದರ ಫಲವಾಗಿ ನ್ಯಾಯಾಲಯದಲ್ಲಿ ಕೇಸು ನಿಕಾಲೆಯಾಯಿತು.

ಹೀಗೆ ಆಗಿನ ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಬಿ. ಚಿಮ್ಮನಕಟ್ಟಿ, ಸಂಸದ ಶ್ರೀ ಆರ್.ಎಸ್. ಪಾಟೀಲರ ಸಹಕಾರದೊಂದಿಗೆ ಜಿಲ್ಲಾಧಿಕಾರಿಗಳಿಂದ ಪರವಾನಿಗೆ ಪಡೆದು ದಿನಾಂಕ: ೦೬.೦೨.೨೦೦೦ರದಲ್ಲಿ ಅನೇಕ ಶ್ರೀಗಳು, ಸಂಸದ, ಶಾಸಕರು, ಗಣ್ಯರ ಆತಿಥ್ಯದಲ್ಲಿ ಗುರುಸಿದ್ಧೇಶ್ವರ ಚಿತ್ರಮಂದಿರವು ಪ್ರಾರಂಭವಾಯಿತು. ಸಂಸ್ಥೆಗೆ ಯಾವ ಭಾರ ಬೀಳದೆ ನ್ಯಾಯಾಲಯದ ಖರ್ಚು ತಪ್ಪಿಸಿ ಚಾಲೂ ಆದ ದಿನದಿಂದ ಸಂಸ್ಥೆಗೆ ಪ್ರತಿ ತಿಂಗಳು ರೂ. ೧೦,೪೦೦ಗಳ ವರಮಾನ ಬರುವಂತೆ ಮಾಡಿದೆ. ಆದರೂ ಇದಕ್ಕೆ ಹಿತಶತೃಗಳ ಕಾಟ ತಪ್ಪಿಲ್ಲ ಎನ್ನುತ್ತದೆ ಶಿವಯೋಗ ಮಂದಿರದ ವರದಿ ಪುಸ್ತಕ.

ಈ ನಿಟ್ಟಿನಲ್ಲಿ ಶಿವಯೋಗ ಮಂದಿರ ಹಾಗೂ ಸಮಾಜ ಮುಖಿ ಪ್ರಗತಿಗಾಗಿ ಗುಡಿ ಕೈಗಾರಿಕಾ ಸಾಲಿಗಳಾಗಿ ವಿಭೂತಿ ತಯಾರಿಕೆಯನ್ನು ಆರಂಭಿಸಿದಂತೆ ಲಿಂಗ-ಶಿವದಾರನನ್ನು ಶಾಸ್ತ್ರೋಕ್ತ ರಚನೆಗೂ ತರಬೇತಿ ನೀಡಿ ರಚನೆ ಮಾಡಲು ಪ್ರೇರಣೆ ಇತ್ತರು. ಗುರುಕರುಣಿಸುವ ಪಂಚಸೂತ್ರ ಲಿಂಗಕ್ಕೆ ಪರಿಶುದ್ಧ ಹಾಗೂ ದೀರ್ಘಕಾಲ ಬಾಳಿಕೆ ಬರುವಂತ, ಮುಕ್ಕಾಗದಂತ ಕಪ್ಪು ಶಿಲೆಯಿಂದ ಪಂಚಸೂತ್ರ ನಿರ್ಮಾಣಕ್ಕೆ ಶಿವಯೋಗ ಮಂದಿರದಲ್ಲಿ ಕೇಂದ್ರವೊಂದನ್ನು ತೆರೆದರು. "ಲಿಂಗವನ್ನು ಕರಡಿಗೆಯಲ್ಲಿ ಧರಿಸಲು ಕಲಿಸಿ ನೂತು ೬೩ ಎಳೆಗಳನ್ನು ಸೇರಿಸಿ ಶಿವದಾರ ಮಾಡಿದರೆ ೬೩ ಪುರಾತನರ ನೆನಹು ಬರುವುದಲ್ಲದೆ ದಾರವು ಗಟ್ಟಿಮುಟ್ಟಾಗುವುದು ಎಂದು ತಿಳಿಸಿದರು."[೧೫] ಹೀಗೆ ಇವುಗಳನ್ನು ಸಿದ್ಧಗೊಳಿಸಿ ಮಾರಾಟ ಮಾಡುವುದರಿಂದ ಆದಾಯವು, ಕೈಗೊಂದು ಉದ್ಯೋಗವು ದೊರೆಯುವುದೆಂದು ತೋರಿಸಿಕೊಟ್ಟರು. ಇದರೊಂದಿಗೆ ಶಿವಯೋಗ ಮಂದಿರಕ್ಕೆ ಆರ್ಥಿಕ ಮೂಲದ ಅನುಷ್ಠಾನವನ್ನು ಪೂರೈಸಿದರು.

ಇಷ್ಟಕ್ಕೆ ಶ್ರೀಗಳ ಕಾರ್ಯ ಮುಗಿಯಲಿಲ್ಲ ಸಂಪ್ರದಾಯವಾಗಿ ಮೂಡಿಬಂದ ಮೇಟಿ ಕಾಯಕ ಅಥವಾ ಒಕ್ಕಲುತನವನ್ನು ಅಭಿವೃದ್ಧಿಗೊಳಿಸುವ ಮೂಲಕ ಮಂದಿರಕ್ಕೆ ಆರ್ಥಿಕ ಮೂಲವನ್ನು ಒದಗಿಸಿ ಅದರಲ್ಲೂ ಯಶಸ್ಸು ಸಾಧಿಸಿದರು.

ಭಾರತ ದೇಶ ಕೃಷಿ ಪ್ರಧಾನವಾದುದು. ಜನಸಂಖ್ಯೆ ಬೆಳೆಯುತ್ತಿರುವಾಗ ಹಳೆಯ ಪದ್ಧತಿಯಿಂದ ಇಳುವರಿ ಸಾಕಷ್ಟು ಬರುವುದಿಲ್ಲವೆಂಬುದನ್ನು ಚೆನ್ನಾಗಿ ತಿಳಿದುಕೊಂಡವರು. ಒಕ್ಕಲಿಗನ ಚೆನ್ನಾಗಿ ಆದರೇನೆ ಭೂಮಿ ಫಲವತ್ತಾಗಿರುವುದು, ಫಲನೀಡುವುದು. ಒಮ್ಮೆ ಕೃಷಿ ಮಾಡಿದರೆ ಸಾಲದು ಪ್ರತಿಯೊಂದು ಸಲವು ಬೀಜ ಬಿತ್ತಲು ಕೃಷಿ ಮಾಡಬೇಕು. ಕೃಷಿ ಕಾರ್ಯ ಕುಶಲತೆಯುಳ್ಳ ಒಕ್ಕಲಿಗನನ್ನು 'ನೇಗಿಲಯೋಗಿ' ಎಂಬುದಾಗಿ ಕರೆಯಲಾಗಿದೆ. ಶಿವನೂ ಸಹ ಆದರ್ಶ ಒಕ್ಕಲಿಗನಾಗಿದ್ದನೆಂಬುದಕ್ಕೆ ಅವನಿಗಿರುವ ಪರ್ಯಾಯ ನಾಮಗಳಾದ ಗಂಗಾಧರ, ಪಾರ್ವತಿವಲ್ಲಭ, ತ್ರಿಶೂಲಧಾರಿ, ವೃಷಭಾರೂಢ, ಗಜಚರ್ಮಾಂಬಧರ, ಸ್ಮಶಾನವಾಸಿ,

ಭಸ್ಮಭೂಷಣ, ನಾಗಾಭರಣ, ಡಮರುಗಧಾರಿ ಇವೇ ಪದಗಳು ಶಿವನು ನೇಗಿಲಯೋಗಿ ಎಂಬುದನ್ನು ಸ್ಪಷ್ಟಪಡಿಸುತ್ತದೆ.

ಹರನು ತಲೆಯ ಮೇಲೆ ಗಂಗೆಯನ್ನು ಧರಿಸಿದ್ದಾನೆ. ಒಕ್ಕಲಿಗನು ಭೂಮಿಯ ಮೇಲೆ ಬಿದ್ದ ನೀರನ್ನು ವ್ಯರ್ಥವಾಗಿ ಹೋಗಬಿಡಬಾರದು, ಪಾರ್ವತೀವಲ್ಲಭನು ಪಾರ್ವತಿಗೆ ಅತ್ಯಂತ ಪ್ರೀತಿಯಿಂದ ತನ್ನ ತೊಡೆಯ ಮೇಲೆ ಸ್ಥಾನಕೊಟ್ಟಂತೆ ಮಣ್ಣಿನ ಮಗನು ಭೂಮಿಯನ್ನು ಆಧರಿಸಬೇಕು, ಗೌರವಿಸಬೇಕು. ಅರ್ಥಾತ್ ಮಣ್ಣನ್ನು ಚೆನ್ನಾಗಿ ರಕ್ಷಿಸಬೇಕು. ಮಣ್ಣಿನ ಸವಕಳಿಯಾಗದಂತೆ ಒಡ್ಡನ್ನು ಹಾಕಿ ಕಾಯಬೇಕು. ತ್ರಿಶೂಲ ಮೂರು ತಾಳಿನ ಕೂರಿಗೆಯ ಸೂಚಕವಾಗಿದೆ. ಮಳೆಯ ನೀರು ಭೂಮಿಗೆ ಬಿದ್ದರೆ ಕೂರಿಗೆ ಬೇಕು. ಆಗ ಎತ್ತೂ ಅತ್ಯವಶ್ಯಕ. ರೈತನ ಉಡುಗೆ–ತೊಡುಗೆ, ಚಳಿ–ಮಳೆಯಲ್ಲಿ ದೇಹ ರಕ್ಷಣೆಗಾಗಿ ದಪ್ಪನಾದ ಬಟ್ಟೆಯುಳ್ಳವನಾಗಬೇಕು. ಚರ್ಮಾಂಬರಧಾರಿಯಂತಿರಬೇಕು. ಸ್ಮಶಾನ ಹೊಲಗಳೆರಡೂ ಒಂದೆಂದು ಭಾವಿಸಬೇಕು. ಭೂಮಿಯಲ್ಲಿ ದುಡಿವ ರೈತನಿಗೆ ಮಣ್ಣೆ ಭಸ್ಮ, ಸರ್ಪವು ರೈತನ ಹೊಲದ ರಕ್ಷಕ. ಸರ್ಪದಂತೆ ಹೆಗಲ ಮೇಲೆ ಹಗ್ಗವಿರಬೇಕು. ಅದು ಮೇವನ್ನ ಒಯ್ಯಲು ಸಹಕಾರಿ. ಕವಿರತ್ನ ದ್ಯಾಮುರ ಚನ್ನಕವಿಗಳು ಕೃಷಿ ಕೃತ್ಯದ ಸುಧಾರಣೆಯನ್ನು ಹಾನಗಲ್ಲ ಶ್ರೀಗಳ ಪುರಾಣದಲ್ಲಿ ಹೀಗೆ ಬಣ್ಣಿಸುತ್ತಾರೆ.

ಪರಮಕೃಷಿಕರ್ಮಮಂ ಶಾಸ್ತ್ರೀಯ ರೀತಿಯಿಂ
ದರಿತು ಮಾಡಿಸಲೆಂದು ಬಗೆದು ಕೃಷಿ ಚತುರರಂ
ಬರಿಸಿಕೊಂಡೊಳ್ಪುಮಿಗೆ ಶಿವಯೋಗ ಮಂದಿರದೊಳೆಲ್ಲ ಹೊಲಗಳನು ತೋರಿ।
ಸರಿಗಂಡು ಪೊಲದೊಳವರೊರೆದಂತೆ ಹದಗೊಳಿಸಿ
ಪರಿಪರಿಯ ಬೆಳೆಗೊಂಡನೊಪ್ಪಿ ಬೇಸಾಯಗಂ
ರರು ನಾಣ್ಬುವಂದದಿಂದದರ ಮರ್ಮವನಲ್ಲಿ ಸಭೆಗರೆದು ಪೇಳಿಸಿದನು॥೧೬

ಪರಮಪೂಜ್ಯರು ಆಧ್ಯಾತ್ಮ ಕೃಷಿಕರಾಗಿದ್ದರೂ ಲೌಕಿಕ ಕೃಷಿಯಲ್ಲೂ ಪ್ರಗತಿ ಸಾಧಿಸಿ 'ಲೌಕಿಕ ಕೃಷಿ ಆಧ್ಯಾತ್ಮ ಕೃಷಿಗೆ ಆಧಾರವಾಗಿದೆ' ಎಂಬ ವೃತ್ತಿ ಜಾಣ್ಮೆಯನ್ನು ಪ್ರತಿಪಾದಿಸುತ್ತಾರೆ. ಶ್ರಮದಿಂದ ತನುಬಳಲಿದರೂ ಮನಸ್ಸಿಗೆ ನೆಮ್ಮದಿ ಸಿಕ್ಕಬೇಕು. ಇಂಥ ಕಾರ್ಯ ಕುಶಲತೆಯೇ ಸಾಫಲ್ಯದ ಗುಟ್ಟು, ತನ್ಮಯತೆ, ತಲ್ಲಿನತೆ, ಪ್ರಾವೀಣ್ಯತೆಗಳೇ ಕಾರ್ಯಸಿದ್ಧಿಗೆ ಮೂಲ ಜೀವಾಳವಾಗಿದೆ. ಇದುವೆ ಪ್ರತಿಯೊಂದು ಕಾರ್ಯದ ಕೃಷಿಯೆಂಬುದನ್ನು ಹಾನಗಲ್ಲ ಶ್ರೀಗಳು ಮನಗಂಡಿದ್ದರು. ಅನುಭವಿಸಿ ಜನಕ್ಕೆ ಬೋಧಿಸುತ್ತಾ ಆಚರಣೆಗೂ ಕೂಡ ತರುವಲ್ಲಿ ಸತತ ಪ್ರಯತ್ನ ಶೀಲರಾಗುತ್ತಿದ್ದರು.

ಒಕ್ಕಲುತನ ಹಾಗೂ ಪಶುಸಂಗೋಪನೆಯ ಪ್ರಯೋಗಕ್ಕೆ ಹಾಗೂ ಪ್ರಾತ್ಯಕ್ಷಿಕೆಗೆ ಶಿವಯೋಗಮಂದಿರ ಒಂದು ವೇದಿಕೆಯಾಯಿತು. ನೂರಾರು ಎಕರೆ ಭೂಮಿಯನ್ನು ದಾನವಾಗಿ

ಪಡೆದರು. "ಶಿವಯೋಗ ಮಂದಿರದ ಮಲಪಹಾರಿ ನದಿಯ ನೀರು ಬಳಸಿ ಡಂಬಕಳ್ಳಿ ಕಡಿಸಿ ಭೂ ಅಭಿವೃದ್ಧಿ ಮಾಡಿ ೪೦ ಎಕರೆ ಭೂಮಿಯನ್ನು ಕೃಷಿ ಯೋಗ್ಯವಾಗಿ ಪರಿವರ್ತಿಸಿ ಆಗಿನ ಲಾವಣಿ ರೂಪದಲ್ಲಿ ರೈತರಿಗೆ ನೀಡಿ ವರ್ಷಕ್ಕೆ ೬೦ಸಾವಿರ ರೂಪಾಯಿ ಆದಾಯ ಬರುವಂತೆ ಮಾಡಿದರು"[೧೭]

ಬರಗಾಲದ ಭೂಮಿಯ ನಾಡು ಶಿವಯೋಗ ಮಂದಿರ ಅದರ ಅಭಾವ ನೀಗಿಸಲು ಚಿಂತಿನೆ ಮಾಡಿ "ಮಹಾಕೂಟ ಕೆಂದೂರ ಗ್ರಾಮದಲ್ಲಿ ಬಿಡಿಗಾಂವಲಿಯಿಂದ ನೀರು ಪೂರೈಸಿ ಫಲತ್ತಾದ ಭೂಮಿಯನ್ನಾಗಿಸಿ ಭತ್ತ, ಕಬ್ಬು, ಬಾಳೆ, ತೆಂಗು, ಕಾಯಿಪಲ್ಯ, ಹಣ್ಣು-ಹಂಪಲ ಬೆಳೆದು ಪ್ರಗತಿ ತೋರಿದರು. ಈ ಸುಧಾರಣೆ ಸಂಸ್ಥೆಗೆ ಮಾತ್ರ ಸೀಮಿತಗೊಳಿಸದೆ ಒಕ್ಕಲಿಗರಿಗೆ ಆದರ್ಶವನ್ನಾಗಿಸಿದರು."[೧೮]

ವಿದ್ಯುತ್ ಸಮರ್ಪಕ ಇಲ್ಲದ ಕಾಲದಲ್ಲೂ ಮಲಾಪಹಾರಿ ನದಿ ಪಕ್ಕದ ಭೂಮಿಯಲ್ಲಿ ಬೆಳೆದ ಮುಳ್ಳು ಗಿಡಗಳನ್ನು ಕಡಿಸಿ "ಭೂಮಿಯನ್ನು ಸಮಪಾತಳಿ ಮಾಡಿಸಲು ಊಳುವ ಯಂತ್ರದ ನೇಗಿಲನ್ನು ಹೆಚ್ಚು ಹಣವಿಕ್ಕಿ ಮೊಟ್ಟ ಮೊದಲು ಶಿವಯೋಗ ಮಂದಿರದಲ್ಲಿ ತರಿಸಿ ಊಳಿಸಿದರು. 'ರಸ್ಟನ್' ಎಂಬ ಆಯಿಲ್ ಇಂಜನ್ ತಂದು ನದಿ ನೀರನ್ನು ಕೃಷಿ ಭೂಮಿಗೆ ಹರಿಸಿದರು. ಕೃಷಿ ವಿಜ್ಞಾನವು ಕನ್ನಡ ನಾಡಿಗೆ ಬಂದ ಪ್ರಥಮದಲ್ಲಿಯೇ ಅದರ ಉಪಯೋಗವನ್ನು ಪಡೆದ ಮೊದಲ ಸ್ವಾಮಿಗಳೆಂಬ ಹೆಗ್ಗಳಿಕೆ ಶ್ರೀ ಕುಮಾರಯೋಗಿಗಳಿಗೆ ಸಲ್ಲತಕ್ಕದ್ದು."[೧೯]

ಪೂಜ್ಯರ ದೂರದೃಷ್ಟಿಯಿಂದ ಭೂ ಸಾಗುವಳಿಯ ಉತ್ಪನ್ನ ಹಾಗೂ ಉಪಕಸುಬುಗಳ ಔಚಿತ್ಯ ಅರಿತು ಶಿವಯೋಗ ಮಂದಿರದಲ್ಲಿ ತರಬೇತಿ ಪಡೆದ ವಟುಗಳಿಗೂ ಕೃಷಿ ಕಾಯಕದಲ್ಲಿ ತನ್ಮಯರಾಗಿ ಬ್ರಹ್ಮಚಾರ್ಯ ವ್ರತ ಪಾಲಿಸುತ್ತಾ ತಮ್ಮ ಅಂತರಂಗ-ಬಹಿರಂಗ ವ್ಯಕ್ತಿತ್ವ ರೂಪಿಸಿಕೊಂಡು ಮುಂದೆ ಮಠಾಧಿಪತಿಗಳಾದಾಗ ಮಠಗಳಿಗೆ ಇರುವ ಜಮೀನುಗಳನ್ನು ಘನವಾಗಿ ಬಳಕೆ ಮಾಡಲು ಸಾಧ್ಯವೆಂದು ಈ ಬಗ್ಗೆಯು ಮಾರ್ಗದರ್ಶನ ಮಾಡಿ ಆರ್ಥಿಕವಾಗಿ ಸ್ವಾವಲಂಬಿಗಳಾಗಿ ನಡೆಯಲು ದಾರಿದೀಪವಾದರು. ಸುತ್ತಮುತ್ತಲಿನ ಹಿರಿಯ ರೈತರಿಂದ ಸ್ವತಃ ತಾವೇ ಕ್ಷೇತ್ರಕಾರ್ಯದಲ್ಲಿ ಈ ಬಗ್ಗೆ ವಿವರವನ್ನು ಕೇಳಿದ್ದೇವೆ. ಕೃಷಿಕೃತ್ಯಕ್ಕಾಗಿ ಶಿವಯೋಗ ಮಂದಿರದ ಜಾತ್ರಾಮಹೋತ್ಸವದಲ್ಲಿ ಪ್ರತಿಭಾರಿ ಕೃಷಿ ತಜ್ಞರನ್ನು ಬರಮಾಡಿಕೊಂಡರು. ಆಧುನಿಕ ಉಪಕರಣ ಪ್ರದರ್ಶನ, ಪ್ರಾತ್ಯಕ್ಷಿಕೆ ಏರ್ಪಡಿಸಿ ರೈತರಿಗೆ ತಿಳುವಳಿಕೆ ನೀಡುತ್ತಿದ್ದರು. ಅದು ಇಂದಿಗೂ ಜಾರಿಯಲ್ಲಿದೆ.

ಇನ್ನೊಂದೆಡೆ ಕೃಷಿಗೆ ಅಗತ್ಯವಾಗಿ ಬೇಕಾದ ಗೊಬ್ಬರಕ್ಕಾಗಿ, ಪಶು ಸಂಗೋಪನೆಗಾಗಿ ನೂರಾರು ದನಗಳನ್ನು, ಉಳುಮೆ ಮಾಡಲು ಎತ್ತುಗಳನ್ನು ಶಿವಯೋಗ ಮಂದಿರಕ್ಕೆ ತಂದರು.

ಜೊತೆಗೆ ನೂರಾರು ತಳಿ ಆಕಳಗಳನ್ನು ಜೋಪಾನ ಮಾಡಿದರು. ಹಾಲು ವಟುಗಳಿಗೆ ಆಹಾರವಾಯಿತು. ಸಗಣಿ ಭಸ್ಮ ತಯಾರಿಗೂ, ಹೊಲಗಳಿಗೆ ಉತ್ತಮ ಗೊಬ್ಬರವಾಗಲು ಉಪಯೋಗಿಸಿದರು. ಪಶುಸಂಗೋಪನೆಗೆ ಬಯಲು ನಾಡಿಗಿಂತ ಮಲೆನಾಡು ಸೂಕ್ತವೆಂದು ಅರಿತು ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲೂಕಿನ ಕಪ್ಪನಹಳ್ಳಿ ಶಾಖಾ ಶಿವಯೋಗ ಮಂದಿರ ಕುಮದ್ವತಿ, ವೃಷಭ ನದಿಗಳ ಸಂಗಮ ಸ್ಥಾನ. ಅಲ್ಲಿ ನೀರು, ಹುಲ್ಲಿನ ಸೌಕರ್ಯವಿರುವುದನ್ನು ಅರಿತು ಅಲ್ಲಿಯೇ ಆ ಭಾಗದ ೨೦೦ ಆಕಳ ಸಂಗ್ರಹಿಸಿ ಪೋಷಣೆ ಮಾಡಿದರು. "ಹಾಲಪ್ಪ ಎಂಬುವರು ನೀಡಿದ ೬೯ ಎಕರೆ ಭೂಮಿಯನ್ನು ಹೆಚ್ಚುವರಿ ಭೂಮಿಯನ್ನು ಸಾಗುವಳಿ ಮಾಡಿ ನೂರಾರು ಎಕರೆ ಭತ್ತ ಬೆಳೆಯುತ್ತಾರೆ."[೨೦] ಈಗಲೂ ಈ ಮಠದವರು ನೂರಾರು ಚೀಲ ಭತ್ತ ಬೆಳೆಯುತ್ತಿದ್ದರೆ.

ಬನಶಂಕರಿ ದಾರಿಯ ಹೊಲದಲ್ಲಿ ಒಡ್ಡು ಹಾಕಿಸಿ ಸಾಗುವಳಿ ಮಾಡಿದರು. ೭ ರಿಂದ ೮ ಎಕರೆ ಮಾತ್ರ ನೀರಾವರಿಯಾಯಿತು. ಉಳಿದ ೩೦ ಎಕರೆ ಭೂಮಿಯನ್ನು ರೈತರಿಗೆ ವ್ಯವಸ್ಥೆ ಮಾಡಲು ಹೇಳಿ ಅಲ್ಲಿಗೆ ನೀರಿನ ಪೈಪಲೈನು ಮಾಡಿಸಿ "ಎರಡು ವರ್ಷ ಹೋರಾಟ ನಡೆಸಿ ವಿದ್ಯುತ್ ಸರಬರಾಜುಗೆ ಪರವಾನಿಗೆ ಪಡೆದು ಸಾವಿರಾರು ರೂಗಳು ಖರ್ಚುಮಾಡಿ ನೀರಾವರಿ ಪ್ರಾರಂಭಿಸಿದರು. ಇದರಿಂದ ಶಿವಯೋಗ ಮಂದಿರಕ್ಕೆ ೪೦ ರಿಂದ ೫೦ ಸಾವಿರ ಆದಾಯ ದೊರೆಯಿತು. ರೈತರಿಗೆ ಉದ್ಯೋಗವು ಸಿಕ್ಕಿದಂತಾಯಿತು. ಇದರಿಂದ ದಾಸೋಹಕ್ಕೆ ಪ್ರಸಾದ ನೀಡಲು ಅಕ್ಕಿಯನ್ನು ಸಂಸ್ಥೆಯೇ ಬೆಳೆದ ಶ್ರೇಯಸ್ಸು ಲಭಿಸಿತು."[೨೧]

'ಹಸಿದ ಹೊಟ್ಟೆಗೆ ಆಧ್ಯಾತ್ಮ ಹಿಡಿಸುವುದಿಲ್ಲ, ಕಾಯಕ ಶೀಲನಾದವನು ಆಧ್ಯಾತ್ಮ ಕೃಷಿಯನ್ನು ಚೆನ್ನಾಗಿ ಸಾಧಿಸಬಲ್ಲನು' ಎಂಬುದನ್ನು ಜನತೆಗೆ ಮನವರಿಕೆ ಮಾಡಿದರು. ಹೇಳುವುದಕ್ಕಿಂತ ಮೊದಲು ಸ್ವತಃ ತಾವೇ ಅದನ್ನು ಅನುಷ್ಠಾನಕ್ಕೆ ತರುತ್ತಿದ್ದರು. "ಒಕ್ಕಲುತನಕ್ಕೆ ಉಜ್ವಲ ಭವಿಷ್ಯ ಬರಬೇಕಾದರೆ ಒಕ್ಕಲಿಗರು ಆರ್ಥಿಕ ಬಲವನ್ನು ಪಡೆಯಬೇಕು. ಅದಕ್ಕಾಗಿ ಸಹಕಾರಿ ರೂಪದಲ್ಲಿ ಆಗಿನ ಕಾಲದಲ್ಲೆ ಸಿದ್ಧೇಶ್ವರ ಬ್ಯಾಂಕ್‌ವೊಂದನ್ನು ೧೯೧೯ರಲ್ಲಿ ಬಾಗಲಕೋಟೆಯಲ್ಲಿ ಸ್ಥಾಪಿಸಿದರು."[೨೨] ಬೆಳೆದ ವಸ್ತುಗಳಿಗೆ ನ್ಯಾಯವಾದ ಲಾಭದ ಮಾರಾಟಕ್ಕೆ ವ್ಯವಸ್ಥಿತ ಮಾರುಕಟ್ಟೆ ನಿರ್ಮಾಣ ಅಗತ್ಯವೆಂದು ಪ್ರತಿಪಾದಿಸಿ ಅವಕಾಶ ಒದಗಿಸಿದರು. ಯೋಗ-ಭೋಗಗಳ ಸಮನ್ವಯ ದೃಷ್ಟಿಯ ನಮ್ಮ ಕುಮಾರಸ್ವಾಮಿಗಳು ಹಸಿರು ಕ್ರಾಂತಿಗೆ ನಾಂದಿ ಹಾಡಿದ ಮೊದಲ ಹರಿಕಾರರು. ಅದಕ್ಕೆ ಶಿವಯೋಗ ಮಂದಿರದ ಸುತ್ತಮುತ್ತ ಈಗ ಇರುವ ನೀರಾವರಿ ಭೂಮಿಯೇ ಸಾಕ್ಷಿಯಾಗಿದೆ. ಅದರ ಫಲ ಇಂದಿಗೂ ಸಿಗುತ್ತಿದೆ.

'ಕೋಟಿ ವಿದ್ಯೆಗಿಂತಲೂ ಮೇಟಿ ವಿದ್ಯೆಯು ಮೇಲು' 'ಕರ್ಷತೋ ನಾಸ್ತಿ ದುರ್ಭಿಕ್ಷಂ' ಎಂಬ ಗೈಮೆಯ ಹಿರಿಮೆಯನ್ನು ಬೆಳಕಿನ ಭಾಗ್ಯವನ್ನು ಯಥಾವತ್ತಾಗಿ ಗಮನಿಸಿದ ಸ್ವಾಮಿಗಳು

ಅತಿವಿರಳ. ಆದರೆ ಕುಮಾರೇಶ್ವರರು ಶಿವಯೋಗ ಮತ್ತು ನೇಗಿಲಯೋಗ ಎರಡೂ ಶಿವಯೋಗ ಮಂದಿರದಲ್ಲಿ ನಡೆಯುವಂತೆ ಮಾಡಿದರು.

ಸಮಾಜದ ಪ್ರಗತಿಗಾಗಿ, ಮುನ್ನಡೆಗಾಗಿ ಶಿವಯೋಗ ಮಂದಿರಲ್ಲಿ ಗುಡಿಗಾರಿಕೆ, ಕೈಗಾರಿಕೆ, ವ್ಯಾಪಾರ, ಒಕ್ಕಲುತನ, ಪಶುಸಂಗೋಪನೆ, ಮುಂತಾದ ಉಪಕಸುಬನ್ನು ಅನುಷ್ಠಾನಗೊಳಿಸಿದರು. ಇವು ಪರಮಪೂಜ್ಯರ ಸಾಮಾಜಿಕ ಕಳಕಳಿ, ದೂರದೃಷ್ಟಿ, ಸಮಾಜದ ಬಗೆಗಿನ ಅಭಿಮಾನ, ಪ್ರೀತಿಯನ್ನು ತೋರಿಸುತ್ತದೆ. ಜೊತೆಗೆ ಶಿವಯೋಗಿಯ ಶಿವಯೋಗ ಮಂದಿರ ಅದರೊಳಗಿನ ಮುಂದಿನ ಸಮಾಜ ರಕ್ಷಕ ಕೂಸುಗಳಿಗೆ ಯಾವುದೇ ರೀತಿಯ ಆಪತ್ತು, ತೊಂದರೆಗಳು ಎದುರಾಗದಿರಲೆಂದು ಬಯಸಿದರು. ಅನೇಕ ಮೂಲದಿಂದ ಆರ್ಥಿಕ ಹರಿವು ಸದಾ ಹರಿದು ಸಂಪದ್ಭರಿತವಾಗಿರುವಂತೆ ಮಾಡಿದರು. ಈ ಎಲ್ಲಾ ಪ್ರಯತ್ನಗಳಲ್ಲಿ ಎದುರಾದ ಸಮಸ್ಯೆಗಳನ್ನು ಬಿಚ್ಚಿಡುವುದೇ ಇಲ್ಲಿನ ಪ್ರಮುಖ ಉದ್ದೇಶವಾಗಿತ್ತು.

ಭವಿಷ್ಯದಲ್ಲಿನ ನಿಯೋಜಿತ ಶಿವಯೋಗ ಮಂದಿರವು ಆರ್ಥಿಕ ಸ್ವಾವಲಂಬನೆ ಹೊಂದಿರಬೇಕೆಂಬ ಅಭಿಲಾಷೆಯಿಂದ ವಾರದ ಮಲ್ಲಪ್ಪನವರು ಬಾಗಲಕೋಟೆಯ ನಾಲ್ಕನೇ ಶ್ರೀ ಮದ್ವೀರಶೈವ ಮಹಾಸಭೆಯ ನಿರ್ಣಯಗಳ ಮಂಡನೆಯ ಕಾಲಕ್ಕೆನೇ ಒಂದು ಕ್ರಮಬದ್ಧವಾದ ಸಲಹೆಯೊಂದನ್ನು ನೀಡಿದ್ದರು. ಭಿಕ್ಷಾವೃತ್ತಿ ಈ ಮಂದಿರವನ್ನು ಯೋಜಿತ ರೀತಿಯಲ್ಲಿ ಕಾಲಾಂತರದವರೆಗೆ ಮುನ್ನಡೆಸುವಲ್ಲಿ ಸಮಸ್ಯೆಗಳಾಗಬಹುದು. ಆ ಕಾರಣವಾಗಿ ಉದಾರ ಧನಿಕರ, ಉದ್ಯೋಗಸ್ಥ ಪ್ರಮುಖರಿಂದ ನಿಧಿಯನ್ನು ಸಂಗ್ರಹಿಸಿ ಒಂದು ಹತ್ತಿಯ ಗಿರಣಿಯನ್ನು ಸಂಪನ್ಮೂಲವಿರುವ ಕಡೆ ಸ್ಥಾಪಿಸುವುದು. ಅದರ ಬಂಡವಾಳಕ್ಕಾಗಿ ಐದುನೂರು ರೂಪಾಯಿಗಳ ಷೇರು ಮಾಡಿ ಅದರಿಂದ ಹತ್ತುಲಕ್ಷ ನಿಧಿ ಕೂಡಿಸಿ ನೂಲಿನ, ಹತ್ತಿ ಗಿರಣಿ ಸ್ಥಾಪಿಸುವುದು. ಎಲ್ಲಾ ರೀತಿಯ ವೆಚ್ಚವನ್ನು ಕಳೆದು ಉಳಿದ ಲಾಭದಲ್ಲಿ ಶಿವಯೋಗ ಮಂದಿರದ ಮತ್ತು ಮತ್ತೋಪಯೋಗಿ ಕಾರ್ಯಗಳಿಗೂ ಅದನ್ನು ಬಳಸುವುದು. ಅದರಂತೆ ಮುಂದೆ 'ಶಿವಾನಂದ ಜಿನ್ನಿಂಗ್' ಫ್ಯಾಕ್ಟರಿ ಸ್ಥಾಪಿಸಿ ಅನೇಕ ತೊಂದರೆ ಹೊಂದಿ ಅದರಲ್ಲಿ ಲಾಭ ಪಡೆಯುವ ವೇಳೆಗೆ ಅದರ ತಂದೆಯಂತಿದ್ದ ಕುಮಾರಸ್ವಾಮಿಗಳು ಮಂದಿರದ ತಾಯಿ ಸ್ವರೂಪರಾದ ಶಿವಬಸವಸ್ವಾಮಿಗಳು ಲಿಂಗೈಕ್ಯರಾಗಿದ್ದರು.

ಇನ್ನೂ ವಾರದ ಮಲ್ಲಪ್ಪನವರು ವೀರಶೈವರು ತಮ್ಮ ಜೀವನೋಪಾಯಕ್ಕೆ ಮಹತ್ತರವಾದ ವ್ಯಾಪಾರವನ್ನು ನಂಬಿಕೊಂಡಿದ್ದರು. ಅದನ್ನು 'ಮುಂಬಯಿ ಚೇಂಬರ್ ಆಫ್ ಕಾಮರ್ಸ್' ಮಾದರಿಯಲ್ಲಿ ವೀರಶೈವ ವ್ಯಾಪಾರ ಸಂಘ ಸ್ಥಾಪಿಸಿ ಆ ಮೂಲಕರು ಶಿವಯೋಗ ಮಂದಿರಕ್ಕೆ ಆರ್ಥಿಕ ಮೂಲ ಹರಿದು ಬರುವಂತೆ ಮಾರ್ಗೋಪಾಯ ರೂಪಿಸಿದರು.

ಹೀಗೆ ಶಿವಯೋಗ ಮಂದಿರ ಸ್ಥಾಪನಾ ಪೂರ್ವದಲ್ಲಿಯೇ ಮಂದಿರದ ನಿರ್ವಹಣೆಗಾಗಿ ಆರ್ಥಿಕ ಮೂಲದ ಬಗ್ಗೆ ಯೋಜನೆ ಮಾಡಲಾತು. ಅದು ದಿನಗಳು ವರುಷಗಳು ಉರುಳಿದಂತೆ ಬೆಳೆಯುತ್ತಾ ಸಾಗಿದೆ. ಇಂದು ಮಂದಿರವು ಆರ್ಥಿಕವಾಗಿ ಸಾಕಷ್ಟು ಸದೃಢವಾಗಿದೆ. ಹೀಗೆ ಭೌತಿಕ ವೃತ್ತಿಯಾಗಿ ಜಿನ್ನಿಂಗ್, ಹತ್ತಿ ಗಿರಣಿ, ಚಿತ್ರಮಂದಿರ, ವ್ಯಾಪಾರ ಮಳಿಗೆಗಳು, ಲಿಂಗ, ವಿಭೂತಿ, ಶಿವದಾರ, ರುದ್ರಾಕ್ಷಿ, ಗೋಸಂರಕ್ಷಣೆ, ಕೃಷಿ ಮೊದಲಾದವುಗಳನ್ನು ಮಂದಿರದ ವತಿಯಿಂದ ಆರಂಭಿಸಿದರು. ಆ ಮೂಲಕ ಗುಡಿಕೈಗಾರಿಕೆಯ ಅನುಷ್ಠಾನಕ್ಕೆ ಪ್ರೇರಣೆ ನೀಡಿದರು. ಮಂದಿರದ ಆರ್ಥಿಕ ಮೂಲಗಳಾಗಿ ಆರಂಭದಲ್ಲಿ ಮಂದಿರಕ್ಕೆ ದಾನವಾಗಿ ಬಂದ ಕೃಷಿ ಹಾಗೂ ಕೃಷಿಯೇತರ ಭೂಮಿ, ಗೋವುಗಳು ಹಾಗೂ ಅದರ ಉತ್ಪನ್ನ, ತಿಂಗಳ ಹುಣ್ಣಿಮೆ ದಿವಸದ ರುದ್ರಾಭಿಷೇಕದ ನಿಧಿ, ವಟು ಸಾಧಕರ ಗಣಾರಾಧನೆಯ ನಿಧಿ, ಗುರು ಕುಮಾರೇಶನ ಪೂಜಾ ನಿಧಿ, ನಿತ್ಯ ದಾಸೋಹ ನಿಧಿ ಯೋಜನೆ, ಸದಾಶಿವ ಮಹಾಸ್ವಾಮಿಗಳ ಪೂಜಾ ನಿಧಿ, ಸುಕುಮಾರ ತ್ರೈಮಾಸಿಕ ಪತ್ರಿಕಾ ನಿಧಿ, ಶ್ರೀ ಮದ್ವೀರಶೈವ ಶಿವಯೋಗ ಮಂದಿರ ಸಂಸ್ಥೆಯ ಪೂಜಾ ನಿಧಿ, ವೈರಾಗ್ಯ ಮಲ್ಲಣಾರ್ಯ ವಾಣಿಜ್ಯ ಮಳಿಗೆ, ಯಳಂದೂರು ಶ್ರೀ ಬಸವಲಿಂಗ ವಿಭೂತಿ ಮಾರಾಟದಿಂದ, ಬ್ಯಾಂಕಿನಲ್ಲಿಟ್ಟ ನಿಧಿಗಳು, ಠೇವುಗಳು ೨೦೦೦ರದಲ್ಲಿ ಪ್ರಾರಂಭವಾದವು. ಶ್ರೀ ಶಿವಯೋಗ ಮಂದಿರದಲ್ಲಿನ ಠೇವಣಿಗಳು, ಭಕ್ತವರ್ಗದ ಕಾಣಿಕೆಗಳು, ದಾನಿಗಳು ನೀಡಿದ ದಾನಗಳು, ಸಚಿವರು, ಮಂತ್ರಿಗಳು ನೀಡಿದ ಸೇವಾ ಕಾಣಿಕೆ, ಪಂಚಾಯತಿ, ಜಿಲ್ಲಾಡಳಿತ ಒದಗಿಸಿದ ನಿಧಿ, ಸರ್ಕಾರದಿಂದ ಒದಗಿಬರುವ ನಿಧಿಗಳು, ಪ್ರಸ್ತುತ ಅಧ್ಯಕ್ಷರ ಜೋಳಿಗೆಗೆ ಬಂದ ಸಂಪತ್ತು. ಇವುಗಳೇ ಆರ್ಥಿಕ ಬಲವಾಗಿ ಮಂದಿರ ಮುನ್ನಡೆಗೆ ಕಾರಣಗಳಾಗಿವೆ.

೨. ಬೌದ್ಧಿಕ ವೃತ್ತಿಗಳು

ಕಾಯಕದಲ್ಲಿನ ಎರಡನೆ ರೂಪವೆಂದರೆ ಬೌದ್ಧಿಕ ವೃತ್ತಿ. ಓದು-ಬರಹಗಳಿಂದಲೂ ಕಾಯಕವನ್ನು ನಿರ್ವಹಿಸಬಹುದೆಂದು ಇಡೀ ಸಮಾಜಕ್ಕೆ ಮನವರಿಕೆ ಮಾಡಿಕೊಟ್ಟು ಶರಣ ಚಿಂತನೆಗಳನ್ನು ಸಮಾಜದಲ್ಲಿ ಅನುಷ್ಠಾನಕ್ಕೆ ತಂದವರು ಹಾನಗಲ್ಲ ಶ್ರೀಗಳು. ಹಾಗಾಗಿ ಬೌದ್ಧಿಕ ವೃತ್ತಿಯಿಂದಲೂ ಸಂಪಾದನೆ ಮಾಡಿ ಬದುಕು ಸಾಗಿಸಬಹುದೆಂಬುದನ್ನು ಆಡಿ-ಮಾಡಿ ತೋರಿಸಿದವರಲ್ಲಿ ಪೂಜ್ಯರು ಮೊದಲಿಗರಾಗಿದ್ದಾರೆ. ದೈಹಿಕ ಶ್ರಮದಿಂದ ಅಲ್ಲದೆ ಮಾನಸಿಕ ಬಲವನ್ನು ಆಧರಿಸಿ ಸಮಾಜಕ್ಕೆ, ಜೀವನಕ್ಕೆ ಅಗತ್ಯವಾದ ವಸ್ತುವನ್ನು ಪೂರೈಸಿಕೊಳ್ಳಬಹುದು ಎಂಬುದನ್ನು ತೋರಿಸಿದರು. ಸಂಸ್ಕೃತಿ ಪರಂಪರೆಯನ್ನು ಮುಂದಿನ ಪೀಳಿಗೆಗೆ ಸಾಗಿಸಲು ಅವರು ರೂಪಿಸಿದ ಬೌದ್ಧಿಕ ವೃತ್ತಿಗಳು ಬದುಕನ್ನು ಕಟ್ಟಿಕೊಡುವುದಲ್ಲದೆ ಆಚಾರ-ವಿಚಾರವನ್ನು ಮುಂದಿನ ಪೀಳಿಗೆ ವರ್ಗಾಯಿಸಿದವು. ಅವರ ಈ ದೂರದೃಷ್ಟಿ ಸಾಮಾನ್ಯರ ಅರಿವಿಗೆ ನಿಲುಕುವಂತದ್ದಾಗಿರಲಿಲ್ಲ ಎಂಬ ಅಂಶವನ್ನು ನಾವು ಇಲ್ಲಿ ಗಮನಿಸಬಹುದಾಗಿದೆ.

ಶಿವಯೋಗಮಂದಿರಲ್ಲಿ ಮಠಾಧಿಪತಿಯಾಗುವ ಸಾಧಕರು ರೂಪಗೊಳ್ಳುವುದರೊಂದಿಗೆ ಕಲಾ ಜಗತ್ತಿನ ಆಚಾರ್ಯ ಪುರುಷರೂ ಸಿದ್ಧಗೊಂಡರು. ಸಂಗೀತಗಾರರು, ಕವಿಗಳು, ಕೀರ್ತನಕಾರರು, ಸಂಶೋಧಕರು, ಆಯುರ್ವೇದ ವೈದ್ಯರು, ಪತಂಜಲಿ ಯೋಗ ಗುರುಗಳು ಹುಟ್ಟಿಕೊಂಡರು. ಶಿವಯೋಗಮಂದಿರದ ಉದ್ದೇಶೋಪಾಯಗಳಲ್ಲಿ ನಾಲ್ಕು ಹಾಗೂ ಹನ್ನೊಂದನೆ ಅಂಶದಲ್ಲಿ ಹೇಳಿರುವಂತೆ ಶಿವಾನುಭವ ಶಿವಯೋಗ ಮೊದಲಾದ ಧಾರ್ಮಿಕ ತತ್ವ ವಿಚಾರಗಳನ್ನು ಪರಿಣಾಮಕಾರಿಯಾಗಿ ಪ್ರಸಾರ ಮಾಡಲು ಸಂಗೀತವನ್ನು ಸಂವಹನ ಮಾಧ್ಯಮವಾಗಿ ಬೆಳೆಸಿದರು.

ಶಿವಯೋಗಮಂದಿರದಲ್ಲಿ ಸಾಧಕರು ಮಾತ್ರ ರೂಪಗೊಳ್ಳದೆ ಬೌದ್ಧಿಕ-ಬೌತಿಕ ಸಾಧಕರು ರೂಪಗೊಂಡರು. ಸಾಮಾಜಿಕ ಮೌಲ್ಯಗಳು ಹಸಿದ ಹೊಟ್ಟೆಯುಳ್ಳವರಿಗೆ ಎಂದೂ ಅರಿಯವು. ಆದ್ದರಿಂದ ಹಸಿವು ಕಳೆಯಬೇಕಾದರೆ ಉದ್ಯೋಗಬೇಕು, ಸಂಪಾದನೆ ಇರಬೇಕು ಎಂಬ ಸೂಕ್ಷ್ಮತೆ ಗ್ರಹಿಸಿದಂತೆ ತೋರುತ್ತದೆ. ಸಮಾಜದ ನಿರೀಕ್ಷೆಗಳನ್ನು ಪೂರೈಸುವ ಅಗತ್ಯಗಳು ಹಲವಾರು ಇವೆ ಎಂಬುದು ಶಿವಯೋಗಮಂದಿರ ಸ್ಥಾಪನಾ ಕಾಲಕ್ಕೆ ಬಲ್ಲವರಾಗಿದ್ದ ಪೂಜ್ಯರು ಅವುಗಳನ್ನು ಈಡೇರಿಸಲು ಯತ್ನಿಸುತ್ತಿದ್ದರು. ಪುರಾಣ, ಪ್ರವಚನಗಳನ್ನು ಪರಿಣಾಮಕಾರಿಯಾಗಿ ವಿಸ್ತರಿಸುವುದರಿಂದ ಕೆಲವು ಸಾಮಾಜಿಕ, ನೈತಿಕ ಹೊಣೆಗಾರಿಕೆಯನ್ನು ಪೂರೈಸಬಹುದು ಎಂಬ ಸತ್ಯವನ್ನು ಅರಿತರು. ಹಾಗಾಗಿ ಕೀರ್ತನೆಗೆ ಮಹತ್ವ ನೀಡಿದರೆ ಅದರಿಂದ ಸಂಗೀತ-ಸಾಹಿತ್ಯಗಳೆರಡೂ ಬೆಳೆಯುತ್ತವೆ ಎಂಬ ದೂರಾಲೋಚನೆಯನ್ನು ಮನಗಂಡರು. ಇದರಿಂದ ಕೀರ್ತನ ಕಲೆ ಬೆಳೆಯಿತು. ಅದನ್ನು ಅವಲಂಭಿಸಿ ಸಂಗೀತ ಪರಂಪರೆ ಹುಟ್ಟಿಕೊಂಡಿತು. ಇದಕ್ಕೆ ಅಗತ್ಯವಾದ ಸಾಹಿತ್ಯ ಸೃಷ್ಟಿಸುವ ಕವಿಗಳು ಹುಟ್ಟಿಕೊಂಡರು. ಸಂಗೀತ-ಸಾಹಿತ್ಯದೊಂದಿಗೆ ಜನತೆಯನ್ನು ಆಕರ್ಷಿಸಲು ಮನರಂಜನೆಯ ಯೋಜನೆಯಾಗಿ ನಾಟ್ಯಸಂಘವನ್ನು ಆರಂಭಿಸಲು ಪ್ರೇರಣೆಯಾದರು.

ಹೀಗೆ ಕರ್ನಾಟಕದಲ್ಲಿ ಕರ್ನಾಟಕ ಗಾಯನ, ನಾಟ್ಯ, ಸಾಹಿತ್ಯ ಕಲೆಯನ್ನು ಅಭಿವೃದ್ಧಿಗೊಳಿಸುವ ಎಲ್ಲ ಪ್ರಯತ್ನಗಳು ನಡೆದವು. ನಾಡಿನ ಎಲ್ಲಾ ವಿದ್ಯಾಸಂಸ್ಥೆಗಳಲ್ಲಿ ಈ ಕಲೆಗಳಿಗಾಗಿ ಕಲಿತರು, ನೇಮಿಸಲ್ಪಟ್ಟರು. ಇದರಿಂದ ಒಂದು ಮಹತ್ವದ ಕಲೆ ಒಂದೆಡೆ ಉಳಿಯಿತು. ಮತ್ತೊಂದೆಡೆ ಈ ಕಲೆಯನ್ನು ಅವಲಂಭಿಸಿದ ಕುಟುಂಬಗಳು ಉಳಿದವು.

ಅಂಧರ ಬಾಳಿಗೆ ಸಂಗೀತವನ್ನು ಅವರ ಕಣ್ಣುಗಳಾಗಿ ನೀಡಿದರು. ಪಂಚಾಕ್ಷರಿ ಗವಾಯಿಗಳಿಗೆ ಈ ಕಲೆಯನ್ನು ದಯಪಾಲಿಸಿ ಸೂಕ್ತ ವೇದಿಕೆ ಒದಗಿಸಿದರು. ಸಾವಿರಾರು ಅಂಧರ ಬಾಳಿಗೆ, ಅಂಗವಿಕಲರಿಗೆ, ಅನಾಥರಿಗೆ ಈ ವಿದ್ಯೆಯನ್ನು ಗವಾಯಿಗಳು ದಯಪಾಲಿಸಿದರು. ಈ ಘನವೇತ್ತ ಕಾರ್ಯಕ್ಕೆ ಆದರ್ಶ ಪುರುಷರಾದವರು ಹಾನಗಲ್ಲ ಶ್ರೀ ಎಂಬ ವಿಚಾರ ಮರೆಯಾಗುತ್ತಿದೆ. ಗವಾಯಿಗಳ ಶಿಷ್ಯ ಪರಂಪರೆಯಲ್ಲಿ ಬಂದ ಪುಟ್ಟರಾಜ ಗವಾಯಿಗಳು ಸಂಗೀತ-ವಾದನ-

ಕೀರ್ತನಾ ಮೂರು ವಿಭಾಗದಲ್ಲಿ ನಿಪುಣರಾದರು. ಇದರೊಂದಿಗೆ 'ಕುಮಾರೇಶ್ವರ ಕೃಪಾ ಪೋಷಿತ ನಾಟ್ಯಸಂಘ' ಸ್ಥಾಪಿಸಿ ಹಾನಗಲ್ಲ ಶ್ರೀಗಳ ಆಶಯವನ್ನು ಪೂರೈಸಿದ್ದಾರೆ. ಕಲಾಕಾರರನ್ನು ಪೋಷಿಸಿ ಬದುಕು ಕೊಟ್ಟಿದ್ದಾರೆ. ಕೀರ್ತನವು ಧರ್ಮಪ್ರಸಾರಕ್ಕೆ ಸಹಕಾರಿಯಾಗಲೆಂದು ಬಯಸಿ ಶ್ರೀಗಳು ಕೊಟ್ಟ ಕೊಡುಗೆಯಾಗಿದೆಯಾದರೂ, ನಾಡಿನ ಹಲವಾರು ಜನರ ಜೀವನವನ್ನು ಅದು ಹಸನಾಗುವಂತೆ ಮಾಡಿತು. ಇಂದು ಅವರುಗಳ ಕೃಪಾಕ್ಷದಲ್ಲಿ ಉಳಿದು-ಬೆಳದು ಬಂದಿರುವುದು ಒಂದು ಇತಿಹಸವೇ ಸರಿ.

ಹೀಗೆ ಒಬ್ಬೊಬ್ಬರು ಒಂದೊಂದು ಕಲೆಯನ್ನು ವೃತ್ತಿಯಾಗಿ ಆರಿಸಿಕೊಂಡು ಕಲಾ ಜಗತ್ತಿಗೆ, ಸಂಸ್ಕೃತಿಗೆ ಕಾಣಿಕೆಯಾಗಿ ಶಿಷ್ಯರನ್ನು ನೀಡಿ ಹೋಗಿದ್ದಾರೆ. ಇಂದು ಗವಾಯಿಗಳ ಗರಡಿಯಲ್ಲಿ ರೂಪಗೊಂಡ ಅವರ ಶಿಷ್ಯ ಪರಂಪರೆ ಸಹಸ್ರಾರು ಸಂಗೀತಗಾರರನ್ನು, ಕಲಾವಿದರನ್ನು, ಕೀರ್ತನಾಕಾರರನ್ನು ನಾಡಿಗೆ ನೀಡಿದ್ದಾರೆ.

ಹಾನಗಲ್ಲ ಶ್ರೀಗಳದು ದಣಿವಿರದ ದುಡಿಮೆಯಾಗಿತ್ತು. ಕಲಾ ಜಗತ್ತಿನ ಮೂಲಬರಹ. ಅಂತಹ ಬರಹಗಾರರನ್ನು ಗುರುತಿಸಿ ಅವರಿಗೆ ಪ್ರೇರಣೆ, ಪ್ರೋತ್ಸಾಹ ನೀಡಿದರು. ದ್ಯಾಂಪುರ ಚನ್ನಕವಿಗಳನ್ನು ಕವಿಯಾಗಿ ಬೆಳೆಸಿದರು. ಡಾ.ಜ.ಚ.ನಿ. ಯಂತಲಿಂಗಪ್ಪ ಮಾಸ್ತರಂತ ಕವಿಗಳನ್ನು ಬೆಳೆಸಿದರು. ಪುಸ್ತಕದ ಮೇಲಿದ್ದ ಪ್ರೀತಿ, ಸಂಶೋಧಕರನ್ನು ಮಠಗಳತ್ತ ಸೆಳೆಯುವಂತೆ ಮಾಡಿದರು. ತಾಡೋಲೆ ಹಸ್ತಪ್ರತಿಗಳ ಕಟ್ಟು ತೆರೆಯಲು ಪ್ರೋತ್ಸಾಹ ನೀಡಿದರು. ಸಂಶೋಧಕರಿಗಾಗಿ ಸಂಪನ್ಮೂಲ ಕ್ರೋಢೀಕರಣ ಮಾಡಿದರು. ಸಂಶೋಧಿತ ವಿಚಾರಕ್ಕೆ ಮುದ್ರಣಾಲಯದ ಭಾಗ್ಯ ಒದಗಿಸಿ ಸಹಾಯ ಧನವಿತ್ತು ಉಳಿಸಿದರು. ಆಯುರ್ವೇದ, ಯೋಗವನ್ನು ವೃತ್ತಿಯಾಗಿ ಬೆಳೆಸಿದರು (ಅಧ್ಯಾಯ-೪ ಪಠ್ಯೇತರ ಚಟುವಟಿಕೆಯಲ್ಲಿ ಈ ಬಗ್ಗೆ ವಿವರಿಸಲಾಗಿದೆ).

ಹೀಗೆ ಕೇವಲ ಬೌದ್ಧಿಕ ವೃತ್ತಿಯನ್ನಷ್ಟೆ ರೂಪಿಸದೆ ಭೌತಿಕ ಅಂಶಗಳಿಗೂ ವೃತ್ತಿಯ ಸ್ಥಾನಮಾನ ಒದಗಿಸಿದರು. ಆ ಮೂಲಕ ಅನೇಕರಿಗೆ ಪ್ರಭಾವ ಬೀರಿದರು. ಅದರಿಂದ ಬೌದ್ಧಿಕ ಕ್ಷೇತ್ರಕ್ಕೆ ನೂತನ ಲೇಖಕರು, ಬರಹಗಾರರು, ಸಂಗೀತ, ನಾಟ್ಯ, ಕೀರ್ತನಾಕಾರರು ಬರುವಂತೆ ಮಾಡಿದರು.

ಪೂಜ್ಯ ಹಾನಗಲ್ಲ ಶ್ರೀಗಳು ಪ್ರಚಾರ ಪ್ರಿಯರಲ್ಲ. ತಮ್ಮ ಕಾರ್ಯಕ್ಷೇತ್ರಕ್ಕೆ ಉದ್ದೇಶವನ್ನು ಅವರು ಎಂದು ಹೇಳಲಿಲ್ಲ, ಎಲ್ಲಿಯೂ ದಾಖಲೆ ರೂಪದಲ್ಲಿ ಉಳಿಸಲು ಯತ್ನಿಸಲಿಲ್ಲ. ಪ್ರಚಾರದಿಂದ ದೂರ ಉಳಿದು ಸಮಾಜವೇ ಜಂಗಮ, ಸಮಾಜ ಸೇವೆಯೇ ಲಿಂಗಾರ್ಚನೆ ಎಂದು ನಡೆದು ನುಡಿದು ತೋರಿಸಿದರು. ಶಿವಯೋಗಮಂದಿರ ಕೇವಲ ವಟುಗಳ ಪಾಠಶಾಲೆ ಆಗಿರಲಿಲ್ಲ. ಅದು ಭೌತಿಕ, ಬೌದ್ಧಿಕ ವೃತ್ತಿಗಳ ಪ್ರಯೋಗಕ್ಕೆ ಶಾಲೆಯಾಗಿತ್ತು. ಇಂದಿಗೂ

ಸಂಗೀತ, ಕೀರ್ತನಕಾರರು ಉಳಿದಿದ್ದಾರೆ ಎಂದರೆ ಅದು ಶ್ರೀಗಳ ಪ್ರಯತ್ನದ ಫಲ ಎಂದರೆ ತಪ್ಪಾಗಲಾರದು.

ಅಡಿ ಟಿಪ್ಪಣಿಗಳು

೧. ಹಾನಗಲ್ಲ ಕುಮಾರಸ್ವಾಮಿ-ಪು.ಸಂ-೪೫

೨. ಅದೇ-ಪು.ಸಂ-೫

೩. ಅದೇ-ಪು.ಸಂ-೯

೪. ಅದೇ-ಪು.ಸಂ-೯೨

೫. ಅದೇ-ಪು.ಸಂ-೯೩

೬. ವಚನ ಸಾವಿರ-ಪು.ಸಂ-೬೦

೭. ವಿಭೂತಿ ನಿರ್ಮಾಣ ವಿಧಾನ-ಪು.ಸಂ-೨೭

೮. ಅದೇ-ಪು.ಸಂ-೧೭

೯. ಶಿವಯೋಗ ಮಂದಿರದ ಭೇಟಿಯಲ್ಲಿ ಸಂದರ್ಶಿಸಿದಾಗ ಪಡೆದ ಮಾಹಿತಿ

೧೦. ಹಾನಗಲ್ಲ ಕುಮಾರಸ್ವಾಮಿ: ಒಂದು ಅಧ್ಯಯನ-ಪು.ಸಂ-೨೫೫

೧೧. ಶ್ರೀ ಮದ್ವೀರಶೈವ ಶಿವಯೋಗ ಮಂದಿರ-ಪು.ಸಂ-೨೫-ಸಾಧನೆಯ ವರದಿ

೧೨. ಹಾನಗಲ್ಲ ಕುಮಾರಸ್ವಾಮಿ: ಒಂದು ಅಧ್ಯಯನ-ಪು.ಸಂ-೨೫೭

೧೩. ಶ್ರೀ ಮದ್ವೀರಶೈವ ಶಿವಯೋಗ ಮಂದಿರ-ಪು.ಸಂ-೨೭-ಸಾಧನೆಯ ವರದಿ

೧೪. ಅದೇ-ಪು.ಸಂ-೮೭

೧೫. ಹಾನಗಲ್ಲ ಕುಮಾರಸ್ವಾಮಿ ಪುರಾಣ-ಪು.ಸಂ-೧೬

೧೬. ಅದೇ-ಪು.ಸಂ-೧೬

೧೭. ಶ್ರೀ ಕುಮಾರ ಮಹಾಶಿವಯೋಗಿಗಳವರು-ಪು.ಸಂ-೩೦

೧೮. ಕಾರಣಿಕ ಕುಮಾರಯೋಗಿ-ಪು.ಸಂ-೭೨

೧೯. ಶ್ರೀ ಕುಮಾರ ಮಹಾಶಿವಯೋಗಿಗಳು-ಪು.ಸಂ-೩೨

೨೦. ಶ್ರೀ ಮದ್ವೀರಶೈವ ಶಿವಯೋಗ ಮಂದಿರ ಸಾಧನೆ ವರದಿ-ಪು.ಸಂ-೧೭

೨೧. ಮುರುಘಾಮಠದಲ್ಲಿ ದಿನಾಂಕ: ೨೬.೦೫.೨೦೧೦ರಂದು ಉಮಾಪತಿ ಶಾಸ್ತ್ರಿಗಳ ಸಂದರ್ಶನದಲ್ಲಿ ಪಡೆದ ಮಾಹಿತಿ

೨೨. ಅದೇ ದಿನದ ಮಾಹಿತಿ

ಅಧ್ಯಾಯ – ಆರು

ಶಿವಯೋಗಮಂದಿರ : ಸಾಹಿತ್ಯ-ಸಂಶೋಧನ ಚಟುವಟಿಕೆಗಳು

೧. ಸಾಹಿತ್ಯ ಸೃಷ್ಟಿ
೨. ಸಾಹಿತ್ಯ ಸಂಪಾದನ
೩. ಸಾಹಿತ್ಯ ಪ್ರಕಟಣೆ

ಅಧ್ಯಾಯ – ಆರು

ಶಿವಯೋಗ ಮಂದಿರ : ಸಾಹಿತ್ಯ–ಸಂಶೋಧನ ಚಟುವಟುಕೆಗಳು

ಉಣ್ಣುವ ಊಟ, ತೊಡುವ ಬಟ್ಟೆ, ನೆಲೆಸಿದ ನೆಲೆ ಪ್ರತಿಯೊಂದರಲ್ಲಿಯೂ ಶೋಧಗಳಿವೆ. ಇದರ ಫಲವಾಗಿ ಮನುಷ್ಯ ನೀರಿನಾಳಕ್ಕೂ, ಆಕಾಶದೆತ್ತರಕ್ಕೂ, ಭೂಮಿಯಷ್ಟು ವಿಶಾಲಕ್ಕೂ ಸಾಗಿದ್ದಾನೆ. ಮಾನವನ ಶೋಧನಾ ಪ್ರವೃತ್ತಿ ಹೀಗೆ ನಿರಂತರವಾಗಿ ಸಾಗಿದೆ. ಅದು ಆಧುನಿಕ ಯುಗದಲ್ಲಿ ಸಂಶೋಧನೆಗೆ ಮೂಲ ಆಕಾರವಾಗಿದೆ. ಅಂತಹ ಆಕಾರ ಸಾಮಾಗ್ರಿಯನ್ನು ಕಲೆಹಾಕಿ ಇತಿಹಾಸದ ಕಾಲಗರ್ಭದೊಳಗೆ ಹುದುಗಿ ಹೋಗಿದ್ದ ಅನರ್ಘ್ಯ ಜ್ಞಾನದ ಸಂಪತ್ತನ್ನು ಜಗತ್ತಿಗೆ ಸಕಾಲದಲ್ಲಿ ಪರಿಚಯಿಸುವ ಕೆಲಸ ಮಾಡಿದವರು ಹಾನಗಲ್ಲ ಕುಮಾರಸ್ವಾಮಿಗಳು.

"ಆರಂಭದಲ್ಲಿ ಸಂಶೋಧಕರು ಏಕಾಂಗಿಯಾಗಿ ಕೆಲಸ ಮಾಡುತ್ತಿದ್ದರು. ಶ್ರೀಮಂತನೊಬ್ಬನ ಹವ್ಯಾಸವಾಗಿಯೋ, ರಸತಂತ್ರಜ್ಞನ ಅಧ್ಯಯನವಾಗಿಯೋ ಈ ಸಂಶೋಧನೆ ನಡೆಯುತ್ತಿದ್ದಿತು. ಆದರೆ ಈಗಿನ ಸಂಶೋಧನೆ ಸಾರ್ವಜನಿಕ ಹೊಣೆಯಾಗಿದೆ"[೧] ಶ್ರೀ ಮದ್ವೀರಶೈವ ಶಿವಯೋಗಮಂದಿರದ ಸ್ಥಾಪನೆಗೆ ಸಮಾಜ ಬಾಂದವರು ಭಾಗಿಯಾಗಿದ್ದರೂ ಗ್ರಂಥಗಳು, ತಾಡೋಲೆ, ತಾಳೆಗರಿ, ಕೋರಿಕಾಗದ, ಹಸ್ತಪ್ರತಿ ಸಂಗ್ರಹದಲ್ಲಿ ತಾವೊಬ್ಬರೆ ಮೊದಲು ಕಾರ್ಯೋನ್ಮುಖರಾಗಿ ಉಳಿದವರಿಗೆ ಆದರ್ಶಪ್ರಾಯರಾಗಿ ಸ್ಫೂರ್ತಿಯನ್ನು ಒದಗಿಸಿದ್ದಾರೆ. ಜೊತೆಗೆ ಅಪಾರ ಜ್ಞಾನದ ಸಂಪತ್ತನ್ನು ಕ್ರೋಢೀಕರಿಸಿ, ವಿಶ್ಲೇಷಿಸಿ, ಮುದ್ರಿಸಿ ಬೆಳಕಿಗೆ ತಂದಿದ್ದಾರೆ, ತರುವಲ್ಲಿ ಸಹಾಯ ಸಹಕಾರ ನೀಡಿದ್ದಾರೆ.

ಹೀಗೆ ಸಂಶೋಧನೆಗೆ ಶಿವಯೋಗಮಂದಿರ ಸಂಸ್ಥೆಯಲ್ಲಿ ಒಂದು ಅವಕಾಶ ಕಲ್ಪಿಸಿದರು. ಸಾಮಾಗ್ರಿ ಕಲೆ ಹಾಕಿ ಅನೇಕ ಮೂಲದಿಂದ ಜ್ಞಾನದ ಸಂಪತ್ತು ಹರಿದು ಬರುವಂತೆ ಮಾಡಿದರು. ಅಲ್ಲಿ ಅನೇಕ ಸಂಶೋಧಕರು ನೆಲೆ ನಿಲ್ಲುವಂತೆಯೂ, ತಮ್ಮನ್ನು ತಾವೇ ಆ

ಕಾರ್ಯದಲ್ಲಿ ತೊಡಗಿಸಿಕೊಳ್ಳುವಂತೆಯೂ ಮಾಡಿ ವಿದ್ವತ್ ಶಕ್ತಿಗಳನ್ನೆ ಸೃಷ್ಟಿಸಿ ಜ್ಞಾನದ ಹೊಸ ಯುಗವೊಂದಕ್ಕೆ ಕಾರಣೀಭೂತರಾಗಿದ್ದಾರೆ. ಅಂತಹ ಅಂಶಗಳೆಡೆ ಬೆಳಕು ಚೆಲ್ಲುವುದಕ್ಕೆ ಈ ಅಧ್ಯಾಯದ ಆಶಯವಾಗಿದೆ.

೧ ಸಾಹಿತ್ಯ ಸೃಷ್ಟಿ

ಮಹಾಶಿವಯೋಗಿಗಳು ಬಹುಮುಖ ಪ್ರತಿಭೆಯುಳ್ಳವರು ಹಾಗಂತ ಅವರು ಹೆಚ್ಚಿನ ಪ್ರೌಢ ವ್ಯಾಸಂಗ ಮಾಡಿದವರಲ್ಲ. ಸ್ಕೂಲು, ಕಾಲೇಜುಗಳನ್ನು ಕಂಡವರಲ್ಲ. ಆದರೂ ಅವರಲ್ಲೊಬ್ಬ ಕವಿ, ವಿಮರ್ಶಕ, ಸಂಶೋಧಕ ಪೋಷಕನೆಂಬಂತ ವ್ಯಕ್ತಿತ್ವಗಳು ಸ್ಪಷ್ಟವಾಗಿ ರೂಪಗೊಂಡಿದ್ದರು. ತಮ್ಮ ಬಿಡುವಿನ ವೇಳೆಯುಲ್ಲಿ ಅವರು ಅನುಭವದ ಪದಗಳನ್ನು ರಚಿಸುವ ರೂಢಿಯನ್ನಿಟ್ಟುಕೊಂಡಿದ್ದರು. ಸಮಾಜದಲ್ಲಿ ಭಿಕ್ಷಾಟನೆಗೆ ಹೋದಾಗ ಒಬ್ಬ ಸಾಹಿತ್ಯ ಸಂಗ್ರಹಕರಾಗಿಯೂ ನಡೆದಿದ್ದಾರೆ. ಅವರ ಈ ಕಾರ್ಯಕ್ಕೆ ಅದೇಷ್ಟೋ ಜನ ಪ್ರೇರಿತರಾಗಿ, ಕವಿಗಳಾಗಿ, ಸಂಗೀತಗಾರರಾಗಿ, ಕೀರ್ತನಾಕಾರರಾಗಿ, ಸಂಶೋಧಕರಾಗಿದ್ದಾರೆ. ಅಂತಹ ಸಾಧಕರ ಹೆಸರುಗಳನ್ನು ಈ ಅಧ್ಯಾಯದ ಕೊನೆಯಲ್ಲಿ ನೀಡಲಾಗಿದೆ. ಶ್ರೀ ಕುಮಾರ ಶಿವಯೋಗಿಗಳ ಸಾಹಿತ್ಯವು ಜನಜೀವನದ ವಿವಿಧ ನೆಲೆಯನ್ನು ಆಧ್ಯಾತ್ಮದ ನೆಲೆಯಲ್ಲಿ ಗುರು-ವಿರಕ್ತರ ಸಮನ್ವಯತೆಯೊಂದಿಗೆ ಬೆರೆಸಿ ಶ್ರೀಸಾಮಾನ್ಯರಿಗೂ ತಿಳಿಯುವ ಹಾಗೆ ಬರೆದಿದ್ದಾರೆ. ಇಲ್ಲಿ ಯಾವುದೇ ಆಡಂಬರವಿಲ್ಲದ, ಕಲ್ಪನಾವಿಲಾಸಗಳಲ್ಲದ ಭಾಷಾಶೈಲಿಯಲ್ಲಿ ಸರಳವಾಗಿ ಬರೆದಿದ್ದಾರೆ. "ಶ್ರೀಕುಮಾರಸ್ವಾಮಿಗಳು ತಾವು ಸಾಧಿಸಿದ ಶಿವಯೋಗ ತತ್ವದ ಕುರುಹುಗಳಾದ ಶ್ರೀ ಎಮ್ಮಿಗನೂರಿನ ಜಡೆಯ ಸಿದ್ಧರಿಂದ ಪಡೆದ 'ಶಿವಯೋಗಿ' ಎಂಬ ಅಭಿನಾಮ"[೨] ಶಂಭುಲಿಂಗನ ಬೆಟ್ಟದಲ್ಲಿ ಶಿವಯೋಗಾನುಷ್ಠನಗೈದು ಶ್ರೀ ಬಸವಲಿಂಗರಿಂದ ಶಿವಯೋಗದ ಶಿವಯೋಗಿ ಎನಿಸಿದ್ದು, ತಮ್ಮ ಜೀವನದೂದ್ದಕ್ಕೂ 'ಶಿವಯೋಗ'ವನ್ನೇ ಅನುಸರಿಸಿ ಶಿವಯೋಗ ಮಂದಿರ ಸ್ಥಾಪಿಸಿ, ಶಿವಯೋಗ ಮುದ್ರೆ ಸೃಷ್ಟಿಸಿದ್ದರಿಂದ ತಮ್ಮ ಸಾಹಿತ್ಯ ರಚನೆಯ ಅಂಕಿತ ನಾಮವನ್ನು ಸಹಜವಾಗಿ 'ಶಿವಯೋಗ' ಎಂದಿರಿಸಿಕೊಂಡರು.'ಶಿವಯೋಗ' ಕಾವ್ಯನಾಮದಿಂದ ಹಾಡುಗಳನ್ನು, ತತ್ವ ಪದಗಳನ್ನು, ಮಂಗಳಾರತಿ ಪದಗಳನ್ನು, ಶತಕಾತ್ರಯ ಸ್ತೋತ್ರಗಳನ್ನು, ನುಡಿಮುತ್ತುಗಳನ್ನು, ನೀತಿ ಸಂಗ್ರಹಗಳನ್ನು ಸಾಹಿತ್ಯ ಲೋಕಕ್ಕೆ ಅರ್ಪಿಸಿದ್ದಾರೆ.

"ಹಾನಗಲ್ಲ ಶ್ರೀ ಕುಮಾರಸ್ವಾಮಿಗಳು ಕೇವಲ ಸಾಹಿತ್ಯದ ಸೃಷ್ಟಿಕರ್ತರಷ್ಟೇ ಆಗಿರದೆ ಪೋಷಕರಾಗಿ, ಪ್ರಕಾಶಕರು, ಶೋಧಕರು, ಪರಿಶೋಧಕರು, ಪರಿಷ್ಕರಣೆಕಾರರು ಮತ್ತು ವ್ಯಾಖ್ಯಾನಕಾರರು ಆಗಿದ್ದರು. ಅದಕ್ಕೆ ಸಾಕ್ಷಿಯಂಬಂತೆ ಅವರು ಶತಕ-ಉದ್ದರಣೆಗಳನ್ನು, ಶತಕತ್ರಯ, ಶ್ಲೋಕತ್ರಯಗಳನ್ನು ಅಸ್ಖಲಿತವಾಗಿ ವ್ಯಾಖ್ಯಾನಿಸಿರುವುದು ಒಂದಾಗಿದೆ. ಅನುಭಾವರ

ಅಭಿಪ್ರಾಯಗಳನ್ನು ಒಂದೆಡೆ ಸಂಗ್ರಹಿಸಿ ಅನುಭಾವ ಸಾಹಿತ್ಯದ ಅಧಿಕೃತ ವಕ್ತಾರರಾಗಿದ್ದರೆಂಬುದಕ್ಕೆ ಅವರ ಸಾಹಿತ್ಯವೆ ಸಾಕ್ಷಿಯಾಗಿದೆ.[೨]

ಧಾರ್ಮಿಕ ಪ್ರಜ್ಞೆಯುಳ್ಳ ಕುಮಾರಶಿವಯೋಗಿಗಳು ಸಾಹಿತ್ಯ ಸೃಷ್ಟಿಯಂತ ಕೃಷಿಗೆ ಅಡಿಯಿಡಲು ಕಾರಣವೇನು? ಎಂಬ ಪ್ರಶ್ನೆಯೊಂದನ್ನು ಉದ್ದೇಶಿಸಿ ಉತ್ತರವನ್ನು ಅರಸುತ್ತಾ ಹೊರಟಾಗ ಶ್ರೀಗಳ ಸಾಹಿತ್ಯ ಸೃಷ್ಟಿಗೆ ಕಾರಣವಾದ ಅಂಶವನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದಾಗಿದೆ. ಪೂಜ್ಯರು ಸಮಾಜದಲ್ಲಿ ಕಂಡುಕೊಂಡಂತಹ ಸಮಸ್ಯೆಗಳಾದ ಪರಕೀಯರ ಆಕ್ರಮಣದ ಪರಿಣಾಮ ಕುಸಿದು ಹೋದ ಸಂಸ್ಕೃತಿಯನ್ನು ಮತ್ತೆ ಕಟ್ಟುವುದು. ಆಂಗ್ಲರ ಆಡಳಿತದಲ್ಲಿ ಬದಲಾದ ಸಮಾಜ ಆಂಗ್ಲ ಭಾಷೆಯ ವ್ಯಾಮೋಹದಲ್ಲಿ ಕನ್ನಡತನ ಕೊಚ್ಚಿ ಹೋಗಿತ್ತು. ಕನ್ನಡ-ಕನ್ನಡಿಗನೆಂಬ ಅಭಿಮಾನವನ್ನು ಎಚ್ಚರಿಸಬೇಕಾಗಿತ್ತು. ಸದಾ ಧಾರ್ಮಿಕ ಚಿಂತನೆಯಲ್ಲಿರಬೇಕಾಗಿದ್ದ ಶರಣರು, ಮಹಾತ್ಮರ ಸ್ಮರಣೆಯಿಲ್ಲದ ಕಾರಣ ಅಂತವರ ಆದರ್ಶವನ್ನು ಸಮಾಜದೆದುರು ತೆರೆದಿಡುವುದು. ಧಾರ್ಮಿಕ, ಸಾಮಾಜಿಕ, ನೈತಿಕ, ಆಧ್ಯಾತ್ಮಕ ಅಂಶಗಳನ್ನೇ ನಂಬಿ ನಡೆಯಬೇಕಿದ್ದ ಗುರು-ವಿರಕ್ತರು ವರ್ಗ ಬೇಧದಲ್ಲಿ ತೊಡಗಿದ್ದರು. ಅವರಲ್ಲಿ ಸಮನ್ವಯತೆ ಸಾರುವ ಸಲುವಾಗಿ, ವೀರಶೈವ ಧರ್ಮದ ತತ್ವ ಸಾರುವ ದೃಷ್ಟಿಯಿಂದ ಸಾಹಿತ್ಯ ಸೃಷ್ಟಿಯಂಥ ಕಾರ್ಯಕ್ಕೆ ತೊಡಗಿದರು ಎಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ.

'ಋಷಿಯಾಗದವನು ಕವಿಯಾಗನು' ಎಂಬ ತಾತ್ವಿಕ ತತ್ವದರ್ಶಿಗಳಾದ ಶ್ರೀಗಳವರು ಶಿವಯೋಗಿಯಾಗಿದ್ದರೂ, ಪರಮರ್ಷಿಯಾಗಿದ್ದರು. ಶ್ರೀಗಳವರು ಜೀವನದ ಸಿಹಿ-ಕಹಿಗಳನ್ನು ಅನುಭವಿಸಿ ಅವೆರಡನ್ನೂ ಮೀರಿ ನಿಂತ ರಸಯೋಗಿಯಾಗಿದ್ದರು. ಅವರ ಅನುಭವ ಅಂತರಾಳದಿಂದ ಮೂಡಿ ಬಂದ ಭಾವಗೀತೆಗಳಲ್ಲಿ ಅಪಾರ ಅನುಭವ ತುಂಬಿದೆ. ಅಂತಹ ಅಪರೂಪದ ಭಾವಗೀತೆಯ ಆಯ್ದ ಭಾಗಗಳ ಮೊದಲ ಚರಣವನ್ನು ಮಾತ್ರ ಇಲ್ಲಿ ನಮೂದಿಸಲಾಗಿದೆ. ಅವು ಇಂತಿವೆ.

೧. ಮಾನವಾ ನೀನಾರೋ? ಕಾಯ ।(ರಾಗ ದರ್ಬಾರಿ ಕನಡಾ)

೨. ಶಾಂತಿ ಸುಖವ ಕೊಡು ಬೇಗನೆ ಶಿವ ।(ರಾಗ ದರ್ಬಾರಿ) ಕನಡಾ)

೩. ಮನವನು ಪರಿಪಾಲಿಸು ನೀ ಜ್ಞಾನದಾನ ಮಾಡಿ ಶಿವ ।(ರಾಗ-ಕೇದಾರ)

೪. ದೇವಾ ಪೊರೆಯೋ ಭವಮಾಲೆಯ ಜಿತ ।(ರಾಗ-ಸಿಂಧೂರ)

೫. ದೇವ, ದೇವ । ಜನಗುಣದ ಜೀವದಿ ।(ರಾಗ-ಜೀವನ್‌ಪುರಿ)

೬. ಮಾರಾರಿಯೆ ಪಾಲಿಸು ಕಾಲಾರಿ ಬೇಗ ।(ರಾಗ-ಜುಂಜುಟಿ)

೭. ಭೋದೇವ ಗಿರಿಜಾಧವ । ಮುದವಿಲಸಿತ ಮದಹಿತ(ರಾಗ-ಆನಂದ ಭೈರವಿ)

೮. ಪಾಹಿ ಶಿವ ನೀ ಪಾಹಿ ಶಿವ (ರಾಗ-ಪಹಡಿ)

೯. ಶಂಕರ ಕಾಯೊ ಸದಾ । ಕಿಂಕರರನು (ರಾಗ ಪೀಲು)

೧೦. ವೀರಶೈವಾಚಾರ ಪರಾ ।(ರಾಗ-ಭೈರವಿ)

೧೧. ಪರಮಶಿವಯೋಗದ ಸಾರ ।(ರಾಗ-ಭೂಪ)

೧೨. ದೇವ । ಕಾಯೋ ನೀ ಮಾಯಾಲೇತಸಿ(ರಾಗ-ಕೇದಾರ ಗೌಳ)

೧೩. ಶ್ರೀ ಪರಾತ್ಪರ ಬಸವೇಶ್ವರನು ।(ರಾಗ-ದರ್ಬಾರಿ ಕಾನಡಾ)

೧೪. ಗುರುಬಸವೇಶನ ಹರುಷದಿ ಸ್ಮರಿಸೋ ।(ರಾಗ-ದಕ್ಷಿಣಾದಿ ಕಾನಡಾ)

೧೫. ಸುಶಾಂತ ಗುರುವರೇಣ್ಯ(ರಾಗ-ಭೀಮಪಲಾಸ)

೧೬. ಶ್ರೀ ಜಗದ್ಗುರು ವರತೋಂಟದಾರ್ಯ ।(ರಾಗ-ದೇಸ್)

೧೭. ಶಿವಮೂರ್ತಿಯೆ । ತವೆ ಪೂಜಿಸುವೆ(ರಾಗ-ಭೈರವಿ)

೧೮. ಶಿವಮಂಗಳವನು ಕೊಡು ಬೇಗ(ರಾಗ-ಮಾಂಡ)

೧೯. ಮಂಗಳಾರತಿಯನು ನಾನು ಎತ್ತಿ ಪಾಡುವೆ(ರಾಗ-ಜಂಗಲ್)

೨೦. ಕೊಡು ಮಂಗಳವನು ಬೇಗಸಿ ಶಿವನೆ ನೀನಿದನಾ(ರಾಗ-ದೇಸ್)

೨೧. ರೇವಣಸಿದ್ಧ ಗುರುದೇವ । ಭಾವಜ ಹರಜೀವ(ರಾಗ-ಕಾಪಿ)

೨೨. ಮಂಗಲಂ ಗುಣಮಯ ಭರಿತ(ರಾಗ_ಆನಂದ ಭೈರವಿ)

೨೩. ಮಂಗಳಾರತಿ ತುಂಗ ಚರಿತಗೆ(ರಾಗ-ಝಿಝೋಟ)

೨೪. ಜ್ಞಾನ ಜ್ಯೋತಿ ತಾನೆ ಬೆಳಗುತಿದೆ(ರಾಗ-ಝುಂಝೋಟ)

೨೫. ಮಂಗಲವನು ನಾನು ಪಿಂಗದಿ ಪಾಡುವೆನು

೨೬. ಪಾಹಿ ತೋಂಟದಾರ್ಯ

೨೭. ಮಂಗಳಾರತಿ ದೇವಗೆ ಶಿವಯೋಗಿಗೆ(ರಾಗ-ಕಾಂಬೋದಿ)

ಹೀಗೆ ಶ್ರೀ ಕುಮಾರೇಶ್ವರರು ಒಟ್ಟು ೨೭ ಹಾಡುಗಳನ್ನು ರಚಿಸಿದ್ದಾರೆ. ಶ್ರೀಯುತ ಹಿರೇಮಠ ಎಂಬುವರು ಹಾನಗಲ್ಲ ಕುಮಾರಸ್ವಾಮಿ: ಒಂದು ಅಧ್ಯಯನ ಎಂಬ ತಮ್ಮ ಸಂಶೋಧನಾ ಪ್ರಬಂಧದಲ್ಲಿ ಹಾನಗಲ್ಲ ಕುಮಾರಸ್ವಾಮಿಗಳು ರಚಿಸಿದ ಹಾಡುಗಳನ್ನು ಅಧ್ಯಯನದ ಹಿನ್ನೆಲೆಯಲ್ಲಿ 'ನಾಲ್ಕು' ವಿಭಾಗ ಮಾಡಿದ್ದಾರೆ. ಅವು ಹೀಗಿವೆ.

೦೧. ಪಾರಮಾರ್ಥ ಚಿಂತನೆಯ ಹಾಡುಗಳು

೦೨. ಮಹಾತ್ಮರ ಮಹಿಮೆ ಕುರಿತ ಹಾಡುಗಳು

೦೩. ಸ್ತೋತ್ರ ಪದ್ಯಗಳು

೦೪. ಮಂಗಳಾರತಿ ಹಾಡುಗಳು[೪]

ಇಲ್ಲಿ ವಸ್ತುಗಳ ಹಿನ್ನೆಲೆಯಲ್ಲಿ ಆಯ್ದ ಪದ್ಯವನ್ನು ವರ್ಗೀಕರಿಸಿ ವಿಶ್ಲೇಷಣೆ ಮಾಡಿದ್ದಾರೆ. ಹೀಗೆ ಲಭ್ಯವಿರುವ ಈ ಪದ್ಯಗಳನ್ನು ಮೊದಲು ಶ್ರೀ ಚಂದ್ರಶೇಖರ ದೇವರು ಅಡ್ನೂರ ಅವರು ವಿವಿಧ ಮೂಲದಿಂದ ಸಂಗ್ರಹಿಸಿ ಪ್ರಕಾಶನಗೊಳಿಸಿದ್ದಾರೆ. ಅವು 'ಶ್ರೀ ಶಿವಯೋಗ ಮಂದಿರದ ಭಜನಾವಳಿ' ಎಂಬ ಕಿರು ಹೊತ್ತಿಗೆಯಲ್ಲಿ ಇಂದಿಗೂ ಲಭ್ಯವಿದೆ.

ಹಾನಗಲ್ಲ ಪೂಜ್ಯರು ರಚಿಸಿದ ತತ್ವಪದಗಳು, ಮಂಗಳಾರತಿ ಪದ್ಯಗಳು, ಸಮನ್ವಯ ಗೀತೆಗಳು,ನುಡಿಗಟ್ಟುಗಳು. ನಾಡು-ನುಡಿ, ಸಮಾಜ-ಧರ್ಮ, ನೈತಿಕತೆ, ಸಾಂಸ್ಕೃತಿಕ, ಆಧ್ಯಾತ್ಮಿಕ ಸಾಧನೆ, ಜೀವನ ಈ ವಸ್ತುಗಳನ್ನು ಒಳಗೊಂಡಿದೆ. ಸಾಹಿತ್ಯ ಸೃಷ್ಟಿಯ ಶೈಲಿಯನ್ನು ಕುರಿತು ಹೇಳುವುದಾದರೆ ಶ್ರೀಗಳ ಸಾಹಿತ್ಯ ರಚನೆ ಸಾಮಾನ್ಯರಿಗೂ ತಿಳಿಯುವಂತಹ ಸರಳವಾದ ಭಾಷೆಯಲ್ಲಿದೆ. ಇಲ್ಲಿ ಯಾವುದೇ ಆಡಂಬರವಾಗಲಿ ಕಲ್ಪನಾವಿಲಾಸವಾಗಲೀ ಇದರಲ್ಲಿ ಇಲ್ಲವೆಂದೆ ಹೇಳಬಹುದು. ಯಾವುದೇ ವ್ಯಾಕರಣದ, ಅಲಂಕಾರದ ಶಾಸ್ತ್ರೀಯ ನೆಲೆಗಟ್ಟಿಗೆ ಒಗ್ಗಿಕೊಳ್ಳದೇ ಹಳೆಗನ್ನಡ-ಹೊಸಗನ್ನಡ ಭಾಷೆಗಳನ್ನು ಬಳಸಿದ್ದಾರೆ. ಹಾಡುಹಬ್ಬವಾಗಿರುವ ಈ ರಚನೆಗಳು ಹಾಡಲೇಬೇಕೆಂಬ ಉತ್ಕಟಬಯಕೆಯನ್ನು ಹುಟ್ಟಿಸುವಂತಹದ್ದಾಗಿದ್ದು, ಸಂಗೀತದ ಶೈಲಿಗೆ ಯಾವುದೇ ಅಡೆತಡೆಗಳಿಲ್ಲದೆ ಒಗ್ಗಿಕೊಳ್ಳುತ್ತದೆ.

ಪಾರಮಾರ್ಥ, ಮಹಾತ್ಮರ ಕುರಿತ, ಸ್ತೋತ್ರ, ಮಂಗಳಾರತಿ ಈ ಎಲ್ಲಾ ವಿಭಾಗದಲ್ಲಿಯ ಶೈಲಿ, ವಸ್ತುವನ್ನು ಆಧರಿಸಿ ವಿಸ್ತಾರವಾಗಿ ಪದ್ಯಗಳ ಹಿನ್ನಲೆಯಲ್ಲಿ ಶ್ರೀಯುತ ಹಿರೇಮಠರು ತಮ್ಮ ಸಂಶೋಧನಾ ಕೃತಿಯಲ್ಲಿ ವಿಶ್ಲೇಶಣೆ ಮಾಡಿರುತ್ತಾರೆ. ಹಾಗಾಗಿ ಇಲ್ಲಿ ಆ ಬಗ್ಗೆ ಸಂಕ್ಷಿಪ್ತವಾಗಿ ಹೇಳಲಾಗಿದೆ. ಶ್ರೀಗಳು ಶ್ರೀ ಮನ್ನಿರಂಜನ ನಿಜಗುಣ ಶಿವಯೋಗಿ ವಿರಚಿತ 'ವಿವೇಕ ಚಿಂತಾಮಣಿ' ಪರಿಸ್ಕೃತಗೊಳಿಸಿದ್ದಾರೆ.ನಿಜಗುಣ ಶಿವಯೋಗಿಯ 'ನೀತಿ ಸಂಗ್ರಹ' ಪರಿಶೋಧಿಸಿದ್ದಾರೆ. 'ನುಡಿಮುತ್ತುಗಳನ್ನು ಸಂಗ್ರಹಿಸಿದ್ದಾರೆ. ಹೀಗೆ ಸಾಹಿತ್ಯ ಸೃಷ್ಟಿಯೊಂದಿಗೆ ಪೋಷಣೆ ಮತ್ತು ಸಂವರ್ಧನೆಗಾಗಿ ಒಂದು ಸಾಸ್ಕೃತಿಕ ಕ್ರಾಂತಿಯನ್ನು ಮಾಡಿದ್ದಾರೆ. ತಾವು ಮಾಡಿದ ಸಾಹಿತ್ಯ ಪೋಷಣೆಗಳೆಂದರೆ

೧ ತಾಳೆಗರಿ ಕೈಬರಹ ಸಂಗ್ರಹ

೨ ಗ್ರಂಥಗಳ ಮೂಲಕ ಸಾಹಿತ್ಯ ಪ್ರಕಟಣೆ

೩ ಪತ್ರಿಕಾ ಸಾಹಿತ್ಯ ಪ್ರಕಟ

೪ ಕವಿ ಲೇಖಕರಿಗೆ ಸಹಾಯ ಮತ್ತು ಪ್ರೋತ್ಸಾಹ.

ಹೀಗೆ ಅವರು ನಾಲ್ಕು ರೀತಿಯ ಕಾರ್ಯಗಳನ್ನು ನಿರ್ವಹಿಸಿದ್ದಾರೆ. ಕವಿಗಳಾದ ದ್ಯಾಂಪುರ ಚೆನ್ನಕವಿಗಳಿಗೆ "ಚನ್ನಯ್ಯನವರೆ ವ್ಯಾಪಾರ ನಿಮ್ಮ ಕೆಲಸವಲ್ಲ ಕವಿಯಾಗಿ ಬೆಳೆಯಿರಿ!

ಬಾಳಿರಿ! ಶರಣರ ಲೀಲೆಗಳನ್ನು ಹಾಡಿರಿ, ನಿಮ್ಮ ಜೀವನ ಸಾರ್ಥಕವಾಗುವುದು"[೫] ಎಂದು ಹೇಳಿ ಪ್ರೋತ್ಸಾಹ ನೀಡಿ ಕವಿಯಾಗಿ ರೂಪಿಸಿದರು. ಅವರಿಂದ ಹನ್ನೆರಡು ಶತಕ ಹಾಡುಗಳನ್ನು, ಒಂಬತ್ತು ಪುರಾಣ ಕಾವ್ಯ ರಚಿಸುವಂತೆ ಮಾಡಿದರು. ಪಂ.ಸದಾಶಿವಶಾಸ್ತ್ರಿಗಳು ಹುಕ್ಕೇರಿ ಇವರಿಗೂ ಕೂಡ ಪ್ರೇರಣೆಯಾದರು. ಮುಂದೆ ಇವರೂ ಕೂಡ ಹಲವಾರು ಪುರಾಣಗಳನ್ನು ರಚಿಸಿದ್ದಾರೆ. ಲಿಂಗಪ್ಪ ಮಾಸ್ತರು ಇದೇ ಸಾಲಿನಲ್ಲಿ ಬರುವ ಮತ್ತೋರ್ವ ಕವಿ. ಇವರು "ಹೆಣ್ಣು ಮಕ್ಕಳಲ್ಲಿ ಸುಲಭವಾಗಿ ಧರ್ಮ ಜ್ಞಾನ ಉಂಟಾಗಲೆಂಬ ಸದುದ್ದೇಶದಿಂದ ಲಲನಾಚಾರ ದರ್ಪಣ ಕೃತಿ ರಚಿಸಿ ಎರಡು ಸಾವಿರ ಪ್ರತಿ ಮುದ್ರಿಸಿ ಮಾರಾಟ ಮಾಡಿದ್ದಾರೆ. ಅದರಿಂದ ಬಂದ ಉತ್ಪನ್ನವನ್ನು ಮಂದಿರಕ್ಕೆ ಅರ್ಪಿಸಿದ್ದಾರೆ."[೬]

ಹೀಗೆ ಮಂದಿರದಲ್ಲೇ ಸಾಧಕರಾಗಿ ಬಂದ ಡಾ.ಜ.ಚ.ನಿ ಕೂಡ ಈ ನಾಡು ಕಂಡ ಮಠಾಧಿಪತಿಗಳಲ್ಲಿ ಒಬ್ಬ ಶ್ರೇಷ್ಠ ಬರಹಗಾರರು. ವಿಮರ್ಶಕರೂ, ಕವಿಯೂ, ಸಂಪಾದಕರೂ, ಪ್ರಕಾಶಕರೂ, ಆಗಿ ಮೆರೆದಿದ್ದಾರೆ. ಇವರೊಂದಿಗೆ ಶ್ರೀ ಸದಾಶಿವಚಾರ್ಯರು ಹಾಲುಸ್ವಾಮಿ ಮಠ, ಸಖರಾಯಪಟ್ಟಣ, ಪಂ. ಪುಟ್ಟರಾಜ ಕವಿಗಳ ಹೆಸರುಗಳು ಈ ಸಾಲಿಗೆ ಬಂದು ಸೇರುತ್ತವೆ. ಹೀಗೆ ಕವಿಗಳಿಗೆ ಆಶ್ರಯವಿತ್ತು, ಪ್ರೋತ್ಸಾಹವಿತ್ತು ವೀರಶೈವ ಸಾಹಿತ್ಯವನ್ನು ಸಂವೃದ್ಧಗೊಳಿಸಿದರು. ಅಂತೆಯೇ ಸಂಶೋಧಕರಿಗೆ ಆಶ್ರಯ ನೀಡಿ ಸಂಶೋಧಕರನ್ನು ರೂಪಿಸಿ ಪ್ರಕಾಶಕರು ಮುದ್ರಣಾಲಯದಲ್ಲಿ, ಪತ್ರಿಕಾ ರಂಗದಲ್ಲಿ ಹೊಸ ಯುಗವನ್ನೇ ಆರಂಭಿಸಿದರು. ಹೀಗೆ ಅವರ ಸೃಷ್ಟಿಯಲ್ಲಿನ ಕಾವ್ಯಗಳು ಸಾಹಿತ್ಯದ ಬಗೆಗಿನ ಕೃಷಿಯಲ್ಲಿನ ಸೃಜನತೆಗೆ ಹಿಡಿದ ಕೈಗನ್ನಡಿಯಂತಿವೆ.

೨ ಸಾಹಿತ್ಯ ಸಂಪಾದನ

ಶಿವಯೋಗ ಮಂದಿರ ಸಂಸ್ಥೆಯು ಕಾಲ ಕಳೆದಂತೆ ಅಭಿವೃದ್ಧಿಯಾಯಿತು. ಹಲವಾರು ಕಟ್ಟಡಗಳಾದವು, ವಟುಗಳ ಸಂಖ್ಯೆಯಲ್ಲಿ ಹೆಚ್ಚಳಗಳಾದವು, ನೂರಾರು ಹಸುಗಳು ಸೇರಿದವು, ಬೇಸಾಯ ಪದ್ಧತಿಯಲ್ಲಿ ನವೀನತೆ ಜಾರಿಗೆ ಬಂದಿತು. ಮಂದಿರದ ವನದಲ್ಲಿನ ಸಸ್ಯಗಳು ಹೂಬಿಟ್ಟು ಕಾಯಾಗಿ ಹಣ್ಣುಗಳಾದವು, ಗ್ರಂಥಾಲಯ ಆರಂಭವಾಯಿತು. ಇದರೊಂದಿಗೆ ಸಂಸ್ಕೃತಾಧ್ಯಯನಕ್ಕೆ ಶಾಸ್ತ್ರಿಗಳು, ಕನ್ನಡಾಭ್ಯಾಸಕ್ಕೆ ಶಿಕ್ಷಕರೂ, ಯೋಗಾಭ್ಯಾಸಕ್ಕೆ ಪರಿಣಿತರೂ ಆಗಮಿಸಿದರು. ಅಂತಹ ಕಾಲಕ್ಕೆ ಹಾನಗಲ್ಲ ಕುಮಾರಸ್ವಾಮಿಗಳು ಶಿವಯೋಗ ಸಂಸ್ಥೆಯಲ್ಲಿ ಒಂದು ಸಂಶೋಧಕರ ತಂಡವನ್ನೆ ಸಿದ್ಧಗೊಳಿಸಿದರು. ಶಿವಯೋಗಮಂದಿರ ಸಂಸ್ಥೆಯ ಉದ್ದೇಶೋಪಾಯದಲ್ಲಿ ಒಂದಾದ "ಧರ್ಮಗ್ರಂಥಗಳ ಪರಿಶೋಧನೆ ಮಾಡುವುದು, ಮುದ್ರಿಸುವುದು ಮತ್ತು ಪ್ರಸಾರ ಮಾಡುವುದು."[೭] ಇಂತಹದೊಂದು ಉದ್ದೇಶ ಸಾಧನೆಗಾಗಿ ಶ್ರೀಗಳು ಅವಿರತ

ಶ್ರಮಿಸಿ ಮಂದಿರದಲ್ಲಿ ಅಪಾರವಾದ ಜ್ಞಾನದ ನಿಧಿಯನ್ನೆ ತಂದಿರಿಸಿದ್ದಾರೆ. ಅಂತಹ ಜ್ಞಾನದ ಸಂಪತ್ತಿನಲ್ಲಿ ಹೊಕ್ಕು ಅದರ ಆಳ-ಅಗಲವನ್ನು ಕಂಡು, ಅದನ್ನು ವಿಶಾಲ ಸಮಾಜಕ್ಕೆ ಧಾರೆ ಎರೆದು ಶ್ರಮಿಕರ ವಿಚಾರಗಳು, ವಿಚಾರಧಾರೆಗಳು ಹಾಗೂ ಅವರ ಸಾಧನೆಯಲ್ಲಿ ಶ್ರೀ ಕುಮಾರೇಶನ ಪಾತ್ರವೇನು ಎಂಬುದರ ಸಂಕ್ಷಿಪ್ತ ಚಿತ್ರಣವನ್ನು ತೆರೆದಿಡುವುದುದೆ ಇಲ್ಲಿನ ಆಶಯವಾಗಿದೆ.

ಸಮಾಜದ ಅಜ್ಞಾನವನ್ನು ಹೋಗಲಾಡಿಸುವುದಕ್ಕಾಗಿ ಹಾನಗಲ್ಲ ಕುಮಾರಸ್ವಾಮಿಗಳು ಸೃಷ್ಟಿಸಿದ ಐದು ಸೃಷ್ಟಿಗಳಲ್ಲಿ ಒಂದಾದ 'ರಕ್ಷಣ ಸೃಷ್ಟಿ' ಪುಸ್ತಕದ ಮೇಲಿದ್ದ ಪ್ರೀತಿಯನ್ನು ತೋರಿಸುತ್ತದೆ. ವೀರಶೈವ ಸಾಹಿತ್ಯ ತತ್ವ ಸಂಸ್ಕೃತಿಗೆ ಆದ ನಷ್ಟದ ಬಗ್ಗೆ ಅವರಿಗಿದ್ದ ಕಳಕಳಿಯನ್ನು ಅವರು ಕೈಗೊಂಡ ಗ್ರಂಥಗಳ ಶೋಧನೆ, ಸಂಗ್ರಹ ಹಾಗೂ ಗ್ರಂಥ ಸಂಶೋಧಕರನ್ನು ಗುರುತಿಸಿ ಪ್ರೋತ್ಸಾಹಿಸಿದ ರೀತಿಯಿಂದ ಕುಮಾರೇಶನ ಕಾರ್ಯ ವೈಖರಿಯನ್ನು ಇಲ್ಲಿ ಕಾಣಬಹುದಾಗಿದೆ. ಸಾಹಿತ್ಯ ಸಂಸ್ಕೃತಿಗಳ ಜೀವಾಳ ಪ್ರಾಚೀನ ಓಲೆಗರಿ, ಕೋರಿ ಕಾಗದ, ಹೊತ್ತಿಗೆಗಳು. ಇವುಗಳ ರಕ್ಷಣೆಗಾಗಿ ಅದರಲ್ಲಿನ ಅಪಾರ ಜ್ಞಾನದ ನಿಧಿಯನ್ನು ಬಗೆದು ತೆಗೆದ ರೀತಿ ಅದಕ್ಕಾಗಿ ಗುರುತಿಸಲ್ಪಟ್ಟ ಸಂಶೋಧಕರು, ಶ್ರೀಗಳ ಈ ಧರ್ಮ-ಸಂಸ್ಕೃತಿಯ ಕಾರ್ಯಕ್ಕೆ ಮನಸೋತರು. ಇದರಿಂದ ಸ್ವಪ್ರೇರಿತರಾಗಿ ಈ ನಿಟ್ಟಿನಲ್ಲಿ ಈ ಕಾರ್ಯಕ್ಷೇತ್ರಕ್ಕೆ ಧುಮುಕಿದವರ ವಿಚಾರ ಇಲ್ಲಿ ನಿರೂಪಿಸಲಾಗಿದೆ.

ಪರಕೀಯರ ದಾಳಿಗೆ ನಲುಗಿ ಹೋಗಿದ್ದ ವೀರಶೈವ ಸಮಾಜ ತನ್ನ ಕಾಲದ ಅಪೂರ್ವವಾದ ಸಾಹಿತ್ಯ ಸಂಪತ್ತನ್ನು ನಾಶವಾಗದಿರಲೆಂದು ಅದರ ರಕ್ಷಣೆಗಾಗಿ ಮನೆಯ ಗೋಡೆ, ಮಠದ ನೆಲೆಮಾಳಿಗೆ, ಅಟ್ಟದಲ್ಲಿ ಅಡಗಿಸಿಟ್ಟು ಶತಮಾನಗಳೇ ಕಳೆದಿದ್ದವು. ಅಂತಹ ಜ್ಞಾನದ ನಿಧಿಗೆ ಬೆಳಕಿನ ಸ್ಪರ್ಶ ಒದಗಿಸಿದವರು ಹಾನಗಲ್ಲ ಕುಮಾರಸ್ವಾಮಿಗಳು. ಆ ಮೂಲಕ ವಿನಾಶದಂಚಿಗೆ ಜಾರಿದ ಧರ್ಮದ ಸಂಸ್ಕೃತಿಯೊಂದಕ್ಕೆ ಮರು ಜೀವವಿತ್ತವರು. ಆದರೆ ಇಂದು ಸ್ವಧರ್ಮದ ಸಮಾಜ ವಾಹಿನಿಯಲ್ಲಿ ಶ್ರೇಷ್ಠತೆಯ ಆಸನದಲ್ಲಿ ನಿಂತವರು ಅದನ್ನು ಮತ್ತೆ ತಮ್ಮ ಸ್ವಾರ್ಥಕ್ಕೆ ತಿರುಚಿ, ಅನ್ವರ್ಥ ಕಲ್ಪಿಸಿ ಅದಕ್ಕೆ ಶೂದ್ರತೆಯ ಸ್ಥಾನದಲ್ಲಿ ತರಲು ಯತ್ನಿಸುತ್ತಿರುವುದು ಶೋಚನಿಯವಾಗಿದೆ.

"ಇಂದಿಗೆ ಐವತ್ತು ವರುಷಗಳ ಪೂರ್ವದಲ್ಲಿ ಅಮೂಲ್ಯವಾದ ವಚನ ವಾಙ್ಮಯವು ಮನೆ-ಮಠಗಳ ಕತ್ತಲು ಕೋಣೆಯಲ್ಲಿ ಅಸ್ತವ್ಯಸ್ತವಾಗಿ ಬಿದ್ದು ದೂಳು ಮತ್ತು ಹುಳಗಳಿಗೆ ತುತ್ತಾಗಿತ್ತು. ಹಾನಗಲ್ಲ ಕುಮಾರಸ್ವಾಮಿಗಳು ಧರ್ಮತತ್ವ ಸಂಸ್ಕೃತಿ-ಸಾಹಿತ್ಯವನ್ನು ಪ್ರಸಾರ ಮಾಡುತ್ತಿದ್ದರು. ಈ ಪವಿತ್ರ ಕಾರ್ಯದ ಜೊತೆಗೆ ಮನೆಯಿಂದ ಮನೆಯನ್ನು ಮಠದಿಂದ

ಮಠವನ್ನು ಪ್ರವೇಶ ಮಾಡಿ ಗ್ರಂಥ ಶೋಧನೆಯನ್ನು, ಗ್ರಂಥ ಸಂಗ್ರಹವನ್ನು ಮಾಡಿದರು. ಅದರ ಮಹತ್ವವನ್ನು ಜನಾಂಗಕ್ಕೆ ತಿಳಿಯಪಡಿಸಿದರು. ಈಗ ಶಿವಯೋಗ ಮಂದಿರದ ಗ್ರಂಥ ಭಂಡಾರದಲ್ಲಿ ಸಂಗ್ರಹವಾಗಿರುವ ಸಾವಿರಾರು ತಾಳೆಗರಿಯ ಕೋರಿಕಾಗದದ ಮೇಲೆ ಬರೆದಿರುವ ವಿಧವಿಧವಾದ ಗ್ರಂಥಗಳ ಸಮುದಾಯವೇ ಇದಕ್ಕೆ ಸಾಕ್ಷಿಯಾಗಿರುತ್ತದೆ."[೮]

ಈ ಮೇಲಿನ ಮಾತುಗಳಿಂದ ಹಾನಗಲ್ಲ ಕುಮಾರಸ್ವಾಮಿಗಳಿಗೆ ಗ್ರಂಥ ಸಂಗ್ರಹ, ಸಂಶೋಧನೆಯ ಬಗ್ಗೆ ಇದ್ದ ಪ್ರೀತಿ ಹಾಗೂ ಸ್ವಧರ್ಮದ ಸಾಹಿತ್ಯ-ತತ್ವ-ಸಂಸ್ಕೃತಿಯನ್ನು ಪುನಃ ಸ್ಥಾಪಿಸುವುದರ ಬಗೆಗಿದ್ದ ಆಸಕ್ತಿ, ಗ್ರಂಥ ಸಾಹಿತ್ಯ ಪೋಷಣೆ, ಸಂಗ್ರಹ, ಪ್ರಕಟಣೆಗಾಗಿ ಗ್ರಂಥ ಸಂಶೋಧಕರನ್ನು ನಿಯೋಜಿತಗೊಳಿಸಿದ ಬಗ್ಗೆ ಸ್ಪಷ್ಟ ನಿದರ್ಶನವನ್ನು ಒದಗಿಸುತ್ತದೆ.

ಶ್ರೀ ಕುಮಾರಸ್ವಾಮಿಗಳ ಜೀವನದಲ್ಲಿ ಯಾವುದೇ ಕ್ಷೇತ್ರದ ಕಾರ್ಯವಾಗಲಿ ಅದರಲ್ಲಿ ಜಾಗೃತಿಯನ್ನು ಮೂಡಿಸಿದ ಶಕ್ತಿಯನ್ನು ಕಾಣಬಹುದಾಗಿದೆ. ಆ ಶಕ್ತಿಯು ಮುಂದಿನವರಿಗೆ ಸಮರ್ಥ ಸ್ಫೂರ್ತಿಯ ಮಾರ್ಗದರ್ಶಿಯಾಗಿರುತ್ತಿತ್ತು. ಇದಕ್ಕೆ ಅವರು ಕೈಗೊಂಡ ಸಂಶೋಧನೆ, ಸಂಗ್ರಹ ಕಾರ್ಯವೆ ಸಾಕ್ಷಿಯಾಗಿದೆ. ಸಾಹಿತ್ಯವು ರಚನಾಕಾರನಿಂದ ಸಮೃದ್ಧಗೊಂಡು ಸಂಪಾದನೆ, ಪೋಷಣೆಯಲ್ಲಿ ಸಿರಿತನಗೊಳಿಸಿ ಗ್ರಂಥ ಸಂಪಾದಕರಿಗೂ, ಪೋಷಕರಿಗೂ ಗೌರವದ ಸ್ಥಾನ ಕಲ್ಪಿಸುತ್ತದೆ.ಅಂತಹ ಸ್ಥಾನವನ್ನು ಧಾರ್ಮಿಕ ಕಾರ್ಯದೊಂದಿಗೆ ಸಾಹಿತ್ಯೋನ್ನತಿಯ, ಚಾರಿತ್ರಿಕ ಅಂಶವನ್ನು ಪೋಶಿಸಿದ ಕೀರ್ತಿಯಿಂದಾಗಿ ಅವರೊಬ್ಬ ಸ್ವಾಮಿಜಿಯಾಗದೆ, ಸಮಾಜದ ಸಾಹಿತ್ಯ ಕ್ರಾಂತಿಯ ರೂವಾರಿ ಕೂಡ ಆಗಿದ್ದಾರೆ.

ಅರಸೊತ್ತಿಗೆಯ ಅಟ್ಟಹಾಸ, ವಿದೇಶಿಯರ ಆಕ್ರಮಣ, ಪರಧರ್ಮಿಯರ ದಾಳಿ, ಬದಲಾದ ಆಡಳಿತಾತ್ಮಕ ಅಂಶಗಳು ಮುಂತಾದ ಸಾಮಾಜಿಕ ಆಕ್ರಮಣ ಪರಿಸ್ಥಿತಿಯಲ್ಲಿ ವೀರಶೈವ ಸಾಹಿತ್ಯ ವಚನಕಾರರ ವಚನ ಸಂಪತ್ತು. ಮಠಗಳ ಕತ್ತಲೆ ಕೋಣೆಯಲ್ಲಿ, ನೆಲಮಾಳಿಗೆಯಲ್ಲಿ, ಮನೆಗಳ ಮೂಲೆಯಲ್ಲಿ, ಗೋಡೆಯೊಳಗೆ, ಜಗುಲಿಯ ಆಸನದ ಕೆಳಗೆ, ದೇವರ ಗದ್ದುಗೆಯಡಿ ಹೂತು ಹೋಗಿದ್ದವು. ಅವು ಅಭಿಮಾನ, ಭಕ್ತಿಯ ನೆಲೆಯ ಹೆಸರಿನಲ್ಲಿ ಬಚ್ಚಿಟ್ಟುಕೊಂಡು ಕೇವಲ ಪೂಜೆಗಷ್ಟೇ ಅರ್ಹವಾಗಿದ್ದವು. ಅಂತಹ ನಿಗೂಢ ನೆಲೆಯೊಳಗೆ ಅಡಗಿದ್ದ ಸಾಹಿತ್ಯ ವಚನಗಳ ಕಟ್ಟು, ಕೈ ಬರಹದ ಹಸ್ತಪ್ರತಿಗಳು, ತಾಡೋಲೆ ಗ್ರಂಥಗಳು ಅದರೊಳಗೆ ಅಡಗಿದ್ದವು. ಅವು ಅಲ್ಲಿ ಬದುಕುತ್ತಿದ್ದ ಹುಳುಗಳಿಗೆ ಅನಾಯಾಸವಾದ ಮೃಷ್ಟಾನ್ನ ಭೋಜನವಾಗಿದ್ದವು. ಈ ಕಾಗದ, ತಾಳೆಗರಿಗಳು ಈ ಕಾಲ ಸಂದರ್ಭಕ್ಕೆ ಹಾನಗಲ್ಲ ಕುಮಾರಸ್ವಾಮಿಗಳ ಮಿಂಚಿನ ಕಾರ್ಯ ಯೋಜನೆಯ ಫಲವಾಗಿ ಅವು ತಮ್ಮ ತಮ್ಮ ಪಾಲಿನ ಅನಂತ ಕಾಲದ ಆಚರಣೆಯ ನಂಬಿಕೆಯ ಜಾಗವನ್ನು ಒಡೆಯುವಂತೆ ಮಾಡಿ ಅದರ ವಿರಾಟರೂಪವನ್ನು ಸಮಾಜದೆದುರು

ಬರುವಂತೆ ಮಾಡಿದರು.

ಹೀಗೆ ಈ ಹಿಂದೆ ತಿಳಿಸಿದ ಹಾಗೆ ತಾವು ನಾಲ್ಕು ಹಂತದಲ್ಲಿನ ಸಾಹಿತ್ಯ ಪೋಷಣಾಕಾರ್ಯಕ್ಕಾಗಿ ಅವಿರತ ಶ್ರಮಿಸಿದ ಶ್ರೀಗಳು "ತಾವು ಶಿವಪೂಜೆಗೆಂದು ಭಕ್ತರ ಮನೆಗೆ ಹೋದಾಗಲೆಲ್ಲ ಭಕ್ತರು ಕೊಟ್ಟ ಕಾಣಿಕೆಯನ್ನು ಭಕ್ತರಿಗೆ ಮರಳಿಸಿ ಅವರ ಮನೆಯಲ್ಲಿದ್ದ ತಾಳೆಗರಿ, ತಾಡೋಲೆ, ಹಸ್ತಪ್ರತಿ ಕಟ್ಟುಗಳನ್ನು ದೀಪ-ದೂಪಾಧಿಯಿಂದ ಪೂಜಿಸಲ್ಪಡುವ ನೆಲೆಯಿಂದ ಹೊರ ತೆಗೆಯುವಂತೆ ವಿನಮ್ರವಾಗಿ ಬೇಡಿ ತಮ್ಮ ಜೋಳಿಗೆಯಲ್ಲಿ ಹಾಕಿಕೊಂಡು ಬರುತ್ತಿದ್ದರು. ಈ ಅಂಶಗಳನ್ನು ನಾವು ಮಾಹಿತಿ ಸಂಗ್ರಹ ಕಾಲಕ್ಕೆ ಪಡೆದ ಅಂಶವಾಗಿದೆ."[೯]

ಹೀಗೆ ಅನರ್ಘ್ಯವಾದ ಸಾಹಿತ್ಯ ಸಂಪತ್ತನ್ನು ಶೋಧಿಸಿ, ಸಂಗ್ರಹಿಸಿ ಶಿವಯೋಗ ಮಂದಿರದಲ್ಲಿ ತಂದು ಸಂಗ್ರಹಿಸಿದರು. ಅದರ ಸಂರಕ್ಷಣೆಗಾಗಿ ವ್ಯವಸ್ಥೆಗಳನ್ನು ಮಾಡಿದರು. ಹಾಗಾಗಿ ಇವರನ್ನು "ವೀರಶೈವ ಸಾಹಿತ್ಯದ ಪೋಷಕ"ರೆಂದು ಕರೆದರೆ ಅದು ಅತಿಶೋಕ್ತಿಯಾಗಲಾರದು. ಅವರು ಸಾಹಿತ್ಯ, ಸಂಶೋಧನೆ, ಸಂಗ್ರಹ, ಸಂಪಾದನೆ, ಪ್ರಕಟಣಾ ಕಾರ್ಯಕ್ಕೂ ಪ್ರಥಮರಾಗಿ ಶಿವಶರಣರ ವಚನಗಳನ್ನು ಮೊದಲು ಸಂಪಾದನೆ ಮಾಡಿದವರು ಹಾನಗಲ್ಲ ಶ್ರೀ ಕುಮಾರಸ್ವಾಮಿಗಳೇ ಆಗಿದ್ದಾರೆ."[೧೦] ಇವರ ಕಾರ್ಯ ವಿಧಾನವನ್ನು ಮೆಚ್ಚಿ ಆ ಬಗ್ಗೆ ಮೂಡಿಬಂದ ಅಭಿಪ್ರಾಯಗಳು ಹೀಗಿವೆ.

* ಶ್ರೀ ಮ.ನಿ.ಪ್ರ ಪ್ರಭುಸ್ವಾಮಿಗಳು ಬೂದಿಸ್ವಾಮಿಮಠ ಹೊಸಹಳ್ಳಿ ಹೀಗೆ ಬರೆಯುತ್ತಾರೆ. "ಈಗ ವಚನ ವಾಙ್ಮಯ ಪಿತಾಮಹರೆಂದು ಪ್ರಖ್ಯಾತರಾಗಿರುವ ಶ್ರೀ ಫ.ಗು. ಹಳಕಟ್ಟಿಯವರಿಗೆ ಮೊಟ್ಟ ಮೊದಲು ವಚನ ವಾಙ್ಮಯವನ್ನು ಸಂಶೋಧಿಸಲು, ಸಂಗ್ರಹಿಸಲು, ಪ್ರಕಟಿಸಲು ಸಲಹೆ ಸೂಚನೆಗಳನ್ನು, ಸಹಾಯ-ಸಹಕಾರಗಳನ್ನು ಮತ್ತು ತಾವು ಸಂಗ್ರಹಿಸಿದ ಹಲವು ಗ್ರಂಥಗಳನ್ನು ಅವರಿಗೆ ಒದಗಿಸಿಕೊಟ್ಟವರು ಪೂಜ್ಯರಾದ ಹಾನಗಲ್ಲ ಕುಮಾರಸ್ವಾಮಿಗಳವರು ಈಗ ಅಚ್ಚಿನ ಮನೆಯಿಂದ ಅಂದಚಂದವಾಗಿ ಮುದ್ರಿತವಾಗಿ ಪ್ರಕಟವಾಗಿರುವ ಬಗೆ ಬಗೆಯ ವಚನ ಸಾಹಿತ್ಯವನ್ನು ನಾವು ಓದಿ ಆನಂದಿಸುತ್ತಲಿರುವುದು ಅವರ ಪುಣ್ಯ ಪ್ರಭಾವದ ದ್ಯೋತಕವಾಗಿದೆ."[೧೧] ಎಂದುದಾಗಿ ಹಾನಗಲ್ಲ ಶ್ರೀಗಳ ಗ್ರಂಥ ಸಂಶೋಧನೆಯ ಕಾರ್ಯದ ಬಗ್ಗೆ ಮೆಚ್ಚುಗೆಯ ನುಡಿಗಳಾಡಿದ್ದಾರೆ.

* ಫ.ಗು. ಹಳಕಟ್ಟಿಯವರು ಶ್ರೀ ಸ್ವಾಮಿಗಳವರು ಮಂದಿರದ ಒಂದು ದೊಡ್ಡ ನಿಧಿಯನ್ನು ಕೂಡಿಸಿದ್ದು ಅಲ್ಲಿ ಕಟ್ಟಡಗಳನ್ನು ನಿರ್ಮಾಣ ಮಾಡಿದ್ದು ಮಹತ್ವದ ಕಾರ್ಯಗಳೆಂಬುದು ನಿಃಸಂದೇಹವಾದದ್ದು. ಆದರೆ ಹಣಕ್ಕಿಂತಲೂ ಮಹತ್ವವೆನಿಸಿಕೊಳ್ಳುವ ಗ್ರಂಥಗಳ ಸಂಗ್ರಹ ಮಾಡುವುದು ಅಷ್ಟೇ ಶ್ರೇಯಸ್ಕರವಾದುದ್ದು ಇರುತ್ತದೆ. ಇಂಥ ಗ್ರಂಥಗಳು ಸಮಾಜದಲ್ಲಿ ಇರದಿದ್ದರೆ ಸಂಸ್ಕೃತಿಯು ಬಾಳುವ ಸಂಭವವೇ ಇಲ್ಲ ಎಂದಿದ್ದಾರೆ.

* ಪ್ರೊ.ಜಿ.ಎಂ. ಉಮಾಪತಿಶಾಸ್ತ್ರಿ "ಶಿವಾಗಮಗಳು ಸಂಸ್ಕೃತದಲ್ಲಿದ್ದು; ವಚನಗಳು ಅಚ್ಚಗನ್ನಡದಲ್ಲಿವೆ. ಇವೆರಡರಲ್ಲೂ ಇದ್ದ ಉದ್ಧರಣೆ ಸಾಹಿತ್ಯವನ್ನು ಪ್ರಕಟಗೊಳಿಸುವಲ್ಲಿ ಶ್ರೀ ಕುಮಾರ ಶಿವಯೋಗಿಗಳು ಮೊದಲಿಗರು. ಶಿವಯೋಗ ಮಂದಿರದಲ್ಲಿ ವಚನ ಸಾಹಿತ್ಯದ ಹಸ್ತಪ್ರತಿಗಳನ್ನು ಸಂಗ್ರಹಿಸಿ ಅವುಗಳ ಸಂಶೋಧನೆ ಮತ್ತು ಪ್ರಕಟಣೆಗೆ ಯೋಜನೆಗಳನ್ನು ರೂಪಿಸಿದ್ದರು. ಮದ್ರಾಸ್, ಬನಾರಸ್ ಮುಂತಾದ ಗ್ರಂಥಾಲಯಗಳಲ್ಲಿರುವ ವೀರಶೈವ ಸಾಹಿತ್ಯವನ್ನು ಸಂಗ್ರಹಿಸುವುದಕ್ಕಾಗಿ ವಿದ್ವಾಂಸರನ್ನು, ಪಂಡಿತರನ್ನು ಕಳಸಿದ್ದುಂಟು."[೧೨] ಎಂಬುದಾಗಿ ಶ್ರೀಗಳ ಕುರಿತು ಮಾಹಿತಿ ಒದಗಿಸಿದರು.

ಹೀಗೆ ಹಾನಗಲ್ಲ ಕುಮಾರ ಶಿವಯೋಗಿಗಳು ಸಾಹಿತ್ಯ ಪೋಷಣೆ ಸಂವರ್ಧನೆ ಪ್ರಕಟಣೆಯಲ್ಲಿ ಸಂಶೋಧನೆಯಲ್ಲಿ ತಾವು ನಿರ್ವಹಿಸಿದ ಪಾತ್ರವನ್ನು ಈ ಗಣ್ಯರ ನುಡಿಗಳಿಂದ ತಿಳಿಯುತ್ತದೆ.

ಹಾನಗಲ್ಲ ಶ್ರೀಗಳು ಗ್ರಂಥ ಸಂಶೋಧನೆಯಲ್ಲಿ, ಸಂಗ್ರಹದಲ್ಲಿ ಪ್ರಕಾಶನಗೊಂಡ ಕೃತಿಗಳು ಹಲವಾರು. ಈ ಸಂಶೋಧನೆಯಲ್ಲಿ ತಾವು ನೇರವಾಗಿ ಭಾಗಿಯಾಗಿ ಅನ್ಯರಿಗೆ ಪ್ರೇರಕರಾದಂತೆ ತಾವೇ ಸಂಪಾದನೆಗೂ ಪ್ರಕಾಶನಕ್ಕೂ ಕೈ ಹಾಕಿದರು. ಸಂಶೋಧಕರಿಂದ ಶೋಧಿಸಲ್ಪಟ್ಟ, ಸಂಗ್ರಹಿಲ್ಪಟ್ಟ ಕೃತಿಗಳು ಬೆಳಕಿಗೆ ತರಲು ಆರ್ಥಿಕ ನೆರವು ಒದಗಿಸಿದರು. ಅವುಗಳಲ್ಲಿ ಮುಖ್ಯವಾದವುಗಳು ಇಂತಿವೆ.

* ಶ್ರೀ ಕುಮಾರ ಶಿವಯೋಗಿಗಳು ಬರೆಸಿದ ಗೂಲೂರು ಸಿದ್ಧವೀರಣ್ಣೊಡೆಯನ ಶೂನ್ಯ ಸಂಪಾದನೆ
* ಶ್ರೀ ಮ.ನಿ.ಪ್ರ ಬಸವಲಿಂಗಸ್ವಾಮಿಗಳು ನವಲಗುಂದ ಗವಿಮಠ ಇವರ "ಗುರು–ಲಿಂಗ–ಜಂಗಮ" ಗ್ರಂಥ
* ಶ್ರೀ ಚೆನ್ನಮಲ್ಲಿಕಾರ್ಜುನ ಸ್ವಾಮಿಗಳು ಶಿರಾಳಕೊಪ್ಪ ಅವರ ಜಂಗಮಾಧಿಕ್ಯ
* ಪಂ. ಬಸವರಾಜ ಶಾಸ್ತ್ರಿಗಳವರ ರಘುವಂಶ, ಕುಮಾರ ಸಂಭವ, ಮಾಘ ಕೃತಿಗಳು
* ಶ್ರೀ ಸದಾಶಿವ ಶಿವಾಚಾರ್ಯರು ಸಖರಾಯ ಪಟ್ಟಣ ಅವರ ಶಿವಪೂಜಾ ವಿಧಿ, ಕೈವಲ್ಯೋಪನಿಷತ್ತ, ಸದಾಶಿವ ಭಾಷ್ಯಮ್ ವೀರಶೈವ ದೀಕ್ಷಾ ವಿಧಿ, ವೀರಶೈವ ಸಂಸ್ಕೃತಿ
* ಸೊಲ್ಲಾಪುರದ ಶ್ರೀ ವಾರದ ಮಲ್ಲಪ್ಪನವರಿಂದ ವೀರಶೈವ ಧರ್ಮದ ಸಂಸ್ಕೃತ ಗ್ರಂಥಗಳನ್ನು ಶೋಧಿಸಲು ಪ್ರೇರೆಪಿಸಿ ಅದಕ್ಕೆ ಮರಾಠಿಯಲ್ಲಿ ಟೀಕೆ–ಟಿಪ್ಪಣಿ ಬರೆಸಿದರು.
* ಗಳಗನಾಥರು ಬರೆದ 'ಸತ್ಯಾದರ್ಶ ಅಥವಾ ಗದ್ಯಾತ್ಮಕ ರಾಜಶೇಖರ ವಿಳಾಸ' ಮುದ್ರಿಸಲು ಆರ್ಥಿಕ ನೆರವು ನೀಡಿದರು.

ಹೀಗೆ ತಾವು ಕೇವಲ ಆರ್ಥಿಕ ನೆರವನಷ್ಟೆ ನೀಡದೆ ಶಿವಯೋಗ ಮಂದಿರದಲ್ಲಿ ರಾಶಿರಾಶಿಯಾಗಿ ಸಂಗ್ರಹಗೊಂಡ ಪುಸ್ತಕದಲ್ಲಿನ ಕಟ್ಟುಗಳನ್ನು ಸಡಿಲಿಸಲು ಒಂದು ಶೋಧಕರ ತಂಡವನ್ನೆ ಅಲ್ಲಿಗೆ ಬರುವಂತೆ ಮಾರ್ಗ ರೂಪಿಸಿ ಸಕಲ ಸೌಲಭ್ಯ ಒದಗಿಸಿದರು. ಹೀಗೆ ಬಂದವರು ಇಲ್ಲಿನ ಗ್ರಂಥಾಲಯದಲ್ಲಿದ್ದ ಸರಸ್ವತಿಯ ಜ್ಞಾನ ನಿಧಿಯಲ್ಲಿ ಮುಳುಗೆದ್ದು ಶೋಧಿಸಿ ತಂದ ವೀರಶೈವ ವಿಚಾರ ಧಾರೆಯನ್ನು ಅಚ್ಚಿನ ಮನೆವರೆಗೆ ಹರಿಸಿದರು. ಹಾಗೆ ಹರಿಯಲು ಆರ್ಥಿಕ ನೆರವು ಒದಗಿಸಿದರು. ಈ ನಿಟ್ಟಿನಲ್ಲಿ ಬಂದ ಸಂಶೋಧಕರು ಹಾಗೂ ಅವರು ಪ್ರಕಟಿಸಿದ ಕೃತಿಗಳು ಸಂಶೋಧನೆ ಮಾಡಿದ ಅಂಶಗಳ ಕಿರು ಪರಿಚಯ ಇಲ್ಲಿದೆ. ಆ ಮೂಲಕ ಹಾನಗಲ್ಲ ಕುಮಾರಸ್ವಾಮಿಗಳ ಕೃಪೆಯಿಂದ ಬೆಳೆದು ನಿಂತ ಶಿವಯೋಗ ಮಂದಿರದ ಗ್ರಂಥ ಭಂಡಾರದ ಪರಿಪಕ್ವತೆ, ಶಕ್ತಿ, ಮಹತ್ವ ಎಂತಹುದೆಂದು ಇಲ್ಲಿ ನಿರೂಪಿಸುವುದಾಗಿದೆ.

ಹೀಗೆ ಬಂದು ಹೋದ ಗ್ರಂಥ ಸಂಶೋಧಕರೆಂದರೆ.[೧೩]

* ಶ್ರೀ ವೀರಬಸವಪ್ಪ ಶಿವಲಿಂಗಪ್ಪ ಶ್ರೇಷ್ಠಿ
* ಶ್ರೀ ಬುದ್ಧಯ್ಯ ಪುರಾಣಿಕ, ತೆರದಾಳ
* ಪಂ. ಮಹಾಲಿಂಗಯ್ಯ ಹಿರೇಮಠ, ದ್ಯಾಂಪುರ
* ಶ್ರೀ ಗುರಮೂರ್ತಿ ಶಾಸ್ತ್ರಿಗಳು, ಕಜ್ಜರಿ
* ಶ್ರೀ ಚೆನ್ನಮಲ್ಲಿಕಾರ್ಜುನ, ಮೈಸೂರು
* ಪಂ. ಕಲಿಗಣನಾಥ ಶಾಸ್ತ್ರಿಗಳು
* ಪಂ. ಎಚ್.ಎಸ್. ಶಿವಲಿಂಗ ಶಾಸ್ತ್ರಿಗಳು
* ಪಂ. ಚಂದ್ರಶೇಖರ ಶಾಸ್ತ್ರಿಗಳು, ಛತ್ರದಹಳ್ಳಿ
* ಪಂ. ಗುರುಶಾಂತ ಶಾಸ್ತ್ರಿಗಳು, ಶಿರಸಿ
* ಪಂ. ಚಂದ್ರಶೇಖರ ಶಾಸ್ತ್ರಿಗಳು, ಹೊಳಲು
* ಪಂ. ಗೌರೀನಾಥ ಶಾಸ್ತ್ರಿಗಳು, ಇಲಾಳ
* ಶ್ರೀ ಮಲ್ಲಿಕಾರ್ಜುನ ದೇಶಿಕರು, ಮೈಸೂರು
* ಪ್ರೊ. ಎ.ಎಲ್. ಹಿರೇಮಠ
* ಶ್ರೀ ಎನ್. ಎಫ್. ಪಾಟೀಲ್ ಬಾಚಿನಗುಡ್ಡ
* ಪಂ. ಶಿವಮೂರ್ತಿ ಸ್ವಾಮಿಗಳು, ಮತಗಟ್ಟಿ
* ಶ್ರೀ ನಾರಾಯಣ ಸಂಗಮ
* ಪಂ. ಶಂಕರಶಾಸ್ತ್ರಿಗಳು, ಉಮಚಗಿ
* ಬಸವರಾಜ ಶಾಸ್ತ್ರಿಗಳು, ಪಗಡದಿನ್ನಿ

* ಶ್ರೀ ಜೆ.ಎಂ. ಉಮಾಪತಿ ಶಾಸ್ತ್ರಿಗಳು
* ಪ್ರೊ. ನಂದಿಮಠ
* ಪ್ರೊ. ಫ.ಗು. ಹಳಕಟ್ಟಿ
* ಹರ್ಡೇಕರ ಮಂಜಪ್ಪ

ಹೀಗೆ ಅನೇಕ ಪಂಡಿತರು, ಶಾಸ್ತ್ರಿಗಳು, ಕವಿಗಳು ಇಲ್ಲಿಗೆ ಬಂದು ಗ್ರಂಥ ಸಂಶೋಧನೆಯಲ್ಲಿ ತೊಡಗಿದ್ದಾರೆ. ಜೊತೆಗೆ ಅನೇಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ಸಂಶೋಧನಾ ವಿದ್ಯಾರ್ಥಿಗಳು ಆಗಿ ಹೋಗಿದ್ದಾರೆ. ಆದರೆ ಆ ಬಗ್ಗೆ ಇಲ್ಲಿ ಸೂಕ್ತ ದಾಖಲೆಯಾಗಲಿ, ಅಗತ್ಯ ಉಲ್ಲೇಖಗಳು ದೊರೆತಿಲ್ಲ. ಈ ಮೇಲೆ ಸೂಚಿಸಿದ ಮಹನೀಯರು ಕೈಗೊಂಡ ಸಂಪಾದನ ಹಾಗೂ ಸಂಶೋಧನೆ ಮಾಡಿದ ಅಂಶದ ಕೆಲವು ಉಲ್ಲೇಖಗಳು ಇಂತಿವೆ.

೧. ಬುದ್ಧಯ್ಯ ಪುರಾಣಿಕ, ಜಮಖಂಡಿ ತಾಲೂಕಿನ ತೇರದಾಳ ಗ್ರಾಮದಲ್ಲಿ ೧೩.೦೬.೧೮೭೮ರಲ್ಲಿ ಜನಸಿದ ಶ್ರೀಯುತರು 'ಅಲ್ಲಮಪ್ರಭು' ಎಂಬ ಗ್ರಂಥವನ್ನು ೧೯೩೬ರಲ್ಲಿ ಶೋಧಿಸಿ ಪ್ರಕಟಿಸಿದರು. "೧೯೪೦ರಲ್ಲಿ ಎಂಳಂದೂರ ಹರಿಶ್ಚಂದ್ರರ ಕೃತ ಪ್ರಭುದೇವರ ಪುರಾಣ"ವನ್ನು ಸಂಶೋಧಿಸಿ ಪ್ರಕಟಿಸಿದರು."[೧೪]

೨ .ಪಂ. ಮಹಾಲಿಂಗಯ್ಯನವರು ಹಿರೇಮಠ ವೃತ್ತಿಯಲ್ಲಿ ಪ್ರಾಧ್ಯಾಪಕರಾಗಿದ್ದು ಶ್ರೀಗಳ ನಿಕಟತೆಯಲ್ಲಿ "ಶಿವಾನುಭವ ಶಾಸ್ತ್ರ"ವನ್ನು ಸಂಪಾದಿಸಿ ಹಾನಗಲ್ಲ ಶ್ರೀಗಳ ಅಪ್ಪಣೆ ಮೇರೆಗೆ ಶ್ರೀ ಮಹಾಲಿಂಗಯ್ಯನವರು ನಿಜಗುಣ ಶಿವಯೋಗಿಗಳವರ 'ಪಾರಮಾರ್ಥ ಪ್ರಕಾಶಿಕೆ' ಮತ್ತು 'ವಿವೇಕ ಚಿಂತಾಮಣಿ' ಕೈವಲ್ಯ ಪದ್ಧತಿಗಳನ್ನು ಓಲೆಗರೆ ಪ್ರತಿಗಳ ಆಧಾರದಿಂದ ಶುದ್ಧವಾಗಿ ಬರೆಯಲು ಪ್ರಾರಂಭಿಸಿದರು. ವಿವೇಕ ಚಿಂತಾಮಣಿಯ ಮುದ್ರಿತ ಪ್ರತಿಗಳಿಗೂ ಓಲೆಗೆರೆಯ ಪ್ರತಿಗಳಿಗೂ ಸರಿ ಹೋಲಿಸಿ ನೋಡಿ ಮುದ್ರಣವಾದ ಪ್ರತಿಗಳಲ್ಲಿ ಕೆಲವು ವಿಷಯಗಳು ಹೆಚ್ಚಾಗಿಯೂ, ಕೆಲವು ಕಡಿಮೆಯಾಗಿಯೂ ಇರುವುದನ್ನು ಕಂಡು ಹಿಡಿಯಲು ಅದರ ಶುದ್ಧ ಪ್ರತಿಯನ್ನು ಬಹು ಶ್ರಮವಹಿಸಿ ಬರೆದಿದ್ದಾರೆ.

೩. ಶ್ರೀ ಚೆನ್ನಮಲ್ಲಿಕಾರ್ಜುನ, ಮೈಸೂರು ಶಿವಮೊಗ್ಗ ಜಿಲ್ಲೆಯ ಶಿರಿಯಾಳಕೊಪ್ಪ (ಶಿರಾಳಕೊಪ್ಪ)ದಲ್ಲಿ ಶಿಕ್ಷಕರಾಗಿದ್ದವರು. ಶ್ರೀಗಳ ಸತ್ಪ್ರೇರಣೆಯಿಂದಾಗಿ ಧರ್ಮ ಪ್ರಸಾರದ ಪರಿವಾರಕ್ಕೆ ಸೇರುತ್ತಾರೆ. "ಶಿವಲಿಂಗ ವಿಜಯ ಮುದ್ರಣಾಲಯದಲ್ಲಿ ಹಾನಗಲ್ಲ ಶ್ರೀಗಳ ಅಪ್ಪಣೆ ಮೇರೆಗೆ 'ಸಧರ್ಮ ದೀಪಿಕೆ' ಎಂಬ ಮಾಸ ಪತ್ರಿಕೆ ಪ್ರಾರಂಭಿಸಿ ಅದರಲ್ಲಿ ಅನೇಕ ಸಾಹಿತಿಗಳ, ಕವಿಗಳ, ವಿಮರ್ಶಕರ, ಸಂಶೋಧಕರ ಲೇಖನ ಪ್ರಕಟಿಸಿದ್ದಾರೆ. ತಾವು ಪ್ರಕಟಿಸಿದ ಸಣ್ಣ-ದೊಡ್ಡ ಸಂಶೋಧನಾತ್ಮಕ ಗ್ರಂಥಗಳೆಂದರೆ."[೧೫]

* ಜಂಗಮಾಧಿಕ್ಯ
* ಬಸವಲಿಂಗ ನಾಮಾವಳಿ
* ಬಸವೇಶ್ವರ ಸ್ತೋತ್ರ ಪದ್ಯಗಳು
* ಕೋಳೂರ ಕೊಡಗೂಸಿನ ರಗಳೆ
* ಗುರುಕರಣ ತ್ರಿವಿಧಿ (ಮೈಲಾರ ಬಸವಲಿಂಗ ಶರಣರ ಕೃತಿ)
* ದೇಹದ ಹಸುಗೆ ಅಷ್ಟಾವರಣ ವಾರ್ಧಿಕ
* ದೇವನಾಯಕನ ಶಾರದ
* ನುಲಿಯ ಚಂದಯ್ಯನ ಶಾರದ
* ಪರಮಯೋಗ ಮಂತ್ರಗೋಷ್ಠ
* ಶಿವಯೋಗ
* ಸಮಾಧಿ ಕ್ರಿಯಾವಾಚ್ಯ
* ಪುರಾತನ ದೇವಿಯರ ತ್ರಿವಿಧಿ (ನಿಜಗುಣ ಶಿವಯೋಗಿ ಕೃತ)
* ಉಡುತಡಿಯ ಮಹಾದೇವಿಯಕ್ಕನ ರಗಳೆ
* ಶಿವಯೋಗ ದರ್ಪಣ
* ಜ್ಯೋತಿರ್ಮಯ ಶಾಂಭವಜ್ಞಾನ ದೀಕ್ಷಾಬೋದೆ
* ಲಿಂಗೋಪನಿಷತ್ತು
* ಪಾದ ಪೂಜಾ ನಿಧಾನ
* ವಾಗದ್ವೈತ ನಿರಸನ ತ್ರಿವಿಧಿ
* ವೀರಶೈವ ಮೊದಲನೆಯ ಪುಸ್ತಕ
* ಸಿದ್ಧೇಶ್ವರ ವಚನ (ಬೆಡಗಿನ ವಚನಾರ್ಥ ಸಹಿತ)
* ಲಿಂಗಪೂಜಾ ವಿಧಾನ (ಮೈಲಾರ ಬಸವಲಿಂಗ ಶರಣರ ಕೃತಿ)
* ಶಿವನಾಭವ ದೀಪಿಕೆ
* ಶತಕತ್ರಯ (ಮೂಲ)
* ನೀಲಮ್ಮನ ತ್ರಿವಿಧಿ
* ಬಾಲಿಕಾ ಗೀತಾ ಶತಕ
* ಬಸವೇಶ್ವರ ವಚನ ಗೀತೆ
* ಸಿದ್ಧೇಶ್ವರ ತ್ರಿವಿದಿ
* ಸ್ತೋತ್ರ ಪಾರಾಯಣ

* ನಿರಾಳ ಗುರು ಸ್ತೋತ್ರ
* ಗುರು ಕರುಣಾಮೃತ
* ಲಿಂಗಪೂಜಾ ವಿಧಾನ
* ಯೋಗಾಂಗ ತ್ರಿವಿಧಿ
* ಮುಕ್ತ್ಯಂಗನಾಕಂಠಮಾಲೆ
* ಸರ್ವಪುರಾತನರ ವಚನ
* ವೀರಶೈವ ಪಂಚಾಚಾರ್ಯರ ಚರಿತ್ರೆ ರೇವಣಸಿದ್ಧರು
* ಗುರುವರ್ಗದ ವಚನ
* ಬಸವೇಶ್ವರನ ಕಾಲ
* ಮಹಾದೇವಿಯಕ್ಕನ ವಚನಾರ್ಥ (ಭಾಗ-೧)
* ಮಹಾದೇವಿಯಕ್ಕನ ವಚನಾರ್ಥ (ಭಾಗ-೨)
* ವಾಣಿಜೋತ್ಪತ್ತಿ
* ಚರಿತ್ರಾ ಲೇಖನಗಳು

ಮೊದಲಾದ ಲೇಖನ ಸಂಶೋಧಿಸಿ ಬರೆದು ಪ್ರಕಟಿಸಿದ್ದಾರೆ.

೪. ಪಂ ಕಲಿಗಣನಾಥ ಶಾಸ್ತ್ರಿಗಳು ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಪಗಡದಿನ್ನಿಯಲ್ಲಿ ಪಂಡಿತ ಮನೆತನದ ಪರಂಪರೆಯಲ್ಲಿ ಜನಸಿ ಬೆಳೆದು ಬಂದವರು. 'ತರ್ಕತೀರ್ಥ' ಎಂಬ ಉಚ್ಚ ಉಪಾಧಿಯಲ್ಲಿ ಉತ್ತೀರ್ಣರಾಗಿ ಅನೇಕ ಸಂಶೋಧನಾತ್ಮಕ ಬರಹಗಳನ್ನು, ಗ್ರಂಥಗಳನ್ನು ರಚಿಸಿದರು. "ಶ್ರೀ ಬಸವಾದಿ ಪ್ರಥಮರ ನಿಜತತ್ವ ದರ್ಪಣ' ಎಂಬ ಗ್ರಂಥವನ್ನು ಬರೆದು ಪಂ. ಬಸವರಾಜ ಶಾಸ್ತ್ರಿಗಳವರ ಹೆಸರಿನಲ್ಲಿ ಪ್ರಕಟಿಸಿದರು. 'ಶಿಖಾಸೂತ್ರ ವಿಮರ್ಶೆ' ಎಂಬ ಗ್ರಂಥವನ್ನು ಬರೆದರು."[೧೬] ಶ್ರೀಯುತರು ಪರಳಿ ವ್ಯಾಝ್ಯದ ಪರವಾದಿಗಳಾಗಿ ವಾದಿಸಿದವರಲ್ಲಿ ಒಬ್ಬರಾಗಿದ್ದಾರೆ.

೫. ಪಂ. ಎಚ್.ಎಸ್. ಶಿವಲಿಂಗಸ್ವಾಮಿಗಳು ಕನ್ನಡದಲ್ಲಿ ಪತ್ರಿಕೆ ಸಾಹಿತ್ಯವನ್ನು ಮೊದಲು ಮಾಡಿದ ಮಹನೀಯರಲ್ಲಿ ಒಬ್ಬರು. ಹಾನಗಲ್ಲ ಶ್ರೀರಕ್ಷೆಯ ಸನ್ನಿಧಿಯಲ್ಲಿ 'ಧರ್ಮೋತ್ತೇಕ ಸಭೆ'ಯ ಅಂಗವಾಗಿ 'ಧಾರವಾಡದ ಧರ್ಮತರಂಗಿಣಿ ಮುದ್ರಣಾಲಯ'ದಲ್ಲಿ 'ವೀರಶೈವ ಧರ್ಮ ತರಂಗಿಣಿ' ಎಂಬ ಮಾಸಪತ್ರಿಕೆ ಆರಂಭಿಸಿ ೧೦ ರಿಂದ ೧೨ ವರ್ಷ (೧೯೧೧ರಲ್ಲಿ ಪ್ರಾರಂಭಿಸಿ) ಮುನ್ನಡೆಸಿ ನಾಡಿನ ಸುಪ್ರಸಿದ್ಧ ಲೇಖಕ, ವಿಮರ್ಶಕ, ಮಹಾಸ್ವಾಮಿಗಳ ಲೇಖನ, ಬರಹಗಳನ್ನು ಇಲ್ಲಿಂದ ಪ್ರಕಟಿಸಿದ್ದಾರೆ.

೬. ಪಂ. ಚಂದ್ರಶೇಖರ ಶಾಸ್ತ್ರಿಗಳು ಛತ್ರದಹಳ್ಳಿ ಸಂಸ್ಕೃತ ಪಾಠಶಾಲೆಯ ಅಧ್ಯಾಪಕರು ಶ್ರೀರುದ್ರಕ್ಕೆ ವೀರಶೈವ ಪದ ಅರ್ಥವನ್ನು ಬರೆದವರು. ಶಾಲಿವಾನಹನ ಶಕೆ ೧೮೫೫ರಲ್ಲಿ ಚೆನ್ನಬಸವೇಶ್ವರ ದೇವರು ನಿರೂಪಿಸಿದ 'ಹಿರಿಯ ಮಂತ್ರ ಗೋಪ್ಯ'ವನ್ನು ಸಂಶೋಧಿಸಿ ಪ್ರಕಟಿಸಿದ್ದಾರೆ. 'ಲಿಂಗಧಾರಣ ಚಂದ್ರಿಕೆ'ಗೆ ತಿಳಿಯಾದ ಕನ್ನಡ ಅರ್ಥ ಬರೆದಿದ್ದಾರೆ. ಪ್ರಭುದೇವರ ವಚನಗಳನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಶ್ರೀಯುತರು ತಮ್ಮ ಇಡೀ ಬದುಕನ್ನೆ ಗ್ರಂಥ ಸಂಶೋಧನಾ ಕಾರ್ಯಕ್ಕೆ ಮೀಸಲಿಟ್ಟವರು.

೭. ಪಂ. ಗುರುಶಾಂತ ಶಾಸ್ತ್ರಿಗಳು ಉಮಚಗಿಯ ಪಂ. ಶಂಕರ ಶಾಸ್ತ್ರಿಗಳ ಉಪನಿಷತ್ತುಗಳ ಶಾಂಕರೀ ವ್ಯಾಖ್ಯಾನವನ್ನು ಸರಳಗನ್ನಡದಲ್ಲಿ ಭಾಷಾಂತರಿಸಿದರು. 'ಲಿಂಗಧಾರಣ ಚಂದ್ರಿಕೆ' ಹಾಗೂ 'ವೀರಶೈವಾನಂದ ಚಂದ್ರಿಕೆ'ಗಳನ್ನು ಕನ್ನಡಕ್ಕೆ ಪರಿವರ್ತಿಸಿದರು.

೮. ಪಂ. ಚಂದ್ರಶೇಖರ ಶಾಸ್ತ್ರಿಗಳು ಹಾನಗಲ್ಲ ಶ್ರೀಗಳು ಹಾನಗಲ್ಲ ಶ್ರೀಗಳ ಪ್ರೇರಣೆಯಲ್ಲಿ ಸನ್ನಿಧಿಯಲ್ಲಿ ಧರ್ಮ ಪ್ರಸಾರಕರಾಗಿ, ನಾಡು-ನುಡಿಗಾಗಿ, ಸಾಹಿತ್ಯಕ್ಕಾಗಿ ಅವಿರತ ದುಡಿದವರು. ಪರಳಿ ಪ್ರಕರಣದಲ್ಲಿ ಆಸಕ್ತಿ ವಹಿಸಿ ಜಯಿಸಿದವರು. ೧೯೩೩ರ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಧಾನ ಕಾರ್ಯದರ್ಶಿಯಾಗಿ, ಅಖಿಲ ಭಾರತ ವೀರಶೈವ ಮಹಾಸಭೆಯ ಸದಸ್ಯರಾಗಿ ೧೯೪೦ರಲ್ಲಿ ಧಾರವಾಡದಲ್ಲಿ ಜರುಗಿದ ೨೫ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಚಂದ್ರಶೇಖರ ಶಾಸ್ತ್ರಿಗಳು 'ಕಾಡಸಿದ್ಧೇಶ್ವರ ವಚನ', 'ಸಿದ್ಧಲಿಂಗೇಶ್ವರ ವಚನ', 'ಬಸವತತ್ವ ರತ್ನಾಕರ' ಎಂಬ ಗ್ರಂಥಗಳನ್ನು ಸಂಶೋಧಿಸಿ ಪ್ರಕಟಿಸಿದ್ದಾರೆ.

೯. ಪಂ. ಗೌರೀನಾಥ ಶಾಸ್ತ್ರಿಗಳು ಹಾನಗಲ್ಲ ಶ್ರೀಗಳವರ ಕೃಪಾಶ್ರಯದಲ್ಲಿ ಬೆಳೆದು ಬಂದವರು. ವೀರಶೈವ ವಾಙ್ಮಯದ ಸಂಶೋಧನೆಯಲ್ಲಿ ಆಸಕ್ತಿವಹಿಸಿ "ವೀರಶೈವ ಶುದ್ಧಿಕರಣ, ವೈದಿಕ ತಾಂತ್ರಿಕ ರಹಸ್ಯ, ಅಜಾತಜಾತ ನಿರ್ಣಯ, ಷಟ್‌ಸ್ಥಲದಉಭಯ ಮಾರ್ಗಬೋಧಿನಿ, ವೀರಶೈವ ಷಟ್‌ಸ್ಥಲ ಬ್ರಹ್ಮದೀಪಿಕೆ (ಸೋಸಲೆ ರೇವಣಾರಾಧ್ಯ ಕೃತ ಸಂಸ್ಕೃತ ಗ್ರಂಥ)ಮರುಳ ಸಿದ್ಧಿ ಯತಿರಾಜರ ಸರಳಗನ್ನಡದ ವ್ಯಾಖ್ಯೆಯೊಂದಿಗೆ ಅನೇಕ ಸಂಶೋಧನಾತ್ಮಕ ಕೃತಿಗಳನ್ನು ಲೇಖನಗಳನ್ನು ಶ್ರೀ ಗೌರಿನಾಥ ಗ್ರಂಥಮಾಲೆಯ ರೂಪದಲ್ಲಿ ಪ್ರಕಟಿಸಿದ್ದಾರೆ."[೧೭]

೧೦. ಶ್ರೀ ಎಸ್.ಎಫ್. ಪಾಟೀಲರು ಶ್ರೀ ನಾರಾಯಣ ಸಂಗಮ ಪಂ. ಶಿವಮೂರ್ತಿ ಸ್ವಾಮಿಗಳು ಸಾಹಿತ್ಯ ರಂಗದಲ್ಲಿ ಉತ್ತಮ ಗ್ರಂಥಗಳನ್ನು ಸಂಶೋಧಸಿ ಪ್ರಕಟಿಸಿದ್ದಾರೆ. ಅವರು ಹರಿಹರನ ಪಂಪಾ-ರಕ್ಷಾ ಶತಕಗಳನ್ನು ಸುಂದರವಾಗಿ ಸಂಪಾದಿಸಿದ್ದಾರೆ.

೧೧. ಶ್ರಿ ವೀರಬಸಪ್ಪ ಶಿವಲಿಂಗಪ್ಪ ಶೆಟ್ಟಿ ಕ್ರಿ.ಶ ೧೮೭೦ರಲ್ಲಿ ಶಿವಲಿಂಗಪ್ಪ ಶೆಟ್ಟರು ಗಂಗಮ್ಮ ದಂಪತಿಗಳ ಮಗನಾಗಿ ಕೊಲ್ಹಾಪುರ ಜಿಲ್ಲೆಯ ಗಡಿಂಗ್ಲಜದ ಪೇಠಾದಲ್ಲಿ ಜನಿಸಿದರು.ಸಂಸ್ಕೃತ,

ಇಂಗ್ಲೀಷ್ ಶಿಕ್ಷಣವನ್ನು ಸಾಧಕರಿಗೆ ಬೋಧಿಸಿದರು. ಶ್ರೀಗಳ ಅಪ್ಪಣೆಯಂತೆ ಭಗವದ್ಗೀತೆಗೆ ವೀರಶೈವ ಪರಭಾಷ್ಯವನ್ನು ಇಂಗ್ಲೀಷ್‌ನಲ್ಲಿ ಬರೆದರು.

೧೨. ಶ್ರೀ ಗುರುಮೂರ್ತಿ ಶಾಸ್ತ್ರಿಗಳು ಕಜ್ಜರಿ ಕಾವ್ಯತೀರ್ಥ ಧಾರವಾಡ ಜಿಲ್ಲೆಯ ಬ್ಯಾಡಗಿ ಪೇಟಾದಲ್ಲಿನ ಕಜ್ಜರಿ ಗ್ರಾಮದಲ್ಲಿ ೧೮೯೦ರಲ್ಲಿ ಜನಿಸಿದರು. ಶ್ರೀಗಳ ಪ್ರೀತಿಯ ಶಿಷ್ಯರಲ್ಲಿ ಇವರು ಒಬ್ಬರಾಗಿದ್ದು, ಕಾಶಿಯಲ್ಲಿ ಉನ್ನತ ವ್ಯಾಸಂಗ ಮುಗಿಸಿಕೊಂಡು ಬಂದು ಹಾವೇರಿ ಶ್ರೀಗಳಲ್ಲಿ ಸಾಹಿತ್ಯ ಕಾರ್ಯ ನಿರ್ವಹಿಸಿದರು ಶಿವಪ್ರತಾಪ ವಾರಪತ್ರಿಕೆಗಾಗಿ ಹಲವು ಕಾಲ ದುಡಿದು ಅದರಲ್ಲಿ ಸಂಪಾದನ ಕೃತಿಗಳನ್ನು ಪ್ರಕಟಿಸಿದ್ದಾರೆ.

೧೩. ಶ್ರೀ ಮಲ್ಲಿಕಾರ್ಜುನ ದೇಶಿಕರು ಮೈಸೂರು ಕವಿ ಬರಹಗಾರರು ಆದ ದೇಶಿಕರು ಶಿವಾನುಭವ ಪತ್ರಿಕೆಯ ಮೂಲಕ ಶೋಧನ ಪೂರ್ಣ ಲೇಖನಗಳನ್ನು ಬರೆದಿದ್ದಾರೆ

೧೪. ಪ್ರೋ. ಎ.ಎಲ್. ಹಿರೇಮಠ ಹಾನಗಲ್ಲ ಪೂಜ್ಯರ ಕೃಪಾಶ್ರಯದಲ್ಲಿ ಶಿಕ್ಷಣ ಪಡೆದು ಪೋಲಿಸ ಇಲಾಖೆಯಲ್ಲಿ ಸೇವೆ ಸಲ್ಲಿಸಿ ಸಾಹಿತ್ಯದೆಡೆ ಮನಸೋತು.ಬಿ.ಎ.ಎಂ.ಎ ಪದವಿ ಪಡೆದವರು ಮಗ್ಗೆಯ ಮಾಯಿದೇವನ ಕೃತಿಗಳ ಕುರಿತು ಮಹಾಪ್ರಬಂಧ ಬರೆದು ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿ.ಹೆಚ್‌ಡಿ ಪದವಿ ಪಡೆದಿದ್ದಾರೆ ತಮ್ಮ ಪ್ರಾಧ್ಯಾಪಿಕ ವೃತ್ತಿ ಬದುಕಿನಲ್ಲಿ ಅನೇಕ ಉತ್ತಮ ಸಂಶೋಧನೆಗೆ ಕಾರಣೀಭೂತರಾಗಿದ್ದಾರೆ.

೧೫. ಪಂ.ಶಿವಮೂರ್ತಿ ಸ್ವಾಮಿಗಳು ಮತಿಗಟ್ಟಿ ಚಿಕ್ಕಮಂಗಳೂರು ಜಿಲ್ಲೆ ಕಡೂರು ತಾಲೂಕಿನ ಗ್ರಾಮದಲ್ಲಿ ಜನಿಸಿದರು. ಶಿವಯೋಗ ಮಂದಿರದಲ್ಲಿ ಕಲಿತು ಶಿವಾನುಭವ, ಶರಣ ಸಾಹಿತ್ಯ ವಾರ ಪತ್ರಿಕೆಗಾಗಿ ಸಂಶೋಧಾತ್ಮಕ ಬರಹಗಳನ್ನು ಲೇಖನಗಳನ್ನು ಬರೆದಿದ್ದಾರೆ. ಹರಿಹರನ ಪಂಪಾ–ರಕ್ಷಾ ಶತಕಗಳನ್ನು ಸಂಪಾದಿಸಿದ್ದಾರೆ.

೧೬. ಶ್ರೀ ನಾರಾಯಣ ಸಂಗಮ, ಹಾನಗಲ್ಲ ಶ್ರೀಗಳ ಅನುಗ್ರಹದಿಂದ ರವೀಂದ್ರನಾಥರ ಶಾಂತಿನಿಕೇತನಕ್ಕೆ ತೆರಳಿದರು. ಅಲ್ಲಿ ಕಲಾಚಾರ್ಯ ಶ್ರೀ ನಂದಲಾಲಬಸುರವರಲ್ಲಿ ಚಿತ್ರಕಲೆಯೊಂದಿಗೆ ಸಾಹಿತ್ಯ ಭಾಷೆಗಳ ವ್ಯಾಸಂಗ ಮಾಡಿದರು. ಬಂಗಾಳಿ ಕೃತಿಯೊಂದನ್ನು ಕನ್ನಡದಲ್ಲಿ ಅಕ್ಕ–ತಂಗಿ ಎಂಬ ಶಿರೋನಾಮೆಯಾಗಿ ಅನುವಾದಿಸಿದರು.

ಇವರೆಲ್ಲರ ಅವಿರತ ಪರಿಶ್ರಮ ದುಡಿಮೆಯಿಂದಾಗಿ ಹಾನಗಲ್ಲ ಶ್ರೀಗಳು ಶ್ರಮವಹಿಸಿ ಕೂಡಿಟ್ಟ ತಾಳೆಗರಿ, ತಾಡೋಲೆ, ಕಾಗದ ಪ್ರತಿಯ ಅಂಶಗಳಲ್ಲಿ ಅಡಗಿದ್ದ ವಿಚಾರಗಳು ಬೆಳಕಿಗೆ ಬಂದವು. ಕೆಲವರು ತಮ್ಮ ಸಂಶೋಧಿತ ವಿಚಾರಗಳನ್ನು ಮಾಸಪತ್ರಿಕೆಯಲ್ಲಿ ನಿರಂತರವಾಗಿ ಪ್ರಕಟಿಸಿದರೆ, ಇನ್ನೂ ಕೆಲವರು ಗ್ರಂಥ ರೂಪದಲ್ಲಿ ಪ್ರಕಟಿಸಿದ್ದಾರೆ. ಅವು ಇಂದು ಮಂದಿರದ ಗ್ರಂಥಾಲಯ, ವಾಚನಾಲಯದಲ್ಲಿ ಸಂಶೋಧನಾತ್ಮಕ ವಿದ್ಯಾರ್ಥಿಗಳಿಗೆ ಮಾರ್ಗಸೂಚಿಯಾಗಿ,

ಆಕರ ಗ್ರಂಥಗಳಾಗಿವೆ. ಅನೇಕ ಸಂಶೋಧಕರು ಗ್ರಂಥ ಸಂಶೋಧನೆ ಮತ್ತು ಧರ್ಮ ಪ್ರಸಾರಕ್ಕೆ ತಮ್ಮ ಜೀವನವನ್ನೇ ಮುಡುಪಾಗಿಟ್ಟು ಸಮಾಜಕ್ಕೆ ಅವುಗಳನ್ನು ಕೊಡುಗೆಯಾಗಿಟ್ಟು ಹೋಗಿದ್ದಾರೆ. ಅದನ್ನು ಶಿವಯೋಗ ಮಂದಿರದಲ್ಲಿ ಕ್ರೋಢೀಕರಿಸಿದ್ದಾರೆ. ಕಾರಣ ಅವು ಮುಂದಿನವರಿಗೆ ಆದರ್ಶ ಪ್ರಾಯವಾಗಲೆಂಬುದು. ಅಂತಹ ಅವಿಸ್ಮರಣೀಯ ಕಾರ್ಯದ ಅವಲೋಕನವೇ ಇಲ್ಲಿನ ಆಶಯವಾಗಿದೆ.

೩. ಸಾಹಿತ್ಯ ಪ್ರಕಟಣೆ

"ಯಾವುದೇ ಧರ್ಮದ ಸಂಸ್ಕೃತಿ ಉಳಿದು-ಬೆಳೆದು-ಬಾಳಿ ಬೆಳಗಬೇಕಾದರೆ ಆ ಧರ್ಮದಲ್ಲಿ ಸಾಹಿತ್ಯವಿರಬೇಕು. ಅದರ ಪ್ರಚಾರವಾಗಬೇಕು. ಹಾಗಾಗದ ಹೊರತು ಬೇಕಾದಷ್ಟು ದೊಡ್ಡದಾದ ಧರ್ಮದ ಜನಾಂಗವಿದ್ದರೂ ಅದು ಬಹು ದಿವಸ ಅಸ್ತಿತ್ವದಲ್ಲಿ ಉಳಿಯಲಾರದು. ಅದಕ್ಕಾಗಿ ಒಂದು ದೊಡ್ಡ ನಿಧಿಯನ್ನು ಸಂಗ್ರಹಿಸಿ ತದ್ವಾರಾ ಗ್ರಂಥ ಸಂಶೋಧನೆಯ ಕಾರ್ಯಗಳು ಜರುಗಬೇಕು"[೧೮] ಎಂದು ಹಾನಗಲ್ಲ ಕುಮಾರಸ್ವಾಮಿಗಳು ಅಪ್ಪಣೆ ಕೊಡಿಸಿದ್ದರು. ಅವರ ಈ ಮಾತು ಮುಂದೆ ಅವರದೇ ಮಸ್ತಕದಲ್ಲಿ 'ಮುದ್ರಣಾಲಯ ಸೃಷ್ಟಿಗೂ' ಕಾರಣವಾಯಿತು. ಅದುವರೆಗೂ ಪತ್ರಿಕಾ ಸಾಹಿತ್ಯವು ಕೇವಲ ಜನಪರ ನಿಲುವನ್ನು ಪ್ರಚಾರದಲ್ಲಿ ತರುತಿದ್ದು, ಹಾನಗಲ್ಲ ಶ್ರೀಗಳ ಪ್ರಯತ್ನದ ಫಲವಾಗಿ ಮೊಟ್ಟ ಮೊದಲ ಬಾರಿಗೆ "ಧರ್ಮ ಪ್ರಸಾರಕ" ಚಟುವಟಿಕೆಗಾಗಿಯೇ ಪತ್ರಿಕೆಯನ್ನು ಹೊರತರುವ ಚಿಂತನೆ ನಡೆಯಿತು. ಹಾಗಾಗಿ ಶ್ರೀಗಳು ಈ ಕಾರ್ಯದ 'ಆದಿ ಮರುಷ'ನೆಂಬ ಕೀರ್ತಿಗೆ ಪಾತ್ರರಾಗಿದ್ದಾರೆ. ಅಲ್ಲದೆ ನಾಡಿನ ಉದ್ದಗಲಕ್ಕೂ ಅದನ್ನು ಪ್ರೇರಕ ಶಕ್ತಿಯಂತೆ ಹರಿಬಿಟ್ಟವರು. ಇದರಿಂದಾಗಿ ಇಂದು ಧರ್ಮ ಪ್ರಸಾರಕ್ಕಾಗಿ ಬರುತ್ತಿರುವ ಪತ್ರಿಕೆಗಳು ನೂರಾರು, ಒಂದೊಂದು ಧರ್ಮದಲ್ಲಿ ಹತ್ತಾರು ಪತ್ರಿಕೆಗಳಿವೆ. ವೀರಶೈವ ಧರ್ಮದಲ್ಲೆ ಅದರ ಸಂಖ್ಯೆ ನೂರನ್ನು ಮುಟ್ಟಿರಬಹುದು. ಕಾರಣ ಒಂದೊಂದು ಪ್ರಾಂತ್ಯದ, ಒಂದೊಂದು ಭಾಗದ, ಒಂದೊಂದು ಮಠದಿಂದ ಒಂದೊಂದೇ ಪತ್ರಿಕೆ ಬಂದರೂ ಕರ್ನಾಟಕದಲ್ಲಿ ನೂರಾರು ವೀರಶೈವ ಮಠಗಳಿವೆ. ಅಂದ ಮೇಲೆ ವೀರಶೈವ ಧರ್ಮ ಪ್ರಸಾರದಲ್ಲಿ ಅಷ್ಟೇ ಸಂಖ್ಯೆಯ ಪತ್ರಿಕೆಗಳಿವೆ. ಮಾಸಿಕ, ತ್ರೈಮಾಸಿಕ, ವಾರ್ಷಿಕ, ಪಾಕ್ಷಿಕ ಹೀಗೆ ಹತ್ತಾರು ರೀತಿಯ ಪತ್ರಿಕೆ ಹೊರಬರುತಲಿವೆ. ಇವೆದಲ್ಲಕ್ಕೂ ಮೂಲ ಕಾರಣ ಪ್ರೇರಣೆ ಎಂದರೆ ಹಾನಗಲ್ಲ ಕುಮಾರಸ್ವಾಮಿಗಳೇ ಎಂದರೆ ತಪ್ಪಾಗಲಾರದು. ಅಂತಹದೊಂದು ಪತ್ರಿಕಾ ಕ್ಷೇತ್ರದಿಂದಲೂ ಶಿವಯೋಗ ಮಂದಿರ ಮೊದಲುಗೊಂಡು ಬಂದಿದೆ. ಅದರ ಕಾರ್ಯಕ್ಷೇತ್ರ ವಿಸ್ತಾರಗೊಡ ಬಗೆ ಹಾಗೂ ಇದರಿಂದ ಪ್ರೇರಿತಗೊಂಡ ಅಂಶಗಳು ಯಾವುವು ಎಂಬುದನ್ನು ನಿರೂಪಿಸುವುದೇ ಇಲ್ಲಿನ ಮುಖ್ಯ ಉದ್ದೇಶವಾಗಿದೆ.

ವೀರಶೈವ ಸಾಹಿತ್ಯ ಧರ್ಮ ಸಂಸ್ಕೃತಿಗಳ ಪ್ರಸಾರವಾಗಬೇಕೆಂದು ಶ್ರೀಗಳು ಹಗಲಿರುಳೆನ್ನದೆ ಚಿಂತಿಸುತ್ತಿದ್ದರು. 'ಪ್ರಸಾರ ಕಾರ್ಯಕ್ಕೆ ಪತ್ರಿಕೆ ಬೇಕು' ಪ್ರಸಾರಕದ ಈ ಬೇರುಗಳಿಗಾಗಿ ಶ್ರೀಗಳು ಮುದ್ರಣವನ್ನು ಮಂದಿರದಲ್ಲಿ ಸ್ಥಾಪಿಸುವ ಯೋಚನೆ ಮಾಡಿದರು. ಸಾರಿಗೆ ಸೌಲಭ್ಯಗಳ ವ್ಯವಸ್ಥೆಗಳಿಲ್ಲದ, ಅಗತ್ಯ ತರಬೇತಿ ಹೊಂದಿದ ಪ್ರಜ್ಞಾರಿಲ್ಲದ ಕಾಲದಲ್ಲೂ ಇಂತಹದೊಂದು ಕಾರ್ಯಕ್ಕೆ ಮನಸ್ಸು ಮಾಡಿದರು. ಇದರ ಫಲವಾಗಿ ಅವರ ಈ ಇಚ್ಚೆಯು ಲಿಂಗೈಕ್ಯರಾದ ನಂತರವೂ ಮಂದಿರದಲ್ಲಿ ನಡೆಯುತ್ತದೆ.

“ಶಿವಯೋಗ ಮಂದಿರದಲ್ಲಿ ಅಚ್ಚುಕೂಟವನ್ನು ಸ್ಥಾಪಿಸಿ. ಅದರ ಮುಖಾಂತರ ಮಾಸಿಕ ಸಾಪ್ತಾಹಿಕ ಪತ್ರಿಕೆಗಳನ್ನು ಪ್ರಕಟಿಸಿ ಧಾರ್ಮಿಕ ವಿಚಾರಗಳನ್ನು ಸುಲಭವಾಗಿ ಸಾಮಾನ್ಯ ಜನತೆಯವರೆಗೂ ಮುಟ್ಟಿಸುವ ಮತ್ತು ಪ್ರಕಟವಾಗದಿರುವ ಪ್ರಾಚೀನ ವೀರಶೈವ ವಾಜ್ಞಾಯವನ್ನು ಸಂಶೋಧಿಸಿ ಪ್ರಚಾರಪಡಿಸುವುದು”[೧೯] ಇದು ಶಿವಯೋಗ ಮಂದಿರದ ಉದ್ದೇಶೋಪಾಯದಲ್ಲಿ ಒಂದಾಗಿದೆ. ಇಂತಹದೊಂದು ಉದ್ದೇಶವನ್ನು ಪ್ರಸ್ತುತ ಶಿವಯೋಗಮಂದಿರದ ಸ್ಥಾಪನ ಕಾಲಕ್ಕೆ ಜಾರಿಗೆ ತರಲು ಸಾದ್ಯವಿರಲಿಲ್ಲ. ಕಾರಣ ವ್ಯವಸ್ಥಿತವಾದ ಕಟ್ಟಡಗಳು, ಸಾರಿಗೆ ಸಂಪರ್ಕ, ರಸ್ತೆಯ ವ್ಯವಸ್ಥೆ, ಗಾಡಿಗಳ ವ್ಯವಸ್ಥೆ, ನುರಿತ ಅಚ್ಚುಗಾರರ ಕೊರತೆಗಳಿದ್ದವು. ಹೀಗಾಗಿ ಈ ಉದ್ದೇಶ ಸಾಧನೆಗಾಗಿ ನಲವತ್ತು ವರ್ಷಗಳನ್ನೇ ಶಿವಯೋಗ ಮಂದಿರ ಕಾಯಬೇಕಾಯಿತು.

ಹಿಡಿದ ಕಾರ್ಯವನ್ನು ಛಲಬಿಡದೆ ಸಾಧಿಸುವುದು ಹಾನಗಲ್ ಕುಮಾರಸ್ವಾಮಿಗಳಿಗಿದ್ದ ದೊಡ್ಡ ಗುಣವಾಗಿತ್ತು. ಅನೇಕ ಇಲ್ಲಗಳ ಕೊರತೆಗಳ ನಡುವೆಯೂ ಅವರ ಅನೇಕ ಕಾರ್ಯಗಳನ್ನು ಮಾಡಿದ್ದಾರೆ ಅಂತಹುಗಳಲ್ಲಿ ಮುದ್ರಣವ್ಯವಸ್ಥೆಯೂ ಕೂಡ ಒಂದು ಸಾಧನೆಯಾಗಿದೆ. ಶಿವಯೋಗ ಮಂದಿರ ಸ್ಥಾಪನೆಯಾದ ನಂತರವೂ ಕೆಲವೊಂದು ಸಾಮಾಜಿಕ ಜಾಗೃತಿ ಕಾರ್ಯಗಳನ್ನು ನಿರ್ವಹಿಸಿದರು. ಅದರಲ್ಲಿ 'ಧರ್ಮೋತ್ತೇಜಕ ಸಭೆಯ'ಯು ಒಂದಾಗಿದೆ. ಅಖಿಲ ಭಾರತ ವೀರಶೈವ ಮಹಾಸಭೆಯಲ್ಲಿ ಧಾರ್ಮಿಕ ವಿಚಾರಗಳಿಗೆ ಆಸ್ಪದವಿರಲಿಲ್ಲ, ಶಿವಯೋಗ ಮಂದಿರದಲ್ಲಿ ನೇರವಾಗಿ

ಸಾಮಾಜಿಕ ವಿಚಾರಗಳಿಗೆ ಆಸ್ಪದವಿರದ ಕಾರಣ ಹಾನಗಲ್ ಕುಮಾರಸ್ವಾಮಿಗಳು ಧರ್ಮೋತ್ತೇಜಕ ಸಭೆಯನ್ನು ಸ್ಥಾಪಿಸುತ್ತಾರೆ. ಈ ಮೂಲಕ ಸಾಮಾಜಿಕ ವಿಚಾರಕ್ಕಾಗಿ ಮತ್ತೊಂದು ರೀತಿಯ ಚಿಂತನೆ ಮಾಡುತ್ತಾರೆ

ಧಾರ್ಮಿಕ ವಿಚಾರಗಳಿಗಾಗಿಯೇ ಬಂಕಾಪುರದಲ್ಲಿ ವೀರಶೈವ ಭಕ್ತ ಸಮಾಜದವರೆಲ್ಲರ ಸಭೆ ಕರೆದು ಅಲ್ಲಿ ಧಾರ್ಮಿಕ ವಿಚಾರಗಳ ಚರ್ಚೆಗಾಗಿಯೇ 'ಧರ್ಮೋತ್ತೇಜಕ' ಸಭೆ ಸ್ಥಾಪಿಸಲಾಗುತ್ತದೆ. ಈ ಸಭೆಯು ಪ್ರತೀ ವರ್ಷವೂ ನಡೆಯತಕ್ಕದ್ದೆಂದು ಅದರ ಮೂಲಕ

ವೀರಶೈವ ಧರ್ಮ ಮತ್ತು ಸಂಸ್ಕೃತಿಯ ಪ್ರಸಾರ ಕಾರ್ಯವನ್ನು ಕೈಗೆತ್ತಿಕೊಳ್ಳುವುದು. ಆಕಾಲದ ಎಲ್ಲ ರೀತಿಯ ವಿದ್ಯಮಾನಗಳಿಗೆ ಸ್ಪಂದಿಸುವುದು. ಅದಕ್ಕಾಗಿ ಒಂದು ಪತ್ರಿಕೆ ಹೊರತರುವುದು"[೨೦] ಎಂಬ ವಿಚಾರವನ್ನು ಅಂತಿಮಗೊಳಿಸಿದರು

ವೀರಶೈವ ಧರ್ಮ ಮತ್ತು ಸಂಸ್ಕೃತಿಯ ಪ್ರಸಾರ ಕಾರ್ಯವನ್ನು ಸಾಮಾಜದ ವಿದ್ಯಾಮಾನದೊಂದಿಗೆ ಜನ ಸಾಮಾನ್ಯರಲ್ಲಿ ಜಾಗೃತಿ ಮಾಡಿಸುವ ಸಲುವಾಗಿ ಧಾರವಾಡದ ವೀರಶೈವ ಸಂಸ್ಕೃತ ಶಾಲೆಯ ಅಧ್ಯಾಪಕರಾದ ಎಚ್.ಎಸ್.ಶಿವಲಿಂಗಶಾಸ್ತ್ರಿಗಳವರ ಪ್ರಕಾಶಕತ್ವದಲ್ಲಿಯೂ, ಸಂಪಾದಕತ್ವದಲ್ಲಿಯೂ 'ಧರ್ಮತರಂಗಿಣಿ' ಎಂಬ ಮಾಸಪತ್ರಿಕೆ ಹೊರತರಲಾಯಿತು. ಈ ಮೂಲಕ ಶಿವಯೋಗ ಮಂದಿರದ ಉದ್ದೇಶೋಪಾಯದಲ್ಲಿ ಒಂದಾದ 'ಮಾಸ ಪತ್ರಿಕೆ ಹಾಗೂ ಮುದ್ರಣಾಲಯದ' ಕನಸು ನೆರವೇರುತ್ತದೆ. "ಶಾಲಿವಾಹನ ಶಕೆ ೧೮೩೩ ಮಾರ್ಘಶೀರ ಅಂದರೆ ಡಿಸೆಂಬರ್ ೧೯೧೧ ರಲ್ಲಿ ಶಿವಯೋಗ ಮಂದಿರದ ಧರ್ಮೋತ್ತೇಜಕ ಸಭೆಯ ಮುಖವಾಣಿಯಾಗಿ ಎಚ್. ಎಸ್. ಶಿವಲಿಂಗಶಾಸ್ತ್ರಿಗಳ ಸಂಪಾದಕತ್ವದಲ್ಲಿ ಧಾರವಾಡದ ಕರ್ನಾಟಕ ಬುಕ್ ಡಿಪೋದ ಕೆ.ಎಚ್.ಮುದ್ವೇಡ್ಕರ ಅವರ ಮುದ್ರಿಸಿದ ಧರ್ಮತರಂಗಿಣಿಯ ಮೊದಲ ಸಂಚಿಕೆ ಬಿಡುಗಡೆಗೊಳ್ಳುತ್ತದೆ"[೨೧]

ಹೀಗೆ ಈ ಧರ್ಮತರಂಗಿಣಿ ಮೊದಲ ಧಾರ್ಮಿಕ ಪತ್ರಿಕೆಯಾಗಿ ವಿಶೇಷ ಮಾನ್ಯತೆಯೊಂದಿಗೆ ಶಿವಯೋಗ ಮಂದಿರದ ನೇತೃತ್ವದಲ್ಲಿ ಮುದ್ರಣಗೊಂಡು ಆ ಕಾಲದ ಯುಗಧರ್ಮದ ಸ್ಪಂದಿಕವಾಗಿ ಜನಮನ್ನಣಿ ಪಡೆಯುತ್ತದೆ. ಕ್ರಮೇಣ ಇದು ಹಲವು ಪತ್ರಿಕೆಗೂ, ನಾಡಿನಾದ್ಯಂತ ಮಠಮಾನ್ಯಗಳಿಂದ ಇಂದು ಹೊರಬರುತ್ತಿರುವ ಮಾಸಿಕ, ತ್ರೈಮಾಸಿಕ, ಪಾಕ್ಷಿಕ, ಸಾಪ್ತಾಹಿಕ ಪತ್ರಿಕೆಗೆ ಪ್ರೇರಣೆ ಒದಗಿಸುತ್ತದೆ.

ಹೀಗೆ ನಾಡಿನಾದ್ಯಂತ ಬಂದ ಆರಂಭಿಕ ಮಾಸಪತ್ರಿಕೆಗಳನ್ನು ಹಾಗೂ ಶಿವಯೋಗಮಂದಿರದಿಂದ ಪ್ರಕಟಗೊಂಡ ಪತ್ರಿಕೆಗಳನ್ನು ಅವಲೋಕಿಸುವುದು ಅಗತ್ಯವಾದ ಅಂಶವೆಂದು ಇಲ್ಲಿ ನಿರೂಪಿಸಲಾಗಿದೆ. ಶಿವಯೋಗಮಂದಿರದಲ್ಲಿ ಬಂದ ಪತ್ರಿಕೆಗಳು ಸಮಕಾಲೀನ ಸಂದರ್ಭದಲ್ಲಿ ರೂಪಗೊಂಡ ನಿಯತಕಾಲಿಕೆಗಳು ಹಾಗೂ ಶಿವಯೋಗಮಂದಿರದಿಂದ ಪ್ರಕಟವಾದ ಗ್ರಂಥಗಳು ಇವುಗಳನ್ನು ಅಧ್ಯಯನದ ದೃಷ್ಟಿಯಿಂದ ಎರಡು ಭಾಗವಾಗಿ ವಿಂಗಡಿಸಲಾಗಿದೆ. ೧. ಪತ್ರಿಕೆಗಳು, ನಿಯತಕಾಲಿಕೆಗಳು ೨. ಗ್ರಂಥಗಳು ಎಂಬುದಾಗಿವೆ.

೧. ಪತ್ರಿಕೆಗಳು, ನಿಯತಕಾಲಿಕೆಗಳು

'ಧರ್ಮತರಂಗಿಣಿ' ೧೯೧೧ರಲ್ಲಿ ಶಿವಯೋಗಮಂದಿರದ ಮುಖ್ಯವಾಹಿನಿಯಂತೆ ಧಾರವಾಡದ ವೀರಶೈವ ಸಂಸ್ಕೃತ ಶಾಲೆಯ ಅಧ್ಯಾಪಕರಾದ ಎಚ್.ಎಸ್. ಶಿವಲಿಂಗಶಾಸ್ತ್ರೀಗಳವರ

ನೇತೃತ್ವದಲ್ಲಿ ಶಾಲಿವಾನಶಕೆ ೧೮೩೩ ಮಾರ್ಘಶಿರ ೧೯೧೧ರ ಡಿಸೆಂಬರ್‌ನಲ್ಲಿ ಪ್ರಾರಂಭವಾಯಿತು. "ಇದು ನಾಡಿನ ಪ್ರಸಿದ್ಧ ಮೊದಲ ಮಾಸಪತ್ರಿಕೆ ಎಂಬ ಐತಿಹಾಸಿಕ ಹೆಮ್ಮೆಯನ್ನು ಪಡೆದು ಅಂದಿನ ಕಾಲದ ಇಂಗ್ಲೇಂಡಿನ ಅಧಿಪತಿಯ ಮುಖಪುಟ ವಿನ್ಯಾಸದೊಂದಿಗೆ ಜಾರಿಗೆ ಬಂದಿದೆ."[೨೨] ಈ ಚಿತ್ರವನ್ನು ಮೃತ್ಯುಂಜಯ ರೂಮಾಲೆಯವರ ಶಿವಯೋಗಮಂದಿರ ಶತಸಂವತ್ಸರ ಪುಸ್ತಕದ ಚಿತ್ರಭಾಗದಲ್ಲಿ ನೀಡಿದ್ದಾರೆ. ಧರ್ಮತರಂಗಿಣಿ ಎಂಬ ಪತ್ರಿಕೆಯು ಪ್ರಸಿದ್ಧ ಲೇಖಕರು, ವಿಮರ್ಶಕರು, ಬರಹಗಾರರು, ಚಿಂತಕರು, ಕನ್ನಡ, ಸಂಸ್ಕೃತ ಭಾಷೆಯ ವಿಷಯಗಳು, ಉಪನ್ಯಾಸಗಳು, ಸಂಶೋಧನಾತ್ಮಕ ವಿಚಾರಗಳನ್ನು ಅದರಲ್ಲಿ ಪ್ರಕಟಿಸಲಾಯಿತು. ಹೀಗೆ ಧರ್ಮ ಪ್ರಸಾರಕ ಕಾರ್ಯದ ಮೊಟ್ಟಮೊದಲ ಪತ್ರಿಕೆಯೊಂದು ಈ ಜಗದೊಳಗೆ ಸಮಸ್ತ ಸಚೇತನತೆಯ ಶ್ರೇಷ್ಠತೆಯೊಂದಿಗೆ ಪೂರ್ಣತೆಯಿಂದ ಮೋಕ್ಷಕ್ಕಾಗಿ ಪರಮಾತ್ಮನನ್ನು ಓದುಗರಿಗೆ ತೋರಿಸುತ್ತದೆ.

ಸದ್ಧರ್ಮ ದೀಪಿಕೆ

ವೀರಶೈವ ಸಮಾಜದ ಧರ್ಮ ಪ್ರಸಾರವು ವಿಶ್ವಮಟ್ಟದಲ್ಲಿ ಮಾದರಿಯಾಗಿಸುವಲ್ಲಿ ಪತ್ರಿಕೆಗಳು ಅಗತ್ಯವೆಂದು ಮನಗಂಡ ಶ್ರೀಗಳು ಹಾವೇರಿಯ ಹುಕ್ಕೇರಿ ಮಟ್ಟದಲ್ಲಿ ಸ್ಥಾಪಿಸಿದ ಶಿವಲಿಂಗ ವಿಜಯ ಮುದ್ರಣಾಲಯವನ್ನು ಶ್ರೀ ಮಲ್ಲಿಕಾರ್ಜುನ ನಿವೃತ್ತ ಹೆಡ್‌ಮಾಸ್ತರ ಶಿರಾಳಕೊಪ್ಪ ಅವರು ತಮ್ಮ ೫೫ನೇ ವಯಸ್ಸಿನಲ್ಲಿ ಶ್ರೀ ಮನ್ನಿರಂಜನ ಪ್ರಣವ ಸ್ವರೂಪ ಕುಮಾರಸ್ವಾಮಿಗಳ ಅಪ್ಪಣೆಯಂತೆ 'ಶಿವಲಿಂಗ ವಿಜಯ' ಮುದ್ರಣಾಲಯದಲ್ಲಿ 'ಸದ್ಧರ್ಮದೀಪಿಕೆ' ಎಂಬ ಮಾಸ ಪತ್ರಿಕೆಯನ್ನು ೧೯೨೪-೨೫ರಲ್ಲಿ ಆರಂಬಿಸುತ್ತಾರೆ. ಅದರ ಮೂಲಕ ವೀರಶೈವರ ಪ್ರಾಚೀನ ಸಂಸ್ಕೃತದ ವೇದ, ಉಪನಿಷತ್ತು, ಷಟ್‌ಶಾಸ್ತ್ರದ ಅಂಶವನ್ನು ಸರಳಗನ್ನಡದಲ್ಲಿ ಮುದ್ರಿಸಿ ಪ್ರಕಟಗೊಳಿಸುತ್ತಾರೆ. ಈ ಪತ್ರಿಕೆಯು ಅವರ ಸಂಪಾದಕತ್ವದಲ್ಲಿ ಮೂವತ್ತು ವರ್ಷ ಧರ್ಮ ಪ್ರಸಾರ ಕೈಗೊಂಡು ಅನುಪಮ ಸೇವೆ ಸಲ್ಲಿಸಿದೆ.

ಶರಣ ಸಂದೇಶ

ಬಸವಾದಿ ಶರಣರ ವಚನಗಳು ಪ್ರಕಟವಾದಂತೆ ಅದರ ಮೇಲಿನ ಗಾಢವಾದ ಪ್ರೇರಣೆ ಪ್ರಭಾವಕ್ಕೆ ಒಳಗಾದವರು. ಅನೇಕರು ಹಾಗೆ ಪ್ರಭಾವಿತಗೊಂಡವರಲ್ಲಿ "ಕರ್ನಾಟಕದ ಗಾಂಧಿ ಎಂದು ಕರೆಯಲ್ಪಟ್ಟ ಹರ್ಡೇಕರ ಮಂಜಪ್ಪನವರು ಬಸವಾದಿ ಶರಣರ ಕಾಯಕತ್ವ ತತ್ವ, ದಾಸೋಹ, ಮಾನವನ ಸರಿಸಮಾನತೆ, ಲಿಂಗ ಸಮಾನತೆ ಇತ್ಯಾದಿ ಲೋಕೋತ್ತರ ತತ್ವಗಳು ಅವರನ್ನು ಗಾಢವಾಗಿ ಕಲಕಿ ಬಿಟ್ಟಿದ್ದವು. ಆ ಕಾರಣವಾಗಿ 'ಶರಣ ಸಂದೇಶ' ಎಂಬ ಧರ್ಮ ಪ್ರಸಾರ ಮಾಸಿಕ ಪತ್ರಿಕೆ ಹೊರಡಿಸುತ್ತಾರೆ."[೨೩] "ನ್ಯಾಯ ನಿಷ್ಠುರಿ ಶರಣರಿಗೂ ಅಂಜುವವನಲ್ಲ, ಲೋಕ ವಿರೋಧಿ ಶರಣ ದಾಕ್ಷಿಣ್ಯ ಪರನಲ್ಲ" ಎಂಬ ಧ್ಯೇಯ ವಾಕ್ಯ ಅವರ ಶರಣ ಸಂದೇಶ

ಪತ್ರಿಕೆಯ ಬಹು ಮಹತ್ವದ ಉಕ್ತಿಯಾಗಿತ್ತು."[೨೪] ಹೀಗೆ ಧರ್ಮ ಪ್ರಸಾರದಲ್ಲಿ ಪ್ರತ್ಯೇಕ್ಷವಾಗಿ ಭಾಗಿಯಾಗುತ್ತಾರೆ.

* **ಶಿವ ಪ್ರತಾಪ**

ಹಾನಗಲ್ಲ ಕುಮಾರಸ್ವಾಮಿಗಳು ಶಿವಯೋಗ ಮಂದಿರದ ಉದ್ದೇಶೋಪಾಯ ಕಾರ್ಯಗತಗೊಳಿಸಲು "ಹುಬ್ಬಳ್ಳಿ ಜಗದ್ಗುರು ಮೂರು ಸಾವಿರಮಠದ ಮುದ್ರಣ ಯಂತ್ರವನ್ನು ಎರಡು ಸಾವಿರ ವೆಚ್ಚದಲ್ಲಿ ಖರೀದಿ ಮಾಡಿ ಹಾವೇರಿಯ ಹುಕ್ಕೇರಿ ಮಠದಲ್ಲಿರಿಸಿ ಅದಕ್ಕೆ 'ಶಿವಲಿಂಗ ವಿಜಯ ಮುದ್ರಣಾಲಯ' ಎಂಬುದಾಗಿ ನಾಮಕರಣ ಮಾಡಿ ಶ್ರೀ ಗುರುಮೂರ್ತಿ ಶಾಸ್ತ್ರಿಗಳು ಕಜ್ಜರಿ ಅವರ ಸಂಪಾದಕತ್ವದಲ್ಲಿ ೧೯೨೯ರಲ್ಲಿ 'ಶಿವ ಪ್ರತಾಪ' ಎಂಬ ಮಾಸ ಪತ್ರಿಕೆಯಾಗಿ ೧೯೨೯ರ ಫೆಬ್ರವರಿ ೨೮ ರಂದು ಕುಮಾರಸ್ವಾಮಿಗಳಿಂದ ಅಧಿಕೃತವಾಗಿ ಕಾರ್ಯಾರಂಭಗೊಂಡಿತು."[೨೫] ಅದರ ಮೂಲಕ ಅನೇಕ ವಿಮರ್ಶಾತ್ಮಕ ಲೇಖನಗಳು, ನಾಡಿನ ಹಿರಿಯ-ಕಿರಿಯ ಸಾಹಿತಿ, ಸಂಶೋಧಕರ ಲೇಖನಗಳು ಪ್ರಸಾರಗೊಂಡವು. ಅನೇಕ ವರ್ಷ ಧರ್ಮ ಪ್ರಸಾರ ಕಾರ್ಯ ನಿರ್ವಹಿಸಿದ ಈ ಮುದ್ರಣಾಲಯ ಮುಂದೆ ಚೆನ್ನಮಲ್ಲಿಕಾರ್ಜುನರ 'ಸದ್ಧರ್ಮ ದೀಪಿಕೆ' ಮಾಸ ಪತ್ರಿಕೆಗೆ ಮುದ್ರಣಾಲಯವಾಗಿ ಪರಿವರ್ತನೆ ಹೊಂದುತ್ತದೆ.

* **ಶಿವಾನುಭವ**

ವಚನ ಪಿತಾಮಹ' ಖ್ಯಾತಿಯ ಫ.ಗು. ಹಳಕಟ್ಟಿಯವರ ನೇತೃತ್ವದಲ್ಲಿ ೧೯೨೬ರಲ್ಲಿ ಬಂದ ಧರ್ಮ ಪ್ರಸಾರಕ ಪತ್ರಿಕೆ ಎಂದರೆ 'ಶಿವಾನುಭವ' ಎಂಬುದಾಗಿದೆ. ಈ ನಿಟ್ಟಿನಲ್ಲಿ ಮುಂದೆ ಬಂದ ಅನೇಕ ಪತ್ರಿಕೆಗಳ ಸಾಲಿನಲ್ಲಿ ಹೀಗೆ ನಾಡಿನಾದ್ಯಂತ ಬಂದ ಆರಂಭಿಕ ಮಾಸ ಪತ್ರಿಕೆಗಳನ್ನು ಹಾಗೂ ಶಿವಯೋಗ ಮಂದಿರದಿಂದ ಪ್ರಕಟಗೊಂಡ ಪತ್ರಿಕೆಗಳ ಅವಲೋಕಿಸುವುದು ಅಗತ್ಯವಾದ ಅಂಶವೆಂದು ಇಲ್ಲಿ ನಿರೂಪಿಸಲಾಗಿದೆ.

ಶಿವಯೋಗ ಮಂದಿರದಲ್ಲಿ ಬಂದ ಪತ್ರಿಕೆಗಳು, ಸಮಕಾಲೀನ ಸಂದರ್ಭದಲ್ಲಿ ರೂಪುಗೊಂಡ ನಿಯತಕಾಲಿಕೆಗಳು, ಹಾಗೂ ಶಿವಯೋಗಮಂದಿರದಿಂದ ಪ್ರಕಟವಾದ ಗ್ರಂಥಗಳು ಇವುಗಳನ್ನು ಅಧ್ಯಯನದ ದೃಷ್ಟಿಯಿಂದ ಎರಡು ಭಾಗವಾಗಿ ವಿಂಗಡಿಸಲಾಗಿದೆ.ಒಂದು ಪತ್ರಿಕೆಗಳು, ನಿಯತಕಾಲಿಕೆಗಳು. ಎರಡು- ಗ್ರಂಥಗಳು ಎಂಬುದಾಗಿವೆ.

ಲಾಭ-ನಷ್ಟದ ಯೋಚನೆ ಇಲ್ಲದೆ ಜನತೆಯಲ್ಲಿ ಧರ್ಮ, ನ್ಯಾಯ-ನೀತಿ-ಸಂಸ್ಕಾರ-ಆಚಾರವನ್ನು ಬಿಂಬಿಸುವ ಜ್ಞಾನದ ಕಿರು ಹೊತ್ತಿಗೆಯಾಗಿವೆ. ಕೆಲವೊಂದು ಪತ್ರಿಕೆಗಳು ಸ್ವಜನ ಪಕ್ಷ, ಸ್ವನಿಲುವು ಬಿಂಬಿಸುವ ಪತ್ರಿಕೆಗಳಾಗಿವೆ. ಪ್ರಜ್ಞಾವಂತ ಸಮಾಜ ನಿರ್ಮಾಣದಲ್ಲಿ ಅವು ಒಮ್ಮೊಮ್ಮೆ ತೊಡರುಗಾಲುಗಳಾಗುತ್ತಿರುವುದು ಶೋಚನಿಯ ಸಂಗತಿಯಾಗಿದೆ.

* **ಸದಾಶಿವ ಮುದ್ರಣಾಲಯ, ಸುಕುಮಾರ ಪತ್ರಿಕೆ**

ಶಿವಯೋಗಮಂದಿರದ ನೆಲೆಯಲ್ಲಿ ಮುದ್ರಣಾಲಯ ಸ್ಥಾಪಿಸಲು ಹಾನಗಲ್ಲ ಕುಮಾರಸ್ವಾಮಿಗಳಿಗೆ ಸಾಧ್ಯವಾಗದಿದ್ದರೂ ಗದಗ, ಧಾರವಾಡ, ಹಾವೇರಿ ನಗರಗಳಲ್ಲಿ ಮೊದಲು ಮುದ್ರಣಾಲಯವನ್ನು ಸ್ಥಾಪಿಸಿ ಕಾರ್ಯಗತಗೊಳಿಸಿದರು. ಈ ಹಿನ್ನೆಲೆಯಲ್ಲಿ ಹಾನಗಲ್ಲ ಕುಮಾರಸ್ವಾಮಿಗಳು ಹುಬ್ಬಳ್ಳಿ ಜಗದ್ಗುರು ಮೂರುಸಾವಿರ ಮಠದಲ್ಲಿದ್ದ ಮುದ್ರಣ ಯಂತ್ರವನ್ನು ಮಂದಿರದ ಎರಡುಸಾವಿರ ರೂಪಾಯಿಗಳ ವೆಚ್ಚದಲ್ಲಿ ಖರೀದಿ ಮಾಡಿ ಶಿವಯೋಗಮಂದಿರದ ಆಜೀವ ಅಧ್ಯಕ್ಷರಾಗಿದ್ದ ಶ್ರೀಶಿವಬಸವ ಮಹಾಸ್ವಾಮಿಗಳ ಆಶ್ರಮದಲ್ಲಿ ಹಾವೇರಿ ಹುಕ್ಕೇರಿ ಮಠದಲ್ಲಿ 'ಶಿವಲಿಂಗ ವಿಜಯ ಮುದ್ರಣ' ಎಂಬ ಹೆಸರಿನೊಂದಿಗೆ ಶ್ರೀಗುರುಮೂರ್ತಿಶಾಸ್ತ್ರಿ ಕಜ್ಜರಿ ಅವರ ನೇತೃತ್ವದಲ್ಲಿ ೧೯೨೯ ರಲ್ಲಿ ಈ ಧಾರ್ಮಿಕ ವಾರಪತ್ರಿಕೆಯನ್ನು ಹೊರತರುವ ಮೂಲಕ ಮುದ್ರಣಾಲಯದ ಅಧಿಕೃತ ಕಾರ್ಯವನ್ನು ಆರಂಭಿಸಿದರು. "೧೯೩೦ ಫೆಬ್ರವರಿ ೨೮ ರಂದು ಶ್ರೀಕುಮಾರಶಿವಯೋಗಿಗಳ ಲಿಂಗೈಕ್ಯತೆಯಿಂದ ಈ ವಾರಪತ್ರಿಕೆಗೆ ಆಘಾತವುಂಟಾಯಿತು."[೨೬] ಶ್ರೀ ಕುಮಾರಸ್ವಾಮಿಗಳ ಕನಸಿನ ಸಂಕಲ್ಪವನ್ನು ನೆರವೇರಿಸಲು "ಶಿರಾಳಕೊಪ್ಪದ ಶ್ರೀ ಚನ್ನಮಲ್ಲಿಕಾರ್ಜುನರು ತಮ್ಮದೇ ಸಂಪಾದಿಕತ್ವದಲ್ಲಿ ಶ್ರೀಗಳ ಸ್ಮಾರಕವಾಗಿ 'ಸದ್ಧರ್ಮ ದೀಪಿಕೆ' ಎಂಬ ಮಾಸಪತ್ರಿಕೆಯನ್ನು ಹೊರತಂದು ಅನೇಕ ಸಂಶೋಧನಾ ವಿಚಾರಗಳನ್ನು ಚಿಕ್ಕ ಚಿಕ್ಕ ಉತ್ತಮ ಹೊತ್ತಿಗೆಗಳನ್ನು ಹೊರತಂದು ಅಲ್ಪ ಬೆಲೆಯಲ್ಲಿ ಪ್ರಚಾರ ಪಡಿಸಿದರು."[೨೭] ಶ್ರೀ ಚನ್ನಮಲ್ಲಿಕಾರ್ಜುನರು ಅನಿವಾರ್ಯ ಕಾರಣವಾಗಿ ಮೈಸೂರಿಗೆ ತೆರಳಿದಾಗ ಹಾವೇರಿಯಲ್ಲಿನ ಈ ಶಿವಲಿಂಗವಿಜಯ ಮುದ್ರಣಾಲಯವು ಅನಾಥವಾಯಿತು. "ಶಿವಯೋಗ ಮಂದಿರದ ಅಧ್ಯಕ್ಷರಾಗಿದ್ದ ಹಾವೇರಿ ಶಿವಬಸವಮಹಾಸ್ವಾಮಿಗಳ ಪ್ರೇರಣೆಯಂತೆ ಈ ಮುದ್ರಣ ಯಂತ್ರವನ್ನು ಶಿವಯೋಗಮಂದಿರದ ನೇತೃತ್ವದಲ್ಲಿ ಬಾಗಲಕೋಟೆಯಲ್ಲಿ ತಂದಿರಿಸಿದರೂ, ಅದು ಚಾಲೂ ಮಾಡಿರಲಿಲ್ಲ. ಕೊನೆಗೆ ನವಲಗುಂದ ಶ್ರೀಗಳವರ ಮಾರ್ಗದರ್ಶನದಂತೆ ಅದನ್ನು ಶಿವಯೋಗಮಂದಿರಕ್ಕೆ ತರಲಾಯಿತು. ಅದಕ್ಕಾಗಿ ಇಟಗಿ ದೇಸಾಯರ ಇಮಾರತಿಯಲ್ಲಿ ಅದನ್ನು ಸ್ಥಾಪಿಸಿ ನಡೆಸಲಾಯಿತು. ಮುಂದೆ ಈ ಶಿವಲಿಂಗವಿಜಯ ಮುದ್ರಣಾಲಯವು ಹಾನಗಲ್ಲ ಶ್ರೀಗಳ ಸ್ಮಾರಕವಾಗಿ ಅವರ ಮೂಲ ನಾಮವನ್ನಾಧರಿಸಿ ಶ್ರೀ ಸದಾಶಿವಸ್ವಾಮಿಗಳೆಂಬ ಹೆಸರಿನಲ್ಲಿ 'ಸದಾಶಿವ ಮುದ್ರಣಾಲಯ' ಎಂಬ ಮರುನಾಮದೊಂದಿಗೆ ಶಿವಯೋಗ ಮಂದಿರದಲ್ಲಿ ಕಾರ್ಯವನ್ನಾರಂಭಿಸಿತು."[೨೮] ಸದಾಶಿವ ಮುದ್ರಣಾಲಯವು ವ್ಯವಸ್ಥಿತವಾಗಿ ನಡೆಸಲು ಈ ದಿಶೆಯಲ್ಲಿ ಪ್ರಯತ್ನಿಸಿದರೆಂದರೆ, ಅಮೀನಗಡದ ಶ್ರೀನಿ ಪ್ರಭುಸ್ವಾಮಿಗಳು, ಮುದ್ರಣಾಲಯದ ವ್ಯವಸ್ಥಾಪಕರಾಗಿ, ಅಚ್ಚು ಕೂಟವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು ಪಂ. ಬಸವರಾಜ ಶಾಸ್ತ್ರಿಗಳು ಇವರು ಕೂಡ ೧೯೪೯ ರಲ್ಲಿ ಗದುಗಿನ ಜಗದ್ಗುರು ತೋಂಟದಾರ್ಯ ಸಂಸ್ಕೃತ

ವಿದ್ಯಾಲಯದ ಪ್ರಧಾನ ಅಧ್ಯಾಪಕರಾಗಿ ನಿಯುಕ್ತರಾದರು. ಅಲ್ಲಿಗೆ ಸದಾಶಿವ ಮುದ್ರಣಾಲಯ ಮತ್ತೆ ಅವನತಿಗೆ ಸರಿಯಿತು. "ಮತ್ತೆ ಮುದ್ರಣಾಲಯವನ್ನು ಸಂಸ್ಥೆಯಲ್ಲಿ ಸ್ಥಾಪಿಸಲು ಮ್ಯಾನೇಜಿಂಗ್ ಟ್ರಸ್ಟಿಗಳಾಗಿದ್ದ ಗದುಗಿನ ಶ್ರೀ ಸಿದ್ಧರಾಮಪ್ಪನವರು ಮಾನ್ವಿ ಮತ್ತು ಶ್ರೀ ಸಿ.ಜಿ.ಹುಂಡೇಕಾರ ವಕೀಲರೂ ಕಾರಣವಾಗಿದ್ದಾರೆ."[೨೫] ಕಾಲಗಳು ಉರುಳಿದಂತೆ ಶಿವಯೋಗ ಸಂಸ್ಥೆಯ ಕಾರ್ಯ ಚಟುವಟಿಕೆಗಳು ಕೂಡ ವೈವಿಧ್ಯಮಯವಾಗಿ ವಿಸ್ತಾರಗೊಳ್ಳುತ್ತಾ ಸಾಗಿದವು. ಮಂದಿರದ ಸಾಧಕರ ಜ್ಞಾನ ಭಂಡಾರವು ವೃದ್ಧಿಸಿದಂತೆ ಅದರಲ್ಲಿನ ಸೃಜನಶೀಲತೆಯ ಬೀಜಗಳು ಮೊಳಕೆಯೊಡೆಯ ಹತ್ತಿದವು. ಇಂತಹದೊಂದು ಸೃಜನಶೀಲ ಕಲೆಯಲ್ಲಿ ಒಡೆಮೂಡಿದ್ದು 'ಸುಕುಮಾರನೆಂಬ' ತಲೆಬರಹದ ಹಸ್ತಾಕ್ಷರಗಳ (ಕೈಬರಹ) ಪತ್ರಿಕೆ ಈ ಕೈಬರಹ ಪತ್ರಿಕೆಯ ಸಂಪಾದಕರಾಗಿ ಶ್ರೀಬಸವಲಿಂಗ ದೇವರು, ಇದರ ಎಲ್ಲಾ ಲೇಖನಗಳನ್ನು ಸುಂದರವಾದ ಮುದ್ದಾದ ಅಕ್ಷರದ ರೂಪದಲ್ಲಿ ಬರೆಯುವ ಹೊಣೆ ಹೊತ್ತವರು 'ಅಡ್ನೂರ ಚಂದ್ರಶೇಖರ ದೇಶಿಕರು'(ಜಚನಿ) 'ಶ್ರೀಸದಾಶಿವ ಸ್ವಾಮಿಗಳು ಆಕರ್ಷಕವಾದ, ಅಂದವಾದ ಸಂದರ್ಭೋಚಿತ ಚಿತ್ರ ಬರೆಯುವವರು. ಹೀಗೆ ಆರಂಭಗೊಂಡ ಸುಕುಮಾರನೆಂಬ ಕೈಬರಹ ಪತ್ರಿಕೆಯು ವಿದ್ಯಾರ್ಥಿ ವಟುಸಾಧಕರ ಪ್ರತಿಭೆಗಳನ್ನು ಹೊರಹಾಕುವ ಒಂದು ವೇದಿಕೆಯಾಗಿ ರೂಪಗೊಂಡಿತು. ಅಮೂಲಕ ಅದು ಜ.ಚ.ನಿ.ಯಂತ ಸಮರ್ಥ ಲೇಖಕರಿಗೆ ರಂಗಭೂಮಿಯಾಗಿ ಸದಾಶಿವ ಮಹಾಸ್ವಾಮಿಗಳ ಶಿಲ್ಪಕಲೆ, ಚಿತ್ರಕಲೆಗೊಂದು ತರಬೇತಿ ಕ್ಷೇತ್ರವಾಗಿ ರೂಪಗೊಳ್ಳುತ್ತದೆ.

ಹೀಗೆ ಆರಂಭದ ಈ ಬಾಲ ಸುಕುಮಾರ ತನ್ನದೆ ಆದ ಸಂಪಾದಕ, ಚಿತ್ರವಿನ್ಯಾಸಕ, ಅಚ್ಚುಗಾರರ ವರ್ಗದಲ್ಲಿ ಆಸಕ್ತಿ ಉದಯೋನ್ಮುಖ ಲೇಖಕ, ಬರಹಗಾರರನ್ನು ಓದುಗರನ್ನು ಹೊಂದಿತ್ತು. ಅಂತಹ ಕೈಬರಹದ ಸುಕುಮಾರ ಕುರಿತು ಸಿದ್ದಗಂಗಾ ಮಠಾಧ್ಯಕ್ಷರಾದ ಶ್ರೀ ಶಿವಕುಮಾರಸ್ವಾಮಿಗಳು ಸೆಪ್ಟಂಬರ್ ೧೦.೧೯೩೩ ರಲ್ಲಿ ಈ ರೀತಿಯಲ್ಲಿ ತಮ್ಮ ಅಭಿಪ್ರಾಯ ಬರೆದಿದ್ದಾರೆ "ಶಿವಯೋಗ ಮಂದಿರದ ಸಾಧಕರಿಂದ ಹೊರಡಿಸಲ್ಪಡುವ ಈ ಪತ್ರಿಕೆಯ ಅವಗಾಹನೆಯ ಸಂಪೂರ್ಣ ಆಯಿತು. ಇದರಲ್ಲಿ ಇರುವ ಸಾಮಾಜಿಕ, ನೀತಿಬೋಧಕ ಹಾಗೂ ತಾತ್ವಿಕ ಲೇಖನಗಳು ಸಾಧಕರ ಅನುಪಮ ಶ್ರದ್ಧಾ, ಭಾಷಾ ಸೌಷ್ಠವ, ಕನ್ನಡ ಪ್ರೇಮ ಮತ್ತು ವಿದ್ಯಾನಿಪುಣತೆ ಇವುಗಳನ್ನು ಉತ್ಕಟವಾಗಿ ಸ್ಪಷ್ಟೀಕರಿಸುತ್ತದೆ. ಇದರಲ್ಲಿ ಬರೆದಿರುವ ಚಿತ್ರಗಳು ಮುದ್ದಾಗಿಯೂ ಮನೋರಂಜಕವಾಗಿಯು ಇವೆ ಸಣ್ಣ ಸಣ್ಣ ಕವನಗಳು ಹೃದಯಂಗಮವಾಗಿಯೂ ಮಹಾಮಂದಿರದ ಸನ್ನಿವೇಶದ ಮಹತ್ವವನ್ನೂ ಪ್ರಕೃತಿ ಸೌಂದರ್ಯವನ್ನೂ ವರ್ಣಿಸತಕ್ಕವಾಗಿದೆ. ಈ ಸಂಚಿಕೆಯು ಶುಕ್ಲಪಕ್ಷದ ಚಂದ್ರನಂತೆ ವೃದ್ಧಿ ಹೊಂದುತ್ತಾ ಪ್ರಚಾರ ಹೊಂದಿ ಸಾಮಾಜಿಕ ಏಳ್ಗೆಯನ್ನು ಕೊಡತಕ್ಕ ಮುಖ್ಯವಾದ ಪತ್ರಿಕೆಗಳಲ್ಲೊದಾಗಿ ಪರಿಣಮಿಸಲೆಂದು ಹಾರೈಸುವೆ"[೩೦] ಎಂದಿದ್ದಾರೆ.

ಹೀಗೆ ಕೈಬರಹದಲ್ಲಿನ ಸುಕುಮಾರನು ೧೯೪೯ರಲ್ಲಿ ಶ್ರೀಉಮಾಪತಿಶಾಸ್ತ್ರಿಗಳು ನವ್ಯನ್ಯಾಯಶಾಸ್ತ್ರಿ ಅವರು ಶಿವಯೋಗ ಮಂದಿರದ ಪ್ರಾಧ್ಯಾಪಕರಾಗಿ ಬಂದ ಕಾಲಕ್ಕೆ ಮುದ್ರಣದ ಭಾಗ್ಯ ಕಂಡನು. ಇದೇ ವರ್ಷ ಶಿವರಾತ್ರಿ ಉತ್ಸವದ ಕಾಲಕ್ಕೆ " ಹುಬ್ಬಳ್ಳಿ ಮೂರುಸಾವಿರ ಮಠದ ಲಿಂ.ಶ್ರೀಜಗದ್ಗುರು ಗುರುಸಿದ್ಧ ರಾಜ ಯೋಗೀಂದ್ರ ಮಹಾಸ್ವಾಮಿಗಳವರ ಪ್ರೇರಣೆಯಂತೆ ಮುದ್ರಣಾಲಯದಿಂದ ಮಂದಿರದ ಮುಖ ಪತ್ರಿಕೆಯಾಗಿ ಒಂದು ಮಾಸಿಕವನ್ನು ಪ್ರಕಟಿಸುವ ಯೋಜನೆಯಾಯಿತು. ಅವರೇ ಐದುನೂರು ರೂಪಾಯಿಗಳ ಪೋಷಕ ಸಹಾಯ ನಿಧಿಯನ್ನು ಕೊಟ್ಟು ಆಶೀರ್ವದಿಸಿದರು. ಸದಾಶಿವ ಮಹಾಸ್ವಾಮಿಗಳು ನೂರು ರೂ ವಂತಿಕೆ ರೂಪದಲ್ಲಿ ಐವತ್ತು ರೂಪಾಯಿಗಳನ್ನು ಇದಕ್ಕಾಗಿ ನೀಡಿದರು"[೩೧] ಶ್ರೀ ಉಮಾಪತಿಶಾಸ್ತ್ರಿಗಳ ನೇತೃತ್ವದಲ್ಲಿ ಸುಕುಮಾರನ ಪ್ರಕಟಣೆ ಹಾಗೂ ಪ್ರೇಸ್ಸಿನ ವ್ಯವಸ್ಥೆಯು ನಡೆಯಲಾರಭಿಸಿತು. ಆದರೂ ವಯಸ್ಸಿಗೆ ಬರುವ ಪೂರ್ವದಲ್ಲಿಯೇ ಬಾಲಗ್ರಹ ಪೀಡಿತವಾಯಿತು. "ಉಮಾಪತಿ ಶಾಸ್ತ್ರಿಗಳು ೧೯೫೫ರಲ್ಲಿ ಬಾಗಲಕೋಟೆಗೆ ತೆರಳಿದರು. ಇವರ ನಂತರ ಬಂದ ಶಿರಸ್ತೇದಾರ ಎನ್.ಎಫ್.ಪಾಟೀಲರು ಹಾಗೂ ಪಂ.ಗಲಗಲಿ ಗುರುಸಿದ್ದ ದೇವರು. ಸುಕುಮಾರನನ್ನು ಕೆಲ ಕಾಲ ಬೆಳೆಸಿದರು."[೩೨]

ಸುಕುಮಾರನು ಉಮಾಪತಿಶಾಸ್ತ್ರಿಗಳ ತರುವಾಯ ಎರಡು-ಮೂರು ವರ್ಷ ಜನಪ್ರಿಯವಾಗಿ ಸಾಗಿದರು ಕೆಲಸಗಾರರ ಅಭಾವ ಆರ್ಥಿಕ ಮುಗ್ಗಟ್ಟಿನಿಂದಾಗಿ ಈ ಮಾಸ ಪತ್ರಿಕೆ ನಿಂತು ಹೋಯಿತು. ಆಗೊಮ್ಮೆ-ಇಗೊಮ್ಮೆ ಅದರ ಪ್ರತಿಗಳು ಬರಲಾರಂಭಿಸಿದವು. ಆದರೆ ಧರ್ಮ ಪ್ರಸಾರದ ಜ್ಞಾನ ಜ್ಯೋತಿ ಮಂದಿರದ ವಟುಸಾಧಕರ ಮೂಲಕ ಮತ್ತೆ 'ಶಿವಯೋಗ' ಎಂಬ ಕೈಬರಹ ರೂಪದಲ್ಲಿ ಪುನರ್ ಪ್ರಾರಂಭವಾಗುತ್ತದೆ. ಅದು ಇಂದಿಗೂ ಕೈಬರಹ ರೂಪದಲ್ಲಿ ನಡೆದು ಬರುತ್ತದೆ. "೧೯೯೭-೯೮ನೇ ಸಾಲಿನಲ್ಲಿ ಇದನ್ನು ಮತ್ತೆ ಪುನರಾರಂಭಿಸಲು ವಿಶ್ವಸ್ಥ ಮಂಡಳಿ ಬೈಲಹೊಂಗಲ ಶ್ರೀಗಳಿಗೆ ಈ ಕಾರ್ಯವನ್ನು ವಹಿಸಿ ಅದಕ್ಕಾಗಿ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ತೆಗೆದಿರಿಸಲಾಯಿತು. ಇದರಿಂದಲೂ 'ಸುಕುಮಾರ' ಮತ್ತೆ ಸಮಾಜವನ್ನು ಕಾಣುವಂತಾಗಲಿಲ್ಲ."[೩೩] ಕಾಲಕ್ರಮೇಣ ಸುಕುಮಾರ ನಿಂತು ಹೋದಾಗ ೨೦೦೧ರಿಂದ ಶಿವಯೋಗ ಮಂದಿರದ ಆಡಳಿತ ಮಂಡಳಿಯ ಉಪಾಧ್ಯಕ್ಷರಾಗಿದ್ದ ನಾಗನೂರು ರುದ್ರಾಕ್ಷಿಮಠದ ಶ್ರೀ ಸಿದ್ಧರಾಮಸ್ವಾಮಿಗಳ ನೇತೃತ್ವದಲ್ಲಿ ಸಂಪಾದಕರು. ಡಾ.ಬಿ.ಕೆ.ಹಿರೇಮಠ, ಪ್ರಧಾನ ಸಂಪಾದಕರು. ಡಾ.ಬಿ.ವ್ಹಿ.ಮಲ್ಲಾಪುರ ವ್ಯವಸ್ಥಾಪಕ ಸಂಪಾದಕರು, ಪ್ರೊ.ಬಿ.ವ್ಹಿ.ಗುಂಜೆಟ್ಟಿಯವರು ಸಹಯೋಗದಲ್ಲಿ ಮುನ್ನಡೆ ಸಾಧಿಸಿ ಯುವಕನಾಗಿದ್ದಾನೆ. ಆದರೆ ಪ್ರಸ್ತಕ ೨೦೦೯ರ ನವೆಂಬರ್ ನಂತರದಿಂದ ಸುಕುಮಾರ ಮತ್ತೆ ಯೋಗಗುಹೆಯಲ್ಲಿ ನಿದ್ರೆಗೆ ಜಾರಿದ್ದಾನೆ. ಅವನಿಗೆ ಮತ್ತೆ ಸಮಾಜದೊಡನೆ ಭಾಗಿಯಾಗುವ ಭಾಗ್ಯಸಿಗಲೆಂದು ಆಶಿಸಲಾಗಿದೆ.

ಶರಣರ ವ್ಯಾಪಕ ತತ್ವಗಳ ಪ್ರಚಾರದ ಮೂಲಕ ವಿಶ್ವಧರ್ಮದ ಪ್ರಸಾರದ ಸದುದ್ದೇಶದಿಂದ ಪ್ರಕಟವಾಗಿ ಮುದ್ರಣಗೊಂಡು ಬಂದ ಈ ಕುಮಾರನಿಗೆ ನಾಡಿನಾದ್ಯಂತ ಓದುಗರು ಮೆಚ್ಚುಗೆಯ ಮಳೆ ಸುರಿದಿದ್ದಾರೆ. ಅದರ ಕೆಲವೊಂದು ನುಡಿಗಳು ಇಂತಿವೆ.

'ಹಾನಗಲ್ ಶ್ರೀ ಸದಾಶಿವ ಮಹಾಸ್ವಾಮಿಗಳು' ಅಂದು ಕೈಬರಹವಾಗಿ ಅಂದು ಹುಟ್ಟು ಹಾಕಿದ ಸುಕುಮಾರ ಇಂದು ಅಚ್ಚಿನ ಮನೆಯಿಂದಲೇ ಅದರ ಉದ್ದೇಶ ಸಾಧಿಸಿದ್ದಾನೆ. ಅದರ ಸತ್ಯ ಸಂಕಲ್ಪವು ಅಂಕುರಿತವಾಗಿದೆ. ಅದು ಚಿಗುರಿ ಫಲಿಸಲಿ ಆ ಫಲದ ಸುಸ್ವಾದವನ್ನು ಸಮಾಜದ ಜನರೆಲ್ಲ ಸವಿಯುವಂತಾಗಲಿ ಎಂದಿದ್ದಾರೆ ಶ್ರೀ ಉಮಾಪತಿ ಶಾಸ್ತ್ರಿಗಳು.

ಶ್ರೀ.ನಿ.ಪ್ರ.ಬಸವಲಿಂಗ ಮಹಾಸ್ವಾಮಿಗಳು ನವಲುಗುಂದ ಅವರು "ಸುಕುಮಾರ ಹೆಸರಿಗೆ ಒಪ್ಪುವಂತೆ ಜನಾಂಗದ ಸೇವೆಮಾಡಿ ಜೀವನನೌಕೆಗೆ ಒಂದು ಧೃವತಾರೆಯಾಗುವ ಸದವಕಾಶವನ್ನು ಜಗದೀಶನು ಅನುಗ್ರಹಿಸಲಿ" ಎಂದಿದ್ದಾರೆ. ಡಾ.ಶಿ.ಚೆ.ನಂದಿಮಠ, ಎಂ.ಎ.ಪಿ.ಹೆಚ್.ಡಿ ಅವರು "ಸುಕುಮಾರನು ಸರಿಯಾಗಿ ಬೆಳೆದು ದೊಡ್ಡವನಾಗಿ ಶಿವಯೋಗದ ಮರ್ಮವನ್ನು ಜಗತ್ತಿಗೆ ಬೀರಲಿ ಕತ್ತಲೆಯಲ್ಲಿ ಕಣ್ಣು ಕಾಣದೆ ಕೈಯಾಡಿಸುವ ವೀರಶೈವ ಸಮಾಜಕ್ಕೆ ಬೆಳಕು ತೋರಲಿ"[೩೪] ಎಂದಿದ್ದಾರೆ. ಹೀಗೆ ಸಮಾಜದ ಗಣ್ಯರು, ವಿದ್ಯಾವಂತರು, ವಿಮರ್ಶಕರು ಸುಕುಮಾರನಿಗೆ ಶುಭ ಸಂದೇಶದ ಹಾರೈಕೆಗಳುನ್ನು ಕಳಿಸಿದ್ದಾರೆ.

ಒಟ್ಟಿನಲ್ಲಿ ಶಿವಯೋಗ ಮಂದಿರದಿಂದ ಬಂದ ಧರ್ಮತರಂಗಿಣಿ, ಸುಕುಮಾರ ಹಾಗೂ ಆ ಕಾಲಕ್ಕೆ ಬೆಳೆದು ಬಂದ ಇತರೆ ನಿಯತಕಾಲಿಕೆಗಳನ್ನು ಅವಲೋಕಿಸಿದಾಗ ಈ ಪತ್ರಿಕೆಗಳ ಉದೇಶಗಳೇನು ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಅವುಗಳೆಂದರೆ ಸಂಸ್ಕೃತ ಭಾಷೆಯಲ್ಲಿದ್ದ ಮತದ ಗ್ರಂಥಗಳನ್ನು ಓದಿ ತಿಳಿದುಕೊಂಡು ಆಚರಿಸಲು ಬರುವ ಹಾಗೆ ತಿಳಿಗನ್ನಡದಲ್ಲಿ ಅವುಗಳನ್ನು ವ್ಯಾಖ್ಯಾನಿಸುವುದು. ಜನರಲ್ಲಿ ಧರ್ಮಾಚರಣೆಯ ಬಗ್ಗೆ ಅಭಿರುಚಿ ಹುಟ್ಟುಹಾಕುವುದು. ಮತಗಳ, ಆಚಾರಗಳಲ್ಲಿ ದುರುಳರು ನಮಾಡಿದ ಪರಿವರ್ತನೆಯನ್ನು ಬೆಳಕಿಗೆ ತರುವುದು, ಪ್ರಚಲಿತ ವಿದ್ಯಮಾನದಲ್ಲಿ ಕೃಷಿ, ವಿಜ್ಞಾನ, ಸಾಹಿತ್ಯ, ಸಂಸ್ಕೃತಿಯ ಪ್ರಯೋಗದ ವಿಚಾರಗಳನ್ನು ಸುದ್ದಿಗಳಾಗಿ ಬಿತ್ತರಿಸುವುದು. ಪರಸ್ಪರ ಸಾಮಾಜಿಕ ಅನುರಾಗವನ್ನು ಅದರ ಮಹತ್ವವನ್ನು ಮುದ್ರಿಸುವುದು. ಇವು ಈ ಎಲ್ಲ ಪತ್ರಿಕೆಗಳ ಉದ್ದೇಶಗಳಾಗಿವೆ. ಹೀಗೆ ಸುಕುಮಾರ ಪತ್ರಿಕೆಯ ಮುದ್ರಣಕ್ಕಾಗಿ ರೂಪುಗೊಂಡ ಸದಾಶಿವ ಮುದ್ರಣಾಲಯದ ರೂಪರೇಷೆ ಕೂಡ ಒಂದು ಐತಿಹಾಸಿಕ ಅಂಶವಾಗಿದೆ. ಹೀಗಾಗಿ ಅದೊಂದು ಧಾಖಲೆಗೆ ಅರ್ಹವಾದ ಅಂಶವೆಂದು ಪರಿಗಣಿಸಲಾಗಿದೆ. ಆ ಮೂಲಕ ಗ್ರಂಥಗಳ ಮುದ್ರಣಕ್ಕೆ ಅದು ಮುನ್ನುಡಿಯಾಗಿದೆ.

೨. ಗ್ರಂಥಗಳು

ಸದಾಶಿವ ಮುದ್ರಣಾಲಯದಿಂದ ಆರಂಭದಲ್ಲಿ ಅನೇಕ ಲೇಖಕರ ಕೃತಿಗಳು ಸಂಶೋಧನಾ ಲೇಖನಗಳು ಪ್ರಕಟಗೊಂಡಿವೆ. ಆದರೆ ಅದರ ಬಗ್ಗೆ ಎಲ್ಲಿಯು ಸಮರ್ಪಕ ಮಾಹಿತಿ ದೊರೆತಿಲ್ಲ ಆದರೆ ಈ ಇಪ್ಪತ್ತು ವರ್ಷದಲ್ಲಿ ಪ್ರಕಟವಾದ ಎಲ್ಲಾ ಅಂಶವನ್ನು ನಾಗನೂರು ರುದ್ರಾಕ್ಷಿಮಠದ ವೀರಶೈವ ಲಿಂಗಾಯತ ಅಧ್ಯಾಯ ಸಂಶೋಧನಾ ಕೇಂದ್ರ ಗ್ರಂಥಾಲಯದಿಂದ ಪರಾಮರ್ಶಿಸಿ ಈ ಪಟ್ಟಿ ಮಾಡಲಾಗಿದೆ.

ಇಲ್ಲಿ ಕಾಲಾಂತರದಲ್ಲಿ ಸದಾಶಿವ ಮುದ್ರಣಾಲಯದ ಪ್ರಕಟನೆಯ ಬದಲು ಸುಕುಮಾರ ಗ್ರಂಥಮಾಲೆಯ ರೂಪದಲ್ಲಿ ಅನೇಕ ಚಿಕ್ಕ-ಪುಟ್ಟ, ದೊಡ್ಡ, ಪುರಾಣ, ಭಜನಾವಳಿ ವಿಮರ್ಶಾತ್ಮಕ ಕೃತಿಗಳು ಅಚ್ಚಾಗಿವೆ. ಹೀಗೆ ಅಚ್ಚದ ಕೃತಿಗಳ ಪಟ್ಟಿ ಇಂತಿದೆ.[೩೫] ಸುಕುಮಾರ ಗ್ರಂಥಮಾಲೆಯಲ್ಲಿ ಸದಾಶಿವ ಮುದ್ರಣಾಲಯದಿಂದ ಪ್ರಕಟಗೊಂಡ ಪುಸ್ತಕಗಳೆಂದರೆ.

೧. ಪಾರಮಾರ್ಥ ಪ್ರಕಾಶಿಕೆ (ನಿಜಗುಣ ವಿರಚಿತ)

೨. ಕುಮಾರೇಶ್ವರ ಪುರಾಣ (ವಾಚ್ಯದ ಕುಮಾರಾರ್ಯ ವಿರಚಿತ)

೩. ಮರುಳ ಶಂಕರದೇವರ ಸ್ವರವಚನ (ಜಗುನಿ ಮರುಳದೇವ ಕೃತ)

೪. ಘಟ್ಟಿವಾಳಯ್ಯಗಳ ಕಾಲಜ್ಞಾನ

೫. ಕೈವಲ್ಯಸಾರ (ತೊಂಟದಾರ್ಯ ಕೃತ, ಕನ್ನಡ ಟೀಕೆ ಸಹಿತ)

೬. ವಿವೇಕಾ ಚಿಂತಾಮಣಿ (ನಿಜಗುಣ ವಿರಚಿತ)

೭. ಹಠಯೋಗ ಪ್ರದೀಪಿಕೆ

೮. ಬಸವಣ್ಣನವರ ಷಟ್‌ಸ್ಥಲದ ವಚನಗಳು (ಕನ್ನಡ ಟೀಕೆ, ತಾತ್ಪರ್ಯಸಹಿತ)

೯. ಬಿದರಿ ಕುಮಾರ ಮಹಾಸ್ವಾಮಿಗಳ ಪುರಾಣ

೧೦. ಕಾರಣಿಕ ಕುಮಾರಯೋಗಿ

೧೧. ಕೈವಲೋಪನಿಷತ್ತು (ಸದಾಶಿವ ಭಾಷ್ಯ)

೧೨. ಹಮ್ಮೀರ ಕಾವ್ಯ (ರಾಜೇಂದ್ರ ವಿಜಯ) (ಮುರಿಗೆ ದೇಶಿಕೇಂದ್ರ ಕೃತ)

೧೩. ಸ್ವಾತಂತ್ರ್ಯದ ಅನಾದಿತ್ವ

೧೪. ಹಾನಗಲ್ಲ ಕುಮಾರಸ್ವಾಮಿಗಳ ಸ್ಮಾರಕ ಚಂದ್ರಿಕೆ

೧೫. ಯೋಗಿರಾಜ ಪ್ರಭುಕುಮಾರಪಟ್ಟಾಧ್ಯಕ್ಷರ (ಜಚನಿ ಕೃತ)

೧೬. ಸದಾಶಿವ ಲೀಲೆ (ಚನ್ನಕವಿ ಕೃತ)

೧೭. ನಾಗಭೂಷಣ ಘನಮಠ ಸ್ವಾಮಿಗಳ ಚರಿತ್ರೆ

೧೮. ಹಾನಗಲ್ಲ ಕುಮಾರಸ್ವಾಮಿಗಳ ಅಷ್ಟೋತ್ತರ ಶತನಾಮಾವಳಿ

೧೯. ಬಿದರಿ ಕುಮಾರಸ್ವಾಮಿಗಳ ಅಷ್ಟೋತ್ತರ ಶತನಾಮಾವಳಿ

೨೦. ಬಿದರಿ ಕುಮಾರೇಶ್ವರ ಲೀಲಾಮೃತ

೨೧. ಕುಮಾರಸ್ವಾಮಿಗಳ ಸಂಕ್ಷಿಪ್ತ ಚರಿತ್ರೆ

೨೨. ಪಥಿಕ

೨೩. ಅನುಭವ ಲಹರಿ

೨೪. ಕಲಬುರ್ಗಿ ಚರಲಿಂಗ ಸ್ವಾಮಿಗಳ ಚರಿತ್ರೆ

೨೫. ಮೊಗ್ಗೆಯ ಮಾಲೆ

೨೬. ವೀರಶೈವ ಸಿದ್ಧಾಂತ ಪ್ರವೇಶಿಕಾ

೨೭. ಚಿದ್ಗುರು ಪ್ರಶಂಸೆ

೨೮. ಪೂಮಾಲೆ

೨೯. ಶಿವಯೋಗ ಮಂದಿರದ ಬೆಳಗು

೩೧. ಶ್ರೀವಿಜಯ ಮಾಹಾಂತೇಶ್ವರ ಪರಾಣ

೩೨. ತೋಂಟದ ಸಿದ್ಧೇಶ್ವರ ವಚನ

೩೦. ಶಿವಯೋಗ ಮಂದಿರದ ಭಜನಾವಳಿ೩೩. ಅನಾದಿ ವೀರಶೈವ ಸಂಗ್ರಹ

೩೪. ಬಸವೇಶ್ವರನ ಕಾಲ (ಸಂಶೋಧನಾತ್ಮಕ ಗ್ರಂಥ)

೩೫. ಜ್ಞಾನದಿಕ್ಷಾ ಬೋಧೆ (ಕೆರೆಯ ಪದ್ಮರಸ ಕೃತ)

೩೬. ಮುಕ್ತ್ಯಾಂಗನಾ ಕಂಠಮಾಲೆ (ವಚನ ವಿವರಣೆ)

೩೭. ಲಿಂಗಧಾರಣ ಉಪನಿಷತೆ

೩೮. ನಿರಾಭಾರ ಚರಪಟ್ಟಾಭಿಷೇಕ ವಿಧಾನ

೩೯. ಗುರುಕರುಣ ತ್ರಿವಿಧಿ

೪೦. ಗುರು ಶಂಕರೇಶ್ವರ ಶತಕ

೪೧. ಹಾನಗಲ್ಲ ಶ್ರೀಕುಮಾರೇಶ್ವರ ಪುರಾಣ (ದ್ಯಾಂಪುರ ಚನ್ನಕವಿ ಕೃತ)

೪೨ ಭೈರವೇಶ್ವರ ಕಾವ್ಯದ ಕಥಾಸೂತ್ರ ರತ್ನಕರ (ಶಾಂತಲಿಂಗ ದೇಶಿಕ)

೪೩. ಕೈವಲ್ಯ ಪದ್ಧತಿ (ನಿಜಗುಣ ಶಿವಯೋಗಿ ಕೃತ)

ಈ ಮೇಲಿನ ಪಟ್ಟಿಯು ಇನ್ನೂ ಪೂರ್ಣಗೊಂಡಿರುವುದಿಲ್ಲ. ಇದರ ಇನ್ನೂ ಇದೆ. ಹಾನಗಲ್ಲ ಪೂಜ್ಯರು ಸಾಹಿತ್ಯ ಸೃಷ್ಟಿಯೊಂದಿಗೆ ಸಂಪಾದನಾ ಹಾಗೂ ಪ್ರಕಟಣಾ ಕ್ಷೇತ್ರಕ್ಕೆ ನೀಡಿದ ಕೊಡುಗೆ ಒಂದು ಮಗ್ಗುಲಾಗಿದೆ. ಸಂಶೋಧನೆಗೆ ನೀಡಿದ ಮಹತ್ವ ಸಾಹಿತ್ಯದ

ಎರಡನೇ ಮುಖವಾಗಿದೆ. ಶಿವಯೋಗ ಮಂದಿರ ಸಾಹಿತ್ಯ-ಸಂಶೋಧನಾ ಚಟುವಟಿಕೆಗೆ ನೀಡಿದ ಕೊಡುಗೆ ಕನ್ನಡ ಸಾಹಿತ್ಯ ಕ್ಷೇತ್ರವನ್ನು ಮತ್ತಷ್ಟು ಶ್ರೀಮಂತಗೊಳಿಸಿತು ಎಂಬುದರಲ್ಲಿ ಎರಡು ಮಾತಿಲ್ಲ. ಇದಕ್ಕೆ ಪುಷ್ಟಿದಾಯಕ ಅಂಶವೆಂದರೆ ಶಿವಯೋಗ ಮಂದಿರ ಕಂಡ ಸಂಶೋಧಕರ ತಂಡವೆನ್ನಬಹುದು.ಶ್ರೀಗಳ ಸಾಮಾಜಿಕ ಚಿಂತನೆ ಆಚರಣೆ ಕಾರ್ಯಕ್ಷಮತೆಗೆ ಮನಸೋತವರು ಅರ್ಪಣಾ ಮನೋಭಾವದಿಂದ ಈ ಕ್ಷೇತ್ರಕ್ಕೆ ಬಂದವರಿದ್ದಾರೆ. ಇನ್ನೂ ಕೆಲವರು ವೃತ್ತಿಯೊಂದಿಗೆ ಪ್ರವೃತ್ತಿಯಾಗಿ ಸಂಶೋಧನಾರಂಗ ಪ್ರವೇಶ ಮಾಡಿದ್ದಾರೆ. ಧರ್ಮ ಪ್ರಸಾರಕ್ಕಾಗಿ ಶ್ರಮಿಸಿದ್ದಾರೆ. ಹೀಗೆ ಹಲವಾರು ಕಾರಣದಿಂದಾಗಿ ತಮ್ಮ ಬದುಕನ್ನೇ ಸಂಶೋಧನೆಗಾಗಿ ಮುದುಪಾಗಿಸಿ ದುಡಿದಿದ್ದಾರೆ. ಅದರಿಂದ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ವೀರಶೈವ ಪರಂಪರೆಗೊಂದು ವೇದಿಕೆ ಕಲ್ಪಿಸಿಕೊಟ್ಟಿದ್ದಾರೆ. ಇಂತಹವರ ಸಾಲಿನಲ್ಲಿ ಸ್ಮರಿಸತಕ್ಕವರೆಂದರೆ ಡಾ.ಫ.ಗು.ಹಳಕಟ್ಟಿಯವರು

ವಿದ್ಯಾರ್ಥಿ ದೆಸೆಯಲ್ಲಿ ಸಾಹಿತ್ಯ ರಂಗದಲ್ಲಿ ಅಪಾರ ಆಸಕ್ತಿ ವಹಿಸಿದವರು. ಶಿವಯೋಗ ಮಂದಿರ ಸಂಸ್ಥೆಯ ಸ್ಥಾಪನಾ ಕಾಲದಲ್ಲಿ ಕುಮಾರಸ್ವಾಮಿಗಳ ಗ್ರಂಥ ಸಂಗ್ರಹ, ಸಂಶೋಧನೆಗೆ, ಧರ್ಮ ಪ್ರಸಾರಕ ಕಾರ್ಯವೈಖರಿಗೆ ಮನಸೋತು ತಾವು ಅವರ ಸನ್ನಿಧಿ ಬಯಸಿ ಬಂದವರು. ತಾವೇ ಬರೆದ ಲೇಖನದಲ್ಲಿ "ಶಿವಶರಣರ ವಚನಗಳನ್ನು ಮೊದಲು ಪ್ರಸಾರ ಮಾಡಿದವರು ಹಾನಗಲ್ಲ ಶ್ರೀ ಕುಮಾರಸ್ವಾಮಿಗಳೇ ಆಗಿದ್ದಾರೆ. ಅವರು ಹೋದಲ್ಲೆಲ್ಲ ಶಿವಶರಣರ ವಿಚಾರಗಳನ್ನು ತಮ್ಮ ಅಧಿಕಾರವಾಣಿಯಿಂದ ಜನರ ಮುಂದೆ ಪ್ರಸ್ತಾಪಿಸಿ ಅವುಗಳನ್ನು ಮುಂದಕ್ಕೆ ತಂದರು."[೨] ಎಂಬುದಾಗಿ ಹೇಳಿದ್ದಾರೆ. ಅಷ್ಟರ ಮಟ್ಟಿನ ಅಭಿಮಾನವಿದ್ದ ಹಳಕಟ್ಟಿಯವರು ಶ್ರೀ ಕುಮಾರೇಶ್ವರನ ಅಪ್ಪಣೆಯಂತೆ ವಚನ ಸಾಹಿತ್ಯದಲ್ಲಿ ಆಳವಾದ ಅಭ್ಯಾಸ ಮಾಡಿ, ಸಂಶೋಧನೆ ಮಾಡಿ ತಾವೇ ಹೊರಡಿಸಿದ 'ಶಿವಾನುಭವ' ಮಾಸ ಪತ್ರಿಕೆಯಲ್ಲಿ ಪ್ರಕಟಿಸಿದರು. ಅನೇಕ ಸಾಹಿತ್ಯ ಗ್ರಂಥವನ್ನು ಪ್ರಕಟಿಸಿದರು. ಇಂದು ಕಾಣುತ್ತಿರುವ ಸಮಗ್ರ ಗ್ರಂಥಗಳ ಸಂಪುಟದ ರಚನೆಯಲ್ಲಿ ಅವರದು ಅಮೂಲ್ಯ ಕೊಡುಗೆ ಇದೆ. ಹಾಗಾಗಿಯೇ ಅವರನ್ನು 'ವಚನ ವಾಙ್ಮಯದ ಪಿತಾಮಹ' ಎಂದು ಕರೆಯಲಾಗಿದೆ. ಅವರ ಅವಿರತ ಶ್ರಮದ ದುಡಿಮೆಯಿಂದ ಸಾಧನೆಯ ಮೈಲುಗಲ್ಲನ್ನು ಇತಿಹಾಸದ ಪುಟದಲ್ಲಿ ಮೂಡಿಸಿ ಹೋಗಿದ್ದಾರೆ. ಆ ಕಾರಣಕ್ಕೆ ಅವರನ್ನು ಇಲ್ಲಿ ಸ್ಮರಿಸುವುದು ಅವಶ್ಯವೆನಿಸಿದೆ.

ಉಮಾಪತಿಶಾಸ್ತ್ರಿಗಳು

ಶಿವಯೋಗಮಂದಿರದ ಪ್ರಾಧ್ಯಾಪಕರಾಗಿ, ಸುಕುಮಾರ ಮಾಸ ಪತ್ರಿಕೆ ಸಂಪಾದಕರಾಗಿ, ಸಂಶೋಧಕರಾಗಿ, ತ್ರಿಭಾಷಾ ಪಂಡಿತರೆಂಬ ಕೀರ್ತಿಗೆ ಅರ್ಹರಾದ ಶಾಸ್ತ್ರಿಗಳದ್ದು ಬಹುಮುಖ ಪ್ರತಿಭೆಯುಳ್ಳವರು. ನಿಜಗುಣ ಶಿವಯೋಗಿ ವಿರಚಿತ 'ವಿವೇಕ ಚಿಂತಾಮಣಿ' ಶಾಸ್ತ್ರಿಗಳ ಸಂಶೋಧನೆ,

ಸಾಹಿತ್ಯ ಕ್ಷೇತ್ರದ ಮಹಾಕೋಶವೆಂದು ಕರೆಯಲ್ಪಡುವಂತದ್ದು. ಶಿವಯೋಗ ಮಂದಿರದ ಗ್ರಂಥಾಲಯದಲ್ಲಿ ಹುಳ ತಿನ್ನುವ ವಸ್ತುವಾಗಿದ್ದ ಕಾಗದಗಳು, ತಾಡೋಲೆ, ಹಸ್ತಪ್ರತಿಗಳನ್ನು ಹೊರತೆಗೆದು ಹುಡುಕಿದವರು. ಅವರ ಸಂಶೋಧನೆಯ ಫಲಗಳು ಸಾಹಿತ್ಯದ ಕ್ಷೇತ್ರಕ್ಕೆ ದೊಡ್ಡ ಕಾಣಿಕೆಯನ್ನೆ ಒದಗಿಸಿತು. ಅನೇಕ ಗ್ರಂಥಗಳು ಪರಿಷ್ಕೃತಗೊಂಡವು. ಮುಂದಿನವರಿಗೆ ಅಗತ್ಯ ದಾಖಲೆಯಾಗಿ ರೂಪಗೊಂಡವು. ಅಂತೆಯೇ ಸಾಹಿತ್ಯಕ್ಕಾಗಿ ಇಳಿವಯಸ್ಸಿನಲ್ಲೂ ಸೂಕ್ಷ್ಮದರ್ಶಕ ಬಳಸಿ ಓಲೆಗರಿ, ಕಾಗದ ಪ್ರತಿ, ಹಸ್ತಪ್ರತಿ ಓದುವುದನ್ನು ಕ್ಷೇತ್ರಕಾರ್ಯ ಕಾಲಕ್ಕೆ ನಾವು ಹತ್ತಿರದಿಂದ ಮಂಜುನಾಥೇಶ್ವರ ಸಂಶೋಧನ ಕೇಂದ್ರ ಧರ್ಮಸ್ಥಳದಲ್ಲಿ ಕಂಡು ಬೆರಗಾಗಿದ್ದೇವೆ.

ಪ್ರೊ, ಸಂದಿಮಠ

ಡಾ. ಶಿವಲಿಂಗಯ್ಯ ಚೆನ್ನಯ್ಯ ನಂದಿಮಠ ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ನಂದಿಮಠದಲ್ಲಿ ಜನಿಸಿದರು. ಜೀವನದಲ್ಲಿ ಬಡತನದ ಕಷ್ಟಗಳನ್ನೇಲ್ಲ ಅನುಭವಿಸಿ ಬೆಳೆದ ಶ್ರೀಯುತರು ಡಾಕ್ಟರೇಟ್ ಪದವಿ ಗಳಸಿದರು. 'ವೀರಶೈವ ಧರ್ಮ ಸಾಹಿತ್ಯ ಕೈಪಿಡಿ' ಎಂಬ ಮಹಾಪ್ರಬಂಧದಲ್ಲಿ ವೀರಶೈವ ಧರ್ಮ ಸಾಹಿತ್ಯಕ್ಕೆ ಭಾರತೀಯ ತತ್ವ ಶಾಸ್ತ್ರದಲ್ಲಿ ಒಂದು ಶಾಶ್ವತ ಸ್ಥಾನ ಸಂಪಾದಿಸಿ ಕೊಟ್ಟವರು. ಶಾಸನದ ಬಗೆಗೆ ಆಳವಾದ ಸಂಶೋಧನೆ ನಡೆಸಿದರು. ನುರಿತ ಶಿಕ್ಷಣ ತಜ್ಞರಾದರು. ಅನೇಕ ಶಿಕ್ಷಣ ಕ್ಷೇತ್ರದಲ್ಲಿ ದುಡಿದು ಮಂದಿರದ ವಟುಗಳಿಗಾಗಿ ಪಠ್ಯಕ್ರಮ, ಶಿಕ್ಷಣ, ಧಾರ್ಮಿಕ ಕ್ಷೇತ್ರದಲ್ಲಿ ಆಕಾಶದೆತ್ತರಕ್ಕೆ ನಿಲ್ಲುತ್ತಾರೆ. ಶಿವಯೋಗ ಮಂದಿರ ಸಂಸ್ಥೆಯಲ್ಲಿ ಅವರು ತಮ್ಮನ್ನು ತೊಡಗಿಸಿಕೊಂಡ ರೀತಿ ಮುಂದನವರಿಗೆ ಆದರ್ಶದ ಪ್ರೇಕರ ಶಕ್ತಿಯಾಗುತ್ತದೆ. ಆ ಕಾರಣವಾಗಿ ಅವರು ಇಲ್ಲಿ ಸ್ಮರಣೆಗೆ ಅರ್ಹರು

ಹರ್ಡೇಕರ ಮಂಜಪ್ಪ

'ಸಾರ್ವಜನಿಕಸೇವೆಯೇ ದೇಶಸೇವೆ' ಎಂಬ ಪದಗಳು ಒಂದು ಕಾಲದಲ್ಲಿ ವಿಶೇಷ ಅರ್ಥಹೊಂದಿ ಮೌಲ್ಯಾಧಾರಿತವಾಗಿದ್ದವು. ಆದರೆ ಇಂದು ಈ ಪದಗಳಿಗೆ ಯಾವ ಅರ್ಥವಿಲ್ಲದೆ ಸವಕಲು ನಾಣ್ಯಗಳಾಗಿವೆ. ಈ ವಿಚಾರ ಇಲ್ಲಿ ಎಷ್ಟು ಪ್ರಸ್ತುತ ಎನ್ನುವಾಗ 'ಎತ್ತನ ಮಾಮರ, ಎತ್ತಣ ಕೋಗಿಲೆ ಎತ್ತಣದಿಂದೆತ್ತಣದ ಸಂಬಂಧವಯ್ಯ' ಎಂಬ ವಚನ ನೆನಪಾಗುತ್ತದೆ. ಹರ್ಡೇಕರ ಮಂಜಪ್ಪನವರನ್ನು ನೆನೆಯುವುದೇ ಒಂದು ಪುಣ್ಯದ ಕೆಲಸ "ವೀರಶೈವ ಮತ ಸಂಬಂಧವಾಗಿ ನನಗೆ ಹೆಚ್ಚಿನ ಸಂಗತಿಗಳೇನೂ ಗೊತ್ತಿರಲಿಲ್ಲ. ವೀರಶೈವ ಸಮಾಜದಲ್ಲಿ ಜಾತಿ, ಆಚಾರಗಳ ಗೊಂದಲ ಹೆಚ್ಚು. ಆರ್ಯ ಸಮಾಜವೇ ಒಳ್ಳೆಯದೆಂದು ನಾನು ತಿಳಿದುಕೊಂಡಿದ್ದೆನು. ಆಗ ದಾವಣಗೆರೆಯಲ್ಲಿದ್ದ ನಿಡಗುಂದಿ ಮಡಿವಾಳಪ್ಪನವರು, ಕಂಚಿಕೆರೆ ಮಹಾಲಿಂಗಪ್ಪನವರು ಮುಂತಾದವರ ಸನ್ನಿಧಿಯಲ್ಲಿ ತಾನು ಆ ಕಡೆಗೆ ಒಲವು ತೋರಿದ್ದಾಗಿ ಹೇಳಿಕೊಂಡಿದ್ದಾರೆ."[೬೭]

ಹೀಗೆ ತಮ್ಮ ಬದುಕಿನಲ್ಲಿ ವೀರಶೈವ ಒಳಪಂಗಡಗಳ ನಿರ್ಮೂಲನೆಗೆ ಅವರು ಸಾಕಷ್ಟು ಪ್ರಯತ್ನಿಸಿದರು. ವೀರಶೈವ ಧರ್ಮದ ಏಳಿಗೆಯ ಕುರಿತು ಯಾವಾಗಲೂ ಚಿಂತಿಸುತ್ತಿದ್ದ ಅವರು ಬಸವಾಭಿಮಾನಿಯಾಗಿದ್ದರು. ಮಣ್ಣಿನಲ್ಲಿ ಎತ್ತುಗಳ ನಿರ್ಮಿಸಿ ಬಸವ ಉತ್ಸವ ಆಚರಿಸುತ್ತಿದ್ದ ಅವರು "೧೯೧೪ರಲ್ಲಿ ಬಸವ ಜಯಂತಿ ಆಚರಣೆಗೆ ತಂದವರು."[೩೮] ಅದಕ್ಕಾಗಿ ಹಲವಾರು ಪಂಡಿತರನ್ನು ಸಂಪರ್ಕಿಸಿ ನಿಜವಾದ ಬಸವ ಜಯಂತಿಯ ದಿನವನ್ನು ನಿರ್ಧರಿಸಿದರು.

ಧಾರ್ಮಿಕ ಕುರುಡು ನಂಬಿಕೆ, ಜಾತಿ–ಉಪಜಾತಿಗಳ ಬೇಧ, ಸ್ತ್ರೀ ಕೆಳವರ್ಗದವರ ಶೋಚನೀಯ ಸ್ಥಿತಿಯನ್ನು ಕಂಡು ಚಿಂತೆಗೊಳಗಾಗಿ ಅವುಗಳ ನಿರ್ಮೂಲನಕ್ಕಾಗಿ ಪಣ ತೊಟ್ಟಿದ್ದರು. ಇವೆಲ್ಲದರ ನಿರ್ಮೂಲನೆಗೆ ಕಾರಣ ಹುಡುಕಲು ಅವರು ಆಳವಾದ ಅಧ್ಯಯನಕ್ಕೆ ಇಳಿದರು. ಅದರ ಫಲವಾಗಿ ಅವರ ಜ್ಞಾನದಾಹದ ಬಹುಮುಖಗಳು ಇಂತಿವೆ.

೧. ಶಾಸ್ತ್ರೀಯ ಗ್ರಂಥಗಳು ೨.ಜೀವನ ಚರಿತ್ರೆ ೩.ಆತ್ಮ ಚರಿತ್ರೆ ೪.ಗಾಂಧಿ ಸಾಹಿತ್ಯ ೫.ಭಾಷಾಂತರ ಸಾಹಿತ್ಯ ೬.ಮಕ್ಕಳ ಸಾಹಿತ್ಯ ೭.ಧಾರ್ಮಿಕ ಮತ್ತು ಸಾಮಾಜಿಕ ಗ್ರಂಥಗಳು ೮.ಸಂಶೋಧನಾತ್ಮಕ ಕೃತಿಗಳುಮಂಜಪ್ಪನವರ ಸಂಶೋಧನಾತ್ಮಕ ಹೆಜ್ಜೆಯ ಗುರುತುಗಳೆಂದೆ ಪರಿಗಣಿಸಬಹುದಾಗಿದೆ. ಅವರ ಪತ್ರಿಕಾ ಧರ್ಮದಲ್ಲಿ ಮೂಡಿದ ಪತ್ರಿಕೆಗಳೆಂದರೆ ಧನುರ್ಧಾರಿ–೧೯೦೬, ವಿದ್ಯಾಲಯ ಪತ್ರಿಕೆ ೧೯೨೭ ಬಾಲಸಂಗಯ್ಯ ಕೈಬರಹ ಪತ್ರಿಕೆ, ಖಾದಿ ವಿಜಯ, ಉದ್ಯೋಗ, ಶರಣ ಸಂದೇಶದಲ್ಲಿ ಇಡೀ ಸಮಾಜದ ಕುರಿತು ಚಿಂತನೆ ನಡೆಸಿದ್ದಾರೆ. ಜೀವನದ ಏಳು–ಬೀಳಿನಲ್ಲಿ ಒಂದು ಧರ್ಮ ಪ್ರಸಾರದಲ್ಲಿ ಪ್ರೇರಣೆ ಹೊಂದಿ ತಮ್ಮನ್ನು ಆ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಮುಂದಿನವರಿಗೆ ದಾರಿದೀಪವಾಗಿ ನಿಂತವರಲ್ಲಿ ಮಂಜಪ್ಪನವರು ಅಗ್ರಗಣ್ಯರಾಗುತ್ತಾರೆ. ಇಂತಹ ವಿಶಾಲ ಚಿಂತಕರನ್ನು ಇಲ್ಲಿ ಸ್ಮರಿಸುವುದುಸೂಕ್ತವೆಂಬ ಕಾರಣವಾಗಿ ನಿರೂಪಿಸಲಾಗಿದೆ.

"ಇದರೊಂದಿಗೆ ಮೂರುಸಾವಿರಮಠ ಹುಬ್ಬಳ್ಳಿಯ ಲಿಂಗೈಕ್ಯ ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಗುರುಸಿದ್ಧರಾಜಯೋಗೀಂದ್ರ ಮಹಾಸ್ವಾಮಿಗಳು ತಮ್ಮ ಸಂಸ್ಥಾನದ ಆದಾಯದಲ್ಲಿ 'ಒಂದುಲಕ್ಷದ ಎಪ್ಪತ್ತೈದುಸಾವಿರ' ರೂಪಾಯಿಗಳನ್ನು ವೀರಶೈವ ಧರ್ಮಗ್ರಂಥ ಸಂಶೋಧನೆಗಾಗಿ, ಗ್ರಂಥ ಪ್ರಕಟಣೆಗಾಗಿ ಉದಾರವಾಗಿ ದಯಪಾಲಿಸಿದ್ದಾರೆ."[೩೯] ಸಮಾಜಕ್ಕೆ ಚಿರಸ್ಮರಣೀಯರಾಗಿದ್ದಾರೆ. ವಂದನೆಗೆ ಪಾತ್ರರಾಗಿದ್ದಾರೆ.

ಹೀಗೆ ಶಿವಯೋಗ ಮಂದಿರ ಕಾರ್ಯ ಯೋಜನೆಗಳಿಗೆ ಪ್ರಭಾವಿತರಾಗಿ ತಮ್ಮ ತಮ್ಮ ಕ್ಷೇತ್ರದಲ್ಲಿ ಅನೇಕರು ಗುರುತಿಸಿಕೊಂಡರು. ಹಾನಗಲ್ಲ ಶ್ರೀಗಳು ಸಾಹಿತ್ಯ ಸೃಷ್ಟಿಸಿ ಸೃಜನತೆ ತೋರಿದರು. ಸಂಪಾದನೆ ಮಾಡಿ ಉಳಿದವರಿಗೆ ಪ್ರೇರಣೆ ನೀಡಿದರು. ಪ್ರಕಟಣೆಯ ಪೋಷಕರಾಗಿ

ನೂತನ ದಾಖಲೆ ಬರೆದರು. ಅವರು ಕೈಗೊಂಡ ಅಧ್ಯಯನ, ಸರ್ವೆಕ್ಷಣೆ, ಸಂಗ್ರಹ, ಸಂಶೋಧನೆ, ಪ್ರಕಟಣೆ, ಶಿವಯೋಗ ಮಂದಿರದ ಪರಿಸರಕ್ಕೆ ಆಗಮಿಸುವರಿಗೆ ಪ್ರೇರಕವಾಗಿದೆ. ಹಾಗಾಗಿ ಅದು ದಾಖಲೆಗೆ ಅರ್ಹವಾಗಿರುವ ಕಾರಣ ಇಲ್ಲಿ ಆ ಬಗ್ಗೆ ಚರ್ಚಿಸಲಾಗಿದೆ.

ಅಡಿಟಿಪ್ಪಣಿಗಳು

೧. ಜ್ಞಾನಗಂಗೋತ್ರಿ-ಪು.ಸಂ-೬೪೦

೨. ಅನುಭಾವಿ-ಪು.ಸಂ.-೪೦೦

೩. ಹಾನಗಲ್ಲ ಕುಮಾರಸ್ವಾಮಿ: ಒಂದು ಅಧ್ಯಯನ-ಪು.ಸಂ-೨೯೨

೪. -ಅದೇ-ಪು.ಸಂ-೩೨೭

೫. ಬೆಳಗು-ಪು.ಸಂ-೨೯೧

೬. -ಅದೇ-ಪು.ಸಂ-೩೬೭

೭. ಶಿವಯೋಗಮಂದಿರ ನಿಯಮ-ಪು.ಸಂ-೯

೮. ಬೆಳಗು-ಪು.ಸಂ-೨೯೧

೯. ಸಂದರ್ಶನ, ಉಮಾಪತಿ ಶಾಸ್ತ್ರೀಗಳು, ದಿನಾಂಕ:೨೬.೦೫.೨೦೧೦

೧೦. ಬೆಳಗು-ಪು.ಸಂ-೨೯೧

೧೧. -ಅದೇ-ಪು.ಸಂ-೬೭

೧೨. ಸಂದರ್ಶನ, ಉಮಾಪತಿ ಶಾಸ್ತ್ರೀಗಳು, ದಿನಾಂಕ:೨೬.೦೫.೨೦೧೦

೧೩. ಬೆಳಗು-ಪು.ಸಂ-೩೪೦-೩೫೬

೧೪. -ಅದೇ-ಪು.ಸಂ-೩೫೦

೧೫. -ಅದೇ-ಪು.ಸಂ-೩೫೧-೫೨

೧೬. -ಅದೇ-ಪು.ಸಂ-೩೫೨

೧೭. -ಅದೇ-ಪು.ಸಂ-೩೫೫

೧೮. ಮಹಾಜಂಗಮ-ಪು.ಸಂ-೨೦೦

೧೯. ಬೆಳಗು-ಪು.ಸಂ-೨೪೯

೨೦. ಶಿವಯೋಗಮಂದಿರ ಶತಸಂವತ್ಸರ-ಪು.ಸಂ-೨೬೩

೨೧. -ಅದೇ-ಪು.ಸಂ-೨೬೪

೨೨. ಶಿವಯೋಗಮಂದಿರ ಶತಸಂವತ್ಸರ-ಪು.ಸಂ-೨೬೩

೨೩. ಕರ್ನಾಟಕ ಗಾಂಧಿ ಹರ್ಡೇಕರ್ ಮಂಜಪ್ಪ-ಪು.ಸಂ-೧೩೯

೨೪. -ಅದೇ-ಪು.ಸಂ-೨೧

೨೫. ಬೆಳಗು-ಪು.ಸಂ-೨೪೯

೨೬. ಬೆಳಗು-ಪು.ಸಂ-೨೪೯

೨೭. -ಅದೇ-ಪು.ಸಂ-೨೩೯

೨೮. -ಅದೇ-ಪು.ಸಂ-೨೭೬

೨೯. -ಅದೇ-ಪು.ಸಂ-೨೪೯

೩೦. -ಅದೇ-ಪು.ಸಂ-೨೭೯

೩೧. -ಅದೇ-ಪು.ಸಂ-೨೭೮

೩೨. ಶಿವಯೋಗಮಂದಿರ ಕೈಪಿಡಿ-ಪು.ಸಂ-೪೫

೩೩. -ಅದೇ-ಪು.ಸಂ-೪೬

೩೪. ಬೆಳಗು-ಪು.ಸಂ-೨೭೮

೩೫. ಶಿವಯೋಗಮಂದಿರ ಶತಸಂವತ್ಸರ-ಪು.ಸಂ-೨೬

೩೬. -ಅದೇ-ಪು.ಸಂ-೬೬

೩೭. ಕರ್ನಾಟಕ ಗಾಂಧಿ ಹರ್ಡೇಕರ್ ಮಂಜಪ್ಪ-ಪು.ಸಂ-೧೯

೩೮. -ಅದೇ-ಪು.ಸಂ-೨೧೭

೩೯. -ಅದೇ-ಪು.ಸಂ-೨೧೯

ಅಧ್ಯಾಯ - ಏಳು

ಶಿವಯೋಗಮಂದಿರ : ಗ್ರಂಥಾಲಯ-ವಾಚನಾಲಯ-ಹಸ್ತಪ್ರತಿ ಭಂಡಾರ

೧. ಶ್ರೀ ವಿಜಯಮಹಾಂತೇಶ್ವರ ಗ್ರಂಥಾಲಯ
೨. ಶ್ರೀ ರೇವಣಸಿದ್ಧೇಶ್ವರ ವಾಚನಾಲಯ
೩. ಹಸ್ತಪ್ರತಿ ಭಂಡಾರ

ಅಧ್ಯಾಯ – ಏಳು

ಶಿವಯೋಗಮಂದಿರ : ಗ್ರಂಥಾಲಯ–ವಾಚನಾಲಯ

ಹಸ್ತಪ್ರತಿ ಭಂಡಾರ

ಹಾನಗಲ್ಲ ಕುಮಾರಸ್ವಾಮಿಗಳ ಬಹುಮುಖ ಕ್ರಿಯಾಶೀಲ ಚಿಂತಕರು ಏಕೆಂದರೆ ಅವರು ಶಿಕ್ಷಣ, ಮುದ್ರಣ, ರಕ್ಷಣ, ಉದ್ಯಮ, ವಾಣಿಜ್ಯ ಹೀಗೆ ಎಲ್ಲಾ ರಂಗದಲ್ಲೂ ತಮ್ಮ ಕ್ರೀಯಾಶೀಲತೆಯಿಂದ ಯಶಸ್ಸು ಸಾಧಿಸಿದ್ದಾರೆ. ಹಾಗಾಗಿ ಕರ್ನಾಟಕ ಇತಿಹಾಸ ಕಂಡ ಅದ್ವಿತೀಯ ಸ್ವಾಮಿಗಳಲ್ಲಿ ಅವರೇ ಮೊದಲಿಗರು. ಅವರೇ ಕೊನೆಯವರು ಎಂದರೆ ತಪ್ಪಾಗಲಾರದು. ಒಂದು ಧರ್ಮಕ್ಕೆ ಆಚಾರ–ವಿಚಾರಗಳು ಎಂಬ ಎರಡು ಮುಖವಿದೆ. ಧರ್ಮದ ಆಚಾರ ಉಳಿಯಬೇಕಾದರೆ ಅದಕ್ಕೆ ಮೊದಲು ವಿಚಾರವು ಬೇಕು ಎಂಬುದನ್ನು ಅರಿತವರು ಹಾನಗಲ್ಲ ಪೂಜ್ಯರು. ಈ ಉದ್ದೇಶಕ್ಕಾಗಿಯೇ ಶಿವಯೋಗಮಂದಿರದಲ್ಲಿ ಒಂದು ಅಮೂಲ್ಯ ಗ್ರಂಥಾಲಯವನ್ನು ಅವರು ಸ್ಥಾಪಿಸಿದ್ದಾರೆ. ಶಿವಯೋಗಮಂದಿರದ ಆಚಾರಕ್ಕೂ, ವಿಚಾರಕ್ಕೂ ಪ್ರಾಧಾನ್ಯತೆ ನೀಡಿದೆ. "ಈ ಹಿನ್ನಲೆಯಲ್ಲಿ ಧಾರ್ಮಿಕ ವಿಚಾರಗಳನ್ನು ಸಮರ್ಪಕವಾಗಿ ಸಾಧಕರು ತಿಳಿಯುವಂತಾಗಲಿ ಎಂಬ ಅಭಿಲಾಷೆಯಿಂದ ಹಾನಗಲ್ಲ ಮಠದಲ್ಲಿದ್ದ ಗ್ರಂಥಗಳನ್ನು ತಾಲೆಗರಿ, ಕೋರೆ ಕಾಗದವನ್ನು ಅವರೆ ಪ್ರಥಮವಾಗಿ ದಾನ ನೀಡಿದ್ದಾರೆ. ಈ ಮೂಲಕ ನಾಡಿನ ಮಠಾಧಿಪತಿಗಳಿಗೆ, ದಾನಿಗಳಿಗೆ, ವಿದ್ಯಾವಂತರಿಗೆ, ಪ್ರಕಾಶಕರಿಗೆ, ಲೇಖಕರಿಗೆ, ಪ್ರೇರಣೆ ನೀಡಿದ್ದಾರೆ. ಅದರ ಫಲವಾಗಿ ಇಂದು ಶಿವಯೋಗಮಂದಿರದಲ್ಲಿ ಅತ್ಯುತ್ತಮ ಗ್ರಂಥಗಳ ಭಂಡಾರವೇ ಇದೆ."[೧]

"ಭಯಂಕರವಾದ ಪರ್ವತಗಳು ನುಚ್ಚು ನೂರಾಗುತ್ತವೆ. ಸಾಮ್ರಾಜ್ಯಗಳು ತಲೆಯತ್ತಿ ಮರೆಯಾಗುತ್ತದೆ. ನಾಗರಿಕತೆಗಳು ಮೂಡಿ ಮಾಯವಾಗುತ್ತವೆ. ಆದರೆ ಗ್ರಂಥಗಳು ಕಾಲಗರ್ಭದಲ್ಲಿ ನಡೆದುದನ್ನು ನಿತ್ಯನೂತನವಾಗಿ ನಮಗೆ ತಿಳಿಯಪಡಿಸುತ್ತವೆ. ಕಾಲರಾಯನ ಪದತಲದಲ್ಲಿ ನುಚ್ಚುನೂರಾಗಿ ಹೋದ ವ್ಯಕ್ತಿಗಳ ಹೃದಯಾಂತರಾಳನ್ನು ಅನಂತಕಾಲ ಬಿಚ್ಚಿ ತೋರಿಸಬಲ್ಲ

ಅಮರ ಜೀವಿಗಳೆಂದರೆ ಗ್ರಂಥಗಳೇ[೨೨] ಎಂದು ಕ್ಲೇರನ್ಸಡೇ ಹೇಳಿದ್ದಾರೆ. ಈತ ಹೇಳಿದ ಈ ಅಮೂಲ್ಯ ವಿಚಾರವು ಹಾನಗಲ್ಲ ಕುಮಾರಸ್ವಾಮಿಗಳಂತ ಪೂಜ್ಯರಲ್ಲಿ ಗ್ರಂಥಾಲಯದ ಸ್ಥಾಪನೆಗೆ ಪ್ರೇರಣೆಯಾಗಿತ್ತು ಎಂದರೆ ಅತಿಶಯೋಕ್ತಿಯಾಗಲಾರದು.

ಶ್ರೀ ವಿಜಯಮಹಾಂತೇಶ್ವರ ಗ್ರಂಥಾಲಯ

'ಸ್ಥಾವರಕ್ಕಳಿವುಂಟು' ಜಂಗಮಕ್ಕಳಿವಿಲ್ಲ' ಭೌತಿಕ ಸಂಪತ್ತು ನಶ್ವರವಾದುದು ಜ್ಞಾನಸಂಪತ್ತಿಗೆ ನಾಶವಿಲ್ಲ ಎಂಬುದನ್ನು ಈ ಸಾಲು ಸೂಚಿಸುತ್ತದೆ. ಜ್ಞಾನವನ್ನು ಯಾರು ಕದಿಯಲಾರರು, ಕಸಿದುಕೊಳ್ಳಲಾರರು, ಪಾಲು ಕೇಳಲಾರರು. ಅಂತಹ ಸಂಪತ್ತು ವಿದ್ಯೆಯಾಗಿದೆ. ಜ್ಞಾನ ಭಂಡಾರವು ನಮ್ಮ ಹಿಂದಿನ-ಇಂದಿನ ಸಂಸ್ಕೃತಿಯನ್ನು ತಿಳಿಸಬಲ್ಲದು. ಆಚಾರ ಹಾಗೂ ವಿಚಾರಗಳು ಧರ್ಮದ ಎರಡು ಮುಖವಿದ್ದಂತೆ ಶಿವಯೋಗ ಮಂದಿರದಲ್ಲಿ ಅದು ಪಾಠಶಾಲೆಯ ರೂಪದಲ್ಲೂ ಗ್ರಂಥಾಲಯದ ಸ್ವರೂಪದಲ್ಲೂ ಕಾಣಬಹುದಾಗಿದೆ.

ಶಿವಯೋಗ ಮಂದಿರದ ಉದ್ದೇಶೋಪಾಯದಲ್ಲಿ ಮೂರನೇಯ ಅಂಶವಾದ 'ಮಂದಿರದಲ್ಲಿ ಒಂದು ಗ್ರಂಥಾಲಯ ಸ್ಥಾಪಿಸುವುದು, ಗ್ರಂಥಗಳ ಸಂಗ್ರಹ ಮಾಡುವುದು, ಆ ಮೂಲಕ ಶಿವಯೋಗ ಮಂದಿರವನ್ನು ಪರಿಚಯಿಸುವುದು.' ಇದನ್ನು ನೆರವೇರಸಲೆಂದೆ ಶಿವಯೋಗ ಮಂದಿರದಲ್ಲಿ 'ಇಲಕಲ್ಲ ಶ್ರೀ ವಿಜಯ ಮಾಹಾಂತೇಶನ ಸ್ಮರಣಾರ್ಥಕವಾಗಿ ಅವರು ಲಿಂಗೈಕ್ಯರಾದ ವರ್ಷದಲ್ಲಿ (೧೯೧೦ರಲ್ಲಿ) ಶ್ರೀ ವಿಜಯಮಹಾಂತೇಶ್ವರ ಗ್ರಂಥಾಲಯವನ್ನು ಆರಂಭಿಸಲಾಯಿತು.

೧೯೧೦ರಲ್ಲಿ ಹಾನಗಲ್ಲ ಕುಮಾರಸ್ವಾಮಿಗಳು ತಮ್ಮ ಆತ್ಮೀಯರು, ಗುರುಸಮಾನರಾದ ಶಿವಯೋಗಿಮಂದಿರ ಸಂಸ್ಥೆಗೆ ನೆಲೆತೋರಿದ ಇಲಕಲ್ಲ ಶ್ರೀ ವಿಜಯ ಮಹಾಂತೇಶನ ಸ್ಮರಣಾರ್ಥವಾಗಿ ಶಿವಯೋಗಿಮಂದಿರದಲ್ಲಿ ಅವರ ಹೆಸರಿನಿಂದಲೇ ಈ ಜ್ಞಾನ ಭಂಡಾರವನ್ನು ಆರಂಭಿಸಿದರು. ಪ್ರಪ್ರಥಮವಾಗಿ ಈ ಗ್ರಂಥಾಲಯಕ್ಕೆ ಕುಮಾರಸ್ವಾಮಿಗಳೇ ತಮ್ಮ ಹಾನಗಲ್ಲ ಮಠದ ಅನೇಕ ಗ್ರಂಥಗಳನ್ನು ತಂದು ದಾನ ನೀಡಿದರು. ಇದಲ್ಲದೆ ೧೯೧೦ ರಿಂದ ೧೯೩೦ರ ವರೆಗೆ ಅನೇಕರು ಇಲ್ಲಿಗೆ ಪುಸ್ತಕಗಳನ್ನು ತಾಳೆವೋಲೆ, ಕೋರೆಕಾಗದ, ಗ್ರಂಥವನ್ನು ದಾನವಾಗಿ ನೀಡಿದ್ದಾರೆ. ಅವುಗಳಲ್ಲಿ ಸೊಲ್ಲಾಪುರದ ವಾರದ ಮಲ್ಲಪ್ಪ ಶಿರಸಂಗಿ ಲಿಂಗರಾಜರು ಅಮೂಲ್ಯ ಗ್ರಂಥಗಳನ್ನು, ತಾಳೆವೋಲೆ ಪ್ರತಿಗಳನ್ನು, ಕೋರೆ ಕಾಗದಗಳನ್ನು ನೀಡಿದ್ದಾರೆ. ಹೀಗೆ ಇಲ್ಲಿ ಸಂಗ್ರಹವಾದ ಗ್ರಂಥಗಳಲ್ಲಿ ಕನ್ನಡಕ್ಕೆ ಸಂಬಂಧಿಸಿದವು ೩೨೭೦ ಕೃತಿ, ಮರಾಠಿ ೧೩೭, ಇಂಗ್ಲೀಷ್ ೪೮, ಸಂಸ್ಕೃತ ೫೯೦, ಹಿಂದಿ ೭೫ ಇವು ಕೇವಲ ದಾಖಲುಗೊಂಡವು. ಹೀಗೆ ದಾಖಲೆಯಾಗದ ನೂರಾರು-ಸಾವಿರಾರು ಕೃತಿಗಳಿವೆ ಎಂಬುದಾಗಿ ಗ್ರಂಥಾಲಯದ ಸಹಾಯಕ ಸಿಬ್ಬಂದಿಯೊರ್ವರು ಹೇಳುತ್ತಾರೆ.

ಗ್ರಂಥಾಲಯಕ್ಕಾಗಿ ಪುಸ್ತಕಗಳನ್ನು ಖರೀದಿಸಲು ಅಂದಿನ ಕಾಲದಲ್ಲೇ "ಶ್ರೀ ಮದ್ವೀರಲಿಂಗ ಚಕ್ರವರ್ತಿಗಳಾದ ಕಂಚಕಲ್ಲ ಬಿದರೆ ಪಟ್ಟಾಧ್ಯಕ್ಷರು ಶ್ರೀ ಚನ್ನಬಸಪ್ಪ ಶೆಟ್ಟರು, ಕಾಫಿ ಪ್ಲಾಂಟರ ಚಿಕ್ಕಮಗಳೂರು, ಹಾರನಹಳ್ಳಿ ಸಿದ್ದರಾಮಪ್ಪ ಗೌಡರ ಸ್ಮರಣಾರ್ಥ ಅವರ ಬಂಧುಗಳು, ಮಂದಿರದಲ್ಲೇ ಕಲಿಯುತಲಿದ್ದ ವಟು–ಸಾಧಕರೆಲ್ಲ ಸೇರಿ ಹಣ ಕೂಡಿಸಿ ಅಪ್ರಾಪ್ಯವೆನಿಸಿದ 'ವಾಚಸ್ಪತ್ಯ ಸಂಸ್ಕೃತ ವಿಶ್ವಕೋಶ, ನಾಲ್ಕು ವೇದಗಳು, ಉಪನಿಷತ್ತುಗಳು, ಮತಚಾರ್ಯದ ಭಾಷ್ಯಗಳು, ವ್ಯಾಸರ ಹದಿನೆಂಟು ಪುರಾಣವನ್ನು ಖರೀದಿ ಮಾಡಿ ತರಲಾಗಿದೆ."[೧] ಇವು ಈ ಗ್ರಂಥಾಲಯದ ಅನರ್ಘ್ಯ ರತ್ನಗಳೆಂದೆ ಭಾವಿಸಲಾಗುತ್ತಿದೆ. ಅವುಗಳು ಇಂದಿಗೂ ಇಲ್ಲಿ ಲಭ್ಯವಿದೆ.

ಲೋಕ ಶಿಕ್ಷಣಕ್ಕೆ ಗ್ರಂಥಗಳು ಬಲವಾದ ಸಾಧನದಂತೆ. ಇಂತಹ ಸಾಧನಕ್ಕೆ ಯಾವುದೇ ರಾಜಾಶ್ರಯವಾಗಲಿ, ಚಿಂತಕರ ರಕ್ಷಣೆಯಾಗಲಿ ದೊರತಿರಲಿಲ್ಲ. ಪರಕೀಯರ ದಾಳಿ, ಪರಮತದವರ ಮತ್ಸರದಲ್ಲಿ ವೀರಶೈವರ ಪ್ರಾಚೀನ ಗ್ರಂಥಗಳು ಅಡಗಿದ ತಾಣದಲ್ಲಿ ಹುಳುಗಳಿಗೆ ಆಹಾರವಾಗಿದ್ದವು. ಅವುಗಳಿಗೆ ಬೆಳಕಿನ ಸ್ಪರ್ಶ ನೀಡುವುದರೊಂದಿಗೆ ಸಂಶೋಧನೆಗೆ, ಸಂಶೋಧಕನಿಗೆ ಆಕರಗಳನ್ನು ಒದಗಿಸಿದರು. ಅಂತಹ ಅಮೂಲ್ಯ ಗ್ರಂಥನಿಧಿಯನ್ನು ಶೋಧಿಸಲು, ಒಂದೆಡೆ ಪ್ರೇರಣೆ ಒದಗಿಸಿದರೆ, ಮತ್ತೊಂದೆಡೆ ಅವುಗಳನ್ನು ರಕ್ಷಿಸಲು, ದಾನವಾಗಿ ನೀಡುವಂತ, ಸಂಗ್ರಹಿಸುವಂತ ಮನಸ್ಥಿತಿಯನ್ನು ಸಮಾಜದಲ್ಲಿ ಹುಟ್ಟು ಹಾಕಿದರು. ಮೈಸೂರು ಪ್ರಾಚ್ಯ ಸಂಶೋಧನೆ ಸಂಸ್ಥೆಯವರು ತಮ್ಮ ಪ್ರಕಟಣೆಯಲ್ಲಿ ಬಂದ ಪುಸ್ತಕಗಳನ್ನು ಇಲ್ಲಿಗೆ ನಿರಂತರವಾಗಿ, ಉಚಿತವಾಗಿ ದಯಪಾಲಿಸಿದ್ದಾರೆ. ಹೀಗೆ ಗ್ರಂಥಾಲಯದಲ್ಲಿ ನಾಲ್ಕು ಸಾವಿರಕ್ಕೂ ಮಿಗಿಲಾದ ಅಚ್ಚಾದ ಗ್ರಂಥಗಳು ಸಾವಿರಕ್ಕೂ ಅಧಿಕವಾದ ಓಲೆಗರಿ, ಕೋರಿ ಕಾಗದ, ತಾಡೋಲೆಗಳ ಸಂಗ್ರಹವಿದೆ.

ಸುಕುಮಾರ ಪತ್ರಿಕೆಯ ಸಂಪಾದಕರಾಗಿದ್ದ ಪಂ.ಉಮಾಪತಿಶಾಸ್ತ್ರೀಗಳು ಅನಂತಪುರ, ಸಖರಾಯಪಟ್ಟಣ, ಕಂಚಕಲ್ಲು, ಬಿದರೆ, ಹಾರನಹಳ್ಳಿ, ಹಾವೇರಿ, ಮುಳ್ಳುಳ್ಳು, ಗದಗ, ಬಾಗಲಕೋಟೆ, ಕೆರೂರು, ಚಿಕ್ಕಮಗಳೂರು, ಗುಳೇದಗುಡ್ಡ, ಸವದತ್ತಿ, ಕರವತ್ತಿಯಂತ ನಗರ, ಗ್ರಾಮ ಸುತ್ತಿ ಸುಮಾರು ಐದುನೂರು ಹಸ್ತಪ್ರತಿ, ತಾಳೆಗರಿ, ಕೋರಿ ಕಾಗದ ಮೊದಲಾದ ಗ್ರಂಥ ಸಂಗ್ರಹಿಸಿದ್ದಾರೆ. ಅವುಗಳ ಸಂರಕ್ಷಣೆಗಾಗಿ ಸಿದ್ದೇಶ್ವರ ಉಕ್ಕಿನ ಕಂಪನಿಯಿಂದ ಕಪಾಟು ಮಾಡಿಸಿದ್ದಾರೆ. ಎಂಬುದಾಗಿ ಮಂದಿರದ ಸ್ಮಾರಕ ಕೃತಿ ಬೆಳಗು ಪುಸ್ತಕದಲ್ಲಿ ಬರೆದಿದ್ದಾರೆ. ಆದರೆ ಅಂತಹ ಯಾವ ದಾಖಲೆಯು ಈ ಗ್ರಂಥಾಲಯದಲ್ಲಿ ದೊರೆತಿಲ್ಲ. ಶ್ರೀಯುತರು ಅವುಗಳನ್ನು ಪರಮತದವರಿಗೆ ಮಾರಿಕೊಂಡಿದ್ದಾರೆ ಎಂಬ ಆಪಾದನೆಗಳನ್ನು ನಾವು ಸಂಶೋಧನಾ ಕ್ಷೇತ್ರಕಾರ್ಯದಲ್ಲಿ ಕೇಳಿದ್ದೇವೆ. ಆದರೆ ಈ ಬಗ್ಗೆ ಶ್ರೀಯುತರು ಮಾತ್ರ ತಾನು ಅಂತಹ ಪಾಪದ ಕಾರ್ಯ ಮಾಡಿಲ್ಲವೆಂದು ವಾದಿಸಿದ್ದಾರೆ. ಹಾಗಾದರೆ ಸತ್ಯವೇನು? ಎಂಬುದು ಯಕ್ಷಪ್ರಶ್ನೆಯಾಗಿ ಉಳಿದಿದೆ.

ಈ ಗ್ರಂಥಾಲಯವು ನಾಡಿನ ಹಲವಾರು ಸಂಶೋಧಕರಿಗೆ ಸಾಹಿತಿಗಳಿಗೆ ಗ್ರಂಥ ಪ್ರಕಟಣೆಯಲ್ಲಿ ಸಾಕಷ್ಟು ಮಾಹಿತಿಯನ್ನು ಒದಗಿಸಿದೆ. ಅದಕ್ಕೆ ಕೆಲವೊಂದು ಉದಾಹರಣೆಗಳನ್ನು ಈ ಕೆಳಗಿನಂತೆ ಒದಗಿಸುವುದರೊಂದಿಗೆ ಸ್ಪಷ್ಟೀಕರಿಸಬಹುದಾಗಿದೆ.

೧. ಶೂನ್ಯ ಸಂಪಾದನೆ, ವಚನಶಾಸ್ತ್ರ, ಫ.ಗು.ಹಳಕಟ್ಟಿ

೨. ಚನ್ನಬಸವ ಪುರಾಣ, ಪ್ರೊ. ಶಿ.ಶಿ. ಬಸವನಾಳ

೩. ಸಿದ್ಧರಾಮನ ಕೃತಿಗಳು, ಶ್ರೀ ಉತ್ತಂಗಿ ಚೆನ್ನಪ್ಪನವರು

೪. ಪದ್ಮಣಾಂಕ ಪುರಾಣ, ಡಾ. ಆರ್.ಸಿ. ಹಿರೇಮಠ

೫. ಶೂನ್ಯ ಸಂಪಾದನೆ, ಪ್ರೊ. ಎಸ್.ಎಸ್. ಭೂಸನೂರಮಠ

೬. ಹಮ್ಮೀರ ಕಾವ್ಯ, ಪ್ರೊ. ಎಂ.ಎಸ್. ಸುಂಕಾಪುರ

೭. ಕ್ರಿಯಾಸಾರ (ಸಂಸ್ಕೃತ) – ಎಚ್. ದೇವಿರಪ್ಪ, ಮೈಸೂರು ಪ್ರಾಚ್ಯ ಸಂಶೋಧನೆ ಸಂಸ್ಥೆ,

೮. ಪಾರಮಾರ್ಥ ಪ್ರಕಾಶನ – ಪ್ರೊ. ಜಿ.ಎಂ. ಉಮಾಪತಿಶಾಸ್ತ್ರಿ

ಹೀಗೆ ಈ ಗ್ರಂಥಾಲಯವು ಒಂದು ಮಾದರಿಯ ಸಂಶೋಧನಾ ಕೇಂದ್ರವಾಗಿತ್ತು. ಪಂಡಿತರು, ವಿದ್ವಾಂಸರ ಉತ್ತಮೋತ್ತಮ ಕೃತಿಗಳ ಸಂಪಾದನೆಗೆ ಪರಿಷ್ಕರಣೆ, ಪ್ರಕಟಣೆಗಾಗಿ ಈ ಗ್ರಂಥಾಲಯವು ವೈಶಿಷ್ಟ್ಯವಾದ ಕೊಡುಗೆ ನೀಡಿದೆ.

ಇನ್ನೂ ಹಾನಗಲ್ಲ ಶ್ರೀಗಳನ್ನು ಮೊದಲುಗೊಂಡು ಅನೇಕ ಅಭಿಮಾನಿಗಳು ಹಾಗೂ ಬೇರೆ ಬೇರೆ ಸ್ವಾಮಿಯವರು ಶಾ.ಶಕೆ ೧೮೩೨ ರಿಂದ ೧೮೯೭ರ ಅವಧಿಯಲ್ಲಿ ಸಂಗ್ರಹಗೊಂಡ ಉಪಯುಕ್ತ ಗ್ರಂಥಗಳನ್ನು ಕೊಟ್ಟವರ ಹೆಸರುಗಳೆಂದಿಗೆ ದೇಣಿಗೆ ರೂಪದಲ್ಲಿ ಕೊಡುಗೆಯಾಗಿ, ಸಾವಿರಾರು ಗ್ರಂಥಗಳನ್ನು ದಾನದ ರೂಪದಲ್ಲಿ ನೀಡಿದ್ದಾರೆ. ಅವುಗಳನ್ನು ದಾಖಲೆಯ ಹಿನ್ನೆಲೆಯಿಂದಲೂ, ಗ್ರಂಥಾಲಯದ ಮಹತ್ವದ ಘನತೆಯನ್ನು ಸಾರುವ ವಿಚಾರವಾಗಿ ಅಲ್ಲಿ ಸ್ಥರಿಸಿ ಪಟ್ಟಿ ಮಾಡಲಾಗಿದೆ. ಅವುಗಳೆಂದರೆ

೧. ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠ ಮುಂಡರಗಿ ಅವರಿಂದ ಬಂದ ಗ್ರಂಥ. ೧೬೬ ಪುಸ್ತಕ ದಿ. ೫.೫.೧೯೯೯ ರೂ ೪೨೨೧.೧೨

೨. ಡಾ. ಶ್ರೀ ಜ.ಚ.ನಿಯವರ ಪ್ರಕಾಶನ ಬೆಂಗಳೂರು ಪು–೮೨ ೫.೫.೧೯೯೯ ೨೩೯.೦೦

೩. ಡಾ. ಪುಟ್ಟರಾಜ ಕವಿಗವಾಯಿಗಳು ರಚಿಸಿ ಕಳಿಸಿದವು. ೨೨.೧೧.೯೬ ೧೮ಪುಸ್ತಕ ರೂ. ೨೮೫.೨೫

೪. ಶ್ರೀ. ಮ.ನಿ.ಪ್ರ.ಜ ತೋಂಟದಸಿದ್ಧಲಿಂಗಮಹಾಸ್ವಾಮಿಗಳು ಸಂಸ್ಥಾನ ಮಠ ಗದಗ, ಪು ೬೮ ರೂ. ೧೩೧೭.೫೦

೫. ಶ್ರೀ ಮ.ನಿ.ಪ್ರ. ಶ್ರೀ ವಿಜಯಮಹಾಂತೇಶ್ವರ ಸ್ವಾಮಿಗಳು ಇಳಕಲ್ಲ, ಪು-೭ ರೂ ೬೩೩.೦೦

೬. ಶ್ರೀ ಸಿದ್ಧಗಂಗಾ ಮಠದಿಂದ ಬಂದ ಪುಸ್ತಕ, ಪು-೬ ರೂ. ೫೦೦.೦೦

೭. ಶ್ರೀ ಜಗದ್ಗುರು ಗಂಗಾಧರರಾಜಯೋಗಿಂದ್ರ ಮಹಾಸ್ವಾಮಿಗಳವರು ಮೂರುಸಾವಿರ ಮಠ ೧೨೩+೧೦೬ ಕನ್ನಡ. ೫ ಇಂಗ್ಲಿಷ್, ೮ ಹಿಂದಿ, ರೂ. ೧೬೭೭.೦೦

೦೮. ಡಾ. ಸಿ. ಸೋಮಶೇಖರ-ಪು-೧೦

೦೯. ಎಚ್.ಮ. ವಪ್ಪತ್ತೇಶ್ವರ-ಪು-೨೫

೧೦. ಪ್ರೊ. ಅ.ನಿ. ಹಿರೇಮಠ, ರಾಣೆಬೆನ್ನೂರು-ಪು-೪೩

೧೧. ಸದಾಶಿವದೇವರು ಶಿವಯೋಗ ಮಂದಿರ-ಪು-೦೯

೧೨. ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿ, ೭.೨.೧೯೯೯ ಪು-೫೯ ರೂ. ೧೭೦೦.೦೦

೧೩. ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ ಸುತ್ತೂರುಮಠ ಮೈಸೂರು. ವಚನ ಸಂ-೧೫ ರೂ. ೩೬೫.೦೦

೧೪. ಡಾ. ವ್ಹಿ.ಎಸ್.ಕಂಬಿಯವರಿಂದ, ಪು-೧೪ ರೂ. ೫೨೩

೧೫. ಡಾ. ವಿ.ಬಿ. ಹಿರೇಮಠ ಮುಂಡರಗಿ, ಗದಗ ೫.೫.೧೯೯೯, ಪು-೧೦

೧೬. ಲಿಂಗಾಯತ ಅಧ್ಯಯನ ಕೇಂದ್ರ ಗ್ರಂಥಾಲಯ-೩ ಪುಸ್ತಕ.

೧೭. ಭಾತಂಬ್ರಾ, ಬಾಲ್ಕಿ, ವಿರಕ್ತಮಠಾಧೀಶ ಶಿವಯೋಗಿಶ್ವರ ಮಹಾಸ್ವಾಮಿ ೬-ಪು-೧೬.೨.೧೯೯೯

೧೮. ಇಟಗಿ ಚನ್ನಬಸವಶಾಸ್ತ್ರಿ, ಸೊ.ಹಿರೇಮಠ ಇಟಗಿ ರೋಣ (ತಾ)ಕನ್ನಡಸಂಸ್ಕೃತ,ಪು-೧೦

೧೯. ಲೀಲಾದೇವಿ.ಆರ್.ಪ್ರಸಾದ ೧೨.೫.೧೯೯೯-೯-ಪು

೨೦. ಶ್ರೀ ಮ.ನಿ.ಜಗದ್ಗುರು ಪಂಚಮ ಶಿವಲಿಂಗೇಶ್ವರ ಮಹಾಸ್ವಾಮಿ ಶ್ರೀ ದುರದುಂಡೇಶ್ವರ ಸಿದ್ಧಸಂಸ್ಥಾನಮಠ ನಿಡಸೋಸಿ. ಪು-೧೪- ೧೮.೫.೧೯೯೯

೨೧. ಶ್ರೀ ನಿಜಲಿಂಗೇಶ್ವರ ಗ್ರಂಥಮಾಲೆ ನಿಡಸೋಸಿ ೧೨-ಪು ರೂ. ೫೩೫.೦೦

೨೨. ಶ್ರೀ ಮ.ನಿ.ಪ್ರ. ಮೃಡಗಿರಿ ಅನ್ನದಾನ ಮಹಾಸ್ವಾಮಿ ೨೦.೧೨.೧೯೯೯ ೧೮.೩.೨೦೦೧ ಪು-೨೪

೨೩. ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿ ಮೂರು ಸಾವಿರ ಮಠ ಹುಬ್ಬಳ್ಳಿ, ೧೩-ಪು ರೂ. ೬೫೫.೦೦

೨೪. ಶ್ರೀ ಅನ್ನದಾನೀಶ್ವರ ಗ್ರಂಥಮಾಲೆ ೧೧.೧೧.೨೦೦೯ ಪು-೬

೨೫. ಜ.ಡಾ.ಶಿವಯೋಗಿಶಿವಚಾರ್ಯ ಮಹಾಸ್ವಾಮಿಗಳು ಕಲ್ಯಾಣಮಠ ಹುಬ್ಬಳ್ಳಿ ಅವರ ತಾಯಿಯವರಾದ ಲಿಂ.ರತ್ನಮ್ಮನವರು. ದಿ: ೨೫.೧೨.೨೦೦೧-ಪು-೨೮

೨೬. ಮೂ.ಜ.ಗಂ. ಹುಬ್ಬಳ್ಳಿ ಪು-೧ ರೂ. ೧೫೦.೦೦

೨೭. ಸಿದ್ದರಾಮ ಸ್ವಾಮಿಗಳು ನಾಗನೂರು ಒಂದ ಗ್ರಂಥ

೨೮. ಎಸ್.ಆರ್.ಗುಂಜಾಳ ಅವರಿಂದ

೨೯. ಮೃಡಗಿರಿ ಶ್ರೀಗಳಿಂದ ಪು-೯ ೧೫೫-೦೦+೧೬೦

೩೦. ಸಾಣತ ವೀರಭದ್ರಪ್ಪ ಮಲ್ಲಪ್ಪ ಕಪಾಲಿ, ಸಾ.ಕಾಲನೂರು ತಾ.ಬಾದಾಮಿ ಜಿ.ಬಾಗಲಕೋಟೆ

ಪು-೧೦ ರೂ. ೨೨೦.೦೦, ೨೦.೧೧.೨೦೦೯

೩೧. ಶ್ರೀ ಸಿದ್ಧರಾಮ ಪಾಂಡಿತಾರಾಧ್ಯ ಶಿವಾಚಾರ್ಯರು.

೩೨. ಶ್ರೀ ಗುರುಸಿದ್ಧ ಶಿವಚಾರ್ಯ ಸ್ವಾಮಿಗಳು ರಾಜಗುರು ಕೆಳದಿ ಸಂಸ್ಥಾನ ಹಿರೇಮಠ

ಕೆಳದಿ

೩೩. ಶ್ರೀ ಮ.ನಿ.ಪ್ರ. ಶಿವಬಸವರಾಜೇದ್ರ ಮಹಾಸ್ವಾಮಿಗಳು ಖೇಡಗಿ

೩೪. ಶ್ರೀ ಜ. ಹುಬ್ಬಳ್ಳಿ ಮೂರುಸಾವಿರ ಮಠದ ಶ್ರೀಗಳಿಂದ ೧೩ ಹಿಂದಿ ೨೦.೫.೨೦೦೪

೩೫. ಮುಂಡರಗಿ ಶ್ರೀಗಳಿಂದ ೨೮.೧೧.೦೪

೩೬. ಶ್ರೀ. ಪ.ಬ್ರ.ಚನ್ನವೀರ ಶಿವಾಚಾರ್ಯರು ಸಂಸ್ಥಾನ ಹಿರೇಮಠ ಹಾರಕೋಡ

ತಾ.ಬಸವಕಲ್ಯಾಣ ಜಿ.ಬೀದರ್. ಪು-೩ ದಿ: ೧.೧೨.೦೪

೩೭. ವಟುಗಳಿಂದ ೩.೧.೨೦೦೫

೩೮. ಸೋಮಶೇಖರ ಶಾಸ್ತ್ರಿಗಳು ಪುರಾಣಿಕಮಠ ಗದಗ ಹಿರೆದೊಗಿ ೧೭.೩.೦೪

೩೯. ಶ್ರೀಭಾಗ್ಯವತಿ ಪುರಾಣ ಕಾವ್ಯ ಪು-೨ ರೂ. ೨೫೦

೪೦. ಶಂಭುಲಿಂಗದೇವರು ಅಡವೀಶ್ವರಮಠ ೨೨.೫.೦೫ ಪು-೬ ೨೦೦

೪೧. ತೋಂಟದಾರ್ಯಮಠ ೦೨.೦೬.೦೫

೪೨. ಕುಮಾರ ದೇವರು

೪೩. ಶ್ರೀ ಅನ್ನದಾನೀಶ್ವರ ಮಹಾಸ್ವಾಮಿಗಳು ಮುಂಡರಗಿ ಪು-೫ ರೂ. ೨೧೫

೪೪. ಶ್ರೀ ಹರಿದೂಪದ ಸಾ.ಸೂಳೆಬಾವಿ ತಾ.ಹುನಗುಣದ ಜಿ.ಬಾಗಲಕೋಟ

ಪು-೩. ೧೮.೧೨.೦೫

೪೫. ಕುಮಾರೇಶ್ವರ ಜಯಂತಿ ಪ್ರಯುಕ್ತ ಪ್ರಭುಲಿಂಗ ದೇವರು ಪು-೬ ೦೫.೦೯.೦೬

೪೬. ಶ್ರೀ ಬಾಲಚಂದ್ರ ಶಾಸ್ತ್ರಿಗಳು ಚಿಕ್ಕಮಣ್ಣುರು ಪು-೧

೪೭. ಹಾಲತೇರಿ ಶ್ರೀಗಳಿಂದ ಬಂದ ಪು-೬ ರೂ. ೨೦೦.೦೦

೪೮. ಶ್ರೀ ಮ.ಷ.ಚ. ಗುರುಸಿದ್ಧಶಿವಾಚಾರ್ಯರುರಾಜಗುರು ಹಿರೇಮಠ ಕೆಳದಿ, ಪು-೨

೪೯. ಬ್ರ. ಶ್ರೀ ಚನ್ನವೀರ ಶಿವಾಚಾರ್ಯರು ಸಂಸ್ಥಾನ ಹಿರೇಮಠ ಸುಕ್ಷೇತ್ರ ಹಾರಜೋಡ.

೫೦. ದೊರೆತ್ತದ್ದು ಕಲ್ಲಚ್ಚಿನಚಂಪು ಪ್ರತಿ ೧೮೫೦ ಮಂಗಳೂರಿನಲ್ಲಿ ಚಾಪಿಸಿದ್ದು ದಾನಿಗಳು ಶರಣಪ್ಪ ರುದ್ರಪ್ಪ ಸರ್ವಿ ಸಾಕಿನ್:ನಿಡಗುಂದಿ ಜಿ.ಕೊಪ್ಪ, ಕೊಟ್ಟುರು: ಕೆ.ಎಸ್.ಸರ್ವಿ, ಎಮ್.ಎಸ್.ಸರ್ವಿ, ೨೫.೪.೧೯೭೦ ಬಸವ ಪುರಾಣ

೫೧. ೧೮೯೪ ಕಿಟಲ್ ಶಬ್ದಕೋಶ ಪ್ರಥಮ ಮುದ್ರಣ ಗುಂಡಪ್ಪನವರು ಇಳಕಲ್ಲ, ೨೨.೨.೧೯೪೧

೫೨. ಹಾಲಕೇರಿ ಶ್ರೀಗಳಿಂದ ೯.೧೧.೦೬ ೬–ಪುಸ್ತಕ

೫೩. ಶ್ರೀ ಮ.ನಿ.ಪ. ಅಮೀನಗಡ ಶ್ರೀಗಳಿಂದ ೨–ಪುಸ್ತಕ

೫೪. ಶಿವಕುಮಾರ ಗುಡ್ಡಿ ಮಠ ಗದಗ

೫೫. ಹಾವೇರಿ ಹುಕ್ಕೇರಿಮಠ ಶ್ರೀ ಮ.ನಿ.ಪ್ರ ಶಿವಲಿಂಗಮಹಾಸ್ವಾಮಿ

೫೬. ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳ ಜಿ.ಮೂರುಸಾವಿರ ಮಠ ಹುಬ್ಬಳ್ಳಿ. ೨೫.೫.೦೭

೫೭. ಶ್ರೀಶರಣ ಸುವಾಸಿನಿ ಬಳಗ ಹೊಸಪೇಟೆ ಪು–೫ ೨೭.೦೫.೦೭

೫೮. ಜಗದ್ಗುರು ಕೊಟ್ಟೂರುಸ್ವಾಮಿ ಮಠ ಬಳ್ಳಾರಿ ಹೊಸಪೇಟೆ ೧೭.೦೧.೦೮, ಪು–೧೪ ರೂ. ೧೦೦೦.೦೦

೫೯. ಕನ್ನಡಪುಸ್ತಕಮಾಲೆ ಅಲ್ಲಮಪ್ರಭು ಜನಕಲ್ಯಾಣ ಸಂಸ್ಥೆ ಸಿದ್ಧಸಂಸ್ಥಾನ ಚಿಂಚಣಿ, ಚಿಕ್ಕೊಡಿ ಪು–೧೫ ರೂ. ೫೦೦.೦೦ ೨೧.೦೧.೦೯

೬೦. ಚನ್ನವೀರ ಶಿವಯೋಗಿಗಳ ಯೋಗಾಶ್ರಮ, ಮಹಾಲಂಗಪುರ

೬೧. ಶ್ರೀ ಮ.ನಿ.ಪ್ರ ಶಾಂತವೀರಸ್ವಾಮಿಗಳು ಶಿವಮೂರ್ತಿಶ್ವರ ಮಠ ರಾಮದುರ್ಗ ಸವದತ್ತಿ ೦೫.೦೨.೦೮

೬೨. ಚನ್ನಬಸವೇಶ್ವರ ಸಂಸ್ಥಾನಹಿರೇಮಠ ಸುಕೇತ್ರ ಹಾರಕೋಡ, ಜಿ:ಬೀದರ ಪು–೧೩ ೬೩ ಹುಬ್ಬಳ್ಳಿ ಚನ್ನವೀರ ದೇವರು ಕಲ್ಯಾಣಮಠ ಪು–೧೫

೬೪. ಮೃಡಗಿರಿ ಶ್ರೀಗಳಿಂದ ಬಂದದ್ದು ೨೯.೦೬.೯೮ ಪು–೮೫ ರೂ. ೧೧೪೦.೦೦ ೩೧೯೬.೦೦

೬೫. ಎಸ್.ಜಿ.ಹೊಳಿಮಠ (ಲಿಂಗದೇವರು ವಂಟಮೂರಿ) ಪು–೮೦ ರೂ. ೩೦೦೦.೦೦

೬೬. ಪ್ರೊ. ಸದಾಶಿವ.ಎಸ್.ಕುರಬೇಳು

೬೭. ಶ್ರೀಮ.ಪ್ರ.ಗಂಗಾಧರ ಮಹಾಸ್ವಾಮಿ ಬೈಲಹೊಂಗಲ

೬೮. ಶ್ರೀಮತಿ ಶಿವಲಿಂಗಮ್ಮ ಕಟ್ಟಿ

೬೯. ಪೂಜ್ಯ ಪ್ರಭುಕುಮಾರ ಶಿವಾಚಾರ್ಯಸ್ವಾಮಿಗಳ ಮೈಸೂರು

೭೦. ಮಲ್ಲಿಕಾರ್ಜುನ ಮಹಾಸ್ವಾಮಿಗಳು ಮರಕುಂಟಿ

೭೧. ಡಾ.ಶೀಲಾಕಾಂತ ಪತ್ತಾರ್ ಗುರುಗಳಿಂದ-ಪು-೨೬ ೨೦.೦೪.೦೯

೭೨. ಸದಾಶಿವದೇವರು ಶಿವಯೋಗ ಮಂದಿರ ಬಾಗಲಕೋಟೆ.

೭೩. ಪ.ಪೂ.ಲಿಂ, ಶ್ರೀ.ಮ.ನಿ.ಪ್ರ, ಶ್ರೀಶಿವಲಿಂಗಮಹಾಶಿವಯೋಗಿಗಳು, ಶ್ರೀ ಶಿವಲಿಂಗೇಶ್ವರ ವಿರಕ್ತಮಠ ಮದನಹಿಪ್ಪರಗಿ ಹಾಗೂ ಶ್ರೀ ಹುಕೇರಿಮಠ ಹಾವೇರಿ ಪು-೬ ೩೧.೦೫.೦೯

೭೪. ಪಿ.ಎನ್.ಹಿರೇಮಠ ನಿವೃತ್ತ ಪ್ರಾಧ್ಯಾಪಕರು ನಿಡಗುಂದಿ ಕೊಪ್ಪ-೧೪.೧೧.೨೦೦೮ ಪು-೬೩೦ ರೂ. ೧೭೧೫೧.೦೦

೭೫. ಲಿಂಗಾಯತ ಅಧ್ಯಯನ ಕೇಂದ್ರ ಲಿಂಗನೂರು ರುದ್ರಾಕ್ಷಿ ಮಠ ಬೆಳಗಾವಿ. ಸಿದ್ಧರಾಮ ಮಹಾಸ್ವಾಮಿಗಳು ಪು-೯

೭೬. ಕಪನಹಳ್ಳು ರೇವಣಸಿದ್ಧ ಮಹಾಸ್ವಾಮಿಗಳು ಆಶ್ರಮ ಕಾಳೇನಹಳ್ಳಿ, ಪು-೨೧ ೪.೨೧.೨೦೦೯

ಈ ಗ್ರಂಥಲಯವು ಕಣ್ಣರಿಕೆಯ ಕಾಲದಲ್ಲಿ ಬೆಳೆಯಿತು. ವೀರಶೈವ ಧರ್ಮದ ಜ್ಞಾನ ನಿಧಿಯಿಂದ ವಿವಿಧ ಭಾಷೆಗಳಲ್ಲಿ ರಚಿಸಲ್ಪಟ್ಟ ಸಾವಿರ-ಸಾವಿರ ತಾಡವೋಲೆ ಗ್ರಂಥಗಳು, ಮುದ್ರಿತ ಗ್ರಂಥಗಳು, ವೀರಶೈವ ಧರ್ಮ ತತ್ವಗಳನ್ನು ಕುರಿತ ವಿವಿಧ ಭಾಷೆಗಳಲ್ಲಿ ಬರೆಯಲ್ಪಟ್ಟ ಕೃತಿಗಳು ಇಲ್ಲಿ ಸಂಗ್ರಹಗೊಂಡವು. ಇಲ್ಲಿ ತರಬೇತಿ ಪಡೆಯುತ್ತಿದ್ದ ಸಾಧಕರಿಗೆ ಅವು ಜ್ಞಾನ ದೀವಿಗೆಯಂತೆ ಉಪಯೋಗವಾಗ ಹತ್ತಿದವು. ವಚನ ಪಿತಾಮಹಾ ಡಾ. ಫ.ಗು.ಹಳಕಟ್ಟಿ, ಪದ್ಮಶ್ರೀ ಕೀರ್ತನ ಕೇಸರಿ ಬಿ.ಶಿವಮೂರ್ತಿಶಾಸ್ತ್ರಿ, ಶರಣಜೀವಿ ಶಿರಾಳಕೊಪ್ಪದ ಚನ್ನಮಲ್ಲಿಕಾರ್ಜುನ ಮಾಸ್ತರು, ಸರ್ವಜ್ಞಸಾಹಿತಿ ರೆ. ಉತ್ತಂಗಿ ಚನ್ನಪ್ಪ, ಪ್ರೋ.ಶಿ.ಶಿ.ಬಸವನಾಳ, ಡಾ.ಆರ್.ಸಿ.ಹೀರೆಮಠ, ಸಂ.ಶಿ.ಭೂಸನೂರಮಠ-ಮೊದಲಾದವರು ಈ ಗ್ರಂಥಾಲಯದಿಂದ ಉಪಯುಕ್ತ ಮಾಹಿತಿ ಪಡೆದು ಉತ್ಕೃಷ್ಟ ಗ್ರಂಥಗಳ ರಚನೆಯನ್ನು, ಇತಿಹಾಸದ ಐತಿಹ್ಯ ಗ್ರಂಥಗಳ ಸಂಶೋಧನೆ ಮಾಡಿದ್ದಾರೆ. ಹೀಗೆ ವೀರಶೈವ ಮಠಾಧಿಪತಿಗಳಿಗೆ, ಸಂಶೋಧಕರಿಗೆ, ಆಸಕ್ತರಿಗೆ ಸ್ಪೂರ್ತಿಯ ಕೇಂದ್ರವಾಗಿ ಅವಿಸ್ಮರಣೀಯ ಸೇವೆಯನ್ನು ಸಲ್ಲಿಸಿದ ಕೀರ್ತಿ ಈ ಗ್ರಂಥಾಲಯಕ್ಕಿದೆ.

ಈ ಗ್ರಂಥಾಲಯವು ೧೯೬೧-೬೨ರ ವರೆಗೆ ಅತ್ಯಂತ ಸಮೃದ್ಧವಾಗಿತ್ತು. ಎಂಬುದಾಗಿ ಅದರ ವಿಶ್ವಸ್ಥ ಮಂಡಳಿಯ ಅಂದಿನ ಅಧ್ಯಕ್ಷರಾಗಿದ್ದ ಶ್ರೀ.ಮ.ನಿ.ಪ್ರ. ಜಗದ್ಗುರು ಅನ್ನದಾನೇಶ್ವರ ಮಹಾಸ್ವಾಮಿಗಳು ಹೇಳಿದ್ದಾರೆ. ಅಲ್ಲಿಂದ ಸುಮಾರು ನಲವತ್ತು ವರ್ಷಗಳು ಅಂದರೆ ೧೯೯೭ರ ವರೆಗೆ ಈ ಗ್ರಂಥಾಲಯವು ಶಿಥಿಲಾವಸ್ಥೆಯಿಂದ ಕೂಡಿತ್ತು ಎಂಬುದನ್ನು ಅವರೆ ಹೀಗೆ ಹೇಳಿದ್ದಾರೆ. "ನಾವು ಗ್ರಂಥಾಲಯದಲ್ಲಿ ಕಾರ್ಯದರ್ಶಿಗಳಾಗಿದ್ದ ಕಾಲದಲ್ಲಿ ಇದ್ದ ಅನೇಕ ಗ್ರಂಥಗಳು ಈಗ ಹಲವರ ಕೈಸೇರಿ ಹೋಗಿರುವುದು ವಿಷಾದದ ಸಂಗತಿ ಈ ಜ್ಞಾನ ಭಂಡಾರದ ಅಭಿವೃದ್ಧಿಯಾಗುವಂತೆ ನೋಡಿಕೊಳ್ಳುವುದು ಅತ್ಯವಶ್ಯಕ"[೪೯] ಎಂದಿದ್ದಾರೆ. ಅಂದರೆ ಸುಮಾರು ನಲವತ್ತು ವರ್ಷ ಈ ಗ್ರಂಥಾಲಯ ಸೇವೆ ಸಲ್ಲಿಸಿದರೂ ನಿರ್ವಾಹಣೆಗೆ ಒಳಪಡದೆ ಕುಂಠಿತಗೊಂಡದ್ದು ದುಃಸ್ಥಿಗಿಳಿಯಿತು.

ಇಂತಹ ಸಂಧಿಕಾಲ ಉತ್ತಮೋತ್ತಮವಾದ ಹಸ್ತಪ್ರತಿಗಳು ಕಣ್ಮರೆಯಾದವು. ಈ ಸ್ಥಿತಿಯಲ್ಲಿದ್ದ ಗ್ರಂಥಾಲಯಕ್ಕೆ ಕಾಯಕಲ್ಪ ಕೊಡಬೇಕೆಂದು ಶಿವಯೋಗ ಮಂದಿರದ ವಿಶ್ವಸ್ಥ ಮಂಡಳಿಯವರು, ಅದನ್ನು ಆಧುನಿಕ ಗ್ರಂಥಾಲಯ ತತ್ವಗಳಿಗೆ ಅನುಗುಣವಾಗಿ ಅಭಿವೃದ್ಧಿ ಪಡಿಸಬೇಕೆಂದು ನಿರ್ಣಯ ಮಾಡಿದರು. ಈ ನಿರ್ಣಯದಂತೆ ಗ್ರಂಥಾಲಯದ ನವೀನ ಕಾರ್ಯಕ್ಕೆ ಅಂದಿನ ವಿಶ್ವಸ್ಥ ಮಂಡಳಿಯ ಸದಸ್ಯರಲೊಬ್ಬರಾದ ಶ್ರೀ ಮ.ನಿ.ಪ್ರ. ಸಿದ್ಧರಾಮಮಹಾಸ್ವಾಮಿಗಳು ಈ ಕಾರ್ಯವನ್ನು ವಹಿಸಿಕೊಂಡರು. ಈ ಒಂದು ಕಾರ್ಯಕ್ಕಾಗಿ ಸಮಗ್ರ ಯೋಜನೆಯೊಂದನ್ನು ಸಿದ್ಧಪಡಿಸಿ ದಿನಾಂಕ ೨೪.೪.೧೯೯೭ ರಲ್ಲಿ ಒಂದು ಆದೇಶ ಹೊರಡಿಸಲಾಯಿತು. ಆಧುನಿಕ ಮಾದರಿ ಗ್ರಂಥಾಲಯಕ್ಕಾಗಿ ಬೇಕಾಗುವ ಸುಭದ್ರ ಕಟ್ಟಡ ಉತ್ತಮ ಪೀಠೋಪಕರಣ, ತರಬೇತಿ ಹೊಂದಿದ ಸಿಬ್ಬಂದಿವರ್ಗ, ಇದಕ್ಕೆ ಅಗತ್ಯವಾದ ಧನ ಸಹಾಯವನ್ನು ಇದಕ್ಕೆ ಒದಗಿಸಬೇಕಾಯಿತು. ಅದರನ್ವಯ 'ಡಿಸೆಂಬರ್ ೧೯೯೭ ರಲ್ಲಿ ೩೪೯೦ ಗ್ರಂಥಗಳನ್ನು ಬೈಂಡು ಮಾಡಿಸಿ ವರ್ಗೀಕರಿಸಿ, ಗ್ರಂಥಸೂಚಿ ಸಿದ್ಧಪಡಿಸಲು ಶಿವಯೋಗ ಮಂದಿರದಿಂದ ಬೆಳಗಾವಿ ನಾಗನೂರು ಮಠಕ್ಕೆ ಕಳಿಸಲಾಯಿತು. ಒಂದು ವರ್ಷದೊಳಗೆ ೧೫೪೧ ಕನ್ನಡ ಗ್ರಂಥಗಳಿಗೂ '೫೧೦ ಸಂಸ್ಕೃತ ಪುಸ್ತಕಗಳಿಗೂ' '೭೫ ಹಿಂದಿ' '೪೨ ಇಂಗ್ಲೀಷ್' '೧೩೭ ಮರಾಠಿ' ಗ್ರಂಥಗಳಿಗೆ ರಟ್ಟು ಕಟ್ಟಿಸಿ. ವರ್ಗೀಕರಿಸಿ ವಿಷಯ ಸೂಚಿ ಮಾಡಿಸಿ ಕಾರ್ಡ ರೂಪದಲ್ಲಿ ಸಿದ್ಧಪಡಿಸಲಾಯಿತು. ಇಲ್ಲಿ ದಶಾಂಶ ವರ್ಗೀಕರಣ ಪದ್ಧತಿಯ ಮೂಲ ತತ್ವವನ್ನು ಅಳವಡಿಸಿ, ವೀರಶೈವ ಧರ್ಮದ ೧೩೨ ಪ್ರತ್ಯೇಕ ಧರ್ಮದ ವ್ಹಾಙ್ಮಯದ ವಿಷಯ ಶೀರ್ಷಿಕೆಗಳಲ್ಲಿ ವಿಂಗಡಿಸಲಾಗಿದೆ.

ಇಲ್ಲಿ ಪ್ರತಿಯೊಂದು ವಿಷಯದ ಮೇಲೆ ಬರೆಯಲ್ಪಟ್ಟ ಎಲ್ಲಾ ಗ್ರಂಥಗಳು ಒಂದೆಡೆ ಸಿಗುವಂತೆ ಸೂಚಿಯಲ್ಲಿ ಅಳವಡಿಸಲಾಗಿದೆ. ಆಯಾ ವಿಷಯದ ಮೇಲಿನ ಎಷ್ಟು ಗ್ರಂಥಗಳಿವೆ ಎಂಬುದರ ಅರಿವು ಈ ಗ್ರಂಥಸೂಚಿ ನೋಡಿದೊಡನೆ ಓದುಗರಿಗೆ ತಿಳಿಯುವಂತಿದೆ. ಉದಾಹರಣೆಗೆ ಬಸವಣ್ಣನವರನ್ನು ಕುರಿತು ಉಲ್ಲೇಖದ ಕ್ರಮಾಂಕ ೯೬೬ ರಿಂದ ಉಲ್ಲೇಖ ಕ್ರಮಾಂಕ ೯೯೪ರ ವರೆಗೆ ಒಟ್ಟು ೨೮ ಗ್ರಂಥಗಳು ಈ ಸೂಚಿಯಲ್ಲಿ ಬಂದಿರುವುದು ತಿಳಿದುಬರುತ್ತದೆ.

ಈ ವಿಷಯ ಸೂಚಿಗೆ ಕೊನೆಯಲ್ಲಿ ಲೇಖಕರ ಮತ್ತು ಶಿರೋನಾಮಗಳ 'ಅ' ಕಾರದ ಸೂಚಿಗೆ ಜೋಡಿಸಲಾಗಿದೆ. ಲೇಖಕರ 'ಅ' ಕಾರದಿಯಾಗಿ ಸೂಚಿಯ ಸಹಾಯದಿಂದ ಒಬ್ಬ ಲೇಖಕ ಬರೆದ ಗ್ರಂಥಗಳ ಒಟ್ಟು ಪುಸ್ತಕ ತಿಳಿಯಬಹುದು. ಯಾವುದಾದರೊಂದು ಗ್ರಂಥದ ಹೆಸರು ಗೊತ್ತಿದ್ದರೆ ಅದರ ಅನುಕ್ರಮ ಸಂಖ್ಯೆ ತಕ್ಷಣ ದೊರೆಯುತ್ತದೆ. ಕಾರ್ಡ ರೂಪದಲ್ಲೂ ಗ್ರಂಥಸೂಚಿ ಸಿದ್ಧಪಡಿಸಲಾಗಿದ್ದು ಹೊಸ ಗ್ರಂಥಗಳಿಗೆ ಉಲ್ಲೇಖ ಸಿದ್ಧಗೊಳಿಸಿ ಯೋಗ್ಯ ಸ್ಥಳದಲ್ಲಿ ಇಡಲು ಇದು ಅನುಕೂಲತೆ ಒದಗಿಸಿದೆ.

ಹೀಗೆ ಇಲ್ಲಿ ಸಿದ್ಧಪಡಿಸಿದ ಮೂರುನೂರು ಪುಟಗಳನ್ನು ಮೀರಿದ ಈ ಗ್ರಂಥಸೂಚಿಯ ವಿಷಯದ ಪರಿವಿಡಿಯನ್ನು ದಾಖಲೆಗೆ ಅರ್ಹವಾದ ಅಂಶವೆಂದೆ ಪರಿಗಣಿಸಲಾಗಿದೆ. ಕಾರಣ ಈ ಗ್ರಂಥಾಲಯ ಇಂದು ಯಾವುದೇ ರೀತಿಯಿಂದಲೂ ಸದುಪಯೋಗವಾಗದೆ ಜೇಡರ ಬಲೆಯಲ್ಲಿ ಮುಚ್ಚಿಹೋಗಿದೆ. ಹಾಗೂ ಸೂಕ್ತ ಸಿಬ್ಬಂದಿಗಳಿಲ್ಲದೆ ವರುಷಗಳನ್ನೆ ಕಳೆದಿದೆ. ಹಾಗಾಗಿ ಮುಂದಿನ ದಿನದಲ್ಲಿ ಗ್ರಂಥಾಲಯದ ಈ ಪರಿವಿಡಿಯೂ ಕಾಣೆಯಾಗಬಹುದು ಎಂಬ ಅನುಮಾನದಿಂದ ಅಲ್ಲಿನ ಮಾಹಿತಿಯನ್ನು ಯಥಾವತ್ತಾಗಿ ಇಲ್ಲಿ ದಾಖಲು ಮಾಡಲಾಗಿದೆ.*

೧. ಶಾಸನಗಳು
೨. ಮುದ್ರಿತ ಗ್ರಂಥಸೂಚಿ
೩. ಶಬ್ದಕೋಶ-ನಿಘಂಟು
೪. ವಿಶಿಷ್ಟ ಲೇಖಕರ ಗ್ರಂಥಸಮಿತಿ
೫. ವಿಷಯ ಶಬ್ದಕೋಶ
೬. ವಿಶ್ವಕೋಶ
೭. ಅವತರಣಿಕೆ ಕೋಶ
೮. ಗ್ರಂಥ ವಿಮರ್ಶೆ
೯. ಪಠ್ಯ ಪುಸ್ತಕ
೧೦. ತತ್ವಜ್ಞಾನ
೧೧. ಮನೋವಿಜ್ಞಾನ
೧೨. ನೀತಿ ಶಾಸ್ತ್ರ
೧೩. ವೀರಶೈವ (ಲಿಂಗಾಯತ)
೧೪. ಅಷ್ಟಾವರಣಗಳು
೧೫. ಗುರು
೧೬. ಲಿಂಗ-ದೇವರು
೧೭. ಜಂಗಮ
೧೮. ಪಾದೋದಕ
೧೯. ಪ್ರಸಾದ
೨೦. ಮಂತ್ರ
೨೧. ಪಂಚಾಚಾರಗಳು
೨೨. ಶೀಲಗಳು
೨೩. ಷಟಸ್ಥಲಗಳು
೨೪. ಭಕ್ತ
೨೫. ಮಾಹೇಶ್ವರ
೨೬. ಪ್ರಸಾದಿ
೨೭. ಶರಣ
೨೮. ಐಕ್ಯ (ಲಿಂಗಾಂಗ ಸಾಮರಸ್ಯ ಶಿವಯೋಗ)
೨೯. ಯೋಗ-ಮುಕ್ತಿ
೩೦. ಮಠಗಳು
೩೧. ವಿರಕ್ತ ಮಠಗಳು(ನಿರಾಭಾರಿಮಠಗಳು)
೩೨. ಗುರುವರ್ಗಮಠಗಳು
೩೩. ಧರ್ಮ ಸಂಸ್ಕಾರಗಳು
೩೪. ಜನ್ಮ-ಜಯಂತಿಗಳು
೩೫. ದೀಕ್ಷೆಗಳು
೩೬. ವೀರಶೈವ ವಿವಾಹ
೩೭. ಯಜ್ಞಗಳು
೩೮. ಸಮಾಧಿ ಸಂಸ್ಕಾರ
೩೯. ಧರ್ಮ ಕ್ಷೇತ್ರಗಳು
೪೦. ಕೀರ್ತನೆಗಳು
೪೧. ಕೀರ್ತನೆ
೪೨. ಶಿವಾನುಭವ ಗೋಷ್ಠಿ, ಚರ್ಚಾಗೋಷ್ಠಿ
೪೩. ಸಂಘಸಂಸ್ಥೆಗಳು
೪೪. ಧರ್ಮಗಳು. ವರದಿ. ರಿಪೋರ್ಟ್. ನಿಯಾವಳಿ

೪೫. ರಾಮಾಯಣ-ಮಹಾಭಾರತ

೪೬. ಹಿಂದೂ ಧರ್ಮ

೪೭. ಶಿಕ್ಷಣ (ಅನ್ಯ)

೪೮. ಸಮಾಜಶಾಸ್ತ್ರ ಮೂಢನಂಬಿಕೆ, ಕಂದಾಚಾರ

೪೯. ಸಂಸ್ಕೃತ

೫೦. ಸಂಸ್ಕೃತಿ

೫೧. ಪ್ರವಾಸ ಸಾಹಿತ್ಯ

೫೨. ಭೂಗೋಳ

೫೩. ಜಾತಿಗಳು

೫೪. ಜ್ಯೋತಿಷ್ಯ

೫೫. ಶಕುನ ಜ್ಯೋತಿಷ್ಯ

೫೬. ಭಾಷೆ

೫೭. ಭಾಷಾಶಾಸ್ತ್ರ

೫೮. ವ್ಯಾಕರಣ

೫೯. ಛಂದಸ್ಸು

೬೦. ಅಲಂಕಾರ

೬೧. ವಿಜ್ಞಾನ

೬೨. ಜೀವಶಾಸ್ತ್ರ

೬೩. ವೈದ್ಯಕೀಯ ವಿಜ್ಞಾನ

೬೪. ತಾಂತ್ರಿಕ ವಿಜ್ಞಾನ

೬೫. ಕೃಷಿ

೬೬. ಗೃಹವಿಜ್ಞಾನ

೬೭. ವಾಸ್ತುಶಿಲ್ಪ

೬೮. ಸಂಗೀತ

೬೯. ಸಾಹಿತ್ಯ

೭೦. ವಚನಗಳು (೧೨೦೦-೧೯೦೦)

೭೧. ಆಧುನಿಕ ವಚನಗಳು

೭೨. ವಚನಗಳಲ್ಲಿ ಸಂಸ್ಕೃತ ಶ್ಲೋಕ
೧೯೦೧-೧೯೯೮

೭೩. ಬೆಡಗಿನ ವಚನಗಳು

೭೪. ವಚನ ವಿಮರ್ಶೆ

೭೫. ಕಾಲಜ್ಞಾನ ವಚನ

೭೬. ಶೂನ್ಯಸಂಪಾದನೆ

೭೭. ವ್ಯಾಖ್ಯಾನ ಶೂನ್ಯಸಂಪಾದನೆ

೭೮. ವ್ಯಾಖ್ಯಾನಗಳು

೭೯. ಏಕೋತ್ತರಸ್ಥಲ

೮೦. ಸಿದ್ಧಾಂತ ಶಿಖಾಮಣಿ

೮೧. ಕನ್ನಡ ವ್ಯಾಖ್ಯಾನ ಟೀಕೆ

೮೨. ಕಾವ್ಯ

೮೩. ಪುರಾಣ

೮೪. ಚಂಪೂ

೮೫. ರಗಳೆ

೮೬. ಸಾಂಗತ್ಯ

೮೭. ತ್ರಿಪದಿ

೮೮. ಚೌಪದಿ ಕಂದ

೮೯. ಅಷ್ಟಕ

೯೦. ಕವನ

೯೧. ಕಾದಂಬರಿ

೯೨. ಕಥೆ

೯೩. ನಾಟಕಗಳು

೯೪. ಸ್ವರ ವಚನಗಳು

೯೫. ನಿಜಗುಣ ಶಿವಯೋಗಿ

೯೬. ಸರ್ಪಭೂಷಣ ಶಿವಯೋಗಿ

೯೭. ಬಾಲಲೀಲಾಮಹಾಂತ

೯೮. ಮುಪ್ಪಿನ ಷಡಕ್ಷರ ಶಿವಯೋಗಿ

೯೯. ನಾಗಭೂಷಣ ಶಿವಯೋಗಿ

೧೦೦. ಮೈಲಾರಿ ಬಸವಲಿಂಗ ಶರಣರ

ಹೀಗೆ ವಿಷಯಗಳ ಅಂಗದಲ್ಲಿ ಪುಸ್ತಕಗಳನ್ನು ವರ್ಗೀಕರಿಸಿ ಅವು ಹೊಂದಿರಬಹುದಾದ ಪ್ರತಿಗಳಿಗೆ ಉಲ್ಲೇಖ, ಕ್ರಮಾಂಕ ನೀಡಿ ಕಾರ್ಡ ರೂಪದಲ್ಲಿ ಇಡಲಾಗಿದೆ. ಅದನ್ನು ಇನ್ನೂ ಸರಳವೆಂಬಂತೆ ವರ್ಗೀಕೃತ ಗ್ರಂಥಸೂಚಿ ರೂಪಿಸಿ ಬೋಧಾರಿಕಗಳನ್ನು ನೀಡಿ ಮಾಹಿತಿಗಾಗಿ ಡಾ.ಎಸ್.ಆರ್. ಗುಂಜಾಳರ ನಿರ್ದೇಶನದಲ್ಲಿ ಪುಸ್ತಕ ರೂಪದಲ್ಲಿ ನೀಡಲಾಗಿದೆ. ಮುಂದಿನ ಹಂತದಲ್ಲಿ ಲೇಖಕರ ಹೆಸರಿನ ಅಕಾರದಿ ಅಂಕಿತದಲ್ಲಿ ಗ್ರಂಥಗಳ ಕ್ರಮಾಂಕ ರೂಪ ಮಾಡಲಾಗಿದೆ. ಇದರ ಒಂದು ಸಮಗ್ರ ಸೂಚಿ ನೀಡದರೆ ಅದೊಂದು ಮಹಾಪ್ರಬಂಧಕ್ಕಾಗುವಷ್ಟು ಪುಟಗಳಾಗುವಂತ ಗ್ರಂಥವಾಗುತ್ತದೆ.

ಇದು ಕೇವಲ ಮೊದಲ ಹಂತದ ಪ್ರಯತ್ನವಾಗಿದು. ನಂತರದಲ್ಲಿ ದಾನವಾಗಿ, ಪ್ರಕಟಿತವಾದ, ಖರೀದಿಸಿದ ಸಾವಿರಾರು ಪುಸ್ತಕದ ವರ್ಗೀಕರಣ ಸೂಚಿ ಸಿದ್ದವಾಗಬೇಕಾಗಿದೆ. ಈ ನಿಟ್ಟಿನಲ್ಲಿ ಅಧ್ಯಕ್ಷರಿಗೆ ಆಸೆಗಳಿದ್ದರೂ ಆಳವಾದ ಅನುಭವಸ್ತ ತರಬೇತಿದಾರರ ಕೊರತೆ ಹಾಗೂ ಪ್ರಮುಖವಾಗಿ ಸ್ವ ಇಚ್ಛಾಶಕ್ತಿಯ ಕೊರತೆಯಿಂದ ಜ್ಞಾನ ಸಂಪತ್ತು ವ್ಯವಸ್ಥೆಯ ಚೌಕಟ್ಟಿಲ್ಲದೆ ಗ್ರಂಥಾಲಯದಲ್ಲಿ ಅನಾಥವಾಗಿ ಅಗತ್ಯರ ಉಪಯೋಗಕ್ಕೆ, ಗಮನಕ್ಕೆ ಸಿಗದೆ ಎಲೆಮರೆಯ ಕಾಯಾಗಿ ಉಳಿದಿದೆ. ಅವುಗಳಿಗೆ ಎಂದು ಬೆಲೆ ಬರುವುದೋ ಎಂಬ ಪ್ರಶ್ನೆ ಮಾತ್ರ ಇಲ್ಲಿ ಉಳಿಯುತ್ತದೆ. ಉಳಿದ ಸಾವಿರಾರು ಗ್ರಂಥಗಳಿಗೆ ಸೂಚಿಯ ಸಿದ್ಧತೆ ಯೋಗ್ಯ ತರಬೇತಿ ಹೊಂದಿದ ಸಿಬ್ಬಂದಿ ವರ್ಗದ ನೇಮಕ, ಸೂಚಿಯ ಎರಡನೆ ಭಾಗದ ಸಿದ್ಧಾತೆಯಾಗಬೇಕಾಗಿದೆ. ಇದಕ್ಕೊಂದು ಪ್ರತ್ಯೇಕ ಸುಭದ್ರ ಕಟ್ಟಡದ ಅಗತ್ಯವಿದೆ. ಹೀಗೆ ಹಲವಾರು ಅಗತ್ಯತೆಯನ್ನು ಈ ಗ್ರಂಥಾಲಯ ಬಯಸುತ್ತಲಿದೆ.

ಶಿವಯೋಗ ಮಂದಿರದ ಈ ಗ್ರಂಥಾಲಯ ಇಡಿ ವೀರಶೈವ ಸಮಾಜಕ್ಕೆ ಕಣ್ಣುಗಳಿದ್ದಂತೆ ಅದರ ಸೂಕ್ಷ್ಮದೃಷ್ಟಿ, ಜ್ಞಾನದ ಕಿರಣ ಪಡೆದವರಿಗೆ ಅದು ಚಿಕಿತ್ಸಾ ಮಂದಿರ ಹಾಗಾಗಿ ಅದರ ವಿಸ್ತಾರ ಕಾರ್ಯ ತ್ವರಿತವಾಗಿ ನಡೆಯಬೇಕಿದೆ.

ಈ ಗ್ರಂಥಾಲವು ನಾಡಿನ ಓದುಗರಿಗೆ, ಸಂಶೋಧಕರಿಗೆ, ವಿದ್ವಾಂಸರಿಗೆ, ಪಂಡಿತರಿಗೆ ಪ್ರೇರಣೆಯಾಗಿದೆ. ಅದರ ನೆನಪುಗಳನ್ನು ಅವುಲೋಕಿಸಿದಾಗ ಅದರ ಮಹತ್ವ ಹಾಗೂ ಇತಿಹಾಸ ತಿಳಿಯುತ್ತದೆ. ೧೯೩೯ರಲ್ಲಿ ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯ ನಿರ್ದೇಶಕರಾಗಿದ್ದ, ಸಂಶೋಧಕರು ಆದ ಡಾ. ಆರ್.ಎಸ್. ಪಂಚಮುಖಿಯರು ಗ್ರಂಥಾಲಯಕ್ಕೆ ಭೇಟಿಯಿತ್ತು ಬರೆದ ಅಭಿಪ್ರಾಯ ಹೀಗಿದೆ. "ಗ್ರಂಥಾಲಯದಲ್ಲಿ ಸಂಗ್ರಹಿಸಲ್ಪಟ್ಟಿರುವ ತಾಳೆಗರಿ ಗ್ರಂಥಗಳ ಪರಿಶೀಲನೆಗೆ ಬಂದಿದ್ದೆ ಸುವ್ಯವಸ್ಥಿತವಾಗಿ ಜೋಡಿಸಿಟ್ಟ ಹಸ್ತಪ್ರತಿಗಳನ್ನು ಕಂಡು ಅತ್ಯಂತ ಸಂತೋಷ ಪಟ್ಟು, ಇಲ್ಲಿನ ಗ್ರಂಥಗಳಿಗೆ ಸೂಕ್ತ ವಿಷಯಾನುಕ್ರಮದಲ್ಲಿ ಪುನರ್ ವ್ಯವಸ್ಥೆಗೊಳಿಸುವ ಅವಶ್ಯಕತೆ ಇದೆ ಎಂದಿದ್ದಾರೆ." ಇದರೊಂದಿಗೆ ೧೯೪೬ರಲ್ಲಿ ಪ್ರೊ.ಕ.ರಾಘವಾಚಾರ್ ಮೈಸೂರು

ಮಹಾರಾಜ ಕಾಲೇಜ್ ಇವರು ಬಿ.ಎ.ಎಂ.ಎ. ವಿದ್ಯಾರ್ಥಿಗಳೊಂದಿಗೆ ಈ ಗ್ರಂಥಾಲಯಕ್ಕೆ ಬಂದು ಹರ್ಷ ವ್ಯಕ್ತಪಡಿಸಿದಾರೆ.

೨. ಶ್ರೀ ರೇವಣಸಿದ್ದೇಶ್ವರ ವಾಚನಾಲಯ

ಶ್ರೀ ವಿಜಯ ಮಹಾಂತೇಶ್ವರ ಗ್ರಂಥಾಲಯದ ಒಂದು ಅಂಗವೇ ಈ ರೇವಣಸಿದ್ದೇಶ್ವರ ವಾಚನಾಲಯ. 'ವನೌಕಸೋಪಿ ಸಂತ ತಾರ್ಕಿಕಜ್ಞಾನವಯಂ' ಎಂಬ ಕಾಳಿದಾಸನ ಉಕ್ತಿಯಂತೆ ವನವಾಸಿಗಳಾದರೂ ಈಗಿನ ಪರಿಸ್ಥಿತಿಯಲ್ಲಿ ತಾರ್ಕಿಕ ಜ್ಞಾನವು ಅವಶ್ಯಕವಾಗಿರಬೇಕೆಂಬ ಉದ್ದೇಶದಿಂದ ವಾಚನಾಲಯ ಸ್ಥಾಪಿಸಲಾಗಿದೆ. ಗ್ರಂಥಗಳು ಕಪಾಟುಗಳಲ್ಲಿದ್ದರೆ ಸಾಲದು, ವಾಚನ ಮಾಡಲೇಬೇಕು ವಾಚನದಿಂದ ಜಾಗತಿಕ ಸುದ್ದಿ ಸಮಾಚಾರ, ಅದರ ಮಹತ್ವ ಅಂದಿನ ದಿನದ ಪ್ರಮುಖಾಂಶಗಳು ಈ ವಾಚನಾಲಯದಲ್ಲಿ ದೊರೆಯುತ್ತದೆ.

ಈ ಹಿನ್ನೆಲೆಯಲ್ಲಿ ಹಾನಗಲ್ಲ ಕುಮಾರಸ್ವಾಮಿಗಳು ಲಿಂಗೈಕ್ಯರಾದ ನಂತರ ಶಾಲಿವಾಹನ ಶಕೆ ೧೮೫೫ ಅಂದರೆ ಕ್ರಿ.ಶ. ೧೯೩೪ರಲ್ಲಿ ಆಗಿನ ವ್ಯವಸ್ಥಾಪಕರಾದ ಶ್ರೀ ಬಸವಲಿಂಗ ನವಲಗುಂದ ಗವಿಮಠದ ದೇಶಿಕರು ಸಂಸ್ಥೆಯ ಪ್ರಥಮ ಸಪ್ತ ದೇವರುಗಳಲ್ಲಿ ಇವರು ಒಬ್ಬರಾಗಿದ್ದರು. ಗುರು ವಿರಕ್ತರಲ್ಲಿ ಸಮತಾವಾದಿಗಳಾಗಿದ್ದ ಸಂಸ್ಥೆಯ ಪರಮ ಹಿತೈಸಿಗಳಾದ ಕಲೆಕ್ಟರ್ ಲಿಂ.ರೇವಣ ಸಿದ್ದಯ್ಯ ನಿವೃತ್ತ ಡಿ.ಡಿ.ಪಿ.ಐ ಇವರ ಸ್ಮರಣಾರ್ಥವಾಗಿ ರೇವಣಸಿದ್ದೇಶ್ವರ ವಾಚನಾಲಯ ಸ್ಥಾಪಿಸಿದರು. ಇದರ ಪ್ರಾರಂಭೋತ್ಸವಕ್ಕೆ ಬೆಳಗಾವಿಯ ಲಿಂಗರಾಜ ಕಾಲೇಜಿನ ಪ್ರಥಮ ಪ್ರಾಚಾರ್ಯರಾದ ಡಾ.ಶಿ.ಚೆ. ನಂದಿಮಠ ಆಗಮಿಸಿದ್ದರು.

ಇದರ ಮುಖ್ಯ ಉದ್ದೇಶ ವಟು ಸಾಧಕರಿಗೆ ಪ್ರಚಲಿತ ವಿಷಯಗಳ ಪರಿಚಯ ಮಾಡಿಕೊಡುವುದಾಗಿತ್ತು. ಹಾಗಾಗಿ ಕರ್ನಾಟಕದ ಎಲ್ಲ ಮಠಗಳಿಂದ ಸಿದ್ಧಪಡಿಸಲಾಗುವ ಪತ್ರಿಕೆಗಳನ್ನು ಇಲ್ಲಿಗೆ ತರಿಸಲಾಗುತ್ತದೆ. ಜೊತೆಗೆ ಕನ್ನಡ, ಮರಾಠಿ, ಹಿಂದಿ ಇತರೆ ಭಾಷೆಯ ದೈನಂದಿನ, ಮಾಸಿಕ, ಪಾಕ್ಷಿಕ, ಸಾಪ್ತಾಹಿಕ ಪತ್ರಿಕೆಗಳನ್ನು ಈ ವಾಚನಾಯಲಯಕ್ಕೆ ತರಿಸಲಾಗುತ್ತಿದ್ದು ವಾರ್ಷಿಕ ಚಂದಾದಾರರಾಗಿ ಲಕ್ಷಾಂತರ ರೂಗಳು ವಿನಿಯೋಗವಾಗುತ್ತಿತ್ತು. ಆದರೆ ಅದು ಇಂದು ಸಾವಿರಕ್ಕೆ ಇಳಿದಿದೆ ಎಂಬ ಮಾತುಗಳು ಕೇಳಿ ಬರುತ್ತಿವೆ. ಹೀಗೆ ಸಾಹಿತ್ಯ ದೇವಿಯ ನೆಚ್ಚಿನ ಈ ತಾಣದಲ್ಲಿರುವ ಪತ್ರಿಕೆ, ಸಾಪ್ತಾಹಿಕ, ಪಾಕ್ಷಿಕ, ಮಾಸಿಕ ಪತ್ರಿಕೆಗಳ ದೊಡ್ಡ ಜ್ಞಾನ ಭಂಡಾರವೆ ಇಲ್ಲಿ ಕಾಣಸಿಗುತ್ತದೆ.

ಈ ವಾಚನಾಲಯದಲ್ಲಿ ನೂರಾರು ಜ್ಞಾನದ ಬೀಜಗಳು ಮೊಳಕೆಯೊಡೆದು ಹೆಮ್ಮರವಾಗಿ ಬೆಳೆದಿವೆ. ಆದರೆ ಆರಂಭದಲ್ಲಿ ಇದ್ದ ಸ್ಥಿತಿಯು ಈಗಲೂ ಮುಂದುವರಿದಿದೆ. ಇಲ್ಲಿ ನೂರಾರು ಗ್ರಂಥಗಳಿವೆ. ಆದರೆ ಅಭ್ಯಾಸಕ್ಕೆ ಯೋಗ್ಯ ಸ್ಥಳವಕಾಶವಾಗಲಿ, ಪೀಠೋಪಕರಣಗಳಾಗಲಿ ಇಲ್ಲಿಗೆ

ಆಗಮಿಸುವ ಸಂಶೋಧಕರಿಗೆ, ಓದುಗರಿಗೆ ಅನುಭವಿ ಸಿಬ್ಬಂದಿಗಳೆ ಇಲ್ಲದಂತಾಗಿದೆ. ಜೊತೆಗೆ ಇದಕ್ಕೆಂದೆ ಯಾವ ಸುಭದ್ರ ಕಟ್ಟಡವೂ ಇಲ್ಲ ಎಂಬುದು ನೋವಿನ ಸಂಗತಿಯಾಗಿದೆ. ಈ ಬಗ್ಗೆ ಆಡಳಿತವರ್ಗ ಮೊದಲು ಗಮನಿಸುವ ಅವಶ್ಯಕತೆ ಇದೆ ಎಂಬುದು ನಮ್ಮ ಅಭಿಪ್ರಾಯವಾಗಿದೆ.

ಹೀಗೆ ಮಂದಿರದ ಎರಡು ಕಣ್ಣುಗಳಂತಿರುವ ಈ ಗ್ರಂಥಾಲಯ, ವಾಚನಾಲಯಗಳು ಸಾಧಕರಿಗೆ, ಸಂಶೋಧಕರಿಗೆ, ಪಂಡಿತರಿಗೆ, ಆಸಕ್ತ ಓದುಗರಿಗೆ ಉಚಿತ ಸೇವೆಯನ್ನು ಒದಗಿಸುತ್ತಾ ಬಂದಿದ್ದು, ಇದು ಇತಿಹಾಸದ ಅಂದಿನ-ಇಂದಿನ ವ್ಯವಸ್ಥೆಗೆ ಸಾಕ್ಷಿಯಾಗಿದೆ. ಹಾಗಾಗಿ ಅದನ್ನು ಒಂದು ಅಧ್ಯಾಯವಾಗಿರಿಸಲಾಗಿದೆ. ಅದು ಮುಂದಿನವರಿಗೆ ಮಾರ್ಗದರ್ಶನವಾಗಬೇಕಲ್ಲವೆ?

ಶಿವಯೋಗ ಮಂದಿರದಲ್ಲಿ ಸಾಧಕರ ಜ್ಞಾನ ವಿಸ್ತಾರಕ್ಕಾಗಿ ಸ್ಥಾಪಿಸಿದ ಗ್ರಂಥಾಲಯ, ವಾಚನಾಲಯದ ಗ್ರಂಥಗಳ ವಿವರ ಒಂದು ಬೃಹತ್ತಾದ ಕಡತದಲ್ಲಿ ದಾಖಲಾಗಿದೆ. ಈ ಪುಸ್ತಕಗಳ ಪಟ್ಟಿಯನ್ನು ಇಲ್ಲಿ ನಮೂದಿಸಲು ಸಾಧ್ಯವಾಗುತ್ತಿಲ್ಲ. ಕಾರಣ ಆ ಪುಸ್ತಕ ನೂರಾರು ಪುಟಗಳನ್ನು ಒಳಗೊಂಡಿದೆ. ಅಧ್ಯಾಯದ ಸೀಮಿತ ಚೌಕಟ್ಟಿನ ನಿರ್ಬಂಧದಿಂದ ಅದರ ಪ್ರಸ್ತಾಪವನ್ನು ಕೆಲವೇ ಶಿರೋನಾಮೆಯ ಹಿನ್ನೆಲೆಯನ್ನು ಇಲ್ಲಿ ದಾಖಲೆಗಾಗಿ ತಂದಿರುತ್ತೇನೆ. ಅವು ಹೀಗಿವೆ.[೬]

ಧರ್ಮ ಗ್ರಂಥಗಳು, ಪುರಾಣಗಳು, ವೀರಶೈವ ಸಾಹಿತ್ಯ, ಕಾವ್ಯ, ಪದ್ಯ, ವಚನ, ಪೌರಾಣಿಕ ಹಾಗೂ ವೇದಾಂತ ಗ್ರಂಥಗಳು, ಪ್ರಬಂಧ, ಕಥೆ, ಕಾದಂಬರಿ, ಚರಿತ್ರೆಗಳು, ಜ್ಯೋತಿಷ್ಯ, ಪುರಾಣೇತಿಹಾಸ, ವೀರಶೈವ ಧರ್ಮ ಗ್ರಂಥಗಳು, ಕಾವ್ಯಗಳು, ಅಲಂಕಾರ, ಅರ್ಥಶಾಸ್ತ್ರ ಮೊದಲಾದ ಎರಡು ಸಾವಿರಕ್ಕೂ ಮಿಗಿಲಾದ ಗ್ರಂಥಗಳನ್ನು ಇಲ್ಲಿ ಸಂಗ್ರಹಿಸಿ ವಟು ಸಾಧಕರಿಗಾಗಿ ಇಡಲಾಗಿದೆ. ಶಿವಯೋಗ ಮಂದಿರದ ಸಂಗ್ರಾಹಕ ಕಾರ್ಯ ಹಾಗೂ ಸಂಘಟನೆಯ ಅರಿವನ್ನು ಮೂಡಿ, ಜೊತೆಗೆ ಅಪರೂಪದ ಕೃತಿಗಳಿರುವ ಬಗ್ಗೆ ಆಸಕ್ತರಿಗೆ ಮಾರ್ಗದರ್ಶನವಾಗಲಿ ಎಂಬುದೆ ಇಲ್ಲಿನ ಆಶಯವಾಗಿದೆ.

೩. ಹಸ್ತಪ್ರತಿ ಭಂಡಾರ

ಧಾರ್ಮಿಕ ಕ್ರಾಂತಿಯಾಗಬೇಕಾದರೆ ತಪಸ್ಸು ಎಷ್ಟು ಅತ್ಯವಶ್ಯಕವೋ ಶೈಕ್ಷಣಿಕ ಕ್ರಾಂತಿಯಾಗಬೇಕಾದರೆ ಗ್ರಂಥಾಲಯವೂ ಅಷ್ಟೇ ಅವಶ್ಯವಾಗಿದೆ. ಹಾನಗಲ್ಲ ಪೂಜ್ಯರು ಒಂದು ಕಡೆ ಧಾರ್ಮಿಕ ಕ್ರಾಂತಿ, ಇನ್ನೊಂದು ಕಡೆ ಶೈಕ್ಷಣಿಕ ಕ್ರಾಂತಿ ಇವುಗಳೆರಡೂ ಇರದಿದ್ದರೆ ಸಮಾಜದ ಹಾಗೂ ಭಕ್ತರ ಉದ್ಧಾರ ಸಾಧ್ಯವಿಲ್ಲವೆಂಬ ಸತ್ಯದ ತಿರುಳನ್ನರಿತವರಾಗಿದ್ದರು. ತಮ್ಮಲ್ಲಿ ಅಡಗಿರತಕ್ಕಂತಹ ಸಾಮಾಜಿಕ ಹಾಗೂ ಧಾರ್ಮಿಕ ಕ್ರಾಂತಿಯ ಶಕ್ತಿಯನ್ನು ಕ್ರಿ.ಶ. ೧೯೦೯ರಲ್ಲಿ ಶಿವಯೋಗ ಮಂದಿರ ಸಂಸ್ಥೆಯ ರೂಪದಲ್ಲಿ ಹೊರ ಚೆಲ್ಲಿದರು. ತಾವು ಹೋದ

ಕಡೆಯೇಲ್ಲ ಭಕ್ತರು ನೀಡಿದ ಧನಸಹಾಯವನ್ನು ಹೆಚ್ಚು ಬಯಸದೆ ತಮ್ಮ ಮನೆಯಲ್ಲಿ, ಮಠದಲ್ಲಿ ಗತಕಾಲದಿಂದ ಮೂಟೆಕಟ್ಟಿ, ಪೆಟ್ಟಿಗೆಯೊಳಗೆ ಹುಳ ಹತ್ತಿದ ಪುಸ್ತಕ, ಕಾಗದ ಪ್ರತಿ, ತಾಡೋಲೆ, ಹಸ್ತಲಿಪಿಗಳನ್ನು ಕೇಳಿ ಪಡೆದು ಬರುತ್ತಿದ್ದರು. ಈ ನಿಟ್ಟಿನಲ್ಲಿ ಸಮಾಜದ ಸದ್ಭಕ್ತರನ್ನು ಪ್ರೇರಪಿಸುತ್ತಿದ್ದರು. ನಿಜವಾದ ಗ್ರಂಥಗಳು ನಮ್ಮ ಬಾಳಿಗೆ ಬೆಳಕು. ಗ್ರಂಥಗಳ ಸಾಮರ್ಥ್ಯ, ಘನತೆ ಅಷ್ಟಿಷ್ಟಲ್ಲ ಎಂಬ ಸತ್ಯದರ್ಶನಕ್ಕಾಗಿ ನಾಡಿನ ಉದ್ದಗಲಕ್ಕೂ ಸಂಚರಿಸಿ, ಕಾರ್ಯಕ್ರಮ ಪ್ರಾರಂಭಿಸಿ ಅದಕ್ಕಾಗಿ ಪಟ್ಟ ಪರಿಶ್ರಮ ಹೇಳತೀರದು. ಇಂದು ಶಿವಯೋಗ ಮಂದಿರದಲ್ಲಿ ಸಂಗ್ರಹವಾಗಿರುವ ಹಸ್ತಪ್ರತಿ ಭಂಡಾರವನ್ನು ವೀಕ್ಷಿಸಿದಾಗ ಎಂತವರಿಗಾದರೂ ತಿಳಿಯುತ್ತದೆ.

ಮಾನವನು ನಾಗರಿಕತೆಯ ಮೆಟ್ಟಲನ್ನೇರುತ್ತ ನಡೆದಂತೆ, ತನ್ನ ಕಣ್ಣು–ಮನಸ್ಸು–ಭಾವನೆಗಳಿಗೆ ಸಂಸ್ಕೃತಿಯ ಸಂಸ್ಕಾರವನ್ನು ಕೊಟ್ಟು ಜೀವನವನ್ನು ಸುಂದರ ಮತ್ತು ಆನಂದಗೊಳಿಸುವುದಕ್ಕೆ ಪ್ರಯತ್ನಿಸಿದ್ದುಂಟು. 'ಜ್ಞಾನದಾನ–ಜ್ಞಾನ ರಕ್ಷಣೆಯಂತಹ ಪರಮ ಪ್ರಯೋಜನ ಹೊಂದಿರುವ ಹಸ್ತಪ್ರತಿಗಳನ್ನು ರೂಪಿಸಿ, ಉಳಿಸಿಕೊಂಡು ಬಂದ ಬಗ್ಗೆ ಸಣ್ಣದೊಂದು ಅವಲೋಕನ ಇಲ್ಲಿದೆ. ಹಸ್ತಪ್ರತಿ ಸಂಗ್ರಹದಲ್ಲಿ ಶಿವಯೋಗ ಮಂದಿರದ ಕೊಡುಗೆ' ಈ ಅಂಶದ ಮೇಲೆ ಬೆಳಕು ಚೆಲ್ಲುವುದೇ ಈ ಅಧ್ಯಾಯದ ಆಶಯವಾಗಿದೆ.

ಹಸ್ತಪ್ರತಿ ಎಂದರೇನು? ಹಸ್ತಪ್ರತಿ ಅಧ್ಯಯನ ಅದರ ಮಹತ್ವ, ಪ್ರಯೋಜನ, ಹಸ್ತಪ್ರತಿಯ ವಿಕಾಸ, ಲೇಖನ ಸಾಮಾಗ್ರಿ, ಲಿಪಿಕಾರ, ಭಾಷೆ, ಲಿಪಿ, ಚಿತ್ರ, ಸ್ಖಾಲಿತ್ಯದ ಕಾರಣ, ಸ್ವರೂಪ, ಆಕರ ಈ ಯಾವುದೇ ವಿಷಯವಾಗಿ ಇಲ್ಲಿ ವಿವೇಚನೆಗೊಳಪಡಿಸುವುದು ಹೆಚ್ಚು ಸೂಕ್ತವೆನಿಸದ ಕಾರಣ ಹಾಗೂ ಈ ಬಗ್ಗೆ ಅನೇಕ ಸಾಹಿತ್ಯ ಗ್ರಂಥ ರೂಪದಲ್ಲಿರುವ ಕಾರಣವಾಗಿ ಕೈ ಬಿಡಲಾಗಿದೆ.

ಕರ್ನಾಟಕದಲ್ಲಿ ಹಸ್ತಪ್ರತಿಗಳ ಅಗತ್ಯ ಯಾವಾಗ ಉಂಟಾಗಿರಬೇಕು? ಹೇಗೆ ಉಂಟಾಗಿರಬೇಕು? ಎಂಬುದನ್ನು ಕಾಲ ನಿರ್ದೇಶಗೈದು ಖಚಿತ ಉದ್ದೇಶವನ್ನು ಮುಂದಿಟ್ಟು ಹೇಳುವುದು ಈಗ ಕಷ್ಟದ ಮಾತೇ ಎಂಬುದು ಸಂಶೋಧಕರ ಅಭಿಪ್ರಾಯವಾದರೂ ಅದನ್ನು ಕಲ್ಪನೆಯೊಂದರ ಸ್ಥೂಲತೆಯಲ್ಲಿ ಹೇಳುವ ಪ್ರಯತ್ನ ನಡೆದಿದೆ. ಪ್ರಾಚೀನ ಕನ್ನಡ ನಾಡಿನಲ್ಲಿ ಕವಿರಾಜಮಾರ್ಗದವರೆಗಿನ ಕಾಲಾವಧಿಯ ಸಾಹಿತ್ಯವಾಗಲಿ, ಹಸ್ತಪ್ರತಿಗಳಾಗಲಿ ಸಿಕ್ಕಿರದೆ ಚರಿತ್ರೆಯ ಗರ್ಭದೊಳಗೆ ಅವಿತು ಕುಳಿತಿದೆ. ಈ ಅಂಶದಿಂದ ಹಸ್ತಪ್ರತಿಯು ಇದಕ್ಕೂ ಪೂರ್ವದಲ್ಲಿ ಅಗತ್ಯವಾಗಿರದೆ ಹೋಗಿರಬೇಕು. ಇಲ್ಲವೆ ಅದರಲ್ಲಿ ರಚನೆಗೊಳ್ಳವಲ್ಲಿ ಬಾಲಿಶ ಹಂತದಲ್ಲಿರಬೇಕು ಎಂಬುದೊಂದು ಊಹೆ ಮಾಡಬಹುದು. ಕವಿರಾಜಮಾರ್ಗದಿಂದ ಮುಂದೆ ಹಸ್ತಪ್ರತಿ ವ್ಯಾಪಕವಾಗಿ ಪಸರಿಸಿ ಸಾಂಸ್ಕೃತಿಕ, ಶೈಕ್ಷಣಿಕ, ಧಾರ್ಮಿಕವಾದ ಪರಂಪರೆಯೊಂದಕ್ಕೆ ಜೀವ ನೀಡಿದೆ.

ಸ್ವಧರ್ಮ, ನಿಷ್ಠೆ, ತತ್ವ ಶಿಕ್ಷಣ, ಸಾಹಿತ್ಯ ಪ್ರಸಾರಾದಿ ಕಾರ್ಯಗಳಿಗೆ ಹಸ್ತಪ್ರತಿಯ ಅಗತ್ಯವನ್ನು ಕಂಡುಕೊಳ್ಳುತ್ತಾ ಲೌಕಿಕ ಸಾಹಿತ್ಯ, ಶಿಕ್ಷಣ ಪ್ರಸಾರಕ್ಕಾಗಿ ಹಸ್ತಪ್ರತಿಗಳು ಮಹತ್ವತೆ ಹೊಂದಿದೆ.

ಹೀಗೆ "ಹಸ್ತಪ್ರತಿಗಳು ಇಹಪರ ಜೀವನದ ಉತ್ಕರ್ಷಗೆ ಅಗತ್ಯವೆಂದು ಕನ್ನಡಿಗರು ಅವುಗಳ ಪೋಷಣೆ ಮಾಡುತ್ತಾ, ಅಭಿವೃದ್ಧಿಗೊಳಿಸುತ್ತ ಸಾಮಾಜಿಕ, ಧಾರ್ಮಿಕ ಕರ್ತವ್ಯವೆಂದು ಭಾವಿಸಿ ರಾಜಾಧಿ, ಪುರೋಹಿತ, ಶೈವ, ಜೈನ, ಬೌದ್ಧ ಧರ್ಮಾಧಿಯಾಗಿ ಸಕಲರೂ ಇಲ್ಲಿ ಅದನ್ನು ಪೋಷಿಸಿ ಬೆಳೆಸಿದ್ದಾರೆ. ಈ ನಿಟ್ಟಿನಲ್ಲಿ ಜೈನರು ಪ್ರಥಮವಾಗಿ ಹಸ್ತಪ್ರತಿ ಪೋಷಣೆಗೈದರೆ ನಂತರದಲ್ಲಿ ಅದರ ರಚನೆ, ಪ್ರಸರಣ ಕಾರ್ಯದಲ್ಲಿ ಸಂರಕ್ಷಣೆ, ಅಭಿವೃದ್ಧಿಯಲ್ಲಿ ವೀರಶೈವರದು ಎರಡನೆ ಪಾತ್ರವಿದೆ. ಅದರಲ್ಲೂ ಶರಣರದು ಪ್ರಮುಖವಾದ ಪಾತ್ರವಾಗಿದೆ."[೮] ಹೀಗೆ ವೀರಶೈವರು, ವೀರಶೈವ ಮಠಗಳು ಹಾಗೂ ಶಿವಯೋಗಮಂದಿರ ಕೈಗೊಳ್ಳುತ್ತ ಬಂದ ಪೋಷಣೆಯ ಒಂದು ಅವಲೋಕಿತ ಸ್ವರೂಪ ಇಲ್ಲಿದೆ.

* ಸಾಮಾಜಿಕ ಕಾರ್ಯದಲ್ಲಿ ಶರಣರ ಆಂದೋಲನಗಳು, ಸಾಮಾನ್ಯರ ಬದುಕು ರೂಪಿಸಲು ಕೊಟ್ಟ ಕರೆ, ಅವರಿಗಾಗಿ ರೂಪಿಸಿದ ಶಿಕ್ಷಣ ವ್ಯವಸ್ಥೆ ಹಾಗೂ ಮುಕ್ತ ಅಭಿವ್ಯಕ್ತಿಗೆ ಕೊಟ್ಟ ಅವಕಾಶ ಇವು ಹಸ್ತಪ್ರತಿಯ ಸ್ವರೂಪಕ್ಕೆ ಬಂದು, ಪೋಷಣೆಗೆ ಒಳಪಟ್ಟು, ಜ್ಞಾನ ಭಂಡಾರದಲ್ಲಿ ವಿಕಾಸಗೊಂಡವು. ಹೀಗೆ ೧೨ನೇ ಶತಮಾನದ ಶಿವಶರಣರ ಪ್ರಯತ್ನದ ಫಲವಾಗಿ ಹಸ್ತಪ್ರತಿ ಪೋಷಿಸಲ್ಪಡುತ್ತದೆ.

* ಹಸ್ತಪ್ರತಿಗಳು ನಾಡಿನ ಹಳ್ಳಿ ಹಳ್ಳಿಯಲ್ಲಿರುವ ಮಠ–ಮಾನ್ಯದ ಪೀಠಾಧಿಪತಿಗಳಾಗುವ 'ಪೀಠಾರೋಹಣದ ಉಡುಗೊರೆಯ' ವಸ್ತುವಾಗಿ ಮಠದ ಸ್ವಾಮಿಗಳಿಂದ ಅವರ ಶಿಷ್ಯರಿಗೆ ಪರಂಪರಾಗತವಾಗಿ ರೂಪಗೊಂಡು ರಕ್ಷಣೆ ಹಾಗೂ ಸಂಚಲನಗೊಂಡು ದೊಡ್ಡ ಪರಂಪರೆಯಾಗಿ ಪೋಷಿಸಲ್ಪಟ್ಟವು. ಈ ಪರಂಪರೆ ವೀರಶೈವ ಮಠಗಳ ಅಧಿಕಾರವನ್ನು ವಹಿಸುವಾಗ ಇಗಲೂ ರೂಢಿಸಿಕೊಂಡು ಬರುವ ಮೂಲಕ ಮುಂದುವರಿಸಲಾಗುತ್ತಿದೆ.

* ಶಾಸ್ತ್ರಧಾನ ಎಂಬ ಪರಂಪರೆಯಲ್ಲಿ "ಕೆಳದಿ ನೃಪವಿಜಯದಲ್ಲಿ ಶಾಶ್ವತ ಧರ್ಮಕೀರ್ತಿ ಸಂಪಾದನೆಗಾಗಿ ಬಸವ ನರೇಂದ್ರ 'ಶಿವಶಾಸ್ತ್ರ ಲಿಖಿತ ಪುಸ್ತಕ'ದೊಂದಿಗೆ ಅನೇಕ ಪರಿಕರವನ್ನು ದಾನಗೈದನೆಂಬ"[೯] ರೂಢಿಯಿಂದಲೂ ಅವುಗಳನ್ನು ಪೋಷಿಸಿದ ಹಾಗೆ ತಿಳಿದುಬರುತ್ತದೆ.

ಇನ್ನೂ ಹಸ್ತಪ್ರತಿಗಳ ಪೋಷಣೆ ಪರಂಪರೆಯಲ್ಲಿ ಗುರುತಿಸಿಕೊಳ್ಳುವಂತಹದ್ದು, 'ಮಠಗಳು' ಈ ನಿಟ್ಟಿನಲ್ಲಿ ಕೈಗೊಂಡ ಚಟುವಟಿಗೆಯಲ್ಲಿ ಅಗ್ರಸಾಲಿನಲ್ಲಿದ್ದು, ಜೈನ ಬಸವಾದಿಗಳಲ್ಲಿರುವಂತೆ ವೀರಶೈವ ಮಠಗಳಲ್ಲಿ ಕೂಡ ಹಸ್ತಪ್ರತಿಗಳ ಸಂಗ್ರಹ ದೊಡ್ಡ ಮಟ್ಟದಲ್ಲಿ ಆಗಿದೆ. ಚಿತ್ರದುರ್ಗದ ಶ್ರೀ ಮುರುಘರಾಜೇಂದ್ರ ಬ್ರಹನ್ಮಠ, ಹುಬ್ಬಳ್ಳಿ ಜಗದ್ಗುರು ಮೂರುಸಾವಿರಮಠ, ಹೊಸಪೇಟೆ

ಕೊಟ್ಟೂರುಸ್ವಾಮಿಮಠ, ಹೂಲಿಯ ಪಂಚವಟ್ಟಿಗೆಮಠ, ಬ್ಯಾಡಗಿಯ ಮುಪ್ಪಿನಾರ್ಯಮಠ, ಆನಂದಪುರದ ಮುರುಘರಾಜೇಂದ್ರಮಠ, ಗುಳೇದಗುಡ್ಡದ ಶ್ರೀ ಮಹಾಲಿಂಗೇಶ್ವರಮಠ, ಉರುವಕೊಂಡಮಠ, ಗುಳೇದಗುಡ್ಡದ ಶ್ರೀ ಮುರುಘಮಠ, ಮುಳಗುಂದದ ಕರಿಬಸವಯ್ಯಮಠ, ಸೊಲ್ಲಾಪುರ ಕುಂಟೋಜಿಮಠ, ಹುಮ್ನಾಬಾದಿನ ಶ್ರೀ ಮುರುಘಮಠ, ಕಮಲಾಪುರದ ಸಿದ್ಧರಾಮೇಶ್ವರಮಠ, ಗುಲಬರ್ಗಾದ ಗುರುಬಸವಮಠ, ಉದ್ಗೀರದ ಚೌಕಿಮಠ ಹೀಗೆ ಕರ್ನಾಟಕದ್ಯಾಂತ ಇರುವ ಚಿಕ್ಕ-ದೊಡ್ಡ ಮಠಗಳು ತಲತಲಾಂತರದಿಂದ ಹಸ್ತಪ್ರತಿ ಪೋಷಕ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿವೆ.

ಹಸ್ತಪ್ರತಿಗಳು ನಮ್ಮವರ ಬದುಕಿನಲ್ಲಿ ಒಂದು ಗ್ರಂಥದಂತಹ ಪೂಜ್ಯನಿಯತೆಯ ಪ್ರತೀಕವಾಗಿದ್ದರೆ, ಇನ್ನೊಂದೆಡೆ ಶ್ರದ್ಧೆ, ಅಭಿಮಾನದ, ಜ್ಞಾನಸಂಪತ್ತುಗಳಾಗಿ ಮನೆತನದ ಘನತೆ, ಗೌರವ, ಪ್ರತಿಷ್ಠೆಯ ಸಂಪತ್ತು ಆಗಿದೆ. ಹಾಗಾಗಿ ಅಣ್ಣ-ತಮ್ಮಂದಿರು ಬೇರೆಯಾದಾಗ ಪಿತ್ರಾರ್ಜಿತ ಆಸ್ತಿಯೊಂದಿಗೆ ಹಸ್ತಪ್ರತಿಗಳನ್ನು ಹಂಚಿಕೊಂಡದ್ದು ಇತಿಹಾಸದಲ್ಲಿ ಇದೆ ಎನ್ನಲಾಗಿದೆ.

ಹೀಗೆ ಹಸ್ತಪ್ರತಿಗಳು ಸಂರಕ್ಷಣೆಗೊಂಡು ಸಾಗುತ್ತಿರಲು ಯುದ್ಧಗಳು, ಧರ್ಮ ಯುದ್ಧವಾಗಿಯೂ, ಆಚಾರ-ವಿಚಾರವನ್ನು ಕೆಡಸುವ ವ್ಯವಸ್ಥೆಗಳು, ಪರಕೀಯರ ದಾಳಿಗಳು, ಶತ್ರುಗಳು ಹಾಗೂ ಆಂಗ್ಲರ ದಾಳಿ, ಶಿಕ್ಷಣ ಪದ್ಧತಿ, ಗುಲಾಮಗಿರಿ, ಇಚ್ಛಾ ಶಕ್ತಿಯ ಕೊರತೆ, ಅನಕ್ಷರತೆ ಇವೆ ಮೊದಲಾದ ಕಾರಣವಾಗಿ ಇಂತಹ ಪ್ರತಿಷ್ಠೆಯ ಘನತೆಯ ಸಂಪತ್ತು ಗೋಡೆ-ಜಗುಲಿಯಲ್ಲಿ, ದೇವರ ಗದ್ದುಗೆಯಲ್ಲಿ ಅಡಗಿ ಮನೆ-ಮಠಗಳ ಕತ್ತಲೆ ಕೋಣೆಯಲ್ಲಿ, ಅಟ್ಟದಲ್ಲಿ, ನೆಲಮಾಳಿಗೆಯಲ್ಲಿ ಹೂತು ಹುಳಗಳಿಗೆ ಆಹಾರವಾಗುತ್ತಿದ್ದವು. ಇಂತಹ ಕಾಲದ ಧೂಳಿನಲ್ಲಿ ಹುದುಗಿ ಹೋದ-ಹೋಗುತ್ತಲಿದ್ದ ಸಾಹಿತ್ಯವನ್ನು ಸಂಗ್ರಹಿಸುವ ಕಾರ್ಯ ಕೈಗೊಂಡವರು ಹಾನಗಲ್ಲ ಕುಮಾರಸ್ವಾಮಿಗಳು. ಜೊತೆಗೆ ಇಂತಹ ಅಪರೂಪದ ಸಾಹಿತ್ಯ ಸಂಗ್ರಹಕ್ಕೆ ಹಿರಿಯರನ್ನು, ಯುವಕರನ್ನು, ವಿದ್ಯಾವಂತ, ಪ್ರಜ್ಞಾವಂತ, ಆಸಕ್ತ ನಾಗರಿಕರನ್ನು, ಮಠಾಧಿಪತಿಗಳು ಪ್ರೋತ್ಸಾಹಿಸಿ ಪ್ರೇರಣೆ ಒದಗಿಸಿದರು. ಇದರ ಫಲವಾಗಿ ಇಂದು ಶಿವಯೋಗ ಮಂದಿರದ ವಿಜಯಮಹಾಂತೇಶ್ವರ ಗ್ರಂಥಾಲಯ ನೂರಾರು ಸಂಖ್ಯೆಯ ಹಸ್ತಪ್ರತಿಯನ್ನು ಒಳಗೊಂಡಿದೆ. ಕನ್ನಡ, ಹಿಂದಿ, ಮರಾಠಿ, ಇಂಗ್ಲೀಷ್, ಸಂಸ್ಕೃತ ಭಾಷೆಯ ಹಸ್ತಪ್ರತಿಗಳು ಇಲ್ಲಿವೆ. ವಿಸ್ತಾರವಾದ ವಿವೇಚನೆಯಿಂದ ಕೂಡಿದ ತತ್ವ ಹಾಗೂ ಸತ್ವಪೂರ್ಣತೆಯ ವೀರಶೈವ ತತ್ವಾರ್ಥವನ್ನು ಅರಿಯಬೇಕೆಂದವರಿಗೆ ಇದೊಂದು ಕೈಪಿಡಿಯಂತಿದೆ.

ಸಂಶೋಧನೆಯಲ್ಲಿ ಆಕರಗಳು ಬಹುಮುಖ್ಯ ಪಾತ್ರವಹಿಸುತ್ತಿವೆ. ಆಕರಗಳು, ಹಸ್ತಪ್ರತಿ-ಶಾಸನ ಇತ್ಯಾದಿ ಸ್ವರೂಪಗಳಿರಬಹುದು. ಹಸ್ತಪ್ರತಿ ಸಂಪತ್ತು ಎಂದಾಕ್ಷಣ ಕೇವಲ ಹೇರಳವಾಗಿ

ಹಸ್ತಪ್ರತಿಗಳ ಲಭ್ಯತೆ ಎಂದಷ್ಟೇ ಭಾವಿಸಿದರೆ ಸಾಲದು ಸಾಮಾಜಿಕ, ಆರ್ಥಿಕ, ಭಾಷಿಕವಾಗಿಯೂ ನೋಡುವ ಅವಕಾಶವಿದೆ. ನಮ್ಮ ಸಂಸ್ಕೃತಿ, ಜ್ಞಾನಪರಂಪರೆಯ ಸಂಪತ್ತು ಈ ಮಂದಿರದಲ್ಲಿದೆ. ಕ್ಷೇತ್ರಭೇಟಿಯ ಸಂದರ್ಭದಲ್ಲಿ ನಾವು ಸಾವಿರಾರು ಹಸ್ತಪ್ರತಿಯ ಸಂಗ್ರಹವನ್ನು ಕಂಡು ಬೆರಗುಗೊಂಡಿದ್ದೇನೆ. ದಾಖಲೆಗೆ ತೆಗೆದುಕೊಂಡರೆ ಅವುಗಳಲ್ಲಿ ತಾಡೋಲೆಗಳು ೧೦೮೬, ಹಸ್ತಪ್ರತಿಗಳು ೫೨೩ ಕೃತಿಗಳಿದ್ದು ಅದು ಕಿರು ಪ್ರಬಂಧ ಒಂದಕ್ಕೆ ವಸ್ತುವಾಗುವಷ್ಟಿದೆ.

ಶಿವಯೋಗಮಂದಿರ ಸ್ಥಾಪನೆಯ ವರ್ಷದಿಂದಲೇ ತಾಳೆಗರಿ, ಕೋರಿಕಾಗದ, ತಾಡೋಲೆ, ಗ್ರಂಥಗಳನ್ನು ಸಂಗ್ರಹಿಸಲು ಆರಂಭಿಸಲಾಯಿತು. ಒಂದೆರಡು ವರ್ಷದಲ್ಲಿ ಈ ಸಂಗ್ರಹ ಸಾವಿರಕ್ಕೆ ಬಂದು ತಲುಪುತ್ತದೆ. ಆದರೆ ಕಾಲಾಂತರದಲ್ಲಿ ಅವು ಕಾಣೆಯಾಗಿವೆ, ವಿರೂಪಗೊಂಡಿವೆ. ಆ ಕಾಲದ ಹಸ್ತಪ್ರತಿಯ ಸಂಪತ್ತು ಯಾವ ಹಂತದಲ್ಲಿತ್ತು ಎಂದು ವಿವರಿಸುವ ಸಲುವಾಗಿ ಈ ಕೃತಿಗಳ ಪಟ್ಟಿಯನ್ನು ಎರವಲಾಗಿ ಸ್ವೀಕರಿಸಿ ಪಟ್ಟಿ ಮಾಡಲಾಗಿದೆ. ಇವುಗಳಲ್ಲಿ ನೂರಕ್ಕೆ ತೊಂಭತ್ತಾರು ಕೃತಿಗಳು ಅಪ್ರಕಟಿತವೆಂಬುದು ವಿಸ್ಮಯದ ಸಂಗತಿಯಾಗಿದೆ. ಶಿವಯೋಗ ಮಂದಿರದ ಗ್ರಂಥಾಲಯದಲ್ಲಿ ಸಂಗ್ರಹವಾಗಿದ್ದ ತಾಳೋಲೆ ಗ್ರಂಥಗಳು ಸ್ವಇಚ್ಛೆಯಿಂದ ದಾನವಾಗಿ ಬಂದವುಗಳೇ ಹೆಚ್ಚಿವೆ. ಅಂದಿನ ಮೈಸೂರು ರಾಜ್ಯದ ಕಂಚುಗಲ್ಲು, ಬಿದರೆ ದೊಡ್ಡಮಠದ ಶ್ರೀ ಮ.ಘ.ಚ. ಘನಲಿಂಗ ಶಿವಾಚಾರ್ಯರು ತಮ್ಮ ಮಠದಿಂದ ಶಿವಯೋಗ ಮಂದಿರಕ್ಕೆ ಹತ್ತಾರು ತಾಳೋಲೆ ಗ್ರಂಥಗಳನ್ನು ನೀಡಿದ್ದಾರೆ. ಅಂತವುಗಳೆಂದರೆ[೧೦] (ಈ ಸಂದರ್ಭದಲ್ಲಿ ಕುಂಚುಗಲ್ಲಿನ ಶ್ರೀ ಬಿ.ಎಂ. ಮರುಳಾರಾಧ್ಯರು ನೆರವು ನೀಡಿದ್ದನ್ನು ನಾವು ಇಲ್ಲಿ ಸ್ಮರಿಸುವಂತದ್ದಾಗಿದೆ)

ರಾಘವಾಂಕ ಕಾವ್ಯದ ನಂಜೇಶ್ವರ ಕೃತಿ, ಅಖಂಡೇಶ್ವರ ವಚನ, ಪ್ರಭುದೇವರ ಸೃಷ್ಟಿಯ ವಚನ, ಪ್ರಕಾಶ ಶಿಖಾರತ್ನದ ವಚನ, ಆತ್ಮಹಸಿಗೆ ತತ್ವ ವಚನ, ಚನ್ನಬಸವರ ಮಂತ್ರಗೋಪ್ಯ, ಸಿದ್ಧೇಶ್ವರ ವಚನ, ತತ್ವ ಪದಗಳು, ಅಷ್ಟಾತ್ಮ ಬೇಧಗಳು, ಶಂಕರದೇವರ ಕಂದ, ಮೈದುನ ರಾಮಣ್ಣನ ಚಾರಿತ್ರ, ಮಡಿವಾಳಯ್ಯನ ಚರಿತ್ರ ಸಾಂಗತ್ಯ, ಚನ್ನಬಸವಣ್ಣನ ಕಾಲಜ್ಞಾನ, ವೀರಸಂಗಯ್ಯನ ಚೌಪದಿ, ಶಿರಿಯಾಳಸೆಟ್ಟಿ ವಾರ್ಧಕ, ವೀರಭದ್ರ ದ್ವಾದಶನಾಮ, ಮಹಿಮಾಷ್ಟಕ, ವೀರಸಂಗಯ್ಯನ ಚೌಪದಿ, ವರಮೋಹತರಂಗಿಣಿ, ಪಂಚಸ್ತೋತ್ರಗಳು (ಸಟೀಕ), ಅಮರಕೋಶ (ಸಟೀಕ), ಅಮರಕೋಶ, ಸರ್ವಜ್ಞ ತ್ರಿವಿಧಿ, ಸಾಮುದ್ರಿಕ ವಿಧಾನ, ಶಿವಕೊರವಂಜಿ, ಶಿವಪೂಜಾವಿಧಿ, ಗಣಸಹಸ್ರನಾಮ, ಮಹಿಮಾ ಸ್ತೋತ್ರ, ದೀಕ್ಷಾ ವಿಧಾನ

ಹಾವೇರಿ ಹುಕ್ಕೇರಿಮಠದ ಶ್ರೀ. ಮ.ನಿ.ಪ್ರ. ಶಿವಬಸವ ಮಹಾಸ್ವಾಮಿಗಳು ತಮ್ಮ ಮಠದ ಸಂಗ್ರಹದಿಂದ ಸ್ವ ಇಚ್ಛೆಯಿಂದ ದಾನವಾಗಿ ನೀಡಿದ ಹಸ್ತಪ್ರತಿಗಳೆಂದರೆ ಕಥಾಸಾಗರ (ಉತ್ತರದೇಶದ ಬಸವಲಿಂಗದೇವರ ಕೃತ), ಭಕ್ತಿರಸ ಸೋನೆ, ದೀಕ್ಷಾವಿಧಾನ, ಲಿಂಗಸಾವಧಾನದ ವಚನಗಳು

(ಸಂಪಾದನೆಯ ಸಂಣಬರೆಹದ ಗುರುಬಸವರಾಜದೇವರು ಸೇರಿಸಿದ), ಹರಳಯ್ಯನ ಚರಿತ್ರೆ, ಪ್ರಸ್ತುತ ಲೇಖನ, ಪ್ರಭುಲಿಂಗಲೀಲೆ, ಪಂಚತತ್ವ (ಕನ್ನಡಾನುವಾದ), ವೈದ್ಯಗ್ರಂಥ, ಕರಣಹಸಿಗೆ, ಮಿಶ್ರಾರ್ಪಣ, ಪಂಚೀಕರಣ, ಅಕ್ಕನ ಸೃಷ್ಟಿಯ ವಚನ, ಪ್ರಭುವಿನ ಸೃಷ್ಟಿಯ ವಚನ, ಮಂತ್ರಗೋಪ್ಯ (ಚನ್ನಬಸವಣ್ಣ ಕೃತ್ಯ), ಹರಳಯ್ಯ ಚರಿತ್ರೆ (ಪ್ರತಿ-೨), ವೀರಶೈವ ಸಿದ್ಧಾಂತ ದೀಪಿಕೆ, ಬೊಮ್ಮಣ್ಣನ ಕಾವ್ಯ(ಕಾಶೀ ಪ್ರತಿ), ಬಸವರಾಜ ವಿಜಯ, ಶಂಕರದೇವ ಕಂದ, ಮಂತ್ರಮಹತ್ವದ ಕಂದ (ಕೇಶಿರಾಜ), ಮರುಳದೇವರ ಕಂದ, ಅಕ್ಷರಮಾಲಿಕಾ ಗದ್ಯ, ನಮಸ್ಕಾರ ಗದ್ಯ, ಪಂಚಪ್ರಕಾರದ ಗದ್ಯ, ಅಚ್ಟೋತ್ತರ ಶತನಾಮಗದ್ಯ, ಷಟ್‌ಸ್ಥಲ ಗದ್ಯ, ಉದಾಹರಣ ಗದ್ಯ, ಅಕ್ಷರರಾಂಕನ ಗದ್ಯ, ಶತಕತ್ರಯ, ಮಹಿಮಾ ಶತಕ, ಗುಮ್ಮಟ ಶತಕ, ಮಹಿಮ್ನಾ ಸ್ತೋತ್ರ, ಮಲ್ಹಣ ಸ್ತೋತ್ರ, ಮಲಮರಾಜ ಸ್ತೋತ್ರ, ಅನಾಮಯ ಸ್ತೋತ್ರ, ಹಲಾಯುಧ ಸ್ತೋತ್ರ, ಆಚರಣೆಯ ಸಂಬಂಧದ ಷಟ್ಪದಿಗಳು, ಬಸವಸ್ತೋತ್ರದ ಷಟ್ಪದಿಗಳು, ಕುಸುಮ ಷಟ್ಪದಿ, ಸೌಂದರ ಪ್ರಕರಣದ ನಾಂದ್ಯ, ವೀರಶೈವಾಮೃತಪುರಾಣ ನಾಂದ್ಯ, ಸಿದ್ಧೇಶ್ವರಪುರಾಣದ ನಾಂದ್ಯ, ಪ್ರಭುದೇವರ ನಟನಾ ತಾರಾವಳಿ, ತೋಂಟದಾರ್ಯ ಸಿದ್ಧೇಶ್ವರನ ಪವಾಡ ಪದ(ಗುರುಣಿ ಬಸವಲಿಂಗಕೃತ), ಆತ್ಮಲಿಂಗ ಪ್ರಣವ ಸಂಯೋಗ ಸ್ಥಲ, ಕರಣ ಹಸಿಗೆ, ಮಂತ್ರಗೋಪ್ಯ, ಪಂಚೀಕರಣ, ಸೃಷ್ಟಿಯ ವಚನಗಳು, ಮತಸ್ಥಲ ಲೇಖನ, ಶಿವಾಚಾರದ ಪಂಚಾಂಗ ವಚನ, ಗಣಸಹಸ್ರನಾಮ, ವೀರಶೈವ ಸುಧಾವಾರ್ಧಿಯ ಟೀಕೆ, ಸೊಬಗಿನ ಸೋನೆ (ಕೆಳದಿ ಬಸವಲಿಂಗದೇವ ಕೃತ), ಶಿವಶರಣ ಕತೆಗಳು, ನೀಲಾಂಬಿಕಾ ಲಲಿತ ಸ್ತೋತ್ರ, ಚಿಕ್ಕನೀಲಮ್ಮನ ಸ್ತೋತ್ರ, ಶಿವಲಿಂಗ ಸ್ತೋತ್ರ (ಇಮ್ಮಡಿ ಮುರಿಗಾಸ್ವಾಮಿ ಕೃತ), ಮುರಿಗಾಸ್ವಾಮಿಗಳ ನಾಂದ್ಯ, ಕಪ್ಪಿನ ನಂಜಯ್ಯನವರ ನಾಂದ್ಯ, ಸಿದ್ಧೇಶ್ವರ ಪುರಾಣದ ನಾಂದ್ಯ, ಚಾರಮಾಂಕನ ಕಾವ್ಯದನಾಂದ್ಯ, ಬಸವೇಶ ಪುರಾಣ ನಾಂದ್ಯ, ಕಾರಣಾಗಮದ ವಾರ್ಧಿಕ (ಕಲ್ಯಾಣದ ಸ್ವಾಮಿ ಕೃತ), ಸಿದ್ಧೇಶ್ವರ ಸ್ತೋತ್ರ, ವೃಷಭೇಂದ್ರ ವಿಜಯದನಾಂದ್ಯ, ದೇವಿಸ್ತುತಿ, ವೃಭೇಂದ್ರ ಸ್ತುತಿ, ಚನ್ನಬಸವ ಪುರಾಣದ ನಾಂದ್ಯ, ಶಿವಲಿಂಗ ವಾರ್ಧಕ ಷಟ್ಪದಿ (ಇಮ್ಮಡಿ ಮುರಿಗಾ ಗುರುಸಿದ್ದ ಸ್ವಾಮಿಗಳ ಕೃತ), ವೈರಾಗ್ಯ ಷಟ್ಪದಿ , ಲಿಂಗಸ್ತೋತ್ರದ ಷಟ್ಪದಿ (ಇಮ್ಮಡಿ ಮುರಿಗಾ ಗುರುಸಿದ್ಧ ಸ್ವಾಮಿಗಳ ಕೃತ), ಶಿವಮಹಿಮಾಶತಕ, ಪ್ರಭುದೇವರ ಪುರಾಣನಾಂದ್ಯ, ಶಂಕರಸಂಹಿತೆ ಷಟ್ಪದಿ, ಶರಣಲೀಲಾಮೃತ ಪುರಾಣ, ಷಟ್‌ಕಾವ್ಯಗಳು (ಗುರುಬಸವದೇವ ಕೃತ), ಪ್ರಭುಲಿಂಗಲೀಲೆ, ವೀರಶೈವ ಚಿಂತಾಮಣಿ (ಮಹಾಂತಯೋಗಿ ಕೃತ)

ಇನ್ನೂ ನೈಜಾಮ ಪ್ರಾಂತದ ಗುಲಬರ್ಗಾ ಜಿಲ್ಲೆಯ ಮಾದನ ಹಿಪ್ಪರಗಿ ಶ್ರೀ ಶಿವಲಿಂಗೇಶ್ವರ ವಿರಕ್ತಮಠದಿಂದ ಬಂದ ಹಸ್ತಪ್ರತಿಗಳೆಂದರೆ ಭಿಕ್ಷಾಟನೆ ಕಾವ್ಯ, ಉದ್ಭಟದೇವರ ಕಾವ್ಯ, ಸತ್ಯೇಂದ್ರಚೋಳನ ಕಾವ್ಯ, ರಾಜೇಂದ್ರ ವಿಜಯ, ಚೇರಮ ಕಾವ್ಯ, ಸಿದ್ಧರಾಮಯ್ಯನ ಕಾವ್ಯ,

ಚಂದ್ರಾವಲೋಕನ, ಪ್ರಭುಲಿಂಗಲೀಲೆ, ಸೋಸಲೆ ಭೈರನ ಚಾರಿತ್ರ, ಭಾವಚಿಂತಾರತ್ನ, ರಾಘವಾಂಕ ಕಾವ್ಯ, ಬಾಲಸಂಗಯ್ಯನ ಜೋಗುಳ, ಗುರುಬೋಧಾಮೃತ ರಗಳೆ, ಗುರು ರಗಳೆ, ಷಡಕ್ಷರ ರಗಳೆ, ಶರಣಬಸವ ರಗಳೆ, ಲಿಂಗ ರಗಳೆ, ಭೀಮಕವೀಶ್ವರ ರಗಳೆ, ಲಿಂಗಾರ್ಚನೆಯ ರಗಳೆ, ಬಸವೇಶ್ವರ ದೇವರ ಎಂಬತ್ತೆಂಟು ಪವಾಡಗಳ ರಗಳೆ, ಮನವಿಕಾರನಿಸನ ರಗಳೆ, ಭಕ್ತಿಭಿನ್ನಹದ ರಗಳೆ, ಸದ್ಗುರು ರಗಳೆ, ಇಷ್ಟಲಿಂಗ ರಗಳೆ, ವೀರಶೈವ ರಗಳೆ, ಪುನರ್ದೀಕ್ಷಾ ರಗಳೆ, ಅಸಂಖ್ಯಾತರ ರಗಳೆ, ಕಥಾಲಾಪ ತ್ರಿಪದಿ, ಸಿದ್ಧೇಶ್ವರ ತ್ರಿಪದಿ, ನೀಲಮ್ಮನ ತ್ರಿಪದಿ, ಎಲ್ಲಾ ಪುರಾಣದ ತ್ರಿಪದಿ, ಕಥಾಲಾಪ ತ್ರಿಪದಿ, ಬಸವ ತ್ರಿಪದಿ, ಅಷ್ಟಾವರಣ ತ್ರಿಪದಿ, ಷಡಕ್ಷರಿ ಕಂದ, ಮರುಳ ದೇವರ ಕಂದ, ಮಿಶ್ರಸ್ತೋತ್ರ ತ್ರಿಪದಿ, ಶೀಲವಂತಯ್ಯನ ತ್ರಿಪದಿ, ಮುರಿಗಾಸ್ವಾಮಿಗಳ ಕಂದ, ಅಕ್ಷರಮೂಲಿಕಾ ಗದ್ಯ, ನಮಸ್ಕಾರ ಗದ್ಯ, ಅಷ್ಟಾವರಣ ಶತನಾಮ ಗದ್ಯ, ಷಟ್‌ಸ್ಥಲ ಗದ್ಯ, ಉದಾಹರಣ ಗದ್ಯ, ಅಕ್ಷರಾಂಕನ ಗದ್ಯ, ಶತಕತ್ರಯ, ಶಿವಲಿಂಗ ವಿಕಳತೆ ಸಹಿತ ದರ್ಶನ ಪೂಜನ ಶತಕ, ಮಲುಹಣ ಸ್ತೋತ್ರ, ಮಲಯರಾಜ ಸ್ತೋತ್ರ, ಅನಾಮಯ ಸ್ತೋತ್ರ, ಹಲಾಯುಧ ಸ್ತೋತ್ರ, ಭಾವಚಿಂತಾರತ್ನ, ಕೋಲುಪದ, ಜಲಶಿಲ್ಪ, ಪಂಚಸ್ತೋತ್ರ, ಕರಣಹಸಿಗೆ–ಮಿಶ್ರಾರ್ಪಣ, ಅಕ್ಕಗಳ ಸೃಷ್ಟಿಯ ವಚನ, ಪ್ರಭುವಿನ ಸೃಷ್ಟಿಯ ವಚನ, ಏಕೋತ್ತರ ಶತಸ್ಥಲ, ಮಂತ್ರಗೋಪ್ಯ (ಚನ್ನಬಸವೇಶ್ವರ), ಮಂತ್ರಗೋಪ್ಯ (ಪ್ರಭುದೇವರ), ಶಿವಮಹಿಮಾಶತಕ, ಅಮರಕೋಶ (ಮೂರು ಕಾಂಡಗಳು), ನಾನಾರ್ಥ ರತ್ನಾಕರ, ಪಂಚಪ್ರಕಾರದ ಗದ್ಯ (ಸಟೀಕ), ಕರ್ನಾಟಕ ಶಬ್ದಮಂಜರಿ, ದೀಕ್ಷಾ ವಿಧಾನ, ಶಿವಕವಚ (ಸಟೀಕ), ಶತಕತ್ರಯ (ಸಟೀಕ), ಮನೋವಿಜಯ (ವ್ಯಾಖ್ಯಾನ), ವೀರಶೈವ ಚಿಂತಾಮಣಿ (ಉದ್ದಾನ ತೋಂಟದ ಸಿದ್ಧಲಿಂಗ ದೇಶಿಕಕೃತ ಸಿದ್ಧಲಿಂಗದೇವರು ವ್ಯಾಖ್ಯಾನ), ಬಸವಸ್ತೋತ್ರ, ಉದಾಹರಣ ಗದ್ಯ (ರೇವಣಾರಾಧ್ಯ ವ್ಯಾಖ್ಯಾನ), ಅಕ್ಷರಾಂಕನ ಗದ್ಯ, ಅಕ್ಷರಮಾಲಿಕಾ ಗದ್ಯ (ಸಟೀಕ), ನಮಸ್ಕಾರ ಗದ್ಯ (ಸಟೀಕ), ಮಹಿಮಾ ಶತಕ (ಸಟೀಕ), ನಹಾನಾಟಕ ವೃತ್ತ ಶಾರ್ದೂಲಂ, ಪ್ರಭುಲಿಂಗದ ಕಂದ (ಸಟೀಕ) (ಹನುಮಂತ ಕೃತ), ಲಿಂಗಸ್ತೋತ್ರದ ಷಟ್ಪದಿ

ಬಾಗಲಕೋಟೆ ಟೀಕಿನ (ಟೆಂಗಿನ) ವಿರಕ್ತಮಠದಿಂದ ಶಿವಯೋಗ ಮಂದಿರಕ್ಕೆ ದಾನವಾಗಿ ನೀಡಿದ ಹಸ್ತಪ್ರತಿಗಳೆಂದರೆಚಂದ್ರಜ್ಞಾನಾಗಮ, ಗಣಾಚಾರೋಕ್ತ ಚತುಃಷಷ್ಠಿಶಿಲ ನಿರೂಪಣ, ತೋಂಟದ ಸಿದ್ಧಲಿಂಗ ಶಿವಯೋಗಿ ವಿರಚಿತ ಪಾಲ್ಕುರಿಕೆ ಸೋಮೇಶ್ವರ ಪುರಾಣ

ಶ್ರೀ ಮುರುಘಾಮಠ, ಆನಂದಪುರ (ಅನಂತಪುರ) ಶ್ರೀ.ಮ.ನಿ.ಪ್ರ. ಸಚ್ಚಿದಾನಂದ ಮಹಾಸ್ವಾಮಿಗಳ ನೇತೃತ್ವದಲ್ಲಿ ಶಿವಯೋಗ ಮಂದಿರಕ್ಕೆ ನೀಡಲ್ಪಟ್ಟ ದಾನದ ಹಸ್ತಪ್ರತಿಗಳೆಂದರೆ ಶರಣಲೀಲಾಮೃತ (೧೩ ಸಂಧಿಗಳು), ರಾಘವಾಂಕನ ಕಾವ್ಯ, ಅನುಭಾವಮೃತ, ಗಂಗೆ–ಗಿರಿಜಾ ಸಂವಾದ, ಅನುಭವ ಶಿಖಾಮಣಿ, ವೃಷಭೇಂದ್ರ ವಿಜಯ ಪುರಾಣ (ಷಡಕ್ಷರ ಕವಿ

ವಿರಚಿತ), ಅಪರಾಧ ಸ್ತೋತ್ರ, ಸತ್ಯೇಂದ್ರ ಚೋಳನ ಕಾವ್ಯ (ಭಾವಚಿಂತಾರತ್ನ), ಶಬ್ದಮಣಿ ದರ್ಪಣ (ಪ್ರ-೧), ಅಮರಕೋಶ (ಅಮರ ಕವಿ ವಿರಚಿತ), ಪ್ರಭುಲಿಂಗ ಕಂದ, ನವರತ್ನ ಚಿಂತಾಮಣಿ (ಜೋತಿಷ್ಯ), ಶಿವಾಧಿಕ್ಯ ಪುರಾಣ (ಅಪೂರ್ವ), ಅಂಬಿಗರ ಚೌಡಯ್ಯನ ವಚನಗಳು (ಅಪೂರ್ವ), ಯಕ್ಷಗಾನ, ಗೋವಿನ ಕಥೆ (ಉಪಾಖ್ಯಾನ), ಶಬ್ದಮಣಿ ದರ್ಪಣ (ಪ್ರ-೨), ಕರ್ನಾಟಕ ಶಬ್ದಮಂಜರಿ ನಿಘಂಟು, ಪ್ರಭುದೇವರ ತಾರಾವಳಿ (ಮಲೆ ರಾಚಪ್ಪದೇವ ನಿರೂಪಿಸಿದ್ದು), ಚಂದ್ರಾವಲೋಕನ (ಸಂಸ್ಕೃತ, ಅಲಂಕಾರಶಾಸ್ತ್ರ), ಪ್ರತಾಪರುದ್ರೀಯ (ಸಂಸ್ಕೃತ, ಅಲಂಕಾರಶಾಸ್ತ್ರ), ಪ್ರಯೋಗ ಸಂಗ್ರಹ (ಸಂಸ್ಕೃತ, ವರರುಚಿ ಕೃತ), ಬಸವ ಪುರಾಣ (ಕೈ ಬರೆಹದ ಪ್ರತಿ)

ಸುಖರಾಯ ಪಟ್ಟಣ (ಚಿಕ್ಕಮಗಳೂರು ಜಿಲ್ಲೆ) ಶ್ರೀ ರು ಹಾಲುಸ್ವಾಮಿ ಶಿಲಾಮಠದ ಪಟ್ಟಾಧ್ಯಕ್ಷರಾದ ವಿಜಯ ಮಹಾಂತೇಶ್ವರ ಗ್ರಂಥಾಲಯಕ್ಕೆ ನೀಡಿದ ಹಸ್ತಪ್ರತಿಗಳೆಂದರೆ ಶ್ರೀ ಮ.ಘ.ಚ. ಸದಾಶಿವ ಶಿವಾಚಾರ್ಯರು ಸಿದ್ಧಾಂತ ಶಿಖಾಮಣಿ (ಕನ್ನಡ ಅರ್ಥಸಹಿತ), ಏಕೋತ್ತರ ಶತಸ್ಥಲ, ಕರಣಹಸಿಗೆ-ಮಿಶ್ರಾರ್ಪಣ (ಪ್ರತಿ-೧), ಬಸವೇಶ್ವರ ಪುರಾಣದ ಕಥಾಸಾರ (ಬಸವಲಿಂಗದೇವ ವಿರಚಿತ), ವೀರಶೈವಾಚಾರ ಕೌಸ್ತುಭ, ಅರವತ್ತಮೂರು ಪುರಾತನರ ಕಾಲಜ್ಞಾನ, ಮಡಿವಾಳಯ್ಯನಗಳ ಚರಿತ್ರ, ಬಸವೇಶ್ವರನ ಪುರಾಣ ಕಥೆ, ಬಸವೇಶ್ವರ ಮೊದಲಾದ ಪ್ರಮಥರ ಕಾಲಜ್ಞಾನ, ಗಣಭಾಷ್ಯ-ರತ್ನಮಾಲಾ (ಗುಬ್ಬಿ ಮಲ್ಲಣಾರ್ಯ ಕೃತ ಪ್ರತಿ-೧), ಬಸವೇಶ್ವರ ಷಟ್ಪದಿ, ಶಿವಯೋಗಾಂಗ ಭೂಷಣ, ಸದ್ಗುರು ರಹಸ್ಯ, ಕಲ್ಯಾಣೇಶ್ವರ, ವೃಷಭ ನೀತಿ, ಅವಧೂತ ನೀತಿ, ಮನೋ ವಿಜಯ, ಕರಣಹಸಿಗೆ-ಮಿಶ್ರಾರ್ಪಣ (ಪ್ರತಿ-೧), ಹಿರಿಯ ಮಂತ್ರಗೋಪ್ಯ, ಮಡಿವಾಳಯ್ಯನ ಕಥೆ, ಷಟ್‌ಸ್ಥಲ ಜ್ಞಾನಾಸಾರಾಯ, ಕರಣ ಹಸಿಗೆ (ಪ್ರತಿ-೧), ಮಂತ್ರಗೋಪ್ಯ (ಚನ್ನಬಸವಣ್ಣ ನಿರೂಪಿತ), ಮಂತ್ರಗೋಪ್ಯ (ಪ್ರಭುದೇವ ನಿರೂಪಿತ), ಸಂಬಂಧ ವಚನ (ಚನ್ನಂಜೇಶ ವಿರಚಿತ), ಮಿಶ್ರಸ್ತೋತ್ರ ವಚನ, ಶಿವಲಿಂಗಕೀರ್ತನದ ಕದಂಬ ಶತಕ, ಶತಕತ್ರಯ (ಮಗ್ಗೆಯ ಮಾಯಿದೇವ ಕೃತ), ಶಂಕರದೇವರ ಕಂದ, ಮಂತ್ರ ಮಹತ್ವದ ಕಂದ, ಗರಳಪುರ ಮಹಾತ್ಮೆ (ಸ್ಕಂದಪುರಾಣೋಕ್ತ), ದೀಕ್ಷಾವಿಧಿ (ಸಂಸ್ಕೃತ, ಪ್ರತಿ-೧), ದೀಕ್ಷಾವಿಧಿ (ಸಂಸ್ಕೃತ, ಪ್ರತಿ-೨), ಗುರುಬೋಧಾಮೃತ, ವೀರಸಂಗಯ್ಯನವರ ಚೌಪದ, ಮಡಿವಾಳಯ್ಯನ ಚರಿತ್ರೆ, ಪ್ರಭುಲಿಂಗಲೀಲೆ (೧೯ ಸಂಧಿಗಳು), ಬಸವರಾಜದೇವರ ಷಟ್‌ಸ್ಥಲದ ವಚನ (ಪ್ರತಿ-೧), ಗಣಾಭಾಷ್ಯರತ್ನಮಾಲೆ (ಪ್ರತಿ-೨), ಬಸವೇಶ್ವರ ಷಟ್‌ಸ್ಥಲದ ವಚನ (ಪ್ರತಿ-೨), ಕರಣಹಸಿಗೆ-ಮಿಶ್ರಾರ್ಪಣ (ಪ್ರತಿ-೩), ಪಂಚೀಕರಣ, ಮಹಾದೇವಿಯಕ್ಕನ ವಚನಗಳು, ಏಕೋತ್ತರ ಶತಸ್ಥಲ, ಅಕ್ಕಗಳ ಸೃಷ್ಟಿಯ ವಚನ, ಪ್ರಭುದೇವರ ಸೃಷ್ಟಿಯ ವಚನ, ವಿರೂಪಾಕ್ಷ ಶತಕ (ಹರೀಶ್ವರ ಕವಿ ಕೃತ), ಶಕಾಷ್ಟಕಂ (ಶುಕಮುನಿ ಕೃತ), ಗುರುಗೀತೆ (ಷಟ್ಕಾವ್ಯದ

ಗುರುಬಸವೇಶ್ವರ ಸ್ವಾಮಿ ಕೃತ), ಪಾದೋದಕ-ಪ್ರಸಾದ ಮಹಾತ್ಮೆ, ಗುರುಭಕ್ತ ಚರಿತೆ, ಬಸವ ಚರಿತ್ರ್ಯ, ವಿವೇಕ ಚಿಂತಾಮಣಿ (ಪ್ರತಿ-೧), ವಿವೇಕ ಚಿಂತಾಮಣಿ (ಕೈಬರೆಹದ ಪ್ರತಿ-೨), ರಾಜೇಂದ್ರ ವಿಜಯ (ಕೈಬರೆಹದ ಪ್ರತಿ), ಗಣಸಹಸ್ರ ನಾಮಾವಳಿ (ಕೈಬರೆಹದ ಪ್ರತಿ), ವಿಷ್ಣುಭಕ್ತಿಸಾರ (ಕನಕದಾಸ ಕೃತ), ಕೃಷ್ಣಚರಿತ ಗದ್ಯ

ಕಂಚಗಲ್ಲು-ಬಿದರೆ ದೊಡ್ಡಮಠದಿಂದ ಶ್ರೀ ಮ.ಘ.ಚ. ಘನಲಿಂಗ ಶಿವಾಚಾರ್ಯರು ಇವರ ನೇತೃತ್ವದಲ್ಲಿ ಎರಡನೇ ಕಂತಿನಲ್ಲಿ ಶಿವಯೋಗ ಮಂದಿರಕ್ಕೆ ನೀಡಿದ ತಾಳೋಲೆಗ್ರಂಥಗಳೆಂದರೆ ವಿವೇಕ ಚಿಂತಾಮಣಿ (ಪ್ರತಿ-೧), ವಿವೇಕ ಚಿಂತಾಮಣಿ (ಪ್ರತಿ-೨ ಒಂದು ಅಪೂರ್ಣ), ಕೈವಲ್ಯ ಪದ್ಧತಿ, ಶಿವಾಧಿಕ್ಯ ಪುರಾಣ (ಪ್ರತಿ-೧), ಶಿವಾಧಿಕ್ಯ ಪುರಾಣ (ಪ್ರತಿ-೨), ಬಸವಪುರಾಣ, ರಾಜಶೇಖರ ವಿಳಾಸ, ರಾಜಶೇಖರ ನುಡಿ, ರೇವಣಸಿದ್ದೇಶ್ವರ ಸಾಂಗತ್ಯ (ಪ್ರತಿ-೧), ರೇವಣಸಿದ್ಧೇಶ್ವರ ಸಾಂಗತ್ಯ (ಪ್ರತಿ-೨), ರೇವಣಸಿದ್ಧೇಶ್ವರ ಸಾಂಗತ್ಯ (ಪ್ರತಿ-೩), ಅನುಭವ ಶಿಖಾಮಣಿ, ಸುಜ್ಞಾನಿದೇವರ ಕಾವ್ಯ (ಪ್ರತಿ-೧), ಸಿದ್ಧೇಶ್ವರ ವಚನ, ಸಿದ್ಧೇಶ್ವರ ಮಂತ್ರಗೋಪ್ಯ, ಹರಚರಿತ ಗಜಾಂಕುಶ ತಾರಾವಳಿ, ಹರಿಹರ ತಾರತಮ್ಯಂ, ಬಸವೇಶ್ವರ ವಚನ, ಕರಣ ಹಸಿಗೆ, ರಾಘವಾಂಕನ ಕಾವ್ಯ, ಸಚಿತ್ರ ಉದ್ಧರಣೆಗಳು, ಪುಷ್ಪದಂತನ ಚರಿತ್ರೆ ಹೀಗೆ ದಾಖಲೆಯಲ್ಲಿ ಇಲ್ಲದ ಇನ್ನೂ ಹಲವಾರು ದಾನಿಗಳು ನೀಡಿದ ಹಸ್ತಪ್ರತಿಗಳ ಕಟ್ಟುಗಳಿವೆ. ಜೊತೆಗೆ ದಾಖಲೆಗೆ ಸಿಗದೆ ಹೋದ ಹಸ್ತಪ್ರತಿಗಳ ಸಂಖ್ಯೆ ನೂರಾರು ಎಂದರೆ ತಪ್ಪಾಗಲಾರದು.

ಹೀಗೆ ದಾಖಲೆಯಲ್ಲಿ ಇಲ್ಲದ ಇನ್ನೂ ಹಲವಾರು ದಾನಿಗಳು ನೀಡಿದ ಹಸ್ತಪ್ರತಿಗಳ ಕಟ್ಟುಗಳಿವೆ. ಜೊತೆಗೆ ದಾಖಲೆಗೆ ಸಿಗದೆ ಹೋದ ಹಸ್ತಪ್ರತಿಗಳ ಸಂಖ್ಯೆ ನೂರಾರು ಎಂದರೆ ತಪ್ಪಾಗಲಾರದು. ಹಸ್ತಪ್ರತಿಗಳ ಮೂಲಕ ಧರ್ಮಪ್ರಚಾರ, ಜ್ಞಾನಪ್ರಸಾರ ಮಾಡಲಾಗುತ್ತಿತ್ತು. ಪುರಾಣ-ಪ್ರವಚನಗಳ ಮೂಲಕ ಬೋಧಿಸಲಾಗುತ್ತಿತ್ತು. ಇದೇ ಉದ್ದೇಶಕ್ಕಾಗಿ ಕೂಡ ಅವುಗಳನ್ನು ಸಂರಕ್ಷಿಸಲಾಗುತ್ತಿತ್ತು. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ನಾನು ಗಮನಿಸಿದ ಅಂಶವೆಂದರೆ ವೈದ್ಯಕೀಯ, ಮಾಟ-ಮಂತ್ರ, ಜೋತಿಷ್ಯ ಮೊದಲಾದ ಲೌಕಿಕ ಹಸ್ತಪ್ರತಿಗಳೆಂದು ಕರೆಯಲ್ಪಟ್ಟಿರುವ ಹಸ್ತಪ್ರತಿಗಳನ್ನು ದೈವದ ಕಲ್ಪನೆಯಲ್ಲಿ ರಕ್ಷಿಸಿಕೊಂಡು ಬಂದಿರುವುದು ಕೇಳಿ ತಿಳಿದಿದ್ದೇನೆ. ಹಸ್ತಪ್ರತಿಗಳಲ್ಲಿ ಹಲವು ರೋಗಗಳಿಗೆ, ಸಮಸ್ಯೆಗಳಿಗೆ ಗಿಡಮೂಲಿಕೆಗಳ ಮೂಲಕ ಪರಿಹಾರ ಸೂಚಿಸುತ್ತಾರೆ. ಇಂತಹ ಪದ್ಧತಿ ಆಯುರ್ವೇದಿಕ್ ಎನ್ನುತ್ತಾರೆ. ಹಾಗಾಗಿ ಆಯುರ್ವೇದದಂತ ಅಂಶಗಳ ಸಂಗ್ರಹಕ್ಕೆ, ಸಂರಕ್ಷಣೆಗಾಗಿ ಹಸ್ತಪ್ರತಿಗಳನ್ನು ಶ್ರೀಗಳು ಕ್ರೋಢಿಕರಿಸಿದರು. ಆ ಮೂಲಕ ಮಂದಿರದಲ್ಲಿ ಆಯುರ್ವೇದಿಕ್ ಕಾಲೇಜು ಸ್ಥಾಪಿಸಲು ಬಯಸಿದಂತೆ ತೋರುತ್ತದೆ. ಇಂದು ಅವರ ಆಶಯದಂತೆ ಪ್ರಾಥಮಿಕ ಪ್ರಯತ್ನದ ಆಯುರ್ವೇದಿಕ್ ಆಸ್ಪತ್ರೆ ಸ್ಥಾಪನೆಗೊಂಡಿದೆ. ಪರಳಿ ವ್ಯಾಪ್ಯದಲ್ಲಿ

ಹಾನಗಲ್ಲ ಶ್ರೀಗಳು ಋಗ್ವೇದದ ಮೂಲ ಕೃತಿಗಳನ್ನು, ೧೮ ಪುರಾಣಗಳನ್ನು ಸಂಗ್ರಹಿಸಿದ್ದಾರೆ. ಅವು ಇಲ್ಲಿನ ಗ್ರಂಥಾಲಯದಲ್ಲಿ ಕಾಣಬಹುದಾಗಿದೆ.

ಹಸ್ತಪ್ರತಿಗಳ ಸರ್ವೇಕ್ಷಣೆ-ಸಂಗ್ರಹ-ಸಂರಕ್ಷಣೆಯಲ್ಲಿ ಸೂಚಿಗಳ ರಚನೆಯಲ್ಲಿ ತಾಳೆಗರಿ, ಕೋರಿಕಾಗದ, ಕಡತಗಳು, ಶಿವಯೋಗಮಂದಿರದಲ್ಲಿ ಸಂಗ್ರಹವಾಗಿದೆ. ಅವುಗಳ ವ್ಯವಸ್ಥಿತ ಜೋಡಣೆಯಾಗಬೇಕಾಗಿದ್ದು, ಸೂಚಿತವಾದ ಅಂಶಗಳ ಹಿನ್ನೆಲೆಯಲ್ಲಿ ಸೂಚಿಗಳನ್ನು ರಚಿಸುವ ಅಗತ್ಯವಿದೆ. ನಾಡಿನ ಅಭಿಮಾನಪ್ರಿಯ ಸಂಶೋಧಕರು ಇಲ್ಲಿಗೆ ಬರುವ ಅಗತ್ಯವಿದೆ. ಈ ನಿಟ್ಟಿನಲ್ಲಿ ನುರಿತ ಅಧ್ಯಾಪಕ ವರ್ಗ, ಆಸಕ್ತ, ವಿಚಾರವಂತ, ವ್ಯಕ್ತಿಗಳು, ಹಸ್ತಪ್ರತಿ ಭಂಡಾರದ ಸದುಪಯೋಗ ಪಡೆಯುವಂತಾಗಬೇಕಾಗಿದೆ. ಆಗಲೇ ಇದರ ಸ್ಥಾಪನೆಯ ಉದ್ದೇಶ ಸಾರ್ಥಕಗೊಳ್ಳಲು ಸಾಧ್ಯ.

ಒಟ್ಟಿನಲ್ಲಿ ಎಲ್ಲ ಸರಿಯಾಗಿದ್ದರೆ ಶಿವಯೋಗಮಂದಿರದ ಈ ಗ್ರಂಥಾಲಯ, ವಾಚನಾಲಯ, ಹಸ್ತಪ್ರತಿಭಂಡಾರ ಈ ನಾಡಿನ ಒಂದು ಅಪೂರ್ವ ಸಂಗ್ರಹದಲ್ಲಿ ಒಂದಾಗಿರುತ್ತಿತ್ತು. ಜ್ಞಾನಭಂಡಾರದ ಅತ್ಯಮೂಲ್ಯ ಹೆಬ್ಬಾಗಿಲಂತಿರುವ ಇಲ್ಲಿನ ಗ್ರಂಥಾಲಯ ಇಂದು ಸೊರಗಿ ಹೋಗಿದೆ. ಓದಲು ಪುಸ್ತಕಗಳನ್ನು ಒಯ್ದವರು, ಗ್ರಂಥಾಲಯದ ನಿರ್ವಾಹಕರು, ಸಾಧಕರು, ಸಂಪಾದಕರು, ಸಂಶೋಧಕರು ಮೊದಲಾದವರು ಅನೇಕ ಗ್ರಂಥಗಳನ್ನು ಮರಳಿ ಕೊಡದೆ ಹೋದದಕ್ಕೆ ಇಲ್ಲಿನ ಮೂಕ ಹಾಳೆಗಳು ಸಾಕ್ಷಿಯಾಗಿವೆ. ಖಾಲಿ ಉಳಿದ, ಗೆದ್ದಲು ಹಿಡಿದ ಕಪಾಟುಗಳು ಮೂಕ ಸಾಕ್ಷಿಗಳಾಗಿವೆ. ಬದಲಾವಣೆ, ಅಭಿವೃದ್ಧಿಯ ಹೆಸರಿನಲ್ಲಿ ಅನೇಕ ಗ್ರಂಥಗಳು, ತಾಳೆಗರಿಗಳು ಗೆದ್ದಲು ಹುಳಗಳಿಗೆ ಆಹಾರವಾಗಿವೆ. ದೂಳಿನಲ್ಲಿ ಕಳೆದುಹೋಗುತ್ತಿದೆ. ಪ್ರಸ್ತುತ ನಿರ್ವಾಹಕರಿಲ್ಲದೆ, ನಿರ್ದೇಶಕರಿಲ್ಲದೆ ಪಾಳುಬಿದ್ದ ದೇಗುಲದಂತೆ ಜೇಡ, ಬಾವಲಿಗಳಿಗೆ ಆಶ್ರಯ ತಾಣವಾಗಿದೆ. ಇದಕ್ಕೆ ಎಲ್ಲ ರೀತಿಯಿಂದಲೂ ಶ್ರೀರಕ್ಷೆಯ ಅಗತ್ಯವಿದೆ. ನಾಡಿನ ವಿಚಾರವಂತ ಜನರ ಇದರ ಸದುಪಯೋಗರಿದು ಮತ್ತೆ ಸಿದ್ಧಗೊಳ್ಳಬೇಕಾಗಿದೆ.

ಅಡಿ ಟಿಪ್ಪಣಿಗಳು

೧. ಬೆಳಗು-ಪು.ಸಂ.-೧೪೦

೨. ಯುಗದ ಉತ್ಸಾಹ ಶ್ರೀ ಕುಮಾರ ಶಿವಯೋಗಿಗಳು-ಪು-೪೪

೩. ಶಿವಯೋಗಮಂದಿರ ಗ್ರಂಥಾಲಯ ದಾಖಲೆ ಪುಸ್ತಕ

೪. ಶಿವಯೋಗಮಂದಿರದ ಕೈಪಿಡಿ-ಪು-೨೩

೫. ಶಿವಯೋಗಮಂದಿರದ ಗ್ರಂಥಾಲಯದ ದಾಖಲೆ ಪುಸ್ತಕ, ಪರಿವಿಡಿ ಭಾಗ

೬. ಶಿವಯೋಗಮಂದಿರ ಸಂದರ್ಶಕರ ಪುಸ್ತಕ

೭. ಶಿವಯೋಗಮಂದಿರ ಗ್ರಂಥಾಲಯದ ದಾಖಲೆ ಪುಸ್ತಕ

೮. ಸನ್ನಿಧಾನ ಪು-೨೫೬

೯. ಅದೇ ಪು-೨೬೦.

೧೦. ಶಿವಯೋಗಮಂದಿರ ಶತಸಂವತ್ಸರ (ಎರವಲು ಪಡೆದದ್ದು) ಪು.ಸಂ-೩, ಅನುಬಂಧ-೧

ಅಧ್ಯಾಯ - ಎಂಟು

ಶಿವಯೋಗಮಂದಿರ : ಮುಂದಿನ ಬೆಳವಣಿಗೆ.

ಅಧ್ಯಾಯ – ಎಂಟು

ಶಿವಯೋಗಮಂದಿರ : ಮುಂದಿನ ಬೆಳವಣಿಗೆ

ಶಿವಯೋಗಮಂದಿರ ನಾಡಿನ ವೀರಶೈವ ಮಠಗಳ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವನ್ನು ವಹಿಸಿದ ಧಾರ್ಮಿಕ ಆಧ್ಯಾತ್ಮಿಕ ವಿದ್ಯಾಕೇಂದ್ರವಾಗಿದೆ. ವೀರಶೈವ ಲಿಂಗಾಯತ ಮಠಗಳು ಸಮಾಜ, ಧರ್ಮ, ಶಿಕ್ಷಣ ಸಾಹಿತ್ಯಕ ಹಾಗೂ ಸಾಂಸ್ಕೃತಿಕವಾಗಿ ಅಪಾರವಾದ ಕೊಡುಗೆ ನೀಡಿದೆ ಎಂದರೆ ಅದರ ಎಲ್ಲ ಯಶಸ್ಸು ಹಾನಗಲ್ಲ ಕುಮಾರಸ್ವಾಮಿಗಳ ಮುಂದಾಲೋಚನೆಯ, ಸಮಾನ ಮನಸ್ಕರ ಒಗ್ಗಟ್ಟಿನಲ್ಲಿ ರೂಪಿತಗೊಂಡ ಶ್ರೀಮದ್ವೀರಶೈವ ಶಿವಯೋಗಮಂದಿರ ಸಂಸ್ಥೆಗೆ ಸಲ್ಲುತ್ತದೆ. ಇಂತಹ ಸಂಸ್ಥೆ ಇತ್ತೀಚಿನ ದಿನಗಳಲ್ಲಿ ಗುರು, ವಿರಕ್ತ, ಜಂಗಮ ಭಕ್ತ ಎಂಬ ಪಂಗಡಗಳ ಒಡಗಿನಲ್ಲಿ ಸಿಲುಕಿರುವುದು ಶೋಚನೀಯ ಸಂಗತಿಯಾಗಿದೆ.

ಯಾವ ಸಂಸ್ಥೆ ಸಮಾಜದ ಮಠಗಳಿಗೆ ಅರ್ಹವಾದ ಸಾಧಕರನ್ನು ಗುರು–ವಿರಕ್ತ–ಜಂಗಮ ಎಂಬ ಭೇಧವಿಲ್ಲದೇ ನಿಯೋಜಿಸುತ್ತಿತ್ತೋ ಅಂತಹ ಧಾರ್ಮಿಕ ವಿದ್ಯಾ ಕೇಂದ್ರವು ಇಂದು ಸಮಾಜದ ಏಳ್ಗೆಗೆ ದುಡಿಯುವಲ್ಲಿ ಹಾನಗಲ್ಲ ಪೂಜ್ಯರ ಆಶಯಗಳಿಗೆ ಸ್ವಲ್ಪ ವಿಮುಖವಾಗುತ್ತಾ ಸಾಗಿದಂತಿದೆ. ಪ್ರಸ್ತುತ ದಿನಗಳಲ್ಲಿ ಪ್ರಗತಿಪರ ವಿಚಾರಗಳು ಗೌಣ್ಯವೆನಿಸಿವೆ. ಇದಕ್ಕೆಲ್ಲ ಕಾರಣಗಳೇನು? ಆಡಳಿ ವೈಖರಿಯೋ, ಆಸಕ್ತ ಮನಸ್ಸುಗಳ ಕೊರತೆಯೋ, ಸಂಕುಚಿತ ಚಿಂತನೆಗಳೋ ಅಥವಾ ಪ್ರಸ್ತುತ ದಿನಗಳಲ್ಲಿ ಇಂತಹದೊಂದು ಧಾರ್ಮಿಕ ವಿದ್ಯಾಸಂಸ್ಥೆಯ ಅವಶ್ಯಕತೆಯೇ ಇಲ್ಲಾ ಎಂಬ ಅಭಿಪ್ರಾಯಗಳೋ ಎಂಬೆಲ್ಲ ಪ್ರಶ್ನೆಗಳು ಉದ್ಭವಿಸುತ್ತವೆ. ಅದೇನೆ ಇದ್ದರೂ ಈ ಎಲ್ಲ ತೊಂದರೆಗಳನ್ನು ನಿವಾರಿಸಿಕೊಂಡು ಶಿಯೋಗಮಂದಿರ ಮುಂದಿನ ದಿನಗಳಲ್ಲಿ ಕ್ರಿಯಾಶೀಲವಾದ ಕಾರ್ಯ ಯೋಜನೆಗಳಿಂದ ಬೆಳೆಯಬೇಕಾಗಿದೆ.

ಎದುರಾಗಬಹುದಾದ ಎಲ್ಲ ಓರೆಕೋರೆಗಳನ್ನು ಬದಿಗೊತ್ತಿ ಶಿಯೋಗಮಂದಿರ ಸಂಸ್ಥೆಯು ಮುಂದಿನ ದಿನಗಳಲ್ಲಿ ಮೈಗೂಡಿಸಿಕೊಳ್ಳಬೇಕಾದ ಕೆಲವೊಂದು ಅಂಶಗಳನ್ನು ನಾವು ಕ್ಷೇತ್ರಕಾರ್ಯದಲ್ಲಿ ಸಂದರ್ಶಕರು, ಸಮಾಜದ ಗಣ್ಯ ಮಹನೀಯರು ನೀಡಿದ ಸಲಹೆ ಸೂಚನೆಗಳ ಮೇರೆಗೆ ಮಂದಿರದ ಬೆಳವಣಿಗೆಯಲ್ಲಿ ಕೈಗೊಳ್ಳಲೇಬೇಕಾದ ಅಭಿವೃದ್ಧಿ ಹಾಗೂ ಸಮಾಜಮುಖಿ ಬೆಳವಣಿಗೆಗಳನ್ನು ಹೀಗೆ ಕ್ರೂಢೀಕರಿಸಿ ಕೊಡಬಹುದಾಗಿದೆ.

ಶಿವಯೋಗಮಂದಿರ ಕೇವಲ ಮಠಾಧಿಪತಿಗಳನ್ನಷ್ಟೇ ತರಬೇತಿಗೊಳಿಸುವ ಸಂಸ್ಥೆಯಾಗಿ ಮಾತ್ರ ಉಳಿಯಬಾರದು. ಕನ್ನಡ ನಾಡು, ನುಡಿ, ಸಂಸ್ಕೃತಿ ಮತ್ತು ಪರಂಪರೆಗಳನ್ನು ಕುರಿತು ಅಧ್ಯಯನ ಮಾಡುವ, ಸಂಶೋಧನೆ ಮಾಡುವ ಸಂಶೋಧನಾ ಕೇಂದ್ರವಾಗಿಯೂ, ಪ್ರಸಾರ ಮಾಡುವ ವಿಶ್ವವಿದ್ಯಾಲಯವೂ ಆಗಬೇಕಿದೆ. ಸಮಾಜಮುಖಿ ಉನ್ನತ ಚಿಂತನೆಗಳಿಂದ ದೂರವಿರುವ ಸಮುದಾಯಗಳನ್ನು ಹಾಗೂ ವಿಚಾರಗಳನ್ನು ಶೈಕ್ಷಣಿಕ ಯೋಜನೆಗಳ ಮೂಲಕ ಸಾಮಾನ್ಯ ಜನವರ್ಗದವರ ಹತ್ತಿರಕ್ಕೆ ಕೊಂಡೊಯ್ಯುವ ಮಹತ್ವದ ಕಾರ್ಯಗಳನ್ನು ನಿರ್ವಹಿಸಬೇಕಾಗಿದೆ. ಒಂದು ಕಾಲಕ್ಕೆ ಫ.ಗು.ಹಳಕಟ್ಟಿ, ಚೆನ್ನಮಲ್ಲಿಕಾರ್ಜುನ ಮಾಸ್ತರ ಹರ್ಡೇಕರ ಮಂಜಪ್ಪ, ಸಿ.ಸಿ ಬಸವನಾಳ, ಉಚ್ಚಗಿ ಚೆನ್ನಬಸಪ್ಪ, ಆರ್.ಸಿ. ಹಿರೇಮಠ, ಗೌ.ಮ ಉಮಾಪತಿಶಾಸ್ತ್ರಿಗಳಂತಹ ಹಿರಿಯ ಅಧ್ಯಯನಕಾರರು ಸಂಶೋಧಕರನ್ನು ಬರಮಾಡಿಕೊಂಡು ಅಧ್ಯಯನಶೀಲ ಕಾರ್ಯಗಳು ಮಾಡಿರುವುದನ್ನು ಮರೆಯುವಂತಿಲ್ಲ. ಈ ಪರಂಪರೆಯನ್ನು ವ್ರತವೆಂಬಂತೆ ಮುಂದುವರಿಸಿಕೊಂಡು ಹೋಗುವ ಮೂಲಕ ಶಿವಯೋಗಮಂದಿರವನ್ನು ವಿಶ್ವವಿದ್ಯಾಲಯ ಮಟ್ಟಕ್ಕೇರಿಸಬೇಕಾಗಿದೆ. ಜೊತೆಗೆ ಅಂತಹದೊಂದು ಸಂಕಲ್ಪವನ್ನು ಸಂಸ್ಥೆಯು ಮಾಡಬೇಕಾಗಿದೆ. ನಾಡಿನ ಯಾವುದೇ ಸಂಶೋಧಕರು ಬಂದರು ಇಲ್ಲಿನ ಗ್ರಂಥಾಲಯದಲ್ಲಿರುವ ಅಪ್ರಕಟಿನ ಹಸ್ತಪ್ರತಿಗಳಲ್ಲಿ ದುಡಿಯುವ ಎಲ್ಲ ಸೌಲಭ್ಯಗಳನ್ನು ಒದಗಿಸಬೇಕಾಗಿದೆ.

ಶಿವಯೋಗಮಂದಿರವು ಆಡಳಿತಾಂಗ, ಅಧ್ಯಯನಾಂಗ ಹಾಗೂ ಪ್ರಸಾರಾಂಗ ಎಂಬ ಅಂಗಗಳ ಮೂಲಕ ತನ್ನೆಲ್ಲ ಕಾರ್ಯಗಳನ್ನು ನಿರ್ವಹಿಸಬೇಕಾಗಿದೆ. ಹಾನಗಲ್ಲ ಕುಮಾರಸ್ವಾಮಿಗಳು ತಮ್ಮ ಬದುಕಿನ ಪೂರ್ವಾಶ್ರಮದ ಅನುಭವ, ಶಿಕ್ಷಣ, ತರಬೇತಿಯಿಂದಲೂ, ತಮ್ಮ ಕಾಲದ ಪ್ರತಿಕೂಲ ಪರಿಣಾಮಗಳ ವಿದ್ಯಮಾನದ ನೆಲೆಯಿಂದ ಶಿವಯೋಗಮಂದಿರ ಸ್ಥಾಪಿಸಿದ್ದಾರೆ. ಅದಕ್ಕೆ ಯೋಗ್ಯ ನಿಯಮಾವಳಿಗಳನ್ನು ಆಡಳಿತ ವರ್ಗವನ್ನು ಸೂಚಿಸಿರುತ್ತಾರೆ ಹಾಗಂತ ಇವೇ ಸರ್ವಕಾಲಕ್ಕೂ ಇರಲೇಬೇಕೆಂಬ ನಿಯಮಗಳನ್ನು ವಿಧಿಸಿಲ್ಲ. ಹಾಗಿರುವಾಗ ಬದಲಾದ ಕಾಲ ಸಂದರ್ಭಕ್ಕೆ ನಿಯಮಗಳನ್ನು ಪರಿವರ್ತಿಸಿದರೆ ತಪ್ಪೇನು? ಎಂಬ ಸಮಾಜಮುಖಿ ಚಿಂತಕರ ಆಲೋಚನೆಗೆ ಸ್ವಾಸ್ಥ ಮನಸ್ಸುಗಳು ಕಿವಿಗೊಡಬೇಕಾಗಿದೆ. "ಪ್ರಸ್ತುತ ಶಿವಯೋಗಮಂದಿರ ಸಂಸ್ಥೆಯ ಘಟನಾವಳಿಯ ನಿಯಮ ಆರರ ಪ್ರಕಾರ ಶಿವಯೋಗಮಂದಿರದಲ್ಲಿ ಶಿಕ್ಷಣ ಪಡೆಯಲು

ಮಾಹೇಶ್ವರ ವಟುಗಳಿಗೆ ಮಾತ್ರ ಪ್ರವೇಶದ ಅವಕಾಶವಿದೆ. ಇತರ ಭಕ್ತವರ್ಗದ ಅರ್ಹ ವಟುಗಳಿಗೆ ಪ್ರವೇಶ ವಂಚಿತರಾಗಿದ್ದಾರೆ. ಕಾರಣ ಘಟನಾವಳಿ ತಿದ್ದುಪಡಿ ಮಾಡಿ ಈ ಕೊರತೆಯನ್ನು ಸರಿಪಡಿಸುವುದು ಸೂಕ್ತ ಎಂಬುದಾಗಿ ಬೆಳಗಾವಿ ಜಿಲ್ಲಾಘಟಕದ ಜಿಲ್ಲಾ ವೀರಶೈವ ಮಹಾಸಭೆಯ ಇತ್ತೀಚಿನ ಮನವಿ ಮಾಡಿದೆ.”[೧] ಇದಕ್ಕೆ ವಿಶ್ವಸ್ಥ ಮಂಡಳಿಯ ಒಪ್ಪಿಗೆ ಸೂಚಿಸಿ ಬದಲಾವಣೆಗೆ ಸ್ಪಂದಿಸಿದೆ. ಇಂತಹ ಹೊಸ ಚಿಂತನೆಗೆ ಸಕಾರಾತ್ಮಕವಾದ ವೇದಿಕೆಯನ್ನು ಮಂದಿರ ಕಲ್ಪಿಸಬೇಕಾಗಿದೆ. ಜೊತೆಗೆ ಉತ್ತಮ ಫಲಿತಗಳನ್ನು ಆಯ್ಕೆ ಮಾಡಿಕೊಳ್ಳಬೇಕಾಗಿದೆ.

ಈ ಹೊತ್ತು ಬಸವ ಚಳುವಳಿಯಲ್ಲಿ ವೀರಶೈವರು ಮಾತ್ರ ಗುರುತಿಸಿಕೊಳ್ಳುತ್ತಿದ್ದಾರೆ. ಇದರಿಂದ ಅನ್ಯ ಸಮುದಾಯದವರು ಆ ಚಳುವಳಿ ಸಮಸ್ತ ಮಾನವ ಕುಲದ ಏಳ್ಗೆಗಾಗಿ ರೂಪಗೊಂಡಿದ್ದು ಎಂಬುದನ್ನು ಮರೆತು ಬಸವಾದಿ ಪ್ರಥಮರನ್ನು ಅವರ ಅನುಯಾಯಿಗಳನ್ನು ಮತ್ತು ವೀರಶೈವ ಮತ ಮಾನ್ಯಗಳನ್ನು ಪ್ರಶ್ನಾರ್ಥಕವಾಗಿ ನೋಡುವ, ಟೀಕಿಸುವ ಪ್ರಮೇಯಗಳು ನಡೆದಿವೆ. ವೀರಶೈವ ಧರ್ಮದಲ್ಲಿ ಬಸವಾದಿ ಪ್ರಮಥರ ಬಹುಮುಖ್ಯ ಆಶಯವೆಂದರೆ, ಇಲ್ಲಿ ಕಾಯಕಗಳಿವೆಯೇ ಹೊರತು ಜಾತಿಗಳಿಲ್ಲ, ದೇವರಿದ್ದಾನೆಯೇ ಹೊರತು ದೇವರುಗಳಿಲ್ಲ”[೨] ಎಂಬುದು ವಿದ್ವಾಂಸರಾದ ಡಾ.ಎಂ.ಎಂ. ಕಲಬುರ್ಗಿಯವರ ಅಭಿಪ್ರಾಯವನ್ನು ಮೂಲಮಂತ್ರವನ್ನಗಿಸಿಕೊಳ್ಳಬೇಕಾಗಿದೆ. ಅಂದರೆ ಕಾಯಕತತ್ವ, ಮತ್ತು ಏಕದೇವೋಪಾಸನೆ ಎಂಬುದು ಈ ಧರ್ಮದ ಸೈದ್ಧಾಂತಿಕ ನೆಲೆ. ಈ ನೆಲೆಯನ್ನು ಬಹುತೇಕ ವೀರಶೈವ ಮಠಾಧಿಪತಿಗಳು, ಸಮಾಜ ಬಂಧುಗಳು, ಕಾಯಕ ಜೀವಿಗಳು, ಮರೆತಂತೆ ಕಾಣುತ್ತದೆ. ಬಸವ ಚಳುವಳಿಯಲ್ಲಿ ಗುರುತಿಸಿಕೊಂಡಿದ್ದ ಹಡಪದ ಕುರುಬ, ಮಡಿವಾಳ, ಚಮ್ಮಾರ, ಕುಂಬಾರ, ಮುಂತಾದ ವೃತ್ತಿ ನಿರತ ಸಮಾಜ ಬಂಧುಗಳು ಜಾತಿಸೂಚಕ ಹೆಸರಿನಲ್ಲಿ ಬಸವ ತತ್ವದಿಂದ ದೂರ ಉಳಿದಿದ್ದಾರೆ. ಈ ಎಲ್ಲಾ ಒಳಪಂಗಡಗಳನ್ನು ವೀರಶೈವ ಲಿಂಗಾಯತ ಎಂಬ ಏಕರೂಪ ಸಂಘಟನೆಯಲ್ಲಿ ಸಮಾವೇಶಗೊಳಿಸಬೇಕಾದ ಬಹುದೊಡ್ಡ ಸಾಮಾಜಿಕ, ಸಾಮುದಾಯಿಕ ಕಾಳಜಿ ಶಿವಯೋಗ ಮಂದಿರದ ಮೇಲಿದೆ. ಹೀಗಾದಾಗ ಮಾತ್ರ ಶ್ರೀ ಹಾನಗಲ್ಲ ಕುಮಾರಸ್ವಾಮಿಗಳು ಅರ್ಥೈಸಿಕೊಂಡಿದ್ದ ಬಸವ ತತ್ವದ ನಿಜದ ನೆಲೆಯನ್ನು ಸಾಕಾರಗೊಳಿಸಿದ ಕೀರ್ತಿ ಈ ಮಂದಿರಕ್ಕೆ ಸಲ್ಲಬೇಕಾಗಿದೆ.

ಶಿವಯೋಗ ಮಂದಿರದ ಆಡಳಿತಾಂಗವು ಸಮಾಜದೊಂದಿಗೆ ಪ್ರಜ್ಞಾ ಪೂರ್ವಕ ಸಂಬಂಧ ಇಟ್ಟುಕೊಂಡು ಕ್ರಿಯಾಯೋಜನೆ ರೂಪಿಸಿಕೊಳ್ಳುವ ಅಗತ್ಯವಿದೆ. ಕಾಲಕಾಲಕ್ಕೆ ಸದಸ್ಯರ ನವೀಕರಣ, ಶೈಕ್ಷಣಿಕ, ಚಟುವಟಿಕೆಗಳ ಅನುಷ್ಠಾನ ಸ್ವಧರ್ಮ ಸಿದ್ಧಾಂತಗಳ ಜೊತೆಗೆ ಅನ್ಯಧರ್ಮದ ಉತ್ತಮ ವಿಚಾರಗಳನ್ನು ರೂಪಿಸಿಕೊಳ್ಳುವುದರ ಜೊತೆಗೆ ಆಧುನಿಕ ಜ್ಞಾನ ಶಿಸ್ತುಗಳಿಗೆ ತನ್ನನ್ನು ತಾನು ತೆರೆದುಕೊಳ್ಳಬೇಕಾಗಿದೆ. ಒಂದು ವಿಶ್ವವಿದ್ಯಾಲಯದ ಮಾದರಿಯಲ್ಲಿ ರೂಪುಗೊಳ್ಳಬೇಕಾಗಿದೆ.

ಸಂಗೀತ, ಸಂಸ್ಕೃತ, ಯೋಗ, ಆಯುರ್ವೇದ ಮುಂತಾದ ಪ್ರಾಚೀನ ಅಧ್ಯಯನ ಶಿಸ್ತುಗಳನ್ನು ಪ್ರಸ್ತುತ ದಿನಮಾನಗಳಿಗೆ ಯೋಗ್ಯವಾಗುವಂತಹ ರೀತಿಯಲ್ಲಿ ಅಧ್ಯಯನಕ್ಕೆ ಅಳವಡಿಸಿಕೊಳ್ಳಬೇಕಾಗಿದೆ. ಈಗಿರುವ ಹಸ್ತಪ್ರತಿ ಮತ್ತು ಗ್ರಂಥ ಭಂಡಾರಗಳು ಕೇಂದ್ರೀಯ ಆಕರ ನೆಲೆಗಳಾಗಿವೆ. ಅವುಗಳನ್ನು ಸಂರಕ್ಷಿಸಿ ಅಧ್ಯಯನದ ಕಡೆಗೆ ಒತ್ತುಕೊಡಬೇಕಾಗಿದೆ. ದುರಸ್ತಿ ಇಲ್ಲದೇ ಮತ್ತು ಆಧುನಿಕ ಸುರಕ್ಷಣಾ ವಿಧಾನವಿಲ್ಲದೇ ಹುಳ ಹುಪ್ಪಡಿಯ ಪಾಲಾಗಬೇಕಾದುದನ್ನು ತಪ್ಪಿಸಬೇಕಾಗಿದೆ.ಆಧುನಿಕ ಸೌಲಭ್ಯದಿಂದ ಅಲ್ಲಿರುವ ಸಾಹಿತ್ಯವನ್ನು ಅನುಕ್ರಮವಾಗಿ ಹೊಂದಿಸಿ ಅಪೂರ್ವ ಮಾಹಿತಿ ಕೇಂದ್ರವನ್ನಾಗಿ ನಿರ್ಮಿಸಬೇಕಾಗಿದೆ.

ಶಿವಯೋಗ ಮಂದಿರಕ್ಕಾಗಿ ರಾವ್ ಬಹದ್ದೂರ ದೇವಿ ಹೊಸೂರ ಶೆಟ್ಟಿ, ಚೆನ್ನಬಸಪ್ಪ, ಹೊರಕೇರಿಯಂಥ ಸಮಾಜ ಚಿಂತಕರು ತನು-ಮನ-ಧನವನ್ನು ಅರ್ಪಿಸಿ ಬೆಳೆಸಿದ್ದಾರೆ. "ಸ್ಮಾರಕ ಚಂದ್ರಿಕೆಯಂತ ಕೃತಿಯ ಪ್ರಕಟಣೆಗಾಗಿ ಸರ್ವತರಹದ ಸಹಾಯವನ್ನಿತ್ತುದಕ್ಕಾಗಿ ಅವರಿಗೆ ತುಂಬಾ ಋಣಿಯಾಗಿದ್ದೇನೆ"[3] ಎಂಬುದಾಗಿ ಫ.ಬಿ. ಪುರಾಣಿಕರವರು ಅದರ ಮುನ್ನುಡಿಯಲ್ಲಿ ಬರೆದಿದ್ದಾರೆ. ಮಂದಿರಕ್ಕಾಗಿ ನೆಲವನ್ನು, ವಸ್ತುಗಳನ್ನು ದಾನವಾಗಿ ನೀಡಿದ ದಾಖಲೆಯ ಪಟ್ಟಿಯೇ ಆರಂಭಿಕ ಕಾಲಘಟ್ಟದ ವರದಿಗಳಲ್ಲಿ ಕಾಣಬಹುದಾಗಿದೆ. "ಕನ್ನಡದ ವಚನ ಪಿತಾಮಹ ಶ್ರೀ ಡಾ. ಫ.ಗು ಹಳಕಟ್ಟಿಯವರಿಗೆ ಶಿವಾನುಭವದ ಮೂಲಕ ಶರಣ ಸಾಹಿತ್ಯ ಧರ್ಮ ಪ್ರಸಾರ ಮಾಡಲು ಹಾನಗಲ್ಲ ಕುಮಾರ ಸ್ವಾಮಿಗಳು ಈ ನೆಲದಿಂದಲೇ ಪ್ರೇರಣೆ ನೀಡಿದರು"[4] ಎಂಬುದಾಗಿ ತಿಳಿದು ಬರುತ್ತದೆ. ಹೀಗೆ ಸುಧಾರಣೆಯ ಹಿನ್ನೆಲೆಯಲ್ಲಿ ಶಿವಯೋಗ ಮಂದಿರ ಮತ್ತೆ ಚೈತನ್ಯಶೀವಾಗಿ ಮತ್ತೊಂದು ಕಾಲಾವಧಿಯ ಚರಿತ್ರೆ ಸೃಷ್ಟಿಸಬೇಕಾಗಿದೆ.

ವೀರಶೈವ ಮಠಗಳಲ್ಲಿ ಮೊದಲಿನಿಂದಲೂ ಸಾಲಿಮಠಗಳಿಗೆ ಪ್ರಥಮ ಆದ್ಯತೆ. ಈ ಸಾಲಿಮಠಗಳು ವೃತ್ತಿ ನಿರತ ಶೈಕ್ಷಣಿಕ ಕೋರ್ಸುಗಳಂತೆ ಸಮಾಜಕ್ಕೆ ಬೇಕಾದ ವಸ್ತುಗಳನ್ನು ತಯಾರಿಸಿಕೊಡುವ ಸ್ಥಳಗಳಾಗಿದ್ದವು. ಶಿವಯೋಗ ಮಂದಿರವೂ ಕೂಡ ಇಂತಹ ಸಮಾಜಮುಖಿ, ಸಮುದಾಯದ ಅಗತ್ಯ ಸಾಮಾಗ್ರಿಗಳಾದ ವಿಭೂತಿ, ಕಂಥೆ, ಓಲೆ ಮೊದಲಾದವುಗಳನ್ನು ಸಿದ್ಧಪಡಿಸುವ ಕಾಯಕವನ್ನು ಆರಂಭಿಸಿತು. ಕಾಲಗಳು ಉರುಳಿದಂತೆ ಬೌದ್ಧಿಕ ವೃತ್ತಿಯನ್ನು, ಭೌತಿಕ ವೃತ್ತಿಗಳನ್ನು ಸೃಷ್ಟಿಸಿದ ಹೆಮ್ಮೆ ಮಂದಿರಕ್ಕಿದೆ. ಅಂದರೆ ಸಂಗೀತಗಾರರು, ನಾಟಕಕಾರರು, ಪ್ರವಚನಕಾರರು, ಸಂಶೋಧಕರಂತ ಬೌದ್ಧಿಕ ವೃತ್ತಿಗಾರರನ್ನು, ವಿಭೂತಿ, ಕರಡಿಕೆ, ನೂಲುಗಾರಿಕೆ, ಕೃಷಿ, ಗೋ ಸಂರಕ್ಷಣೆಯಂತ ಭೌತಿಕ ವೃತ್ತಿಗಾರರು ರೂಪಗೊಂಡರು. ಹೀಗೆ ಶಿವಯೋಗ ಮಂದಿರ ಅವುಗಳ ಪುನರ್ ಅನುಷ್ಠಾನಗೊಳಿಸುವ ಮೂಲಕ ಕಾಯಕ ನಗರವನ್ನು ಶಿವಯೋಗ ಮಂದಿರ ಸಂಸ್ಥೆಯ ವತಿಯಿಂದ ನಿರ್ಮಾಣ ಮಾಡಬೇಕಾಗಿದೆ. ಇಂತಹ ಸಾಧಕರು ತಮ್ಮ ಸಾಧನೆ ಸಿದ್ಧಿಗಳಿಂದ ಮಹಾಸ್ವಾಮಿಗಳಾಗಿ ಸಮಾಜಸೇವೆಗೈದುದು ಚರಿತ್ರೆಯಾಗಿದೆ. "ಕಾಲದ

ಓಟದಲ್ಲಿ ಶಿವಯೋಗ ಮಂದಿರ ಹನ್ನೆರಡನೆ ಶತಮಾನದ ಶಿವಶರಣರ ಕಲ್ಯಾಣ ರಾಜ್ಯದ ಕಲ್ಪನೆ ಮತ್ತು ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಕಲ್ಪನೆಗಳನ್ನು ಮೈಗೂಡಿಸಿಕೊಂಡಿತ್ತು."[೫] ಎಂಬುದಾಗಿ ಶ್ರೀ ಶಿವರಾತ್ರಿದೇಶಿ ಕೇಂದ್ರ ಮಹಾಸ್ವಾಮಿಗಳು ಸುಕುಮಾರ ದೀಪ್ತಿ ಸ್ಮರಣ ಸಂಚಿಕೆಯ ಶುಭ ಸಂದೇಶದಲ್ಲಿ ಬರೆದಿದ್ದಾರೆ.

ಒಂದು ಶತಮಾನದಷ್ಟು ದೀರ್ಘ ಇತಿಹಾಸ ಹೊಂದಿದ ಶಿವಯೋಗಮಂದಿರದ ಬೆಳವಣಿಗೆ ವೀರಶೈವ ಲಿಂಗಾಯತದಂತ ದೊಡ್ಡ ಜನಾಂಗಕ್ಕೆ ತಕ್ಕುದಾಗಿಲ್ಲ. ಶಿವಯೋಗಮಂದಿರ ಚರಿತ್ರೆಯ ಪೂರ್ವಾರ್ದದಲ್ಲಿ ಪಡೆದುಕೊಂಡ ಪ್ರಗತಿಯ ವೇಗ, ಸಾಧಿಸಿದ ಸಾಧನೆ ಐತಿಹಾಸಿಕವಾಗಿದೆ. ಉತ್ತರಾರ್ದದಲ್ಲಿ ಅದು ಹೇಳಿಕೊಳ್ಳುವಂತ ಕಾರ್ಯಗಳನ್ನು ಮಾಡಿಲ್ಲ. "ಊರ ಮುಂದೆ ಹಾಲಹಳ್ಳ ಹರಿಯುತ್ತಿರಲು ಬೇರೆ ಬಾವಿಯ ತೋಡಿ ಉಪ್ಪುನೀರನುಂಬುವ ಸ್ಥಿತಿ ವೀರಶೈವ ಲಿಂಗಾಯತ ಸಮಾಜದ್ದಾಗಬಾರದು ಎಂಬ ಸತ್ಯ ಶ್ರೀ ಕುಮಾರಸ್ವಾಮಿಗಳದ್ದಾಗಿತ್ತು. ಸಮಾಜವು ಶ್ರೀಗಳವರು ತೋರಿಸಿದ ಗುರುಪಥದಲ್ಲಿ ನಡೆದು. ಶಿವಪಥಗಾಮಿಗಳಾಗಬೇಕು"[೬] ಎಂಬುದಾಗಿ ಉಜ್ವಲ ಇತಿಹಾಸವುಳ್ಳ ಶಿವಯೋಗ ಮಂದಿರದ ಕುರಿತಾಗಿ ಶ್ರೀ ಶಿವಕುಮಾರಸ್ವಾಮಿಗಳು ಸಿದ್ಧಗಂಗಾಮಠ ಇವರು ಶಿವಯೋಗ ಮಂದಿರದ ಬೆಳವಣಿಗೆಗೆ ಮಾರ್ಗಸೂಚಿ ನುಡಿಗಳಾಗಿ ಸುಕುಮಾರ ದೀಪ್ತಿ ಪುಸ್ತಕದ ಶುಭ ಸಂದೇಶದಲ್ಲಿ ಬರೆಯುತ್ತಾರೆ. ಈ ಹಿನ್ನೆಲೆಯಲ್ಲಿ ಶಿವಯೋಗ ಮಂದಿರ ಮುಂದಿನ ದಿನಮಾನದಲ್ಲಿ ಕಾಲಕ್ಕೆ ತಕ್ಕಂತೆ ದೇಶ, ಭಾಷೆ, ಸಂಸ್ಕೃತಿಗೆ ಬದಲಾದ ಸ್ಥಿತಿಗತಿಗೆ ಸಮಾಜಮುಖಿ ಚಿಂತನೆಗಳೆಡೆ ಸಾಗಬೇಕಾಗಿದೆ.

ಶಿವಯೋಗ ಮಂದಿರ ಆಧ್ಯಾತ್ಮಿಕ ವಿಶ್ವವಿದ್ಯಾಲಯವಾಗಿ ಮುಂದಿನ ಬೆಳವಣಿಗೆಯನ್ನು ಕಾಣಬೇಕಾಗಿದೆ. ಅದಕ್ಕಾಗಿ ಈ ಪುಣ್ಯ ಪರಿಸರದ ಪುನರ್ ನಿರ್ಮಾಣದೊಂದಿಗೆ, ನವೀಕರಣದ ಕಾರ್ಯದೊಂದಿಗೆ ಅದರಲ್ಲಿಯೂ ಮುಖ್ಯವಾಗಿ ವೀರಶೈವ ಲಿಂಗಾಯತ ಹಾಗೂ ಒಳಪಂಗಡದ ವಿಲೀನತೆ ಆಗಬೇಕಾಗಿದೆ. ಲಿಂಗಾಯತ ಧರ್ಮ ಹಿಂದೂ ಧರ್ಮದ ಭಾಗವೇ, ಅದೊಂದು ಪ್ರತ್ಯೇಕ ಧರ್ಮವೇ ಎಂಬ ವಿಚಾರದ ಚರ್ಚೆ ಕೈಬಿಡಬೇಕು. "ವೀರಶೈವ ಲಿಂಗಾಯತರು ಹಿಂದುಗಳಲ್ಲ, ಹಿಂದೂ ಧರ್ಮವನ್ನು ನಾವು ಒಪ್ಪುವುದೇ ಇಲ್ಲ, ನಮ್ಮದೇ ಪ್ರತ್ಯೇಕ ಧರ್ಮ, ಆದ್ದರಿಂದ ನಮ್ಮನ್ನು ಧಾರ್ಮಿಕ ಅಲ್ಪಸಂಖ್ಯಾತರು ಎಂದು ಪರಿಗಣಿಸುವ ಅಗತ್ಯವಿದೆ. ಜನಗಣತಿ ನಮೂನೆಯಲ್ಲಿ ವೀರಶೈವ ಧರ್ಮಕ್ಕೆ ಪ್ರತ್ಯೇಕ ಕೋಡ್ ನೀಡುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗಿದೆ"[೭] ಇಂತಹ ಸಮಾಜ ವಿಘಟನೆಯ ವಿಚಾರಗಳನ್ನು ಕೈ ಬಿಡಬೇಕಾಗಿದೆ. ಇದರಿಂದಾಗಿ ವೀರಶೈವ ಲಿಂಗಾಯತ ಪ್ರಶ್ನೆ, ಹಿಂದೂ ಧರ್ಮದ ಭಾಗವೇ ಅಲ್ಲವೆಂಬ ಪ್ರಶ್ನೆ, ಗುರು ವಿರಕ್ತರ ಪ್ರಶ್ನೆ, ಒಳ ಪಂಗಡದ ಪ್ರತ್ಯೇಕತೆಯ ಪ್ರಶ್ನೆ, ಹೀಗೆ ಅನೇಕ ವಿವಾದ, ವಿಘಟನೆಗೆ ಆಸ್ಪದ ನೀಡದೇ ಹೊಸ ಹೊಸ ಸಮಾಜಮುಖಿ ಭಾಂದವ್ಯದ ಚಿಂತನೆಯನ್ನು

ಮೊದಲು ಮಾಡಬೇಕಾಗಿದೆ. ಇದರೊಂದಿಗೆ ಪೀಠಕ್ಕೆ ಅಧಿಪತಿಯಾಗುವ ಸ್ವಾಮಿಗಳಿಗೆ ಅರ್ಹತೆಗಳು ಬೇಕೆ-ಬೇಡವೇ ಎಂಬ ಚರ್ಚೆಗೆ ಬೇಕು ಎಂಬ ಉತ್ತರವೇ ಪ್ರಬಲವಾಗಿರುವಾಗ ಲಿಂಗಾಯತರೇ ಏಕೆ ಅಧಿಕಾರಕ್ಕೆ ಅರ್ಹರು ಎಂಬ ವಿರೋಧವೂ ಇರುವಾಗ ಶಿವಯೋಗ ಮಂದಿರದ ಪ್ರವೇಶಕ್ಕೆ ಇರುವ ನಿರ್ಬಂಧನೆಗಳನ್ನು ಕಾಲಕ್ಕೆ ತಕ್ಕಂತೆ ಬದಲಿಸಬೇಕಾಗಿದೆ.

ಮಠವೊಂದು ಹಲವಾರು ಶೈಕ್ಷಣಿಕ ಅಂಗಸಂಸ್ಥೆಗಳನ್ನು ಸಮಾಜದ ಶ್ರೀಸಾಮಾನ್ಯನಿಗಾಗಿ ತರೆಯುತ್ತಿರುವಾಗ ಶಿವಯೋಗಿಗಳಂತ ಸಾಧಕರ ವಿದ್ಯಾಕೇಂದ್ರವೇಕೆ ವಿಶ್ವವಿದ್ಯಾಲಯವಾಗಬಾರದು.? ಹಾಗಾಗಿ ಮಂದಿರದ ವತಿಯಿಂದ ಬೌದ್ಧಿಕ, ಭೌತಿಕ ವಿದ್ಯಾಶಾಖೆಗಳು ಸ್ಥಾಪನೆಯಾಗಬೇಕಾಗಿದೆ. ಮಠಾಧಿಪತಿ ಕೇವಲ ಮಠವೊಂದಕ್ಕೆ ಅಧಿಕಾರಿಯಾಗದೇ ಸಮಾಜವೊಂದರ ಮಾರ್ಗದರ್ಶಿಯಾಗಬೇಕಾಗಿದೆ. ಹಾಗಾಗಿ ಮಂದಿರದ ಶಿಕ್ಷಣ ಕ್ರಮವು ರಾಮಕೃಷ್ಣ ಮಿಷನ್ ಹಾಗೂ ಕ್ರೈಸ್ತ ಮಿಶನರಿ ಸನ್ಯಾಸಿಗಳಿಗೆ ದೊರೆಯುವ ಬಹುಭಾಷಾ, ಬಹುಧರ್ಮ, ಬಹು ಸಂಸ್ಕೃತಿ ಮಾದರಿಯ ಪಠ್ಯಕ್ರಮ, ಪಾಠಕ್ರಮ, ಪರೀಕ್ಷಾಕ್ರಮ ಇಲ್ಲಿ ಅಭ್ಯಾಸ ಮಾಡತಕ್ಕ ಸಾಧಕರಿಗೆ ದೊರೆಯುವಂತಾಗಬೇಕಾಗಿದೆ. ಜೊತೆಗೆ ಇದು ಅಗತ್ಯವೂ, ಅನಿವಾರ್ಯವೂ ಆದ ಬೇಡಿಕೆಯೂ ಆಗಿದೆ.

೧೯೭೫ರಲ್ಲಿ ಆರಂಭವಾದ ತೋಂಟದಾರ್ಯ ಮಠದ ವೀರಶೈವ ಅಧ್ಯಯನ ಸಂಸ್ಥೆಯು "ವೀರಶೈವ ಹಸ್ತಪ್ರತಿ, ಪ್ರಾಚ್ಯ ವಸ್ತುಗಳ ಸಂಗ್ರಹ ಮತ್ತು ಸಂರಕ್ಷಣೆ, ವೀರಶೈವ ಪುರಾತನ, ನೂತನ ಕೃತಿಗಳ ಗ್ರಂಥ ಭಂಡಾರ ಸ್ಥಾಪನೆ, ವೀರಶೈವ ಪುರಾತನ ಸಾಹಿತ್ಯ ರತ್ನಮಾಲೆ ಪ್ರಕಟಣೆ, ವೀರಶೈವ ನೂತನ ಸಾಹಿತ್ಯ ರತ್ನಮಾಲೆ ಪ್ರಕಟಣೆ, ವೀರಶೈವ ಅನುವಾದ ಸಾಹಿತ್ಯ ರತ್ನಮಾಲೆ, ವೀರಶೈವ ಪುಣ್ಯ ಪುರುಷ ಸಾಹಿತ್ಯ ಮಾಲೆ"[೮] ಎನ್ನುವ ಆರು ಬಗೆಯ ಪ್ರಕಟಣೆ ಕಾರ್ಯ ಮಾಡುತ್ತಿದೆ. ಇಂತಹ ನೂತನ ಕಾರ್ಯಗಳು ಶಿವಯೋಗ ಮಂದಿರದ ವತಿಯಿಂದಾಗಬೇಕಾಗಿದೆ. ಏಕೆಂದರೆ ವಿದ್ವಾಂಸರಿಗೆ, ಸಂಶೋಧಕರಿಗೆ,ಕಾಮಧೇನು, ಕಲ್ಪವೃಕ್ಷದಂತಿದೆ ಇಲ್ಲಿನ ಗ್ರಂಥಾಲಯ.

ಚೆನ್ನಮಲ್ಲಿಕಾರ್ಜುನ, ಶಿವಲಿಂಗ ಶಾಸ್ತ್ರಿಗಳು, ಎ.ಎಲ್.ಹಿರೇಮಠ, ಜಿ.ಎಮ್ ಉಮಾಪತಿ ಶಾಸ್ತ್ರಿಗಳು, ಫ.ಗು ಹಳಕಟ್ಟಿ, ಸಿ.ಸಿ ಬಸವನಾಳ, ಚೆನ್ನಬಸಪ್ಪ, ಆರ್.ಸಿ. ಹಿರೇಮಠರಂತಹ ಸಂಶೋಧಕರು ಇಲ್ಲಿನ ಹಸ್ತಪ್ರತಿ ತಾಲೆಗರಿ, ತಾಡೋಲೆ, ಕೋರಿಕಾಗದವನ್ನು ಶೋಧಿಸಿ ಹೊಸ ಹೊಸ ವಿಚಾರವನ್ನು ಸಮಾಜ ಚಿಂತಕರಿಗೆ ಒದಗಿಸಿದ್ದಾರೆ. ಸುಕುಮಾರ ಪತ್ರಿಕೆಯಲ್ಲಿ ಅಪ್ರಕಟಿತವಾದ "ಹಮ್ಮೀರ ಕಾವ್ಯ (ರಾಜೇಂದ್ರ ವಿಜಯ) ವನ್ನು ಡಾ. ಎಂ.ಎಸ್. ಸುಂಕಾಪುರ ಅವರ ಸಂಪಾದಕತ್ವದಲ್ಲಿ ಪ್ರಕಾಶನ ಮಾಡಿದ್ದಾರೆಂದು"[೯] ಉಮಾಪತಿ ಶಾಸ್ತ್ರಿಗಳು ತಿಳಿಸುತ್ತಾರೆ. ಹೀಗಿರುವಾಗ

ಮತ್ತೆ ಇತಿಹಾಸದ ಪುನರಾವರ್ತನೆ ಏಕಾಗಬಾರದು? ಇದಕ್ಕಾಗಿ ಮಂದಿರದಲ್ಲಿ ವಸತಿ, ತಂತ್ರಜ್ಞಾನ, ಗಣಕೀಕರಣದಂತ ಸೌಲಭ್ಯವನ್ನು ಸಂಶೋಧಕರಿಗಾಗಿ ಆರಂಭಿಸಬೇಕಾಗಿದೆ.

ಶಿವಯೋಗಮಂದಿರ ಆಧ್ಯಾತ್ಮದ ಪಾಠಶಾಲೆಯಾಗಿರುವುದರಿಂದ ಇಲ್ಲಿ ಅಂತಹ ಅವಶ್ಯಕತೆಯುಳ್ಳ ತರಗತಿಯಾಗಲಿ, ಪರಿಸರವಾಗಲಿ, ಪರಿಕರವಾಗಲಿ ಸಂಪೂರ್ಣವಾಗಿ ದೊರೆಯುತ್ತಿಲ್ಲ. ಆ ಕಾರಣವಾಗಿ ನಿರ್ಮಾಣದ ಪುನರ್ ರಚನೆಯ ಈ ಸಂದರ್ಭದಲ್ಲಿ ಶಾಂತಿನೀಕೇತನ ಮಾದರಿಯ ತರಗತಿ ನಿರ್ಮಾಣ, ಧ್ಯಾನಕ್ಕಾಗಿ ಸೂಕ್ತ ವನಗಳ ನಿರ್ಮಾಣ, ವಟು ಸಾಧಕರ ವಿಶ್ರಾಂತಿ ಗೃಹದಲ್ಲಿ ಪೂಜಾಕಾಲಕ್ಕೂ, ಅಭ್ಯಾಸ ಕಾಲಕ್ಕೂ ಅಗತ್ಯವಾದ ಮಾಹಿತಿಗಾಗಿ ಸೌಲಭ್ಯಗಳುಳ್ಳ ಪ್ರತ್ಯೇಕ ಕೊಠಡಿಗಳನ್ನು ಒದಗಿಸಬೇಕಾಗಿದೆ. ಉನ್ನತ ಸಾಧನೆಗಾಗಿ ಹೊರಗಿನ ಭಾಷೆ, ಧರ್ಮದ ವಿಚಾರವನ್ನು ಅರಿಯಲು ಅಗತ್ಯವಾದ ಪುಸ್ತಕಗಳು, ಮಾಹಿತಿಗಳು ಇಲ್ಲಿನ ಗ್ರಂಥಾಲಯಕ್ಕೆ ಹರಿದುಬರಬೇಕು. ಒಂದು ಕಾಲಕ್ಕೆ ಇಲ್ಲಿಗೆ ನಾಡಿನ ಎಲ್ಲ ಭಾಗದ ನಿಯತಕಾಲಿಕೆಗಳು, ಪುಸ್ತಕಗಳು ಬಂದ ದಾಖಲೆಗಳಿದ್ದು ವಾರ್ಷಿಕ ಸಾವಿರಾರು ರೂಪಾಯಿಗಳ ವಂತಿಕೆ ಕೊಟ್ಟ ಉದಾಹರಣೆಗಳಿವೆ. ಆದರೆ ಇಂದಿಗೆ ಅವುಗಳ ಸಂಖ್ಯೆ ವಿರಳವಾಗುತ್ತಾ ಸಾಗಿದೆ.

ಇಂದು ಸರ್ಕಾರವು ಮಠಗಳಿಗಾಗಿ ಸಾಕಷ್ಟು ಅನುದಾನ ನೀಡಿದೆ, ನೀಡುತ್ತಲಿದೆ. ಹಾಗಿರುವಾಗ ಸಂಸ್ಥೆಯು ಅದನ್ನು ಶೈಕ್ಷಣಿಕ ಉದ್ದೇಶಕ್ಕಾಗಿಯೇ ಹೆಚ್ಚು ವಿನಿಯೋಗಿಸಬೇಕಾಗಿದೆ. ಹಲವಾರು ವಿದ್ಯಾಸಂಸ್ಥೆಗಳಿಗೆ ತಮ್ಮದೇ ವಿಶ್ವವಿದ್ಯಾಲಯ ಸ್ಥಾಪಿಸುವ ಅವಕಾಶವನ್ನು ಸರ್ಕಾರ ಕೊಟ್ಟಿರುವಾಗ ಶಿವಯೋಗ ಮಂದಿರವನ್ನೇಕೆ ಒಂದು ವಿಶ್ವವಿದ್ಯಾಲಯವಾಗಿಸಬಾರದು? ಅದಕ್ಕಾಗಿ ಸಂಗೀತ ಶಾಲೆಯನ್ನು, ಸಂಶೋಧನಾ ಕೇಂದ್ರಗಳನ್ನು, ವೃತ್ತಿ ತರಬೇತಿ ಶಾಲೆಗಳನ್ನು ಈ ವಿಶ್ವವಿದ್ಯಾಲಯದಡಿ ತರಬಾರದೇಕೆ? ಇಂಥ ಹೊಸ ಹೊಸ ಶಾಖೆಯಿಂದ ಮಂದಿರವನ್ನು ವಿಶ್ವವಿದ್ಯಾಲಯದ ಮಟ್ಟಕ್ಕೇರಿಸಬೇಕಾಗಿದೆ.

ಹೀಗೆ ಆಧುನಿಕತೆಯತ್ತ ಮುಖ ಮಾಡಿಕೊಂಡು ವಾಸ್ತವಿಕ ಸ್ಥಿತಿಗತಿಗಳ ಬೀಸುನೋಟಗಳನ್ನು ಈ ಅಧ್ಯಾಯನದ ಮೂಲಕ ನೀಡಲಾಗಿದೆ. ಇವು ಶಿವಯೋಗ ಮಂದಿರದ ಮುಂದಿನ ಬೆಳವಣಿಗೆಯ ಅಂಶಗಳಾಗಿದ್ದು, ಹೆಚ್ಚು ಅಗತ್ಯವೂ. ತ್ವರಿತವೂ ಆಗಿರುತ್ತದೆ. ಇವುಗಳ ಕುರಿತಾದ ಅರ್ಥಪೂರ್ಣ, ಆರೋಗ್ಯಪೂರ್ಣ ಚರ್ಚೆಗಳು ಆಗುವುದರ ಮೂಲಕ ವಿಶ್ವಸ್ಥ ಮಂಡಳಿ ಅವುಗಳ ಅನುಷ್ಠಾನಕ್ಕೆ ಮುಂದಾಗಬೇಕಾಗಿದೆ. ಏಕೆಂದರೆ "ಆರ್ಯ ಸಂಸ್ಕೃತಿಗೂ ಕರ್ನಾಟಕಕ್ಕೂ, ವೀರಶೈವ ಲಿಂಗಾಯತ ಧರ್ಮಕ್ಕೂ ಈ ಸಂಸ್ಥೆಯು ಅಮೂಲ್ಯ ಕೊಡುಗೆ ನೀಡಿದೆ. ಈಗ ಇದರ ಬೆಲೆ ತಿಳಿದುಬರದಿದ್ದರೂ ಕಾಲ ಕಳೆದ ಮೇಲೆ ಭವಿಷ್ಯತ್ಕಾಲಕ್ಕೆ ಇದರ ಅಪೂರ್ವ

ಸೇವೆಯನ್ನು ನೆನಸಿ ನೆನಸಿ ಹಾಡಿ ಹರಸಿತು"[೧೦] ಎಂದು ಎಪ್ಪತ್ತಾರು ವರ್ಷಗಳ ಹಿಂದೆ ವರಕವಿ ಬೇಂದ್ರೆಯವರು ಉದ್ಗರಿಸಿ ಸಂದರ್ಶಕರ ಪುಸ್ತಕದಲ್ಲಿ ಬರೆದಿದ್ದಾರೆ. ಅವರ ಈ ಮಾತುಗಳು ಅರ್ಥಪೂರ್ಣವಾಗಿಸುವ ಸದವಕಾಶ ಒದಗಿ ಬಂದಿದೆ. ವಿದೇಶಿಯರು ಭಾರತೀಯ ಸಂಪ್ರದಾಯ, ಸಂಸ್ಕೃತಿಯೆಡೆ ಮುಖ ಮಾಡಿ ತಂಡೋಪ ತಂಡವಾಗಿ ಆಗಮಿಸುತ್ತಿರುವಾಗ ಅವರಿಗೆ ಸೂಕ್ತ ಮಾಹಿತಿ ಸಂಸ್ಕಾರ ಒದಗಿಸುವ ಹೊಣೆ ಮಠಾಧಿಪತಿಗಳ ಮೇಲಿದೆ. ಈ ಕಾರಣವಾಗಿ ಸನ್ಯಾಸಿಗಳು ಸಿದ್ಧರಾಗಬೇಕಾಗಿದೆ. ಇಲ್ಲವಾದಲ್ಲಿ ಕಾವಿಯು ತನ್ನ ಸಂಪೂರ್ಣ ಪಾವಿತ್ರ್ಯತೆಯನ್ನು ಕಳೆದುಕೊಳ್ಳುವ ಕಾಲ ದೂರವೇನೂ ಇಲ್ಲ. ಹೀಗಿರುವಾಗ ಶಿವಯೋಗ ಮಂದಿರ ಈ ನಿಟ್ಟಿನಲ್ಲಿ ಆಲೋಚಿಸಬೇಕಾಗಿದೆ.

ಅಡಿ ಟಿಪ್ಪಣಿಗಳು

೧. ಲಿಂಗಾಯತರ ಆಧುನಿಕ ಸಂದರ್ಭಗಳು, ಪು-೭೨

೨. ಪ್ರಜಾವಾಣಿ ಸುದ್ದಿ, ೨೯.೭.೨೦೧-ಪು-೪

೩. ಸ್ಮಾರಕ ಚಂದ್ರಿಕೆ ಮುನ್ನುಡಿ, ಪು-೧

೪. ಸುಕುಮಾರ, ಅಕ್ಟೋಬರ್ ೧೯೬೭-ಪು-೨೫

೫. ಸುಕುಮಾರ ದೀಪ್ತಿ, ಪು-೨

೬. ಅದೇ-ಪು-೩

೭. ಪ್ರಜಾವಾಣಿ ಸುದ್ದಿ, ೧೯.೧.೨೦೦೦-ಪು-೪

೮. ಬೆಳಗಿನೊಳಗಣ ಬೆಳಗು, ಪು-೪೪೫

೯. ದಾಸೋಹ ಸಿರಿ, ಪು-೪೩೧

೧೦. ಶಿವಯೋಗಮಂದಿರದ ಸಂದರ್ಶಕರ ಪುಸ್ತಕ, ೨೫.೧೨.೧೯೨೦

ಅಧ್ಯಾಯ–ಒಂಬತ್ತು

ಸಮಾರೋಪ

ಅಧ್ಯಾಯ - ಒಂಬತ್ತು

ಸಮಾರೋಪ

ಹಾನಗಲ್ಲ ಶ್ರೀಕುಮಾರಸ್ವಾಮಿಗಳ ದೂರಗಾಮಿ ಆಲೋಚನೆಯಿಂದ ಸ್ಥಾಪಿತವಾದ ಶ್ರೀ ಶಿವಯೋಗಮಂದಿರ ಸಂಸ್ಥೆ ಬಹುತೇಕ ಕರ್ನಾಟಕ ಲಿಂಗಾಯತ ಮಠಗಳಿಗೆ ಮಹಾಮಠವಾಗಿ ಪರಿಣಮಿಸಿದೆ. ಇಪ್ಪತ್ತನೇ ಶತಮಾನದ ಅವಶ್ಯಕತೆಗಳಲ್ಲಿ ಒಂದಾದ ಲಿಂಗಾಯತ ಸಮಾಜದ ಏಳ್ಗೆ, ಶಿಕ್ಷಣ ಮತ್ತು ಸಂಸ್ಕೃತಿಯ ಪುನರುತ್ಥಾನಕ್ಕಾಗಿ ದುಡಿದ ಮಹನೀಯರಲ್ಲಿ ಹಾನಗಲ್ಲ ಕುಮಾರಸ್ವಾಮಿಗಳು ಒಬ್ಬರು. ಮೂಲತಃ ಹಾನಗಲ್ಲ ವಿರಕ್ತಮಠದ ಅಧಿಪತಿಗಳಾಗಿದ್ದ ಶ್ರೀಗಳು ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಯ ಕೇಂದ್ರವಾಗಿದ್ದ ಹಾನಗಲ್ಲ ಮಠದ ಪರಂಪರೆಯಿಂದ ಬಂದವರು. ಅಂದರೆ ಆ ವೇಳೆಗಾಗಲೇ ಹಾನಗಲ್ಲು ಮಠದಿಂದ ಕುಮಾರ ವಿಭು ಶ್ರೀಗಳು ಭಿಕ್ಷುಕ ಮಹೇಶ ವಿಲಾಸ ಬರೆದಿದ್ದಾರೆ. ಹೀಗೆ ಸತ್‌ಸಂಪ್ರದಾಯವುಳ್ಳ ಮಠದಿಂದ ಬಂದ ಕುಮಾರಸ್ವಾಮಿಗಳಿಗೆ ಸಮಾಜಕೇಂದ್ರಿತವಾಗಿ ಧರ್ಮವನ್ನು ದುಡಿಸಿಕೊಳ್ಳಬೇಕೆಂಬ ಹಂಬವುಂಟಾಯಿತು. ಇದೇ ಸಂದರ್ಭದಲ್ಲಿ ಬಾಗಲಕೋಟೆಯ ವೀರವೈರಾಗ್ಯದ ಮಲ್ಲಣಾರ್ಯರು ಶ್ರೀಗಳಲ್ಲಿಗೆ ಬಂದು ಸಮಾಜವನ್ನು ಉದ್ಧರಿಸುವ ಕುರಿತು ಚರ್ಚಿಸಿ ಮಠಗಳು ಸಮಾಜದ ಸಾಂಸ್ಕೃತಿಕ ಕೇಂದ್ರಗಳು ಈ ಕೇಂದ್ರಗಳ ಏಳಿಗೆ, ಅಲ್ಲಿಯ ಗುರುಗಳ, ಪೀಠಾಧಿಪತಿಗಳ ಕೈಯಲ್ಲಿದೆ. ಪೀಠಾಧಿಕಾರಿಗಳನ್ನು ವಟುಗಳಿರುವಾಗಲೇ ತಿದ್ದಿ, ತೀಡಿ ಅವರಿಗೆ ಯೋಗ ಹಾಗೂ ಧರ್ಮಪರ ಶಿಕ್ಷಣ ಕೊಡಬೇಕೆಂದು ಯೋಚಿಸಿದರು. ಕ್ರಿ.ಶ. ೧೯೦೪ರಲ್ಲಿ ಹಾನಗಲ್ಲ ಶ್ರೀಗಳಿಂದಲೇ ಸ್ಥಾಪಿತವಾಗಿದ್ದ ಅಖಿಲಭಾರತ ವೀರಶೈವ ಮಹಾಸಭೆಯು ಸಮಾಜದಲ್ಲಿ ಜಾಗೃತ ಮೂಡಿಸಲು ಅನೇಕ ಚಟುವಟಿಕೆಯಲ್ಲಿ ತೊಡಗಿತ್ತು. ಈ ಮಹಾಸಭೆಯ ಅಧಿವೇಶನ ಕ್ರಿ.ಶ. ೧೯೦೮ರಲ್ಲಿ ಬಾಗಲಕೋಟೆಯಲ್ಲಿ ಶರಣಮಲ್ಲಪ್ಪ ಬಸಪ್ಪ ವಾರದ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಈ ಅಧಿವೇಶನದಲ್ಲಿ ವೈರಾಗ್ಯ ಮಲ್ಲಣ್ಣಾರ್ಯರ ಸಂಕಲ್ಪದ ಕೂಸಾಗಿದ್ದ ಶಿವಯೋಗಮಂದಿರ

ಸ್ಥಾಪಿಸಬೇಕೆಂದು ತೀರ್ಮಾನಿಸಲಾಯಿತು. ಆ ತೀರ್ಮಾನದಂತೆ ಶ್ರೀಹಾನಗಲ್ಲ ಕುಮಾರಸ್ವಾಮಿಗಳ ಕಾರ್ಯಾಚರಣೆಯಿಂದ ಮಲಪ್ರಭೆಯ ದಂಡೆಯಲ್ಲಿ ೦೭.೦೨.೧೯೦೯ರಲ್ಲಿ ಸ್ಥಾಪನೆಯಾದ ಮಹಾಸಂಸ್ಥೆಯೇ "ಶಿವಯೋಗಮಂದಿರ".

ಶಿವಯೋಗಮಂದಿರದ ಸ್ಥಾಪನೆಯ ಉದ್ದೇಶ ಸಮಾಜದ ಅಭಿವೃದ್ಧಿ, ಸಮಾಜದಲ್ಲಿ ಸಮಕಾಲೀನ ಸಮಸ್ಯೆಗಳು ತಲೆದೋರಿದ್ದವು. ಪ್ರಜ್ಞಾವಂತ ನಾಗರೀಕ ಸಮಾಜವನ್ನು ನಿರ್ಮಾಣ ಮಾಡಲು ಧಾರ್ಮಿಕ ಶಿಕ್ಷಣದ ಅಗತ್ಯವಿತ್ತು. ಹನ್ನೆರಡನೇ ಶತಮಾನದ ಶಿವಶರಣರ ಲೋಕಕಲ್ಯಾಣದ ಸಿದ್ಧಾಂತವನ್ನು ಶಿಕ್ಷಣದ ನೀತಿಯಾಗಿ ರೂಪಿಸಿ ಧಾರ್ಮಿಕ ಜಾಗೃತಿಯ ಹಿನ್ನೆಲೆಯಲ್ಲಿ ಸಾಮಾಜಿಕ ಪುನರುಜ್ಜೀವನವನ್ನು ಮಾಡುವ ಸಂಕಲ್ಪವನ್ನು ಈಡೇರಿಸುವ ಉದ್ದೇಶದಿಂದ ಶಿವಯೋಗಮಂದಿರ ಸ್ಥಾಪನೆಗೊಂಡಿತು.

ವೀರಶೈವ ವ್ರತದ ಲಿಂಗಾಧಾರಣೆ, ಶಿವಪೂಜೆ, ಶಾಸ್ತ್ರಾಧ್ಯಾಯನ, ದೀಕ್ಷಾವಿಧಿ ಮುಂತಾದ ಧಾರ್ಮಿಕ ವಿಧಿವಿಧಾನಗಳನ್ನು ಕಟ್ಟುನಿಟ್ಟಾಗಿ ಆಚರಣೆಗೆ ತರುವ ದೃಷ್ಟಿಯಿಂದ ಧರ್ಮಶಾಸ್ತ್ರ ಗ್ರಂಥಗಳನ್ನು ಅನುವಾದಿಸುವ, ಪ್ರಕಟಿಸುವ ಉದ್ದೇಶದಿಂದ ಧಾರ್ಮಿಕ ಶಿಕ್ಷಣ ನೀತಿಯನ್ನು ಹಾಕಿಕೊಂಡಿತು. ಇದರ ಜೊತೆಗೆ ಆ ಸಂದರ್ಭದಲ್ಲಿ ಪ್ರಚಲಿತವಿದ್ದ ರಾಷ್ಟ್ರೀಯ ಸ್ವಾತಂತ್ರ್ಯ, ನಾಡಿನ ಏಕೀಕರಣದಂತ ಚಳುವಳಿಗಳಿಂದಾಗಿ ನಾಡು, ನುಡಿ, ಭಾಷೆ, ಸಂಸ್ಕೃತಿ ಕುರಿತಾಗಿ ತಿಳುವಳಿಕೆಯನ್ನು ಮತ್ತು ಜಾಗೃತಿಯನ್ನು ಉಂಟುಮಾಡುವ ಉದ್ದೇಶವನ್ನು ಶಿವಯೋಗಮಂದಿರ ಇರಿಸಿಕೊಂಡಿತ್ತು. ಅಂದರೆ ಧರ್ಮಪ್ರಸಾರ, ಶಿಕ್ಷಣಪ್ರಸಾರ ಮತ್ತು ಭಾಷಾಭಿಮಾನಗಳನ್ನು ಬಿತ್ತುವ ಉದ್ದೇಶದಿಂದ ಶಿವಯೋಗಮಂದಿರ ಮಾಡಿದ ಕಾರ್ಯ ಅನನ್ಯವಾದುದು. ಈ ಕೆಲಸಕ್ಕಾಗಿ ನಾಡಿನಾದ್ಯಂತ ಅನೇಕ ಶಾಖಾಮಂದಿರಗಳನ್ನು ಹುಟ್ಟುಹಾಕಲಾಯಿತು. ಸಮೂಹದಲ್ಲಿ ಶಕ್ತಿಯಿದೆ ಎನ್ನುವಂತೆ ನಿಡಗುಂದಿಕೊಪ್ಪ, ರಾಮಗಡ್ಡಿ, ಕಪ್ಪನಹಳ್ಳಿ, ಹಿರೇಹಾಳ ಮುಂತಾದ ಸಂಸ್ಥೆಗಳು ಮಾಡಿದ ಸಾಮಾಜಿಕ ಕಾರ್ಯಗಳ ಹಿಂದೆ ಶಿವಯೋಗಮಂದಿರದ ಒತ್ತಾಸೆ ಇರುವುದನ್ನು ಮರೆಯುವಂತಿಲ್ಲ.

ಶಿವಯೋಗಮಂದಿರ ಶಿಕ್ಷಣ ಪದ್ಧತಿಯಲ್ಲಿ ಕೆಲವು ನಿಯಮಗಳನ್ನು ರೂಪಿಸಿಕೊಂಡು ಬೆಳೆಯಿತು. ಇಲ್ಲಿ ಶಿಕ್ಷಣಕ್ಕೆ ಬರುವ ವಟುಗಳಿಗೆ ವಿಶೇಷ ನಿಯಮ, ಸಾಮಾನ್ಯ ನಿಯಮ ಎಂಬ ಎರಡು ನಿಯಮಗಳನ್ನು ರೂಪಿಸಿಕೊಂಡಿದೆ. ವಿಶೇಷ ನಿಯಮಗಳಲ್ಲಿ ಶಿಕ್ಷಣಾರ್ಥಿ ಕನಿಷ್ಟ ಐದರಿಂದ ಹತ್ತು ವರ್ಷದೊಳಗಿನವನಾಗಿರಬೇಕು. ಆತನ ಪಾಲಕರು ಮಂದಿರದ ಕಮೀಟಿಗೆ ಒಪ್ಪಿಗೆ ಪತ್ರ ಬರೆದುಕೊಡಬೇಕು. ಇದರಿಂದ ಬಾಲಶಿವಯೋಗಿ ಮುಂದೆ ಸಮಾಜದ ಸ್ವತ್ತಗುತ್ತಾನೆ. ಇನ್ನೂ ಸಾಮಾನ್ಯ ನಿಯಮಗಳಲ್ಲಿ ಕನ್ನಡ ನಾಲ್ಕು ಪಾಸಾದವರು ಅದಕ್ಕೂ

ಮೇಲಿನ ವಿದ್ಯಾಭ್ಯಾಸ ಹೊಂದಿದವರು ಪ್ರವೇಶ ಪಡೆಯಲು ಅವಕಾಶವಿತ್ತು. ಆತನೇ ಮುಂದೆ ಯಾವುದಾದರೊಂದು ಮಠದ ಉತ್ತರಾಧಿಕಾರಿಯಾಗಿ ನಿಯುಕ್ತನಾಗುತ್ತಿದ್ದನು. ಶ್ರಮ ಶಿಕ್ಷಣದ ಒಂದು ಭಾಗ ನಿರಂತರವಾದ ಅಧ್ಯಯನ, ಕಠಿಣ ಪರಿಶ್ರಮ ಇದಕ್ಕೆ ಬೇಕು. ಈ ಹಿನ್ನೆಲೆಯಲ್ಲಿ ಶಿವಯೋಗಮಂದಿದ ಶಿಕ್ಷಣ, ದಿನಚರಿ ಅತ್ಯಂತ ಮಹತ್ವಪೂರ್ಣವಾದುದು. ಬೆಳಿಗ್ಗೆ ನಾಲ್ಕು ಗಂಟೆಗೆ ಸಾಧಕರು ಏಳುವುದು, ಸಾಮೂಹಿಕ ಪ್ರಾರ್ಥನೆ, ಯೋಗಭ್ಯಾಸ, ಪಾಠ ಪ್ರವಚನಗಳು, ಸ್ನಾನ, ಲಿಂಗಪೂಜೆ ಇತ್ಯಾದಿಯಾಗಿ ದಿನಚರಿ ಬೆಳೆಯುತ್ತಾ ಹೋಗುತ್ತದೆ.

ಶಿವಯೋಗಮಂದಿರದ ಶಿಕ್ಷಣ ಪದ್ಧತಿಯಲ್ಲಿ ಪಠ್ಯಕ್ರಮ, ಪಾಠಕ್ರಮ, ಪರೀಕ್ಷಾಕ್ರಮ ಅತಿ ಮುಖ್ಯವೆನಿಸುತ್ತದೆ. ಪಠ್ಯಕ್ರಮ ಕುರಿತಂತೆ ಸಂಸ್ಕೃತದಲ್ಲಿ ಮೂರು ಪತ್ರಿಕೆ, ಕನ್ನಡದಲ್ಲಿ ಮೂರು ಪತ್ರಿಕೆಗಳನ್ನು ಕಲಿಯಬೇಕಾಗಿತ್ತು. ಆ ಪತ್ರಿಕೆಗಳು ಅನುಕ್ರಮವಾಗಿ ಆದ್ಯ, ಮಧ್ಯಮ, ಉತ್ತಮ ಎಂದು ವಿಂಗಡಿಸಲಾಗಿತ್ತು. ಸಂಸ್ಕೃತ ಆದ್ಯ ಪಠ್ಯದಲ್ಲಿ ಅನುಭವ ಸೂತ್ರ, ಸ್ಪಂದಕಾರಿಕಾ, ತತ್ತ್ವ ಪ್ರಕಾಶಿಕಾ, ಈಶ್ವರ ಪ್ರತ್ಯಾಭಿಜ್ಞಾ ಹೃದಯ, ಪಂಚದಶಿ, ಮಧ್ಯಮ ಪಠ್ಯಗ್ರಂಥಗಳಾಗಿ ಶಿವಸೂತ್ರ ವಿಮರ್ಶಿನಿ, ಲಿಂಗಧಾರಣ ಚಂದ್ರಿಕಾ, ಸಿದ್ಧಾಂತ ಶಿಖಾಮಣಿ, ನ್ಯಾಯ ಸಿದ್ಧಾಂತ ಮುಕ್ತಾವಲಿ, ಶ್ರೀಕರ ಭಾಷ್ಯಾ, ಉತ್ತಮ ಪಠ್ಯ ಗ್ರಂಥಗಳಲ್ಲಿ ಕ್ರಿಯಾಸಾರ, ಶಾಂಕರಭಾಷ್ಯಾ, ಶಿವದ್ವೈತ ಮಂಜರಿ, ಬ್ರಹ್ಮಾದ್ವೈತ ಮಂಜರಿ, ರಾಮಾನುಜಾಚಾರ್ಯರ ಶ್ರೀಭಾಷ್ಯಾ, ಮದ್ವಾಚಾರ್ಯರ ಪೂರ್ಣಪ್ರಜ್ಞಾಭಾಷ್ಯಾ ಕಲಿಯಬೇಕಾಗಿತ್ತು.

ಕನ್ನಡ ಆದ್ಯ ಪಠ್ಯಗ್ರಂಥಗಳಲ್ಲಿ ಅಖಂಡೇಶ್ವರ ವಚನ, ಬಸವೇಶ್ವರ ಷಟ್‌ಸ್ಥಲ ವಚನ, ನಿಜಾಚರಣೆಯ ಕಟ್ಟು, ಕೈವಲ್ಯ ಪದ್ಧತಿ, ಷಟ್‌ಸ್ಥಲ ಸಿದ್ಧಾಂತ ಮುಖ್ಯವಾದವು. ಮಧ್ಯಮ ಪಠ್ಯಗ್ರಂಥದಲ್ಲಿ ಶತಪಂಚಕ, ವಿವೇಕ ಚಿಂತಾಮಣಿ, ಸಿದ್ಧೇಶ್ವರ ಪುರಾಣ, ಪರಮಾನುಭವ ಬೋಧೆ, ವೃಷಬೇಂದ್ರ ವಿಜಯ, ಚನ್ನಬಸವೇಶ್ವರ ಪುರಾಣ, ರಾಜಶೇಖರ ವಿಳಾಸ, ಅನುಭವಸಾರ, ಶತಕತ್ರಯಗಳು, ಪಂಚದಶಿ ಹೀಗೆ ಒಂದೊಂದು ಭಾಗದಲ್ಲಿ ಐದೈದು ಪತ್ರಿಕೆಗಳಂತೆ ಪಠ್ಯಕ್ರಮ ರೂಪಿಸಲಾಗಿತ್ತು. ಈ ಎಲ್ಲ ಪಠ್ಯಗಳಿಗೆ ಪುಸ್ತಕಗಳನ್ನು ಸಿದ್ಧಪಡಿಸುವ ಪ್ರಯತ್ನವನ್ನು ಶಿವಯೋಗಮಂದಿರದಲ್ಲಿ ಮಾಡಲಾಗುತ್ತದೆ. ಇದರಲ್ಲಿ ಪ್ರೊ. ಶಿ.ಶಿ. ಬಸವನಾಳ ಮತ್ತು ಡಾ. ಶಿ.ಚಿ. ನಂದಿಮಠ, ಉಮಾಪತಿಶಾಸ್ತ್ರೀ ಪಂಡಿತ ಬಸವರಾಜಶಾಸ್ತ್ರೀ ಪಗಡದಿನ್ನಿ ಅವರುಗಳ ಶ್ರಮವನ್ನು ಗೌರವಿಸಬೇಕು. ಬೋಧಕವರ್ಗದಲ್ಲಿ ಪಂಡಿತ ಶಂಕರಶಾಸ್ತ್ರಿ ಉಮಚಗಿ, ಪಂ. ಸೋಮನಾಥಶಾಸ್ತ್ರಿಗಳು ಇಟಗಿ, ವೀರಭದ್ರಶಾಸ್ತ್ರಿ ಕೊಂಗವಾಡ, ಬಸವರಾಜಶಾಸ್ತ್ರಿ ಪಗಡದಿನ್ನಿ ಇನ್ನೂ ಮುಂತಾದವರು ಶಿವಯೋಗಮಂದಿರದ ಶೈಕ್ಷಣಿಕ ಬೆಳವಣಿಗೆಗೆ ದುಡಿದ ಮಹನೀಯರು.

ಪಠ್ಯ ಚಟುವಟಿಕೆಯಂತೆ ಪಠ್ಯೇತರ ಚಟುವಟಿಕೆಯಲ್ಲಿಯೂ ಶಿವಯೋಗಮಂದಿರ ಸಮಗ್ರತೆಯನ್ನು ಕಾಯ್ದುಕೊಳ್ಳಲು ಪ್ರಯತ್ನಿಸಿದಂತಿದೆ. ಮಾನವ ಜೀವನ ದೇಹ, ಮನಸ್ಸು,

ಆತ್ಮಗಳ ಸಂಗಮ. ಇದರಲ್ಲಿ ಯಾವುದು ಕುಂದಿದರೂ ಪರಿಪೂರ್ಣ ಜೀವನವಾಗುವುದಿಲ್ಲ. ಹೀಗಾಗಿ ಶಾರೀರಿಕವಾಗಿ ಯೋಗಾಸನ ಹಾಗೂ ದೇಶಿ ಆಟಗಳ ಅನುಷ್ಠಾನ, ಮಾನಸಿಕವಾಗಿ ಪುರಾಣ, ಶ್ರವಣ ಮತ್ತು ಪ್ರವಚನ ಜೊತೆಗೆ ಕೈತೋಟ ನಿರ್ಮಾಣ, ಪರಿಸರ ಸಂರಕ್ಷಣೆ, ಗೋಶಾಲೆ-ಕೃಷಿ ಚಟುವಟಿಕೆಗಳನ್ನು ಹೇಳಿಕೊಡಲಾಗುತ್ತಿತ್ತು.

ವೀರಶೈವ ಧರ್ಮದ ಪ್ರಥಮ ಬೆಳೆ ವಚನ ಸಾಹಿತ್ಯ ವಚನ ಸಾಹಿತ್ಯದ ಜೀವ ಕಾಯಕ ಮತ್ತು ದಾಸೋಹ. ಸಮಾಜದಲ್ಲಿ ಎಲ್ಲರೂ ದುಡಿಯಬೇಕು, ಬಂದ ಫಲವನ್ನು ಸತ್‌ಪಾತ್ರಕ್ಕೆ ವಿನಿಯೋಗಿಸಬೇಕು. ಈ ಮನೋಧರ್ಮವನ್ನು ಕಾಯಕ ಮತ್ತು ದಾಸೋಹ ಧರ್ಮವನ್ನಾಗಿ ರೂಪಿಸಿದವರು ವೀರಶೈವರು. ವೀರಶೈವ ಮಹಾಸಭೆಯ ಪ್ರನಾಳಿಕೆಯಲ್ಲಿ ಒಂದಾದ ಕಾಯಕ ಸಿದ್ಧಾಂತವನ್ನು ಮೈಗೂಡಿಸಿಕೊಂಡು ಬೆಳದ ಸಂಸ್ಥೆ ಶಿವಯೋಗಮಂದಿರ. ಇಪ್ಪತ್ತೊಂದನೇ ಶತಮಾನದಲ್ಲಿ ಶ್ರೀಕುಮಾರಸ್ವಾಮಿಗಳು ಈ ಸಂಸ್ಥೆಯ ಮೂಲಕ ವೃತ್ತಿನಿರತ ಗುಡಿಕೈಗಾರಿಕೆಯನ್ನು ಹುಟ್ಟು ಹಾಕಿದರು. ಸಮಾಜದ ಏಳ್ಗೆ ಕೃಷಿ ಪ್ರಧಾನ ಕಾಯಕದಿಂದ ಮಾತ್ರ ಸಾಧ್ಯ. ಹೀಗಾಗಿ ಒಕ್ಕಲುತನವನ್ನು ಅವಲಂಬಿಸುವ ನಿಟ್ಟಿನಲ್ಲಿ ಅನೇಕ ಮಾರ್ಗದರ್ಶಕ ಕಾರ್ಯಕ್ರಮಗಳನ್ನು ರೂಪಿಸಿಕೊಂಡರು. ಕೃಷಿಮೇಳ, ಪಶುಸಂಗೋಪನೆ, ಜಾನುವಾರುಗಳ ಜಾತ್ರೆ, ಭೂಸಾಗುವಳಿ ವಿಧಾನ ಮುಂತಾದ ಯೋಜನೆಗಳನ್ನು ರೈತಾಪಿ ವರ್ಗಕ್ಕೆ ನೀಡಿದರು. ಅದೇ ರೀತಿ ಸಹಕಾರಿ ಸಂಘಗಳ ಅಸ್ತಿತ್ವ, ಬ್ಯಾಂಕಿಂಗ್ ವ್ಯವಸ್ಥೆ ಇತ್ಯಾದಿ ಆಧುನಿಕ ವ್ಯಾವಹಾರಿಕ ಕ್ಷೇತ್ರಗಳನ್ನು ಈ ಸಂಸ್ಥೆಯ ಮೂಲಕ ಪ್ರತಿನಿಧಿಸಿದರು.

ವಿಶೇಷವಾಗಿ ಸಮಾಜದ ಅಸ್ತಿತ್ವಕ್ಕಾಗಿ ತಮ್ಮ ವೃತ್ತಿಯನ್ನು ವಿನಿಯೋಗಿಸಿದ ಕುಂಬಾರ, ಕಂಬಾರ, ಅಗಸ, ಗೌಳಿಗ, ನೇಕಾರ ಮುಂತಾದ ಕುಲಕಸುಬಿನ ಜನರ ಪ್ರಾಮುಖ್ಯತೆಯನ್ನು ಈ ಸಂಸ್ಥೆ ಎತ್ತಿಹಿಡಿಯುವುದರ ಮೂಲಕ ರಾಷ್ಟ್ರೀಯ ಗುಡಿಕೈಗಾರಿಕೆಗೆ ಒತ್ತುಕೊಟ್ಟಿರುವುದನ್ನು ಗಮನಿಸಬಹುದು. ಒಂದರ್ಥದಲ್ಲಿ ಶಿವಯೋಗಮಂದಿರ ಗುಡಿಕೈಗಾರಿಕೆಯನ್ನು ಅಸ್ತಿತ್ವಕ್ಕೆ ತಂದ ಸಾಲಿ ಮಠವಾಗಿದೆ. ಅಂದರೆ ಗಾಂಧೀಜಿಯವರ ವಾರ್ಧ ಶಿಕ್ಷಣ ಪದ್ಧತಿಯನ್ನು ಇಲ್ಲಿ ಗುರುತಿಸಬಹುದು. ಓದು, ಬರಹ, ಗಣಿತ ಹಾಗೂ ಲೆಕ್ಕಾಚಾರಗಳಲ್ಲದೆ ಕಡ್ಡಾಯವಾಗಿ ಯಾವುದಾದರೊಂದು ವೃತ್ತಿಯನ್ನು ಇಲ್ಲಿ ಕಲಿಯಬೇಕಾಗಿತ್ತು. ಈ ವೃತ್ತಿ ಶಿಕ್ಷಣದಲ್ಲಿ ವಿಭೂತಿ, ತಾಡೋಲೆ, ಕಂಥೆ ಮಾಡುವ ಇಲ್ಲವೆ ಮಾರುವ ಉದ್ಯೋಗಗಳನ್ನು ಹೇಳಿಕೊಡಲಾಗುತ್ತಿತ್ತು. ಹೀಗಾಗಿ ಶಿವಯೋಗಮಂದಿರ ಧಾರ್ಮಿಕ ವಿಧಿವಿಧಾನಗಳನ್ನು ಆಚರಿಸುವ ಧಾರ್ಮಿಕ ಕೇಂದ್ರವಾಗಿದ್ದರ ಜೊತೆಗೆ ಸಾಮಾಜಿಕ, ಸಾಹಿತ್ಯಕ, ಸಾಂಸ್ಕೃತಿಕ ಕೇಂದ್ರವಾಗಿ ಬೆಳೆದು ನಿಂತಿದೆ. ಹೀಗಾಗಿ ಶಿಕ್ಷಣ ಪ್ರಸಾರ, ಸಾಹಿತ್ಯ ಸೃಷ್ಟಿ, ನ್ಯಾಯ ಪರಿಪಾಲನೆ, ಔಷದೋಪಚಾರ, ವೃತ್ತಿ ವ್ಯವಸ್ಥೆ, ಕಲಾ ಪೋಷಣೆ ಮುಂತಾದ ಚಟುವಟಿಕೆಗಳಲ್ಲಿ ದುಡಿಯುತ್ತ ಬಂದ ಒಂದು

ಸಾಮಾಜಿಕ ಸಂಸ್ಥೆಯಾಗಿದೆ. ಈ ದೃಷ್ಟಿಯಿಂದ ಶಿವಯೋಗಮಂದಿರದ ವೃತ್ತಿ ವೈಶಿಷ್ಟಗಳನ್ನು ಭೌತಿಕ, ಬೌದ್ಧಿಕ ನೆಲೆಯಲ್ಲಿ ಗುರುತಿಸಲಾಗಿದೆ.

ಯಾವುದೇ ಧರ್ಮ ತನ್ನದೇ ಆದ ಸಿದ್ಧಾಂತವನ್ನು ಹೊಂದಿರುತ್ತದೆ ಈ ಸಿದ್ಧಾಂತದಲ್ಲಿ ತನ್ನ ಸ್ವಧರ್ಮದ ಸಾಹಿತ್ಯ, ಸಂಸ್ಕೃತಿಗಳನ್ನು ಕುರಿತು ಅಧ್ಯಯನ ಮಾಡುವ ದೃಷ್ಟಿಯಿಂದ ಶಿವಯೋಗಮಂದಿರ ಸಾಹಿತ್ಯ ಸಂಶೋಧನಾ ಚಟುವಟಿಕೆಯನ್ನು ಆರಂಭದಿಂದಲೇ ಆರಂಭಿಸಿದೆ. ಶಿವಯೋಗಮಂದಿರದ ಸಾಹಿತ್ಯ ಸಂಶೋಧನೆಯನ್ನು ಮೂರು ಹಂತಗಳಲ್ಲಿ ಗುರುತಿಸಬಹುದಾಗಿದೆ. ಸಾಹಿತ್ಯ ಸಂಗ್ರಹ, ಸಂಪಾದನೆ ಮತ್ತು ಪ್ರಕಟಣೆ. ಆ ಭಾಗದಲ್ಲಿ ಸಿಗುವ ತಾಳೆಗರಿ, ಕೋರಿಕಾಗದ ಪ್ರತಿಗಳನ್ನು ಸಂಗ್ರಹಿಸಿ ಶ್ರೀವಿಜಯಮಹಾಂತೇಶ್ವರ ಗ್ರಂಥಾಲಯದಲ್ಲಿ ಹಸ್ತಪ್ರತಿಗಳನ್ನು ಸಂಗ್ರಹಿಸಿದ್ದಾರೆ. ಈ ಭಂಡಾರ ನಾಡಿನ ಅಪೂರ್ವ ಸಂಪತ್ತು. ಇಲ್ಲಿ ಅಮೂಲ್ಯತವಾದ ಗ್ರಂಥಗಳು, ತಾಡೋಲೆ ಪ್ರತಿಗಳು, ಕೋರೆಕಾಗದಗಳು ಸಂರಕ್ಷಣೆಗೊಂಡಿವೆ. ಒಂದು ಅಂದಾಜಿನ ಪ್ರಕಾರ ಕನ್ನಡ, ಇಂಗ್ಲೀಷ್, ಹಿಂದಿ, ಸಂಸ್ಕೃತ, ಮರಾಠಿ, ತೆಲಗು ಮೊದಲಾದ ಆರುಸಾವಿರಕ್ಕೂ ಹೆಚ್ಚು ಗ್ರಂಥಗಳು ಸಂಗ್ರಹಗೊಂಡಿವೆ. ಈ ಸಂಗ್ರಹಕ್ಕೆ ಸೊಲ್ಲಾಪುರದ ವಾರದ ಮಲ್ಲಪ್ಪನವರು, ಸಿರಸಂಗಿ ಲಿಂಗರಾಜರು ಗ್ರಂಥದಾನ ಮಾಡಿದ್ದಾರೆ. "ಜ್ಞಾನ ಭಂಡಾರದ ಅತ್ಯಮೂಲ್ಯ ಹೆಬ್ಬಾಗಿಲಾಗಿರುವ ಇಲ್ಲಿಯ ಗ್ರಂಥ ಭಂಡಾರವನ್ನು ಈಗ ಸೊರಗಿಸಿದವರೇ ಬಹಳಷ್ಟು ಜನ. ಅಧ್ಯಯನಕ್ಕೆ ತೆಗೆದುಕೊಂಡು ಹೋದ ಅನೇಕ ಗ್ರಂಥಗಳು ಮರಳಿ ಬಾರದೆ ಹೋಗಿವೆ. ಸದ್ಯ ಇರುವ ಹಸ್ತಪ್ರತಿಗಳಿಗೆ ಆಧುನಿಕ ಸಂರಕ್ಷಣಾ ವಿಧಾನದ ಅವಶ್ಯಕತೆ ಇದೆ. ಅದೇನೆ ಇದ್ದರು ವಿಜಯಮಹಾಂತೇಶ್ವರ ಗ್ರಂಥಾಲಯ ಅಪರೂಪದ ಆಕರ ಸಾಮಗ್ರಿಯನ್ನು ಒಳಗೊಂಡ ಒಂದು ಸಂಶೋಧನ ಸಂಸ್ಥೆ. ಈ ಸಂಸ್ಥೆಯ ಉಪಯೋಗ ಪಡೆದವರು ಹಲವಾರು ಜನ. ಶಿರಾಳಕೊಪ್ಪದ ಚನ್ನಮಲ್ಲಿಕಾರ್ಜುನ ಮಾಸ್ತರ, ವಚನ ಪಿತಾಮಹ ಫ.ಗು. ಹಳಕಟ್ಟಿ, ಶಿ.ಶಿ.ಬಸವನಾಳ, ಜಿ.ಎಂ.ಉಮಾಪತಿಶಾಸ್ತ್ರಿ, ಹೆಚ್. ದೇವಿರಪ್ಪ, ಉಚ್ಚಂಗಿ ಚನ್ನಪ್ಪರಂತಹ ಘಟಾನುಘಟಿಗಳು ಈ ಸಂಸ್ಥೆಯ ಸಂಶೋಧನಾ ಕ್ಷೇತ್ರದಲ್ಲಿ ಹೆಸರು ಮಾಡಿದ್ದಾರೆ. ಪತ್ರಿಕೆಗಳು, ನಿಯತಕಾಲಿಕೆಗಳಾಗಿ, ಧರ್ಮತರಂಗಿಣಿ, ಸುಕುಮಾರ ಸದ್ಧರ್ಮ ದೀಪಿಕೆ, ಶಿವಪ್ರತಾಪ, ಶಿವಾನುಭವ ಹೆಸರಿನ ಪತ್ರಿಕೆಗಳನ್ನು ಲಾಭ-ನಷ್ಟದ ಯೋಚನೆ ಇಲ್ಲದೆ ಸಮಾಜದಲ್ಲಿ ಧರ್ಮ, ನ್ಯಾಯ, ಸಂಸ್ಕಾರ, ಆಚಾರ ಬಿಂಬಿಸುವ ಉದ್ದೇಶದಿಂದ ಪ್ರಕಟಿಸುತ್ತಾ ಬರಲಾಗಿದೆ. ವೀರಶೈವ ಪುರಾಣಗಳು, ಬಾಷ್ಯಾ ವಿಮರ್ಶ ಕೃತಿಗಳು ಶಿವಯೋಗಮಂದಿರದಿಂದ ಬೆಳಕು ಕಂಡಿವೆ. ಒಟ್ಟಿನಲ್ಲಿ ಆಧುನಿಕ ಶಿಕ್ಷಣ ಪ್ರವೇಶದ ಸಂದರ್ಭದಲ್ಲಿ ಪುಸ್ತಕ ಪ್ರಕಟಣೆ, ಪತ್ರಿಕಾ ಪ್ರಕಟಣೆ, ಹಸ್ತಪ್ರತಿ ಸಂಗ್ರಹಣೆ ಮತ್ತು ಉಪನ್ಯಾಸಗಳನ್ನು ಏರ್ಪಡಿಸುವುದರ ಮೂಲಕ ಶಿವಯೋಗಮಂದಿರ ಅಧ್ಯಯನ ಕೇಂದ್ರವಾಗಿ ರೂಪಗೊಂಡಿತು.

ಶ್ರೀ ವಿಜಯಮಹಾಂತೇಶ ಗ್ರಂಥಾಲಯ, ಶ್ರೀ ರೇವಣಸಿದ್ಧೇಶ್ವರ ವಾಚನಾಲಯ ಮತ್ತು ಹಸ್ತಪ್ರತಿ ಭಂಡಾರಗಳು ಶಿವಯೋಗಮಂದಿರದ ಜ್ಞಾನಾನ್ವೇಷಣೆಯ ತಾಣಗಳಾಗಿವೆ. ಶಾಸನ ಶಬ್ದಕೋಶ, ವಿಷಯ ಕೋಶ, ಅವತರಣಿಕೆ ಕೋಶ, ವಿಶ್ವಕೋಶ, ತತ್ತ್ವಜ್ಞಾನ, ನೀತಿಶಾಸ್ತ್ರ, ಧರ್ಮಶಾಸ್ತ್ರಗಳು, ಭಾಷಾಶಾಸ್ತ್ರ, ವಸ್ತುಶಾಸ್ತ್ರ, ಜೋತಿಷ್ಯಶಾಸ್ತ್ರ ಮುಂತಾದ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ಸಾವಿರಾರು ಕೃತಿಗಳು ಇಲ್ಲಿ ಸಂಗ್ರಹಗೊಂಡಿವೆ.

ಪ್ರಸ್ತುತ ಸಂದರ್ಭದಲ್ಲಿ ೨೦೧೦ರಲ್ಲಿ ಶತಮಾನೋತ್ಸವ ಆಚರಿಸಿಕೊಂಡಿರುವ ಶಿವಯೋಗಮಂದಿರ ತನ್ನ ಸಾರ್ಥಕ ನೂರಾಮೂರು ವರ್ಷಗಳ ಅವಧಿಯಲ್ಲಿ ವೀರಶೈವ ಧರ್ಮ ಮತ್ತು ಸಮಾಜದ ಪ್ರಾತಿನಿಧಿಕ ಸಂಸ್ಥೆಯಾಗಿ ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ತನ್ನ ಹೋರಾಟಗಳ ಮೂಲಕ ಸೈದ್ಧಾಂತಿಕವಾಗಿ ಮತ್ತು ಚಾರಿತ್ರಿಕವಾಗಿ ನಡೆಸಿಕೊಂಡು ಬಂದ ಶಿವಯೋಗಮಂದಿರ ತನ್ನ ಮುಂದಿನ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವನ್ನು ವಹಿಸಬೇಕಾಗಿದೆ. ತನ್ನ ಸಾಂಪ್ರದಾಯಿಕ ಆಚಾರ-ವಿಚಾರಗಳೊಂದಿಗೆ ಪ್ರಗತಿಪರ ಚಿಂತನೆಗಳನ್ನೂ ರೂಪಿಸಿಕೊಂಡು ಮುನ್ನಡೆಯಬೇಕಾಗಿದೆ. ಅಂದರೆ ಬಸವ ಚಳುವಳಿಯಲ್ಲಿ ವೀರಶೈವರು ಮಾತ್ರ ಗುರುತಿಸಿಕೊಳ್ಳುವುದನ್ನು ಶಿವಯೋಗಮಂದಿರದಂತ ಸಮಾಜ ಕೇಂದ್ರಿತ ಸಂಸ್ಥೆ ಗಂಭೀರವಾಗಿ ಪರಿಗಣಿಸಬೇಕು. ಬಸವ ತತ್ತ್ವದ ಅನುಯಾಯಿಗಳು ಸಮಾಜದ ವೃತ್ತಿನಿರತ ಕಾಯಕ ಜೀವಿ ಸಮುದಾಯಗಳಾದ ಹಡಪದ, ಕುಂಬಾರ, ಚಮ್ಮಾರ, ನೇಕಾರ, ಅಂಬಿಗ ಮುಂತಾದ ಈ ಹೊತ್ತು ತಳಸಮುದಾಯವೆಂದು ಗುರುತಿಸಿಕೊಳ್ಳುವ ಒಂದು ಕಾಲಕ್ಕೆ ಬಸವ ಚಳುವಳಿಯ ಆಧಾರಸ್ತಂಭಗಳ ಎಲ್ಲ ಸಮುದಾಯವನ್ನು ಒಳಗು ಮಾಡಿಕೊಂಡು, ಬಸವ ಚಳುವಳಿಯಲ್ಲಿ ಕಾಯಕಗಳಿವೆಯೇ ಹೊರತು ಜಾತಿಗಳಲ್ಲ, ದೇವರಿದ್ದಾನೆಯೇ ಹೊರತು ದೇವರುಗಳಿಲ್ಲ ಎಂಬ ಸತ್ಯವನ್ನು ಲೋಕಕ್ಕೆ ಸಾರುವ ದ್ರಾಷ್ಟದಿಂದ ಶಿವಯೋಗಮಂದಿರ ಬೆಳೆಯಬೇಕಾಗಿದೆ. ಈ ದೃಷ್ಟಿಯಿಂದ ಶಿವಯೋಗಮಂದಿರದ ಆಡಳಿತ ಮಂಡಳಿ ಮತ್ತು ಅದನ್ನು ಮುನ್ನಡೆಸುವ ಪೂಜ್ಯ ಮಠಾಧಿಪತಿಗಳು ಕ್ರಿಯಾಯೋಜನೆಯನ್ನು ರೂಪಿಸಿಕೊಂಡು ಶಿವಯೋಗಮಂದಿರ ಸಂಸ್ಥೆ ಸಮಾಜದ ಎಲ್ಲ ವರ್ಗಗಳ ಸರ್ವಾಂಗೀಣ ಅಭಿವೃದ್ಧಿ ಸಂಸ್ಥೆಯಾಗಿ ಬೆಳೆಯಬೇಕಾಗಿದೆ. ಆ ಬೆಳವಣಿಗೆಗೆ ಸಾಧ್ಯವಾಗುವ ಧಾರ್ಮಿಕ ಸಂಪತ್ತು, ಆಧ್ಯಾತ್ಮಿಕ ಸಂಪತ್ತು, ಮಾನವ ಸಂಪತ್ತು ಈ ಸಂಸ್ಥೆಗಿದೆ.

ಅನುಬಂಧಗಳು

೧. ಛಾಯಾಚಿತ್ರಗಳು
೨. ದಾಖಲೆಗಳು
೩. ವಕ್ತ್ರ ವಿವರ
  ಅ. ವ್ಯಕ್ತಿಗಳು
  ಆ. ಸಂಸ್ಥೆಗಳು
೪. ಪರಾಮರ್ಶನ ಗ್ರಂಥಗಳು
  ಅ. ಕೃತಿಗಳು
  ಆ. ಸ್ಮರಣ ಸಂಪುಟಗಳು
  ಇ. ವರದಿಗಳು, ನಿರ್ಣಯಗಳು
  ಈ. ಪತ್ರಿಕೆಗಳು, ನಿಯತಕಾಲಿಕೆಗಳು

೧. ಛಾಯಾಚಿತ್ರಗಳು



ಹಾನಗಲ್ಲ ಪೂಜ್ಯಶ್ರೀ ಕುಮಾರ ಶಿವಯೋಗಿಗಳು

ಸಂಸ್ಥಾಪಕರು

ಅಖಿಲ ಭಾರತ ವೀರಶೈವ ಮಹಾಸಭೆ ಮತ್ತು ಮದ್ವೀರಶೈವ ಶಿವಯೋಗಮಂದಿರ

ಶಿವಯೋಗಮಂದಿರ ಸ್ಥಾಪನೆಯಾದ ಮೊದಲ ವರ್ಷದಲ್ಲಿ (೧೯೦೯) ಪ್ರವೇಶ ಪಡೆದ ಮೊದಲ ಶಿವಯೋಗ ಸಾಧಕ ತಂಡ

೧. ನವಲಗುಂದ ಗವಿಮಠದ ಬಸವಲಿಂಗ ದೇಶಿಕರು ೨. ಸವದತ್ತಿ ಕಲ್ಮಠದ ಅಪ್ಪಯ್ಯ ದೇಶಿಕರು ೩. ಕಂಚುಗಲ್ಲು ಬಿದರೆ ಪ್ರಭುಕುಮಾರ ಪಟ್ಟಾಧ್ಯಕ್ಷರು ೪. ಕುರುವತ್ತಿ ವಿರಕ್ತ ಮಠದ ಮಹಾದೇವ ದೇಶಿಕರು ೫. ಬಾಗಲಕೋಟೆ ಚರಂತಿಮಠದ ಶಿವಮೂರ್ತಿ ದೇಶಿಕರು ೬. ಮಮದಾಪುರ ವಿರಕ್ತಮಠದ ಗುರುಸಿದ್ಧ ದೇಶಿಕರು ೭. ವ್ಯಾಕರಣಾಳ ಸಿದ್ಧಲಿಂಗ ಪಟ್ಟಾಧ್ಯಕ್ಷರು





ಶ್ರೀ ವಿಜಯಮಹಾಂತೇಶ್ವರರು



ಶ್ರೀ ಶಿವಬಸವ ಮಹಾಸ್ವಾಮಿಗಳು ಹುಕ್ಕೇರಿ



ಶಿವಯೋಗಮಂದಿರ ಮುನ್ನಡೆಸಿದ ಮಮತಾ ಮೂರ್ತಿಗಳು



ಶಿವಯೋಗಮಂದಿರದ ಪೂರ್ವದ ಪ್ರವೇಶದ್ವಾರ



ಶ್ರೀ ಹಾನಗಲ್ಲ ಕುಮಾರಸ್ವಾಮಿಗಳ ಗದ್ದುಗೆ



ಶ್ರೀ ಗುರು ಕೊಟ್ಟೂರು ಬಸವೇಶ್ವರರು ತಪಗೈದ ಸ್ಥಾನ



ವಟುಗಳ ಧ್ಯಾನಮಂದಿರ



ಮಂದಿರದ ಗೋಶಾಲೆ



ವಿಭೂತಿ ನಿರ್ಮಾಣ ಕೇಂದ್ರ



ಶ್ರೀ ವಿಜಯಮಹಾಂತೇಶ ಗ್ರಂಥಾಲಯ-ವಾಚನಾಲಯ



ಶ್ರೀ ಸದಾಶಿವ ಮುದ್ರಣಾಲಯ (ಹಳೆಯ ಚಿತ್ರ)



ಹಸ್ತಪ್ರತಿಗಳು



ಹಸ್ತಪ್ರತಿಗಳು



ಯೋಗನಿರತ ವಟುಗಳು



ಆಸನಾಭ್ಯಾಸದಲ್ಲಿ ಸಾಧಕರು



ಸಂಗಿತಾಭ್ಯಾಸ ನಿರತ ವಟು-ಸಾಧಕರು




ಪ್ರವಚನ ನಿರತ ವಟು-ಸಾಧಕರು




ಶಿವಯೋಗಮಂದಿರದ ಬಿದರಿ ಶ್ರೀಕುಮಾರೇಶ್ವರ ಪ್ರಸಾದ ನಿಲಯ



ಅತಿಥಿ ಗೃಹ




ಶ್ರೀ ಹಾನಗಲ್ಲ ಕುಮಾರಸ್ವಾಮಿಗಳ ಕೈಬರಹ



ಶ್ರೀಹಾನಗಲ್ಲ ಕುಮಾರಸ್ವಾಮಿಗಳ ರುಜು



ಶ್ರೀಹಾನಗಲ್ಲ ಕುಮಾರಸ್ವಾಮಿಗಳ ಮುದ್ರಿಕೆ



೧೯೧೮ರಲ್ಲಿ ಶಿವಯೋಗ ಮಂದಿರವನ್ನು ಅಧಿಕೃತವಾಗಿ ಟ್ರಸ್ಟ್ ಕಮೀಟಿಯ ಆಡಳಿತಕ್ಕೆ ಒಪ್ಪಿಸಲು ಹಾನಗಲ್ಲ ಕುಮಾರಸ್ವಾಮಿಗಳು ಬರೆದಿದ್ದ (ಚಾರಿತ್ರಿಕ ಮಹತ್ವದ) ಪತ್ರ.
(ಪತ್ರದ ಮೇಲ್ಭಾಗದಲ್ಲಿ ಹಾನಗಲ್ಲ ಕುಮಾರಸ್ವಾಮಿಗಳ ಸಹಿ ಇರುವುದು ಗಮನಾರ್ಹ)

ಶಿವಯೋಗಮಂದಿರವನ್ನು ಟ್ರಸ್ಟ್ ಆಡಳಿತಕ್ಕೆ ಒಳಪಡಿಸಿ ಹೊರಡಿಸಿದ ಆದೇಶ ಮತ್ತು ಮಾಹಿತಿಪತ್ರ. *

ಶ್ರೀಗುರು ತಾ|| ೧೨-೩-೧೯೧೮

ಕುಮಾರಸ್ವಾಮಿ ಹಾನಗಲ್ಲ

ನೆರೆದ ಸಭೆಯಲ್ಲಿ ಶ್ರೀ ಹಾನಗಲ್ಲ ಕುಮಾರಸ್ವಾಮಿಗಳಾದ ನಾವು ನಿರೂಪ ಕೊಟ್ಟ ವಿವರ–

ಬಾಗಲಕೋಟೆಯಲ್ಲಿ ಸನ್ ೧೯೦೬ನೇ ಇಸ್ವಿ ಡಿಸೆಂಬರ್ ತಿಂಗಳಲ್ಲಿ ನೆರೆದ ಶ್ರೀ ವೀರಶೈವ ಮಹಾಸಭೆಯಲ್ಲಿ ಗೊತ್ತುಪಡಿಸಿದ ಮೇರೆಗೆ ಶ್ರೀ... ಹಾಗೂ ಶ್ರೀ ಇಳಕಲ್ಲ ಮಹಾಂತ ಶಿವಯೋಗಿಗಳು ಅಪ್ಪಣೆ ಕೊಡಿಸಿದ ಮೇರೆಗೆ ಪಂಚಕ್ಷೇತ್ರದ ಭಾಗವಾದ ಹಾಗೂ ಶ್ರೀಕ್ಷೇತ್ರ ಮಹಾಕೂಟದ ಸಮೀಪವಾಗಿ ಮಲಪ್ರಭಾ ತೀರದಲ್ಲಿ ಸನ್ ೧೯೦೯ ಇಸ್ವಿ ಫೆಬ್ರುವರಿ ತಿಂಗಳ ೭ನೇ ತಾರೀಖಿಗೆ ಈ ಶ್ರೀ ವೀರಶೈವ ಶಿವಯೋಗಮಂದಿರ ಸಂಸ್ಥೆಯು ಸ್ಥಾಪಿಸಲ್ಪಟ್ಟಿದ್ದು ಸರ್ವಶ್ರುತವಿರುತ್ತದೆಯಷ್ಟೇ. ಅದರ ಬಗ್ಗೆ ನಾವು ಭಿಕ್ಷಾ ಹಾಗೂ ಕಾಣಿಕಾ ವಸೂಲ ಮಾಡಿ ಖರ್ಚಿನ ಪೂರ್ತಿ ಮಾಡಿ ಈವರೆಗೂ ಅದನ್ನು ನಡೆಸಿಕೊಳ್ಳುತ್ತಾ ಬಂದಿವಿ. ಈಗ ಅದು ಕಾಯಂ ಆಗಲಿಕ್ಕೆ ಲಾಯಕ ಸ್ಥಿತಿಯಲ್ಲಿದ್ದು ಇನ್ನು ಮುಂದೆ ಮತ್ತು ಶಾಶ್ವತ ಸುವ್ಯವಸ್ಥೆಯಿಂದ ನಡೆಯಬೇಕೆಂಬ ಉದ್ದೇಶದಿಂದ ೨೧ ಜನರ ವರೆಗೆ ಟ್ರಸ್ಟಿಗಳನ್ನು (೭ ಜನರಕ್ಕಿಂತ ಕಮ್ಮಿ ಇರಕೂಡದು) ನೇಮಿಸಿಕೊಂಡು ನಾವು ಅದರ ಅಧ್ಯಕ್ಷರಾಗಿ ಕೆಲ್ಲ ಹವಾ ಮಾಡಿದ್ದ ನೇಮಗಳಂದನುಸರಿಸಿ ಸಂಸ್ಥೆಯ ಉದ್ದೇಶವು ಸಫಲವಾಗುವಂತೆ ವ್ಯವಸ್ಥೆ ಮಾಡಬೇಕೆಂದು ಶ್ರೀ ಹಾವೇರಿ ಹುಕ್ಕೇರಿ ಮಠದ ಶಿವಬಸವ ಸ್ವಾಮಿಗಳವರಿಗೆ ವಿನಂತಿ ಮಾಡಿಕೊಂಡ ಪ್ರಕಾರ ಸದರ ಹಾವೇರಿ ಸ್ವಾಮಿಗಳವರು ಇದಕ್ಕೆ ಒಪ್ಪಿಕೊಂಡು ಕೆಳಗೆ ಕಾಣಿಸಿದ ಟ್ರಸ್ಟಿಗಳನ್ನು ನೇಮಿಸಿಕೊಂಡಿರುತ್ತಾರೆ. ಅವರ ಹೆಸರು–

ವೇ. ಶಿವಲಿಂಗ ಶಾಸ್ತ್ರಿ ಎಸ್. ಶಾಸ್ತ್ರಿ ಧರ್ಮತರಂಗಿಣಿ, ಎಡಿಟರ್, ವಕೀಲರು ಧಾರವಾಡ

ಮಿ. ರೇವಣಸಿದ್ಧಪ್ಪ ಕಿತ್ತೂರ L.c.e. ಡಿ|| ಡಿ|| ಕಲೆಕ್ಟರ ಧಾರವಾಡ

ಮಿ. ಸಣ್ಣಪ್ಪ ಸಂಕಪ್ಪ ಪ್ರಾಳಿ, BA ಡಿ|| ಮಾಮಲೇದಾರ, ಧಾರವಾಡ

ಮಿ. ಚನಗೌಡಾ ಎಸ್. ಪಾಟೀಲ LM&S ಹುಬ್ಬಳ್ಳಿ

ಮಿ. ಬಸಲಿಂಗಪ್ಪ ಬಸವಪ್ರಭಪ್ಪ ಯಾದವಾಡ, ಮುಚಖಂಡಿ

ಮಿ. ಬಸನಗೌಡಾ ವಿ. ಪಾಟೀಲ ವತನದಾರ, ಕೊಂಗವಾಡ

ಮಿ. ವೀರಬಸವ ಎಸ್. ಶೆಟ್ಟಿ, BA ಮ್ಯಾನೇಜರ, ಶಿವಯೋಗಮಂದಿರ

ಮುಕ್ಕಾಮು


ಶಿವಯೋಗಮಂದಿರ

* ಸಹಿ ಮೇಲೆ ಅದೆ.

(ಹಾನಗಲ್ಲ ಕುಮಾರಸ್ವಾಮಿಗಳ ಸಹಿ ಇದೆ)

* ೧೯೧೮ರಲ್ಲಿ ಟ್ರಸ್ಟ್ ಸ್ಥಾಪನೆಯ ಆದೇಶ-ಮಾಹಿತಿಗಾಗಿ ಹೊರಡಿಸಿದ ಮೂಲಪ್ರತಿಯ ನಕಲನ್ನು ಇಲ್ಲಿ ಕೊಡಲಾಗಿದೆ. ಆ ಕಾಲದ ಭಾಷೆಯನ್ನು ಯಥಾವತ್ತಾಗಿ ಇಲ್ಲಿ ಬಳಸಿಕೊಂಡಿದೆ. ಇದು ಐತಿಹಾಸಿಕ ವಿಷಯವನ್ನು ಅರಿಯಲು ಇದು ನೆರವಾಗುತ್ತದೆ. ಸಂ.

ಶಿವಯೋಗಮಂದಿರವನ್ನು ಟ್ರಸ್ಟ್ ಆಡಳಿತಕ್ಕೆ ಒಳಪಡಿಸಿ ಹೊರಡಿಸಿದ ಆದೇಶ ಮತ್ತು ಮಾಹಿತಿಪತ್ರ. *



نقل مراسلہ محکمہ معتمد سرکار عالی صیغہ امور مذہبی واقع ۹ مہر ۱۳۲۹ف

نشان مجلسیہ (۵۰۶) مثل نمبر (۲۰) متفرقی ۱۳۳۲ف

معتمد سرکار عالی امور مذہبی

حسب الحکم عالیجناب سر مہاراجہ صدر اعظم بہادر مدار المہام سرکار عالی — معتمدہ

بنام جناب اختر یار جنگ بہادر مینائی معتمد سرکار عالی صیغہ امور مذہبی } درخواست برہمنان پرلی نسبت درود آہنگ

بخدمت [illegible] اول تعلقدار صاحب ضلع بیڑ

بسلسلہ مراسلہ دفتر دیوانی (۴۹۳) مورخہ ۵ شہریور ۱۳۲۶ف تحریر ہے کہ کمیشن تقاریب مذہبی کی رپورٹ بعد حصول رائے باب حکومت پیشگاہ خسروی میں گزرانی گئی تھی جس پر ذریعہ فرمان مبارک معنونہ ۵ ربیع الاول المبارک ۱۳۴۵ھ بحکم شرف صادر فرمایا ہے کہ کمیشن تقاریب مذہبی اور کونسل کی رائے مناسب ہے حسبہ فرقہ لنگایت کو اس امر کا مجاز گردانا جائے کہ وہ [illegible] اقسام [illegible] آہنگ دیول ویجناتھ واقع پرلی میں بطور خود ادا کریں اور برہمنوں کو ان میں مداخلت کا کوئی حق نہ ہوگا۔

حسب تعمیل کا انتظام فرما کر نتیجہ سے اطلاع فرمائی جائے۔

(۲) ثنی اطلاعاً خدمت جناب صوبہ دار صاحب صوبہ اورنگ آباد مرسل ہے۔

(۳) مثلث اطلاعاً خدمت جناب صدر ناظم صاحب کوتوالی اضلاع سرکار عالی مرسل ہے فقط

شرحہ دستخط

جناب نواب اختر یار جنگ بہادر مینائی

معتمد

ನವಾಬ್ ಅಖ್ತರ್ ಯಾರ್‌ಜಂಗ್ ಬಹಾದ್ದೂರ್ ಮಿನ್ನೈ
ಕಾರ್ಯದರ್ಶಿ, ಹೊರಡಿಸಿದ ಪರಳಿ ವ್ಯಾಜ್ಯದ ಉರ್ದು ತೀರ್ಪಿನ ಪ್ರತಿ

ತಾ॥ 9ನೇ ಮೆಹರ್ 1338 ರಲ್ಲಿ ಸರ್ಕಾರದ ಧಾರ್ಮಿಕವಿಚಾರ ಖಾತೆಯಿಂದ ಸಾದರಾದ ತೀರ್ವಳಿಕೆ

ಫೈಲ್ 200

ಕಛೇರಿ 1333 ಫಸಲಿ

(1923)

ಸೂ. ನಂ. 5768

ಸರ್ಕಾರದ ಶೀಲು

ಸರ್ ಮಹಾರಾಜಾ ಸಾದರ್ ಅಜಮ್ ಬಹದ್ದೂರ್ (ಸರ್ಕಾರದ ಕಾರ್ಯಾಂಗದ ಅಧ್ಯಕ್ಷರ) ಹುಕ್ಕುಂ ಮೇರೆ.

ಸರ್ಕಾರದ ಧಾರ್ಮಿಕವಿಚಾರಗಳ ಇಲಾಖಾ ಕಾರ್ಯದರ್ಶಿಗಳಾದ ನವಾಬ್ ಅಖ್ತರ್ ಯಾರ್ ಜಂಗ್ ಬಹದ್ದೂರ್ ಮಿನ್ಸೈರವರಿಂದಾ.

ವಿಷಯು—ಪರಳಿ ಬ್ರಾಹ್ಮಣರು ಇತರರಿಗೆ ದೇವಾಲಯದಲ್ಲಿ ಅಭಿಷೇಕ ನಡೆಸುವ ಹಕ್ಕಿನ ಬಗ್ಗೆ ಕೋರಿಕೊಂಡ ವಿಷಯದಲ್ಲಿ.

1338 ನೇ ಫಸಲಿ ಯಾರ್ ಮಾಹೆ ತಾರೀಖು ಹತ್ತರಲ್ಲೂ ಇದೇ ಕಛೇರಿಯಿಂದಾ 4794 ನೇ ನಂಬರಿನಲ್ಲಿ ಸಾದರಾದ ಆಜ್ಞೆಯನ್ನು ಅನುಸರಿಸಿ ತಿಳಿಸುವುದೇನೆಂದರೆ ಧಾರ್ಮಿಕವಿಚಾರಗಳ ಕಮೀಷನರ್‌ರವರಿಂದ ವರದಿಯನ್ನು ತರಿಸಿಕೊಂಡು ಬಾಲಿ-ಇ-ಹುಕುಮತ್ (ಆಡಳಿತ ಇಲಾಖೆ) ಅಭಿಪ್ರಾಯವನ್ನು ಪಡೆದು ರಾಯಲ್ ನ್ಯಾಯಾಲಯಕ್ಕೆ ಒಪ್ಪಿಸಲಾಯ್ತು. ತಾ॥ 7 ನೇ ರಬಿ ಅಲ್ ಅವ್ವಲ್ 1348 ಹೆಚ್. ರಂದು (ತಾ॥15-7-29 ರಂದು) ಫರ್ಮಾನ್‌ರವರ ಹುಕ್ಕುಂ ಮೇಲೆ ತಿಳಿಸುವುದೇನೆಂದರೆ ಧಾರ್ಮಿಕ ವಿಚಾರಣೆಗಳ ಕಮೀಷನರ್‌ರವರು ಮತ್ತು ಕೌನ್ಸಿಲ್‌ನ ಅಭಿಪ್ರಾಯಗಳು ಒಪ್ಪತಕ್ಕದ್ದಾಗಿರುತ್ತೆ. ಅದರಂತೆ ಲಿಂಗಾಯತ ಮತಸ್ಥರು ಪರಳಿ ವೈದ್ಯನಾಥ ದೇವಾಲಯದಲ್ಲಿ ತಮ್ಮ ಸಂಪ್ರದಾಯಾನುಸಾರ ಅಭಿಷೇಕ ವಗೈರೆ ನಡೆಸಿಕೊಳ್ಳಲು ಹಕ್ಕುದಾರರಾಗಿರುತ್ತಾರೆ. ಬ್ರಾಹ್ಮಣರು ಈ ಆಚರಣೆಗಳಿಗೆ ಅಡಚಣೆಗಳನ್ನುಂಟುಮಾಡಲು ಯಾವ ಹಕ್ಕು ಇರುವುದಿಲ್ಲ. ಅದರಂತೆ ಆಜ್ಞೆಯು ಜಾರಿಗೆ ಬರಲು ಏರ್ಪಾಡುಮಾಡಿ ಅದರ ಫಲಿತಾಂಶವನ್ನು ತಿಳಿಸತಕ್ಕದ್ದು.

ನಕಲುಗಳು :—

1) ಔರಂಗಾಬಾದ್ ತಾಲ್ಲೂಕಿನ ಸುಬೇದಾರರಿಗೆ

2) ಸರ್ಕಾರಿಜಿಲ್ಲಾ ಕೊತ್ವಾಲರ ಮುಖ್ಯಾಧಿಕಾರಿಗಳವರಿಗೆ.

(ಸಹಿ), ನವಾಬ್ ಅಖ್ತರ್
ಯಾರ್ ಜಂಗ್ ಬಹಾದ್ದೂರ್ ಮಿನ್ಸೈ,
ಕಾರ್ಯದರ್ಶಿ.


ಮುದ್ರಣ: ಹಿಮಾಲಯಾಕ್ ಆ ದಖನ್ ರೆಸಿಡೆನ್ಸಿ

9 ಮೆಹರ್ 1338 ಫಸಲಿ

7 ರಬಿ ಅಲ್ ಅವ್ವಲ್ 1348

(ತಾ॥ 15-7-1929)

ಪರಳಿ ವ್ಯಾಜ್ಯದ ಕನ್ನಡ ತೀರ್ಪಿನ ಪ್ರತಿ


ವೀರಶೈವ

ಧರ್ಮತರಂಗಿಣೀ


EDITOR & PUBLISHER

Mr H. S. Shivalingashastri

ಶಿವಯೋಗಮಂದಿರದಿಂದ ೧೯೧೧ ರಲ್ಲಿ ಹೊರಡಿಸಿದ ವೀರಶೈವ ಧರ್ಮತರಂಗಿಣೀ ಮಾಸಪತ್ರಿಕೆಯ ಮೊದಲ ಸಂಪುಟದ ಮೊದಲ ಸಂಚಿಕೆ



ಶಿವಯೋಗಮಂದಿರದ ಮಾಸ ಪತ್ರಿಕೆ ವೀರಶೈವ ಧರ್ಮತರಂಗಿಣಿಯ ಮೊದಲ ಸಂಪುಟದ ಮೊದಲ ಸಂಚಿಕೆಯಲ್ಲಿ ಪ್ರಕಟವಾದ ಐದನೆಯ ಜಾರ್ಜ್ ಮಹಾರಾಜರ, ಮೇರಿ ಮಹಾರಾ ಜ್ಞಿಯರ ಭಾವಚಿತ್ರ


ಸುಕುಮಾರ

ಮಾಸ ಪತ್ರಿಕೆ

ಸಂಪುಟ: ೨] ★ [ಸಂಚಿಕೆ. ೫-೬


ಸಂಪಾದಕ

ಶ್ರೀ ಉಮಾಪತಿ ಶಾಸ್ತ್ರಿ, ಬಿ. ಎ.

ಶಿವಯೋಗಮಂದಿರ

ಫೆಬ್ರುವರಿ-ಮಾರ್ಚ ★ ೧೯೫೨

ಪ್ರಾಚೀನ ಸುಕುಮಾರ ಪತ್ರಿಕೆಯ ಮುಖಪುಟ



Regd. No. B 2150

ಶ್ರೀ ಮದ್ವೀರಶೈವಶಿವಯೋಗಮಂದಿರದ

ಶ್ರೀರೇವಣಸಿದ್ಧೇಶ್ವರ ವಾಚನಾಲಯದಲ್ಲಿ

ಬೆಲೆಗೆ ದೊರೆಯುವ ಗ್ರಂಥಗಳು

೧	ಕಾರಣಿಕ ಕುಮಾರಯೋಗಿ	೨—೦—೦
೨	ಕೈವಲ್ಯೋಪನಿಷತ್ (ಸದಾಶಿವಭಾಷ್ಯ)	೨—೮—೦
೩	ಅನಾದಿವೀರಶೈವ ಸಂಗ್ರಹ	೨—೮—೦
೪	ಶಿವಯೋಗಮಂದಿರದ ಭಜನಾವಳಿ (ಭಾಗ-೧)	೧—೬—೦
೫	ಲಿಂ. ಅಪ್ಪಯ್ಯಸ್ವಾಮಿಗಳ ಜೀವನ ಚರಿತೆ	೧—೮—೦
೬	ವೀರಶೈವ ದೀಕ್ಷಾವಿಧಿ	೦—೧೨—೦
೭	ಕುಮಾರೇಶ್ವರ ವಚನ	೦—೪—೦
೮	ಇಷ್ಟಲಿಂಗದ ಆವಶ್ಯಕತೆ	೦—೩—೦
೯	ಕುಮಾರೇಶ್ವರ ರಗಳೆ	೦—೨—೦
೧೦	ಮೊಗ್ಗಿಯ ಮಾಲೆ	೦—೩—೦
೧೧	ಸದಾಶಿವ ಲೀಲೆ (ಚೆನ್ನಕವಿ ಕೃತ)	೦—೮—೦
೧೨	ಮಹಾಂತೇಶ ಲಾವಣಿ	೦—೧—೦
೧೩	ಬಸವರಾಜ ಸ್ತವನ	೦—೬—೦
೧೪	ಚಿದ್ಗುರು ಪ್ರಶಂಸೆ	೦—೨—೦
೧೫	ವೀರಶೈವ ಸಿದ್ಧಾಂತ ಪ್ರವೇಶಿಕಾ	೦—೨—೦
೧೬	ಮರುಳಸಿದ್ಧೇಶ್ವರ ಅಷ್ಟೋತ್ತರಶತ ನಾಮಾವಳಿ	೦—೪—೦
೧೭	ನಡೆ-ನುಡಿಯ ಪದ್ಯಾವಳಿ	೦—೨—೦
೧೮	ಅನುಭವ ಲಹರಿ	೦—೬—೦


ವ್ಯವಸ್ಥಾಪಕ :

ಶ್ರೀ ರೇವಣಸಿದ್ಧೇಶ್ವರ ವಾಚನಾಲಯ

ತಾ॥ ಬದಾಮಿ] ಶಿವಯೋಗಮಂದಿರ [ಜಿ॥ ವಿಜಾಪೂರ

ಈ ಪತ್ರಿಕೆಯು ಶ್ರೀ ಸೋಮಶೇಖರ ದೇವರು ಅವರಿಂದ ಶ್ರೀ ಸದಾಶಿವ ಮುದ್ರಣಾಲಯ, ಶಿವಯೋಗಮಂದಿರದಲ್ಲಿ ಮುದ್ರಿಸಲ್ಪಟ್ಟು, ಸಂಪಾದಕರಾದ ಶ್ರೀ ಉಮಾಪತಿ ಶಾಸ್ತ್ರಿ, ಬಿ. ಎ. ಅವರಿಂದ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರೇವಣಸಿದ್ದೇಶ್ವರ ವಾಚನಾಲಯದ ಗ್ರಂಥಗಳ ವಿವರ
(ಸುಕುಮಾರ ಪತ್ರಿಕೆಯ ಬೆನ್ನುಪುಟ)



ಶತಮಾನೋತ್ಸವ ಆಮಂತ್ರಣ ಪತ್ರಿಕೆ

೩. ವಕ್ತೃ ವಿವರ

ಅ. ವ್ಯಕ್ತಿಗಳು
ಆ. ಸಂಸ್ಥೆಗಳು

೨ ವಕ್ತ ವಿವರ

ಅ. ವ್ಯಕ್ತಿಗಳು

ಪೂಜ್ಯ ಶ್ರೀ ಜಗದ್ಗುರು ಸಂಗನಬಸವ ಮಹಾಸ್ವಾಮಿಗಳು, ಶ್ರೀ ಕೊಟ್ಟೂರುಸ್ವಾಮಿ ಸಂಸ್ಥಾನ ಮಠ ಹೊಸಪೇಟೆ-ಬಳ್ಳಾರಿ-ಹಾಲಕೇರಿ

ಶ್ರೀ ಜಗದ್ಗುರು ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು, ಆನಂದಪುರಂ

ಶ್ರೀ ಸಿದ್ಧರಾಮ ಸ್ವಾಮಿಗಳು, ನಾಗನೂರು ರುದ್ರಾಕ್ಷಿ ಮಠ ಬೆಳಗಾವಿ

ಶ್ರೀ ಅಭಿನವಕುಮಾರ ಚೆನ್ನಬಸಪ್ಪ ಸ್ವಾಮಿಗಳು. ಒಲೆಮಠ, ಜಮಖಂಡಿ

ಶ್ರೀ ಪ್ರೊ ಉಮಾಪತಿಶಾಸ್ತ್ರಿಗಳು ಬೆಕ್ಕಿನಕಲ್ಮಠ, ಆನಂದಪುರಂ

ಶ್ರೀ ರೇಣುಕಾದೇವರು ಕಪ್ಪನಹಳ್ಳಿ, ಶಿಕಾರಿಪುರ

ಶ್ರೀ ಕುಮಾರ ದೇವರು, ರಾಜೂರು ನಾಗನೂರು ರುದ್ರಾಕ್ಷಿಮಠ, ಬೆಳಗಾವಿ

ಶ್ರೀ ಡಾ. ಜಿ. ಕೆ ಹಿರೇಮಠ, ಬಾಗಲಕೋಟೆ

ಶ್ರೀ ಡಾ. ಜಿ. ಕೆ. ಹಿರೇಮಠ, ನಿಡಸೋಸಿ

ಶ್ರೀ ಎ ಡಿ ರಾಚನಾಯ್ಕ, ನಿವೃತ್ತ ಪ್ರಾಧ್ಯಾಪಕರು, ಬೆಳಗಾವಿ

ಶ್ರೀ ಡಾ. ಮೃತ್ಯುಂಜಯ ರುಮಾಲೆ ಹೊಸಪೆಟೆ

ಶ್ರೀ ಎಸ್. ಜಿ. ಹೊಳೆಮಠ, ಶಿವಯೋಗಮಂದಿರ

ಶ್ರೀ ಪ್ರಕಾಶ ಗಿರಿಮಲ್ಲನನವರು, ನಾಗನೂರು ರುದ್ರಾಕ್ಷಿಮಠ, ಬೆಳಗಾವಿ

ಶ್ರೀ ಕುಮಾರ ಎಸ್ ಹಿರೇಮಠ, ಶಿವಯೋಗಮಂದಿರ

ಶ್ರೀಯುತ ಶ್ರೀಶೈಲ ಶಿಕ್ಷಕರು, ಶಿವಯೋಗಮಂದಿರ

ಆ. ಸಂಸ್ಥೆಗಳು

೧. ವೀರಶೈವ ಲಿಂಗಾಯಿತ ಅಧ್ಯಯನ ಕೇಂದ್ರ, ನಾಗನೂರು ರುದ್ರಾಕ್ಷಿಮಠ, ಬೆಳಗಾವಿ

೨. ಶ್ರೀ ವಿಜಯಮಹಾಂತೇಶ್ವರ ಗ್ರಂಥಾಲಯ, ಶಿವಯೋಗಮಂದಿರ, ಬಾದಾಮಿ

೩. ಡಾ. ಆರ್.ಸಿ. ಹಿರೇಮಠ ಅಧ್ಯಯನ ಕೇಂದ್ರ, ಕರ್ನಾಟಕ ವಿ.ವಿ. ಧಾರವಾಡ

೪. ಜೆ.ಎಸ್.ಎಸ್. ಅಧ್ಯಯನ ಕೇಂದ್ರ ಗ್ರಂಥಾಲಯ, ಗದಗ

೫. ಜೆ.ಎಮ್.ಎಮ್.ಎಸ್. ಗ್ರಂಥಾಲಯ, ಆನಂದಪುರಂ

೬. ಶ್ರೀ ಮಂಜುನಾಥೇಶ್ವರ ಪ್ರಾಚ್ಯ ಹಾಗೂ ಸಂಶೋಧನಾ ಕೇಂದ್ರ, ಧರ್ಮಸ್ಥಳ

೪. ಪರಾಮರ್ಶನ ಗ್ರಂಥಗಳು

ಅ. ಕೃತಿಗಳು
ಆ. ಸ್ಮರಣ ಸಂಪುಟಗಳು
ಇ. ವರದಿಗಳು, ನಿರ್ಣಯಗಳು
ಈ. ಪತ್ರಿಕೆಗಳು, ನಿಯತಕಾಲಿಕೆಗಳು

೪. ಪರಾಮರ್ಶನ ಗ್ರಂಥಗಳು

ಅ. ಕೃತಿಗಳು

೧. ಅನುಭಾವಿ, ಆರ್ ಎಲ್ ಪೊಲೀಸ ಪಾಟೀಲ – ಶ್ರೀ ಜಗದ್ಗುರು ಅನ್ನದಾನೇಶ್ವರ ಸಂಸ್ಥಾನ ಮಠ ಮುಂಡರಗಿ – ೧೯೯೫

೨. ಅರಳು, ಡಾ. ಗುರುಲಿಂಗ ಕಾಪಸ – ಶ್ರೀ ಗುರು ಚನ್ನಬಸವೇಶ್ವರ ಗ್ರಂಥಮಾಲೆ, ಶ್ರೀ ಮೊಟಗಿ ಮಠ, ಅಥಣಿ– ಬೆಳಗಾವಿ – ೨೦೦೩

೩. ಅರವತ್ತರರಿವು ಪ್ರೊ. ಎಸ್.ಬಿ. ಕರಿಭರಮಗೌಡ – ಅಭಿನಂದನಾ ಗ್ರಂಥ, ಶ್ರೀ ಸನ್ನಿಧಿಯವರ ಷಷ್ಟ್ಯಬ್ಧ ಸಮಾರಂಭ ಸಮಿತಿ, ಅನ್ನದಾನೇಶ್ವರ ಸಂಸ್ಥಾನ ಮಠ ಮುಂಡರಗಿ – ೨೦೦೪

೪. ಅರಟಾಳು ರುದ್ರಗೌಡರು, ಎಸ್. ಎಮ್. ಅಂಗಡಿ – ವೀರಶೈವ ಅಧ್ಯನ ಸಂಸ್ಥೆ. ಶ್ರೀ ಜಗದ್ಗುರು ತೋಟದಾಚಾರ್ಯ ಸಂಸ್ಥಾನಮಠ, ಗದಗ – ೧೯೮೪

೫. ಅಖಿಲ ಭಾರತ ವೀರಶೈವ ಮಹಾಸಭೆಯ ಸಧ್ಯಕ್ಷರುಗಳ ಭಾಷಣ ಸಂಗ್ರಹ ಕೆ.ಎಂ.ಶಿವಲಿಂಗಯ್ಯ – (ಸಂ) ಅಖಿಲಭಾರತ ವೀರಶೈವ ಮಹಾಸಭೆ ಸ್ವಾಗತ ಸಮೀ, ಮೈಸೂರು – ೧೯೮೩

೬ ಅರಳು, ಡಾ. ಗುರುಲಿಂಗ ಕಾಪಸ – ಶ್ರೀ ಗುರು ಚನ್ನಬಸವೇಶ್ವರ ಗ್ರಂಥಮಾಲೆ, ಶ್ರೀ ಮೊಟಗಿ ಮಠ, ಅಥಣಿ– ಬೆಳಗಾವಿ – ೨೦೦೩

೭ ಅಪೂರ್ವ ಸಂಗಮ, ಗೋ. ರು ಚನ್ನಬಸಪ್ಪ – ಅಖಿಲ ಭಾರತ ವೀರಶೈವ ಮಹಾಸಭೆ, ಬಸವಸದನ, ೬೪/೪ ವಿಶ್ವನಾಥರಾವ್ ರಸ್ತೆ, ಮಾಧವನಗರ ಬೆಂಗಳೂರು – ೨೦೦೩

೮. ಅರಟಾಳ ರುದ್ರಗೌಡರ ಚರಿತ್ರೆ, ಡಾ. ಎಂ.ಎಂ ಕಲಬುರ್ಗಿ – ಪ್ರಸಾರಾಂಗ, ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆ, ಬೆಳಗಾವಿ

೯. ಶ್ರೀ ಅನ್ನದಾನೇಶ್ವರ ಮಹಾಸ್ವಾಮಿಗಳು – ಶ್ರೀ ಶಿವಯೋಗಮಂದಿರ ಸಂಸ್ಥೆಯ ಕೈಪಿಡಿ. ಶ್ರೀಮದ್ವೀರಶೈವ ಶಿವಯೋಗ ಮಂದಿರ ಸಸ್ಥೆ, ಶಿವಯೋಗ ಮಂದಿರ, ಬಾದಾಮಿ, ಬಾಗಲಕೋಟೆ – ೧೯೯೭

೧೦. ಅರ್ಚನ ಮಲ್ಲಿಕಾರ್ಜುನ ದೇವರು– ಜಗದ್ಗುರು ಮೂರುಸಾವಿರ ಮಠ ಕುಮಾರೇಶ್ವರ ಶಿವಯೋಗಿ ಸಂಘದ ದ್ವಾದಶಿ ವಾರ್ಷಿಕ ಮಹೋತ್ಸವ ಸಮೀತಿ, ಹುಬ್ಬಳ್ಳಿ ೧೯೭೮

೧೧. ಇಳಕಲ್ಲ ಮಹಾಂತ ಶಿವಯೋಗಿ.ಹಿರೇಮಲ್ಲೂರ ಈಶ್ವರನ್ – ವೀರಶೈವ ಅಧ್ಯಯನ ಸಂಸ್ಥೆ, ಶ್ರೀಜಗದ್ಗುರು ತೋಂಟದಾಚಾರ್ಯ ಸಂಸ್ಥಾನ ಮಠ ಗದಗ ೧೯೯೫

೧೨. ಕಾರಣಿಕ ಯುಗಪುರುಷ ಶ್ರೀ ಕುಮಾರ ಶಿವಯೋಗಿಗಳು. ಶ್ರೀ ಅನ್ನದಾನೇಶ್ವರ ಮಹಾಸ್ವಾಮಿಗಳು– (ಸಂ) (ಪ್ರ) ಶ್ರೀ ಜಗದ್ಗುರು ಅನ್ನದಾನೇಶ್ವರ ಸಂಸ್ಥಾನ ಮಠ, ಗದಗ–೧೯೯೯

೧೩. ಕಾರಣಿಕ ಯುಗಪುರುಷ, ಶ್ರೀ ಅನ್ನದಾನೇಶ್ವರ ಮಹಾಸ್ವಾಮಿಗಳು – ಶ್ರೀ ಅನ್ನದಾನೇಶ್ವರ ಧರ್ಮ ಸಂಸ್ಕೃತಿ ಪ್ರಚಾರ ಮಂಡಲ ಸಂಸ್ಥಾನ ಮಠ, ಮುಂಡರಗಿ ಗದಗ – ೨೦೦೯

೧೪. ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ, ಡಾ. ಎಂ ಎಸ್. ಪಾಟೀಲ - ಬಸವ ಸಮಿತಿ ಬಸವ ಭವನ, ಬೆಂಗಳೂರು - ೨೦೦೯

೧೫. ಕುಮಾರ ದೀಪ್ತಿ, ಕುಮಾರ ದೇವರು ರಾಜೂರು - ಶ್ರೀಮದ್ವೀರಶೈವ ಶಿವಯೋಗ ಮಂದಿರ ಶತಮಾನೋತ್ಸವ ಸಮೀತಿ, ಶಿವಯೋಗ ಮಂದಿರ ಬಾದಾಮಿ, ಬಾಗಲಕೋಟೆ - ೨೦೧೦

೧೬. ಕಾಯಕ ಪರಿಣಾಮಿ ಲಿಂಗಣ್ಣ ಸತ್ಯಂಪೇಟೆ ಮತ್ತು ಎಂ. ಬಂಡೆಪ್ಪ - (ಗೌ.ಗ್ರ) ಪೂಜ್ಯ ಚೆನ್ನಬಸವ ಪಟ್ಟದೇವರ ಶತಮಾನೋತ್ಸವ ಸಮೀತಿ, ಬಾಲ್ಕಿ - ೧೯೯೧

೧೭. ಕರ್ನಾಟಕ ವೀರಶೈವ ಮಠಗಳು, ಚಂದ್ರಶೇಖರ ನಾರಾಯಣಪುರ - ಗೆಳೆಯ ಪ್ರಕಾಶನ, ಚೆನ್ನಾಪುರ ರಸ್ತೆ ವಿನಾಯಕನಗರ ಕೋಟೆ, ಚಿಕ್ಕಮಂಗಳೂರು - ೨೦೦೨

೧೮. ಕಾರಣಿಕ ಕುಮಾರಯೋಗಿ, ಡಾ. ಜ.ಚ.ನಿ. - ಲಿಂಗಾಯತ ಅಧ್ಯಯನ ಸಂಸ್ಥೆ ವಿರಕ್ತಮಠ ದೇಶನೂರು, ಬೈಲಹೊಗಲ, ಬೆಳಗಾವಿ -೨೦೦೨

೧೯. ಕೈವಲ್ಯ, ಪ್ರೊ. ಜೆ.ಎಸ್. ಸಿದ್ದಲಿಂಗಯ್ಯ - (ಸಂ. ಸಂ) ಶ್ರೀ ಸರ್ವಭೂಷಣ ಶಿವಯೋಗಿಗಳ ಮಠದ ಟ್ರಸ್ಟ, ಕೆಂಪೇಗೌಡ ವೃತ್ತ, ಬೆಂಗಳೂರು - ೧೯೯

೨೦. ಗುರುದೇವ/ ಶ್ರೀ ಸದಾಶಿವ ಮಹಾಶಿವ ಯೋಗಿಗಳು, ಶ್ರೀ ಅನ್ನದಾನೇಶ್ವರ ಮಹಾಸ್ವಾಮಿಗಳು- ಶ್ರೀ ಅನ್ನದಾನೇಶ್ವರ ಧರ್ಮ ಸಂಸ್ಕೃತಿ ಪ್ರಚಾರ ಮಂಡಲ ಸಂಸ್ಥಾನ ಮಠ, ಮುಂಡರಗಿ ಗದಗ-೨೦೦೭

೨೧. ಡಾ. ಚನ್ನಬಸಪ್ಪನವರು ಜೀವನ ಮತ್ತು ಸಾಧನೆ, ಡಾ. ಬಾಲಪ್ಪ ಸೀಗೆಹಳ್ಳಿ - ವೀರಶೈವ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರು ರುದ್ರಾಕ್ಷಿಮಠ, ಬೆಳಗಾವಿ - ೧೯೯೩

೨೨. ಡಾ.ಮೂಜಗಂ ಜೀವನ- ಸಾಧನೆ, ಮಹಾಂತೇಶ ಗೋಟಿಹಾಳ - ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಲ, ಮೂರುಸಾವಿರ ಮಠ, ಹುಬ್ಬಳ್ಳಿ - ೨೦೦೧

೨೩. ಪರಂಪರೆಗೆ ಹೊಸ ಮುನ್ನುಡಿ, ಶಿ.ಹಿ ಸಂಕನೂರು - ಶ್ರೀ ಅನ್ನದಾನೇಶ್ವರ ಸ್ವಾಮಿ, ಶ್ರೀ ವೀರೇಶ ಹಿರೇಮಠ.ಗುಡೂರ - ೨೦೦೯

೨೪. ಫ.ಗು ಹಳಕಟ್ಟಿ ಸಮಗ್ರ ಸಾಹಿತ್ಯ, ಡಾ. ಪಿ.ಕೆ. ರಾಠೋಡ ಗದಗ (ಸಂ)ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರ, ಬಿ.ಎಲ್.ಡಿ.ಇ. ಸಂಸ್ಥೆ, ಬೀಜಾಪುರ - ೨೦೦೭

೨೫. ಬಾದಾಮಿ, ಡಾ. ಶಿಲಾಕಾಂತ ಪತ್ತಾರ - ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ - ೨೦೦೬

೨೬. ಮಹಾಂತ, ಬಿ.ಎಂ. ತೆಳಗೌಡ ಮತ್ತು ಸಂಗಡಿಗರು (ಸಂ)- ಇಳಕಲ್ಲ ಪೂಜ್ಯ ಶ್ರೀ ನಿ.ಪ್ರ ಮಹಾಸ್ವಾಮಿಗವರ ಪಟ್ಟಾಭಿಷೇಕದ ದ್ವಾದಶಿ ವಾರ್ಷಿಕೋತ್ಸವ ಸಮೀತಿ, ಇಳಕಲ್ಲ - ೧೯೮೬

೨೭. ಯುಗದ ಉತ್ಸಾಹ ಕುಮಾರ ಶಿವಯೋಗಿಗಳು, ಸಿದ್ಧಲಿಂಗ ದೇವರು - ಶ್ರೀ ಕುಮಾರೇಶ್ವರ ಜಯಂತಿ ಸಮೀತಿ ಪ್ರಕಾಶನ, ಬಸವನಬಾಗೇವಾಡಿ - ೨೦೧೦

೨೮. ರಾಷ್ಟ್ರ ಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ, ಗ.ಸ ಹಾಲಪ್ಪ - ಹರ್ಡೇಕರ ಮಂಜಪ್ಪ ಸ್ಮಾರಕ ಗ್ರಂಥಮಾಲೆ, ಧಾರವಾಡ - ೧೯೬೬

೨೯. ಲಿಂಗಾಯತ ಆಧುನಿಕ ಸಂದರ್ಭ, ಆರ್. ಪಿ. ಅಪರಂಜ - ನಾಗನೂರು ಶಿವಬಸವ ಮಹಾಸ್ವಾಮಿಗಳು, ಹಳೇ ವಿದ್ಯಾರ್ಥಿ ಸಂಘ, ನಾಗನೂರು ರುದ್ರಾಕ್ಷಿಮಠ, ಶಿವಬಸವ ನಗರ, ಬೆಳಗಾವಿ - ೨೦೧೦

೩೦. ರಾಮಕೃಷ್ಣ ಮರಾಠೆ ದಾಸೋಹ, ಡಾ. ಶಿವಬಸವಸ್ವಾಮಿಗಳು, ರುದ್ರಾಕ್ಷಿ ಮಠ ಬೆಳಗಾವಿ. - ೨೦೦೭

೩೧. ವಾರದ ಮಲ್ಲಪ್ಪನವರು, ಡಾ। ವಿ. ಶಿವಾನಂದ - ವೀರಶೈವ ಅಧ್ಯಯನ ಸಂಸ್ಥೆ. ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ-೧೯೭೭

೩೨. ವಾರಿಧಿ ಮೈದೆಗೆದರೆ, ಟಾ. ಎಸ ಶಿವಾನಂದ - ಜಗದ್ಗುರು ಜಗದ್ಗುರು ಕೊಟ್ಟೂರು ಮಹಾಸ್ವಾಮಿ ಸಂಸ್ಥಾನ ಮಠ, ಹೊಸಪೇಟೆ ಬಳ್ಳಾರಿ - ೨೦೧೦

೩೩. ವಿಜಯ ಮಹಾಂತೇಶ್ವರ ಲೀಲೆ, ಕಲ್ಯಾಣಪ್ಪ ಬ್ಯಾಳಿ - ಮಹಾಂತ ಸ್ವಾಮಿಗಳು ಚಿತ್ತರಗಿ, ಇಳಕಲ್ಲ - ೧೯೭೪

೩೪. ವಿಭೂತಿ ಮಹಾಂತಮಹಾಸ್ವಾಮಿ - ಶಿವದ್ವೈತ ತತ್ವ ಪ್ರಚಾರಕ ಸಮೀತಿ ರಿಯಾಪುರ, ಚಿಕ್ಕಮಂಗಳೂರು - ೧೯೬೧

೩೫. ವೀರವಿರಾಗಿ ಶಿವಬಸವ ಶಿವಯೋಗಿ, ಶ್ರೀ ಶಿವಲಿಂಗ ಸ್ವಾಮಿಗಳು ಹುಕ್ಕೇರಿ - ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಲ, ಮೂರುಸಾವಿರ ಮಠ, ಹುಬ್ಬಳ್ಳಿ - ೧೯೮೨

೩೬. ವೀರಶೈವ ಧರ್ಮ : ಡಾ ಎಂ ಚಿದಾನಂದ ಮೂರ್ತಿ - ಭಾರತೀಯ ಸಂಸ್ಕೃತಿ ಮಿಂಚು ಪ್ರಕಾಶನ. ವಿಜಯನಗರ ೨ನೇಹಂತ, ೪ನೇ ಅಡ್ಡರಸ್ತೆ ೧೧ನೇ ಮುಖ್ಯರಸ್ತೆ ಬೆಂಗಳೂರು ೨೦೦೦

೩೭. ವಿಭೂತಿ ನಿರ್ಮಾಣ ವಿಧಾನ, ಸಿದ್ದಪ್ಪ ಲಂಗೋಟಿ - ಚಿತ್ತರಗಿಯ ಶ್ರೀ ವಿಜಯ ಮಹಾಂತೇಶ್ವರ ಧರ್ಮ ಪ್ರಸಾರ ಮಂಡಲ, ಇಳಕಲ್ಲ - ೧೯೮೪

೩೮. ವೀರಶೈವ ಮಹಾಪುರುಷರು ಭಾಗ ೧, ಬ. ಶಿವಮೂರ್ತಿಶಾಸ್ತ್ರಿ-ಶರಣ ಸಾಹಿತ್ಯ ಕಾರ್ಯಾಲಯ, ರಂಗಸ್ವಾಮಿ ಗುಡಿಬೀದಿ, ಬಳೆಪೇಟೆ ಬೆಂಗಳೂರು-೧೯೫೩

೩೯. ವಿಭೂತಿ ಮಹಾಂತಮಹಾಸ್ವಾಮಿ - ಶಿವದ್ವೈತ ತತ್ವ ಪ್ರಚಾರಕ ಸಮೀತಿ ರಿಯಾಪುರ, ಚಿಕ್ಕಮಂಗಳೂರು - ೧೯೬೧

೪೦. ವೀರಶೈವ ಕರದರ್ಪಣ, ಟಿ. ಪುಟ್ಟಸ್ವಾಮಯ್ಯ ಮತ್ತು ಚನ್ನಪ್ಪ ಟಿ ರ್ಯ - ದಿ ಟ್ರೇಡ್ಸ - ಪಬ್ಲಿಸಿಟಿ ಕಾರ್ಪೋರೇಷನ್ ಲಿಮಿಟೆಡ್, ಬೆಂಗಳೂರು - ೧೯೨೭

೪೧. ವೀರಶೈವ ವೇದಾಧಿಕಾರ ವಿಜಯ, ಆಸ್ಥಾನ ವಿದ್ವಾನ್ ಎಂಜಿ ನಂಜುಂಡರಾಧ್ಯರು - ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ। ಪಾ। ಮಹಾದೇವಯ್ಯನವರು ಬೆಳಗಾವಿ - ೧೯೯೩

೪೨ ವೀರಶೈವ ಮಹಾಸಭೆ ನೂರುವರ್ಷ ನಡೆದುಬಂದ ದಾರಿ, ಡಾ. ಚೆನ್ನಕ್ಕ ಪಾವಟೆ - ಅಖಿಲ ಭಾರತ ವೀರಶೈವ ಮಹಾಸಭೆ, ಬೆಂಗಳೂರು - ೨೦೧೦

೪೩. ಶಿವಯೋಗ, ಶ್ರೀ ಸದಾಶಿವ ಶಿವಯೋಗಿಗಳು - ವಜ್ರಮಹೋತ್ಸವ ಸಮೀತಿ ಶಿವಯೋಗ ಮಂದಿರ, ೧೯೭೯

೪೪. ಶಿವಯೋಗ ಮಂದಿರ, ಅನ್ನದಾನೇಶ್ವರ ಮಹಾಸ್ವಾಮಿಗಳು -ಜ್ಞಾನದಾಸೋಹ ಮಣಿಮಾಲೆ, ಸಿದ್ಧಗಂಗಾ ಪ್ರಕಾಶನ ತುಮಕೂರು - ೨೦೧೦

೪೫. ಶಿವಯೋಗ ಮಂದಿರ, ಶ್ರೀ ಅನ್ನದಾನೇಶ್ವರ ಮಹಾಸ್ವಾಮಿಗಳು - ಶ್ರೀ ಜಗದ್ಗುರು ಸನ್ನದಾನೇಶ್ವರ ಧರ್ಮ ಪ್ರಚಾರ ಮಂಡಲ ಸನ್ಮಾನ ಮಠ, ಮುಂಡರಗಿ - ೧೯೮೬

೪೬. ಶಿವದೀಪ್ತಿ, ಡಾ ಆರ್ ಸಿ ಹಿರೇಮಠ - ಡಾ ಶಿವಬಸವ ಮಹಾಸ್ವಾಮಿಗಳು ನಾಗನೂರು ರುದ್ರಾಕ್ಷಿಮಠ, ಬೆಳಗಾವಿ - ೧೯೯೦

೪೭ ಶಿವದೀಪ್ತಿ, ಡಾ ಆರ್ ಸಿ ಹಿರೇಮಠ - ಡಾ ಶಿವಬಸವ ಮಹಾಸ್ವಾಮಿಗಳು ನಾಗನೂರು ರುದ್ರಾಕ್ಷಿಮಠ, ಬೆಳಗಾವಿ - ೧೯೯೦

೪೮. ಶಿವಯೋಗಮಂದಿರ, ಶ್ರೀ ಮೂಜಗಂ - ಶ್ರೀ ಮೂರುಸಾವಿರ ಮಠದ ಕುಮಾರೇಶ್ವರ ಶಿವಯೋಗಿ ಸಂಘದ ದ್ವಾದಶ ವಾರ್ಷಿಕ ಮಹೋತ್ಸವ ಸಮೀತಿ, ಹುಬ್ಬಳ್ಳಿ ೧೯೭೮

೪೯. ಶಿವಯೋಗ ಮಂದಿರದ ಬೆಳಗು, ಪ್ರೊ ಜಿ ಎಂ ಉಮಾಪತಿ ಶಾಸ್ತ್ರಿ (ಸಂ) - ಸುವರ್ಣ ಮಹೋತ್ಸವ ಸಮೀತಿ ಶಿವಯೋಗಮಂದಿರ, ಬಾದಾಮಿ - ೧೯೬೦

೫೦. ಶಿವಯೋಗ ಮಂದಿರದಲ್ಲೊಂದು ಅಪರೂಪದ ಗ್ರಂಥಾಲಯ, ಡಾ. ಬಿ.ಡಿ ಕುಂಬಾರ - ಕುಮಾರೇಶ್ವರ ಮಾಧ್ಯಮಿಕ ಶಾಲೆಯ ಬೆಳ್ಳಿಹಬ್ಬ ಸ್ಮರಣ ಸಂಚಿಕೆ ಬಾದಾಮಿ - ೧೯೯೭

೫೧. ಶಿವಲಿಂಗ ವಿಜಯ, ಗೌ.ಮ ಉಮಾಪತಿಶಾಸ್ತ್ರಿ - (ಸಂ) ಷಷ್ಟ್ಯಬ್ಧ ಸಮಾರಂಭ ಸಮೀತಿ, ಶ್ರೀ ಹುಕ್ಕೇರಿಮಠ, ಹಾವೇರಿ - ೧೯೭೮

೫೨. ಶಿವಯೊಗಮಂದಿರ ಶತಸಂವತ್ಸರ, ಡಾ. ಮೃತ್ಯುಂಜಯ ರುಮಾಲೆ - ಕೊಟ್ಟೂರುಸ್ವಾಮಿ ಕಲ್ಯಾಣ ಕೇಂದ್ರ, ಜಗದ್ಗುರು ಕೊಟ್ಟೂರು ಸ್ವಾಮಿ ಸಂಸ್ಥಾನ ಮಠ, ಹೊಸಪೇಟೆ ಬಳ್ಳಾರಿ - ೨೦೧೦

೫೩. ಶಿವಯೋಗ, ಶ್ರೀ ಸದಾಶಿವ ದೇವರು, ಕುಮಾರ ದೇವರು ರಾಜೂರ -ಸದಾಶಿವ ದೇವರ ಪಟ್ಟಾಭಿಷೇಕ ಸಮೀತಿ, ಹುಕ್ಕೇರಿಮಠ, ಹಾವೇರಿ - ೨೦೧೦

೫೪. ಶಿವಯೋಗಮಂದಿರ ಕಿರಣ, ಕುಮಾರ ದೇವರು ರಾಜೂರು – ಜಗದ್ಗುರು ಕೊಟ್ಟೂರು ಮಹಾಸ್ವಾಮಿ ದೇವಸ್ಥಾನ ಮಠ, ಹೊಸಪೇಟೆ ಬಳ್ಳಾರಿ – ೨೦೧೦

೫೫. ಶಿವಯೋಗಮಂದಿರ ಅಭ್ಯಾಸ ಪತ್ರಿಕೆ, ಶ್ರೀ ಅನ್ನ ದಾನೇಶ್ವರ ಮಹಾಸ್ವಾಮಿಗಳು – ಶ್ರೀ ಶಿವಯೋಗ ಮಂದಿರ ಸಸ್ಥೆ, ಶಿವಯೋಗಮಂದಿರ, ಬಾದಾಮಿ, ಬಾಗಲಕೋಟೆ – ೨೦೦೫

೫೬. ಶಿವಯೋಗಮಂದಿರ ಸಾಧನೆಯ ವರದಿ, ಶ್ರೀ ಅನ್ನ ದಾನೇಶ್ವರ ಮಹಾಸ್ವಾಮಿಗಳು – ಶ್ರೀ ಅನ್ನದಾನೇಶ್ವರ ಮಹಾಸಂಸ್ಥಾನ ಮಠ, ಮುಂಡರಗಿ – ೨೦೦೦

೫೭. ಶಿವಯೋಗಿರಾಜ ಶ್ರೀ ಶಿವಬಸವ, ಶ್ರೀ ಬಸವಲಿಂಗ ಪಟ್ಟಾಧ್ಯಕ್ಷರು – ಶ್ರೀಮನ್ ನಿರಂಜನ ಪ್ರಣವಸ್ವರೂಪಿ ಶಿವಲಿಂಗ ಮಹಾಸ್ವಾಮಿಗಳವರು, ಹುಕ್ಕೇರಿ ಮಠ ಹಾವೇರಿ – ೧೯೯೧

೫೮. ಶಿವಯೋಗ ಮಂದಿರ, ಶ್ರೀ ಮೂಜಗಂ – ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಲ, ಮೂರುಸಾವಿರ ಮಠ, ಹುಬ್ಬಳ್ಳಿ ೧೯೯೦

೫೯. ಶಿವಲಿಂಗ ವಿಜಯ, ಗೌ. ಮ ಉಮಾಪತಿಶಾಸ್ತ್ರಿ (ಸಂ) – ಷಷ್ಠ್ಯಬ್ದ ಸಮಾರಂಭ ಸಮಿತಿ, ಹುಕ್ಕೇರಿ ಮಠ – ೧೯೭೮.

೬೦. ಶ್ರೀ ಸೋಮನಾಥ ಶಾಸ್ತ್ರಿಗಳ ಚರಿತ್ರೆ, ಶ್ರೀಮತಿ ಶಿವಲಿಂಗಮ್ಮ ಕಟ್ಟಿ – ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಲ, ಮೂರುಸಾವಿರ ಮಠ, ಹುಬ್ಬಳ್ಳಿ – ೧೯೯೮

೬೧. ಶ್ರೀ ಕುಮಾರೇಶ್ವರ ಪುರಾಣ ಗಧ್ಯಾನುವಾದ, ಡಾ. ಬಿ.ವ್ಹಿ ಮಲ್ಲಾಪುರ – ಜಗದ್ಗುರು ಕೊಟ್ಟೂರು ಮಹಾಸ್ವಾಮಿ ಸಂಸ್ಥಾನ ಮಠ, ಹೊಸಪೇಟೆ ಬಳ್ಳಾರಿ – ೨೦೧೦

೬೨. ಶ್ರೀಮದ್ವೀರಶೈವ ಶಿವಯೋಗ ಸಂಸ್ಥೆಯ ನಿಯಮಗಳು, ಹಾನಗಲ್ಲ ಕುಮಾರಸ್ವಾಮಿಗಳು – ಶಿವಯೋಗ ಮಂದಿರ, ಬಾದಾಮಿ – ೧೯೦೯

೬೩. ಶ್ರೀ ಹಾನಗಲ್ಲ ಕುಮಾರೇಶ್ವರ ಸುಪ್ರಭಾತ, ಕವಿ ಗಂಗಪ್ಪ – ಹುಬ್ಬಳ್ಳಿ ಮೂರುಸಾವಿರ ಮಠದ ಜಗದ್ಗುರು ಗಂಗಾಧರ ಯೋಗಿಗಳು, ಮೂರುಸಾವಿರ ಮಠ ದ್ವಾದಶಿ ಮಹೀತ್ಸವ ಸಮೀತಿ, ಹುಬ್ಬಳ್ಳಿ – ೧೯೭೨

೬೪. ಶ್ರೀ ಹಾನಗಲ್ಲ ಕುಮಾರಸ್ವಾಮಿಗಳವರ "ಸ್ಮಾರಕ ಮುದ್ರಿಕೆ" ವ್ಹಿ.ಬಿ. ಪುರಾಣಿಕ – ಲೋಕಮತ ಕಾರ್ಯಲಯ, ಹುಬ್ಬಳ್ಳಿ –೧೯೩೧

೬೫. ಶ್ರೀ ಮದ್ವೀರಶೈವ ಶಿವಯೋಗ ಮಂದಿರ, ಜಗದ್ಗುರು ಸಂಗನಸ್ವಾಮಿಗಳು, ವ್ಹಿ.ಬಿ ಪುರಾಣಿಕ – ಶಿವಲಿಂಗ ಮಂದಿರ – ೧೯೯೪

೬೬. ಶ್ರೀ ಹಾನಗಲ್ಲ ಕುಮಾರೇಶ್ವರ ಪುರಾಣ, ಧ್ಯಾಪುರದ ಚೆನ್ನಕವಿ – ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಲ, ಮೂರುಸಾವಿರ ಮಠ, ಹುಬ್ಬಳ್ಳಿ ೧೯೯೦

೬೭ ಶ್ರೀ ಸೋಮನಾಥ ಶಾಸ್ತ್ರಿಗಳ ಚರಿತ್ರೆ, ಶ್ರೀಮತಿ ಶಿವಲಿಂಗಮ್ಮ ಕಟ್ಟಿ - ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಲ, ಮೂರುಸಾವಿರ ಮಠ, ಹುಬ್ಬಳ್ಳಿ - ೧೯೯೮

೬೮. ಸಮರ್ಪಿತ, ಚಂದ್ರಶೇಖರ ವಸ್ತ್ರದ - ಶ್ರೀ ಮ.ನಿ. ಜಗದ್ಗುರು ಮಲ್ಲಿಕಾರ್ಜುನ ಮಹಾಸ್ವಾಮಿಗಳ ಪೀಠಾರೋಹಣ ರಜತ ಮಹೋತ್ಸವ ಸಮಿತಿ, ಶಿವಮೊಗ್ಗ - ೨೦೦೫

೬೯. ಸಂಪಾದಕೀಯ ಚಿಂತನ, ಡಾ. ಶಿವಾನಂದ ಮಾಲಿಮನಿ - ಅಖಿಲಭಾರತ ವೀರಶೈವ ಮಹಾಸಭೆ ಜಿಲ್ಲಾ ಘಟಕ, ಬೆಳಗಾವಿ, ಲಿಂಗಾಯತ ಭವನ, ಶಿವಬಸವ ನಗರ- ೨೦೦೮

೭೦. ಸಮಾಜಕ್ಕೆ ಹಾಲುಣಿಸಿದ ಹಾಲಯ್ಯ, ಶಿವಲಿಂಗಶಾಸ್ತ್ರಿ ಹಿರೇಮಠ - ಶ್ರೀ ಶಿವಲಿಂಗೇಶ್ವರ ಮಠ, ತುಬಚಿ, ಜಮಖಂಡಿ (ತಾ) - ೨೦೦೩

೭೧. ಸುಧಾರ್ಣವ, ಡಾ. ವಿ.ಪ್ಹಿ. ಮಲ್ಲಾಪುರ –ವೀರಶೈವ ಅಧ್ಯಯನ ಅಕಾಡೆಮಿ ಶ್ರೀ ನಾಗನೂರು ರುದ್ರಾಕ್ಷಿ ಮಠ, ಬೆಳಗಾವಿ-೧೯೯೮

೭೨. ಹಾನಗಲ್ಲ, ಡಾ ವಾಸುದೇವ ಬಡಿಗೇರ - ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ವಿದ್ಯಾರಣ್ಯ, ಹಂಪಿ - ೨೦೦೮

೭೩. ಹಾನಗಲ್ಲ ಕುಮಾರ ಸ್ವಾಮಿ:ಒಂದು ಅಧ್ಯಯನ, ಬಿ. ಕೆ. ಹಿರೇಮಠ - ಪಿ.ಎಚ್.ಡಿ. ಮಹಾಪ್ರಬಂಧ, ಧಾರವಾಡ ವಿಶ್ವವಿದ್ಯಾಲಯ-ಧಾರವಾಡ - ೨೦೦೯

ಆ. ಸ್ಮರಣ ಸಂಪುಟಗಳು

೧. ಜಂಗಮ ಜ್ಯೋತಿ - ಜಗದ್ಗುರು ಜಯದೇವ ಪ್ರಶಸ್ತಿ ಶತಮಾನಮಹೋತ್ಸವ ಸಂಚಿಕೆ, ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಶತಮಾನಮಹೋತ್ಸವ ಸಮಿತಿ, ಚಿತ್ರದುರ್ಗ ೧೯೭೫

೨. ಕುರುಹು - ಅಖಿಲಭಾರತ ಶ್ರೀಮದ್ವೀರಶೈವ ಮಹಾಸಭೆ ಇಪ್ಪತ್ತೊಂದನೆ ಮಹಾ ಅಧಿವೇಶನ, ಬೆಳಗಾವಿ - ೧೯೯೨

೩. ಶರಣ ಕಿರಣ - ಅಖಿಲ ಭಾರತ ಐದನೇ ಶರಣ ಸಾಹಿತ್ಯ ಸಮ್ಮೇಳನ ಬೆಳಗಾವಿ ಡಿಸೆಂಬರ್ - ೧೯೯೯

೪. ಕುಮಾರ ದೀಪ್ತಿ, ಶ್ರೀಮದ್ವೀರಶೈವ ಶತಮಾನಮಹೋತ್ಸವ ಸಮಿತಿ, ಬಾದಾಮಿ ೨೦೧೦

೫. ಶಿವಯೋಗಮಂದಿರ ಶತ ಸಂವತ್ಸರ ಕೊಟ್ಟೂರು ಸ್ವಾಮಿ ಕಲ್ಯಾಣ ಕೇಂದ್ರ ಹೊಸಪೇಟೆ ಬಳ್ಳಾರಿ ೨೦೧೦

೬ ಕೈವಲ್ಯ ಶರಣ ಸಾಹಿತ್ಯ ಕಾರ್ಯಾಲಯ ಬಳೆಪೇಟೆ, ಬೆಂಗಳೂರು - ೧೯೫೩

೭ ಶಿವಯೋಗ ಶ್ರೀ ಸದಾಶಿವ ದೇವರ ನಿರಂಜನ ಪಟ್ಟಾಧಿಕಾರ ಮಮಹೋತ್ಸವ ಸಮಿತಿ ಹಾವೇರಿ - ೨೦೧೦

೩. ವರದಿಗಳು. ನಿರ್ಣಯಗಳು

೧. ಅಖಿಲಭಾರತ ಶ್ರೀಮದ್ವೀರಶೈವ ಮಹಾಸಭೆಯ ಪ್ರಥಮ ಸಮ್ಮೇಳನದ ವರದಿ ಪ್ರಕಾಶನ, ಮಹಾಕವಿ ಹರಿಹರ ಸ್ಮಾರಕ ಸಂಶೋಧನಾ ಕೇಂದ್ರ, ಶ್ರೀಜಗದ್ಗುರು ಕೊಟ್ಟೂರುಸ್ವಾಮಿಮಠ, ಹಂಪಿ

೨. ಅಖಿಲ ಭಾರತ ಆರನೇ ಶ್ರೀಮದ್ವೀರಶೈವ ಮಹಾಸಭೆಯ ವರದಿ, ಬೆಳಗಾವಿ - ೧೯೧೧

೩. ಶ್ರೀಮದ್ವೀರಶೈವ ಶಿವಯೋಗ ಮಂದಿರದ ರಿಪೋರ್ಟ, ಶ್ರೀಮದ್ವೀರಶೈವ ಶಿವ ಯೋಗ ಮಂದಿರ ಬಾದಾಮಿ - ೧೯೧೧

೪. ಶ್ರೀಮದ್ವೀರಶೈವ ಶಿವಯೋಗ ಮಂದಿರದ ಐದನೇ ವರ್ಷದ ವೃತ್ತಾಂತ, ಮುದ್ರಣ ಎಚ್ ಎಸ್ ಶಿವಲಿಂಗ ಶಾಸ್ತ್ರಿ, ಧಾರವಾಡ ಇವರ 'ಧರ್ಮ ತರಂಗಿಣಿ' ಮುದ್ರಣಾಲಯ - ೧೯೧೩

೫. ಶ್ರೀ ಶಿವಯೋಗ ಮಂದಿರ ವೃತ್ತಾಂತವು - ೧೯೧೨

೬ ಶ್ರೀ ಶಿವಯೋಗ ಮಂದಿರ ವಾರ್ಷಿಕ ರಿಪೋರ್ಟು - ೧೯೨೪-೨೫

೭ ಶ್ರೀ ಶಿವಯೋಗ ಮಂದಿರ ವರದಿಗಳು - ೧೯೨೬-೨೭, ೧೯೨೦, ೧೯೬೫, ೧೯೩೩, ೧೯೨೧

೮. ಶ್ರೀಮದ್ವೀರಶೈವ ಮಹಾಸಭೆಯ ನಿರ್ಣಯಗಳು - ೧೯೦೪

೯. ಎರಡನೇ ಶ್ರೀಮದ್ವೀರಶೈವ ಮಹಾಸಭೆಯಲ್ಲಿ ಆದ ನಿರ್ಣಯ - ೧೯೦೫

೧೦. ಮೂರನೇ ಶ್ರೀಮದ್ವೀರಶೈವ ಮಹಾಸಭೆಯಲ್ಲಿ ಆದ ನಿರ್ಣಯ - ೧೯೦೭

೧೧. ಬಾಗಲಕೋಟೆಯಲ್ಲಿನ ನಾಲ್ಕನೇ ಮಹಾಸಭೆಯ ನಿರ್ಣಯ - ೧೯೦೮

೧೨. ಬಳ್ಳಾರಿಯಲ್ಲಿನ ಐದನೇ ಮಹಾಸಭೆಯ ನಿರ್ಣಯಗಳು - ೧೯೦೯

ಈ. ಪತ್ರಿಕೆಗಳು, ನಿಯತಕಾಲಿಕೆಗಳು

ಹೆಸರು	ಸಂಪುಟ ಸಂಖ್ಯೆ	ಸಂಚಿಕೆ ಸಂಖ್ಯೆ	ವರ್ಷ
* ಶಿವಾನುಭವ	ಸಂಪುಟ-೧೨	ಸಂಚಿಕೆ-೧೧	ಫೆಬ್ರುವರಿ-೧೯೩೦.
* ಶಿವಾನುಭವ	ಸಂಪುಟ-೧೧	ಸಂಚಿಕೆ-೧೦.	ಸಪ್ಟೆಂಬರ್-೧೯೩೭.
* ಶಿವಾನುಭವ	ಸಂಪುಟ-೧೨	ಸಂಚಿಕೆ-೦೨	ನವಂಬರ್-೧೯೩೭.
* ಶಿವಾನುಭವ	ಸಂಪುಟ-೧೨	ಸಂಚಿಕೆ-೦೩	ಡಿಸೆಂಬರ್-೧೯೩೦.
* ಶಿವಾನುಭವ	ಸಂಪುಟ-೧೨	ಸಂಚಿಕೆ-೦೪	ಜನವರಿ - ೧೯೩೦.
* ಶಿವಾನುಭವ	ಸಂಪುಟ-೧೨	ಸಂಚಿಕೆ-೦೯	ಜೂನ್-೧೯೩೦.
* ಸುಕುಮಾರ	ಸಂಪುಟ-೧	ಸಂಚಿಕೆ-೧	ಅಕ್ಟೋಬರ್-೧೯೫೦.
* ಸುಕುಮಾರ	ಸಂಪುಟ-೦೮	ಸಂಚಿಕೆ-೧೦,೧೧	ಅಕ್ಟೋಬರ್ ನವೆಂಬರ್-೧೯೫೯.
* ಸುಕುಮಾರ	ಸಂಪುಟ-೧೭	ಸಂಚಿಕೆ-೬.೮	ಮಾ.,ಎ.,ಮೆ.,-೧೯೫೦.
* ಸುಕುಮಾರ	ಸಂಪುಟ-೧೬	ಸಂಚಿಕೆ-೮,೯	ಮೆ, ಜೂನ್-೧೯೬೭
* ಸುಕುಮಾರ(ನೂತನ)	ಸಂಪುಟ-೧	ಸಂಚಿಕೆ-೧	ಅಗಸ್ಟ-೨೦೦೨
* ಸುಕುಮಾರ	ಸಂಪುಟ-೧	ಸಂಚಿಕೆ-೨	ನವೆಂಬರ್-೨೦೦೨
* ಸುಕುಮಾರ	ಸಂಪುಟ-೧	ಸಂಚಿಕೆ-೩	ಫೆಬ್ರುವರಿ-೨೦೦೨
* ಸುಕುಮಾರ	ಸಂಪುಟ-೧	ಸಂಚಿಕೆ-೪	ಮೇ-೨೦೦೨
* ಸುಕುಮಾರ	ಸಂಪುಟ-೨	ಸಂಚಿಕೆ-೧	ಅಗಸ್ಟ-೨೦೦೩
* ಸುಕುಮಾರ	ಸಂಪುಟ-೨	ಸಂಚಿಕೆ-೨	ನವೆಂಬರ್-೨೦೦೩
* ಸುಕುಮಾರ	ಸಂಪುಟ-೨	ಸಂಚಿಕೆ-೩	ಫೆಬ್ರುವರಿ-೨೦೦೪
* ಸುಕುಮಾರ	ಸಂಪುಟ-೨	ಸಂಚಿಕೆ-೪	ಮೇ-೨೦೦೪
* ಸುಕುಮಾರ	ಸಂಪುಟ-೨	ಸಂಚಿಕೆ-೧	ಅಗಸ್ಟ-೨೦೦೪
* ಸುಕುಮಾರ	ಸಂಪುಟ-೨	ಸಂಚಿಕೆ-೨, ೩	ನವೆಂಬರ್-೨೦೦೪, ಫೆಬ್ರುವರಿ-೨೦೦೪
* ಸುಕುಮಾರ	ಸಂಪುಟ-೪	ಸಂಚಿಕೆ-೨,	ನವೆಂಬರ್-೨೦೦೫
* ಸುಕುಮಾರ	ಸಂಪುಟ-೪	ಸಂಚಿಕೆ-೩	ಫೆಬ್ರುವರಿ-೨೦೦೬
* ಬಸವ ಬೆಳಗು	ಸಂಪುಟ-೧೦	ಸಂಚಿಕೆ-೧	ಅಕ್ಟೋಬರ್ ನವೆಂಬರ್, ಡಿಸೆಂಬರ್-೧೯೯೫

* ಲಿಂಗಾಯತ ಸಂಪುಟ– ೧ ಸಂಚಿಕೆ –೧೦ ಜನವರಿ – ೨೦೦೭
* ಲಿಂಗಾಯತ ಸಂಪುಟ– ೧ ಸಂಚಿಕೆ –೧೧ ಫೆಬ್ರುವರಿ – ೨೦೦೭
* ಲಿಂಗಾಯತ ಸಂಪುಟ– ೧ ಸಂಚಿಕೆ –೧೨ ಮಾರ್ಚ– ೨೦೦೭
* ಲಿಂಗಾಯತ ಸಂಪುಟ– ೨ ಸಂಚಿಕೆ – ೨ ಎಪ್ರಿಲ್ – ೨೦೦೭
* ಲಿಂಗಾಯತ ಸಂಪುಟ– ೪ ಸಂಚಿಕೆ –೬ ರಿಂದ ೧೦ ೨೦೦೯
* ಲಿಂಗಾಯತ ಸಂಪುಟ– ೫ ಸಂಚಿಕೆ –೩,೪ ೨೦೧೦
* ಲಿಂಗಾಯತ ಸಂಪುಟ– ೨ ಸಂಚಿಕೆ –೨ ಮೇ – ೨೦೦೭
* ಬಸವ ಪಥ ಸಂಪುಟ– ೧೧ ಸಂಚಿಕೆ – ೨ ಮೇ – ೧೯೮೯
* ಬಸವ ಪಥ ಸಂಪುಟ– ೧೨ ಸಂಚಿಕೆ –೪ ಜುಲೈ – ೨೦೦೦
* ಪ್ರಸಾದ ಸಂಪುಟ– ೨೩ ಸಂಚಿಕೆ – ೪ ಮೇ–೨೦೦೮
* ಪ್ರಜಾವಾಣಿ ದೈನಿಕ ೧೯–೩–೨೦೦೬
* ಪ್ರಜಾವಾಣಿ ದೈನಿಕ ೦೩–೧೨–೨೦೦೬
* ಪ್ರಜಾವಾಣಿ ದೈನಿಕ ೧೩–೦೬–೨೦೧೦
* ಪ್ರಜಾವಾಣಿ ದೈನಿಕ ೦೧–೦೪–೨೦೧೦
* ಪ್ರಜಾವಾಣಿ ದೈನಿಕ ೧೦–೦೧–೨೦೧೨
* ಸಂಯುಕ್ತ ಕರ್ನಾಟಕ ದೈನಿಕ ೦೯–೦೪–೨೦೧೦